ಕಾಡುಗೊಲ್ಲರ ದೈವಗಳ ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ವಿರುಪಾಕ್ಷಪ್ಪ ಜಿ

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮-೧೯

ಕಾಡುಗೊಲ್ಲರ ದೈವಗಳ ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ವಿರುಪಾಕ್ಷಪ್ಪ ಜಿ

ಮಾರ್ಗದರ್ಶಕರು

ಡಾ. ಗಂಗಾಧರ ದೈವಜ್ಞ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೮–೧೯

ಸಂಶೋಧಕರ ಪ್ರಮಾಣ ಪತ್ರ

ಕಾಡುಗೊಲ್ಲರ ದೈವಗಳ ಸಾಂಸ್ಕೃತಿಕ ಅಧ್ಯಯನ ಎಂಬ ಶಿರ್ಷಿಕೆ ಮಹಾಪ್ರಬಂಧವನ್ನು ಡಾ. ಗಂಗಾಧರ ದೈವಜ್ಞ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಕನ್ನಡ ಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಬುಡಕಟ್ಟು ಅಧ್ಯಯನ** ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 5-7-2018
ಸ್ಥಳ : ವಿದ್ಯಾರಣ್ಯ

ವಿರುಪಾಕ್ಷಪ್ಪ ಜಿ
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವಿರುಪಾಕ್ಷಪ್ಪ ಜಿ. ಇವರು "ಕಾಡುಗೊಲ್ಲರ ದೈವಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

5/7/18

ದಿನಾಂಕ: 05-07-2018.
ಸ್ಥಳ : ವಿದ್ಯಾರಣ್ಯ

ಡಾ. ಗಂಗಾಧರ ದೈವಜ್ಞ
ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ವಿಧಾನ ಮತ್ತು ಅಧ್ಯಯನದ ಸಮೀಕ್ಷೆ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಮಹತ್ವ

೧.೫. ಅಧ್ಯಯನದ ವಿಧಾನ

೧.೬. ಅಧ್ಯಯನದ ಸಮೀಕ್ಷೆ

೧.೭. ಅಧ್ಯಯನದ ವಿನ್ಯಾಸ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಮಹತ್ವ

೧.೧. ಪ್ರಸ್ತಾವನೆ

ಕರ್ನಾಟಕದ ಚಿತ್ರದುರ್ಗ, ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿರುವ ಕಾಡುಗೊಲ್ಲರು ಒಂದು ವಿಶಿಷ್ಟ ಬುಡಕಟ್ಟು ಸಮುದಾಯ. ಇದು ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತ ಪರಂಪರೆಯನ್ನು ಹೊಂದಿದ್ದು, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದಿರುವ ಸಮುದಾಯ. ಈ ಸಮುದಾಯವನ್ನು ಕುರಿತು ಅಧ್ಯಯನಗಳು ನಡೆದಿವೆ. ಪಾಶ್ಚಾತ್ಯ ವಿದ್ವಾಂಸರಾದ ಅಬೆಡುಬಾಯಿ ಅವರಿಂದ ಭಾರತದಲ್ಲಿಯ ಸಮುದಾಯಗಳನ್ನು ಕುರಿತ ಅಧ್ಯಯನಗಳು ಪ್ರಾರಂಭವಾದವು. ಅನೇಕ ಸಮುದಾಯಗಳ ಬಗೆಗೆ ಸಂಶೋಧನೆ ನಡೆಸಿದ ಅಧ್ಯಯನಕಾರರ ಅಧ್ಯಯನಗಳಿಂದ ಉಪಯೋಗಗಳಾಗಿದ್ದರೂ ಬುಡಕಟ್ಟು ಸಮುದಾಯಗಳ ಬದುಕಿನ ಸ್ಥಿತಿ ಅತಂತ್ರವಾಗಿಯೇ ಇದೆ.

"ಗೊಲ್ಲರು ಮೂಲತಃ ಪಶುಪಾಲಕರಾಗಿದ್ದುದರಿಂದ ಅವರನ್ನು ಸಂಸ್ಕೃತದಲ್ಲಿ 'ಗೋಪಾಲ' 'ಗೋಪಿ' ಎಂದು ಕರೆಯಲಾಗುತ್ತಿತ್ತು. ತದನಂತರ ಸಂಸ್ಕೃತದ 'ಗೋಪಾಲ' ಪ್ರಾಕೃತದಲ್ಲಿ 'ಗೋವಾಲಿ' ಯಾಗಿ ನಂತರ ಕನ್ನಡದಲ್ಲಿ 'ಗೋವಳ'ನೆಂದು ರೂಪಾಂತರ ಹೊಂದಿ ಇದೇ ಮುಂದೆ 'ಗೋವಳಿ–ಗೌಳಿ–ಗೊಲ್ಲ'ಎಂದು ವಿಕಾಸ ಹೊಂದಿರುವುದಾಗಿ ನಿಘಂಟುಕಾರರ ಅಭಿಮತವಾಗಿದೆ" *(ಮಲ್ಲಿಕಾರ್ಜುನ ಕಲಮರಹಳ್ಳಿ ಗೊಲ್ಲರ ಇತಿಹಾಸ ಕಥನ', ಪುಟ ೧, ೨೦೧೧.)*

ವೈದಿಕ ಸಂಸ್ಕೃತಿಯು ಪ್ರಾಬಲ್ಯ ಹೊಂದಿದ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯನ್ನು ವೈದಿಕ ಸಂಸ್ಕೃತಿಯೆಂದು ಬಿಂಬಿಸಲು ಪ್ರಾರಂಭಿಸಲಾಯಿತು. ಇಲ್ಲಿ ಮುಖ್ಯವಾಗಿ ಅಧ್ಯಯನಕಾರರು, ಮತ್ತು ಕವಿಗಳು ಬ್ರಾಹ್ಮಣರೇ ಆದ ಕಾರಣ. ಬಹು ಸಂಸ್ಕೃತಿಯನ್ನು ಪಾತಾಳಲೋಕಕ್ಕೆ ತುಳಿದು ಅವರ ಸಮಾಧಿಯ ಮೇಲೆ ವೈದಿಕ ಸಂಸ್ಕೃತಿಯನ್ನು ನಿರ್ಮಾಣ ಮಾಡಿರುವುದನ್ನು ನಾವು ಗಮನಿಸಬಹುದು. ಇದರ ಪರಿಣಾಮವಾಗಿ ಕ್ರಿಯಾಶೀಲವಾದ ಸಮುದಾಯಗಳು ಜಡವಾದವು. ಜಡವಾದ ಸಮುದಾಯಗಳು ಕ್ರಿಯಾಶೀಲವಾದವು. ಧಾರ್ಮಿಕ, ಸಾಮಾಜಿಕ, ರಾಜಕಿಯ, ಶೈಕ್ಷಣಿಕ ಅಸಮಾನತೆ ಲಿಂಗಸಮಾನತೆಗಳು ಮೂಲನಿವಾಸಿಗಳನ್ನು ಅಸಹಾಯಕರನ್ನಾಗಿ ಮಾಡಿತು.

ಬುಡಕಟ್ಟುಗಳ ಕುರಿತಾದ ಪ್ರಾರಂಭದ ಅಧ್ಯಯನಗಳು ಏಕಮುಖವಾಗಿವೆ ಎಂಬುದಕ್ಕೆ ವಸಹಾತುಷಾಯಿಯನ್ನು ಭಾರತಕ್ಕೆ ತಂದ ಬ್ರಿಟಿಷರು ಬ್ರಾಹ್ಮಣರ ಸಹಾಯದಿಂದ ನೆರವು ಪಡೆದುಕೊಂಡು ಅಧಿಕಾರ ಸ್ಥಾಪಿಸಿಕೊಂಡರು. ಹಾಗಾಗಿ ಅನೇಕ ಬುಡಕಟ್ಟುಗಳು ಅವರ ಅವಧಿಯಲ್ಲಿ ಕ್ರಿಮಿನಲ್ ಟ್ರೈಬ್‌ಗಳನ್ನಾಗಿ ಸೃಷ್ಟಿಸಲಾಯಿತು. ಬ್ರಿಟಿಷರು ತಮ್ಮ ಚಾಣಾಕ್ಷದಿಂದ ತಳ ಸಮುದಾಯಗಳನ್ನು ಕಾಡಿಗಟ್ಟಿದರು ಏಕೆಂದರೆ ಬ್ರಿಟಿಷರನ್ನು ಮೊದಲು ವಿರೋಧಿಸಿದವರು ಬುಡಕಟ್ಟುಗಳು ಎಂಬ ಸತ್ಯ ಇತಿಹಾಸಕಾರರಿಗೂ ಗೊತ್ತಾಗದಿರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ.

ನಾಗರಿಕ ಸಮಾಜ ಬುಡಕಟ್ಟು ಸಮುದಾಯಗಳನ್ನು ಅಸ್ಪೃಶ್ಯರಂತೆ, ಅನಾಗರಿಕರಂತೆ ಕಾಣುತ್ತಿದ್ದುದರ ಪರಿಣಾಮವಾಗಿ ಇವರು ನಾಗರಿಕ ಸಮಾಜದ ಧೋರಣೆಗಳನ್ನು ಪ್ರತಿಬಟಿಸುವ ಸಲುವಾಗಿ ಮತ್ತು ಅವರಿಂದ ದೂರ ಉಳಿಯುವ ಮತ್ತು ಅವರ ಪ್ರವೇಶವನ್ನು ನಿರಾಕರಿಸುತ್ತಾ ಕಾಡುಗೊಲ್ಲರ ಸಮುದಾಯದಲ್ಲಿ ಬಂದಿರುವುದನ್ನು ಕಾಣುತ್ತೇವೆ.

ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಉಪಸಂಸ್ಕೃತಿ ಮಾಲೆ ಯೋಜನೆಯಡಿಯಲ್ಲಿ ಅನೇಕ ಬುಡಕಟ್ಟುಗಳ ಸಂಸ್ಕೃತಿಯನ್ನು ಅಧ್ಯಯನ ಮಾಡುವುದರ ಜೊತೆಗೆ ಅನೇಕ ಬುಡಕಟ್ಟುಗಳನ್ನು ಗುರುತಿಸುವ ಜವಾಬ್ದಾರಿಯುತವಾದ ಕೆಲಸಗಳನ್ನು ಮಾಡುತ್ತ ಬಂದಿರುವುದನ್ನು ಕಾಣಬಹುದು.

ಕಾಡುಗೊಲ್ಲರು ಮೂಲತಃ ಪಶುಪಾಲಕರು ಹಾಗಾಗಿ ಅಲೆಮಾರಿಗಳು, ಇದಕ್ಕೆ ಸಾಕ್ಷಿಯಾಗಿ ಕಾಡುಗೊಲ್ಲರ ಎಲ್ಲ ಸಾಂಸ್ಕೃತಿಕ ನಾಯಕರು ಅಲೆಮಾರಿಗಳಾಗಿದ್ದುಕೊಂಡು ತಮ್ಮ ಪಶುಗಳನ್ನು ರಕ್ಷಿಸುವ ಸಲುವಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟಿರುವುದನ್ನು ಕಾಣಬಹುದು. ಕಾಟಯ್ಯ, ಚಿತ್ತಯ್ಯ, ಕಳವರಹಳ್ಳಿ ಜುಂಜಪ್ಪ, ತಲುಕಿನ ಎತ್ತಪ್ಪ, ವೀರಮಿಂಚಣ್ಣ, ವೀರಕರಿಯಣ್ಣ, ವೀರಚಿಕ್ಕಣ್ಣ, ಸಕ್ಕರದಈರಣ್ಣ, ಜಂಪನಹಟ್ಟಿ ವೀರಜಂಪಣ್ಣ, ಯರಬಳ್ಳಿ ವೀರನಾಗಣ್ಣ, ಮದ್ದನಕುಂಟೆ ವೀರಯರ‍್ರಣ್ಣ, ಹಾಯಕಲ್ ವೀರಸಾತಣ್ಣ, ನರಸಾಪುರದ ವೀರಬಡಪ್ಪ, ವೀರಕೆಂಪಣ್ಣ ಹೊಟ್ಟ್ಯಪ್ಪನಳ್ಳಿಗಟ್ಟ್ಯಪ್ಪ, ಕರಡಿಬುಳ್ಳಪ್ಪ ತ್ವಾರಣಗಟ್ಟೆ ಮೆಲ್ಲಜ್ಜ ಪದುಗಲ್ಲು ಚಿಕ್ಕಣ್ಣ, ಯರಬಳ್ಳಿ ವೀರಸಿಂಪಣ್ಣ ವೀರಬಾಲಪ್ಪ, ವೀರಮಲ್ಲಣ್ಣ, ವೀರತಿಮ್ಮಣ್ಣ ಮುಂತಾದ ವೀರಗಾರರು ಪಶುಗಳಿಗಾಗಿ ತಮ್ಮ ಪ್ರಾಣವನ್ನು ಬಲಿಕೊಟ್ಟಿದ್ದಾರೆ.

ಕಾಡುಗೊಲ್ಲರಿಗೆ ದೇವರುಗಳೆಂದರೆ ಅವರ ವೀರಗಾರರೇ ಆಗಿರುತ್ತಾರೆ. ಇದೊಂದು ಪರಂಪರೆ ನಿರಂತರವಾಗಿ ಮುಂದುವರಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಅವರುಗಳನ್ನು ಕುರಿತಾಗಿ ಅನೇಕ ಮೌಖಿಕ ಕಾವ್ಯಗಳು ಸೃಷ್ಟಿಯಾಗಿರುವುದು, ಆ ವೀರರ ಮೌಲ್ಯಗಳನ್ನು ಆಧುನಿಕ ಕಾಲದಲ್ಲಿ ವಿದ್ಯಾವಂತರಾದ ನಾವುಗಳು ಅನುಸರಿಸುತ್ತಿರುವುದು ಗಮನಾರ್ಹ ವಿಚಾರ. ಕಾಡುಗೊಲ್ಲರು ಮುಖ್ಯವಾಗಿ ಗಣೇ ಸಂಪ್ರದಾಯದವರು. ಕಾಡುಗೊಲ್ಲರದು ವೀರಗಾರರ ಪರಂಪರೆ ಅವರ ಎಲ್ಲಾ ದೇವರುಗಳು ಒಂದು ಕಾಲದಲ್ಲಿ ವೀರರಾಗಿ ಮಡಿದು ದೇವರಾದ ಬಗೆಗೆ ಅನೇಕ ಮೌಖಿಕ ಆಕಾರಗಳು ಸಾಕ್ಷಿಗಳಾಗಿವೆ.

"ಕಾಡುಗೊಲ್ಲರನ್ನು ಅನೇಕ ಹೆಸರುಗಳಿಂದ ಗುರುತಿಸುತ್ತಾರೆ. "ಕಾಡುಗೊಲ್ಲರನ್ನು 'ಅಡವಿಗೊಲ್ಲರು', 'ಕರಡಿಗೊಲ್ಲರು', 'ಕಲ್ಲಿಗೊಲ್ಲರು', 'ಕಳ್ಳಿ ಗೊಲ್ಲರು', 'ಹಟ್ಟಿ ಗೊಲ್ಲರು', ಎಂಬ ಹೆಸರುಗಳಿಂದಲೂ ಕರೆಯುವ ವಾಡಿಕೆಯಿದೆ. ಅಡವಿ ಎಂದರೆ ಕಾಡು; ಅಡವಿಗೊಲ್ಲರೆಂದರೆ ಕಾಡುಗೊಲ್ಲರೆಂದೇ ಅರ್ಥವಾಗುತ್ತದೆ," *(ಶ್ರೀ. ನಂ. ಶಂಕರನಾರಾಯಣ, 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಪುಟ ೨೯, ೨೦೧೭.)*

ಕಾಡುಗೊಲ್ಲರು ಇಂದೂ ಸಹ ಊರಿನಿಂದ ೨-೩ ಕಿಲೋಮೀಟರ್ ದೂರದಲ್ಲಿ ತನ್ನ ಸಮುದಾಯದ್ದೇ ಆದ ಹಟ್ಟಿಯನ್ನು ಕಟ್ಟಿಕೊಂಡು ವಾಸಮಾಡುತ್ತಾರೆ. ನಾಗರಿಕ ಜಗತ್ತು ಎನ್ನುವುದನ್ನು ಪ್ರಶ್ನೆ ಮಾಡುತ್ತಾ ತನ್ನದೇ ಆದ ದೈವ ಸಂಸ್ಕೃತಿ ಸಂಪ್ರದಾಯ, ಆಚಾರ-ವಿಚಾರಗಳನ್ನು ರೂಪಿಸಿಕೊಂಡು ಇತರೆ ಸಮುದಾಯಗಳಿಗಿಂತ ಭಿನ್ನವಾಗಿ ಕಂಡುಬರುತ್ತಾರೆ. ಇವರು ವಾಸಿಸುವ ಪ್ರದೇಶವನ್ನು ಹಟ್ಟಿ ಎಂದು ಕರೆಯುತ್ತಾರೆ. ಹಿಂದೆ ಇವರ ಹಟ್ಟಿಯ ಸುತ್ತಲು ರಕ್ಷಣೆಗಾಗಿ ಬೇಲಿಯನ್ನು ಹಾಕಿಕೊಂಡಿದ್ದರು. ಆದರೆ ಇಂದು ಕೇವಲ ಕೆಲವೇ ಹಟ್ಟಿಗಳು ಪಾರಿಬೇಲಿ ಹಾಕಿಕೊಂಡಿರುವುದು ಕಂಡುಬರುತ್ತದೆ. ಆಂಧ್ರದ ಎಲ್ಲಾ ಕಾಡುಗೊಲ್ಲರ ಹಟ್ಟಿಗಳಲ್ಲಿ ಪಾರಿಬೇಲಿ ಹಾಕಿಕೊಂಡಿರುವುದು ಕ್ಷೇತ್ರಕಾರ್ಯದಿಂದ ತಿಳಿದು ಬಂದಿದೆ. ಕಾಡುಗೊಲ್ಲರ ಹಟ್ಟಿಗಳು ಇಂದೂ ಕೂಡ ಕಂದಾಯ ಗ್ರಾಮಗಳಾಗಿಲ್ಲ. ಕಾಡುಗೊಲ್ಲರು ಸಾಂಸ್ಕೃತಿಕವಾಗಿ ಶ್ರೀಮಂತರಾಗಿದ್ದರೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇದಕ್ಕೆ ಕಾರಣ ಅವರು ಸಮಾಜದ ಮುಖ್ಯ ವೇದಿಕೆಗೆ ಬಾರದಿರುವುದು. ಇವರಲ್ಲಿ ಇನ್ನೂ ಅನಕ್ಷರತೆ, ಮೂಢನಂಬಿಕೆ, ಅವೈಜ್ಞಾನಿಕತೆ, ಸಂಪ್ರದಾಯನಿಷ್ಟತೆ, ದೈವದ ಬಗೆಗೆ ಅತಿಯಾದ ನಂಬಿಕೆ ಅವರು ಹಿಂದುಳಿಯಲು ಕಾರಣವಾಗಿದೆ. ಇವರಲ್ಲಿ ಸ್ತ್ರೀ-ಪುರುಷರ ಮಧ್ಯೆ ತಾರತಮ್ಯತೆ ನಿರಂತರವಾಗಿ ಮುಂದುವರಿಯುತ್ತಿದೆ. ಸ್ತ್ರೀಯರು ಮಾಸಿಕ ಋತುಸ್ರಾವ ಆದಾಗ ಹಟ್ಟಿಯಿಂದ ಹೊರಗಿಡುವ ಪದ್ಧತಿ ಇನ್ನೂ ಜಾರಿಯಲ್ಲಿದೆ. ಹೆರಿಗೆಯಾದ ಬಾಣಂತಿಯನ್ನು ಹಟ್ಟಿಯಿಂದ ೯ ದಿನಗಳ ಕಾಲ ಗುಬ್ಬಕಟ್ಟಿ ಹಟ್ಟಿಯಿಂದ ಹೊರಗಿಡುತ್ತಾರೆ. ಋತುಮತಿಯಾದ ಹೆಣ್ಣನ್ನು ೯ ದಿನಗಳ ಕಾಲ ಹೊಂಗೆಸೊಪ್ಪು ಮತ್ತು ಬೇವಿನ ಸೊಪ್ಪು ಬಳಸಿ ಗುಡಿಸಲು ಹಾಕಿ ಹಟ್ಟಿಯಿಂದ ಹೊರಗಿಡುತ್ತಾರೆ. ಎಲ್ಲಾ ಸಮುದಾಯಗಳು ಆಧುನಿಕತೆಯತ್ತ ಮುಖ ಮಾಡಿದ್ದರೂ ಕಾಡುಗೊಲ್ಲರು ಮಾತ್ರ ನಾವು ಕಾಡುಗೊಲ್ಲರು ನಮ್ಮನ್ನು ಜುಂಜಪ್ಪ ಎತ್ತಪ್ಪ ಕಾಪಾಡುತ್ತಾನೆಂದು ತಮ್ಮ ಸಾವುಗಳನ್ನು ತಾವೆ ತಂದುಕೊಂಡು ದುರಂತ ಮರಣಕ್ಕೆ ಈಡಾಗುತ್ತಿದ್ದಾರೆ. ಸರ್ಕಾರದ ನಿರ್ಲಕ್ಷ್ಯದಿಂದಾಗಿ ಕಾಡುಗೊಲ್ಲರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇತರೇ ಯಾವ ಸಮುದಾಯದಲ್ಲಿ ಕಂಡು ಬಾರದ ಕೆಲವು ಸಂಪ್ರದಾಯ, ನಂಬಿಕೆಗಳನ್ನು ಅನುಸರಿಸುತ್ತಿರುವ ಕಾಡುಗೊಲ್ಲರು ಬುಡುಕಟ್ಟು ಪಟ್ಟಿಯಲ್ಲಿ ಸೇರಬೇಕಾದವರು. ಇವರ ಹಟ್ಟಿಗಳಿಗೆ ರಸ್ತೆ ವಿದ್ಯುತ್ತು ಮತ್ತು ಶುದ್ಧಕುಡಿಯು ನೀರಿನ ವ್ಯವಸ್ಥೆಯಿಲ್ಲ. ಸರ್ಕಾರಿ ಮನೆಗಳ ಸೌಲಭ್ಯವಿಲ್ಲ, ಅವರ ಪಶುಗಳು ಸತ್ತರೆ ಅದಕ್ಕೆ ಪರಿಹಾರವಿಲ್ಲ ಇಂತಹ ಹಲವಾರು ಸಮಸ್ಯೆಗಳನ್ನು ಕಾಡುಗೊಲ್ಲರು ಅನುಭವಿಸುತ್ತಿರುವುದನ್ನು ಕಾಣಬಹುದು.

ಕೆ.ಎಂ.ಮೇತ್ರಿಯವರ "ಅಪ್ಪಟ ಬುಡಕಟ್ಟಿನ ಜೀವನ ಸ್ವರೂಪ ಹೊಂದಿದ್ದ ಈ ಕಾಡುಗೊಲ್ಲರ ಸಮುದಾಯ ಭಾರತದ ಬುಡಕಟ್ಟು ಪಟ್ಟಿಗೆ ಸೇರದೇ ಇರುವುದು ವಿಪರ್ಯಾಸ ಎಂದು ಅಭಿಪ್ರಾಯ ಪಟ್ಟಿದ್ದಾರೆ." *(ಕೃಷ್ಣಗೊಲ್ಲರ ಕಥನ ಕಾವ್ಯಗಳು ಪುಟ-೨ ಡಾ ಕೆ.ಎಂ ಮೇತ್ರಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ)*

ಕಾಡುಗೊಲ್ಲರು ಬಹು ಮುಖ್ಯವಾಗಿ ಎದುರಿಸುತ್ತಿರುವ ಸಮಸ್ಯೆಗಳೆಂದರೆ ಮನುಷ್ಯರು ಮತ್ತು ಪಶುಗಳ ಆರೋಗ್ಯದ ಸಮಸ್ಯೆ. ಕಾಡುಗೊಲ್ಲರು ಬುಡಕಟ್ಟಿನ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರೂ ಅವರನ್ನು ಸರ್ಕಾರ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸದೇ ನಿರಾಕರಿಸಿರುವುದು ಆ ಸಮುದಾಯಕ್ಕೆ ಮಾಡಿದ ದೊಡ್ಡ ಅನ್ಯಾಯವೆಂದು ಹೇಳಬಹುದು. ಕಾಡುಗೊಲ್ಲರನ್ನು ಅಧ್ಯಯನ ಮಾಡಿದ ಎಲ್ಲಾ ವಿದ್ವಾಂಸರು ಕಾಡುಗೊಲ್ಲರನ್ನು ಬುಡಕಟ್ಟುಗಳ ಪಟ್ಟಿಗೆ ಸೆರಿಸಿ ಅವರಿಗೆ ಅನ್ಯಾಯವಾಗುತ್ತಿದೆ ಅದನ್ನು

ಸರಿಪಡಿಸಿ ಎಂದು ವರದಿಗಳನ್ನು ಸಲ್ಲಿಸಿದರೂ ಸರ್ಕಾರ ಮಾತ್ರ ತಮಗೂ ಕಾಡುಗೊಲ್ಲರಿಗೂ ಸಂಬಂಧವಿಲ್ಲ ಎಂಬ ಧೋರಣೆಯೊಂದಿಗೆ ಮೌನವಹಿಸಿದೆ.

೧.೨. ಅಧ್ಯಯನದ ಉದ್ದೇಶ

ಕಾಡುಗೊಲ್ಲರು ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯವಾಗಿ ಹಿಂದುಳಿದಿರುವುದಲ್ಲದೆ, ಮೂಲಭೂತ ಸೌಕರ್ಯಗಳಿಂದಲೂ ವಂಚಿತರಾಗಿದ್ದಾರೆ. ಕಾಡುಗೊಲ್ಲರು ಪರಂಪರಾನುಗತವಾಗಿ ಮುಂದುವರಿಸಿಕೊಂಡು ಬರುತ್ತಿದ್ದ ಅನೇಕ ಆಚರಣೆ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಧಕ್ಕೆ ಬರುತ್ತದೆ ಎಂಬ ಕಾರಣದಿಂದ ಇಂದು ಸಹ ಅನೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಇತರ ಸಮುದಾಯದವರ ಪ್ರವೇಶ ನಿಷೇಧಿಸಿರುವುದನ್ನು ಕಾಣಬಹುದಾಗಿದೆ. ನಾಗರಿಕ ಸಮಾಜದಿಂದ ದೂರವಾಗಿ ಹಟಿಗಳು ಎಂಬ ಹೆಸರಿನಿಂದ ಕರೆದು ಅಲ್ಲಿ ನೆಲೆ ನಿಂತಿದ್ದಾರೆ. ಕಾಡುಗೊಲ್ಲರು ಆರ್ಥಿಕವಾಗಿ ಹಿಂದುಳಿದ್ದಿದ್ದಾರೆ ಮತ್ತು ಅಲೆಮಾರಿಗಳಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಅಲ್ಪ ಪ್ರಮಾಣದಲ್ಲಿ ಶೈಕ್ಷಣಿಕವಾಗಿ ಮುಂದುವರಿಯುತ್ತಿರುವುದನ್ನು ಕಾಣಬಹುದು. ನಾಗರಿಕತೆ, ಆಧುನಿಕತೆ ವೈಜ್ಞಾನಿಕತೆ ಮುಂತಾದ ಸಂದರ್ಭಗಳಲ್ಲಿಯೂ ಪರಂಪರಾನುಗತವಾಗಿ ಸಾಗಿಬಂದ ಮೌಲ್ಯಗಳನ್ನು ತನ್ನದೇ ಸಂಸ್ಕೃತಿಯನ್ನು ಅಳವಡಿಸಿಕೊಂಡು ಅನನ್ಯತೆಯನ್ನು ಉಳಿಸಿಕೊಂಡಿರುವುದು ಒಂದು ವಿಶೇಷವಾಗಿದೆ. ಇಂದಿನ ಆಧುನಿಕತೆಯ ತೀವ್ರ ತಲ್ಲಣಗಳ ನಡುವೆಯು ತನ್ನ ಸಾಂಸ್ಕೃತಿಕ ಅಸ್ಮಿತತೆಯನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಈ ಅಸ್ಮಿತತೆಯ ಪ್ರಜ್ಞೆಯೇ ಒಂದರ್ಥದಲ್ಲಿ ಪ್ರಸ್ತುತ ಸಮುದಾಯದ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಹೇಳಬಹುದು.

ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಕೆಲ ಮೂಢನಂಬಿಕೆಗಳಿಂದ ಹೊರಬಂದು ಕೆಲವು ಗೊಡ್ಡು ಸಂಪ್ರದಾಯಗಳನ್ನು ಬಿಟ್ಟು, ಸಮಾಜದಲ್ಲಿ ಇತರೆ ನಾಗರಿಕರಂತೆ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ಬದುಕಬೇಕು ಎನ್ನುವುದೇ ಈ ಅಧ್ಯಯನದ ಉದ್ಧೇಶವಾಗಿದೆ.

೧. ಚಿತ್ರದುರ್ಗ, ತುಮಕೂರು, ಮತ್ತು ಬಳ್ಳಾರಿ ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ಕಾಡುಗೊಲ್ಲರು ವಾಸಿಸುತ್ತಾರೆ ಮತ್ತು ಅವರ ಈ ಪ್ರದೇಶಗಳಲ್ಲಿ ಕಂಡು ಬರುವ ದೈವಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

೨. ಕಾಡುಗೊಲ್ಲರ ಪ್ರಸಿದ್ಧ ದೈವಗಳು ಯಾವುವು? ಇವು ಯಾವ ಯಾವ ಪ್ರದೇಶದಲ್ಲಿ ಕಂಡು ಬರುತ್ತವೆ? ಅದಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಳ್ಳಲಾಗಿದೆ.

೩. ಕಾಡುಗೊಲ್ಲರು ಆರಾಧಿಸುತ್ತಿರುವ ದೈವಗಳ ಸೃಷ್ಟಿ ಹೇಗಾಯಿತು ಎಂಬುದನ್ನು ಅರಿತುಕೊಳ್ಳಲಾಗಿದೆ. ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳ ಮೂಲಕ ಅವರ ಪ್ರಾಚೀನತೆ ಮತ್ತು ಪರಂಪರೆಯನ್ನು ಅರ್ಥೈಸಿಕೊಳ್ಳಲಾಗಿದೆ.

೪. ಕಾಡುಗೊಲ್ಲರ ಮೇಲೆ ವೈಷ್ಣವರ ಪ್ರಭಾವ ಮತ್ತು ಅದರಿಂದಾದ ಪರಿಣಾಮಗಳನ್ನು ಕಂಡುಕೊಳ್ಳಲಾಗಿದೆ.

೫. ಕಾಡುಗೊಲ್ಲರ ದೈವಗಳ ಮೂರ್ತಿಗಳ ಸ್ವರೂಪ, ಲಕ್ಷಣ ಮತ್ತು ವೈಶಿಷ್ಟ್ಯತೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೬. ಕಾಡುಗೊಲ್ಲರು ಪರಂಪರಾನುಗತವಾಗಿ ಆಚರಿಸುತ್ತಾ ಬಂದಿರುವ ಹಬ್ಬ, ಜಾತ್ರೆ, ಮತ್ತು ಉತ್ಸವಗಳ ಮೇಲೆ ಆಧುನಿಕತೆ ಯಾವ ರೀತಿಯ ಪ್ರಭಾವ ಬೀರಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೭. ಕಾಡುಗೊಲ್ಲರ ಕಟ್ಟೆಮನೆಗಳು ಮತ್ತು ಗುಡಿಕಟ್ಟುಗಳು ನ್ಯಾಯ ತೀರ್ಮಾನ ವ್ಯವಸ್ಥೆಯಲ್ಲಿ ಹೇಗೆ ನಿರ್ಣಾಯಕ ಪಾತ್ರ ವಹಿಸುತ್ತಿದ್ದವು ಇಂದು ಕಟ್ಟೆಮನೆಗಳ ಚಿತ್ರಣ ಹೇಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

೮. ಕಾಡುಗೊಲ್ಲರಲ್ಲಿಯ ಕುಲಬಳಿಗಳ ಸೃಷ್ಟಿಗೆ ಕಾರಣವಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಚಿತ್ರದುರ್ಗ, ತುಮಕೂರು, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಹಾಸನದ ಅರಸಿಕೆರೆ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಕಾಡುಗೊಲ್ಲರು ವ್ಯಾಪಕವಾಗಿ ಕಂಡುಬರುತ್ತಾರೆ. ಅಧ್ಯಯನದ ದೃಷ್ಟಿಯಿಂದ ಕಾಡುಗೊಲ್ಲರ ತವರೂರುಗಳಾದ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕಾಡುಗೊಲ್ಲರ ದೈವಗಳಿಗೆ ಸಂಬಂಧಿಸಿದ ನೆಲೆಗಳು ಸಹ ಈ ಎರಡು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ನನ್ನ ಅಧ್ಯಯನದ ವ್ಯಾಪ್ತಿಯನ್ನು ಈ ಎರಡು ಜಿಲ್ಲೆಗಳಿಗೆ ಸೀಮಿತ ಮಾಡಿಕೊಂಡಿದ್ದೇನೆ. ಜೊತೆಗೆ ಕಾಡುಗೊಲ್ಲರ ಮೂರು ಕಟ್ಟೆಮನೆಗಳು ಮತ್ತು ಗುಡಿಕಟ್ಟೆಗಳು ಈ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ಕಾಡುಗೊಲ್ಲರ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳನ್ನು ಪರಿಗಣಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದರ ಜೊತೆಗೆ ತಿಳುವಳಿಕೆದಾರರ ತಿಳುವಳಿಕೆಯಾದಾರಿತ ಪ್ರಾಥಮಿಕ ತಿಳುವಳಿಕೆಗೆ ಹೆಚ್ಚು ಒತ್ತು ಕೊಡಲಾಗಿದೆ. ಆದರೂ ಸಹ ಪರಿಣಾಮಕಾರಿಯಾದ ಮತ್ತು ತೌಲನಿಕ ಅಧ್ಯಯನಕ್ಕಾಗಿ ಆಂಧ್ರ ಮತ್ತು ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ ನೆಲೆಕಂಡುಕೊಂಡಿರುವ ಕಾಡುಗೊಲ್ಲರ ದೈವಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಂದು ಕರ್ನಾಟಕದ ಕಾಡುಗೊಲ್ಲರು ಮಾತೃ ದೇವತಾ ಆರಾಧನೆಯಿಂದ ದೂರ ಸರಿದಿದ್ದಾರೆ. ಆದರೆ ಆಂಧ್ರಪ್ರದೇಶದಲ್ಲಿ ವಾಸವಾಗಿರುವ ಕಾಡುಗೊಲ್ಲರ ಹಟ್ಟಿಗಳಲ್ಲಿ ಮಾತೃದೇವತೆಗಳ ಆರಾಧನೆ ನಿರಂತರವಾಗಿ ಮುಂದುವರೆದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡಿದ್ದೇನೆ. ಈ ಅಧ್ಯಯನಕ್ಕೆ ಒಳಪಡಿಸಿರುವ ಹಟ್ಟಿಗಳೆಂದರೆ ಯರಬಳ್ಳಿಗೊಲ್ಲರಹಟ್ಟಿ ಜನ್ನೇನಹಳ್ಳಿಗೊಲ್ಲರಹಟ್ಟಿ, ಹಾಯ್ಕಲ್ ಗೊಲ್ಲರಹಟ್ಟಿ, ಬೇವಿನಹಳ್ಳಿ, ಲಕ್ಕನಹಳ್ಳಿಗೊಲ್ಲರಹಟ್ಟಿ, ಇಕ್ಕನೂರುಗೊಲ್ಲರಹಟ್ಟಿ, ದಾಸರಹಳ್ಳಿ, ಮದುಡಿ, ರೊಳ್ಳೆ, ನರಸಾಪುರ, ವದ್ದಿಕೆರೆ, ಮರಡಿಹಳ್ಳಿ, ಅಕ್ಕಿತಿಮ್ಮಯ್ಯನಹಟ್ಟಿ ಮುಂತಾದ ಹಟ್ಟಿಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು ಪ್ರಬಂಧ ಸಿದ್ಧ ಪಡಿಸಿದ್ದೇನೆ.

೧.೪. ಅಧ್ಯಯನದ ಮಹತ್ವ

ಕಾಡುಗೊಲ್ಲರ ದೈವಗಳನ್ನೇ ಕೇಂದ್ರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳು ತೀರ ಕಡಿಮೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನವು ತುಂಬ ಮಹತ್ವದಾಗಿದೆ. ಕಾಡುಗೊಲ್ಲರ ಸಂಸ್ಕೃತಿಯ ಬಗ್ಗೆ ಸರಿಯಾದ ಮಾಹಿತಿಯನ್ನು ಇದುವರೆಗೂ ಯಾವ ಅಧ್ಯಯನಕಾರರು ನೀಡಿಲ್ಲವೆಂದರೆ ತಪ್ಪಾಗಲಾರದು. ಅಷ್ಟೇ ಅಲ್ಲ. ಕಾಡುಗೊಲ್ಲರು ವೈಷ್ಣವ ಪರಂಪರೆಗೆ ಸೇರಿದವರು. ಅವರ ಆರಾಧ್ಯ ದೈವ ಕೃಷ್ಣ ಎಂದು ಹೇಳಿದವರು ಇದ್ದಾರೆ. ಇದರ ಜೊತೆಗೆ ಅವರ ಅನನ್ಯತೆಯನ್ನು ಮುರಿದು ಬೇರೆ ಸಮುದಾಯದ ಜೊತೆಗೆ ತಳುಕು ಹಾಕುವ ಜಾಯಮಾನದವರು ಇದ್ದಾರೆ. ಇದಲ್ಲದೆ ತಮ್ಮದೇ ಆದ ಅನನ್ಯತೆ,

ಸಂಸ್ಕೃತಿ, ಭಾಷೆಯನ್ನು ಹೊಂದಿರುವ ಕಾಡುಗೊಲ್ಲರು ಬುಡಕಟ್ಟು ಪಟ್ಟಿಯಿಂದ ಹೊರಗಿರುವುದನ್ನು ಗಮನಿಸಿದರೆ ಹಿಂದೆ ನಡೆದ ಅಧ್ಯಯನಗಳು ಯಾವ ಸ್ವರೂಪದವುಗಳಾಗಿದ್ದವು ಎಂಬುದು ತಿಳಿದು ಬರುತ್ತದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಚಿತ್ತಯ್ಯ, ಕಾಟಯ್ಯ, ಎತ್ತಪ್ಪ, ಜುಂಜಪ್ಪ, ಇವರನ್ನೇ ಕೇಂದ್ರವಾಗಿಟ್ಟುಕೊಂಡು ಅನೇಕರು ಅಧ್ಯಯನ ಮಾಡಿದ್ದಾರೆ. ಕಾಡುಗೊಲ್ಲರ ಇತರೆ ಸಾಂಸ್ಕೃತಿಕ ನಾಯಕರಾದ ವೀರಯರ್ರಣ್ಣ, ವೀರಸಾತಣ್ಣ, ವೀರಮಿಂಚಣ್ಣ, ವೀರಕರಿಯಣ್ಣ, ವೀರಚಿಕ್ಕಣ್ಣ, ವೀರಜಂಪಣ್ಣ ಇವರನ್ನು ಕುರಿತು ಅಧ್ಯಯನಕಾರರು ಉಲ್ಲೇಖಿಸಿದ್ದಾರೆ ಆದರೆ ಸಮಗ್ರವಾದ ಅಧ್ಯಯನಕ್ಕೆ ಒಳಪಡಿಸಿಲ್ಲ.

ಕಾಡುಗೊಲ್ಲರ ಆರಾಧ್ಯ ದೈವಗಾಳದ ಚಿತ್ತಯ್ಯ, ಕಾಟಯ್ಯ, ಕಾವಲಮ್ಮ, ಗೊಲ್ಲಳಮ್ಮ, ಬೇವಿನಹಳ್ಳಿ ಕರಿಯಮ್ಮ, ಗೌರಸಮುದ್ರದ ಮಾರಮ್ಮ, ಕಾಡುಗೊಲ್ಲರ ಮಾತೃ ಹಾಗೂ ಪಿತೃ ದೈವಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಕಾಡುಗೊಲ್ಲರ ದೈವಗಳ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಮಹತ್ವ

ಈ ಅಧ್ಯಯನದಿಂದ ಕಾಡುಗೊಲ್ಲರ ಸಂಸ್ಕೃತಿ ಹಾಗೂ ಅವರ ತಿಳುವಳಿಕೆಯನ್ನು ಕಂಡುಕೊಳ್ಳುವುದರ ಮೂಲಕ ಅವರ ಬದುಕಿನ ವಿವಿಧ ಮಜಲುಗಳನ್ನು ಸಮಾಜಕ್ಕೆ ತಿಳಿಸುವುದು ಈ ಅಧ್ಯಯನದ ಮಹತ್ವದಾಗಿದೆ.

ಕಾಡುಗೊಲ್ಲರ ಜೊತೆಗೆ ಅವರ ಆರಾಧ್ಯ ದೈವಗಳು ಹೇಗೆ ಆಧುನಿಕತೆಗೆ ಮುಖಾಮುಖಿಯಾಗುತ್ತಿವೆ ಎಂಬುದನ್ನು ತಿಳಿಯುವುದು.

ಕಾಡುಗೊಲ್ಲರು ತಮ್ಮ ಸಾಂಸ್ಕೃತಿಕ ನಾಯಕರನ್ನು ದೈವವಾಗಿಸಿದಕೊಂಡ ಬಗೆಯನ್ನು ಕಂಡುಕೊಳ್ಳುವುದು ಮತ್ತು ಆ ದೈವಗಳ ಅಧ್ಯಯನದ ಮೂಲಕ ಕಾಡುಗೊಲ್ಲರ ಆರಾಧನಾ ಪರಂಪರೆಯನ್ನು ಅರಿತುಕೊಳ್ಳುವುದು.

ಕಾಡುಗೊಲ್ಲರ ದೈವಗಳ ಅಧ್ಯಯದ ಮೂಲಕ ಈ ಸಮುದಾಯದ ಸಮಗ್ರ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

೧.೫. ಅಧ್ಯಯನದ ವಿಧಾನಗಳು

ಈ ಅಧ್ಯಯನವು ಕ್ಷೇತ್ರಕಾರ್ಯ ಪ್ರಧಾನವಾಗಿರುವುದರಿಂದ ಕ್ಷೇತ್ರಾಧರಿತ ಮಾಹಿತಿಗೆ ಪ್ರಾಧಾನ್ಯತೆ ನೀಡಲಾಗಿದೆ. ಸಮುದಾಯದ ತಿಳುವಳಿಕೆದಾರರಾದ ಸ್ತ್ರೀ–ಪುರುಷರು ಎಂಬ ತರತಮವಿಲ್ಲದೆ ಮಾಹಿತಿಯನ್ನು ಕಲೆ ಹಾಕಲಾಗಿದೆ. ಕಾಡುಗೊಲ್ಲರನ್ನು ಕುರಿತು ಅಧ್ಯಯನಗಳನ್ನು ಮಾಡಿದ ವಿದ್ವಾಂಸರ ಮಾಹಿತಿಗಳನ್ನು ಆಕಾರವಾಗಿ ಬಳಸಿಕೊಂಡಿದ್ದೇನೆ. ಜೊತೆಗೆ ಎಲೆಮರೆಯ ಕಾಯಿಯಂತೆ ಅವಿತುಕೊಂಡಿರುವ ತಿಳುವಳಿಕೆದಾರರನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆದುಕೊಂಡು ಪ್ರಬಂಧ ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ.

೧.೫.೧. ಲಭ್ಯವಿರುವ ಆಕಾರಗಳ ಅಧ್ಯಯನ

ಕಾಡುಗೊಲ್ಲರ ಬಗೆಗಿನ ಅಧ್ಯಯನಗಳು ೧೯ನೇ ಶತಮಾದಲ್ಲಿಯೇ ಪ್ರಾರಂಭವಾದವು. ಜೀ.ಶಂ.ಪರಮಶಿವಯ್ಯ, 'ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು' ತೀ.ನಂ.ಶಂಕರನಾರಾಯಣ,

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಅಂಬಳಿಕೆ ಹಿರಿಯಣ್ಣ 'ಕಾಡುಗೊಲ್ಲರ ಜನಪದ ಗೀತೆಗಳು', ಮೀರಾಸಾಬಿಹಳ್ಳಿ ಶಿವಣ್ಣ, 'ಕಾಡುಗೊಲ್ಲ ಸಾಂಸ್ಕೃತಿಕ ನಾಯಕರು', ಕೃಷ್ಣಮೂರ್ತಿ ಹನೂರ, 'ಸಾವಿರದ ಸಿರಿಬೆಡಗು', ಕಾಳೆಗೌಡ ನಾಗವಾರ 'ಬೇವಿನಹಳ್ಳಿ ಕಾಡುಗೊಲ್ಲರ ಹಟ್ಟಿ ಒಂದು ಅಧ್ಯಯನ'. ಕೆ. ಎಂ. ಮೇತ್ರಿ ಅವರ 'ಕೃಷ್ಣಗೊಲ್ಲರ ಕಥನ ಕಾವ್ಯಗಳು' ಮುಂತಾದ ವಿದ್ವಾಂಸರು ಬರೆದಿರುವ ಪುಸ್ತಕಗಳನ್ನು ಮಾಧ್ಯಮಿಕ ಆಕಾರಗಳಾಗಿ ಬಳಸಿಕೊಂಡು ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

೧.೫.೨. ಐತಿಹಾಸಿಕ ವಿಧಾನ

ಕಾಡುಗೊಲ್ಲರ ಮೂಲ ತಿಳಿದುಕೊಳ್ಳುವುದಕ್ಕಾಗಿ ಅವರ ಮೌಖಿಕ ಹಾಡುಗಳಲ್ಲಿ ಉಲ್ಲೇಖವಾಗಿರುವ ಸ್ಥಳಗಳಿಗೆ ಭೇಟಿಕೊಟ್ಟು ಅವರು ಅಲ್ಲಿ ಬಿಟ್ಟು ಬಂದಿರುವ ಕುರುಹುಗಳ ಬಗ್ಗೆ ಮಾಹಿತಿ ತಿಳಿದುಕೊಂಡು ಈ ಅಧ್ಯಯನಕ್ಕೆ ಬಳಕೆ ಮಾಡಿಕೊಂಡಿದ್ದೇನೆ. ಕಾಲಾತೀತರಾದ ಕಾಡುಗೊಲ್ಲರಿಗೆ ಚಾರಿತ್ರಿಕ ದಾಖಲೆಯನ್ನು ಸೃಷ್ಟಿಸುವ ಕಾರಣಕ್ಕಾಗಿ ಈ ವಿಧಾನವನ್ನು ಅನುಸರಿಸಿದ್ದೇನೆ.

೧.೫.೩. ಕ್ಷೇತ್ರಕಾರ್ಯ

ಈ ಅಧ್ಯಯನವು ಕ್ಷೇತ್ರಕಾರ್ಯ ಆಧರಿತವಾಗಿರುವುದರಿಂದ ಕಾಡುಗೊಲ್ಲರ ಹಟ್ಟಿಗಳಾದ ಕಳವರಹಳ್ಳಿ, ಬೇವಿನಹಳ್ಳಿಗೊಲ್ಲಹಳ್ಳಿ, ಚನ್ನಮ್ಮನಾಗತಿಹಳ್ಳಿ, ಪುರ್ಲಹಳ್ಳಿ, ಕಾಟಪ್ಪನಹಟ್ಟಿ, ಹೊಟ್ಟೆಪ್ಪನಹಳ್ಳಿ, ಸಾಣಿಕೆರೆಗೊಲ್ಲರಹಟ್ಟಿ, ದೊಡ್ಡೇರಿಗೊಲ್ಲರಹಟ್ಟಿ, ಉಪ್ಪಾರಹಟ್ಟಿ, ಬಂಜಿಗೆರೆ ಗೊಲ್ಲರಹಟ್ಟಿಗಳು ಹಾಗೂ ಅವರ ಸಾಂಸ್ಕೃತಿಕ ಕೇಂದ್ರಗಳು ಹಾಗೂ ಗುಡಿಕಟ್ಟುಗಳು ಮತ್ತು ಐತಿಹಾಸಿಕ ಸ್ಥಳಗಳಾದ ಯರಬಳ್ಳಿಗೊಲ್ಲರಹಟ್ಟಿ, ಕರಿಓಬವ್ವನಹಳ್ಳಿಕಟ್ಟೆಮನೆ, ತಾಳವಟ್ಟಿಕಟ್ಟೆಮನೆ ಮತ್ತು ರಾಮೇನಹಳ್ಳಿಕಟ್ಟೆಮನೆ ಬೆಸ್ತರಹಳ್ಳಿಕಟ್ಟೆಮನೆ, ಕುಂದುರಿಪೆ, ಎತ್ತಯ್ಯನಗುಡ್ಡ ವದ್ದೀಕೆರೆ, ಪಗಲಬಂಡೆ ಸ್ಥಳಗಳಿಗೆ ಭೇಟಿಮಾಡಿ ಅಲ್ಲಿರುವ ಕುರುಹುಗಳನ್ನು ಗಮನಿಸಿ ಸಂಸ್ಕೃತಿ ಮತ್ತು ವಾಸ್ತವಿಕ ಬದುಕಿನ ಚಿತ್ರಣವನ್ನು ಅರ್ಥೈಹಿಸಿಕೊಂಡು ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೧.೫.೪. ಪ್ರಶ್ನಾವಳಿ ವಿಧಾನ

ಕಾಡುಗೊಲ್ಲರ ದೈವಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುವುದಕ್ಕಾಗಿ ಮಾರ್ಗದರ್ಶಕರ ನೆರವಿನಿಂದ ಪ್ರಶ್ನಾವಳಿಯನ್ನು ಸಿದ್ದಪಡಿಸಿ ಆ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿದ್ದೇನೆ. ಕಾಡುಗೊಲ್ಲರ ಕಟ್ಟೆಮನೆ, ಗುಡಿಕಟ್ಟು, ಬೆಡಗು, ದೇವರ ಆರಾಧನೆ ಮಾಡುವ ವಿಷಯಗಳಿಗೆ ಪೂರಕವಾಗಿ ಪ್ರಶ್ನಾವಳಿಯ ಸಿದ್ದಪಡಿಸಿಕೊಳ್ಳಲಾಗಿತ್ತು.

೧.೫.೫. ಅವಲೋಕನ ವಿಧಾನ

ಕಾಡುಗೊಲ್ಲರ ಹಟ್ಟಿಗಳನ್ನು ಅವರ ಮನೆಗಳ ವೈಶಿಷ್ಟ್ಯ, ಅವರು ಹೇಳುವ ಸೃಷ್ಟಿಪುರಾಣಗಳ ಭಿನ್ನತೆ, ಅವರ ಭಾಷೆ, ಕುಣಿತ, ಪ್ರಚಲಿತ ವಿರುವ ಮೌಖಿಕ ಕಾವ್ಯಗಳ ಹಾಡುಗಾರಿಕೆಯನ್ನು ಈ ಸಂದರ್ಭದಲ್ಲಿ ಅವರ ಮಾನಸಿಕ ಸ್ಥಿತಿಗಳನ್ನು ಗಮನಿಸಲಾಗಿದೆ.

೧.೫.೬. ಸಂದರ್ಶನ ವಿಧಾನ

ಕಾಡುಗೊಲ್ಲರ ದೈವಗಳನ್ನು ಅಧ್ಯಯನಕ್ಕೆ ಕಾಡುಗೊಲ್ಲರು ವಾಸವಾಗಿರುವ ಹಟ್ಟಿಗಳಿಗೆ ಭೇಟಿಕೊಟ್ಟು ತಿಳುವಳಿಕೆದಾರರನ್ನು ಗುರುತಿಸಿ ಪ್ರಶ್ನೆ ಮಾಡುವುದರ ಮೂಲಕ, ಮಾಹಿತಿ ಸಂಗ್ರಹಿಸಲಾಯಿತು.

ಅನೇಕ ಹಟ್ಟಿಗಳಲ್ಲಿ ಕಾಡುಗೊಲ್ಲರ ಸ್ತ್ರೀಯರು ಹಾಡುವ ವೀರಗಾರರ ಮತ್ತು ವೀರಗಾರ್ತಿಯರ ಕಥೆ ಹಾಡುಗಳನ್ನು ಸಂಗ್ರಹಿಸಿ ಕೆಲ ಗೊಂದಲಗಳಿಗೆ ಸ್ಪಷ್ಟೀಕರಣ ಪಡೆದುಕೊಂಡು, ಅವರ ತಿಳುವಳಿಕೆಯನ್ನು ವಿಶ್ಲೇಷಿಸಿ ಪ್ರಬಂಧದಲ್ಲಿ ವಿವರಿಸಿದ್ದೇನೆ.

೧.೬. ಅಧ್ಯಯನದ ಸಮೀಕ್ಷೆ

ಕಾಡುಗೊಲ್ಲರನ್ನು ಕುರಿತು ಅನೇಕ ಅಧ್ಯಯನಗಳು ನಡೆದಿದ್ದರೂ ಅಲ್ಲಿ ಇನ್ನು ಅಧ್ಯಯನಕ್ಕೆ ಅವಕಾಶಗಳಿವೆ. ಅಧ್ಯಯನಕಾರರು ಮಾಡಿರುವ ಅಧ್ಯಯನಗಳು ಅಧ್ಯಯನಕ್ಕೆ ಕೇವಲ ಆಕರ ಕೃತಿಗಳಾಗಿವೆಯೇ ವಿನಃ ಸಂಪೂರ್ಣವಾದ ಅಧ್ಯಯನಗಳು ನಡೆದಿಲ್ಲವೆಂದು ಹೇಳಬಹುದು. ಕಾಡುಗೊಲ್ಲರು ಪ್ರಾರಂಭದ ಕಾಲಘಟ್ಟದಲ್ಲಿ ಮಾತೃ ದೇವತೆ ಆರಾಧಕರಾಗಿದ್ದರು ಎಂಬುದಕ್ಕೆ ಅವರಲ್ಲಿರುವ ವೀರಗಾರ್ತಿಯರೇ ಕಾರಣವೆಂದು ಹೇಳಬಹುದು. ಕಾಡುಗೊಲ್ಲರ ಸಾಂಸ್ಕೃತಿಕ ವೀರರ ಬಗ್ಗೆ ನಡೆದಷ್ಟು ಅಧ್ಯಯನಗಳು ವೀರಗಾರ್ತಿಯರ ಬಗ್ಗೆ ನಡೆಯದಿರುವುದು ಸೋಜಿಗವೇ ಸರಿ. ಕಾಡುಗೊಲ್ಲರ ಬಗ್ಗೆ ಅಧ್ಯಯನಗಳು ಪ್ರಾರಂಭವಾದ ಕಾಲದಿಂದಲೂ ಮಾತೃದೇವತೆಗಳ ಕಡೆಗೆ ಗಮನಹರಿಸಿರುವುದು ಕಡಿಮೆ ಎಂದು ಹೇಳಬಹುದು. ಆ ಕಾರಣದಿಂದ ಈ ಅಧ್ಯಯನ ಅರ್ಥಪೂರ್ಣ ಎಂದು ಹೇಳಬಹುದು. ಕಾಡುಗೊಲ್ಲರ ಸಂಸ್ಕೃತಿ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಇದರಿಂದ ಕಾಡುಗೊಲ್ಲರು ಗುರುತಿಸಿಕೊಂಡು ಸಮಾಜದಲ್ಲಿ ಬದುಕುತ್ತಿದ್ದಾರೆ. ಇದುವರೆಗೂ ನಡೆದಿರುವ ಸಮೀಕ್ಷೆಗಳಲ್ಲಿ ಕೆಲವೊಂದನ್ನು ಕೆಳಗಿನಂತೆ ನೋಡಬಹುದು.

ಮುಂಬೈಸರ್ಕಾರದಿಂದ ಪ್ರಕಟವಾಗುತ್ತಿದ್ದ 'ದಿ ಜರನಲ್ ಆಪ್ ಆಂತ್ರೋಪೊಲಜಿಕಲ್ ಸೊಸೈಟಿ', ೧೮೮೮. ಈ ಪತ್ರಿಕೆಯ ಮೊದಲ ಸಂಪುಟದಲ್ಲಿ ಕಾಡುಗೊಲ್ಲರ ಪಶುಪಾಲನೆ ಅವರ ಸಂಸ್ಕೃತಿ ಮುಂತಾದವುಗಳ ವಿಚಾರಗಳನ್ನು ಕುರಿತು ಬರೆದಿರುವುದು ಕಂಡುಬಂದಿದೆ.

೧೮೯೧ ಮದ್ರಾಸ್ ಸರ್ಕಾರ ಮಾಡಿದ ಜನಗಣತಿಯಲ್ಲಿ, ಈ ಜನಗಣತಿ ವರದಿಯಲ್ಲಿ ಕಾಡುಗೊಲ್ಲರ ಪ್ರಸ್ತಾಪವಿದ್ದು, ಅವರ ಜೀವನದ ಸ್ಥಿತಿಗತಿಗಳು ಕಷ್ಟಕರವಾಗಿರುವುದನ್ನು ತಿಳಿಸಿ ಅವರ ಅಲೆಮಾರಿ ಬದುಕಿನ ಚಿತ್ರಣವನ್ನು ಹೇಳಿದ್ದಾರೆ. ಹೆರಿಗೆ ಹಾಗೂ ಋತುಮತಿ ಸಂದರ್ಭದಲ್ಲಿ ಕಾಡುಗೊಲ್ಲರ ಮಹಿಳೆಯರಿಗಾಗಿ ನಿರ್ಮಾಣ ಮಾಡುವ ಗುಬ್ಬಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

೧೯೦೧. ಮೈಸೂರು ಸರ್ಕಾರ ಗೊಲ್ಲರನ್ನು ಎರಡು ವಿಧಗಳಲ್ಲಿ ವಿಂಗಡಿಸಿ ಅವರು ನಡೆಸುವ ಜೀವನದ ಆಧಾರದ ಮೇಲೆ ಕಾಡಿನಲ್ಲಿ ವಾಸಿಸುವ ಗೊಲ್ಲರನ್ನು ಕಾಡುಗೊಲ್ಲರು ಹಾಗೂ ಊರಿನಲ್ಲಿ ವಾಸಿಸುವ ಗೊಲ್ಲರು ಊರುಗೊಲ್ಲರು ಎಂದು ಉಲ್ಲೇಖಿಸಿದ್ದಾರೆ. ಮುಂದುವರಿದು ಕಾಡುಗೊಲ್ಲರು ಊರುಗೊಲ್ಲರಿಗಿಂತ ಹಿಂದುಳಿದಿರುವ ಕಾರಣ ಊರುಗೊಲ್ಲರು ಮತ್ತು ಕಾಡುಗೊಲ್ಲರು ಎಂದು ಪ್ರತೇಕಿಸಿರುವುದು ಕಂಡುಬಂದಿದೆ. ಆದರೆ ಕಾಡುಗೊಲ್ಲರಿಗೆ ಪ್ರತ್ಯೇಕವಾದ ಮೀಸಲಾತಿಯನ್ನು ಕೊಡದಿರುವುದರ ಬಗೆಗೆ ಪ್ರಶ್ನೆ ಮಾಡಿದ್ದಾರೆ.

ನಂಜುಂಡಯ್ಯ ಹೆಚ್. ವಿ. 'ದ ಎತ್ನೋಗ್ರಪಿಕಲ್ ಸರ್ವೆ ಆಫ್ ಮೈಸೂರು', ಬೆಂಗಳೂರು ಗೌವರ್ನ್‌ಮೆಂಟ್ ಪ್ರೆಸ್.(೧೯೦೮)

ಇದರಲ್ಲಿ ಕಾಡುಗೊಲ್ಲರನ್ನು ಕುರಿತು ಹೆಚ್ ನಂಜುಂಡಯ್ಯನವರು ೧೪ ಪುಟಗಳ ಲೇಖನವನ್ನು ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಕಾಡುಗೊಲ್ಲರ ದೇವರುಗಳಾದ ಎತ್ತಪ್ಪ, ಜುಂಜಪ್ಪ ಮತ್ತು ಅವರ ಆಚಾರ-ವಿಚಾರಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿಯವರು 'ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌಥ್ ಇಂಡಿಯಾ' (೧೯೦೯) ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿಯವರು 'ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸೌಥ್ ಇಂಡಿಯಾ' ಎರಡನೇ ಸಂಪುಟದಲ್ಲಿ ಕಾಡುಗೊಲ್ಲರ ಬಗ್ಗೆ ಪುಟ್ಟ ಲೇಖನವಿದೆ.

ಕರ್ನಾಟಕದ ಜಾತಿ ಮತ್ತು ಬುಡಕಟ್ಟುಗಳ ಸಂಪುಟ (೧೯೩೦) ಕರ್ನಾಟಕದ ಜಾತಿ ಮತ್ತು ಬುಡಕಟ್ಟುಗಳ ಸಂಪುಟದಲ್ಲಿ ಇದರ ಸಂಪಾದಕರಾದ ಎನ್.ಕೆ. ಅನಂತಕೃಷ್ಣ ಅಯ್ಯರ್ ಮತ್ತು ಹೆಚ್. ವಿ. ನಂಜುಂಡಯ್ಯನವರು ಕಾಡುಗೊಲ್ಲರನ್ನು ಕುರಿತು ಒಂದು ಪ್ರಬಂಧ ರೂಪದ ಲೇಖನ ಪ್ರಕಟಿಸಿದ್ದಾರೆ.

ತೀ.ನಂ. ಶಂಕರನಾರಾಯಣ: 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಪ್ರಸಾರಾಂಗ ಮೈಸೂರು ವಿಶ್ವ ವಿದ್ಯಾನಿಲಯ ಮೈಸೂರು. ೧೯೭೩

ತೀ ನಂ. ಶಂಕರನಾರಾಯಣರವರು 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ತಮ್ಮ ಪಿಎಚ್. ಡಿ ಮಹಾಪ್ರಬಂಧದಲ್ಲಿ ಕರ್ನಾಟಕದಲ್ಲಿ ನೆಲೆಸಿರುವ ಕಾಡುಗೊಲ್ಲರನ್ನು ಕುರಿತು ನಡೆಸಿದ ಸಮಗ್ರವಾದ ಅಧ್ಯಯನವೆಂದು ಹೇಳಬಹುದು. ಕಾಡುಗೊಲ್ಲರು ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಆಚರಣೆ ಸಂಪ್ರದಾಯಗಳನ್ನು ಚಿತ್ರಿಸಿದ್ದಾರೆ. ಜೊತೆಗೆ ಅವರು ಆರಾಧನೆ ಮಾಡುವ ಕಾಟಯ್ಯ, ಚಿತ್ತಯ, ಎತ್ತಯ್ಯ, ಜುಂಜಪ್ಪ, ಕೇತೆದೇವರು, ಪಾತೆದೇವರು ಮತ್ತು ಹಾಲು ಕುಡಿದಪ್ಪ ಈ ದೈವಗಳ ಜಾತ್ರೆಗಳ ಬಗ್ಗೆ ಉತ್ತಮವಾದ ಮಾಹಿತಿಯನ್ನು ನೀಡಿದ್ದಾರೆ. ಕಾಡುಗೊಲ್ಲರ ಬೆಡಗುಗಳ ಬಗ್ಗೆ ಹೇಳಿದ್ದಾರೆ. ಕಾಡುಗೊಲ್ಲರ ಬೆಡಗುಗಳ ಬಗ್ಗೆ ಹೇಳುವಾಗ ಗೊಂದಲಕ್ಕೆ ಒಳಗಾಗಿದ್ದಾರೆ. ಕಾಡುಗೊಲ್ಲರ ಬೆಡಗುಗಳು ವೈಜ್ಞಾನಿಕವಾಗಿವೆ.ಕಾಡುಗೊಲ್ಲರು ಕರ್ನಾಟಕದ ತುಮಕೂರು ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿ, ಬೆಂಗಳೂರು ಜಿಲ್ಲೆಯ ಮಾಗಡಿ, ಕನಕಮರ ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ ವಾಸವಾಗಿದ್ದಾರೆ. ಹಾಸನ ಜಿಲ್ಲೆಯ ಅರಸಿಕೆರೆ ತಾಲ್ಲೂಕಿನಲ್ಲಿಯೂ ಇವರು ಇದ್ದಾರೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗೆ ಸೇರಿದ ಮಡಕಸಿರಾ, ಕಲ್ಯಾಣದುರ್ಗ ಮತ್ತು ರಾಯದುರ್ಗ ತಾಲ್ಲೂಕುಗಳಲ್ಲಿ ಹಿರಿಯೂರು, ಚಳ್ಳಕೆರೆ, ಶಿರಾ ತಾಲ್ಲೂಕುಗಳನ್ನು ಕಾಡುಗೊಲ್ಲರ ಸಾಂಸ್ಕೃತಿಕ ಕೇಂದ್ರವೆಂದು ಕರೆಯಬಹುದು. ಈ ಮೂರು ತಾಲ್ಲೂಕುಗಳಲ್ಲಿ ಉಳಿದೆಲ್ಲ ಕಡೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲರು ವಾಸವಾಗಿದ್ದಾರೆ.ಎಂದು ಈ ಮಸ್ತಕದಲ್ಲಿ ತಿಳಿಸಿದ್ದಾರೆ.

ಅಂಬಳಿಕೆ ಹಿರಿಯಣ್ಣ, 'ಕಾಡುಗೊಲ್ಲರ ಜನಪದ ಗೀತೆಗಳು' ಮೈಸೂರು ವಿಶ್ವ ವಿದ್ಯಾನಿಲಯ, ೧೯೭೮'

"ಕಾಡುಗೊಲ್ಲರ ಜನಪದ ಗೀತೆಗಳು" ಕಾಡುಗೊಲ್ಲರ ಪಂಚಲಿಂಗಗಳಾದ ಕಾಟುಮಲಿಂಗ, ಚಿತ್ರಲಿಂಗ, ಕೇತೆಲಿಂಗ, ಪಾತೆಲಿಂಗ, ಮತ್ತು ರಾಮೇಲಿಂಗ ಈ ದೈವಗಳನ್ನು ಕುರಿತಾಗಿ ಕಾಡುಗೊಲ್ಲರು ಹಾಡಿರುವ ಪದಗಳನ್ನು ಸಂಗ್ರಹಿಸಿದ್ದಾರೆ. ಇದರ ಜೊತೆಗೆ ಕರಿಓಬೇವ್ವನಹಳ್ಳಿ ಮಾರಕ್ಕ, ಮಾಯಸಂದ್ರದ ಕರಿಯಮ್ಮ, ನಂದಿಹಳ್ಳಿರಂಗಪ್ಪ ಈ ದೈವಗಳ ಮತ್ತು ಸೋಭಾನೆ ಪದಗಳನ್ನು ಸಂಗ್ರಹಿಸಿದ್ದಾರೆ. ಶೀಲವಾಡಿಗೊಲ್ಲರಿಗೆ ಪಾತೆಲಿಂಗ ಒಲಿದ ಬಗೆಯನ್ನು ಹಾಗೂ ಆ ಬೆಡಗು ಸೃಷ್ಟಿಯಾದ ಬಗ್ಗೆ ಹೇಳಿದ್ದಾರೆ. ಸಾಮಾನ್ಯವಾಗಿ ಕಾಡುಗೊಲ್ಲರ ಎಲ್ಲ ದೈವಗಳ ಪವಾಡಗಳ ಮಾಹಿತಿ ಈ ಕೃತಿಯಲ್ಲಿದೆ ಆದರೆ ಇಲ್ಲಿ ಸಂಗ್ರಹ ಕಾರ್ಯ ಮಾತ್ರ ಗುರುತಿಸಬಹುದು.

ಪರಮಶಿವಯ್ಯ ಜೀ. ಶಂ. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಅಭಿನವ, ಬೆಂಗಳೂರು. ೨೦೧೫.

"ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು" ಇದರಲ್ಲಿ ಜುಂಜಪ್ಪ ಕಾವ್ಯವು ಗದ್ಯರೂಪದಲ್ಲಿರುವುದನ್ನು ಗಮನಿಸಬಹುದು. ಜುಂಜಪ್ಪನ ಕಾವ್ಯವು ಪ್ರದೇಶಿಕವಾಗಿ ಯಾವ ರೀತಿ ಭಿನ್ನತೆಯನ್ನು ಪಡೆದುಕೊಂಡಿದೆ ಮತ್ತು ಜುಂಜಪ್ಪನ ತಾತನಾದ ದೇವರದಯಾಮಾರನ ಮೇಲೆ ಗುಡ್ಡದಬೋರಿ ಮನಸೋತಾಗ ಅವನಿಗೆ ಯರಬಳ್ಳಿಯ ಹಟ್ಟಿಯಲ್ಲಿ ಹೆಣ್ಣು ನೋಡುವಶಾಸ್ತ್ರ ಮಾಡುತ್ತಾರೆ. ಅಲ್ಲಿ ಹೆಚ್ಚು ಮೂಢನಂಬಿಕೆಯ ಬಗ್ಗೆ ಮಾಹಿತಿ ನೀಡಿದ್ದಾರೆ. ಸಾಹಸ ಪರಂಪರೆಯನ್ನು ಅತಿ ಮಾನುಷ ಆಶಯಗಳನ್ನು ಬಣ್ಣಿಸುವ ಘಟನಾವಳಿಗಳು ಜುಂಜಪ್ಪ ಕಾವ್ಯದ ಒಂದೊಂದು ಪ್ರತ್ಯೇಕ ಕತೆಗಳೇ ಎಂಬಂತೆ ಸ್ವಯಂಪೂರ್ಣತೆಯನ್ನು ಸಾಧಿಸಿಕೊಳ್ಳುತ್ತವೆ. ಒಂದು ಘಟನೆಯಿಂದ ಮತ್ತೊಂದು ಘಟನೆಗೆ ಸಾವಯವ ಸಂಬಂಧ ಎರಡೂ ಸಂಪ್ರದಾಯದ ಪಾಠಗಳಲ್ಲಿ ತೋರಿ ಬರುವುದಿಲ್ಲ. ಬಿಡಿ ಬಿಡಿಯಾದ ಚಿತ್ರಗಳಾಗಿಯೇ ಅವು ನಿಲ್ಲುತ್ತವೆ. ಜುಂಜಪ್ಪನ ಕಾವ್ಯವನ್ನು ಪ್ರದೇಶಿಕವಾಗಿ ಎರಡು ಭಾಗಗಳಲ್ಲಿ ವಿಂಗಡಿಸಿರುವುದು ಕಂಡುಬರುತ್ತದೆ.

ಕೃಷ್ಣಮೂರ್ತಿ ಹನೂರು,'ಕತ್ತಲದಾರಿದೂರ', ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ- ಬೆಂಗಳೂರು.೧೯೮೧.

'ಕತ್ತಲದಾರಿ ದೂರ', ಈ ಕೃತಿಯಲ್ಲಿ ಕಾಡುಗೊಲ್ಲರ ಪ್ರಮುಖ ವೀರಗಾರರು ಮತ್ತು ವೀರಗಾರ್ತಿಯರ ಬಗ್ಗೆ ತಿಳಿಸಿದ್ದಾರೆ. ವೀರಬಡಪ್ಪ, ವೀರಚಿಕ್ಕಣ್ಣ, ವೀರಸಿರಿಯಣ್ಣ, ವೀರಯರ್ರಣ್ಣ, ಚಿತ್ತಯ್ಯ, ಕೊಂಡದ ಕಾಟಮ್ಮ, ಪಾತಪ್ಪ, ಮಹಾಸತಿ ವೀರತಿಮ್ಮವ್ವರಂತಹ ಸಾಂಸ್ಕೃತಿಕ ವೀರರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಇಲ್ಲಿಯ ನಾಯಕರು ಸಾಮಾನ್ಯವಾಗಿ ಯರಬಳ್ಳಿ ಹಿರಿಯೂರು ಚಿತ್ರದುರ್ಗದ ಪರಿಸರದವರಿರುವ ಬಗ್ಗೆಉಲ್ಲೇಖವಾಗಿದೆ.

ಕೃಷ್ಣಮೂರ್ತಿ ಹನೂರು. 'ಜನಪದ ವೀರಗೀತೆಗಳು', ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ೧೯೮೭.

'ಜನಪದ ವೀರಗೀತೆಗಳು', ಈ ಗ್ರಂಥದಲ್ಲಿ ಕಾಡುಗೊಲ್ಲರ ದೈವಗಳಾದ ಕೇತೆಲಿಂಗ ಚಿತ್ರಲಿಂಗನ ಜನಪದ ಗೀತೆಗಳಿವೆ. ಜೊತೆಗೆ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಪದುಗೊಲ್ಲರ ಚಿಕ್ಕಣ್ಣ ಅವನ ತಂಗಿ, ಯರ್ರಣ್ಣ ಕೊಂಡದಕಾಟಮ್ಮ, ಸಿರಿಯಮ್ಮ ಇವರು ಬೇಡರ ವಿರುದ್ಧ ಹೋರಾಡಿ ಮಡಿದು ಅವರ ಶೌರ್ಯಗಳನ್ನು ಗುಣಗಾನ ಮಾಡಿರುವುದನ್ನು ಕಾಣಬಹುದು. ನಿಂಗಣ್ಣ ಸೆರೆ ಹೋದುದರ ಬಗ್ಗೆ ಮಾಹಿತಿಗಳು ಉಲ್ಲೇಖವಾಗಿವೆ.

ಸಿದ್ದಗಂಗಯ್ಯ ಬಿ. 'ಜುಂಜಪ್ಪನ ಕಾವ್ಯ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೩.

ಈ ಕಾವ್ಯವು ಜುಂಜಪ್ಪನ ಬಗ್ಗೆ ಮಾಹಿತಿಯನ್ನು ಸಂಕ್ಷಿಪ್ತವಾಗಿ ಹೇಳುತ್ತದೆ. ಜುಂಜಪ್ಪನ ಮಹಿಮೆ ಮಾರಣ್ಣ ಮೈಲಣ್ಣ ಇವರುಗಳ ಮುಗ್ದತೆಯನ್ನು ಹೇಳುವುದರೆ ಜೊತೆಗೆ ಹೆಣ್ಣು ಮಗಳಾದ ಮಾರಕ್ಕನನ್ನು ಶೋಷಣೆಯ ವಸ್ತುವಾಗಿಯೇ ನೋಡುತ್ತದೆ. ಅಷ್ಟೇ ಅಲ್ಲದೆ ಜುಂಜಪ್ಪ ತನ್ನ ಅಧಿಕಾರವನ್ನು ತನ್ನ ಕುಟುಂಬದ ಮೇಲೆ ಹೊಂದಿರುವ ಬಗೆಯನ್ನು ಸರಳವಾಗಿ ವಿವರಿಸುತ್ತಾ, ಅವಳ ತಾಯಿಗೆ ಯಾವ

ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ ನೀಡದಿರುವುನ್ನು ಮತ್ತು ಕಾಡುಗೊಲ್ಲರು ಪುರುಷ ಪ್ರಧಾನ ವ್ಯವಸ್ಥೆಗೆ ಸ್ಥಿತ್ಯಂತರ ಹೊಂದುತ್ತಿದ್ದ ಬಗೆಯನ್ನು ಇಲ್ಲಿ ಕಾಣುತ್ತೇವೆ.

ಚಲುವರಾಜು 'ಜುಂಜಪ್ಪ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಕಮಲಾಪುರ, ೧೯೯೭.

ಆರಂಭದ ಘಟ್ಟದಲ್ಲಿ ಕನ್ನಡ ವಿಶ್ವ ವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಬಹು ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿದೆ ಎಂದರೆ ತಪ್ಪಾಗಲಾರದು ಏಕೆಂದರೆ ಅತ್ಯಂತ ಅವಜ್ಞೆಗೆ ಗುರಿಯಾಗಿದ್ದ ಸಮುದಾಯಗಳನ್ನು ಗುರುತಿಸಿ ಅವರು ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದಿರಬಹುದಾದ ಬುಡಕಟ್ಟು ಕಾವ್ಯಗಳನ್ನು ಸಂಗ್ರಹ ಮಾಡಿ ಅವುಗಳ ಮಹತ್ವ ಮತ್ತು ಮೌಲ್ಯವನ್ನು ಅಕ್ಷರ ಸಮಾಜಕ್ಕೆ ಪರಿಚಯ ಮಾಡಿರುವುದು ಶ್ಲಾಘನೀಯವಾದ ಕೆಲಸವೆಂದು ಹೇಳಬಹುದು. ಅದರಂತೆ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಜುಂಜಪ್ಪನ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ ಪ್ರಕಟನೆ ಮಾಡಿದ ಶ್ರೇಯಸ್ಸು ಕನ್ನಡ ವಿಶ್ವವಿದ್ಯಾಲಯದ್ದು. ಈ ಕಾವ್ಯವನ್ನು ಡಾ. ಚಲುವರಾಜು ಅಚ್ಚು ಕಟ್ಟಾಗಿ ಸಂಗ್ರಹಿಸಿ ಸಂಪಾದಿಸಿದ್ದಾರೆ.

ಮೈತ್ರಿ ಕೆ. ಎಂ., 'ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಮಲಾಪುರ, ೧೯೯೭.

ಈ ಕಾವ್ಯವು ಕಾಡುಗೊಲ್ಲರ ಪಶುಪಾಲನೆ ಅವರ ವಲಸೆ ಪ್ರವೃತ್ತಿ ಪರಿಸರದೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ಒಳಗೊಂಡಿದೆ. ಇದರ ಜೊತೆಗೆ ಕುಮಾರ ರಾಮನ ಪರನಾರಿ ಸಹೋದರತ್ವ ಮತ್ತು ಆತನ ಪರಾಕ್ರಮವನ್ನು ತಿಳಿಸಿಕೊಡುತ್ತದೆ.

ಕೃಷ್ಣಮೂರ್ತಿ ಹನೂರು, 'ಜನಪದ ಮತ್ತು ಬುಡಕಟ್ಟು ಗೀತೆಗಳು'೧೯೯೮

ಈ ಗ್ರಂಥದಲ್ಲಿ ಸಿರಿಯಣ್ಣನ ವೀರತ್ವವನ್ನು ಹೇಳುತ್ತದೆ. ಸಿರಿಯಣ್ಣ ದನಕಾಯುವ ಹುಡುಗ ಇವನು ಹಂದಿ ಜೊತೆ ಹೋರಾಡಿ ಮಡಿಯುತ್ತಾನೆ. ಇವನಿಗೆ ಮದುವೆ ಮಾಡಲೆಂದು ನಿಗದಿ ಮಾಡಿದ ಹೆಣ್ಣು ಕೊಂಡವೇರುವ ಪ್ರಸಂಗ ಕಂಡುಬರುತ್ತದೆ. ಕಾಡುಗೊಲ್ಲರಲ್ಲಿ ಒಂದು ಹೆಣ್ಣು ಒಬ್ಬ ಯುವಕನಿಗೆ ಕೊಡಬೇಕು ಎಂದು ವೀಳ್ಯೇದೆಲೆಯ ಶಾಸ್ತ್ರ ಮುಗಿದ ಮೇಲೆ, ಅದು ಮದುವೆ ಆದಂತೆ ಎಂದು ಪರಿಗಣಿಸುತ್ತಾರೆ. ಈ ವ್ಯವಸ್ಥೆಯು ಹಲವಾರು ಹೆಣ್ಣು ಮಕ್ಕಳು ಸಜೀವ ದಹನಕ್ಕೆ ಕಾರಣವಾಗಿದೆ.

ಕಾಳೇಗೌಡ ನಾಗವಾರ. ಹುಚ್ಚಪ್ಪ ಮಾಸ್ತರ್ ಎನ್.,'ಗಿರಿಜನ ಸಂಸ್ಕೃತಿ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ೨೦೦೦.

ಡಾ. ಮೀರಾಸಾಬಿಹಳ್ಳಿ ಶಿವಣ್ಣ ಬರೆದಿರುವ 'ಎತ್ತಪ್ಪನ ಸಂಪ್ರದಾಯ' ಎಂಬ ಲೇಖನದಲ್ಲಿ ಎತ್ತಪ್ಪನಿಗೆ ಅಜ್ಜೆರಗೊಲ್ಲರ ಮನೆಯ ಹೆಣ್ಣುಮಗಳೊಂದಿಗೆ ಮದುವೆ ಮಾಡುತ್ತಾರೆ. ಇದರಿಂದಾಗಿ ಎತ್ತಪ್ಪನ ಎತ್ತುಗಳು ಅವನನ್ನು ಗೂಡಿನ ಬಳಿ ಸೇರಿಸುವುದಿಲ್ಲ. ನಂತರ ಎತ್ತಪ್ಪ ತಾನು ಮಲ್ಲಮ್ಮನಿಂದ ದೂರ ಇರುವುದಾಗಿ ಮಾತು ಕೊಟ್ಟಾಗ ಹತ್ತಿರ ಸೇರಿಸಿಕೊಳ್ಳುತ್ತವೆ. ಕಾಡುಗೊಲ್ಲರಿಗೆ ಕುಲದ ಆಚಾರವನ್ನು ತಿಳಿಸಿಕೊಟ್ಟವನು ಎತ್ತಪ್ಪ. ಅವನಿಗೆ ಹಾಲಿನ ಮೀಸಲು ಅಕ್ಕಿ ಹಾಗೂ ದುಡ್ಡಿನ ಮೀಸಲು ಕಟ್ಟಿಕೊಳ್ಳುತ್ತಾರೆ. ಎತ್ತಪ್ಪನ ಸಂಪ್ರದಾಯಗಳನ್ನು ಇನ್ನೂ ಕಾಡುಗೊಲ್ಲರು ಅನುಸರಿಸುತ್ತಿರುವುದರಿಂದ ಅವರಲ್ಲಿ ಇನ್ನೂ ಅವೈಜ್ಞಾನಿಕತೆ ಮನೆ ಮಾಡಿದೆ ಎಂದು ಹೇಳಬಹುದು.

ಮೈತ್ರಿ ಕೆ.ಎಂ., 'ಕೃಷ್ಣಗೊಲ್ಲರ ಕಥನ ಕಾವ್ಯಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಈ ಕಾವ್ಯವು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಎತ್ತಯ್ಯ, ಚಿತ್ತಯ್ಯ, ಬಂಜಿಗೆರೆ ಈರಣ್ಣ ಬೊಮ್ಮೈಲಿಂಗ, ಗೌರಸಮುದ್ರದ ಮಾರಮ್ಮ, ತಿರುಪತಿ ತಿಮ್ಮಪ್ಪ, ಹಾಗೂ ವೀರ ಅಭಿಮನ್ಯುವನ್ನು ಕುರಿತಾದ ಗೀತೆಗಳಿವೆ. ಈ ಕಾವ್ಯಗಳನ್ನು ಹಾಡಿದವರ ವಿಳಾಸ ಬೆಡಗು ವಯಸ್ಸು ಮತ್ತು ಹೆಸರುಗಳನ್ನು ತಿಳಿಸಿದ್ದಾರೆ. ಈ ಕಾವ್ಯಗಳನ್ನು ಹಾಡಿದವರು ಬಂಜಗೆರೆಗೆ ಸೇರಿದವರು ಆದ ಕಾರಣ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು.

ಶಿವಣ್ಣ ಮೀರಾಸಾಬಿಹಳ್ಳಿ, 'ಗಣೆಯದನಿ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೦.

'ಗಣೆಯದನಿ' ಎಂಬ ಕೃತಿಯಲ್ಲಿ ಕಾಡುಗೊಲ್ಲರು ಪದ ಹೇಳಲು ಬಳಸುವ ವಾದ್ಯಗಳಾದ ಗಣೆ ಮತ್ತು ಡೊಲು ಇವುಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಕಾಡುಗೊಲ್ಲರು ತಾವು ಹೇಳುವ ಎಲ್ಲಾ ಮೌಖಿಕ ಕಾವ್ಯಗಳ ಅಭಿವ್ಯಕ್ತಿಗಾಗಿ ಗಣೆಯನ್ನು ಬಳಕೆ ಮಾಡಿಕೊಂಡಿದ್ದಾರೆ. ಇದು ೫-೬ ಅಡಿ ಉದ್ದವಿರುತ್ತದೆ ಇದನ್ನು ಬಿದಿರಿನಿಂದ ತಯಾರು ಮಾಡಿರುತ್ತಾರೆ. ಇದು ಹಾಳಾಗದಂತೆ ತಡೆಯಲು ಇದರ ಸುತ್ತಲು ಬಣ್ಣ ಇಲ್ಲವೆ ತಾಮ್ರದ ತಗಡು ಸುತ್ತಿರುತ್ತಾರೆ. ಎತ್ತಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಚಿತ್ರದೇವರಕಾವ್ಯ, ವೀರ ಮಿಂಚಣ್ಣನ ಕಾವ್ಯ, ವೀರಬಡಪ್ಪಕಾವ್ಯ ಮುಂತಾದ ಕಾವ್ಯಗಳನ್ನು ಗಣೆಯ ಸಹಾಯದಿಂದ ಹಾಡುತ್ತಾರೆ. ಈ ಕಾವ್ಯಗಳು ದೀರ್ಘವಾಗಿರುವುದರಿಂದ ಹಾಡುವವರಿಗೆ ವಿಶ್ರಾಂತಿಗಾಗಿ ಗಣೆಯನ್ನು ಬಳಸುತ್ತಾರೆ.

ಶಿವಣ್ಣ ಮೀರಾಸಾಬಿಹಳ್ಳಿ, 'ಎತ್ತಪ್ಪ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೨.

ಕಾಡುಗೊಲ್ಲರನ್ನು ಕುರಿತು ಅನೇಕ ಅಧ್ಯಯನ ಮಾಡಿದವರಲ್ಲಿ ಮೀರಾಸಾಬಿಹಳ್ಳಿ ಶಿವಣ್ಣನವರು ಪ್ರಮುಖರು ಎಂದೇ ಹೇಳಬೇಕಾಗುತ್ತಿದೆ. ಇವರು ಕಾಡುಗೊಲ್ಲರ ತವರೂರಾದ ಚಿತ್ರದುರ್ಗದವರು. ಇವರು ಕಾಡುಗೊಲ್ಲರರೊಂದಿಗೆ ಪ್ರತಿನಿತ್ಯ ಬೆರೆತವರು. ಆ ಕಾರಣದಿಂದ ಕಾಡುಗೊಲ್ಲರನ್ನು ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಯಿತು. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಎತ್ತಪ್ಪನನ್ನು ಕುರಿತು ಪುಸ್ತಕ ಬರೆದಿದ್ದಾರೆ. ಎತ್ತಪ್ಪನ ಸಂಪ್ರದಾಯ ಅವನು ಪಶುಪಾಲಕನಾಗಿ ಮ್ಯಾಸ ಬೇಡರೊಂದಿಗೆ ಹೋರಾಡಿ ಮಡಿದ ಕತೆಯನ್ನು ಈ ಗ್ರಂಥದಲ್ಲಿ ವಿವರಿಸಿದ್ದಾರೆ.

ಶಿವಣ್ಣ ಮೀರಾಸಾಬಿಹಳ್ಳಿ, 'ಕಾಡುಗೊಲ್ಲರ ಸಂಸ್ಕೃತಿ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೪.

'ಕಾಡುಗೊಲ್ಲರ ಸಂಸ್ಕೃತಿ' ಎಂಬ ಕೃತಿಯು ಚಿತ್ರಗುರ್ಗದ ಬರಗಾಲದ ವಾಸ್ತವ ಪರಿಸ್ಥಿತಿಯನ್ನು ಹೇಳುವುದರ ಜೊತೆಗೆ, ಕಾಡುಗೊಲ್ಲರ ಅಂಟು ಮುಂಟಿನ ದೇವರುಗಳಾದ ಹಾಲುಗುಡುದಪ್ಪ, ಕೇತಪ್ಪ ಮತ್ತು ಪಾತೇದೇವರು ಇವರ ಬಗ್ಗೆ ಮಾಹಿತಿ ನೀಡಿದ್ದಾರೆ. ಕಾಡುಗೊಲ್ಲರ ಪೂಜಾರಿಗಳು ಅನುಸರಿಸುವ ಸಂಪ್ರದಾಯ, ಅವರ ಬೆಡಗುಗಳಾದ ತಾಳಿಕಟ್ಟುವ ಮತ್ತು ತಾಳಿಕಟ್ಟದಿರು ಬೆಡಗುಗಳ ಮಧ್ಯೆ ಇರುವ ವೈರುಧ್ಯವನ್ನು ಗುರುತಿಸಿದ್ದಾರೆ. ಇದರ ಜೊತೆಗೆ ಎತ್ತಪ್ಪನ ಸಂಪ್ರದಾಯ, ಕಾಡುಗೊಲ್ಲರ ಈರಗಾರರುಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ತಿಮ್ಮಯ್ಯ. ಕೆ. 'ನೊಸರಿ' ತಳಗವಾದಿ ಪ್ರಕಾಶನ ಮೈಸೂರು ೨೦೦೪.

'ನೊಸರಿ' ಎಂಬುದು ಕಾಡುಗೊಲ್ಲರು ಸಾಕಿರುವ ಆಕಳು ಎಮ್ಮೆ ಅಥವಾ ಕುರಿಗಳ ಮರಿಗಳು ಹಾಲು ಕುಡಿಯದಂತೆ ತಡೆಯುವ ಸಲುವಾಗಿ ಕುರಿ ಇಲ್ಲವೆ ಹಸುಗಳ ಮೊಲೆಗೆ ಹಸುವಿನ ಇಲ್ಲವೆ ಕುರಿಯ ಸಗಣಿಯನ್ನು ಹಾಲಿನಲ್ಲಿ ನೆನೆಸಿ ಮೊಲೆಯ ಸುತ್ತಾ ಸವರುತ್ತಾರೆ. ಜೊತೆಗೆ ಅದರ ಮೇಲೆ ಒಂದು ಬಟ್ಟೆ ಕಟ್ಟುತ್ತಾರೆ. ಇದರ ಉದ್ಧೇಶ ಹಾಲು ಎಂಜಲು ಆಗಬಾರದು ಎನ್ನವುದು ಇದರ ಉದ್ದೇಶ ಜೊತೆಗೆ ಉದ್ದೇಶವೆಂದರೆ ಪದೆ ಪದೆ ಹಾಲು ಕುಡಿಯುವುದರಿಂದ ತಾಯಿ ಹಸು ಇಲ್ಲವೆ ಕುರಿಗೆ ಮೇವು ತಿನ್ನಲು ತೊಂದರೆ ಆಗುವುದನ್ನು ತಡೆಯಲು ಈ ರೀತಿ ಮಾಡುತ್ತಾರೆ. ಇದಕ್ಕೆ ಕಾಡುಗೊಲ್ಲರು 'ನೋಸರಿ' ಎನ್ನುವರು

ಕಾಳೇಗೌಡ ನಾಗವಾರ, ಜೆ.ವಿ ಆನಂದಮೂರ್ತಿ, 'ಗರಿಗೆದರಿದ ನವಿಲು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಭವನ ಜೆ.ಸಿ. ರಸ್ತೆ ಬೆಂಗಳೂರು ೨೦೦೫.

'ಗರಿಗೆದರಿದ ನವಿಲು', ಈ ಕೃತಿಯ 'ಕಾಡುಗೊಲ್ಲರ ಪೂಜಾರಿ ಈರಣ್ಣ' ಎಂಬ ಲೇಖನದಲ್ಲಿ ಕಾಡುಗೊಲ್ಲರ ಪೂಜಾರಿಗಳು ಯಾವ ರೀತಿ ಕಟ್ಟು ನಿಟ್ಟಿನ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಕಾಡುಗೊಲ್ಲರಲ್ಲಿ ಪೂಜಾರಿಗೂ ದೇವರಿಗೂ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ. ಒಂದು ಕಡೆ ಕಟ್ಟಾ ಸಂಪ್ರದಾಯವಾದಿಗಳೆನಿಸಿದರೂ ದೇವರ ನಿಯಮಗಳಿಗೆ ಬದ್ದರಾಗಿರುತ್ತಾರೆ. ಇವರು ಕಾವ್ಯವನ್ನು ಸಹ ಹಾಡುತ್ತಾರೆ. ಹೋಟೆಲುಗಳಲ್ಲಿ ಊಟಮಾಡುವುದಿಲ್ಲ, ಬೇರೆಯವರ ಮನೆಯಲ್ಲಿ ಊಟ ನೀರು ಏನನ್ನು ಮುಟ್ಟುವುದಿಲ್ಲ. ಕಂಚಿನ ತಟ್ಟೆಯನ್ನು ಹೊರತು ಪಡಿಸಿ ಬೇರೆ ಯಾವ ತಟ್ಟೆಯಲ್ಲಿಯೂ ಊಟಮಾಡುವುದಿಲ್ಲ.

ಶಿವಣ್ಣ ಮೀರಾಸಾಬಿಹಳ್ಳಿ, 'ಕಾಡುಗೊಲ್ಲ ಬುಡಕಟ್ಟು ವೀರರು' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫.

ಮೀರಾಸಾಬಿಹಳ್ಳಿ ಶಿವಣ್ಣನವರು ಪ್ರಕಟಿಸಿದ 'ಕಾಡುಗೊಲ್ಲ ಬುಡಕಟ್ಟು ವೀರರು' ಈ ಕೃತಿಯಲ್ಲಿ ಕಾಡುಗೊಲ್ಲರ ಪ್ರಧಾನ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪ ಈ ಇಬ್ಬರನ್ನು ಕುರಿತು ಸಮಗ್ರವಾದ ಅಧ್ಯಯನ ಮಾಡಿದ ಕೃತಿ. ಕರ್ನಾಟಕದಾದ್ಯಂತ ಕ್ಷೇತ್ರಕಾರ್ಯ ಕೈಗೊಂಡು ಎತ್ತಪ್ಪ ಮತ್ತು ಜುಂಜಪ್ಪನ ಬಗ್ಗೆ ಮಾಹಿತಿಯನ್ನು ಕಲೆಹಾಕಿ ಮಹಾಪ್ರಬಂಧವನ್ನು ಬರೆದರು. ಇತರೆ ವೀರಗಾರರಾದ ವೀರಯರ್‍ರಣ್ಣ, ವೀರಸಿಂಪಣ್ಣ, ಈರಬಡಪ್ಪ ಮೆಲ್ಲಜ್ಜ ಮತ್ತು ವೀರಗಾರ್ತಿಯರಾದ ಕೊಂಡದ ಕಾಟವ್ವ, ವೀರತಿಮ್ಮವ್ವ, ಗಿಡ್ಡಮ್ಮ, ಈರೋಬಿ ಮುಂತಾದವರ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

ಗುರುಲಿಂಗಯ್ಯ ಎಂ. 'ಕರ್ನಾಟಕದ ಗೊಲ್ಲ ಸಮುದಾಯ' ಶಕ್ತಿ ಪ್ರಿಂಟರ್ಸ್, ಅಂಡ್ ಪಬ್ಲಿಷರ್ಸ್ ಬೆಂಗಳೂರು, ೨೦೦೫

'ಕರ್ನಾಟಕದ ಗೊಲ್ಲ ಸಮುದಾಯ' ಈ ಕೃತಿಯಲ್ಲಿ ಕರ್ನಾಟಕದಾದ್ಯಂತ ವಾಸವಾಗಿರುವ ಕಾಡುಗೊಲ್ಲರು ಉರುಗೊಲ್ಲರು ಅಲ್ಲದೆ ಇತರೆ ಗೊಲ್ಲರಾದ ಹಂದಿಗೊಲ್ಲರು, ಪೆದ್ದಟ್ಟಿಗೊಲ್ಲರು, ಯಳವಗೊಲ್ಲರು, ಬಸವಗೊಲ್ಲರು ಮುಂತಾದ ಗೊಲ್ಲರ ಸಂಸ್ಕೃತಿ ಅವರ ಬೆಡಗುಗಳು ಅವರು ವಾಸವಾಗಿರುವ ಪ್ರದೇಶ, ಅವರು ಆಡುವ ಭಾಷೆ, ವೇಷಭೂಷಣ, ಕಲೆಗಳು ಅವರ ಸಮಾಜ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

ಮಲ್ಲಿಕಾರ್ಜುನ ಕಲಮರಹಳ್ಳಿ. 'ಈರಬಡಪ್ಪ(ಆತ್ಮಕಥನ) ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೭

'ಈರಬಡಪ್ಪ(ಆತ್ಮಕಥನ) ಇದು ಕಾಡುಗೊಲ್ಲರ ಹಿರಿಯ ವ್ಯಕ್ತಿಯೊಬ್ಬರ ಆತ್ಮಕಥನ ಈರಬಡಪ್ಪ ತನ್ನ ಹಟ್ಟಿಯಲ್ಲಿ ಎಲ್ಲಾ ವಯಸ್ಸಿನವರಿಗೂ ತುಂಬ ಆತ್ಮಿಯವಾಗಿರುತ್ತಾನೆ. ತಾನು ಜೀವನದುದ್ದಕ್ಕೂ ಅನುಭವಿಸಿದ ಅನುಭವಗಳನ್ನು ಹೇಳಿಕೊಂಡಿರುವುದನ್ನು ಮಲ್ಲಿಕಾರ್ಜುನ ಕಲಮರಹಳ್ಳಿ ಅವರು ಕೃತಿರೂಪಕ್ಕೆ ತಂದಿದ್ದಾರೆ.

ಅಂಗಡಿ ಎಸ್.ಎಸ್. 'ಕರ್ನಾಟಕ ಬುಡಕಟ್ಟು ಭಾಷೆ', ೨೦೦೮.

ಈ ಕೃತಿಯಲ್ಲಿ 'ಕಾಡುಗೊಲ್ಲರು ಭಾಷೆ ಮತ್ತು ಸಂಸ್ಕೃತಿ' ಎಂಬ ಲೇಖನದಲ್ಲಿ ಕರ್ನಾಟಕದ ಬುಡಕಟ್ಟುಗಳಲ್ಲಿ ಕಾಡುಗೊಲ್ಲರು ಪ್ರಮುಖರಾಗಿದ್ದಾರೆ ಎಂದು ಹೇಳುತ್ತಾರೆ. ಆದರೆ ಕಾಡುಗೊಲ್ಲರು ಇನ್ನೂ ಸಹ ಬುಡಕಟ್ಟು ಪಟ್ಟಿಯಲ್ಲಿ ಸೇರಿಕೊಂಡಿಲ್ಲ. ಕಾಡುಗೊಲ್ಲರು ಮತ್ತು ಊರುಗೊಲ್ಲರು ಎಂದು ವಿಭಾಗಿಸಿ, ಕಾಡುಗೊಲ್ಲರ ಭಾಷೆ, ಸಂಸ್ಕೃತಿ, ಅವರ ದೇವರುಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಗುರುಲಿಂಗಯ್ಯ ಎಂ., ನಾಗಪ್ಪ ವಿ. 'ಕಾಡುಗೊಲ್ಲ', ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೮

'ಕಾಡುಗೊಲ್ಲ', ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಗೆ ಸೇರುವ ಈ ಕೃತಿಯು ಕಾಡುಗೊಲ್ಲರ ಮೂಲ, ಅವರ ಸೃಷ್ಟಿಪುರಾಣ, ಬಂಧುತ್ವ, ವಿವಾಹ, ಆಚರಣೆ ಆರಾಧನೆ, ಆಡಳಿತ ವ್ಯವಸ್ಥೆ, ಆರ್ಥಿಕ ಮೂಲಗಳು, ಶೈಕ್ಷಣಿಕ ರಾಜಕೀಯ, ದೇವರ ಬಗ್ಗೆ ಇರುವ ನಂಬಿಕೆಗನ್ನು ವಿವರಿಸಿದ್ದಾರೆ.

ಶಿವಣ್ಣ ಮೀರಾಸಾಬಿಹಳ್ಳಿ 'ಕಾಡುಗೊಲ್ಲರ ಕಾವ್ಯಗಳು' ಪ್ರಸಾರಾಂಗ ಮಾನಸಗಂಗೋತ್ರಿ ಮೈಸೂರು, ೨೦೦೯

ಶಿವಣ್ಣ ಮೀರಾಸಾಬಿಹಳ್ಳಿ ಈ ಕೃತಿಯಲ್ಲಿ ಕಾಡುಗೊಲ್ಲರ ಸಂಸ್ಕೃತಿ,ವಾಸದನೆಲೆಗಳು, ಗ್ರಾಮದ್ಬಹಿವಾಸಿಗಳು, ಅನ್ಯರಪ್ರವೇಶ ನಿಬಂಧ ಕಾಡುಗೊಲ್ಲ ಎಂಬ ಪದದ ನಿಷ್ಪತ್ತಿ ಅವರ ಬಗೆಗೆ ಇರುವ ಐತಿಹ್ಯ, ಮ್ಯಾಸಬೇಡರಿಗೂ ಮತ್ತು ಕಾಡುಗೊಲ್ಲರಿಗೂ ಪದೆಪದೆ ನಡೆಯವ ಹೋರಾಟ, ಕಾಡುಗೊಲ್ಲರ ಬೆಡಗುಗಳು, ಕಾಡುಗೊಲ್ಲರ ವ್ರತಗಳು, ಗೊಲ್ಲಕಡಗ ರವಿಕೆ ರಹಿತ ಸಂಪ್ರದಾಯ, ಜೆನಿಗೆ ಹಾಕುವ ವಿಧಾನ ಮುಂತಾದ ವಿಷಯಗಳನ್ನು ಚರ್ಚಿಸಿದ್ದಾರೆ.

ವಿಮಲ ಅಮಲಪ್ಪ 'ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು'(ಅಪ್ರಕಟಿತ ಪಿಎಚ್.ಡಿ ಪ್ರಬಂಧ)ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

'ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು' ಕಾಡುಗೊಲ್ಲರ ಸಮಾಜ, ವಿವಾಹ, ಋತುಮತಿಶಾಸ್ತ್ರ, ಸೀಮಂತ ಕಾರ್ಯಕ್ರಮ ಮುಂತಾದ ವಿಷಯಗಳ ಜೊತೆಗೆ ಕಾಡುಗೊಲ್ಲರ ಆದಾಯದ ಮೂಲಗಳು ಯಾವುವು? ಮಹಿಳೆಯ ಪಾಲು ಎಷ್ಟಿದೆ? ಎಂಬುದಾಗಿ ಈ ಅಧ್ಯಯನ ಮಾಹಿತಿಯನ್ನು ನೀಡುತ್ತದೆ.

ಮಲ್ಲಿಕಾರ್ಜುನ ಕಲಮರಹಳ್ಳಿ. 'ಗೊಲ್ಲರ ಇತಿಹಾಸ ಕಥನ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

'ಗೊಲ್ಲರ ಇತಿಹಾಸ ಕಥನ' ಇದರಲ್ಲಿ ಕಾಡುಗೊಲ್ಲರು ಎನ್ನುವುದಕ್ಕಿಂತ ಗೊಲ್ಲರ ಬಗ್ಗೆ ಪ್ರಾಚೀನ ಕಾಲದಿಂದ ಹಿಡಿದು ಮುದ್ದಣ್ಣನ ಕಾಲದವರೆಗೆ ಕನ್ನಡ ಸಾಹಿತ್ಯದ ಕಾವ್ಯಗಳಲ್ಲಿ ಗೊಲ್ಲರ ಉಲೇಖವನ್ನು

ಗುರುತಿಸಲಾಗಿದೆ. ವಿವಿಧ ಭಾಷೆಗಳಲ್ಲಿ ಗೊಲ್ಲರನ್ನು ಸಂಬೋಧನೆ ಮಾಡಿರುವ ಉಲ್ಲೇಖಗಳ ಬಗ್ಗೆ ಈ ಗ್ರಂಥದಲ್ಲಿ ತಿಳಿಸಿದ್ದಾರೆ.

ಚಿಕ್ಕಣ್ಣ ಎಣ್ಣೆಕಟ್ಟೆ, 'ವೀರ ಜುಂಜಪ್ಪ ಸಮಗ್ರ ಕಥಾವಳಿ' ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ತುಮಕೂರು ಜಿಲ್ಲೆ, ೨೦೧೧.

'ವೀರ ಜುಂಜಪ್ಪ ಸಮಗ್ರ ಕಥಾವಳಿ' ಜುಂಜಪ್ಪನ ಕಾವ್ಯವು ಕಥೆಯ ರೂಪದಲ್ಲಿರುವುದನ್ನು ಎಣ್ಣೆಕಟ್ಟೆ ಚಿಕ್ಕಣ್ಣ ಸಂಪಾದನೆ ಮಾಡಿರುವುದು ಕಂಡುಬಂದಿದೆ. ಇವರಿಗಿಂತ ಮುಂಚೆ ಜೀ ಶಂ.ಪ ಸಂಗ್ರಹ ಮಾಡಿದ್ದರು. ಆದರೆ ಚಿಕ್ಕಣ್ಣ ಸಂಪಾದನೆ ಮಾಡಿದ ಗದ್ಯವು ಚಲುವರಾಜು ಸಂಪಾದಿಸಿರುವ ಕಾವ್ಯದ ಗದ್ಯ ರೂಪವೆನಿಸುತ್ತದೆ.

ಪ್ರೇಮಾ ಜಿ.ಕೆ., 'ಜನ್ನಿಗೆ' ಶ್ರೀ ಅನ್ನಪೂರ್ಣ ಪ್ರಕಾಶನ ಬೆಂಗಳೂರು, ೨೦೧೩

'ಜನ್ನಿಗೆ' ಇದು ಮಹಿಳಾ ಸಂಕಥನ. ಕಾಡುಗೊಲ್ಲರ ವೀರಗಾರ್ತಿಯರಿಂದ ಹಿಡಿದು ಪ್ರಸ್ತುತ ದಿನಮಾನಗಳಲ್ಲಿ ಕಾಡುಗೊಲ್ಲರ ಮಹಿಳೆಯರು ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಎಂಬುದನ್ನು ತಮ್ಮ ಅಧ್ಯಯನದ ಮೂಲಕ ತಿಳಿಸಿದ್ದಾರೆ. ಇವರು ಕಾಡುಗೊಲ್ಲರಲ್ಲಿಯೇ ಮೊಟ್ಟ ಮೊದಲು ಪಿಎಚ್.ಡಿ ಮಾಡಿದ ಮಹಿಳೆ ಎಂದು ಹೇಳಬಹುದು.

ಮೋಹನ್ ಕುಮಾರ್, ಎನ್., 'ಕಾಡುಗೊಲ್ಲರ ಕೋಲಾಟದ ಪದಗಳು' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ ಹಾವೇರಿ ೨೦೧೩.

'ಕಾಡುಗೊಲ್ಲರ ಕೋಲಾಟದ ಪದಗಳು' ಗೋಟಗೋಡಿ ಜಾನಪದ ವಿಶ್ವ ವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಮೋಹನ್ ಕುಮಾರ್ ಸಂಗ್ರಹಕಾರರು ಮಾತ್ರವಲ್ಲ ಸ್ವತಹ ಗಾಯಕರು. ಕಾಡುಗೊಲ್ಲರು ತಮ್ಮ ಹಟ್ಟಿಗಳಲ್ಲಿ ಹಬ್ಬಗಳಲ್ಲಿ ದೇವರು ಮಾಡುವ ಸಂದರ್ಭದಲ್ಲಿ ಜನರ ಮನೋರಂಜನೆಗಾಗಿ ಕೋಲು ಹೊಯ್ಯುವ ಪದ್ಧತಿಯು ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು ಇವು ದಾಖಲು ರೂಪದಲ್ಲಿರಲಿ ಎಂದು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ತೀ.ನಂ.ಶಂಕರನಾರಾಯಣ., ವೆಂಕಟೇಶ ಎಂ.ಎನ್., 'ಜುಂಜಪ್ಪ ಮಹಾಕಾವ್ಯ' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಹಾವೇರಿ, ೨೦೧೪.

'ಜುಂಜಪ್ಪ ಮಹಾಕಾವ್ಯ' ಈ ಕಾವ್ಯವನ್ನು ಹೇಳಿದವರು ಪೂಜಾರಿ ಶಿವಣ್ಣನವರು. ಈ ಕಾವ್ಯವು ಚಂಪೂ ರೂಪದಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದೇನೋ. ಏಕೆಂದರೆ ಇದರಲ್ಲಿ ಸ್ವಲ್ಪ ಭಾಗ ಕಾವ್ಯ ರೂಪದಲ್ಲಿದ್ದರೆ ಸ್ವಲ್ಪ ಭಾಗ ಗದ್ಯ ರೂಪದಲ್ಲಿದೆ. ಕೆಲವು ಸಂದುಗಳಲ್ಲಿ ವ್ಯತ್ಯಾಸ ಬಿಟ್ಟರೆ ಉಳಿದಂತೆ ಹೆಸರುಗಳಲ್ಲಿ ವ್ಯತ್ಯಾಸ ಕಂಡುಬರುವುದನ್ನು ಗಮನಿಸಬಹುದು.

ಶಿವಣ್ಣ ಮೀರಾಸಾಬಿಹಳ್ಳಿ, 'ಗೊಲ್ಲಕಡಗ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೧೫.

'ಗೊಲ್ಲಕಡಗ' ಈ ಕೃತಿಯಲ್ಲಿ ಕಾಡುಗೊಲ್ಲರ ಮಹಿಳೆಯರು ಬಳಸುವ ಕಂಚಿನ ಕಡಗದ ಬಗ್ಗೆ ಲೇಖಕರು ಹೇಳುತ್ತಾರೆ. ಕಾಡುಗೊಲ್ಲರು ದ್ರಾವಿಡ ಪರಂಪರೆಯವರಾದರೂ ನಾವು ಕೃಷ್ಣಗೊಲ್ಲರು ಎಂದು ಹೇಳಿಕೊಂಡು ಕೃಷ್ಣನ ಆರಾಧಕರೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರ ಎಲ್ಲಾ ಸಾಂಸ್ಕೃತಿಕ ನಾಯಕರ ಸೃಷ್ಟಿಪುರಾಣವನ್ನು ಗಮನಿಸಿದರೆ ಇವರು ಶಿವನ ಆರಾಧಕರೆಂಬುದು ಪ್ರತಿಯೊಬ್ಬ ಸಂಶೋಧಕನಿಗೂ ತಿಳಿದುಬರುವ ವಿಷಯ. ಇದರ ಜೊತೆಗೆ ಹುರುಳಿ-ನವಣೆ ಬತದ ಬಗ್ಗೆ

ವಿವರಿಸಿದ್ದಾರೆ. ಕಾಡುಗೊಲ್ಲರ ಮಾಡುವ ದೀವಣಿಗೆ ಹಬ್ಬದ ಬಗ್ಗೆ ಅದರ ವಿಶೇಷತೆ ಹಾಗೂ ಪಶುಪಾಲಕರು ಏಕೆ ದೀವಣಿಗೆ ಹಬ್ಬವನ್ನು ಮಾಡುತ್ತಾರೆ ಎಂಬುದನ್ನು ವಿಶ್ಲೇಷಿಸಿದ್ದಾರೆ.

ಕಾಳೇಗೌಡ ನಾಗವಾರ, 'ಬೇವಿನಹಳ್ಳಿ ಕಾಡುಗೊಲ್ಲರಹಟ್ಟಿ' ಸಿ.ವಿ.ಜಿ. ಇಂಡಿಯಾ ಕಸ್ತೂರಿ ಬಾ ಭವನ ಬೆಂಗಳೂರು, ೨೦೧೫

ಕಾಡುಗೊಲ್ಲರ ಬೇವಿನಹಳ್ಳಿ ಎಂಬ ಒಂದು ಹಟ್ಟಿಯ ಸಂಸ್ಕೃತಿಯನ್ನು ಅಧ್ಯಯನ ಮಾಡಿದ್ದಾರೆ. ಈ ಕೃತಿಯಲ್ಲಿ ಕಾಡುಗೊಲ್ಲರ ಸಂಸ್ಕೃತಿಯನ್ನು ಒಂದು ಹಟ್ಟಿಗೆ ಸೀಮಿತ ಮಾಡುವುದರ ಮೂಲಕ ತಿಳಿಸಿಕೊಟ್ಟಿದ್ದಾರೆ. ಬೇವಿನಹಳ್ಳಿ ಗೊಲ್ಲರಹಟ್ಟಿಯಲ್ಲಿ ಜುಂಜಪ್ಪನ ಜಾತ್ರೆ ಮಾಡುವುದರ ಬಗ್ಗೆ ಅವರ ಹಿರಿದೀವಣಿಗೆ ಮತ್ತು ಕಿರಿದೀವಣಿಗೆ, ದೀಪಾವಳಿ, ಕಾರಹುಣ್ಣಿಮೆ ಹಬ್ಬ ಮಾಡುವ ವಿಧಾನವನ್ನು ವಿವರಿಸಿದ್ದಾರೆ. ಕಾಡುಗೊಲ್ಲರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಅವರ ನ್ಯಾಯಪದ್ಧತಿ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.

ಗಂಗಾಧರ ದೈವಜ್ಞ 'ಬುಡಕಟ್ಟು ಹುಟ್ಟು- ಸಾವಿನ ನಡುವೆ', ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೨೦೧೫.

'ಬುಡಕಟ್ಟು ಸಮಾಜ ಹುಟ್ಟು- ಸಾವಿನ ನಡುವೆ', ಈ ಕೃತಿಯಲ್ಲಿ ಕಾಡುಗೊಲ್ಲರ ಸೃಷ್ಟಿಪುರಾಣಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಕಾಡುಗೊಲ್ಲರ ಶವ ಸಂಸ್ಕಾರದ ವಿಧಿ ವಿಧಾನಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ. ಅಷ್ಟೇ ಅಲ್ಲದೇ ಕಾಡುಕುರುಬರು ಜೇನುಕುರುಬರು, ಹಾಲಕ್ಕಿ ಒಕ್ಕಲಿಗರು, ಇರುಳಿಗರು ಸಿದ್ದಿಯರು ಸೋಲಿಗರು ಮುಂತಾದ ಬುಡಕಟ್ಟುಗಳ ಶವ ಸಂಸ್ಕಾರದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ.

೧.೭. ಅಧ್ಯಯನದ ವಿನ್ಯಾಸ

ಕಾಡುಗೊಲ್ಲರ ದೈವಗಳ ಸಾಂಸ್ಕೃತಿಕ ಅಧ್ಯಯನ ಎಂಬ ಈ ವಿಷಯದ ಅಧ್ಯಯನವನ್ನು ಅಧ್ಯಯನದ ಫಲಿತಗಳನ್ನು ಹೊರತುಪಡಿಸಿ ಒಟ್ಟು ಏಳು ಅಧ್ಯಾಯಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಮೊದಲನೆಯ ಅಧ್ಯಾಯ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಹತ್ವ ಅಧ್ಯಯನದ ವಿಧಾನ, ಮತ್ತು ಕಾಡುಗೊಲ್ಲರನ್ನು ಕುರಿತು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ.

ಎರಡನೆಯ ಅಧ್ಯಾಯ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಸೃಷ್ಟಿಪುರಾಣಗಳು. ಈ ಅಧ್ಯಾಯದಲ್ಲಿ ಕಾಡುಗೊಲ್ಲರ, ಸಾಂಸ್ಕೃತಿಕ ನಾಯಕರಾದ ಕಾಟಯ್ಯ, ಚಿತ್ತಯ್ಯ, ಓಬಳಾಪತಿ, ಕೆಂಗುರಿ ಮಲೇಗೊಂಡ ಹಾಗೂ ಜುಂಜಪ್ಪನ ಸೃಷ್ಟಿ, ಪವಾಡಗಳು, ಸಾಂಸ್ಕೃತಿಕ ನಾಯಕರಿಗೂ ಮತ್ತು ಕಾಡುಗೊಲ್ಲರಿಗೂ ಇರುವ ಸಂಬಂಧಗಳು, ಅವರ ಹೋರಾಟಗಳ ಬಗೆಗೆ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯ ಕಾಡುಗೊಲ್ಲರ ಕುಲ – ಬಳಿ, ಬೆಡಗುಗಳು. ಈ ಅಧ್ಯಾಯದಲ್ಲಿ ಚಿತ್ತಮುತ್ತಿ (ಸೂರ್ಯನ ಕುಲ), ಸನ್ನಮುತ್ತಿ (ಚಂದ್ರನ ಕುಲ). ಮತ್ತು ರಾಮಮುತ್ತಿ ಕುಲದ ಸೃಷ್ಟಿ, ಮತ್ತು ಈ ಮೂರು ಕುಲಗಳಲ್ಲಿ ಹುಟ್ಟಿಕೊಂಡ ಉಪ ಬೆಡಗುಗಳ ಬಗೆಗೆ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯ: ಪಂಚಲಿಂಗಗಳು. ಈ ಅಧ್ಯಾಯದಲ್ಲಿ ಕಾಡುಗೊಲ್ಲರು ಆರಾಧಿಸುತ್ತಿರುವ. ಕಾಟಮಲಿಂಗ, ಚಿತ್ರಲಿಂಗ, ಕೇತೇಲಿಂಗ, ಪಾತೇಲಿಂಗ ಮತ್ತು ರಾಮಲಿಂಗನ ಸೃಷ್ಟಿ ಪರಾಣಗಳು, ಕಥೆಗಳು, ಪವಾಡಗಳು, ಐತಿಹ್ಯಗಳು ಮತ್ತು ಅವರಿಗೆ ಸಂಬಂಧಿಸಿದ ಹಬ್ಬಗಳು, ಆಚರಣೆಗಳು, ನಿಷೇಧಗಳನ್ನು ಕುರಿತು ಸಮಗ್ರವಾಗಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯ ಕಾಡುಗೊಲ್ಲರ ಮಾತೃ ದೇವತೆಗಳು. ಈ ಅಧ್ಯಾಯದಲ್ಲಿ ಕಾಡುಗೊಲ್ಲರು ಆರಾಧಿಸುತ್ತಿರುವ ಮಾತೃ ದೈವಗಳಾದ ಗೌರಸಮುದ್ರದ ಮಾರಮ್ಮ, ಕಾವಲಮ್ಮ ಮತ್ತು ಗೊಲ್ಲಾಳಮ್ಮ ಅಥವಾ ದ್ಯಾಮವನ ಸೃಷ್ಟಿ ಪರಾಣಗಳು, ಅವರಿಗೆ ಸಂಬಂಧಿಸಿದ ಜಾತ್ರೆಗಳು, ಹಬ್ಬಗಳು, ವಿವಿಧ ಆಚರಣೆಗಳು, ಆರಾಧನೆಗಳು, ಪವಾಡಗಳು, ಸತ್ವ ಪರೀಕ್ಷೆಗಳು, ಐತಿಹ್ಯಗಳು, ಬಲಿ ಪದ್ದತಿಗಳು, ಹರಕೆಗಳು, ಹೋರಾಟಗಳು, ಕಾಡುಗೊಲ್ಲರಿಗೂ ಮತ್ತು ಈ ಮಾತೃ ದೈವಗಳಿಗೂ ಇರುವ ಸಂಬಂಧಗಳನ್ನು ಕುರಿತು ಸುದೀರ್ಘವಾಗಿ ವಿಶ್ಲೇಷಿಸಲಾಗಿದೆ.

ಆರನೆಯ ಅಧ್ಯಾಯ: ಕಾಡುಗೊಲ್ಲರ ಕಟ್ಟೆಮನೆಗಳು ಮತ್ತು ಗುಡಿಕಟ್ಟುಗಳು. ಈ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಕಂಡುಬರುವ ಕಾಡುಗೊಲ್ಲರ ಕಟ್ಟೆಮನೆಗಳು ಮತ್ತು ಗುಡಿಕಟ್ಟುಗಳ ಉದ್ದೇಶ, ಪ್ರಾಮುಖ್ಯತೆ, ಆಧುನಿಕತೆಯಲ್ಲಿ ಕಟ್ಟೆಮನೆಗಳ ಸ್ಥಿತಿಗಳು, ಮತ್ತು ಕಟ್ಟೆಮನೆಗೆ ಸೇರಿದ ಉಪಬೆಡಗುಗಳ ಬಗೆಗೆ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯ ಕಾಡುಗೊಲ್ಲರ ಹಬ್ಬಗಳು. ಈ ಅಧ್ಯಾಯದಲ್ಲಿ ಕಾಡುಗೊಲ್ಲರು ಆಚರಿಸುವ ಪ್ರಮುಖ ಹಬ್ಬಗಳಾದ, ಮಕರ ಸಂಕ್ರಮಣ, ಕಾಳಹಬ್ಬ ಅಥವಾ ಗುಗ್ಗರಿ ಹಬ್ಬ, ಯುಗಾದಿ, ಕಾರ ಹುಣ್ಣಿಮೆ, ಅಜ್ಜಿಯ ಹಬ್ಬ, ದೀವಣಿಗಿ ಮತ್ತು ಮಾರಮ್ಮನ ಹಬ್ಬದ ಆಚರಣೆಯ ವಿಧಾನಗಳು, ಆರಾಧನೆಗಳು, ಅಲ್ಲಿಯ ವಿಶೇಷತೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಯನದ ಕೊನೆಗೆ ಅಧ್ಯಯನದ ಫಲಿತಗಳು, ಪರಮಾರ್ಶನ ಗ್ರಂಥಗಳು ಅನುಬಂಧದಲ್ಲಿ ತಿಳುವಳಿಕೆದಾರರ ಪಟ್ಟಿ ಮತ್ತು ಅಧ್ಯಯನಕ್ಕೆ ಪೂರಕವಾದ ಛಾಯಚಿತ್ರಗಳನ್ನು ನೀಡಲಾಗಿದೆ.

ಅಧ್ಯಾಯ : ಎರಡು

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಸೃಷ್ಟಿಪುರಾಣಗಳು

೨.೧. ಕಾಡುಗೊಲ್ಲರ ಸೃಷ್ಟಿಗೆ ಗಂಡಬೇರುಂಡ ಪಕ್ಷಿಗಳ ಪ್ರೇರಣೆ

೨.೨. ಕಾಟಯ್ಯನ ಸೃಷ್ಟಿ ಪುರಾಣ

೨.೩. ಚಿತ್ತಯ್ಯನ ಸೃಷ್ಟಿಪುರಾಣ

೨.೪. ಓಬಳಪತಿ ಸೃಷ್ಟಿ ಪುರಾಣ

೨.೫. ಎತ್ತಪ್ಪನ ಸೃಷ್ಟಿ ಪುರಾಣ

೨.೬. ಕೆಂಗುರಿ ಮಲೆಗೊಂಡನ ಸೃಷ್ಟಿ ಪುರಾಣ

೨.೭. ಜುಂಜಪ್ಪನ ಸೃಷ್ಟಿ ಪುರಾಣ

ಅಧ್ಯಾಯ: ಎರಡು

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಸೃಷ್ಟಿ ಪುರಾಣಗಳು

ಸಾಮಾನ್ಯವಾಗಿ ನಮಗೆ ಕಾಡುವ ಪ್ರಶ್ನೆ ಎಂದರೆ ಈ ವಿಶ್ವದ ಸೃಷ್ಟಿ ಹೇಗಾಯಿತು, ಕಾಡು, ಬೆಟ್ಟಗುಡ್ಡ, ನೀರು ಗಾಳಿ, ಮರ, ಗಿಡ, ಬಳ್ಳಿ, ಪ್ರಾಣಿ ಪಕ್ಷಿ, ಮತ್ತು ಮನುಷ್ಯ ಇವುಗಳ ಸೃಷ್ಟಿಯ ಬಗೆಗೆ ಕುತೂಹಲ ಇದ್ದೇ ಇರುತ್ತದೆ. ಹಾಗೆ ಪ್ರಕೃತಿಯಲ್ಲಿ ಇವೆಲ್ಲವೂ ಒಂದು ನಿಯಮಕ್ಕೆ ಒಳಪಟ್ಟು ತಮ್ಮ ತಮ್ಮ ಕೆಲಸವನ್ನು ನಿರ್ವಹಿಸುತ್ತವೆ. ಈ ವಿಸ್ಮಯವನ್ನು ಪ್ರಶ್ನೆ ಮಾಡಿದವನೆಂದರೆ ಅದು ಮನುಷ್ಯ ಮಾತ್ರ. ಪ್ರಕೃತಿಯ ರಹಸ್ಯಗಳನ್ನು ಅರಿಯಲು ಪ್ರಯತ್ನಿಸಿ ತಿಳಿಯದಿದ್ದಾಗ ದೈವಗಳ ಸೃಷ್ಟಿಗೆ ಕಾರಣನಾಗಿದ್ದಾನೆ. ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಪ್ರಕೃತಿಯ ಎಲ್ಲಾ ವಸ್ತುಗಳನ್ನು ದೈವಗಳಾಗಿ ಸೃಷ್ಟಿಸಿಕೊಂಡನು. ಆ ನಂತರ ತನ್ನ ಪೂರ್ವಜರನ್ನು ದೈವಗಳನ್ನಾಗಿ ಮಾಡಿದ ಕಾರಣದಿಂದ ಆ ಪೂರ್ವಜರ ಬಗೆಗೆ ಸೃಷ್ಟಿಪುರಾಣಗಳನ್ನು ಸೃಷ್ಟಿಮಾಡಿಕೊಂಡಿರುವುದು ಗಮನಾರ್ಹವಾದ ಸಂಗತಿ. ಆ ಸೃಷ್ಟಿ ಪುರಾಣಗಳು ಪ್ರತಿಯೊಂದು ಸಮುದಾಯ ಹುಟ್ಟಿಗೆ ಕಾರಣವಾಗಿರುವುದಲ್ಲದೆ. ಈ ಪೂರ್ವಜರು ಬದುಕಿದ ರೀತಿಯನ್ನು, ಸಮುದಾಯ ನಿರಂತರವಾಗಿ ಅನುಸರಿಸಿಕೊಂಡು ಬರುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಪ್ರತಿಯೊಂದು ಸಮುದಾಯವು ಈ ಭೂಮಿಗೆ ನಾವೇ ಮೊದಲು ಸೃಷ್ಟಿಯಾದವರು ಮತ್ತು ನಮ್ಮಿಂದಲೆ ಇತರೆ ಸಮುದಾಯಗಳು ಸೃಷ್ಟಿಗೊಂಡವು ಎಂಬ ನಂಬಿಕೆಯೊಂದಿಗೆ ಬದುಕುತ್ತಾ ಬಂದಿರುವುದು ವಿಶೇಷ.

"ಪುರಾಣಗಳೆಂದರೆ ಅವು ಕಟ್ಟುಕಥೆಗಳಲ್ಲ ಅಥವಾ ವಿಜ್ಞಾನ ಪೂರ್ವ ಯುಗದ ಪ್ರಾಗೈತಿಹಾಸಿಕ ಕಾಲದ ಅನಕ್ಷರಸ್ತ ಜನ ಸಮುದಾಯಗಳ ಕಾಲ್ಪನಿಕ ಸೃಷ್ಟಿಯೂ ಅಲ್ಲ ಒಂದು ಸಮುದಾಯದ ಸಂದೇಶ, ಘಟನೆ, ಇತಿಹಾಸ ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ". *(ಗಂಗಾಧರ ದೈವಜ್ಞ 'ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ' ಪುಟ ೨. ೨೦೧೫)*

ಒಂದು ಕಾಲದಲ್ಲಿ ಪುರಾಣವೆಂದರೆ ಪುಂಡರ ಗೊಪ್ಪಿ ಎಂದು ಬಿಂಬಿಸಲಾಗಿತ್ತು. ಯಾವಾಗ ಜನಪದ ಸಾಹಿತ್ಯ ಮತ್ತು ಸಮುದಾಯಗಳ ಅಧ್ಯಯನಗಳು ಪ್ರಾರಂಭವಾದವೋ ಆಗ ಜನಪದರಿಗೂ ಮತ್ತು ಸಮುದಾಯಗಳಿಗೂ ಪ್ರಾಮುಖ್ಯತೆ ಬಂದಿತು. ಕೇವಲ ಶಿಷ್ಟ ಸಮುದಾಯದವರದ್ದು ಮಾತ್ರ

ಜೀವನ ಅಲ್ಲ ಪರಿಶಿಷ್ಟ ಸಮುದಾಯದವರದ್ದೂ ಜೀವನವಿದೆ. ಶಿಷ್ಟ ಸಮುದಾಯದವರಿಗಿಂತ ನೆಮ್ಮದಿಯಾಗಿ ಹಾಯಾಗಿ ಯಾವುದೇ ಜಂಜಡಗಳಿಗೆ ಒಳಗಾಗದೆ ನಿಸ್ಕಲ್ಮಶವಾದ ಜೀವನವನ್ನು ರೂಪಿಸಿಕೊಂಡಿದ್ದಾರೆಂಬುದು ತಿಳಿದು ಬಂದಿತು.

"ಪುರಾಣವೆಂಬುದು ಕೇವಲ ಕಟ್ಟು ಕತೆಯಲ್ಲ ಅಲೌಖಿಕ ಅತಿಮಾನುಷ ವ್ಯಕ್ತಿಗಳ ಸಾಹಸವನ್ನು ನೈಸರ್ಗಿಕ ಘಟನೆಗಳ ಅಸಾಧಾರಣ ವಿಚಿತ್ರ ಪ್ರವೃತ್ತಿಯನ್ನೊ ಅಥವಾ ಐತಿಹಾಸಿಕ ಘಟನೆಯನ್ನೋ ಅದು ವರ್ಣಿಸುವುದಿಲ್ಲ. *(ಗಂಗಾಧರ ದೈವಜ್ಞ 'ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ' ಪುಟ ೨, ೨೦೧೫)*

ಪ್ರತಿಯೊಂದು ಸಮುದಾಯವೂ ತನ್ನದೇ ಆದಂತಂಹ ಸೃಷ್ಟಿ ಪುರಾಣಗಳನ್ನು ಸೃಷ್ಟಿಮಾಡಿಕೊಂಡಿರುವುದು ಕಂಡುಬರುತ್ತದೆ. ಉದಾ: ಜೇನುಕುರುಬರು, ಬೆಟ್ಟಕುರುಬರು, ಮೇದರು, ಮ್ಯಾಸಬೇಡರು ಮುಂತಾದ ಅನೇಕ ಕಾಡುಗೊಲ್ಲ ಸಮುದಾಯಗಳು ತಮ್ಮ ಸಮುದಾಯದ ಮೂಲ ಪುರುಷರ ಹುಟ್ಟಿನ ಬಗೆಗೆ ಸೃಷ್ಟಿಪುರಾಣವನ್ನು ಸೃಷ್ಟಿಮಾಡಿಕೊಂಡಿರುವುದರ ಬಗೆಗೆ ತಿಳಿದು ಬರುತ್ತದೆ. ಆ ಸೃಷ್ಟಿಪುರಾಣದ ನಾಯಕರು ಬೇರೆ ಯಾರೂ ಆಗಿರುವುದಿಲ್ಲ ತಮ್ಮ ಸಮುದಾಯದ ಮೂಲ ಪುರುಷರೇ ಆಗಿರುತ್ತಾರೆ. ಈ ಪ್ರಪಂಚದ ಸೃಷ್ಟಿಗೆ, ಮರಗಿಡ, ನೀರು, ಬೆಳಕು, ಪ್ರಾಣಿ ಸಂಕುಲ ಇವುಗಳ ಸೃಷ್ಟಿಗೆ ಕಾರಣವನ್ನು ಕಂಡುಕೊಂಡಿರುವ ಜನರು ಅದರಲ್ಲಿ ತಮ್ಮ ಸಮುದಾಯಗಳನ್ನು ಗುರತಿಸಿಕೊಳ್ಳಲು ಪ್ರತ್ಯೇಕವಾದ ಸೃಷ್ಟಿಪುರಾಣಗಳನ್ನು ಸೃಷ್ಟಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳುವುದಾದರೆ, ಹಳೆಯ ವ್ಯಕ್ತಿಗಳು ಪ್ರಸ್ತುತ ಕಾಲಘಟ್ಟದಲ್ಲಿ ವೀರರಾಗಿಯೇ ದಾಖಲಾಗುತ್ತಾರೆ. ಈ ವೀರತ್ವದ ಕಲ್ಪನೆ ಪ್ರಾಚೀನ ಕಾಲದಿದಂಲೂ ರೂಢಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಇತರೇ ಸಮುದಾಯಗಳಲ್ಲಿರುವಂತೆ ಕಾಡುಗೊಲ್ಲರಲ್ಲಿಯೂ ಅನೇಕ ಸೃಷ್ಟಿಪುರಾಣಗಳು ಇರುವುದನ್ನು ಕಾಣಬಹುದು. ಕಾಡುಗೊಲ್ಲರು ನೀರು, ಮಳೆ, ಭೂಮಿ, ಚಂದ್ರ, ಸೂರ್ಯ, ಆಕಾಶ, ನಕ್ಷತ್ರ, ಕುರಿ, ಮೇಕೆ, ಹಸು ಇವುಗಳ ಕುರಿತಾಗಿ ಹಲವಾರು ಸೃಷ್ಟಿಪುರಾಣಗಳಿರುವುದು ಕಂಡುಬರುತ್ತದೆ. ಕಾಡುಗೊಲ್ಲರ ಸೃಷ್ಟಿ ಪುರಾಣ ಪ್ರಾರಂಭವಾಗುವುದು ಕಲ್ಯಾಣದುರ್ಗ ತಾಲ್ಲೂಕಿನ ಬೆಸ್ತರಹಳ್ಳಿಯಲ್ಲಿ. ಈ ಸೃಷ್ಟಿಪುರಾಣದ ಬಗ್ಗೆ ಅವರಲ್ಲಿ ಮೌಖಿಕ ಆಕಾರಗಳೇ ದಾಖಲೆಗಳು, ಇವುಗಳನ್ನು ಬಿಟ್ಟರೆ ಅವರುಗಳು ವಾಸವಾಗಿದ್ದರು ಎಂಬುದಕ್ಕೆ ವಾಸವಾಗಿರುವ ನೆಲೆಗಳಲ್ಲಿ ಅವರು ಬಳಸುತ್ತಿದ್ದ ಅನೇಕ ಐತಿಹ್ಯಗಳು ಅವರ ಬದುಕಿನ ಬಗೆಗೆ ಪುಷ್ಟೀಕರಿಸುತ್ತವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಕಾಡುಗೊಲ್ಲರ ಮೂಲ ಪುರುಷರಾದ ಕಾಟಯ್ಯ ಚಿತ್ತಯ್ಯ ಮತ್ತು ಓಬಳಪತಿಯ ಸೃಷ್ಟಿಪುರಾಣಗಳನ್ನು ಕಾಣುತ್ತೇವೆ. ಕಾಡುಗೊಲ್ಲರ ಸೃಷ್ಟಿಪುರಾಣ ಕಟ್ಟುಕತೆಯಂತೆ ನಿರೂಪಿತಗೊಂಡಿದೆ. ಕಾಡುಗೊಲ್ಲರು ಆಂಧ್ರಪ್ರದೇಶದಲ್ಲಿ ವಾಸವಾಗಿದ್ದರು ಎಂಬುದಕ್ಕೆ ಕಲ್ಯಾಣದುರ್ಗದ ಕುಂದುರುಪೆಯ ಹತ್ತಿರ ೭ ಕಿಲೋಮೀಟರ್ ದೂರದಲ್ಲಿ ಬೆಸ್ತರಹಳ್ಳಿ ಎಂಬ ಊರು ಇದೆ. ಆ ಊರಿನ ಸಮೀಪದಲ್ಲಿ ಒಂದು ಕರುಚಲು ಕಾಡಿದೆ. ಆ ಕಾಡಿನಲ್ಲಿ ತುಗ್ಗಲಿಮರ, ಹೊಂಗೆಮರ,

ಬೇವಿನಮರ, ಲಂಟಾನ, ಸೀಮೆಜಾಲಿಗಿಡ, ಜಾಲಿಯಮರ, ಗುಬಸೆಗಿಡ, ಎಕ್ಕೆಯಗಿಡ, ಟಂಕಡೆಗಿಡ ಮುಂತಾದ ಅನೇಕ ಜಾತಿಯ ಮರಗಿಡಗಳು ಬೆಳೆದಿವೆ ಇಂತಹ ಕಾಡಿನಲ್ಲಿ ಕಾಡುಗೊಲ್ಲರ ಮೂಲಪುರುಷರ ಸೃಷ್ಟಿಯಾಗಿದೆ ಈ ಕಾರಣದಿಂದ.ಇವರನ್ನು ಕಾಡುಗೊಲ್ಲರು ಎಂದು ಕರೆದಿರಬಹುದು. ಜೊತೆಗೆ ಇವರು ವಾಸವು ಪ್ರಸ್ತುತ ದಿನಗಳಲ್ಲಿಯೂ ಊರಿನಿಂದ ದೂರ ಎಂದರೆ ಕನಿಷ್ಟ ಒಂದು ಮೈಲಿಯಾದರೂ ಅಂತರವನ್ನು ಇಟ್ಟುಕೊಂಡು ಈ ಬೆಸ್ತರಹಳ್ಳಿಯ ವಿವರವು ಚಿತ್ರದೇವರ ಕಾವ್ಯದಲ್ಲಿ ಬರುತ್ತದೆ. ಕಾಡುಗೊಲ್ಲರು ಕಾಡನ್ನು ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಕಾವಲು ಎಂದು ಕರೆದಿರುವುದು ಕಂಡು ಬಂದಿದೆ. ಈ ಕಾವಲು ತುಂಬಾ ವಿಸ್ತಾರವಾಗಿತ್ತು ಎಂಬುದಕ್ಕೆ ಅವರು ಕೊಡುವ ಕಾರಣ ಈ ರೀತಿ ಇದೆ ಹನ್ನೆರಡು ಹನ್ನೆರಡು ಒಟ್ಟು ಇಪ್ಪತ್ತಾನಲ್ಕು ಮೈಲಿ ಸುತ್ತಳತೆಯ ವ್ಯಾಪ್ತಿಯನ್ನು ಹೊಂದಿರುವಂತಹ ದಟ್ಟವಾದ ಕುರುಚಲು ಕಾಡು. ಸಾಮಾನ್ಯವಾಗಿ ಕಾಡುಗೊಲ್ಲರು ವಾಸಿಸುವುದು ಬಯಲು ಪ್ರದೇಶದ ಕುರುಚಲು ಕಾಡಿನಲ್ಲಿ. ಏಕೆಂದರೆ ಇವರು ಪಶುಪಾಲಕರು ಮತ್ತು ಅಲೆಮಾರಿಗಳು ಹಾಗಾಗಿ ಅಲೆಮಾರಿಗಳನ್ನು ಸಂಶಯದ ದೃಷ್ಟಿಯಿಂದ ನೋಡುವ ಈ ಸಮಾಜ ಅವರು ಅರಣ್ಯದಲ್ಲಿ ವಾಸಿಸುವಂತೆ ಮಾಡಿದೆ.

ಇವರಲ್ಲಿ ದೈವಶ್ರದ್ಧೆ, ಧಾರ್ಮಿಕ ಶ್ರದ್ಧೆ ಹೆಚ್ಚು. ವಿಧಿ ನಿಷೇದಗಳು ಹೇರಳ. ತಮ್ಮ ಹಟ್ಟಿಯ ಸುತ್ತಲೂ ಬಲವಾದ ಕಳ್ಳೆಯ ಬೇಲಿಯನ್ನು ಹಾಕಿ, ನಡುವೆ ದೇವರ ಗುಬ್ಬ ಕಟ್ಟಿಕೊಂಡು ವಾಸಿಸುವ, ಹೊರಗಿನವರಿಗೆ ನಿರ್ಬಂಧಗಳು ಹೆಚ್ಚು.

ವೀರತ್ವ ಎಂಬ ಪರಿಕಲ್ಪನೆಯನ್ನು ವಿವರಿಸುವುದು ಅಥವಾ ವ್ಯಾಖ್ಯಾನಿಸುವುದು ತುಂಬ ಕಷ್ಟದ ಕೆಲಸ. ಪ್ರತಿಯೊಂದು ಸಂದರ್ಭದಲ್ಲಿಯೂ ವೀರತ್ವ ಕೆಲಸ ಮಾಡುತ್ತದೆ. ನಮ್ಮ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ಸಾಹಿತ್ಯ ಚರಿತ್ರೆಯನ್ನು ವಿಭಾಗ ಮಾಡಿರುವುದು ಕೂಡ ವೀರತ್ವದ ಹಿನ್ನೆಲೆಯಲ್ಲಿ ಎಂದು ಹೇಳಬಹುದು. ಪಂಪನ ಕಾಲದಲ್ಲಿ ಯುದ್ಧವು ವೀರತ್ವ ಪಡೆದುಕೊಂಡರೆ, ವಚನಕಾರರ ಕಾಲದಲ್ಲಿ ಕಾಯಕತತ್ವ ವೀರತ್ವವನ್ನು ಪಡೆದುಕೊಂಡಿತು. ಹಾಗೆಯೇ ಕುಮಾರವ್ಯಾಸನ ಕಾಲದಲ್ಲಿ ಭಕ್ತಿಯು ಹೊಸಗನ್ನಡ ಕಾಲದಲ್ಲಿ ಭಾವನೆ, ಕಾಮ ವಾಸ್ತವತೆ ದಲಿತ ಸಂವೇದನೆ ಮುಂತಾದವು ವೀರತ್ವ ಪಡೆದುಕೊಂಡವು. ಸ್ವಾಮಿ ವಿವೇಕಾನಂದರನ್ನ ವೀರ ಸಂನ್ಯಾಸಿ ಎಂದು ಕರೆಯುತ್ತಾರೆ. ಈತ ಆಧ್ಯಾತ್ಮದ ಮೇಲೆ ಹಿಡಿತವನ್ನು ಸಾಧಿಸಿದ್ದರಿಂದ. ಜೊತೆಗೆ ಬ್ರಹ್ಮಚರ್ಯದ ಮೇಲೆ ಹಿಡಿತವನ್ನು ಸಾಧಿಸಿದ್ದರಿಂದ ಹಾಗೆಯೇ ಮಹಾತ್ಮ ಗಾಂಧಿ, ಅಂಬೇಡ್ಕರ್, ಪೆರಿಯರ್, ಮುಂತಾದವರು ಅವರದೇ ಆದ ಕ್ಷೇತ್ರದಲ್ಲಿ ವೀರರೇ ಆಗಿರುವುದು ಕಂಡುಬರುತ್ತದೆ. ವೀರತ್ವ ಎನ್ನುವುದು ಮನಸ್ಸಿಗೆ ಸಂಬಂಧಿಸಿದ ವಿಷಯ. ಕೇವಲ ಎದುರಾಳಿಗಳನ್ನು ದೈಹಿಕವಾಗಿ ಸೋಲಿಸುವುದು ಮಾತ್ರ ವೀರತ್ವ ಎಂಬುದು ಅನೇಕ ಅನುಭಾವಿಗಳ ಮಾತು. ಯಾರು ತಾವು ತೊಡಗಿದ ಕೆಲಸದಲ್ಲಿ ಜಯಸಾಧಿಸುವರೋ ಅವರೇ ನಿಜವಾದ ವೀರರು ಎಂದು ಸರಳವಾಗಿ ಹೇಳಬಹುದು.

೧. ಬ್ಯಾಡಾರ ದಂಡು ಬೇಲ್ಗುಂಟೆ ಬರುವಾಗ

ಬೆಳ್ಳಿಯ ಕವುಣೆ ಬಲಗೈಲಿ– ಕರಿಯಣ್ಣ

ಜಂಗೂಸಿ ಹೊಡೆದ ತೆಲಿನೂರು *(ಅಂಬಳಿಕೆ ಹಿರಿಯಣ್ಣ ಕಾಡುಗೊಲ್ಲರ ಜನಪದ ಗೀತೆಗಳು, ಕರಿಯಣ್ಣನ ಕಾವ್ಯ ಪುಟ ೫)*

೨. ತುರುಕಾರ ದಂಡು ಗಮಕಾದಿಂದ ಬರುವಾಗ

ಸಬುಕು ತಾರೆಂದ ಬಲಗೈಲಿ– ಕರಿಯಣ್ಣ

ಕೀಲುಕುರಿಸಿ ಹೊಡೆದ ತೆಲಿನೂರು(ಅದೇ ಪುಟ ೫)

ಈ ವೀರತ್ವ ಪರಿಕಲ್ಪನೆಯನ್ನು ಕುರಿತು ವಿರೂಪಾಕ್ಷಿ ಪೂಜಾರಿಹಳ್ಳಿ ಈ ರೀತಿ ಹೇಳಿದ್ದಾರೆ. "ಎಡರು ತೊಡರುಗಳಿಗೆ ಎದೆಗುಂದದೆ ಕೈಗೊಂಡ ಕಾರ್ಯದ ಸಂಕಲ್ಪವನ್ನು ಉತ್ಸಾಹದಿಂದ ಸಾಧಿಸಿ ಸತ್ತವನನ್ನು ವೀರನೆನ್ನುತ್ತಾರೆ. ವೀರತ್ವವೆಂಬುದು ಉತ್ತಮ ಪ್ರಕೃತಿಯವರ ಉದಾತ್ತ ಸ್ವಭಾವ ಅದನ್ನು ಪರೋಪಕಾರ ಭಕ್ತಿ ದಯೆ ದಾನ ತ್ಯಾಗ ಪ್ರೇಮ ಯಾವ ಸ್ವಭಾವದಲ್ಲಾದರೂ ಗುರುತಿಸಬಹುದು."*(ವಿರೂಪಾಕ್ಷಿ ಪೂಜಾರಹಳ್ಳಿ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಪುಟ–೩೦, ೨೦೦೨)*

ವಿರೂಪಾಕ್ಷಿ ಪೂಜೂರಹಳ್ಳಿರವರು ಹೇಳಿದ ಪ್ರಕಾರ ವೀರತ್ವ ಎಲ್ಲ ಲಕ್ಷಣಗಳು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಲ್ಲಿ ಕಂಡುಬರುತ್ತವೆ. ಕಾಟಯ್ಯ ಚಿತ್ತಯ್ಯ ಎತ್ತಪ್ಪ, ಜುಂಜಪ್ಪ ವೀರ ಕರಿಯಣ್ಣ ವೀರಜಂಪಣ್ಣ. ಮುಂತಾದವರು ಅನೇಕ ತ್ಯಾಗ, ಸಾಹಸ, ಕಾರ್ಯಗಳನ್ನು ಮೆರೆದು ತನ್ನ ಸಮುದಾಯಕ್ಕೆ ಮಾದರಿಗಳಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ.

"ಬುಡಕಟ್ಟು ವೀರರನ್ನು ತಮ್ಮ ಮೂಲ ಪುರುಷರೆಂದು ನಾಯಕರೆಂದು ಕರೆದುಕೊಳ್ಳುತ್ತಾರೆ. ಇದು ಪಿತೃ ಆರಾಧನೆಯನ್ನು ಹೋಲುತ್ತದೆ. ಗೊಲ್ಲರಲ್ಲಿ ಮ್ಯಾಸಬೇಡರಲ್ಲಿ ಅಲ್ಲದೆ ಇತರೆ ಅನೇಕ ಬುಡಕಟ್ಟುಗಳಲ್ಲಿ ಈ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ" *(ವಿರೂಪಾಕ್ಷಿ ಪೂಜಾರಹಳ್ಳಿ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಪುಟ–೩೪, ೨೦೦೨)*

ಆದರೆ ಕೆಲವು ಸಮುದಾಯಗಳಲ್ಲಿ ತಮ್ಮ ಮೂಲ ಪುರುಷರನ್ನು ಮರೆತು ಸಮಾಜದಲ್ಲಿ ಇಂದು ಜನಪ್ರೀಯವಾಗಿರುವ ದೇವರುಗಳನ್ನು ಮಾತ್ರ ದೇವರೆಂದು ನಂಬಿರುವ ಹಲವು ಸಮುದಾಯಗಳು ಕರ್ನಾಟಕದಲ್ಲಿವೆ. ಸಾಮಾನ್ಯವಾಗಿ ಬುಟಕಟ್ಟುಗಳು ಆ ರೀತಿ ಮಾಡದೇ ಇರುವುದು ಕಂಡುಬರುತ್ತದೆ. ಮೊದಲ ಆಧ್ಯತೆಯನ್ನು ತಮ್ಮ ಮೂಲಪುರುಷರಿಗೆ ಕೊಟ್ಟು ಆ ನಂತರದ ಸ್ಥಾನವನ್ನು ಐಶಾರಾಮಿ ದೇವರುಗಳಿಗೆ ಕೊಟ್ಟಿದ್ದಾರೆ. ಬಹಳ ಹಿಂದೆ ಕಾಡುಗೊಲ್ಲರಲ್ಲಿ ತಿರುಪತಿ ತಿಮ್ಮಪ್ಪನ, ಮಂಜುನಾಥನ, ಅಂಬಾಭವಾನಿ ಮುಂತಾದ ದೈವಗಳ ದರ್ಶನ ಇರಲಿಲ್ಲ. ಅಷ್ಟೆ ಅಲ್ಲ ನನಗೆ ತಿಳಿದ ಮಟ್ಟಿಗೆ ಎಷ್ಟೋ ಗೊಲ್ಲರಹಟ್ಟಿಗಳಲ್ಲಿ ಗಣೇಶನ ಹಬ್ಬ ಮಾಡುತ್ತಿರಲಿಲ್ಲ. ಆದರೆ ಇತ್ತೀಚೆಗೆ ಕೃಷ್ಣನ

ಜಯಂತಿ ಒಳಗೊಂಡಂತೆ ಶಿಷ್ಟರು ಆಚರಿಸುವ ಎಲ್ಲಾ ಹಬ್ಬ ಮತ್ತು ದೇವರುಗಳನ್ನು ಆರಾಧನೆ ಮಾಡುತ್ತಿದ್ದಾರೆ.

ಕೆ.ಎಂ.ಮೇತ್ರಿಯವರ ಮಾತನ್ನು ಗಮನಿಸುವುದಾರೆ. 'ಅಪ್ಪಟ ಬುಡಕಟ್ಟಿನ ಜೀವನ ಸ್ವರೂಪ ಹೊಂದಿದ್ದ ಈ ಸಮುದಾಯ ಭಾರತದ ಬುಡಕಟ್ಟು ಪಟ್ಟಿಗೆ ಸೇರದೇ ಇರುವುದು ವಿಪರ್ಯಾಸ *(ಮೇತ್ರಿ ಕೆ.ಎಂ. 'ಕೃಷ್ಣಗೊಲ್ಲರ ಕಥನ ಕಾವ್ಯಗಳು', ಪುಟ-೨, ೨೦೦೦.)* ಎಲ್ಲ ಸಮುದಾಯಗಳು ಬದಲಾದರೂ ಕಾಡುಗೊಲ್ಲರು ಮಾತ್ರ ಬದಲಾಗಿಲ್ಲ. ಒಂದು ವೇಳೆ ಬದಲಾದರು ಅವರ ಸಂಸ್ಕೃತಿ ಆಚಾರ ವಿಚಾರಗಳು ಅವರು ದೇವರ ಆರಾಧನೆ ಮಾಡುವ ರೀತಿ ಇವು ಯಾವುವು ಬದಲಾಗಿಲ್ಲ. ಮ್ಯಾಸ ಬೇಡರು ಬದಲಾದರೂ ಅವರನ್ನು ಬುಡಕಟ್ಟು ಎಂದು ಸರ್ಕಾರ ಗುರುತಿಸಿರುವುದು ಕಂಡುಬರುತ್ತದೆ. ಹಾಗೆ ನೋಡಿದರೆ ಮ್ಯಾಸಬೇಡರು ಕಾಡುಗೊಲ್ಲರು ಇಬ್ಬರೂ ಪಶುಪಾಲಕರೆ. ಇಬ್ಬರೂ ಕಾಡಿನಲ್ಲಿ ವಾಸಿಸುವವರೆ ಆದರೆ ಸರ್ಕಾರ ಏಕೆ ತಾರತಮ್ಯ ಮಾಡಿತೋ ಗೊತ್ತಿಲ್ಲ.

ಕಾಡುಗೊಲ್ಲರ ಎಲ್ಲ ಸಾಂಸ್ಕೃತಿಕ ನಾಯಕರು ಬುಡಕಟ್ಟು ಧರ್ಮವನ್ನು ಅನುಸರಿಸಿದವರು ಹಾಗೆಯೇ ಬೆಳೆಸಿದವರು. ಇವರು ಬೇರೆಯವರಿಂದ ಕಲಿತದ್ದು ಕಡಿಮೆ, ಕಲಿಸಿರುವುದು ಜಾಸ್ತಿ ಎಂದು ಹೇಳಬಹುದು. ಕಾಡುಗೊಲ್ಲರ ನಾಯಕರಿಗೆ ರಾಮಾಯಣ, ಮಹಾಭಾರತ ಕಾವ್ಯಗಳ ಜ್ಞಾನಕ್ಕಿಂತ ತಾವು ಪ್ರತಿನಿತ್ಯ ಅನುಭವಿಸಿದ ಅನುಭವ ಉತ್ತಮ ಮೌಲ್ಯಗಳು ರೂಪಿತಗೊಳ್ಳಲು ಸಾಧ್ಯವಾಯಿತು. ಶಿಷ್ಟರಿಗೆ ನಮ್ಮ ದೇಶ ಒಪ್ಪಿಕೊಂಡಿರುವ ಮಹಾಕಾವ್ಯಗಳು ಆದರ್ಶವಾದರೆ ಬುಡಕಟ್ಟುಗಳಾದ ಕಾಡುಗೊಲ್ಲರಿಗೆ ಅವರ ಸಾಂಸ್ಕೃತಿಕ ನಾಯಕರು ಬದುಕಿರುವ ರೀತಿ ನೀತಿಗಳು ಆದರ್ಶವಾಗಿವೆ. ಸಾಮಾನ್ಯವಾಗಿ ಜುಂಜಪ್ಪನ ಕಾವ್ಯ ಎಲ್ಲರಿಗೂ ಗೊತ್ತಿರುವಂತೆ ಕುಮಾರವ್ಯಾಸನ ಕಾವ್ಯದ ಕೆಲುವು ಭಾಗಗಳನ್ನು ಬಿಟ್ಟರೆ ಮಹಾಕಾವ್ಯಗಳ ಪರಿಚಯ ಅಷ್ಟಕಷ್ಟೆ.

ವೀರ ಎಂದರೆ ಶೌರ್ಯದಿಂದ ಕೂಡಿದ ಪೌರುಷದ ಶೂರನಾದ ಪರಾಕ್ರಮಿಯಾದ ಬಲಿಷ್ಟನಾದ ಶಕ್ತಿಯುತನಾದ ಶ್ರೇಷ್ಠನಾದ ಉತ್ತಮವಾದ ಇತರ ಲಕ್ಷಣಗಳನ್ನು ಹೆಸರಿಸಿದ್ದಾರೆ. *(ವಿರೂಪಾಕ್ಷಿ ಪೂಜಾರಹಳ್ಳಿ.. 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು', ಪುಟ-೩೨. ೨೦೦೨)*

"ಪುರಾಣ ಒಂದು ವಿವರಣಾತ್ಮಕ ಕಥೆ ಅದು ಕಂಡು ಜಗತ್ತಿನ ವಿವಿಧ ವಸ್ತು ವಿಷಯ ಮತ್ತು ಆಶಯಗಳ ಹುಟ್ಟಿಗೆ ಕೊಟ್ಟ ಕಾರಣ ಬಿಡಿಸಿದ ಚಿತ್ರ ರೂಪಿಸಿದ ವ್ಯಕ್ತಿತ್ವ ಸಂಕೇತಿಸಿದ ನಿರೂಪ ರೂಪಿಸಿದ ರೂಪಕ ಇತ್ಯಾದಿ ಆದರೆ ಪುರಾಣ ನಿರೂಪಣೆಗಷ್ಟೆ ಇರುವುದಿಲ್ಲ. ಇದು ಉತ್ಪತ್ತಿಯ ಪುನರುತ್ಪತ್ತಿಯ ಅಸಮಾನ್ಯ ಪ್ರಕ್ರಿಯೆ ಪುರಾಣಗಳ ಹುಟ್ಟು ಬೆಳವಣಿಗೆ ಮತ್ತು ಅವುಗಳ ಅವಸ್ಥಾಂತರಗಳನ್ನು ನೋಡಿದರೆ. ಪುರಾಣ ಒಂದು ಭಯಂಕರ ಸಾಮಾಜಿಕ ಪ್ರಕ್ರಿಯೆ ಎನಿಸಿದೆ". *(ತೀ ನಂ ಶಂಕರನಾರಾಯಣ.. ಮತ್ತು ಎಂ ಎನ್ ವೆಂಕಟೇಶ್ (ಸಂ) 'ಜಾನಪದ ಸಾಹಿತ್ಯ ಪ್ರಕಾರಗಳು' ಪುಟ ೧೧೯ ೨೦೦೪)*

ಇದೇ ರೀತಿಯಾಗಿ ವೀರ ಯರ‍್ರಣ್ಣ, ವೀರತಿಮ್ಮಣ್ಣ, ವೀರಸಾತಣ್ಣ, ವೀರಮಿಂಚಣ್ಣ, ವೀರಕೆಂಪಣ್ಣ, ವೀರನಾಗಣ್ಣ, ವೀರಬಡಪ್ಪ, ವೀರಕರಿಯಣ್ಣ, ವೀರಶಿರಿಯಣ್ಣ, ವೀರಚಿಕ್ಕಣ್ಣ ಮುಂತಾದ ಅನೇಕ ಸಾಂಸ್ಕೃತಿಕ ನಾಯಕರಿದ್ದು ಅವರಿಗೂ ಕೂಡ ಅವರದೇ ಆದ ಸೃಷ್ಟಿ ಪುರಾಣಗಳಿವೆ.

ವೀರಕಾವ್ಯಗಳು ಆಯಾ ಸಮುದಾಯದ ವೀರಪುರುಷರಿಗೆ ಸಂಬಂಧಿಸಿದವುಗಳಾಗಿದ್ದು ಸಮುದಾಯದಲ್ಲಿನ ಅನೇಕ ತ್ಯಾಗ ಬಲಿದಾನವನ್ನು ಮಾಡಿ ಸಮುದಾಯದ ಪ್ರೀತಿಗೆ ಪಾತ್ರರಾಗಿ ದೈವತ್ವ ಪಡೆದಿರುತ್ತಾರೆ.

"ಇಲ್ಲಿ ಜುಂಜಪ್ಪನ ಹುಟ್ಟು ಕೂಡ ಮಾನವ ಅಸಹಜ ಕ್ರಿಯೆಯಿಂದಲೆ ನಡೆದಿರುವಂತಹದ್ದು ಬಹುಶಃ ಯೋನಿ ಪೂಜಕರಾಗಿದ್ದ ಈ ಕಾಡುಗೊಲ್ಲರು ವಲಸೆಗಾರ ವರ್ಗ ಹೆಣ್ಣಿನ ಸ್ಥಾನವನ್ನು ಪವಿತ್ರವೆಂದೋ ಪೂಜ್ಯವೆಂದೋ ಅಲ್ಲಿ ಹುಟ್ಟಿ ಬರುವುದು ಮೈಲಿಗೆ ಅಪವಿತ್ರವೆಂದು ಭಾವಿಸಿದ್ದರ ಹಿನ್ನೆಲೆಯಾಗಿಯೆ ಇಂತಹ ವೀರರನ್ನು ಸಮುದಾಯ ಈ ಬಗೆಯಲ್ಲಿ ಹುಟ್ಟಿಸಿರಬೇಕು" (ನಿಂಗಪ್ಪ ಮುದೇನೂರು 'ಕನ್ನಡ ಜಾನಪದ ಮಹಾಕಾವ್ಯಗಳು ಸಾಂಸ್ಕೃತಿಕ ವೀರರು' ಪುಟ ೧೦೨, ೨೦೦೪)

ಹೆಣ್ಣನ್ನು ಇಂದಿಗೂ ಶೋಷಣೆ ಮಾಡುತ್ತಿರುವುದು ಅವಳ ಯೋನಿಯಿಂದಲೆ. ಜೊತೆಗೆ ಕಾಡುಗೊಲ್ಲರು ಋತುಮತಿಯಾದ ಸ್ತ್ರೀಯರನ್ನು ಮತ್ತು ಮಾಸಿಕ ಋತುಸ್ರಾವವಾದ ಸ್ತ್ರೀಯನ್ನು ಹಾಗೂ ಬಾಣಂತಿ ಸ್ತ್ರೀಯನ್ನು ದಲಿತರಿಗಿಂತ ಕಟ್ಟಕಡೆಯಾಗಿ ನೋಡುತ್ತಾರೆ. ಅವರನ್ನು ಮನೆ ಒಳಗೆ ಇರಲಿ ಹಟ್ಟಿಯ ಒಳಗೆ ಸೇರಿಸುವುದಿಲ್ಲ ಅಂಥಹದರಲ್ಲಿ ನಿಂಗಪ್ಪ ಮುದೇನೂರು ಅವರ ಮಾತನ್ನು ಹೇಗೆ ಸಮರ್ಥಿಸಲಿ

ಕಾಡುಗೊಲ್ಲರಲ್ಲಿಯ ಎಲ್ಲ ಸಾಂಸ್ಕೃತಿಕ ನಾಯಕರು ಅಸಾಮಾನ್ಯ ವೀರರು ಮತ್ತು ಅಷ್ಟೆ ಕಪಟಕ್ಕೆ ಸಂಚಿಗೆ ಒಳಗಾಗಿ ಪ್ರಾಣ ಕಳೆದುಕೊಂಡಿದ್ದಾರೆ. ವೀರ ಮಿಂಚಣ್ಣನನ್ನು ಕೊಲ್ಲಲು ಮ್ಯಾಸಬೇಡರು ಮಾದಿಗರನ್ನು ಬಳಸಿಕೊಂಡಿದ್ದಾರೆ. ಅವರಿಂದ ಚಪ್ಪಲಿ ಮಾಡಿಸಿ ಅವನು ಚಪ್ಪಲಿ ಹಾಕಿಕೊಳ್ಳುವ ಸಮಯದಲ್ಲಿ ಅವನ ತಲೆ ಕಡಿಯುತ್ತಾರೆ. ಇದು ಒಂದು ಕಾರಣವಿರಬಹುದು. ಅಥವಾ ಕಾಡುಗೊಲ್ಲರು ಮಾದಿಗರನ್ನು ಹಟ್ಟಿಯ ಒಳಗೆ ಸೇರಿಸದಿರುವುದು ಇನ್ನೊಂದು ಕಾರಣವಿರಬಹುದು.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಹನ್ನಾಳು ಗೊಲ್ಲರಹಟ್ಟಿಯಲ್ಲಿ ವೀರ ಜಂಪಣ್ಣನಿಗೆ ಸೂಳೆಯಾಗಿ ಮ್ಯಾಸಬೇಡರ ಸ್ತ್ರೀ ಇರುವುದು ಗಮನಕ್ಕೆ ಬಂದಿದೆ. ಆಕೆ ಜೊತೆಯಲ್ಲಿ ಇರದಿದ್ದರೆ ದೇವರು ನದಿ ಸ್ನಾನಕ್ಕೆ ಹೋಗುವುದಿಲ್ಲ ಎಂಬ ಕಾರಣಕ್ಕಾಗಿ ಅವರು ದೇವರ ಹೆಸರಿನಲ್ಲಿ ವಂಶ ಪಾರಂಪರ್ಯವಾಗಿ ಸೂಳೆಯಾಗಿ ಉಳಿದಿರುವುದು ಕಂಡು ಬರುತ್ತದೆ.

ಮ್ಯಾಸಬೇಡರ ಪ್ರತಿಜ್ಞೆ ಎಂದರೆ ಅವರ ಪ್ರೀತಿಯನ್ನು ಒಪ್ಪಿಕೊಂಡವರನ್ನು ಆರಾಧನೆ ಮಾಡುತ್ತಾರೆ. ಮತ್ತು ತನ್ನ ಕುಲದಿಂದ ಗೊಲ್ಲ ಕುಲಕ್ಕೆ ಮತಾಂತರ ಹೊಂದುತ್ತಾರೆ. ಇದಕ್ಕೆ ಉದಾಹರಣೆ ಎಂದರೆ ವೀರಮಿಂಚಣ್ಣನು ಗುಡ್ಡದ ಬೋರಿಯ ಮಧ್ಯೆ ಸಾಮರಸ್ಯ ಇರುವುದರಿಂದ ಗುಡ್ಡದ ಬೋರಿಗೆ

ವೀರಮಿಂಚಣ್ಣ ಸಾಯುವುದು ಇಷ್ಟವಿರಲಿಲ್ಲ. ಹಾಗಾಗಿ ಅವಳು ವೀರಮಿಂಚಣ್ಣ ಸತ್ತಾಗ ಗೊಲ್ಲತಿಯಾಗಿ ಮತಾಂತರ ಹೊಂದುತ್ತಾಳೆ. ಅಷ್ಟೆ ಅಲ್ಲ ಆಕೆಯ ಕೈಯಲ್ಲ ಅವನಿಗೆ ಮೋಕ್ಷ ಕೂಡ ಸಿಗುತ್ತದೆ. ಇನ್ನು ಕೆಲವು ಮ್ಯಾಸಬೇಡರ ಯುವತಿಯರು ವೀರರ ತಲೆಯನ್ನು ಬಚ್ಚಲ ಮನೆಯಲ್ಲಿಟ್ಟು ಕೊಂಡು ಸ್ನಾನ ಮಾಡಬೇಕು ಎಂಬ ಪ್ರತಿಜ್ಞೆಯನ್ನು ಮಾಡಿರುವುದು ಕಂಡುಬರುತ್ತದೆ. ಎತ್ತಪ್ಪ, ವೀರಯರ್ರಣ್ಣ, ವೀರಸಾತಣ್ಣ, ವೀರಮುದಿಯಣ್ಣ, ಮುಂತಾದವರು. ಆದರೆ ಅವರ ತಲೆಗಳು ಮ್ಯಾಸಬೇಡರಿಗೆ ದೊರೆಯದಂತೆ ಮಾಡಿರುವ ಪವಾಡಗಳುನ್ನು ಕೂಡ ಹಿರಿಯರು ಹೇಳುತ್ತಾರೆ.

ಜುಂಜಪ್ಪನೊಂದಿಗೆ ಅವರ ಕುಲ ದೈವಗಳಾದ ಎತ್ತಪ್ಪ, ಚಿತ್ರದೇವರು, ಕಾಟಮದೇವರು, ಪಾತೇದೇವರು, ಕೇತೆದೇವರು, ಗೌರಸಮುದ್ರದ ಮಾರಮ್ಮ, ಬೇವಿನಹಳ್ಳಿ ಕರಿಯಮ್ಮ, ಮರಲಳ್ಳಿಭೂತಪ್ಪಗಳಿಗೆ ವಿಶೇಷ ಜಾತ್ರೆಗಳನ್ನು ಏರ್ಪಡಿಸಿ ಎಲ್ಲರು ಆರಾಧಿಸುತ್ತಾರೆ.

“ಹಟ್ಟಿಯ ಮಧ್ಯಭಾಗದಲ್ಲಿ ದೇವಸ್ಥಾನ ಇರುತ್ತದೆ. ಈ ದೇವಸ್ಥಾನವನ್ನು ಬಿದಿರಿನಿಂದ ಮಾಡಿ ಅದಕ್ಕೆ ಬಾಳೆಯ ನಾರು ಸೋಗೆಗರಿ, ಹಂಚಿಹುಲ್ಲು, ಬಾದೆಹುಲ್ಲು, ಆಪು-ಇವುಗಳಲ್ಲಿ ಯಾವುದಾದರೊಂದು ಹೊದಿಸುತ್ತಾರೆ. ಗೋಲಾಕಾರವಾಗಿರುವ ಈ ಬಗೆಯ ದೇವಸ್ಥಾನಗಳನ್ನು ಕಾಡುಗೊಲ್ಲರು ಗುಬ್ಬ ಎಂದು ಕರೆಯುತ್ತಾರೆ.” *(ತೀ ನಂ ಶಂಕರನಾರಾಯಣ 'ಕಾಡುಗೊಲ್ಲರು' ಪುಟ-೧೦)*

“ಯರ್ರಲಿಂಗ, ಚಿತ್ರಲಿಂಗ, ಪಾತೆಲಿಂಗ, ಜುಂಜೈಲಿಂಗ, ಕೇತೆಲಿಂಗ, ಕಾಟಮಲಿಂಗ, ವೀರರಂತೂ ಗೊಲ್ಲರ ಕುಲದ ಆರಾಧ್ಯ ದೇವತೆಗಳು. ಊರೊಟ್ಟಿಗಿನ ದೇವತೆಗಳಾದ ಆಂಜನೇಯ, ಮಾರಮ್ಮ ಇವರನ್ನು ಪೂಜಿಸುವುದಕ್ಕಿಂತ ಹೆಚ್ಚಾಗಿ ಗೊಲ್ಲರು ತಮ್ಮ ಕುಲದೇವತೆಗಳನ್ನೇ ಹೆಚ್ಚಾಗಿ ನಂಬಿಕೋಡಿದ್ದಾರೆ. ಈ ದೇವರುಗಳನ್ನು ಕುರಿತಾದ ಅಪಾರ ಸಾಹಿತ್ಯ ಆ ಸಮುದಾಯದವರ ಬಾಯಲ್ಲಿ ಕೆಡದಂತೆ ಉಳಿದುಕೋಡು ಬಂದಿದೆ. ಗೊಲ್ಲರು ಸಾಮಾನ್ಯವಾಗಿ ಹೆಣ್ಣು ದೇವತೆಗಳನ್ನು ಹೆಚ್ಚಾಗಿ ಪೂಜಿಸುವ ಪರಿಪಾಟವನ್ನು ಇಟ್ಟುಕೊಂಡಿಲ್ಲ ಆದರೆ ತಮ್ಮ ಕುಲದಲ್ಲಿಯೇ ಕೆಂಡಕೊಂಡವಾದ ಸತಿಯರನ್ನು ಪೂಜಿಸುತ್ತಾರೆ”. *(ಕೃಷ್ಣಮೂರ್ತಿ ಹನೂರು 'ಕತ್ತಲದಾರಿ ದೂರ' ಪುಟ-೨೩, ೧೯೮೧)*

ಕಾಡುಗೊಲ್ಲರ ಸಮುದಾಯದಲ್ಲಿ ಕಂಡು ಬರುವಷ್ಟು ಸಾಂಸ್ಕೃತಿಕ ಮತ್ತು ನಾಯಕರ ಕಥನಗಳು ಇತರೇ ಯಾವ ಸಮುದಾಯದಲ್ಲಯೂ ಕಂಡುಬರುವುದಿಲ್ಲ. ಪ್ರತಿಯೊಬ್ಬ ಸಾಂಸ್ಕೃತಿಕ ನಾಯಕನಿಗೂ ಪ್ರತ್ಯೇಕವಾದ ಕಾವ್ಯ ಸೃಷ್ಟಿಯಾಗಿರುವುದು ಅವರ ಬದುಕಿನ ಸಂಮೃದ್ಧಿಯನ್ನು ಹೇಳುತ್ತದೆ. ಕಾಡುಗೊಲ್ಲರ ಸಾಹಿತ್ಯವನ್ನು ಕೃಷ್ಣಮೂರ್ತಿ ಹನೂರು, ಮೀರಾಸಾಬಿಹಳ್ಳಿ ಶಿವಣ್ಣ, ಕೆ.ಎಂ. ಮೇತ್ರಿ, ಗುರುಲಿಂಗಯ್ಯ, ತೀ.ನಂ.ಶಂಕರನಾರಾಯಣ, ಜೀ.ಶಂ.ಪರಮಶಿವಯ್ಯ, ಡಾ. ಚಲುವರಾಜು, ಎಣ್ಣೆಕಟ್ಟೆ ಚಿಕ್ಕಣ್ಣ ಮುಂತಾದವರು ಸಂಗ್ರಹಿಸಿದ ಎತ್ತಪ್ಪನ ಕಾವ್ಯ, ಜುಂಜಪ್ಪನ ಕಾವ್ಯ, ಕೇತೆದೇವರ ಕಾವ್ಯ, ಕೃಷ್ಣಗೊಲ್ಲರ ಕಥನ ಕಾವ್ಯಗಳು, ಕಾಟಮಲಿಂಗನ ಕಾವ್ಯ, ವೀರಯರ್ರಣ್ಣನಕಾವ್ಯ, ವೀರಶಿರಿಯಣ್ಣನ ಕಾವ್ಯ, ವೀರಮಿಂಚಣ್ಣನ ಕಾವ್ಯ, ವೀರಕೆಂಪಣ್ಣನ ಕಾವ್ಯ, ವೀರಸಾತಣ್ಣನ ಕಾವ್ಯ, ವೀರತಿಮ್ಮಣ್ಣನ ಕಾವ್ಯ,

ವೀರಸಿಂಪಣ್ಣನ ಕಾವ್ಯ, ಹೀಗೆ ಒಂದೊಂದು ಬೆಡಗಿಗೂ ಅನೇಕ ಜನ ವೀರಗಾರರು ಬರುತ್ತಾರೆ. ಅವರುಗಳಲ್ಲಿ ಕೆಲವು ಸಂಗ್ರಹವಾಗಿವೆ ಇನ್ನೂ ಸಂಗ್ರಹವಾಗಬೇಕಿದೆ. ಇವಲ್ಲದೆ ಸೋಬಾನೆ ಪದಗಳು, ಕೋಲಾಟದ ಪದಗಳು ಲಾವಣಿಗಳು ತ್ರಿಪದಿಗಳು ಸಾಕಷ್ಟು ದೊರೆಯುತ್ತವೆ.

ಶೈವ; ವೈಷ್ಣವ ಪರಂಪರೆ ಕಾಡುಗೊಲ್ಲರಲ್ಲಿ ಕಂಡು ಬರುತ್ತವೆ. ಶೈವದ ಪ್ರಭಾವವೇ ಹೆಚ್ಚು. ಇವರ ಅಧಿದೈವಗಳಲ್ಲಿ ಕ್ಯಾತುರಲಿಂಗ, ಪಾತೇಲಿಂಗ, ಕಾಟಮಲಿಂಗ, ಚಿತ್ರಲಿಂಗ, ಈರಣ್ಣ, ನಿಂಗಣ್ಣ, ಬೊಮ್ಮೈಲಿಂಗ ಮುಂತಾದ ಶೈವ ಮೂಲದ ದೈವಗಳನ್ನು ಕಾಣಬಹುದು. ತಿರುಪತಿ ತಿಮ್ಮಪ್ಪ, ರಂಗಪ್ಪ, ನರಸಿಂಹಸ್ವಾಮಿ, ಕೃಷ್ಣ ಮೊದಲಾದ ವೈಷ್ಣವ ಮೂಲದ ದೈವಗಳಿಗೂ ಇವರು ನಡೆದುಕೊಳ್ಳುತ್ತಾರೆ.

ವೀರನಾಗಪ್ಪನು ವೀರತ್ವಕ್ಕೆ ಹೆಸರು ವಾಸಿಯಾಗಿರುವುದರಿಂದ ವೀರನೆಂದೇ ಗುರುತಿಸಲಾಗುತ್ತಿದೆ. ಇತಿಹಾಸದಲ್ಲಿ ದಾಖಲಾದ ವ್ಯಕ್ತಿಗಳನ್ನು ಜನಪದರು ಗುಣಗಾನ ಮಾಡುತ್ತಾರೆ. ಜೊತೆಗೆ ದೈವತ್ವಕ್ಕೇರಿಸಿ ಅವರವರ ವ್ಯಕ್ತಿಯನ್ನು ಕುಲದೇವರೆಂದು ಆರಾಧಿಸುತ್ತಾರೆ. ಇಂತ ದೇವರು ಎಲ್ಲ ಸಮುದಾಯದಲ್ಲಿಯೂ ಕಂಡು ಬರುತ್ತಾರೆ. ಆಯಾ ಪ್ರದೇಶದ ಜನರು ಅಲ್ಲಿನ ಆಚರಣೆ, ಸಂಪ್ರದಾಯಗಳನ್ನು ಎತ್ತಿ ಹಿಡಿಯುತ್ತಾ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನತೆಯನ್ನು ಕಾಣತೊಡಗುತ್ತಾರೆ. ಇಂತಹ ಜನಪದ ಸೊಗಡನ್ನು ಭವಿಷ್ಯತ್ತಿನ ಪೀಳಿಗೆಗೆ ತಮ್ಮ ಮೂಲಕ ಹೊತ್ತೊಯ್ಯುತಿರುವುದು ಸೋಜಿಗದ ಮಾತೆ ಸರಿ"*(ಜಂಗಮರಳ್ಳಿ ಮುದ್ದುವೀರಪ್ಪ (ಸಂ) 'ವೀರ ನಾಗಪ್ಪನ ಪದ' ಪುಟ-೯, ೨೦೦೨)*

೨.೧ ಕಾಡುಗೊಲ್ಲರ ಸೃಷ್ಟಿಗೆ ಗಂಡಬೇರುಂಡ ಪಕ್ಷಿಗಳ ಪ್ರೇರಣೆ.

ಕುರುಚಲು ಕಾಡಿನಲ್ಲಿ ಕಾಡುಗೊಲ್ಲರ ಸೃಷ್ಟಿಯಾಗಿದೆ ಎಂದು ಅವರ ತಿಳುವಳಿಕೆದಾರರು ಹೇಳುವ ಪ್ರಕಾರ ಆ ಕಾಡಿನಲ್ಲಿ ದಟ್ಟವಾಗಿ ಬೆಳೆದಿರುವ ಬಿದಿರು, ಗಾಳಿಯ ರಭಸಕ್ಕೆ ಒಂದಕ್ಕೊಂದು ತಿಕ್ಕಾಡಿ ಬೆಂಕಿ ಹತ್ತಿಕೊಳ್ಳುತ್ತದೆ. ಈ ಬೆಂಕಿಯ ಜ್ವಾಲೆ ಅದೇ ಕಾಡಿನಲ್ಲಿ ನೆಲೆಸಿರುವ ಗಂಡಬೇರುಂಡ ಪಕ್ಷಿಗಳ ಮರಿಗಳನ್ನು ನುಂಗುವ ಹಂತದಲ್ಲಿರುತ್ತದೆ. ಇದನ್ನು ಕಂಡ ಗಂಡಬೇರುಂಡ ದಂಪತಿಗಳು ತಮ್ಮ ಮರಿಗಳು ಸಾಯುತ್ತವೆ ಎಂದು ಗೋಳಾಡುತ್ತಿರುತ್ತವೆ. ಈ ಆಕ್ರಂದನ ಲೋಕ ಸಂಚಾರ ಮಾಡುತ್ತಿರುವ ಶಿವ ಪಾರ್ವತಿಯರಿಗೆ ಕೇಳಿಸುತ್ತದೆ. (ವಾಲ್ಮೀಕಿಗೆ ರಾಮಾಯಣ ಬರೆಯಲು ಕ್ರೌಂಚ ಪಕ್ಷಿಗಳು ಪ್ರೇರಣೆಯಾದಂತೆ) ಈ ಪಕ್ಷಿಗಳ ಆಕ್ರಂದನವನ್ನು ಕೇಳಿಸಿಕೊಂಡ ಪಾರ್ವತಿಯು ಆಕಾಶ ಮಾರ್ಗದಲ್ಲಿ ಹೋಗುತ್ತಿದ್ದ ರಥವನ್ನು ನಿಲ್ಲಿಸುವಂತೆ ಹೇಳುತ್ತಾಳೆ. ಏಕೆಂದರೆ ಇಲ್ಲಿ ಪಾರ್ವತಿಯು ಒಂದು ಹೆಣ್ಣು. ಹಾಗಾಗಿ ಒಂದು ಹೆಣ್ಣಿನ ನೋವನ್ನು ಇನ್ನೊಂದು ಹೆಣ್ಣು ಮಾತ್ರ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಹಾಗಾಗಿ ಪಾರ್ವತಿಯು ಶಿವನಿಗೆ ರಥ ಇಳಿಸುವಂತೆ ಹೇಳುತ್ತಾಳೆ. ಆದರೆ ಶಿವನು ಪಾರ್ವತಿಯ ಮಾತನ್ನು ನಿರಾಕರಿಸುತ್ತಾನೆ. "ನನ್ನಂಥ ಹೆಣ್ಣು ಜೀವ ಯಾರಾದರೂ ಆಗಿರಲಿ ಈ ಆಕ್ರಂದವನ್ನು ಕೇಳಿ ಮುಂದಕ್ಕೆ ಹೋಗುವುದಿಲ್ಲ". ಆದರೆ ನೀವು ಗಂಡಸರು ನಿಮಗೆಲ್ಲಿ ಅರ್ಥವಾಗಬೇಕು. ಈ ತಾಯ್ತನದ ನೋವು, ನೀನು ನಿಲ್ಲಿಸಿದರೆ ಸರಿ ಇಲ್ಲದಿದ್ದರೆ ನಾನು ಕೂಡ ಆ ಬೆಂಕಿಯಲ್ಲಿ ಬಿದ್ದು

ಸಾಯುವುದಾಗಿ ಹೇಳುತ್ತಾಳೆ. ಗಂಡಬೇರುಂಡ ಪಕ್ಷಿಗಳನ್ನು ರಕ್ಷಿಸುವ ಸಲುವಾಗಿ ಶಿವ ಪಾರ್ವತಿಯ ನಡುವೆ ಸಾಕಷ್ಟು ವಾಗ್ವಾದಗಳು ನಡೆಯುತ್ತವೆ. ಈ ಪ್ರಪಂಚದಲ್ಲಿ ಒಂದು ದಿನಕ್ಕೆ ಸಾವಿರಾರು ಪ್ರಾಣಿ ಪಕ್ಷಿಗಳು ಹುಟ್ಟುತ್ತವೆ ಮತ್ತು ಸಾಯುತ್ತವೆ. ಇದು ಪ್ರಕೃತಿಯ ನಿಯಮ. ಹುಟ್ಟಿದವರಿಗೆ ಸಾವು ಅನಿವಾರ್ಯ. ಹಾಗಾಗಿ ಎಲ್ಲರನ್ನು ಬದುಕಿಸುತ್ತಾ ಹೋದರೆ, ಮುಂದೊಂದು ದಿನ ಈ ಭೂಮಿಯ ಮೇಲೆ ಪ್ರಾಣಿ ಪಕ್ಷಿಗಳು ವಾಸಿಸಲು ಜಾಗವಿರುವುದಿಲ್ಲ ಎಂಬುದು ಶಿವನವಾದ. ಇದರಿಂದಾಗಿ ನಾನು ರಥ ಇಳಿಸುವುದಿಲ್ಲ ಎಂದು ಹೇಳುತ್ತಾನೆ. ಅದಕ್ಕೆ ಪಾರ್ವತಿ ಸಕಲ ಜೀವರಾಶಿಗಳನ್ನು ಕಾಪಾಡುವ ಹೊಣೆಯನ್ನು ಹೊತ್ತಿರುವ ನೀವೇ ಈ ರೀತಿ ತಿರಸ್ಕಾರದಿಂದ ಮಾತನಾಡಿದರೆ ಅಸಹಾಯಕರನ್ನು ಕಾಪಾಡುವವರು ಯಾರು ಎಂದು ಹಿತವಾಗಿ ಬುದ್ದಿ ಹೇಳುವುದರ ಮೂಲಕ ಜೀವಪರವಾದ ಧೋರಣೆಯನ್ನು ಹೊಂದಿರುವುದನ್ನು ಕಾಣಬಹುದು. ಒಂದು ಜೀವಿಯ ಹಿಂಸೆಯಿಂದಲೆ ಹೊಸದೊಂದು ಜೀವಿ ಸೃಷ್ಟಿಯಾಗುತ್ತದೆ. ಶಿವನು ಬೆಸ್ತರಳ್ಳಿ ಕಾವಲಿನಲ್ಲಿ ರಥ ಇಳಿಸಿ ಕಾಡಿನ ಬೆಂಕಿಯನ್ನು ಆರಿಸುತ್ತಿರುವ ಸಂದರ್ಭದಲ್ಲಿ ಅವನ ಮೈಯಿಂದ ಬೆವರು ಬರುತ್ತದೆ. (ಇಲ್ಲಿ ಬೆವರು ಎನ್ನುವುದು ಲೈಂಗಿಕತೆಯ ಸಂಕೇತ ಬೆವರು ಎನ್ನುವ ಪ್ರತಿಮೆಯ ಮೂಲಕ ಕಾವ್ಯ ಕಟ್ಟಿರುವುದನ್ನು ಗಮನಿಸಿದರೆ ನಮ್ಮ ಜನಪದ ಕವಿಗಳು ಎಷ್ಟು ಪ್ರೌಢವಾದ ಜ್ಞಾನವನ್ನು ಹೊಂದಿದ್ದರು ಎಂಬುದು ತಿಳಿದು ಬರುತ್ತದೆ.) ಆ ಬೆವರನ್ನು ಹೊರಸುವಂತೆ ಪಾರ್ವತಿಗೆ ಹೇಳುತ್ತಾನೆ.

ಆದರೂ ಮೂರು ಕೆಂಡಗಳು ಎಷ್ಟು ಪ್ರಯತ್ನ ಪಟ್ಟರೂ ಅವುಗಳನ್ನು ನಂದಿಸಲು ಸಾಧ್ಯವಾಗುವುದಿಲ್ಲ. ಶಿವನಿಗೆ ಭಯ ಶುರುವಾಗುತ್ತದೆ. ಏಕೆಂದರೆ ಇವರು ಕಾರಣಿ ಪುರಷರು. ಇವರ ಸೃಷ್ಟಿಯಾದರೆ ನಮಗೆ ಅಪಾಯ ಎಂದು ಪಾರ್ವತಿಗೆ ಹೇಳುತ್ತಾನೆ. ಪಾರ್ವತಿಯು 'ಬಂದದ್ದೆಲ್ಲ ಬರಲಿ ಭಗವಂತನ ದಯವಿರಲಿ' ಎಂದು ಆ ಕೆಂಡಗಳನ್ನು ಕೆಡಿಸಲು ಹೇಳುತ್ತಾಳೆ. ಇವಳು ಎಷ್ಟು ಹೇಳಿದರೂ ಕೇಳುವುದಿಲ್ಲ' ಎಂದು ಮೊದಲನೆಯ ಕೆಂಡಕ್ಕೆ ನೀರು ಹಾಕಿದಾಗ ಕಾಟಯ್ಯನ ಸೃಷ್ಟಿಯಾಗುತ್ತದೆ. ಸೃಷ್ಟಿ ಪುರಾಣದ ನಾಯಕರೆಲ್ಲ ಶಿವನನ್ನು ಮೀರಿಸುವಂತಹ ಶಕ್ತಿ ಪಡೆದವರಾಗಿದ್ದಾರೆ. ಹಾಗೆಯೇ ಕಾಡುಗೊಲ್ಲರ ನಾಯಕರು ಕೂಡ ನನಗೇ ಭಯ ಹುಟ್ಟಿಸುವವರಾಗುತ್ತಾರೆ. ಹಾಗಾಗಿ ಅವರ ಸಹವಾಸ ನಮಗೆ ಬೇಡ ಎಂದು ಹೇಳುವನು. ಶಿವನ ಮಾತನ್ನು ಕೇಳದೇ ಉಳಿದಿರುವ ಮೂರು ಕೆಂಡಗಳಿಗೂ ನೀರು ಹಾಕಿಸುತ್ತಾಳೆ, ಆ ಕೆಂಡದಲ್ಲಿ ಕಾಟಯ್ಯ, ಚಿತ್ತಯ್ಯ, ಓಬಳಪತಿ ಸೃಷ್ಟಿಯಾಗುತ್ತಾರೆ

೨.೨. ಕಾಟಯ್ಯನ ಸೃಷ್ಟಿ ಪುರಾಣ

'ಮೇಘದ ಮಳೆಯ ಬಲ್ಲ
ಭೂಮಿಯ ಜಲವೇ ಬಲ್ಲ
ಹಿಂದೆ ಹೋಗದು ಬಲ್ಲ
ಮುಂದೆ ಬರುವುದು ಬಲ್ಲ
ಕಾರ್ಣಿಕದ ಕಾಟಯ್ಯ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಮೊದಲ ಕೆಂಡದಲ್ಲಿ ಕಾಟಯ್ಯನ ಸೃಷ್ಟಿಯಾಗುತ್ತದೆ. ಈತನು ಅಸಾಧಾರಣವಾದ ತೇಜಸ್ಸನ್ನು ಹೊಂದಿದವನು. ಅವನಲ್ಲಿ ಅಸಾಧಾರಣವಾದ ಶಕ್ತಿ ಅಡಗಿದೆ. ಆಕಾಶದಲ್ಲಿರುವ ಮಳೆ, ಭೂಮಿಯ ಆಳದಲ್ಲಿರುವ ನೀರು ಭೂತ ಹಾಗೂ ಭವಿಷ್ಯತ್ಕಾಲದಲ್ಲಿ ನಡೆಯುವುದನ್ನು ಬಲ್ಲವನು. ಅವನಿಗೆ ಕಾರ್ಣಿಕದ ಕಾಟಯ್ಯ ಎಂದು ಶಿವ ಪಾರ್ವತಿಯರೇ ನಾಮಕರಣ ಮಾಡಿ ಅವನ ವಿಶೇಷತೆಗಳನ್ನು ಮೇಲಿನ ಪದ್ಯದಲ್ಲಿ ಹೇಳಿದ್ದಾರೆ. ಅವನು ಕಾರ್ಣಿಕದ ಕಾಟಯ್ಯ ತ್ರಿಕಾಲ ಜ್ಞಾನಿ. ಹುಟ್ಟುವಾಗಲೆ ಚಿಂತಾಮಣಿ ಎಂಬ ಪುಸ್ತಕ ಕೈಯಲ್ಲಿ ಹಿಡಿದುಕೊಂಡು ಹುಟ್ಟುತ್ತಾನೆ. ಕಾಟಯ್ಯನ ಜ್ಞಾನ ಪರಂಪರೆಯನ್ನು ಗಮನಿಸಿದರೆ ಆ ಕಾಲಘಟ್ಟದಲ್ಲಿಯೇ ಕಾಟಯ್ಯ ಬೇರೆಯವರನ್ನು ಮೀರಿಸುವಂತ ಜ್ಞಾನ ಹೊಂದಿದವನಾಗಿದ್ದನು. ಇಂದಿನ ಕಾಲಘಟ್ಟದಲ್ಲಿಯೂ ಕಾಡುಗೊಲ್ಲರ ಹಿರಿಯ ವ್ಯಕ್ತಿಗಳು ತೆಂಗಿನ ಕಾಯಿಯ ಮೂಲಕ ನೀರು ಹುಡುಕುತ್ತಾರೆ. ದೇವರು ಮೈ ಮೇಲೆ ಬರುವುದರ ಮೂಲಕ ನೀರಿರುವ ಜಾಗವನ್ನು ತೋರಿಸುತ್ತಾರೆ. ಅಷ್ಟೇ ಅಲ್ಲ ಇವರುಗಳು ತೋರಿಸಿದಂತಹ ಗುರುತಿನಲ್ಲಿ ನೀರು ಕಾಣಿಸಿಕೊಂಡಿರುವುದು ಕೂಡ ವಾಸ್ತವ ಹಾಗಂದ ಮಾತ್ರಕ್ಕೆ ನಾನು ವಿಜ್ಞಾನ ಅಥವಾ ತಂತ್ರಜ್ಞಾನವನ್ನು ನಿರಾಕರಿಸುತ್ತೇನೆಂದು ಅರ್ಥವಲ್ಲ. ನಮ್ಮ ಪೂರ್ವಜರ ಜ್ಞಾನವನ್ನು ಬಳಸಿಕೊಂಡರೆ ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂಬ ಸಣ್ಣ ಆಸೆ ಮಾತ್ರ ನನ್ನದು. ಮಣ್ಣನ್ನು ನೋಡಿ ಅವರು ನೀರಿರುವ ಜಾಗವನ್ನು ಗುರುತಿಸುತ್ತಾರೆ. ಎಂದರೆ ಆ ಜ್ಞಾನ ಆ ಸಮಯದಲ್ಲಿ ಕಂಡುಕೊಂಡಿದ್ದಲ್ಲ, ಅವರ ಹಿರಿಯರಿಂದ ಬಂದಿರುವುದು ಎಂದು ಹೇಳಿದರೆ ತಪ್ಪಾಗಲಾರದು ಎನ್ನುವುದು ನನ್ನ ಭಾವನೆ.

೨.೩. ಚಿತ್ತಯ್ಯನ ಸೃಷ್ಟಿ ಪುರಾಣ

ಎರಡನೆ ಕೆಂಡಕ್ಕೆ ನೀರು ಹಾಕಿದಾಗ, ಕಣ್ಣಿನಲ್ಲಿಯೇ ಫಳ ಫಳ ಎಂದು ಬೆಂಕಿಯ ಕಿಡಿಗಳನ್ನು ಹೊರಸೂಸುತ ಚಿತ್ತಯ್ಯ ಹುಟ್ಟುತ್ತಾನೆ.

'ಕಣ್ಣಾಗೆ ಪಳ ಪಳ ಕಿಡಿ ಕಿಡಿ ಎಗರುತ

ಕಿಡಿಗಣ್ಣನು ಸಿತ್ತಯ್ಯ ಹುಟ್ಟಿದನಂತೋ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಅವನಿಗೆ ಕಿಡಿಗಣ್ಣಿನ ಚಿತ್ತಯ್ಯ ಎಂದು ನಾಮಕರಣ ಮಾಡಿದರು. ಇವನು ಉಗ್ರ ಕೋಪದವನು, ಇವನು ಬುದ್ಧಿಗಿಂತ ಹೆಚ್ಚಾಗಿ ತನ್ನ ಬಾಹುಗಳ ಬಲವನ್ನು ನಂಬಿದವನು, ಶಿವನ ಪ್ರತಿರೂಪವೆಂದು ಹೇಳುತ್ತಾರೆ. ಇವನಿಗೆ ಮೂರನೆಯ ಕಣ್ಣುಕೂಡ ಇದೆ. ಹಾಗಾಗಿ ಮೂರನೆಯ ಕಣ್ಣು ಬಿಡದಂತೆ ನೋಡಿಕೊಳ್ಳುವುದು ಶಿವನ ಕರ್ತವ್ಯವಾಗಿದೆ. ಇವನು ಮೂರನೆಯ ಕಣ್ಣು ಬಿಟ್ಟರೆ ಪ್ರಪಂಚವೇ ಸುಟ್ಟು ಹೋಗುತ್ತದೆ.

೨.೩.೧ ಚಿತ್ತಯ್ಯನ ಮದುವೆ

ಕಾಡುಗೊಲ್ಲರ ಮದುವೆಗಳಿಗೆ ಒಂದು ಚಾರಿತ್ರಿಕ ಇತಿಹಾಸವಿದೆ. ಆಧುನಿಕ ಕಾಲದಲ್ಲಿ ತಮ್ಮ ಸಂಪ್ರಾದಾಯಗಳಿಗೆ ಕುಂದಾಗದಂತೆ ಮದುವೆಗಳನ್ನು ಶಾಸ್ತ್ರ ಬದ್ಧವಾಗಿ ಮಾಡುತ್ತಾರೆ. ನಮ್ಮ ಬುಡಕಟ್ಟು ಧರ್ಮದಲ್ಲಿ ಹಿರಿಯರಿಗೆ ಎಲ್ಲಿಲ್ಲದ ಗೌರವ ಮತ್ತು ಮೊದಲ ಆಧ್ಯತೆ ಕೊಟ್ಟಿರುವುದು ಕಂಡು

ಬಂದಿದೆ. ಕಾಡುಗೊಲ್ಲರು ಇಂದಿಗೂ ಹೆಣ್ಣು ಕೊಡುವಲ್ಲಿ ಮತ್ತು ತರುವಲ್ಲಿ ಅನೇಕ ಮೂಡನಂಬಿಕೆ, ಆಚರಣೆ ಸಂಪ್ರದಾಯಗಳಿವೆ. ಹೆಣ್ಣು ನೋಡುವುದಕ್ಕೆ ಹೋಗುವುದಕ್ಕಿಂತ ಮೊದಲು ತಮ್ಮ ಮನೆದೇವರನ್ನು ಶಕುನ ಕೇಳುತ್ತಾರೆ. ಆ ದೇವರು ಬಲಗಡೆ ಪ್ರಸಾದಕೊಟ್ಟರೆ ಮಾತ್ರ ಮುಂದಿನ ಕಾರ್ಯ ಇಲ್ಲದಿದ್ದರೆ ಹೋಗುವುದಿಲ್ಲ. ಇದರ ಜೊತೆಗೆ ಹಿರಿಯರ ಸಲಹೆ ಕೇಳುತ್ತಾರೆ, ಹುಡುಗಿ ಯಾವ ಪ್ರದೇಶದವಳು ಯಾವ ಬೆಡಗಿನವರು. ಮುಂತಾದ ವಿಷಯಗಳನ್ನು ಹಿರಿಯರಿಂದ ತಿಳಿದುಕೊಂಡು ಮುನ್ನುಗ್ಗುತ್ತಾರೆ. ಕಾಡುಗೊಲ್ಲರ ಸೃಷ್ಟಿಪುರಾಣದ ಪ್ರಕಾರ ಕಾಟಯ್ಯ ಮೊದಲು ಹುಟ್ಟಿದವನು. ಹಾಗಾಗಿ ಅವನಿಗೆ ಚಿತ್ರಗಿರಿಯ ಪಟ್ಟವಾಗಬೇಕು ಎಂದು ಈ ವಿಷಯವನ್ನು ಚಿತ್ತಯ್ಯ ಕಾಟಯ್ಯನೊಂದಿಗೆ ಪ್ರಸ್ತಾಪ ಮಾಡಿದಾಗ ಕಾಟಯ್ಯ ನಾನೂ ಯೋಗಿ ಜಂಗಮ ಮತ್ತು ಬ್ರಹ್ಮಚಾರಿ, ಆದುದರಿಂದ ನನಗೆ ಮುತ್ತೈದೆತನದ ಭಾಗ್ಯವಿಲ್ಲ, ಚಿತ್ರಗಿರಿ ಪಟ್ಟಣದ ದೊರೆಯಾಗುವ ಸಾಮರ್ಥ್ಯ ನನಗಿಲ್ಲ, ಆ ಎಲ್ಲ ಗುಣಗಳು ನಿನ್ನಲ್ಲಿವೆ. ಹಾಗಾಗಿ ನೀನೂ ಚಿತ್ರದುರ್ಗದ ದೊರೆಯಾಗಲು ಯೋಗ್ಯನಾದವನು. ಆ ಕಾರಣಕ್ಕಾಗಿ ನಿನಗೆ ಚಿತ್ರಗಿರಿಯ ಪಟ್ಟವಾಗಬೇಕು ಮತ್ತೆ ಮುತ್ತೈದೆ ತನ ನಿನಗೆ ದೊರೆತಿದೆ ನೀನೂ ಮದುವೆಯಾಗಬಹುದು. ಎಂದು ಹೇಳಿದಾಗ, ಚಿತ್ತಯ್ಯನಿಗೆ ಚಿತ್ರಗಿರಿಯ ಪಟ್ಟವನ್ನು ಕಟ್ಟುತ್ತಾನೆ. ನಂತರ ಚಿತ್ತಯ್ಯನ ಮದುವೆಗೆ ಸಕಲ ಸಿದ್ದತೆಗಳು ಆರಂಭವಾಗುತ್ತವೆ. ಚಿತ್ತಯ್ಯನಿಗೆ ತಕ್ಕನಾದ ಹೆಣ್ಣು ಹುಡುಕಲು ಮೂರುದಿಕ್ಕು ತಿರುಗಿದರೂ ಅವನಿಗೆ ಇಷ್ಟವಾದ ಹೆಣ್ಣು ದೊರಯಲಿಲ್ಲ. ಆಗ ಕಾಡುಗೊಲ್ಲರ ಜನಸಂಖ್ಯೆ ಕಡಿಮೆ ಇದ್ದಕಾರಣ ಚಿತ್ತಯ್ಯನಿಗೆ ಹೆಣ್ಣು ಸಿಗದಿರುವುದು ಕಾರಣವಿರಬಹುದು. ಚಿತ್ತಯ್ಯ ಮಲೆನಾಡ ಹೆಣ್ಣು ಇಷ್ಟಪಡುತ್ತಾನೆ. ಅದು ಕಾಟಯ್ಯನಿಗೆ ಇಷ್ಟವಾಗುವುದಿಲ್ಲ, ಅದನ್ನು ಪದಗಳ ಮೂಲಕ ಈ ರೀತಿ ವ್ಯಕ್ತಪಡಿಸುತ್ತಾನೆ.

"ಹುಣಿಸೆಕಾಯಿ ಹುಳಿಯಂದ ಮೆಣಸಿನ ಕಾಯಿ ಕಾರಂದ

ಈ ಸೀಮೆನೆ ಹೆಣ್ಣು ಕರುತಂದು ಸಿತ್ತಯ್ಯ

ಮಲಸೀಮೆ ಹೆಣ್ಣಿಗೂ ಮಲೆಜೋತು

ಮಲಸೀಮೆ ಹೆಣ್ಣಿಗೆ ಮಂಡಿಗೆ ಸೀಗೆ ಕಾಯಿ

ಬೆಂಡಿನ ಬೆತ್ತಸ ಮಡಿಲಿಗೆ ಕಟ್ಟಿಕೊಂಡು

ಬೆಡಗಿ ಕಾಣುವಳು ತರುಬ್ಯಾಡ ಅಂಬೋನಂತೋ"*(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಕಾಡುಗೊಲ್ಲರಲ್ಲಿ ಇಂದಿಗೂ ಕೂಡ ಯಾವ ದಿಕ್ಕಿನ ಹೆಣ್ಣು ತಂದರೆ ಮನೆಗೆ ಹೊಂದಿಕೊಳ್ಳುತ್ತಾಳೆ ಎಂಬುದು ಹಿರಿಯರಿಗೆ ಗೊತ್ತಿರುತ್ತದೆ. ಹಿರಿಯರ ಆದೇಶದಂತೆ ನಡೆಯುವ ಕಾಡುಗೊಲ್ಲರ ವಿವಾಹ ಪದ್ಧತಿಯು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಂಡು ಬರುವಾಗ ಮತ್ತು ಮದುವೆ ಮಾಡಿಕೊಡುವಾಗ ಸಾಕಷ್ಟು ಯೋಚನೆ ಮಾಡಿತ್ತಾರೆ. ನಮ್ಮಲ್ಲಿ ಜಾರಿಯಲ್ಲಿರುವ ಪ್ರಕಾರ ಮೂಡಲ ದಿಕ್ಕನ ಹೆಣ್ಣು ಮಕ್ಕಳು ಯಾವ ದಿಕ್ಕಿಗು ಮದುವೆ ಕೊಟ್ಟರೂ ಬಾಳುವೆ ಮಾಡುತ್ತಾರೆ. ಆದರೆ ಪಶ್ಚಿಮ ದಿಕ್ಕನ

ಹೆಣ್ಣು ಮಕ್ಕಳು ಆ ಪ್ರದೇಶಕ್ಕೆ ಮಾತ್ರ ಜೀವನ ಮಾಡುತ್ತಾರೆ ಎಂಬ ನಂಬಿಕೆ ಅವರಲ್ಲಿದೆ. ಕಾಟಯ್ಯ ತಮ್ಮನಿಗೆ ಸಲಹೆ ನೀಡುತ್ತಾನೆ. ಹುಣುಸೆಕಾಯಿ ಹುಳಿ ಇರಬಹುದು ಮೆಣಸಿನಕಾಯಿ ಖಾರ ಇರಬಹುದು ಬಣ್ಣದಲ್ಲಿ ಕಪ್ಪಿದ್ದರೂ ಆಕೆ ಬದುಕು ಮಾಡಿಕೊಡು ಹೋಗುತ್ತಾಳೆ. ಆದರೆ ಮಲೆಸೀಮೆ ಹೆಣ್ಣು ಮೊಲೆಜೋತು ಬಿದ್ದಿರುತ್ತವೆ. ಅಷ್ಟೆ ಅಲ್ಲ ಆಕೆಯು ಮಡಿಲಿಗೆ ಯಾವಾಗಲೂ ಬೆಂಡು ಬತ್ತಾಸು ಹೊಯ್ದುಕೊಂಡು ತಿನ್ನುತ್ತಾಳೆ. ಅವಳು ಕೆಲಸ ಮಾಡುವುದಿಲ್ಲ. ಹಾಗಾಗಿ ಮಲೆಸೀಮೆ ಹೆಣ್ಣು ತರಬೇಡ ಚಿತ್ತಯ್ಯ ಎಂದು ಹೇಳುತ್ತಾನೆ. ಆದರೂ ಚಿತ್ತಯ್ಯ ಕೇಳದೆ ಅವಳು ಏನು ಮಾಡದಿದ್ದರೂ ಚಿಂತೆಯಿಲ್ಲ ನಮ್ಮ ಮನೆಯ ಕಸನಾದರೂ ಗುಡಿಸಿಕೊಂಡಿರಲಿ ಸಂಜೆ ಬಂದು ನನ್ನ ತೋಳಿಗೆ ಒರಗಿದರೆ ಅಷ್ಟೆ ಸಾಕು. ಹಾಗಾಗಿ ಮಲೆಸೀಮೆಯ ಹೆಣ್ಣೆ ನನಗಿರಲಿ, ಎಂದು ಹಠ ಹಿಡಿಯುತ್ತಾನೆ.

ಕಾಟಯ್ಯ ತಮ್ಮನ ಬಗ್ಗೆ ಚಿಂತೆ ಮಾಡುತ್ತಾ ಕುಂದುರುಪೆ ಗುಡ್ಡಹತ್ತಿ ಮೂವಾರು ದೇವತರು ಚಿಂತಾಮಣಿ ಹೊತ್ತಿಗೆ ತೆಗೆದು ನೋಡುವರು ಅದರಲ್ಲಿರುವ ಉಲ್ಲೇಖ

'ಬಡಗಲು ದಿಕ್ಕನಾಗೆ ಬೆಸ್ತ್ರಿಹಳ್ಳಾಗೆ
ಜಲಪ ಮುನಿ ಮಗಳಂತೆ
ಹಾಲಿನಂತ ಕುಲವಂತೆ
ಮಸರಿನಂತೆ ಹೆಸರಿನೋಳು
ದೆಸಿವಂತೆ ಮಾಳಮ್ಮ
ಐದಾಳೆಂದು ಕಿಡಿಗಣ್ಣನು ಸಿತ್ತಯ್ಯಗೆ
ತಕ್ಕ ಕನ್ನಕೆ ಅಂದು ಕಾಟಯ್ಯನ ಹೊತ್ತಿಗಾಗೆ ಕಾಣದಂತೋ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಅಂದರೆ ದಕ್ಷಿಣ ದಿಕ್ಕಿನಲ್ಲಿ ಬೆಸ್ತರಹಳ್ಳಿಯಲ್ಲಿ ಬ್ರಾಹ್ಮಣ ಬಮ್ಮೈಲಿಂಗನ ಮಗಳು ಮಾಳಮ್ಮ ಎಂಬ ಹೆಸರಿನ ಕನ್ಯೆ ಇರುವಳು. ಅವಳ ಕುಲ ಹಾಲಿನಷ್ಟೆ ಪವಿತ್ರವಾದುದು. ತುಪ್ಪದಂತೆ ಗಂಭೀರ ಸ್ವರೂಪದವಳು. ಮೊಸರಿನಂತ ಹೆಸರಿನ ದೆಸೆವಂತೆ ಮಾಳಮ್ಮ ಇರುವಳೆಂದು ಹೊತ್ತಿಗೆಯಲ್ಲಿ ಬರೆದಿದೆ. ಎಂದು ಕಾಟಯ್ಯ ಹೇಳುತ್ತಾನೆ.

ಈ ಕಾವ್ಯದಲ್ಲಿ ಕಾಡುಗೊಲ್ಲರು ತಮ್ಮ ಮನೆಗೆ ಬರುವ ಹೆಣ್ಣು ಹೇಗಿರಬೇಕು ಎಂದು ಬಯಸುತ್ತಾರೆಂದರೆ, ಅವಳು ಉತ್ತಮವಾದ ಸಂಸ್ಕಾರವನ್ನು ಹೊಂದಿರಬೇಕು, ಕೊಟ್ಟಮನೆ ಮತ್ತು ಬಿಟ್ಟುಬಂದ ಮನೆ ಎರಡು ಚನ್ನಾಗಿರಬೇಕು. ಈ ಕಾವ್ಯದಲ್ಲಿಯೆ ಉಲ್ಲೇಖವಾಗಿರುವಂತೆ ಹಾಲು, ಮೊಸರು, ತುಪ್ಪ ಇವು ಸಮೃದ್ದಿಯ ಸಂಕೇತ. ಜೊತೆಗೆ ಹಾಲು ತುಪ್ಪ ಮೊಸರು ಇವು ಕಾಡುಗೊಲ್ಲರು ಪಶುಪಾಲಕರಾಗಿದ್ದರು ಎಂಬುದನ್ನು ಹೇಳುತ್ತವೆ. ಈ ಕಾವ್ಯವನ್ನು ಶಿಷ್ಟ ಸಮೂದಾಯದವರೇನಾದರೂ ಬರೆದಿದ್ದರೆ ಹೆಣ್ಣಿನ ಸೌಂದರ್ಯವನ್ನೋ ಇಲ್ಲ ಪ್ರಕೃತಿಯ ಸೌಂದರ್ಯವನ್ನೋ ವರ್ಣನೆ ಮಾಡುತ್ತಿದ್ದರು.

ಇವರು ಪಶುಪಾಲಕರಾಗಿರುವ ಕಾರಣದಿಂದ ಇವರು ಗೋವಿನಷ್ಟೇ ಪಾವಿತ್ರತೆಯನ್ನು ಗೋವಿನಿಂದ ದೊರೆಯಬಹುದಾದ ಹಾಲು ಮೊಸರಿಗೂ ಕೊಡುತ್ತಾರೆ. ಹಾಲು ಇವರಿಗೆ ಅಮೃತದಷ್ಟೇ ಶ್ರೇಷ್ಠ.

ಮತ್ತೊಂದು ವಿಷಯವನ್ನು ಗಮನಿಸುವುದಾದರೆ "ತಳ ಸಮುದಾಯದ ಕುಲವೊಂದು ಸಮಾಜದಲ್ಲಿ ಉನ್ನತ ಜಾತಿ ಎನ್ನಬಹುದಾದ ಬ್ರಾಹ್ಮಣರ ಜೊತೆಗೆ ವೈವಾಹಿಕ ಸಂಬಂಧವನ್ನು ಬೆಳೆಸಿರುವುದು ಗಮನಾರ್ಹ ಸಂಗತಿ" ಎಂದು ಎಸ್.ಎಸ್. ಹಿರೇಮಠರು ಹೇಳಿರುವ ಸಂಗತಿಯನ್ನು ಗಮನಿಸಿದರೆ ಈಗ ಇದ್ದಂತ ಜಾತಿಯ ಬಿಕ್ಕಟ್ಟುಗಳು ಆಗ ಇರಲಿಲ್ಲವೆನಿಸುತ್ತದೆ. ಈ ರೀತಿ ಮಾಳಮ್ಮನ ಬಗ್ಗೆ ತಿಳಿದುಕೊಂಡ ಕಾಟಯ್ಯ ತಮ್ಮಂದಿರಿಗೆ ಹೇಳುತ್ತಾನೆ. ಆಗ ಎಲ್ಲರು ಒಂದೊಂದು ಕುದುರೆ ಹತ್ತಿಕೊಂಡು, ಬೆಸ್ತಿಹಳ್ಳಿ ಬಮ್ಮಯ್ಯನ ಮನೆಗೆ ಹೆಣ್ಣು ಕೇಳಲು ಬರುತ್ತಾರೆ. ಬಂದಂತ ದೊರೆಗಳಿಗೆ ಕಾಲಿಗೆ ನೀರುಕೊಟ್ಟು ಕೂರಲು ಮಣೆಕೊಟ್ಟು ಊಟ ಕೊಟ್ಟು ಬಮ್ಮಯ್ಯ ಬಂದ ಕಾರಣವನ್ನು ಕೇಳಿದಾಗ, ಕಾಟಯ್ಯ ಚಿತ್ರಗಿರಿ ದೊರೆಯಾದ ಕಿಡಿಗಣ್ಣಿನ ಚಿತ್ತಯ್ಯನಿಗೆ ಮಾಳಮ್ಮನನ್ನು ಕೇಳಲು ಬಂದಿರುವುದಾಗಿ ಹೇಳಿದಾಗ, ಬಮ್ಮಯ್ಯ ಹೆಣ್ಣು ಕೊಡುವುದಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಪಗಡೆ ಆಟದಲ್ಲಿ ಗೆದ್ದರೆ ಕೊಡುವುದಾಗಿ ಹೇಳುತ್ತಾನೆ. ಇವರು ಮೊದಲೆ ಕಾಡುಗೊಲ್ಲರು ಹಾಗಾಗಿ ಇವರು ಗೆಲ್ಲಲು ಸಾಧ್ಯವಿಲ್ಲ ಆ ಕಾರಣದಿಂದ ಮಾಳಮ್ಮನನ್ನು ಕೊಡದಂತೆ ನಿರಾಕರಿಸಿದರಾಯಿತು ಎಂದು ಪಗಡೆ ಆಡಲು ಕರೆಯುತ್ತಾನೆ. ಇವರು ಕೂಡ ದೇವರ ಮೇಲೆ ಬಾರ ಹಾಕಿ ಪಗಡೆ ಆಡಲು ಒಪ್ಪಿಕೊಳ್ಳುತ್ತಾರೆ. ಪಗಡೆ ಆಟದಲ್ಲಿ ಬಮ್ಮಯ್ಯ ಸೋಲುತ್ತಾನೆ. ಕಾಟಯ್ಯ ಗೆಲ್ಲುತ್ತಾನೆ. ಕೊಟ್ಟಮಾತಿನಂತೆ ಬಮ್ಮಯ್ಯ ತನ್ನ ಮಗಳನ್ನು ಕೊಡಲು ನಿರಾಕರಿಸುತ್ತಾನೆ. ಜೊತೆಗೆ ಕುಲವನ್ನು ಅಡ್ಡ ತರುತ್ತಾನೆ. ಆಗ ಕಾಟಯ್ಯ ಉಪಾಯ ಮಾಡಿ ಕೆಂದ ಕುರಿಯನ್ನು ಕೊಯ್ದು ಅದರ ಕೊಬ್ಬುತೆಗೆದು ಅದನ್ನು ತುಪ್ಪವೆಂದು ಸುಳ್ಳು ಹೇಳಿ ಊಟ ಮಾಡಿಸುತ್ತಾನೆ. ಆಗ ಅವನ ಬ್ರಾಹ್ಮಣ ಕುಲ ಕೆಡುತ್ತದೆ. ಆಗ ಅನಿವಾರ್ಯವಾಗಿ ಬಮ್ಮಯ್ಯ ಹಾದಿಗೆ ಅಂದರ ಬೀದಿಗೆ ಚಪ್ಪರಹಾಕಿ ಕುಂಬಾರರ ಮನೆಯಿಂದ ಅರುಣೆ ತರಿಸಿ ಕಾಡುಗೊಲ್ಲರ ಸಂಪ್ರದಾಯದಂತೆ ಮದುವೆ ಮಾಡಿಕೊಡುತ್ತಾನೆ. ಚಿತ್ತಯ್ಯ ಮತ್ತು ಮಾಳಮ್ಮನ ಜೋಡಿಯನ್ನು ರಾಮ ಸೀತೆಯರ ಜೋಡಿ ಇದ್ದಂತೆ ಎಂದು ಊರಿನ ಜನ ಕೊಂಡಾಡುತ್ತಾರೆ.

೨.೩.೨ ಬೇಟೆ

ಕಾಡುಗೊಲ್ಲರ ಸಂಪ್ರದಾಯದ ಪ್ರಕಾರ ವರ್ಷದಲ್ಲಿ ಒಂದು ಸಲವಾದರೂ ಬೇಟೆ ಆಡುವುದು ಅವರ ಪ್ರವೃತ್ತಿಗಳಲ್ಲೊಂದು. ಮಾಳಮ್ಮನನ್ನು ಮದುವೆಯಾಗಿ ಸುಖವಾಗಿ ಇರಬೇಕಾದಂತಹ ಸಂದರ್ಭದಲ್ಲಿ ಚಿತ್ತಯ್ಯ ಒಂದು ದಿನ ನಿತ್ಯಕರ್ಮ ಮುಗಿಸಿ ಬರುವಂಥಹ ಸಮಯದಲ್ಲಿ ಯಾರೋ ಒಬ್ಬ ಹೊಸಬ ಊರಿನ ಹೊರಗೆ ನಾಯಿಗಳನ್ನು ಸಾಲಾಗಿ ಕಟ್ಟಿಕೊಂಡು ಬೀಡು ಬಿಟ್ಟಿರುತ್ತಾನೆ. ಚಿತ್ತಯ್ಯ ಅವನ ಬಳಿಗೆ ಹೋಗಿ ವಿಚಾರಿಸಿದಾಗ ಅವನು ಹಲವಾರು ತಳಿಯ ನಾಯಿಗಳನ್ನು ಸಾಕಿಕೊಂಡಿರುವುದಾಗಿ ಹೇಳುತ್ತಾನೆ. ಅಷ್ಟೇ ಅಲ್ಲ ಅನೇಕ ಪ್ರದೇಶಗಳನ್ನು ತಿರುಗಿ ಬಂದೆ ಯಾರೂ ಅವುಗಳನ್ನು ಕೊಂಡುಕೊಳ್ಳಲಿಲ್ಲ. ಹಾಗಾಗಿ ಇಲ್ಲಿಗೆ ಬಂದಿರುವೆ. ಇಲ್ಲಿ ಇವುಗಳನ್ನು ಕೊಂಡುಕೊಳ್ಳುವ

ದೊರೆಗಳು ಇರುವರೆಂದು ಕೇಳಿದ್ದೇನೆ ಎಂದು ಹೇಳಿದಾಗ, ಹಾಗೂ ಈ ನಾಯಿಗಳನ್ನು ಕೊಂಡುಕೊಳ್ಳುವ ಶಕ್ತಿ ಯಾರಿಗೂ ಇಲ್ಲವೇನೋ ಎಂದು ಹೇಳುವುದನ್ನು ಕೇಳಿಸಿಕೊಂಡ ಚಿತ್ತಯ್ಯ ಅವನ ನಾಯಿಗಳನ್ನು ಕೊಂಡುಕೊಳ್ಳುತ್ತಾನೆ.

ಒಂದು ದಿನ ಕಾಟಯ್ಯ ಚಿಂತಾಮಣಿ ಪುಸ್ತಕವನ್ನು ಬಾವಿಯ ದಡದ ಮೇಲಿಟ್ಟು ಸ್ನಾನ ಮಾಡುತ್ತಿದ್ದ ಸಮಯದಲ್ಲಿ ಬಾಮ್ಮೈದ ಬಮ್ಮಯ್ಯ ಚಿಂತಾಮಣಿ ಪುಸ್ತಕ ತೆಗೆದು ಓದಿದ್ದರಿಂದ ಅರಮನೆಯ ನೆಲಮಾಳಿಗೆಯಲ್ಲಿ ಇಟ್ಟಿರುವಂತಹ ಮುತ್ತು-ರತ್ನರಾಶಿ, ಹೆಚ್ಚಿನ ಹೆಗ್ಗಾಳೆ, ಮುತ್ತಿನ ಹವಳದಗೊಂಡಗು ವಜ್ರ-ವೈಢೂರ್ಯಗಳನ್ನು ಕಂಡು ಅವನಿಗೆ ಹೊಟ್ಟೆ ಉರಿಯುತ್ತದೆ. ಏನಾದರೂ ಮಾಡಿ ಇವುಗಳು ಕಾಡುಗೊಲ್ಲರ ಬಳಿ ಇರದಂತೆ ಮಾಡಬೇಕೆಂದು ಉಪಾಯ ಮಾಡಿ ಚಿತ್ತಯ್ಯನ ಬಳಿಗೆ ಬಂದು. ಹೀಗೆ ಹೇಳುತ್ತಾನೆ. ನೀವು ಎಷ್ಟು ಶೂರರಾದ್ರೆ ಏನು ಪ್ರಯೋಜನ. ಇಷ್ಟು ವರ್ಷ ಕಳೆದರೂ ಒಂದು ಸಲವೂ ಬೇಟೆ ಆಡಿಲ್ಲ ಎಂದ ಮೇಲೆ ನೀವು ಅಸಮರ್ಥ ದೊರೆಗಳು ಇರಬೇಕು ಎಂದು ಹಿಯಾಳಿಸುತ್ತಾನೆ. ಇದರಿಂದಾಗಿ ಚಿತ್ತಯ್ಯನಿಗೆ ಕೋಪ ಅಂಗಾಲಿನಿಂದ ನೆತ್ತಿಯವರೆಗೆ ಏರುತ್ತಿದೆ. ಉರಿಗಣ್ಣು ಬಿಟ್ಟರೆ ಸುಟ್ಟು ಹೊಗುತ್ತಾನೆಂದು ಆ ಸಿಟ್ಟು ಕಡಿಮೆ ಮಾಡಿಕೊಂಡು, ಬೇಟೆಗೆ ಹೋಗಲು ದಂಡು ತಯಾರು ಮಾಡುತ್ತಾನೆ.

'ಬನ್ನೀರಿ ಬನ್ನೀರಿ ಊರು ಉಂಬಳದೋರು
ವಲಗದ್ದೆ ಮಾನ್ಯಾದೋರು
ಕಂಠಿಯ ಸರದೋರು ಒಂಟಿ ಮುತ್ತಿನೋರು
ಮಾಮಲೆಗೊಂಡಿನೋರು ಹಿಂದಾಲ ದೀರಾರು
ಮುಂದಾಲ ಶೂರಾರು ತೋಟಿ ತಳವಾರಾರು
ನರಸಿಂಹನ ದಂಡಿಗೆ ಸರುವಂತರ ಅಪ್ಪಣೆಯ್ಯೋ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಒಂದು ದಂಡು ಎನಿಸಿಕೊಳ್ಳಬೇಕಾದರೆ ಆ ದಂಡಿನಲ್ಲಿ ಯಾರು ಯಾರು ಭಾಗವಹಿಸಬೇಕು ಎಂದರೆ ಊರು ಉಂಬಳದೋರು, ರೈತರು, ಕಂಠಿಯ ಸರದೋರು, ಒಂಟಿ ಮುತ್ತಿನೋರು, ಮಾಮಲೆಗೊಂಡಿನೋರು, ದೀರರು, ಶೂರರು, ತೋಟಿ ತಳವಾರರು ಇವರೆಲ್ಲರು ದಂಡಿನ ಜೊತೆ ಇರಬೇಕಾಗಿತ್ತು. ಏಕೆಂದರೆ ಇವರು ಚಿತ್ತುರಗಿರಿ ದೊರೆಗಳು. ಹಾಗಾಗಿ ದಂಡು ದೊಡ್ಡ ಪ್ರಮಾಣದಲ್ಲಿ ತಯಾರಾಗಬೇಕಿತ್ತು. ಮೊದಲು ಕಲಪಲ್ಲಿನಾಯಕನ ದಂಡಿಗೆ ಸರ್ವಜನರ ಅಪ್ಪಣೆಯನ್ನು ಪಡೆದುಕೊಳ್ಳುತ್ತಾನೆ. ಅವನ ದಂಡು ಯಾವ ರೀತಿ ತಯಾರಾಯಿತೆಂದರೆ

'ಆರು ಸಾವಿರ ಕರಿಕುದುರೆ
ಆರು ಸಾವಿರ ಬಿಳಿಕುದುರೆ

ಆರು ಸಾವಿರಜನ್ನ ಕುದುರೆ

ಆರು ಸಾವಿರ ಜಾಲ್ ಕುದುರೆ

ಹಿಂಗಾಲಿಗೂ ಜಂಗಂತೆ

ಮುಂಗಾಲಿಗೂ ಜಂಗಂತೆ

ಕಣಕಾಲಿಗೂ ಜಂಗಂತೆ

ಮಣಕಾಲಿಗೂ ಜಂಗಂತೆ

ಏಕು ಸಿಂಹನ ಗರಿಯ ಏಕುವಾಗಿ ಬಿಗುದೈತೆ

ಒಂದೋಂದು ಕುದುರಿಗೆ ಹದಿನೆಂಟು ಹದಿನೆಂಟು

ಸಾವಿರ ಕುಂದಣವೆ ತುಂಬವರೆ

ಮೂರು ಮುಕ್ಕಾಲು ಗಳಿಗೆ ಒಳಗಾಗಿ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಕಲಪಲ್ಲಿನಾಯಕನ ದಂಡು ಮೊದಲು ತಟ್ಟನೆ ತಯಾರಾಗಿ ನಿಲ್ಲುತ್ತದೆ. ಇದೇ ರೀತಿ ಐದು ಜನರ ದಂಡು ಸುಮಾರು ಹನ್ನೆರಡು ಸಾವಿರ ದಂಡು ತಯಾರಾಗಿ ಚಿತ್ರಗಿರಿ ಊರ ಮುಂದೆ ನಿಂತುಕೊಂಡಿತು. ಇವರು ಬೇಟೆ ಹೋಗುವ ಸಡಗರವನ್ನು ನೋಡಲು ಶಿವನು ಕಣ್ಣು ಕಾಣದವರಿಗೆಲ್ಲ ಕಣ್ಣುಗಳನ್ನು ಕೊಟ್ಟು ಸಂತೋಷ ಪಡುವಂತೆ ಮಾಡಿದನು. ಕಿವಿ ಕೇಳದವರಿಗೆಲ್ಲ ಕಿವಿ ಕೇಳವಂತೆ, ಬಲವಿಲ್ಲದವರಿಗೆ ಬಲಬಂದತೆ ಮಾಡಿದನು. ಆಗ ಕಿಡಿಗಣ್ಣುನು ಚಿತ್ತಯ್ಯನ ಕಿವಿ ನೆಟ್ಟಗಾದವು.

ಈ ಆನಂದವನ್ನು ನೋಡಿ ಮತ್ತು ಕೇಳಿ ಸಹಿಸಿಕೊಳ್ಳದ ಬ್ರಾಹ್ಮಣ ಸಾಡಿಯ ಕೊರಮ ಬಮ್ಮಯ್ಯ ಚಿತ್ತಯ್ಯನ ಹತ್ತಿರ ಬಂದು ನೆಲಮಾಳಿಗೆಯಲ್ಲಿರುವ ಹೆಗ್ಗಾಳೆ ಬಗ್ಗೆ ಹೇಳುತ್ತಾನೆ. ಇದರಿಂದ ಅಣ್ಣನ ಮೇಲೆ ಕೋಪಗೊಂಡು ಚಿತ್ತಯ್ಯ ಬೇಟೆ ಹೋಗಲು ಹೆಗ್ಗಾಳೆ ಬೇಕು ಎಂದು ಕೇಳುತ್ತಾನೆ. ಕಾಟಯ್ಯ ತೂಗಾಮಂಚದ ಮೇಲೆ ಮಲಗಿರುತ್ತಾನೆ. ಆಗ ಕಾಟಯ್ಯನನ್ನು ಎಚ್ಚರಿಸಿ ಅಣ್ಣ ನಮ್ಮ ದಂಡಿಗೆ ಸರಿಯಾದ ದರಬಾರಕ್ಕೂ ಸರಿಯಾದ ಹೆಚ್ಚಿನ ಹೆಗ್ಗಾಳೆ ಇರುವುದು ನಿಜವೆ ಎಂದು ಕೇಳುತ್ತಾನೆ. ಆಗ ಕಾಟಯ್ಯ ಇವರಿಗೆ ಹೆಗ್ಗಾಳೆಯನ್ನು ಕಾಪಾಡುವುದು ಆಗುವುದಿಲ್ಲ ಎಂದು ತಿಳಿದು ಯಾರು ಹೇಳಿದವರು. ಅವರ ಮಕ್ಕಳು ಸಾಯಲಿ. ಅವರ ಮನೆತನ ಹಾಳಾಗಲಿ ಎಂದು ಶಾಪ ಹಾಕುತ್ತಾನೆ. ಇದಕ್ಕೆಲ್ಲ ಬಮ್ಮಯ್ಯನೇ ಕಾರಣ ಎಂದು ಕಾಟಯ್ಯಗೆ ಅರ್ಥವಾಗುವುದಕ್ಕೆ ಸಮಯ ಹಿಡಿಯಲಿಲ್ಲ. ಆದರೂ ಇರುವುದನ್ನು ಕಳೆದುಕೊಂಡರೆ ಮತ್ತೆ ಸಿಗುವುದಿಲ್ಲ ಎಂದು ಹೆಗ್ಗಾಳೆ ಇಲ್ಲ ಎಂದು ಚಿತ್ತಯ್ಯನಿಗೆ ಸುಳ್ಳು ಹೇಳುತ್ತಾನೆ. ಇದರಿಂದಾಗಿ ಚಿತ್ತಯ್ಯ ಪ್ರಾಣಕಳೆದುಕೊಳ್ಳಲು ಮುಂದಾಗುತ್ತಾನೆ. ಆಗ ಕಾಟಯ್ಯ ಹೆಂಡತಿ ಸತ್ತರೆ ಮತ್ತೆ ಮದುವೆ ಆಗಬಹುದು. ಮಕ್ಕಳು ಸತ್ತರೆ ಮತ್ತೆ ಮಕ್ಕಳಾಗಬಹುದು, ಆದರೆ ಬೆನ್ನ ಹಿಂದೆ ಹುಟ್ಟಿದ ತಮ್ಮನನ್ನು ಕಳೆದುಕೊಂಡು ಈ ಭೂಮಿ ಮೇಲೆ ನಾನು ಹೇಗೆ ಬಾಳಲಿ ಎಂದು ಹೆಗ್ಗಾಳೆ ಇರುವ ವಿಷಯವನ್ನು ಹೇಳುತ್ತಾನೆ. ಮತ್ತೆ ಅದನ್ನು ನೆಲಮಾಳಿಗೆಯಿಂದ ಹೊರತೆಗೆಯುವಾಗ ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬುದನ್ನು ಕೂಡ ಹೇಳುತ್ತಾನೆ.

'ಮುನ್ನೂರು ಗಬ್ಬದ ಕುರಿಯ ಮುರಿಯಗಡಿಸಬೇಕು

ಆರುನೂರುಗಬ್ಬದ ಕುರಿಯ ಹರಿಯ ಕಡಿಸಬೇಕು

ಮೂರಖಂಡುಗದಕ್ಕಿ ಅನ್ನದ ರಾಶಿ ಸುರಿಸಬೇಕು

ಹಾರವರ್‍ನ ಕರೆಸಬೇಕು ಪುಳಿಹೊಜ್ನ ಮಾಡಿಸಬೇಕು

ದೀರರನ ಕರೆಸಬೇಕು ವಾಮ್ನಾಮೆ ಸುಡಿಸಬೇಕು

ಮುನ್ನೂರು ಗುದ್ದಲಿ ವಡ್ಡರನ ಕರೆಸಬೇಕು

ಭೂಮಿ ಹಗಿಸಬೇಕು

ಹನ್ನೆರಡು ಹನ್ನೆರಡು ಇಪ್ಪತ್ತಾನಾಲ್ಕು ಜತೆ ಎತ್ತಿನ

ವರಜೀಯ ಕಟ್ಟಿಸಬೇಕು ಕಡಿಗನ್ನ ಹೊಡೆಸಬೇಕು' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಹೆಚ್ಚಿನ ಹೆಗ್ಗಾಳೆ ಇರುವುದು ನಿಜ, ಆದರೆ ಅದನ್ನು ಹೊರಗೆ ತೆಗಿಯಲು ಸಾಕಷ್ಟು ಖರ್ಚುಬರುತ್ತದೆ ಎಂದು ಹೇಳುತ್ತಾನೆ. ಒಂಬೈನೂರು ಗಬ್ಬದ ಕುರಿ ಆಗಬೇಕು, ಬ್ರಾಹ್ಮಣರು ಬಂದು ಹೋಮ ಸುಡಬೇಕು. ಮೂರು ನೂರು ಜನ ವಡ್ಡರು ಬಂದು ಭೂಮಿ ಅಗಿಯಬೇಕು. ಆಗ ಹೆಗ್ಗಾಳೆ ಹೊರಗೆ ಬರುತ್ತದೆ ಎಂದು ಹೇಳುತ್ತಾನೆ. ಕಾಟಯ್ಯ ಹೇಳಿದಂತೆ ಮಾಡಿ ಹೆಗ್ಗಾಳೆಯನ್ನು ಹೊರಗೆ ತೆಗೆಯುತ್ತಾನೆ. ಅಷ್ಟೇ ಅಲ್ಲ ಈ ಕೆಲಸ ನನ್ನಿಂದ ಬಿಟ್ಟರೆ ಬೇರೆಯಾರಿಂದಲೂ ಸಾಧ್ಯವಿಲವೆಂದು ಕೂಡ ಚಿತ್ತಯ್ಯನಿಗೆ ಗೊತ್ತಿರುತ್ತದೆ. ಆರಂಭದಲ್ಲಿಯೇ ಬ್ರಾಹ್ಮಣರಿಂದ ಯಜ್ಞ ಮಾಡಿಸುತ್ತಾರೆ. ಕಾಡುಗೊಲ್ಲರೆದಂರೆ ಇದಕ್ಕೆ ಕಾರಣ ಬ್ರಾಹ್ಮಣ ಬಮ್ಮಯ್ಯಲಿಂಗನೆ ಕಾರಣವಿರಬಹುದು. ಏಕೆಂದರೆ ಬ್ರಾಹ್ಮಣರು ಎಲ್ಲಿಗೆ ಹೋದರೂ ತಮ್ಮ ಪುರೋಹಿತ ಶಾಹಿಯನ್ನು ಬಿಡುವುದಿಲ್ಲ. ಹೆಗ್ಗಾಳೆ ಹೊರಗೆ ತೆಗಿಸಿದ ಚಿತ್ತಯ್ಯನಿಗೆ ಇನ್ನೊಂದು ಸಮಸ್ಯೆ ಎದುರಾಗುತ್ತದೆ. ಅದೇನೆಂದರೆ ಹೆಗ್ಗಾಳೆಗಿಂತಲೂ ಶ್ರೇಷ್ಟವಾದುದು ಮುತ್ತಿನ ಹವಳದ ಗೊಡಗು. ಇದರ ಬಗೆಗೆ ಚಿತ್ತಯ್ಯನಿಗೆ ಗೊತ್ತಿರಲಿಲ್ಲ. ಪುನಃ ಸಾಡಿಯ ಕೊರಮ ಚಿತ್ತಯ್ಯನಿಗೆ ಹೇಳಿ ಹವಳದ ಗೊಡಗನ್ನು ನೆಲಮಾಳಿಗೆಯಿಂದ ಹೊರಗೆ ತೆಗೆಸುತ್ತಾನೆ. ಹೊನ್ನು, ಚಿನ್ನ, ತಾಮ್ರ, ತವರ, ಉಕ್ಕು ಕಬ್ಬಿಣ, ಬಂಗಾರ, ಬೆಳ್ಳಿ ಹಸಿರು, ಕೆಂಪು, ಕರಿದು, ಹೊನ್ನು ಹೊಡ್ಡು, ಹೂರ್‍ಯ, ನೀಲ, ಭೂ ಮೇಘದ ಕಟ್ಟಿ ಬಿಗುದಂತ ರಣದಲೆ, ರಣಸುರ, ರಣಬೇರೆಂಬ, ಹೆಚ್ಚಿನ ಹವಳದ ಗೊಡಗು ತಯಾರಾಗಿದೆ. ಆದರೆ ಹೆಗ್ಗಾಳೆ ಮತ್ತು ಹವಳದಗೊಡಗು ಎತ್ತಿ ಇಡಿಸುವುದು ಪ್ರಯೋಜನವಿಲ್ಲದ ಕೆಲಸವೆಂದು ಹೇಳಿದಾಗ, ಚಿತ್ತಯ್ಯ ಕಾಟಯ್ಯನ ಸಲಹೆಯಂತೆ ಕಹಳೆ ಕೆಂಚನ ಮನೆಗೆ ಹೋಗುತ್ತಾನೆ. ನವರತ್ನಗಳಿಂದ ಮಾಡಿದ ಹೆಗ್ಗಾಳೆ ಇದೆ. ನಿನ್ನಿಂದ ಎತ್ತಿ ಹಿಡಿಯುವುದಕ್ಕೆ ಆಗುತ್ತದಾ ಎಂದು ಕೇಳಿದಾಗ, ಕಹಳೆ ಕೆಂಚ ನಿನ್ನಂತ ಅನ್ನ ವಸ್ತ್ರ ಕೊಡುವ ದಣಿಯೊಬ್ಬನಿದ್ದರೆ ಹನುಮಂತ ಆಗೋರು ಬಹಳಷ್ಟು ಜನ ಸಿಗುತ್ತಾರೆ ಎಂದು ಹೇಳುತ್ತಾನೆ.

'ಕಹಳೆ ಬಾಲುನ ತಮ್ಮ ಕಹಳೆ ಕೆಂಚನಿಗೆ ಸಂಬಳವು ಈ ರೀತಿ ಇರುತ್ತದೆ'. ಹನ್ನೊಂದು ಗಿದ್ನ ಅವರೆ ಕಾಳು, ತೂಗಿ ಒಂದು ಮಣ ತೂಗದೆ ಒಂದು ಮಣ ಮೆಣಸಿನ ಕಾಯಿ ಕೊಡಬೇಕು. ಆರುನೂರು ಮುಂಗಡ ಸಂಬಳಕೊಡಬೇಕೆಂದು ಕೇಳಿದಾಗ, ಅದಕ್ಕೆ ಚಿತ್ತಯ್ಯ ಒಪ್ಪಿಕೊಳ್ಳುತ್ತಾನೆ. ಇಬ್ಬರೂ ಹಿಂದೆ ಮುಂದೆ ಬರುವಾಗ ಕಹಳೆ ಕೆಂಚಣ್ಣನಿಗೆ ಬಡಿಯುತ್ತದೆ. ಅವನ ಜೊತೆ ಮಾತನಾಡುತ್ತದೆ. ಹನ್ನೆರಡು ವರುಷ ನಾನು ಎಲೆ ಕೆಂಚ ಮುಚ್ಚು ಮಾಳಿಗೆಯಲ್ಲಿ ಇದ್ದೆ. ನಾನು ಈಗ ನನ್ನಿಗೆ ಸಿಕ್ಕದೇನೋ ದಕ್ಕಿದೇನೋ ಅಂದು ಕಿಲಿ ಕಿಲಿ ನಗುತ್ತದೆ. ಆಗ ಕೆಂಚಣ್ಣ ಅಲ್ಲಿರುವ ಪ್ರಜೆಗಳಿಗೆ ನಮಸ್ಕಾರ ಮಾಡುತ್ತಾನೆ. ಕಹಳೆಗೂ ನಮಸ್ಕಾರ ಮಾಡಿ, ಹುತ್ತೇರಿ ಗುಡ್ಡದಂತ ಕಹಳೆಯನ್ನು ಹೆಗಲಿಗೆ ಹಾಕಿಕೊಳ್ಳುತ್ತಾನೆ. ಹಿಂದೆ ಆಯಗಾರಿಕೆ ಎನ್ನುವ ಪದ್ಧತಿ ಇತ್ತು. ಎಲ್ಲಾ ಆಯಗಾರರು ಒಬ್ಬ ವ್ಯಕ್ತಿಗೆ ಒಂದಲ್ಲ ಒಂದು ರೀತಿಯಲ್ಲಿ ಬೇಕಾಗುತ್ತಿದ್ದರು.

ಕಹಳೆ ಹೊತ್ತುಕೊಳ್ಳಲು ಕಹಳೆ ಬಾಲನ ತಮ್ಮ ಕಹಳೆ ಕೆಂಚನು ಬಂದನು. ಆದರೆ ಹವಳದ ಗೊಡಗು ಎತ್ತಿ ಹಿಡಿಯುವಂತ ಗಂಡು ಐದು ಜನರ ದಂಡಿನಲ್ಲಿ ಯಾರೊಬ್ಬರೂ ಇರಲಿಲ್ಲ. ಕ್ಷತ್ರೀಯ ವಂಶದ ಭರಮ ಇರುವ ಬಗ್ಗೆ ಮಾಹಿತಿ ತಿಳಿದುಕೊಂಡು ಬರುತ್ತಾನೆ. ಆ ನಂತರ ಅವನ ಮನೆಗೆ ಹೋಗಿ ಕರೆದಾಗ, ಅವನು ಇನ್ನೊಂದು ಸಾರಿ ಕರೆದರೆ ಮುಖದ ಮೇಲೆ ಹೊಡೆಯುವುದಾಗಿ ಹೇಳಿತ್ತಾನೆ. ಈ ಮಾತನ್ನು ಚಿತ್ತಯ್ಯ ಕಾಟಯ್ಯನಿಗೆ ಹೇಳಿದಾಗ ಕಾಟಯ್ಯ ಆಯಗಾರರೆದಂರೆ ಸೂಳೆಯರು ಅಂದುಕೊಂಡಿದ್ದಿಯಾ ಬಿಟ್ಟಿದ್ದಿಯಾ ನೀನೂ "ಹರುದಾಗೆ ಬರುದಾಗೆ ಹೊಗುನನ್ನ ಸೂಳೆ ಅಂಬೋದು ಅವರೆಯ ಸುಗ್ಯಾಗೆ ಬಾರೆನನ್ನ ಸೂಳೆ ಅಂತ ಕರೆಡದರೆ ಆಯಗಾರರು ಕೈಗೆ ಸಿಗುತ್ತಾರಾ" ಎಂದು ಆಯಗಾರರನ್ನು ಯಾವ ರೀತಿ ಕರೆಯಬೇಕು ಎಂಬುದನ್ನು ಹೇಳಿಕೊಡುತ್ತಾನೆ. ಅಂದರೆ ಇದುವರೆಗೆ ಭರಮನಿಗೆ ಆಯಗಾರಿಕೆ ಕೊಟ್ಟಿಲ್ಲ. ಆ ಕಾರಣದಿಂದ ಅವನು ಬರಲು ನಿರಾಕರಿಸಿದ್ದಾನೆ. ಹಾಗಾಗಿ ಮೊದಲು ಅವನಿಗೆ ಕೊಡಬೇಕಾದ ಮುತ್ತು ರತ್ನಗಳನ್ನು ಆನೆಯ ಮೇಲೆ ಹೇರಿಕೋಡು ಹೋಗಿ ಕೊಟ್ಟರೆ ಬರುತ್ತಾನೆಂದು ಹೇಳುತ್ತಾನೆ. ಅದರಂತೆ ಚಿತ್ತಯ್ಯ ಮುತ್ತು ರತ್ನದ ರಾಸಿಯನ್ನು ಭರಮನ ಮನೆಯ ಮುಂದೆ ಸುರುವಿದಾಗ ಪ್ರತಿಮಾತನಾಡದೆ ಚಿತ್ತಯ್ಯನ ಹಿಂದೆ ಬರುತ್ತಾನೆ. ಬಂದವನು ಕಾಟಯ್ಯನ ಕಾಲುಗಳಿಗೆ ನಮಸ್ಕಾರ ಮಾಡಿ ತಾನೂ ಮಾಡಿದ ತಪ್ಪಿಗೆ ಕ್ಷಮೆ ಕೇಳಿದಾಗ ಕಾಟಯ್ಯ ದೊಡ್ಡ ಒಕ್ಕಲಾಗಿ ಬಾಳು ನೀನು ಎಂದು ಆಶೀರ್ವಾದ ಮಾಡುವುದರ ಜೊತೆಗೆ ಅನೇಕ ಉದಾಹರಣೆಯ ಮೂಲಕ ತಿಳಿ ಹೇಳುತ್ತಾನೆ. "ಬೆಂಕಿಯನ್ನು ನೊಣ ಮುಟ್ಟಿದರೆ ಅಥವಾ ನೊಣವೇ ಬೆಕಿಯನ್ನು ಮುಟ್ಟಿದರೆ ಸಾಯುವುದು ನೊಣವೇ ವಿನಃ ಬೆಂಕಿಯಲ್ಲ. ಹಾಗೆಯೆ ನಾಯಿ ಒರಳು ಕಲ್ಲಿನ ಮೇಲೆ ಉಚ್ಚೆ ಹೊಯ್ಯುತ್ತದೆ, ಅದನ್ನು ಪುನಃ ಬಳಸದೆ ಇರುವುದಕ್ಕೆ ಆಗುತ್ತದಾ? ನಿನೊಂದು ನೆಪಮಾತ್ರ ನನಗಿರುವ ತೂಕ ಎಲ್ಲಿ ಹೋಗುತ್ತೆ ಎಂದು ಹೇಳುತ್ತಾನೆ.

ಅದೇನೆ ಇರಲಿ ಸಂಬಳ ಕೇಳು ಒಪ್ಪಂದ ಮಾಡುತ್ತೇನಿ ಎಂದು ಕಾಟಯ್ಯ ಹೇಳಿದಾಗ, ಒಕ್ಕಳು ಬತ್ತೇವು ಒಂದು ಸಲಕ್ಕೆ ಕೊಡಬೇಕು, ಹನ್ನೊಂದು ಗಿದ್ನ ಅವರೆ ಗುಗ್ರಿ, ತೂಗಿ ಒಂದು ಮಣ

ತೂಗಾದೆ ಒಂದು ಮಣ ಮೆಣಸಿನಕಾಯಿ, ಆರು ನೂರು ಮುಂಗಡ ದುಡ್ಡು ಕೊಡಬೇಕೆಂದು ಕೇಳುತ್ತಾನೆ. ಅದಕ್ಕೆ ಕಾಟಯ್ಯ ಒಪ್ಪಿಕೊಳ್ಳುತ್ತಾನೆ. ಅಲ್ಲಿಗೆ ಎಲ್ಲರೂ ಸೇರಿಕೊಂಡಂತೆ ಆಯಿತು. ಆಗ ಚಿತ್ತಯ್ಯ ಕಾಟಯ್ಯನನ್ನು ಬೇಟೆಗೆ ಹೋಗಲು ಕರೆದಾಗ ನಾನು ಯೋಗಿ ಜಂಗಮ ನಾನು ಏಕೆ ಬರಲಿ ಎಂದು ಕೇಳುತ್ತಾನೆ. ಜೊತೆಗೆ ಈಗ ವಿಷಗಳಿಗೆ ಇದೆ ಅದನ್ನು ಕಳೆದುಕೊಂಡು ಹೋಗುವುದು ಒಳ್ಳೆಯದು ಎಂದು ಹೇಳುತ್ತಾನೆ. ಮೊದಲೇ ಅವಸರದ ಸ್ವಭಾವದ ಚಿತ್ತಯ್ಯ ಕಾಟಯ್ಯನ ಮಾತು ಕೇಳುವುದಿಲ್ಲ. ಕಹಳೆ ಕೆಂಚನನ್ನು ಕರೆದು ಕಹಳೆ ಊದಿಸುತ್ತಾನೆ. ಕಹಳೆ ಊದಿದ ನಂತರ ವಿಷಗಳಿಗೆ ಪಕ್ಕಕ್ಕೆ ಸರಿದು ಅಮೃಗಳಿಗೆ ಬರುತ್ತದೆ. ಆಗ ಹನೇರಡು ಪಾಟಲ ದಂಡು ಚಿತ್ರಗಿರಿ ಊರಿನ ಮುಂದೆ ವಿಸ್ತಾರವಾಗಿ ನಿಲ್ಲುತ್ತದೆ. ಕಹಳೆಯ ಧ್ವನಿಯು ಚಿತ್ತಯ್ಯನ ಹೆಂಡತಿ ಮಾಳಮ್ಮನಿಗೆ ಕೇಳಿಸುತ್ತದೆ. ಅವಳು ದೊರೆಗಳು ಯಾರ ಮೇಲೋ ಯುದ್ದಕ್ಕೆ ಹೋಗುವವರಿದ್ದಾರೆ ಅವರು ಮರಳಿ ಬರವರೋ ಇಲ್ಲವೋ ಹೋಗಿ ಒಂದು ಮಾತನ್ನಾದರೂ ಆಡಿಸಿಬರುತ್ತೇನೆಂದು ದಂಡಿನ ಎದುರಿಗೆ ಬಂದು ನಿಲ್ಲತ್ತಾಳೆ. ಇವಳನ್ನು ನೋಡಿದ ಚಿತ್ತಯ್ಯನ ಕೋಪ ನಡುನೆತ್ತಗೇರುತ್ತದೆ. ಒಳ್ಳೆ ಕೆಲಸಕ್ಕೆ ಹೋಗುವಾಗ ಕರೆತಲೆಯ ಮುಂಡೆ ಎದುರಿಗೆ ಬಂದಳೆಂದು. ಅವಳು ಬಂದ ಕಾರಣವನ್ನು ಕೇಳುವರು. ನೀವೆಲ್ಲರೂ ಬೇಟೆ ಹೋಗುವುದರಿಂದ ನನಗೆ ಅರಮನೆಯಲ್ಲಿರಲು ಬೇಜಾರವಾಗುತ್ತದೆ. ಅದಕ್ಕಾಗಿ ಒಂದು ನಾಯಿ ಮರಿಯಾದರೂ ಕೊಟ್ಟು ಹೋಗಿರಿ ಎಂದು ಕೇಳುತ್ತಾಳೆ. ಇವತ್ತು ನಾಯಿ ಮರಿ ಕೇಳಿದವಳು ನಾಳೆ ನನ್ನ ದರ್ಬಾರ ಕೇಳಬಹುದು, ಆನಂತರ ಸಿಂಹಾಸನ ಕೇಳಬಹುದು ಎಂದು ಆಳುಗಳಿಗೆ ಹೇಳಿ ಅವಳ ಮುಖದ ಮೇಲೆ ಹೊಡೆಸುತ್ತಾನೆ. ಇಬ್ಬರ ಮಧ್ಯೆ ಸಾಕಷ್ಟು ವಾಗ್ವಾದ ನಡೆಯುತ್ತದೆ. ಕೊನೆಗೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಸಹಿಸಿಕೊಳ್ಳಲಾರದೆ ಈ ಮಾತುಗಳನ್ನು ಹೇಳುತ್ತಾಳೆ.

ಹೆಣ್ಣಾಗಿ ಹುಟ್ಟುದಕಿನ್ನ ಮಣ್ಣಾಗಿ ಹುಟ್ಟಿದರೆ

ಮಣ್ಣಿನ ಮ್ಯಾಲೊಂದು ಮರನಾಗಿ ಹುಟ್ಟಿದರೆ

ಅಕ್ಕಿಗಳಿಗೂ ಪಕ್ಷಿಗಳಿಗೂ

ಪುಣ್ಯವಂತರಿಗೆ ನೆರಳಾಗಿ ಇರುತಿನಮ್ಮ ನಾನೂ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಕಾಡುಗೊಲ್ಲರ ಸಾಂಸ್ಕೃತಿಕ ವೀರರ ಚರಿತ್ರೆಯನ್ನು ಗಮನಿಸಿದರೆ ಎಲ್ಲಾ ಸಾಂಸ್ಕೃತಿಕ ನಾಯಕರು ಹೆಣ್ಣನ್ನು ಶೋಷಣೆಗೆ ಒಳಪಡಿಸಿರುವುದನ್ನು ಕಾಣಬಹುದು. ಉದಾ: ಎತ್ತಪ್ಪ, ಚಿತ್ತಯ್ಯ, ಜುಂಜಪ್ಪ, ಮುಂತಾದ ನಾಯಕರು ಹೆಣ್ಣು ಮಕ್ಕಳಿಗೆ ಕೊಡುಬಾರದ ಕಷ್ಟ ಕೊಟ್ಟಿರುವುದನ್ನು ಕಾಣಬಹುದು. ಮಾಳಮ್ಮ ಬೇಟೆ ಆಡವುದು ಬೇಡ, ಬೇಟೆ ಇರದೆ ಮನೆಗೆ ಬರಬೇಡ ಎಂದು ಶಾಪಕೊಡುತ್ತಾಳೆ. ಅದರಂತೆ ಚಿತ್ತಯ್ಯ ಅಡುಗೆ ಮಾಡಲುಬೇಡ, ಉಣ್ಣದೆ ಇರಬೇಡ, ಪರಪುರುಷನ ಸಂಗ ಮಾಡಬೇಡ ಎಂದು ಹೇಳಿ ಹೋಗುತ್ತಾನೆ. ಅಲ್ಲಿಂದ ಮಾಳಮ್ಮ ಕಾಟಯ್ಯನಿಗೆ ನಮಸ್ಕಾರ ಮಾಡಿ ನೇರವಾಗಿ ಕುಂಬಾರರ ಕೇರಿಗೆ ಹೋಗಿ ನಾಯಿಮರಿಯನ್ನು ಕದ್ದುಕೊಂಡು ಬಂದು ಸಾಕುತ್ತಾಳೆ. ಅದರ ಜೊತೆಗೆ ಒಂದು ಗಿಡುಗದ ಮರಿಯನ್ನು ಸಾಕುತ್ತಾಳೆ.

ಚಿತ್ತಯ್ಯ ದಂಡನ್ನು ಕರೆದುಕೊಂಡು ಗೊಡಗು ಎತ್ತಿ ಹಿಡಿಸಿಕೊಂಡು, ಕಹಳೆ ಓದಿಸಿಕೊಂಡು ಅಡ್ಡ ಆರುಗಾವೂದ ಉದ್ದ, ಮೂರು ಗಾವೂದ, ಅಂದರೆ ಎಲ್ಲಿವರೆಗೆ ಕಣ್ಣಿನ ದೃಷ್ಟಿ ಇರುತ್ತದೋ ಅಲ್ಲಿಯವರೆಗೆ ದಂಡು ವಿಸ್ತರಿಸಿಕೊಂಡಿದೆ. ದಂಡು ಹಗಲು ಏಳು ದಿನ ಇರುಳು ಏಳು ದಿನ ನಡೆದು ಸುಸ್ತಾಗಿ ಒಂದು ಕಡೆ ನಿಂತಿತು. ಆಗ ಕಾಟಯ್ಯ ಕಾರಣ ಕೇಳಿದಾಗ, ಚಿತ್ತಯ್ಯನ ದಂಡು ಹದಿನಾಲ್ಕು ದಿನದಿಂದ ಏನು ತಿಂದಿಲ್ಲ, ಹಾಗಾಗಿ ಇವತ್ತು ಒಂದು ದಿನ ಇಲ್ಲಿ ಇದ್ದು ನಾಳೆ ಮುಂದೆ ಹೋಗುವುದು ಒಳ್ಳೆಯದು ಎಂದು ಹೇಳಿದಾಗ, ಕಾಟಯ್ಯ ಇದು ಕರಿಮಲೆ ಇಲ್ಲಿ ಕಳ್ಳರ ಕಾಟಜಾಸ್ತಿ, ಇಲ್ಲಿರುವುದು ಬೇಡ ಕೆಂಗರು ಮಲೆಗೆ ಹೋಗಾಣ ಎಂದು ಹೇಳಿದರೆ, ಬಮ್ಮಯ್ಯ ಕಾಟಯ್ಯನನ್ನು ಅಂಜಬುರುಕ, ಹೇಡಿ ಕಾಟಯ್ಯ ಎಂದು ಹೀಯಾಳಿಸುತ್ತಾನೆ. ಇದರಿಂದ ಕಾಟಯ್ಯನ ಮನಸ್ಸಿಗೆ ಬಹಳ ನೋವಾಗುತ್ತದೆ. ಅವನು ತನ್ನ ದಂಡು ಕರೆದುಕೊಂಡು ಕರಿಮಲೆ ಬಿಟ್ಟು ಕೆಂಗರು ಮಲೆಯಲ್ಲಿ ಡೇರೆ ಹೊಡೆಸಿದನು. ಚಿತ್ತಯ್ಯ ನರಸಿಂಹನಿಗೆ ಹೇಳಿ ಹನ್ನೆರಡು ಸಾವಿರ ದಂಡಿಗೆ ಅಡುಗೆ ಮಾಡಿಸುತ್ತಾನೆ. ಇವರು ದೇವತಾ ಮನುಷ್ಯರಾಗಿರುವುದರಿಂದ ಕಾರಣ ಹಾಲು ಸಕ್ಕರೆಯಿಂದ ಪಂಚಾಮೃತದ ಅಡುಗೆ ಮಾಡಿಸುತ್ತಾನೆ. ಅಡುಗೆ ಸಿದ್ಧವಾಗುವ ಹೊತ್ತಿಗೆ ಚಿತ್ತಯ್ಯ ಕಾಟಯ್ಯನ ಡೇರೆಗೆ ಹೋಗಿ ಕಾಟಯ್ಯನನ್ನು ಊಟಮಾಡಲು ಕರೆದರೆ ಕಾಟಯ್ಯ ಊಟಕ್ಕೆ ಬರುವುದಿಲ್ಲ. ಏಕೆಂದರೆ ಬಮ್ಮಯ್ಯನ ಮಾತಿನಿಂದ ಬೇಜಾರಾಗಿರುತ್ತದೆ. ಅಷ್ಟೇ ಅಲ್ಲ ಅಣ್ಣ ಅಂಬ ಸೊಲ್ಲ ಮರಿರಮ್ಮ ತೊರಿರಮ್ಮ ಎಂದು ಹೇಳುತ್ತಾನೆ. ಚಿತ್ತಯ್ಯ ಕಾಲು ಹಿಡಿದು ಬೇಡಿಕೊಂಡರು ಬರುವುದಿಲ್ಲ. ನಂತರ ನರಸಿಂಹ ಬಂದು ಕರೆಯುತ್ತಾನೆ. ಆಗಲೂ ಅದೇ ಮಾತನ್ನು ಹೇಳಿ ವಾಪಸ್ಸು ಕಳಿಸುತ್ತಾನೆ. ಹಿರಿಯಣ್ಣ ನೊಂದುಕೊಂಡರೆ ಒಳ್ಳೆಯದಾಗಲ್ಲ ಎಂದು ಚಿತ್ತಯ್ಯ ನರಸಿಂಹ ಊಟಮಾಡದೆ ಇರುತ್ತಾರೆ.

ತಿರಿಗಿಣಿ ಪಟ್ಟಣವನ್ನು ಆಳುವ ದೊರೆಗಳಾದ ಯರಗುಂಟೆ ಯರಜಿನ್ನ ಎಂಬುವವರು ಏಳುಸಾವಿರ ಕಳ್‌ಕೊರಮರ ದಂಡು ಸೇರಿಸಿಕೊಂಡು ಬೇಟೆ ಆಡಲು ಕತ್ತಲು ಕರಿಮಲೆಗೆ ಬರುತ್ತಾರೆ. ಕತ್ತಲು ಕರಿಮಲೆಯಲ್ಲಿ ಎಂದೂ ಕಾಣದ ಬೆಳಕು ಕಂಡು ತಮ್ಮ ದೊರೆಗಳನ್ನು ಕಳ್‌ಕೊರಮರು ಕೇಳಿದಾಗ ದೊರೆಗಳು ಈ ರೀತಿ ಹೇಳುತ್ತಾರೆ. ಕಾಟಯ್ಯ, ಚಿತ್ತಯ್ಯ, ಓಬಳಪತಿ ಇವರು ಚಿತ್ತರಗಿರಿಗೆ ಹೆಚ್ಚಿನದೊರೆಗಳು ಕೆಂಡದಾಗೆ ಹುಟ್ಟವರೆ ಕೆಂಡದಾಗೆ ಬೆಳೆದವರೆ. ಈ ದೊರೆಗಳು ಬೇಟೆ ಆಡಲು ಹೆಗ್ಗಾಳೆ ಮತ್ತು ಹವಳದಗೊಡುಗು ಹಿಡಿಸಿಕೊಂಡು ಬಂದವರೆ, ಆ ಗೊಡಗಿನ ಬೆಳಕು ಕತ್ತಲು ಕರಿಮಲೆ ತುಂಬ ಹರಡಿಕೊಂಡಿದೆ ಎಂದು ಹೇಳುತ್ತಾರೆ. ಅವರ ಸಹವಾಸ ನಮಗ್ಯಾಕೆ ಎಂದು ಹೇಳಿದಾಗ ಗೊಡಗು ನೊಡಲು ಅಪ್ಪಣೆ ಕೇಳುತ್ತಾರೆ. ಕೊರಮರಿಗೆ ಮೊದಲು ನಿರಾಕರಿಸಿದ ದೊರೆಗಳು ಅವರು ಪೀಡಿಸಿದ ನಂತರ ಕೊಡುತ್ತಾರೆ. ಕೊರಮರು ಗೊಡಗಿನ ಹತ್ತಿರ ಬಂದು ನೋಡುತ್ತಾರೆ. ಗೊಡಗು ನಿಗಿ ನಿಗಿ ಹೊಳೆಯುತ್ತಿರುತ್ತದೆ. ಅಲ್ಲಿ ಯಾರು ಎನ್ನುವವರೆ ದಿಕ್ಕಿರುವುದಿಲ್ಲ. ಆಗ ಕೊರಮರ ಕಣ್ಣು ಗೊಡಗಿನ ಮೇಲೆ ಬೀಳುತ್ತದೆ. ದೊರೆಗಳ ಬಳಿಗೆ ಬಂದು ಗೊಡಗು ಕದಿಯುವುದಾಗಿ ಕೇಳಿದಾಗ ನೀವು ತಿರುಗಿಣಿ ಪಟ್ಟಣ ಹಾಳು ಮಾಡಬೇಕೆಂದು ಬಯಸಿದ್ದಿರಾ ಕಾಟಯ್ಯ ಒಳ್ಳೆವನಲ್ಲ, ಅವನು ಯೋಗಿ, ಹಾಗಾಗಿ ಅದರ ಸುದ್ದಿ ನಮಗೆ ಬೇಡ ಎಂದು ಎಷ್ಟು ಹೇಳಿದರೂ ಕೇಳದೆ,

ಅವರಿಗೆ ಅವಮಾನವಾಗುವಂತೆ ಮಾತನಾಡಿ ಅವರ ಅಪ್ಪಣೆ ಪಡೆದು ಗೊಡಗು ಕದಿಯಲು ಬರುತ್ತಾರೆ. ಅವರು ಬಂದ ಸಮಯದಲ್ಲಿ ಹನ್ನೆರಡು ಪಾಟಲ ದಂಡು ಪ್ರಜ್ಞೆ ತಪ್ಪಿ ಮಲಗಿರುತ್ತದೆ. ಇದನ್ನು ಕಾಟಯ್ಯ ಗಮನಿಸುತ್ತಿರುತ್ತಾನೆ. ತಿರುಗಿಣಿಗೆ ಅವನತಿಯ ಕಾಲ ಹತ್ತಿರ ಬಂದಿತೆಂದು ಮನಸ್ಸಿನಲ್ಲಿ ಅಂದು ಕೊಳ್ಳುತ್ತಾನೆ. ಕಾಟಯ್ಯ ಚಿತ್ತಯ್ಯನ ತಲೆದಿಂಬಿಗೆ ಬಂದು ನಿಲ್ಲುತ್ತಾನೆ. ಚಿತ್ತಯ್ಯನಿಗೆ ಎಚ್ಚರವೇ ಆಗುವುದಿಲ್ಲ. ನರಸಿಂಹನ ತಲೆದಿಂಬಿಗೆ ಬಂದು ಎಚ್ಚರಿಸುತ್ತಾನೆ.

ಕೇಳಯ್ಯ ನರಸಿಂಹ ನಾನೂನೆ ಹೇಳುತೀನಿ

ಮಡದಿ ಮಾಳಮ್ಮನ್ನ ಚಿತ್ತಯ್ಯ ಮಗ್ಗುಲಾಗೆ

ಮನಗಿಸಿಕೊಂಡು ಮನಗಿದ್ದ

ಯಾರೂನೆ ಪರಸೀಮೆಯ ದೊರೆಮಗನೆ ಬಂದು

ಕದ್ದುಕೊಂಡು ಹೋಗವರೆ ಎದ್ದೇಳು ಬೆನ್ನೇ ನೀನೂ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಗೊಡಗು ಎಂಬುದು ಚಿತ್ತಯ್ಯನ ಹೆಂಡತಿಯಾದ ಮಾಳಮ್ಮನಿಗೆ ಸಮನಾದುದು. ಗೊಡಗು ಕಳೆದುಕೊಳ್ಳುವುದು ಒಂದೇ ಹೆಂಡತಿಯನ್ನು ಕಳೆದುಕೊಳ್ಳುವುದು ಒಂದೆ ಎಂಬುದನ್ನು ಈ ಕಾವ್ಯದ ಮೂಲಕ ತಿಳಿಯಬಹುದು. ಕಾಟಯ್ಯ ಎಚ್ಚರಿಸಿದಾಗ ಎದ್ದು ನೋಡುತ್ತಾನೆ. ನರಸಿಂಹ ಕತ್ತಲು ಕರಿಮಲೆಯಲ್ಲಿ ಮಂಕು ಕವಿದಿದೆ ನೀಲಿ ಕುದುರೆ ಹತ್ತಿಕೊಂಡು ಆಕಾಶದಲ್ಲಿ ತೇಲಾಡುತ್ತಿರುತ್ತಾನೆ. ಅವನ ಪ್ರಾಣ ಹೋಗುವು ದು ಇನ್ನು ಒಂದು ಗಳಿಗೆ ಮಾತ್ರ ಇರುತ್ತದೆ. ಕಾಟಯ್ಯ, ನರಸಿಂಹ ಇರುವಂತಹ ಸ್ಥಳಕ್ಕೆ ಹೋಗಿ ಅವನನ್ನು ಬದುಕಿಸುತ್ತಾನೆ. ನಾನೊಬ್ಬ ಅಣ್ಣ ಏನೋ ಬಾಯಿ ತಡಿಲಾರದೆ ಒಂದು ಮಾತು ಆಡಿದ್ದು ನಿನಗೆ ಇಷ್ಟೊಂದು ಕೋಪಬಂದಿತೆ. ಗುರು ಹಿರಿಯರು ಸಂಪಾದಿಸಿದ ಗೊಡಗು ನುಂಗಿ ನೀರು ಕುಡಿದು ಬಿಟ್ಟಿರಲ್ಲ ಎಂದು ಬಯ್ಯುತ್ತಾನೆ. ನಂತರ ಅವನಿಗೆ ಬುದ್ದಿ ಹೇಳಿ ಕರೆದುಕೊಂಡು ಬರುತ್ತಾನೆ.

ನಾಲ್ಕು ಜನರನ್ನು ದುಡಿಯಲು ಕಳುಹಿಸಿ ಕಾಟಯ್ಯ ಚಿತ್ತಯ್ಯನ ಮಂಕು ಬೂದಿಯನ್ನು ತೊಳೆದು ಕಲಪಲ್ಲಿ ನಾಯಕನನ್ನು ಗುಂಗಾರಿ ಗೂಡಿನಲ್ಲಿ ವಾಸಮಾಡುವಂತೆ ಮಾಡಿದನು. ಬಮ್ಮಯ್ಯನನ್ನು ಕಬ್ಬಿಣದ ಕಾಗೆಯ ಜೊತೆ ಸರಸವಾಡುವಂತೆ ಮಾಡಿದನು. ಚಿತ್ತಯ್ಯನನ್ನು ಕತ್ತೆಯನ್ನು ಕಾಯುವ ಕೆಲಸಕ್ಕೆ ನೇಮಿಸಿದನು.

೨.೩,೩ ತಿರುಗಿಣಿ ಪಟ್ಟಣದ ಪ್ರವೇಶ

ಕಾಟಯ್ಯ ನಾಲ್ಕು ಜನರನ್ನು ದುಡಿಯಲು ಕಳುಹಿಸಿದ ನಂತರ ಅವರಲ್ಲಿ ಒಬ್ಬೊಬ್ಬರನ್ನು ಕರೆದು ಮೊದಲಿಗೆ ಕಲಪಲ್ಲಿಯನ್ನು ಗೊಡಗು ಎಲ್ಲಿದೆ ಎಂಬುದರ ಸುಳಿವು ಹೇಳು ಎಂದು ಕೇಳುತ್ತಾನೆ ಆಗ ಕಲಪಲ್ಲಿನಾಯಕ ನನಗೆ ಗೊತ್ತಿದ್ದರೆ ಸ್ವಾಮಿ ನಾನು ಐದು ನಿಮಿಷ ಗುಂಗಾರಿ

ಪೆಂಟ್ಯಾಗೆ ವಾಸಮಾಡುತ್ತಿರಲಿಲ್ಲ. ಬ್ರಾಹ್ಮಣ ಸಂಚುಗಾರ ಬಮ್ಮಯ್ಯನನ್ನು ಕೇಳಲು ಅವನು ನನಗೆ ಗೊತ್ತಾಗಿದ್ದರೆ ನಾನು ಕಬ್ಬಿಣದ ಕಾಗೆ ಜೊತೆ ಗುದ್ದಾಡುತ್ತಿರಲಿಲ್ಲ ಎಂದು ಹೇಳುತ್ತಾನೆ. ನಿನಗೆ ಗೊತ್ತೆನೋ ಚಿತ್ತಯ್ಯ ಎಂದು ಕೇಳಿದಾಗ ಅವನು ನನಗೆ ಗೊತ್ತಾಗಿದ್ದರೆ ನಾನೂ ಕತ್ತೆಯ ಕಾಲು ಹಿಡಿಯುತ್ತಿರಲಿಲ್ಲ ಎಂದು ಹೇಳುತ್ತಾನೆ. ಕೊನೆಗೆ ನರಸಿಂಹ ಕಾಟಯ್ಯ ನಿನಗೆ ಬಿಟ್ಟರೆ ಬೇರೆ ಯಾರಿಗೂ ಗೊತ್ತಿಲ್ಲ ಎಂದು ತಿಳಿದು ನೀನೆ ಹೇಳಬೇಕೆಂದು ಕೇಳುತ್ತಾನೆ. ಆಗ ಕಾಟಯ್ಯ ಮೂಡ ಪಡುವ ನಡೆಯೋ ತೆಂಕ ಬಡಗ ನಡೆಯೋ ದಿಕ್ಕಿನಾಗೆ ಕೊರಮ ಮಲಗವನೆ ಅಲ್ಲಿಗೆ ಗೊಡಗು ಹೋಗಿದೆ ಎಂದು ಹೇಳುತ್ತಾನೆ.

ಕಾಟಯ್ಯ ಗೊಡಗು ಹೊತ್ತುಕೊಂಡು ಹೋದವರಿಗೆ ಈ ರೀತಿ ಶಾಪ ಹಾಕುತ್ತಾನೆ. 'ಮುತ್ತಿನ ಗೊಡಗು ಮಟ್ಟಕೊಂಡೋದರು ಅವರ ಪುತ್ರಮ್ಮನೆ ಸತ್ತು ಹೊಗಲಿ' ಎಂದು ಶಾಪ ಹಾಕುತ್ತಾನೆ. 'ಹವಳದ ಗೊಡಗು ಹಗಲು ಹೊತ್ತಿನಲ್ಲಿ ಹೋಗುವಾಗ ಅವರ ಮಕ್ಕಳು ಸತ್ತು ಮನೆ ಸುಟ್ಟು ಹೋಗಲಿ' ಎಂದು ಶಾಪ ಹಾಕುತ್ತಾನೆ. ಈ ಮೂವರು ಕೊಟ್ಟಂತ ಶಾಪ ತಟ್ಟನೆ ತಿರುಗಿಣಿ ಪಟ್ಟಣಕ್ಕೆ ಬಡಿಯುತ್ತದೆ. ಕಟ್ಟೆಯ ಕಲ್ಲು ಸಡಿಲಿದಂಗೆ ತಿರುಗಿಣಿ ಪಟ್ಟಣದ ಅವನತಿಯ ಕಾಲ ಕೂಡಿ ಬಂದಿತೆಂದು ಮೂವರು ಮಾನವರು ಮಾತನಾಡುತ್ತಾರೆ. ಹವಳದ ಗೊಡಗು ತಿರುಗಿಣಿ ಪಟ್ಟಣ ಸೇರಿದ್ದುದರಿಂದ ತಿರುಗಿಣಿಗೆ ಅವನತಿಯ ಕಾಲ ಬಂದಿತಯ್ಯೋ. ಈಗ ತಿರುಗಿಣಿ ಪಟ್ಟಣದ ನುಗ್ಗಿ ಯಾರು ಗೊಡಗು ತರುವರು ಎಂದು ಕಾಟಯ್ಯ ಕೇಳುತ್ತಾನೆ. ಎದುರಿಗೆ ಬಂದವರನ್ನು ಹಿಡಿದು ಮುಕ್ಕುತೀನಿ, ಕಡಿತೀನಿ, ತೇಗುತೀನಿ, ಗಸಗಸ ತೀಡುತೀನಿ ಅಂದು ಹೇಳುತ್ತಾನೆ. ನೀನು ಅಂಥ ಧೀರನಾಗಿದ್ದರೆ ಹಗಲು ಹೊತ್ತಿನಲ್ಲಿ ಗೊಡಗು ಹೋಗುವಾಗ ಏನು ಮಾಡುತ್ತಾ ಇದ್ದೆ ಎಂದು ಹೇಳುತ್ತಾನೆ.

೨.೩.೪ ಅಗಸರ ಲಕ್ಕಮ್ಮನ ಮಗನಾಗಿ ಚಿತ್ತಯ್ಯ

ತಿರುಗಿಣಿ ಪಟ್ಟಣಕ್ಕೆ ಯಾರು ಹೋಗಬೇಕು ಎಂಬ ಚರ್ಚೆ ನಡೆದು ಕಾಟಯ್ಯ ಚಿತ್ತಯ್ಯನಿಗೆ ನೀನೇ ಹೋಗಬೇಕು, ಎಂದು ಹೇಳುತ್ತಾನೆ. ಏಕೆಂದರೆ ನೀನು ಹೋದರೆ ಮಾತ್ರ ಗೊಡಗು ತಿರುಗಿಣಿ ಪಟ್ಟಣದಿಂದ ಹೊರಗೆ ತರಲು ಸಾಧ್ಯ ಎಂದು ಹೇಳುತ್ತಾನೆ. ಆಗ ಚಿತ್ತಯ್ಯ ಹೋಗಲು ಸಿದ್ದನಾಗಿ ನಿಲ್ಲುತ್ತಾನೆ. ಅಣ್ಣ ಕಾಟಯ್ಯ ಮೂರು ತಿಂಗಳಿಗೆ ಆಗುವಷ್ಟು ಪತ್ರ ಬರೆದು ಚಿತ್ತಯ್ಯನ ಜೇಬಿಗೆ ತುಂಬುತ್ತಾನೆ. ಅಗಸರ ಲಕ್ಕಮ್ಮನ ಮಗನಾಗಿ ಹೋಗಬೇಕೆಂದು ಕಾಟಯ್ಯ ಹೇಳುತ್ತಾನೆ. ಅಗಸರ ಲಕ್ಕಮ್ಮನ ಮಗನಾಗಬೇಕು ಎಂದು ಹೇಳಿದಾಗ ಹೋಗುವುದಿಲ್ಲ ಎಂದು ಹೇಳುತ್ತಾ ಏಕೆಂದರೆ ಅಗಸರು ಕಾಡುಗೊಲ್ಲರಿಗಿಂತ ಕೀಳು ಕುಲದವರು. ಕಾಡುಗೊಲ್ಲರು ಇಂದೂ ಸಹ ಹಾಗೆ ಭಾವಿಸಿದ್ದಾರೆ. ಹೋಗುವುದು ಅನಿವಾರ್ಯ ಎಂದು ತಿಳಿದಾಗ ಚಿತ್ತಯ್ಯ ನಿಂಬೆಗಿಡ ಕುಂದಿದಂತೆ ಕುಂದುತ್ತಾನೆ. ಶಿವ ಪಾವತಿಯರ ಮೇಲೆ ಆಣೆ ಮಾಡುತ್ತಾನೆ. ಬಾಳೆ ಗಿಡದಂತೆ ಸೊರಗಿ ಹೋಗುತ್ತಾನೆ. ಏನಾದರೂ ಹೇಳು ಮಾಡುತ್ತೇನೆ. ಆದರೆ ಅಗಸರ ಲಕ್ಕಮ್ಮನ ಮಗನಾಗಿ ಮಾತ್ರ ಹೊಗುವುದು ನನ್ನಿಂದಾ ಆಗುವುದಿಲ್ಲ. ಎಂದು ಹೇಳಿದಾಗ ಚಿತ್ತಯ್ಯನ ಮನಸ್ಸು ಬದಲಾಯಿಸಲು ಕಾಟಯ್ಯ ಆಂಜನೇಯನ ಕತೆಯನ್ನು ಹೇಳುತ್ತಾನೆ.

೨.೩.೫ ಕಾಡುಗೊಲ್ಲರ ದೃಷ್ಟಿಯಲ್ಲಿ ಆಂಜನೇಯನ ಸೃಷ್ಟಿ

ಅಂಜನಾದೇವಿಯನ್ನು ತಂದೆ ತಾಯಿಗಳು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಿದ್ದರು. ಕಣ್ಣು ಕಾಣದ ಕುರುಡಿಯು ಕಾಡಿನಲ್ಲಿ ಸಿಗುವ ಹಣ್ಣು ಹಂಪಲುಗಳನ್ನು ತಿಂದು ಜೀವ ಉಳಿಸಿಕೊಂಡಿದ್ದಳು. ಒಂದು ದಿನ ಅದೇ ಕಾಡಿಗೆ ಶಿವ–ಪಾರ್ವತಿಯರು ಲೋಕಸಂಚಾರಕ್ಕೆ ಬರುತ್ತಾರೆ. ಬಂದಂತಹ ಸಮಯದಲ್ಲಿ ಅವರಿಗೆ ಅರಣ್ಯದಲ್ಲಿ ಆನೆಗಳು ಕೂಟ ಕೂಡಿರುವುದು ಕಣ್ಣಿಗೆ ಬೀಳುತ್ತದೆ. ಅದನ್ನು ನೋಡಿದ ಪಾರ್ವತಿಯು ಶಿವನೊಂದಿಗೆ ಕೂಟ ಕೂಡಲು ಬಯಸುತ್ತಾಳೆ. ಇದನ್ನು ಶಿವ ನಿರಾಕರಿಸಿ ಹಗಲಿನಲ್ಲಿ ಮನುಷ್ಯರು ಕೂಟ ಕೂಡಬಾರದೆಂದು ಹೇಳುತ್ತಾನೆ. ಪಾರ್ವತಿಯು ಹಠಮಾಡುತ್ತಾಳೆ. ಆಗ ಶಿವ ಮತ್ತು ಪಾರ್ವತಿ ಇಬ್ಬರು ಕೋತಿಗಳ ವೇಷಧರಿಸಿ ಕೂಟ ಕೂಡುತ್ತಾರೆ. ಇವರಿಬ್ಬರ ಕೂಟದಿಂದ ಬಂದ ವೀರ್ಯ ನದಿಯಲ್ಲಿ ಬೀಳುತ್ತದೆ. ಅದೇ ಸಮಯದಲ್ಲಿ ಅಂಜನಾದೇವಿಯು ನದಿಯಲ್ಲಿ ನೀರು ಕುಡಿಯುತ್ತಿರುತ್ತಾಳೆ. ಆ ನೀರಿನಲ್ಲಿ ಸೇರಿಕೊಂಡ ವೀರ್ಯ ಅವಳ ದೇಹ ಸೇರಿಕೊಳ್ಳುತ್ತದೆ. ಇದರಿಂದಾಗಿ ಆಕೆ ಗರ್ಭಧರಿಸುತ್ತಾಳೆ. ಆಕೆಯ ಹೊಟ್ಟೆಯಲ್ಲಿರುವಾಗಲೇ ಹನುಮಂತ ಮಾತನಾಡುತ್ತಿರುತ್ತಾನೆ. ಇವನ ಮಾತುಗಳನ್ನು ಕೇಳಿ ಅವಳು ಭಯದಿಂದ "ಇದು ಯಾವುದೋ ದೆವ್ವನೋ ಪೀಡೆಯೋ ಇರಬೇಕು" ಎಂದು ಗೋಳಾಡುತ್ತಾಳೆ. ಆಗ ಹನುಮಂತ ನಾನು ದೆವ್ವವೂ ಅಲ್ಲ ಪೀಡೆಯೂ ಅಲ್ಲ. ನಾನು ದೇವಪುತ್ರ ಅಂಜಬೇಡ ಎಂದು ಹೇಳುತ್ತಾನೆ. ಒಂಬತ್ತು ತಿಂಗಳು ತುಂಬಿದ ನಂತರ ಅಂಜನದೇವಿಯು ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗು ಮೈಯೆಲ್ಲ ಕೂದಲು, ಮತ್ತು ಕೈಬೆರಳುಗಳಲ್ಲಿ ಉದ್ದವಾದ ಉಗುರುಗಳಿರುತ್ತವೆ. ಅವನ ಜನನ ಬೆನ್ನಿನಲ್ಲಿ ಆಗುತ್ತದೆ. ಅವನು ಹುಟ್ಟಿದ ಸಮಯದಲ್ಲಿ ಅವನಿಗೆ ನೀರು ಹೊಯ್ಯುವವರು ದಿಕ್ಕಿರುವುದಿಲ್ಲ. ಆಗ ಹರಿಯುವಂತ ಸಮುದ್ರವನ್ನು ತಾಯಿಯ ಕಡೆ ತಿರುವಿದನು. ನಂತರ ತಾಯಿಯನ್ನು ಹಾಲು ಕೊಡಲು ಕೇಳಿದಾಗ ಇವನು ರಕ್ತವನ್ನು ಹೀರುತ್ತಾನೆ ಎಂದು ಬಗೆದು ದೊನ್ನೆಮಾಡಿ ಅದರ ಮೂಲಕ ಹಾಲು ಕೊಡುತ್ತಾಳೆ. ಹಾಲು ಅವನ ಬಳಿ ಬರುವುದರೊಳಗೆ ಚೆಲ್ಲಿ ಹೋಗುತ್ತವೆ. ಆಗ ದೊನ್ನೆಯನ್ನು ನೆಕ್ಕಿಕೊಂಡು ತಾಯಿಗೆ ಹಣ್ಣು ಹಂಪಲು ತಂದುಕೊಡುತ್ತಾನೆ. ನಂತರ ನನಗೆ ಹಸಿವು ನೀಗಿಲ್ಲ ಎಂದು ಪುನಃ ಹಾಲುಕೊಡುವಂತೆ ಕೇಳುತ್ತಾನೆ. ಸೂರ್ಯ–ಚಂದ್ರನ ತೋರಿಸಿ ಅವರೆ ನಿನಗೆ ಹಣ್ಣುಗಳು ಎಂದು ಹೇಳುತ್ತಾಳೆ. ಹನುಮಂತ ಸೂರ್ಯ ಉದಯಿಸುವುದನ್ನೆ ಕಾಯುತ್ತಿರುತ್ತಾನೆ. ಸೂರ್ಯ ಹುಟ್ಟಿದ ತಕ್ಷಣ ಹಣ್ಣು ಎಂದು ತಿಳಿದು ನುಂಗಲು ಹೋಗುತ್ತಾನೆ. ಇವನು ಬರುವುದನ್ನು ನೋಡಿದ ಸೂರ್ಯನು ಇವನ್ಯಾರೋ ದೇವತೆಯ ಪಿಂಡ ಇರಬೇಕೆಂದು ತಿಳಿದು ಭಯದಿಂದ ತನ್ನ ಕಿರಣಗಳ ಮೂಲಕ ಅವನ ಕಣ್ಣುಗಳನ್ನು ಸುಟ್ಟು ಸಮುದ್ರಕ್ಕೆ ಎಸೆಯುತ್ತಾನೆ. ಸಮುದ್ರದಲ್ಲಿರುವ ಜಲಚರಗಳು ಅವನ ದೇಹವನ್ನು ತಿನ್ನುತ್ತವೆ. ಇದರಿಂದಾಗಿ ವಾಯುದೇವ ಮುನಿಸಿಕೊಂಡು ಹುಣಿಸೆ ಮರದ ಪೊಟರೆ ಒಳಗೆ ಅವಿತುಕೊಳ್ಳುತ್ತಾನೆ. ಇಡೀ ಪ್ರಕೃತಿಯೆ ಜಡವಾಗುತ್ತದೆ. ತ್ರಿಮೂರ್ತಿಗಳಿಗೆ ಚಿಂತೆಯಾಗಿ ವಾಯು ದೇವನನ್ನು ಹುಡುಕಿಕೊಂಡು ಬರುತ್ತಾರೆ. ಎಲ್ಲಿ ನೋಡಿದರೂ ವಾಯುದೇವನ ಸುಳಿವಿಲ್ಲ. ಒಂದು ಕತ್ತೆ ಕರಿಕೆಯನ್ನು ಮೇಯುವುದು ನಂತರ ಹುಣಿಸೆ ಮರದ ತೊಳ್ಳೆಗೆ ತನ್ನ ಮೂಗು

ಇಡುತ್ತಿರುತ್ತದೆ. ಆ ತ್ರಿಮೂರ್ತಿಗಳು ವಾಯು ದೇವನನ್ನು ಹೊರಗೆ ಕರೆದು ಕೇಳಿದಾಗ ತನ್ನ ಮಗನಿಗಾದ ವಿಪತ್ತನ್ನು ತ್ರಿಮೂರ್ತಿಗಳು ಸರಿಪಡಿಸುವುದಾಗಿ ಹೇಳಿ ಅದರಂತೆ ಸಮುದ್ರ ಒಳಗೆ ಬಿದ್ದ ಹನುಮಂತನನ್ನು ತಿಂದಿರುವ ಎಲ್ಲಾ ಜಲಚರ ಕೀಟಗಳು ತಾವು ತಿಂದಿರುವ ಭಾಗಗಳನ್ನು ಕೇಳಿದಾಗ, ಏಡಿ ಮಾತ್ರ ಒಂದು ಕಣ್ಣು ಕೊಟ್ಟು ಇನ್ನೊಂದು ಕಣ್ಣು ನಾನು ತಿಂದಿಲ್ಲ ಎಂದು ಸುಳ್ಳು ಹೇಳುತ್ತದೆ. ಆಗ ತ್ರಿಮೂರ್ತಿಗಳು ಅದನ್ನು 'ಅಡ್ನಾಡಿ' ಎಂದು ಕರೆದರು. ಜೀವಸಂಕುಲವನ್ನು ಕಾಪಾಡಲು ತ್ರಿಮೂತಿಗಳು ಕತ್ತೆಯ ಕಾಲು ಹಿಡಿದರು. ಅಂತಹದ್ದರ ನೀನು ಗೊಡಗು ತರಲು ಅಗಸರ ಲಕ್ಕಮ್ಮನ ಮಗನಾಗುವುದರಲ್ಲಿ ತಪ್ಪೇನು ಎಂದು ಕಾಟಯ್ಯ ಚಿತ್ತಯ್ಯನನ್ನು ಅಗಸರ ಲಕ್ಕಮ್ಮನ ಮಗನಾಗಲು ಒಪ್ಪಿಸುತ್ತಾನೆ.

೨.೨.೬ ತಿರಿಗಿಣಿ ಪಟ್ಟಣದ ನಾಶ

ಚಿತ್ತಯ್ಯ ತಿರುಗಿಣಿ ಪಟ್ಟಣಕ್ಕೆ ಹೋಗಲು ಸಿದ್ದತೆ ಮಾಡಿಕೊಂಡು ನಿಂತ ಸಮಯದಲ್ಲಿ ಕಾಟಯ್ಯನಿಗೆ ಎಲ್ಲಿಲ್ಲದ ದುಖಃವಾಗುತ್ತದೆ. ಏಕೆಂದರೆ ಚಿತ್ತಯ್ಯನಿಗೆ ತಿರುಗಿಣಿಯಲ್ಲಿ ವಾಸವಾಗಿರುವುದು ಕೊರಮರ ದಂಡು. ಆ ಪಟ್ಟಣದಲ್ಲಿ ಬಂದು ಬಳಗ ಇಲ್ಲ. ಅದರಲ್ಲೂ ಅದು ಮ್ಯಾಬೇಡರ ಪಟ್ಟಣ. ಹೋದವನು ವಾಪಸ್ಸು ಬರುತ್ತಾನೋ ಇಲ್ಲವೋ ಎಂಬ ಭಯ ಕಾಡುತ್ತದೆ. ಇದರಿಂದಾಗಿ ಚಿತ್ತಯ್ಯನಿಗೂ ಕಾಟಯ್ಯನನ್ನು ಬಿಟ್ಟು ಹೋಗಲು ಇಷ್ಟವಿರುವುದಿಲ್ಲ. ಆ ಅಣ್ಣ ತಮ್ಮಂದಿರ ಅಗಲುವಿಕೆಯ ವಿರಹ ಮನಷ್ಯನ ಮನಸ್ಸನ್ನು ಕರಗಿಸುತ್ತದೆ. ಬಮ್ಮಯ್ಯನ ಮಾತು ಕೇಳಿದೆ ನೀನೂ ಈಗ ಬಮ್ಮಯ್ಯ ಬಂದಾನೇನೋ ಎಂದು ಕಾಟಯ್ಯ ಗೋಳಾಡುತ್ತಾನೆ. ಇಬ್ಬರು ಅಣ್ಣ ತಮ್ಮರು ಒಬ್ಬರನ್ನೊಬ್ಬರು ತಬ್ಬಿಕೊಂಡು ಗೋಳಾಡುತ್ತಾರೆ. ಅಗಲುವುದು ಅನಿವಾರ್ಯವಾಗಿರುವುದರಿಂದ ಚಿತ್ತಯ್ಯ ಕಾಟಯ್ಯನನ್ನು ಬಿಟ್ಟು ಹೋಗುತ್ತಾನೆ. ಇವನು ಹೋಗುವ ಸಮಯಕ್ಕೆ ಸರಿಯಾಗಿ ಅಗಸರ ಲಕ್ಕಮ್ಮ ಮದ್ಯಾಹ್ನದ ಊಟ ಮಾಡಿ ಅಡಿಕೆ ಎಲೆ ಹಾಕಿಕೊಳ್ಳುತ್ತಿರುತ್ತಾಳೆ. ಇದೇ ಸಮಯವನ್ನು ನೋಡಿ ಚಿತ್ತಯ್ಯ ಲಕ್ಕಮ್ಮನನ್ನು ಅಮ್ಮ ಎಂದು ಕರೆಯುತ್ತಾನೆ. ಇದರಿಂದಾಗಿ ಬೆಚ್ಚಿಬಿದ್ದ ಲಕ್ಕಮ್ಮ ಯಾರಪ್ಪ ನೀನು? ಯಾವ ಊರು? ಯಾಕೆ ಬಂದೆ? ಎಂದು ಕೇಳುತ್ತಾಳೆ. ಚಿತ್ತಯ್ಯ ಇದೇನಮ್ಮ ಹೀಗೆ ಕೇಳುತ್ತೀಯಾ? ನಾನು ನಿನ್ನ ಮಗ ಹನುಮಂತ ಎಂದು ಹೇಳುತ್ತಾನೆ. ನಿನ್ನ ಹೊಟ್ಟೆಯಲ್ಲಿ ಹುಟ್ಟಿದೆ. ನಿನ್ನ ಎದೆಹಾಲು ಕುಡಿದೆ. ನೀನು ಸಾಕಿದ ಮಗನಮ್ಮ ನಾನು ಹನುಮಂತ ಎಂದು ಸುಳ್ಳು ಹೇಳುತ್ತಾನೆ. ಮುಂದುಲು ದಂಡಿನಾಗೆ ಗರಡಿ ಸಾಧನೆಗೆ ಹೋದವನು, ನಾನಮ್ಮ ಹನುಮಂತ ಎಂದು ಹೇಳುತ್ತಾನೆ. ಹಿಂದೆ ಬರುವವರು ಮುಂದೆ ಬರುವವರು ನಿಮ್ಮಮ್ಮ ಅಳುತಾಳೆ, ನಿಮ್ಮಮ್ಮ ಕರಿತಾಳೆ ಅಂತ ಹೇಳಿದರು. ಅದಕ್ಕಾಗಿ ನಾನು ತಿರುಗಿ ಬಂದೆ ಊಟ ಮಾಡುವಾಗ ಬಂದಿದ್ದರೆ ನೀನೂ ಊಟ ಮಾಡಬಹುದಿತ್ತು ಮುದ್ದೆ ಇತ್ತು ಚಟ್ನಿ ಇತ್ತು ಎಂದು ಹೇಳಿ ಹನುಮಂತನ ಕಾಲು, ಕೈ, ಮುಖ, ಮೂಗು, ತೋಳು, ಎದೆ ಮುಂತಾದವುಗಳನ್ನು ಮುಟ್ಟಿ ಮುಟ್ಟಿ ನೋಡುತ್ತಾಳೆ. ಆಗ ಚಿತ್ತಯ್ಯ ಅಮ್ಮ ನಾನು ಹೋಗಿ ಇಲ್ಲಿಗೆ ಹನ್ನೆರಡು ವರುಷ ತುಂಬಿತು. ಈ ಊರಿನಲ್ಲಿ ನಡೆದಿರುವ ವರ್ತಮಾನ ಹೇಳಮ್ಮ ಎಂದು ಕೇಳಿದಾಗ,

ಲಕ್ಕಮ್ಮ ಸತ್ತಿರವವರು ಸತ್ತಿದ್ದಾರೆ. ಬದುಕಿರುವವರು ಬದುಕಿದ್ದಾರೆ. ಆದರೆ ಈ ಊರಿಗೆ ಒಂದು ಪೀಡೆ ಬಂದು ಸೇರಿಕೊಡಿದೆ ಎಂದು ಹೇಳುತ್ತಾಳೆ. ಯಾಕಮ್ಮ ಈ ರೀತಿ ಮಾತನಾಡುತ್ತಿದ್ದೀಯ ತುಂಬಿದ ರಾಜ್ಯವು ಹಾಗೇನೆ ಇರುವುದು ಹಾಲಿಗೆಪ್ಪು ಹಾಕಿದಂಗೆ.

ಚಿತ್ತಯ್ಯ, ಕಾಟಯ್ಯ, ಓಬಳಪತಿ, ಮೂವರು ಚಿತ್ರಗಿರಿ ಪಟ್ಟಣಕ್ಕೆ ದೊರಗಳಾಗಿರುವರು. ಇವರು ಗೋವರ್ಧನಗಿರಿಯ ಬೆಸ್ತರಹಳ್ಳಿ ಕಾವಲಿನಲ್ಲಿ ಬೆಂಕಿಯ ಹುಂಡೆಯಲ್ಲಿ ಹುಟ್ಟಿದವರು. ಇವರು ದಂಡು, ದರಬಾರ, ಮಂದಿ, ಮಾರ್ಬಾಲ ಕಟ್ಟಿಕೊಂಡು ಕತ್ತಲು ಕರಿಮಲೆಗೆ ಜಿಂಕೆಬೇಟೆ ಆಡಲು ಬಂದಿರುವಂತಹ ಸಮಯದಲ್ಲಿ ತಿರುಗಿಣಿ ಪಟ್ಟಣದ ದೊರೆಗಳಾದ ಯರಜಿನ್ನ, ಯರುಗಂಟೆ, ಎಂಬುವರು ಏಳಸಾವಿರ ಕಳ್‌ಕೊರಮರನ್ನು ಕರೆದುಕೊಂಡು ಬೇಟೆ ಆಡಲು ಹೋಗಿದ್ದಾಗ ಕಾಟಯ್ಯ, ಚಿತ್ತಯ್ಯ, ಮತ್ತು ಓಬಳಪತಿ ಇವರು ಮಲಗಿರುವ ಸಮಯ ನೋಡಿ ಕೊರಮರ ದಂಡು ಮುತ್ತಿನ ಹವಳದಗೊಡಗನ್ನು ಹೊತ್ತುಕೊಡು ಬಂದು ಈ ಪಟ್ಟಣದಲ್ಲಿ ನೆಲಮಾಳಿಗೆಯಲ್ಲಿ ಬಚ್ಚಿಟ್ಟಿರುವರು ಎಂದು ಇಡೀ ಊರಿನ ವರ್ತಮಾನವನ್ನು ಹೇಳುವಳು.

ಈ ಮಾತನ್ನು ಕೇಳಿಸಿಕೊಂಡು ಚಿತ್ತಯ್ಯನ ಕೋಪ ಅಂಗಾಲುಗಳು ಕಿಚ್ಚು ನಡುನೆತ್ತಿಗೆ ಏರಿತು. ಆದರೂ ಕೋಪವನ್ನು ಕಡಿಮೆ ಮಾಡಿಕೊಂಡನು. ಏಕೆಂದರೆ ಶಿವನ ಪ್ರತಿರೂಪವಾದ ಚಿತ್ತಯ್ಯ ಹುರಿಗಣ್ಣು ಬಿಟ್ಟಿದ್ದರೆ ಅಗಸರ ಲಕ್ಕಮ್ಮ ಮತ್ತು ತಿರುಗಿಣಿ ಪಟ್ಟಣ ಸುಟ್ಟು ಹೋಗುತ್ತಿತ್ತು. ಅದರ ಜೊತೆಗೆ ಹವಳದ ಗೊಡಗು ಕೈಗೆ ಸಿಗದೆ ಬೆಂಕಿಯಲ್ಲಿ ಸುಟ್ಟು ಹೋಗುತ್ತಿತ್ತು. ತನ್ನ ಮಗನೇ ಎಂದು ತಿಳಿದುಕೊಂಡ ಅಗಸರ ಲಕ್ಕಮ್ಮ ಯಾವಾಗ ಊಟ ಮಾಡಿದ್ದೆಯೋ ನಡಿಯಪ್ಪ ಹನುಮಣ್ಣ ನಾನು ಗೌಡರ ಹೊಲಕ್ಕೆ ಹೋಗಿ ಸೆಪ್ಪೆದಂಟು ಅಡಿಗೆ ಮಾಡಿ ಊಟಕ್ಕೆ ಹಾಕುತ್ತೀನಿ. ಚಿತ್ತಯ್ಯನಿಗೆ ನೀನು ಈ ಕತ್ತೆ ಮೇಲೆ ಹುಬ್ಬೇಭಾನಿ ಹೇರಿಕೊಂಡು ತಿರುಗಿಣಿಗೆ ಹೋಗುವಂತೆ ಅವಳು ಗೌಡರ ಹೊಲದ ಕಡೆ ಹೋಗುತ್ತಾಳೆ. ಇದೇ ಸನ್ನಿವೇಶಕ್ಕಾಗಿ ಕಾಯುತ್ತಿದ್ದ ಚಿತ್ತಯ್ಯ ಹುಬ್ಬೇಭಾನಿ ಮತ್ತು ಬಟ್ಟೆಯ ಗಂಟನ್ನು ಕತ್ತೆಯ ಮೇಲೆ ಹೇರಿಕೊಂಡು, ತಂಕಟೆಯ ಗಿಡವನ್ನು ಬುಡದ ಸಮೇತ ಕಿತ್ತುಕೊಂಡು ಕತ್ತೆಗೆ ಒದೆಯುತ್ತಾನೆ. ಆ ಕತ್ತೆಯು ಜೀವ ಉಳಿದರೆ ಸಾಕು ಎಂದು ಹೋಗಿ ತಿರುಗಿಣಿ ಪಟ್ಟಣದ ಬಾಗಿಲಲ್ಲಿ ನಿಲ್ಲುತ್ತದೆ. ಚಿತ್ತಯ್ಯ ಊರ ಹೊರಗೆ ಹಾಕಿಸಿರು ಬೋರ್ಡ ಓದುತ್ತಾನೆ.

'ಕಾಟಯ್ಯ ಒಳ್ಳೆವನಲ್ಲ ಯೋಗಿಯಾಗಿ ಬರಬಹುದು

ಜೋಗಿಯಾಗಿ ಬರಬಹುದು ಕುರುಡಾಗಿ ಬರಬಹುದು

ಕುಂಟಾಗಿ ಬರಬಹುದು'. *(ಲಕ್ಷವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಕಾಟಯ್ಯ ಒಳ್ಳೆಯವನ್ನಲ್ಲ ಅವನು ಮಾಯಾವಿ ಯೋಗಿಯಾಗಿ, ಜೋಗಿಯಾಗಿ, ಕುಂಟ, ಕುರುಡ, ಮೂಕನಾಗಿಯೂ ಬರಬಹುದು ಎಂಬ ಕಾರಣದಿಂದಾಗಿ ಹೊಸ ಮನುಷ್ಯರಿಗೆ ಊರಿನ ಒಳಗೆ ಹೋಗಲು ಅವಕಾಶವಿಲ್ಲ ಎಂಬ ಸಂದೇಶವನ್ನು ಓದಿಕೊಂಡ ಚಿತ್ತಯ್ಯ. ಚಿತ್ತಯ್ಯನ್ನು ನೋಡಿದ ಆ ಊರಿನ ದೊರೆಗಳು ಇವನು ಅಗಸರ ಲಕ್ಕಮ್ಮನ ಮಗನೆಂದು ತಿಳಿದು ಇವನಿಗೆ ತೂಕ ಮಾಡುವುದು

ಬೇಡ ಎಂದು ಹೇಳುತ್ತಾರೆ. ದೊರೆಗಳ ಪತ್ನಿಯರ ಬಟ್ಟೆಗಳನ್ನು ತೋರಿಸುತ್ತಾ ತಿರುಗಿಣಿಯನ್ನು ಪ್ರವೇಶ ಮಾಡುತ್ತಾನೆ. ಯಾವಾಗ ಚಿತ್ತಯ್ಯ ತಿರುಗಿಣಿ ಪಟ್ಟಣ ಪ್ರವೇಶ ಮಾಡಿದನೋ ಆಗ ಹಾಲು ಕುಡಿಯುವ ಮಕ್ಕಳು ಹಾಲು ಕುಡಿಯುವುದನ್ನು ಬಿಡುತ್ತವೆ. ತೊಟ್ಟಿಲಲ್ಲಿ ಮಲಗಿರುವ ಮಕ್ಕಳು ರಕ್ತ ಕಾರಿಕೊಂಡು ಸಾಯುತ್ತವೆ. ಆಗ ಚಿತ್ತಯ್ಯ ಕಾಟಯ್ಯ ಬರೆದು ಕಳಿಸಿರುವ ಪತ್ರವನ್ನು ತೆಗೆದು ಓದಿಕೊಂಡು ಪತ್ರದಲ್ಲಿರುವಂತೆ ಹುಬ್ಬೇಬಾನಿನ್ನು ಹೊಡೆದು ಕತ್ತೆಯ ಸೊಂಟ ಮುರಿಯುವಂತೆ ಒದೆಯುತ್ತಾನೆ. ರಾಜ–ರಾಣಿಯರ ಬಟ್ಟೆಗಳನ್ನಲ್ಲ ಸುಟ್ಟುಹಾಕುತ್ತಾನೆ. ಕಾಟಯ್ಯ ಬರೆದುಕೊಟ್ಟಿರುವ ಪತ್ರದ ಮೂಲಕ ವಿಷಯವನ್ನು ತಿಳಿದುಕೊಂಡು ಒಂದೊಂದೇ ಕೆಲಸ ಮಾಡುತ್ತಾ ಬರುತ್ತಾನೆ. ಚಿತ್ತಯ್ಯ ಯರಗಂಟೆ ಯರಜಿನ್ನನ ಮನೆಯಲ್ಲಿ ಹಲ್ಲಿ ಮರಿಯಾಗಿ ಮೂರು ದಿನಗಳ ಕಾಲ ಇರುತ್ತಾನೆ.

ಸೆಪ್ಪೆದಂಟು ತರಲು ಹೋಗಿದ್ದ ಅಗಸರ ಲಕ್ಕಮ್ಮ ಮನೆಗೆ ಬಂದು ನೋಡುತ್ತಾಳೆ, ಹುಬ್ಬೆಬಾನಿ ನುಚ್ಚುನೂರಾಗಿದೆ, ಕತ್ತೆಯು ಸೊಂಟ ಮುರಿದುಕೊಂಡು ಊರಿಗೆಲ್ಲ ಕೇಳುವಂತೆ ಒದರುತ್ತಿದೆ. ಬಟ್ಟೆಗಂಟು ಸುಟ್ಟು ಬೂದಿಯಾಗಿದೆ ಚಿತ್ತಯ್ಯನ ಸುಳಿವೇ ಇರುವುದಿಲ್ಲ. ಮನೆ ಮುಂದೆ ನಡೆದಿರುವ ದುರಂತವನ್ನು ನೋಡಿ ಬೀದಿಗುಂಟೆ ಗೋಳಾಡುತ್ತಾ ಬರುತ್ತಾಳೆ. ದೊರೆಗಳು ಕಾರಣ ಕೇಳಿದಾಗ ನಡೆದ ವಿಚಾರವನ್ನು ಹೇಳುತ್ತಾಳೆ. ಇದನ್ನು ಗಮನಿಸಿದ ದೊರೆಗಳು ಇವಳು ಯಾರೊ ಕಳ್ಳನ್ನ ತಂದು ಊರಲ್ಲಿ ಬಿಟ್ಟಿದ್ದಾಳೆ ಇವಳನ್ನು ಸುಣ್ಣದ ಕಲ್ಲಿಗೆ ಬಿರಿಹೊಯ್ಯುವಂತೆ ಆಜ್ಞೆ ಮಾಡುತ್ತಾರೆ. ಚಿತ್ತಯ್ಯ ತಿರುಗಿಣಿ ಹೊಕ್ಕವನೆ ನಿಮಗೆ ಬಂದಿರುವ ಬರವೇನು ಎಂದು ಕ್ರಿಮಿ ಕೀಟಗಳು ಕೇಕೇ ಹಾಕಿ ನಗುತ್ತವೆ. ಯರಗಂಟೆ ಯರಜಿನ್ನನ ಮನೆಯ ತೊಲೆಯಲ್ಲಿ ಹಲ್ಲಿಮರಿ ಆಗಿ ಅಡಗಿರುವ ಚಿತ್ತಯ್ಯ ದೊರೆಗಳ ಮನೆಯಲ್ಲಿ ಬಂಗಾರದ ಮಂಚದ ಕಾಲನ್ನು ಕಡಿದು ಅದಕ್ಕೆ ಮರದ ಕಾಲು ಜೋಡಿಸಿ, ಪದ್ಮವತಿಯ ಮನೆಗೆ ಹೋಗಿ ಅವಳ ಮನೆ ಮುಂದೆ ಇರುವ ನಗಾರಿಯನ್ನು ಲೆಕ್ಕವಿಲ್ಲದಷ್ಟು ಸಲ ಬಡಿಯುತ್ತಾನೆ. ಇದು ಅವಳಿಗೆ ಆಶ್ಚರ್ಯವಾಗಿ ಯಾರೋ ದೊಡ್ಡ ಸಾವುಕಾರ ಬಂದಿದ್ದಾನೆಂದು ತಿಳಿದು. ಚಿತ್ತಯ್ಯನನ್ನು ವಿಚಾರಿಸಿದಾಗ, ಪ್ರತಿಯೊಬ್ಬರು ಬರುವರು ಒಂದೇಟು ಬಡಿದು ಒಂದು ದಿನ ಇದ್ದು ಹೋಗುವರು. ನೀನ್ಯಾಕೆ ಲೆಕ್ಕವಿಲ್ಲದಷ್ಟು ಬಡಿದೆ ಎಂದು ಕೇಳಿದಾಗ, ಚಿತ್ತಯ್ಯ ತಾನು ನಿನ್ನ ಮನೆಯಲ್ಲಿ ಬಹಳ ದಿನ ಇರಬೇಕೆಂದು ಈ ನಗಾರಿಯನ್ನು ಬಡಿದಿದ್ದೇನೆ. ನೀನು ಎಷ್ಟು ಬೇಕಾದರೂ ಹೊನ್ನು ವಜ್ರ ತೆಗೆದುಕೊ ಎಂದು ಹೇಳುತ್ತಾನೆ. ಇದರಿಂದ ಸಂತೋಷಗೊಂಡ ಪದ್ಮವತಿಯು ಊಟಮಾಡಿ ಮಲಗಲು ಕರೆಯುತ್ತಾಳೆ. ಆಗ ಚಿತ್ತಯ್ಯ ಈ ದಿನ ಉಣ್ಣುವುದು ನಾಳೆ ಉಣ್ಣಬಹುದು, ಈ ರಾತ್ರಿ ಮಲಗುವುದು ನಾಳೆ ಮಲಗಬಹುದು. ಎಂದು ಹೇಳಿ ಅಲ್ಲಿಂದ ಮಾಯವಾಗುತ್ತಾನೆ.

ಮೂಡಲು ಕೆಂಪೇರಿ, ಆಗ ಊರಿನ ಜನರೆಲ್ಲ ಎದ್ದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿರುವ ಸಮಯದಲ್ಲಿ ಯರಗಂಟೆ ಯರಜಿನ್ನನ ಮನೆಯಲ್ಲಿ ಆಳುಗಳು ಮಂಚದ ಬಂಗಾರದ ಕಾಲು ಕಳುವಾಗಿರುವ ಬಗ್ಗೆ ದೊರೆಗಳಿಗೆ ಹೇಳಿದಾಗ, ದೊರೆಗಳು ಕಳ್ಳನನ್ನು ಹಿಡಿದವರಿಗೆ ಊರು, ಉಂಬಳಿ, ಹೊಲಗದ್ದೆ, ಮಾನ್ಯವು, ಕಂಠಿಸರ, ಒಂಟುಮುತ್ತು, ಮಾಮಲೆ ಗುಂಡು, ಅರ್ಧ ದೊರೆತನ ಕೊಡುವುದಾಗಿ ಢಂಗೂರ ಹೊಡೆಸುತ್ತಾರೆ. ಸೂಳೆ ಪದ್ಮವತಿಯು ಕಳ್ಳನನ್ನು ಹಿಡಿಯುವುದಾಗಿ ಮಾತುಕೊಡುತ್ತಾಳೆ.

ಇವತ್ತು ಜಂಗಮವಾಣಿಯ ಮೂಲಕ ಮಾಡುವ ಕೆಲಸವನ್ನು ಅಂದು ಕಾಟಯ್ಯ ಬರೆದಿರುವ ಪತ್ರವು ಮಾಡಿರುವುದು ಗಮನಿಸಬಹುದು. ಪತ್ರದಲ್ಲಿ ಬರೆದಿರುವಂತೆ ಚಿತ್ತಯ್ಯ ಶೆಟ್ಟಿಯ ಮನೆಗೆ ಹೋಗಿ ದೊರಗಳು ತಮ್ಮ ಮನೆಯಲ್ಲಿ ಕಳುವಾಗಿರುವ ಬಂಗಾರದ ಕಾಲು ಹುಡುಕಿಕೊಡಲು ಬಂದಿರುವುದಾಗಿ ಹೇಳಿದಾಗ ಶೆಟ್ಟಿಯು ತನ್ನ ಮನೆಯಲ್ಲಿ ಸಂಬಳಕ್ಕೆ ಇರಲು ಕೇಳಿಕೊಳ್ಳುತ್ತಾನೆ. ಶೆಟ್ಟಿಗೂ ಚಿತ್ತಯ್ಯನಿಗೂ ಒಪ್ಪಂದ ಮುಗಿಯುತ್ತದೆ. ಶೆಟ್ಟಿಯು ಸಿಪಾಯಿಗೆ ಉಟಮಾಡಲು ಹೇಳಿದಾಗ ಚಿತ್ತಯ್ಯ ಎಂಟು ತುಂಬಿದ ಮ್ಯಾಲೆ ನಾನು ಊಟಮಾಡುವುದಿಲ್ಲ. ಇವರು ಕಾಡುಗೊಲ್ಲರಾಗಿವ ಕಾರಣ ಬೇರೆಯವರ ಮನೆಯಲ್ಲಿ ಊಟ ಮಾಡುವುದಿಲ್ಲ. ಹಾಗಾಗಿ ಎಂಟು ತಂಬಿದ ಮೇಲೆ ಅನ್ನ ನೀರು ಸೇವಿಸುವುದಿಲ್ಲ ಎಂದು ಹೇಳುತ್ತಾನೆ. ಈಗ ಊಟಮಾಡುವುದು ಬೆಳಿಗ್ಗೆ ಮಾಡಿದರಾಯಿತು ಎಂದು ಹೇಳಿ ಜಾರಿಕೊಳ್ಳುತ್ತಾನೆ. ಮಲಗುವ ಸಮಯದಲ್ಲಿ ಮನೆಯ ಮೇಲೆ ಚಿತ್ತಯ್ಯ ಮನೆಯ ಒಳಗೆ ಶೆಟ್ಟಿ ಮಲಗುತ್ತಾನೆ.

'ಕಲ್ಲು ಕರಗ ಹೊತ್ತು ಬೆಲ್ಲ ಬೇಯಾ ಹೊತ್ತು
ಮಲಗಿದ್ದ ಮಲವೆದ್ದು ಮೇಯಾ ಹೊತ್ತು
ಸಕ್ಕಟ್ಟೆ ಸರುವತ್ತು ಬಂದಿತಯ್ಯ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಈ ರೀತಿ ಮಧ್ಯರಾತ್ರಿಯಲ್ಲಿ ಚಿತ್ತಯ್ಯ ಶೆಟ್ಟಿಯ ಕೈಯನ್ನು ಕಡಿಯುತ್ತಾನೆ. ಆಗ ಮಾಳಿಗೆಯಿಂದ ಇಳಿದು ಅಲ್ಲಿಂದ ನೇರವಾಗಿ ಪದ್ಮವತಿಯ ಮನೆಗೆ ಬಂದು ಅವಳ ಜೊತೆ ಮಲಗಿದಾಗ ಅವಳು ಚಿತ್ತಯ್ಯನ ಮೇಲೆ ಕೈ ಹಾಕಿದಾಗ ಅವಳಿಂದ ದೂರ ಮಲಗುತ್ತಾನೆ. ಬೆಳಿಗ್ಗೆ ಎದ್ದು ನೋಡಿದಾಗ ಚಿತ್ತಯ್ಯ ಅವಳ ಮನೆಯಲ್ಲಿ ಇರುವುದಿಲ್ಲ. ಆಕೆ ಕೊಟ್ಟ ಮಾತಿನಂತೆ ಕಳ್ಳನನ್ನು ಹಿಡಿದಿದ್ದಾಳೆಂದು ದೊರೆಗಳಾದ ಯರಗಂಟೆ ಯರಜಿನ್ನ ಆಕೆಯ ಮನೆ ಬಾಗಿಲ ಬಳಿ ಕಾದು ಕುಳಿತಿರುತ್ತಾರೆ. ಎಂಟು ಗಂಟೆ ಸಮಯವಾಯಿತು, ಬಾಗಿಲು ತೆರೆದು ನೋಡಿದರೆ ಶೆಟ್ಟಿಯ ಮೊಂಡ ಕೈ ತೋರಿಸಿ ಕಳ್ಳನನ್ನು ಹಿಡಿದಿದ್ದೆ ಆದರೆ, ಅವನು ನನ್ನನ್ನು ಹೊಡೆದು ಕೈ ಕತ್ತರಿಸಿಕೊಂಡು ಹೋಡಿಹೋದನು ಎಂದು ಹೇಳಿದಳು. ಆಗ ದೊರೆಯು ಮೊಟು ಕೈ ಹೊಂದಿರುವ ಶೆಟ್ಟಿಯ ಮನೆಗೆ ಬಂದು ಶೆಟ್ಟಿಯನ್ನು ದೊರೆಗಳ ಆಜ್ಞೆಯಂತೆ ಗಾಣಕ್ಕೆ ಹಾಕಿ ಸಾಯಿಸಿದರು. ಚಿತ್ತಯ್ಯನು ಯರಗಂಟೆ ಯರಜಿನ್ನನ ಮನೆಗೆ ಹೋಗಿ ಇನ್ನೊಂದು ಮಂಚದ ಕಾಲು ಕಡಿದುಕೊಂಡು ಬರುತ್ತಾನೆ. ಈ ವಿಷಯ ಬೆಳಿಗ್ಗೆ ಕೆಲಸದವರು ದೊರೆಗಳಿಗೆ ಹೇಳಿದರು. ಆಗ ದೊರೆಗಳು ಸುಮ್ಮನೆ ಶೆಟ್ಟಿಯನ್ನು ಕೋಳಕ್ಕೆ ಹಾಕಿದೆವೆಂದು. ಕಳ್ಳನನ್ನು ಹಿಡಿಯಲು ಬಬ್ಬುಲಿಯನ್ನು ನೇಮಕ ಮಾಡುತ್ತಾರೆ. ಚಿತ್ತಯ್ಯ ಬಬ್ಬುಲಿಯ ಅಳಿಯನಾಗಿ ಅವನ ಮನೆಯನ್ನು ಸೇರುತ್ತಾನೆ. ಬಬ್ಬುಲಿ ಮತ್ತು ಅವನ ಹೆಂಡತಿ ಈರಮ್ಮ ಯಾರಯ್ಯ ನೀನು ಎಂದು ಕೇಳಿದಾಗ ನಾನು ನಿನ್ನ ಅಳಿಯ. ಮುಂದಾಲ ದಂಡಿನಾಗೆ ಗರುಡಿ ಸಾಧನೆ ಹೋದವನು. ನಿನ್ನಳಿಯ ಎಂದು ಹೇಳುತ್ತಾನೆ. ಹಿಂದೆ ಬರುವವರು ಮುಂದೆ ಬರುವವರು ನಿಮ್ಮ ಮಾವ ಅಳುತ್ತಾನೆ ನಿಮ್ಮತ್ತೆ ಅಳುತ್ತಾಳೆ ಅಂತ ಹೇಳಿದರು. ಆಗ ಬಬ್ಬುಲಿ ಹೆಂಡತಿಗೆ ಆಸೆ ಬರುತ್ತದೆ ಪ್ರೇಮ ಬರುತ್ತದೆ. ನನ್ನಳಿಯ

ನೀನೂ ಎಷ್ಟು ದಿನಕ್ಕೆ ಬಂದೆಯಪ್ಪ ಎಂದು ಈರಮ್ಮ ಹಬ್ಬದ ಅಡಿಗೆ ಮಾಡಿ ನೀರೊಯ್ದು ಎಣ್ಣೆಸ್ನಾನ ಮಾಡಿಸುತ್ತಾಳೆ. ಮಗಳಿಗೆ ಬಬ್ಬುಲಿಗೂ ಚಿತ್ತಯ್ಯನಿಗೂ ಊಟ ಮಾಡಲು ನೀರು ಕೊಡುತ್ತಾಳೆ. ಆಗ ಚಿತ್ತಯ್ಯ ನಾನು ಹನ್ನೆರಡು ವರ್ಷ ಗರುಡಿ ಸಾಧನೆ ಮಾಡುವಾಗ ಹೊತ್ತು ಮುಳುಗಿದ ಮೇಲೆ ಊಟ ಮಾಡಿ ರೂಢಿ ಇಲ್ಲವೆಂದು ಹೇಳುತ್ತಾನೆ. ಬಬ್ಬುಲಿ ಊಟಮಾಡಿ ಬಡಿಗೋಲು ತೆಗೆದುಕೊಂಡು ಕಾವಲು ಕಾಯಲು ಹೊರಟನು. ಚಿತ್ತಯ್ಯನಿಗೆ ಹಾಸಿಗೆ ಹಾಸಿಕೊಟ್ಟು ಅವನ ಜೊತೆ ಮಲಗಲು ಮಗಳನ್ನು ಕಳುಹಿಸಿಕೊಡುತ್ತಾಳೆ. ಆ ಹುಡಿಗಿ ಚಿತ್ತಯ್ಯನ ಮೈ ಕೈ ಮುಟ್ಟುತ್ತದೆ. ಚಿತ್ತಯ್ಯನ ಅಂಗಾಲಗಳ ಕಿಚ್ಚು ನಡುನೆತ್ತಿಗೇರುತ್ತದೆ. ಆಗ ಆ ಹುಡುಗಿಗೆ ಈ ರೀತಿ ಹೇಳುತ್ತಾನೆ. ನಿಮ್ಮಪ್ಪ ನಿಮ್ಮಮ್ಮ ಯಾವನಿಗೋ ನಿನ್ನನ್ನು ಹೊಂದಿಸಿಕೊಂಡು ಊಟ ಮಾಡಿದ್ದಾರೆ. ಇದರಿಂದಾಗಿ ಕೋಪಗೊಂಡ ಆ ಹುಡುಗಿಯು ತನ್ನ ತಾಯಿಗೆ ದೂರು ಹೇಳಿದಾಗ ಈರಮ್ಮ ಆ ಹುಡುಗಿಗೆ ಇನ್ನೂ ಪ್ರಾಯ ಸಾಲದು ಮತ್ತು ನಾವು ಯಾವನಿಗೂ ತಲೆ ಹಿಡಿದಿಲ್ಲವೆಂದು ಹೇಳುತ್ತಾಳೆ. ಆಗ ಚಿತ್ತಯ್ಯ ಅತ್ತೆ ಇವತ್ತು ಮಲಗುವುದು ನಾಳೆ ಮಲಗಿದರಾಯಿತು, ಇವತ್ತು ಊಟಮಾಡುವುದು ನಾಳೆ ಉಂಡರಾಯಿತು. ಆದರೆ ಮಾವ ಕಳ್ಳನನ್ನು ಹಿಡಿಯಲು ಹೋದವನು. ಇಷ್ಟು ಹೊತ್ತಾದರೂ ಬರಲಿಲ್ಲ. ಕಳ್ಳ ಸಿಕ್ಕನೋ ಇಲ್ಲೋ ನೋಡಿ ಬರುತ್ತೇನೆಂದು ಕೋಳದ ಮನೆಗೆ ಹೋಗುತ್ತಾನೆ. ಆಗ ಬಬ್ಬುಲಿ ಯಾರೋ ಕಳ್ಳ ಬಂದನೆಂದು ತಿಳಿದು ಅವನ ಕೈಯನ್ನು ಹಿಡಿಯುತ್ತಾನೆ. ಆಗ ಚಿತ್ತಯ್ಯ ತಾನೂ ನಿನ್ನ ಅಳಿಯ ಎಂದು ಹೇಳುತ್ತಾನೆ. ಅದೇ ಸಮಯದಲ್ಲಿ ಚಿತ್ತಯ್ಯ ಬಬ್ಬುಲಿಗೆ ಕೋಳಕ್ಕೆ ಹಾಕುವ ಬಗೆಯನ್ನು ಕಲ್ಪಿಸಿಕೊಡಲು ಕೇಳುತ್ತಾನೆ. ಕಲಿಸಿ ಕೊಡುವಂತಹ ಸಮಯದಲ್ಲಿ ಚಿತ್ತಯ್ಯ ಬಬ್ಬೂಲಿಯನ್ನು ಕೋಳವನ್ನು ಜಾಡಿಸಿ ಒದೆಯುತ್ತಾನೆ. ಅದರಲ್ಲಿ ಬಿದ್ದು ಬಬ್ಬುಲಿ ಸಾಯುತ್ತಾನೆ. ಬೆಳಗಾಗಿ ಮುಂಗೋಳಿ ಕೂಗಿತು. ಊರಿನ ಜನರೆಲ್ಲ ಎದ್ದು ತಮ್ಮ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ಊರ ಮುಂದಕ್ಕೆ ಬಂದವರೆಲ್ಲ ಬಬ್ಬುಲಿ ನೋಡವರೆ,

'ಕಳ್ಳಾನೆ ಸಿಕ್ಕಿದರೆ ಕೊಳಕಾನೆ ಹಾಕು
ಕಳ್ಳಾನೆ ಸಿಗದಿದ್ದರೆ ಊರೆಲ್ಲಾ ಸೇರಿ
ನಾವು ಹಾಕ್ತೀವಿ ಅಂದಿದಿವಿ ಅವರ
ಕೂಟೆ ಯಾಕೆ ಹಾಕಿ ಸಮನ ಅಂದು
ಅವನೇಟಿಗೆ ಅವನೆ ಹಾಕೊಂಡವನೆ ಅಂಬೋರಂತೆ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಏಳುಸಾವಿರ ಕೊರಮರು ದಂಡಿಗೆ ಚಿತ್ತಯ್ಯ ಹೋದಾಗ, ಕೊರಮರ ದಂಡು ಜೇನು ಹುಳ ಎದ್ದಂಗೆ ಎದ್ದು ಚಿತ್ತಯ್ಯನನ್ನು ಪ್ರಶ್ನೆ ಮಾಡುತ್ತಾರೆ. ಎಲ್ಲಿಂದ ಬಂದೆ ನೀನು, ಯಾವ ಊರು ಯಾವ ದೇಶ ನಿನ್ನದು ಎಂದು ಕೇಳುತ್ತಾರೆ. ಚಿತ್ತಯ್ಯ ಉತ್ತರ ದೇಶ ನಂದು ನನ್ನ ಹೆಸರು ಸೀಪಾಯಿ ಕಳ್ಳನನ್ನು ಹಿಡಿಯಲು ಬಂದ ಧೀರ ಮತ್ತು ಶೂರ ನಾನು. ನಿಮ್ಮ ದೊರೆಗಳು ಯರಜಿನ್ನ ಯರಗಂಟೆ ಎಂಬುವರು ನಿಮಗೆ ಪತ್ರ ಬರೆದು ಕಳುಹಿಸಿದರು. ಆದುದರಿಂದ ನಾನು ಇಲ್ಲಗೆ

ಬಂದಿರುವೆನು. ಅಷ್ಟೆ ಅಲ್ಲ ಏಳು ಸಾವಿರ ಕಳ್‌ಕೊರಮರ ದಂಡು ಮಲಗಿದೆಯೋ ಎದ್ದಿದೆಯೋ ಎಂದು ನೋಡಿಕೊಂಡು ಬರಲು ಹೇಳಿದರು ಎಂದು ಹೇಳಿದನು.'

ಮುಂದೆ ಇರವೆ ಸೋಲು ಎತ್ತ
ನಡಿತೈತೆ ಹೇಳ್ರಲಾ ದಗಡಿ ಮಕ್ಕಳ
ಕೊರಮರ ಅಂಬೋನಂತೆ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಆಗ ಅವರು ಗುರುತಿಲ್ಲ ಎಂದು ಹೇಳಿದಾಗ ನೀವು ಇದುವರೆಗೆ ಕಾವಲು ಇರುವುದು ಪ್ರಯೋಜನವಿಲ್ಲ. ತೆಂಕ ಬಡಗ ನಡಿತೈತೆ ನೋಡು ಎಂದು ಚಿತ್ತಯ್ಯ ಹೇಳುತ್ತಾನೆ. ನಂತರ ಮೂರು ತಿಂಗಳು ನಿದ್ದೆಮಾಡದ ಕೊರಮರು ಹಾಯಾಗಿ ನಿದ್ದೆ ಮಾಡುತ್ತಾರೆ. ಕಾಟಯ್ಯ ಬಂದು ಏಳುಸಾವಿರ ಕಳ್‌ಕೊರಮರ ಮ್ಯಾಲೆ ಮಂಕು ಭೂದಿ ಸುರಿಯುತ್ತಾನೆ. ಎಲ್ಲಾ ಕೊರಮರು ಎಚ್ಚರವಿಲ್ಲದೆ ಮಲಗುತ್ತಾರೆ.

ಪುನಃ ಕಾಟಯ್ಯ ಬರದ ಪತ್ರವನ್ನು ಓದಿಕೊಂಡು ಚಿತ್ತಯ್ಯ ಪತ್ರದಲ್ಲಿರುವ ಮಾಹಿತಿಯಂತೆ ಹನ್ನೆರಡು ವರುಷ ಒಂದು ಕಡೆ ಆನೆಯ ದಂಡು, ಒಂಟೆಯ ದಂಡು, ಕುದುರೆಯ ದಂಡು, ಇವುಗಳನ್ನು ಸೆರೆಯಿಂದ ಬಿಡಿಸುತ್ತಾನೆ. ಅವುಗಳಿಗೆ ಸಂತೋಷವಾಗಿ ಮನಸ್ಸಿಗೆ ಬಂದಂತೆ ಕುಣಿಯುವುದಕ್ಕೆ ಪ್ರಾರಂಭಿಸಿದವು. ಹನ್ನೆರಡು ವರುಷ ನಿಲುಗಟ್ಟಿದ ಆನೆ ಕುದುರೆಗಳು ನೆಗೆಯುತ್ತ ಇರುವುದರಿಂದ, ಇಡೀ ತಿರುಗಿಣಿ ಪಟ್ಟಣ ಗಾಳಿ ಧೂಳಿನಿಂದ ಆವೃತವಾಗುತ್ತದೆ. ಇದರಿಂದಾಗಿ ಏಳುಸಾವಿರ ಕಳ್‌ಕೊರಮರ ದಂಡು ಹೇಳುವುದಕ್ಕೆ ಹೆಸರಿಲ್ಲದಂತೆ ನಾಶ ಹೊಂದುತ್ತದೆ. ಈ ರೀತಿ ನಾಶ ಹೊಂದಿದ್ದರಿಂದ ಅಲ್ಲಿ ರಕ್ತದ ಕೋಡಿಯೇ ಹರಿಯಿತು. ಕೆಂದೂಳು ಭೂಮಿ ಆಕಾಶ ಕಾಣದಂತೆ ವ್ಯಾಪಿಸಿಕೊಂಡಿತು. ಇದು ಏನು ಸೋಜಿಗವೆಂದು ಯರಗಂಟ ಯರಜಿನ್ನ ತಮ್ಮ ಮನೆಯ ಕಿಟಕಿಯಿಂದ ಹೊರಗೆ ನೋಡಿದಾಗ ಮುಂದಿನ ಮನಷ್ಯರು ಕಾಣದಂತೆ ಭೂಮಿ ಆಕಾಶ ಒಂದಾಗಿ ಧೂಳು ಹಾವರಿಸಿಕೊಂಡಿತ್ತು

ಕಳ್‌ಕೊರಮರ ದಂಡನ್ನು ನಾಶಮಾಡಿದ ಚಿತ್ತಯ್ಯ ಬೇವುಗಾರನ ಹತ್ತಿರಕ್ಕೆ ಹೋಗಿ ಅವನನ್ನು ಕೊಂದು ಬರುತ್ತಾನೆ.

ಆಕಾಶದ ಮಳಿಯಂಗೆ ಲೋಕಾದ ಸಿಡಿಲಂಗೆ
ಆಕುರುಸೋದಂತೆ ಮಾಳಿಗೆ ಮುತ್ತಿನ ಗೊಡಗು
ತಂದೆ ಚಿತ್ತಯ್ಯಗೂ ಕೇಳಲ್ಲ ಅರುಸೋದಂತೆ.

ಹಾಲಂಗ ಹತ್ತಿ ಮುತ್ತಿನ ಗೊಡಗು ನೋಡಿ ಮುಂದೆ ಏನು ಮಾಡಬೇಕೆಂದು ಚಿತ್ತಯ್ಯ ಕಾಟಯ್ಯನಿಗೆ ಪತ್ರ ಬರೆಯುತ್ತಾನೆ. ಅಂತಹ ಸಮಯದಲ್ಲಿ ಕಾಟಯ್ಯ ನರಸಿಂಹನ ಕರೆದು ತಿರುಗಿಣಿಗೆ ಹೋಗಲು ದಂಡುತಯಾರು ಮಾಡುವಂತೆ ಹೇಳುತ್ತಾನೆ

ಸೂಳೆ ಪದ್ಮವತಿಯ ಮೇಲೆ ಕುದರೆ ಬಿಟ್ಟು ತುಳಿಸುವಂತೆ ಹೇಳಿದಾಗ ಅವಳು ಅತ್ತಿಗೆ ಸಮಾನ ಹಾಗಾಗಿ ನಾನು ತುಳಿಸುವುದಿಲ್ಲ ಎಂದು ಹೇಳುತ್ತಾನೆ. ಕೊನೆಗೆ ಚಿತ್ತಯ್ಯ ಅವಳ ಮೇಲೆ ಕುದುರೆ ಬಿಟ್ಟು ತುಳಿಸಿ ಸಾಯಿಸುತ್ತಾನೆ.

ಕಾಟಯ್ಯ ಚಿತ್ತಯ್ಯನಂತೆ ಸಿಕ್ಕೋನು ನರಸಿಂಹನಂತೆ
ಚಿತ್ತಾರಗಿರಿಗೇನೆ ಅವರು ಹೆಚ್ಚಿನ ದೊರೆಗಳಂತೆ
ಅವರು ಕೆಂಡದಾಗೆ ಹುಟ್ಟಿದರಂತೆ ಅರಿತವರಿಗೆ ಗಂಡರಂತೆ
ಮರೆತವರಿಗೆ ಮಿಂಡರಂತೆ ತೊಪ್ಪು ತೊಪ್ಪು ಅಂದರೆ
ಉತ್ತ ಸುತ್ತರಿಸೋರು ಮೂರು ಮೂರು ಮರಂದಾನ
ಮುಂದೆ ಕಾಯೋರಂತೆ ಕರಿಯ ಸ್ವಾರೆಗೆ ಬೆಂದು
ಒಳಿಯ ಕುಣಿಯ ಆಸೆಂಬಿದ್ದವರಿಗೆ ಗಂಡರಂತೆ ಸೆಟ್ಟೆ
ಸಾವಿರ ಪಾಳೆಗಾರರು ತಲೆತಂದು ಅವರು ಪಾದದ ಕೆಳಗೆ
ಮಂಗಳಾರತಿ ಮಾಡಿಸ್ಕಂಬ ದೊರೆಗಳೆ ಇದಿರಿಲ್ಲ
ಅಂದು ಹಿಡಿಯಾಲೆ ಕಾಳೆ ಹೊಡೆಯಾಲೆ ಬೇರಿ ಕೆಂಚಾ ಅಂಬೋನಂತೋ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಯಾವಾಗ ಕಾಟಯ್ಯ ಈ ಮಾತು ಹೇಳಿದನೋ ಆಗ ಕಹಳೆ ಕೆಂಚ ಧರ್ಮದ ಕಹಳೆ ಊದುತ್ತಾನೆ. ಇದರಿಂದಾಗಿ ನರಸಿಂಹನಿಗೂ ಚಿತ್ತಯ್ಯನಿಗೂ ಬಿದ್ದಿರುವಂತ ಸೆರೆವಾಸದಿಂದ ಬಿಡುಗಡೆ ಆಗುತ್ತದೆ. ಅವರು ಕುದುರೆ ಏರಿಕೊಂಡು ಹಾಲಂಗ ಬಿಟ್ಟು ಕತ್ತಲು ಕರಿಮಲೆಗೆ ತಿರುಗಿ ಬರುತ್ತಾರೆ. ಬಂದು ಕಾಟಯ್ಯನ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಸಮಯದಲ್ಲಿ ಹನ್ನೆರಡು ಸಾವಿರ ದಂಡು ಮಲಗಿರುವುದವರನ್ನ ಎಚ್ಚರಿಸುತ್ತಾನೆ. ಮಂಕು ಬೂದಿ ತೊಳೆಯುತ್ತಾನೆ. ಆಗ ಹನ್ನೆರಡು ಸಾವಿರ ದಂಡು ತಿರುಗಿಣಿ ಪಟ್ಟಣದ ಕಡೆ ಮುಖ ಮಾಡುತ್ತದೆ. ಮತ್ತೆ ಕಾಟಯ್ಯ ದಂಡನ್ನು ಒಂದು ಕಡೆ ಸೇರಿಸಲು ಕಹಳೆ ಊದುವಂತೆ ಆಜ್ಞೆ ಮಾಡುತ್ತಾನೆ. ಇದರಿಂದಾಗಿ ಹನ್ನೆರಡು ಸಾವಿರ ದಂಡು ಜೇನುಹುಳಗಳು ಹಾರಾಡುವಂತೆ ಅಡ್ಡ ಆರು ಗಾವುದ ಉದ್ದ ಮೂರುಗಾವುದ ದೂರ ತಿರುಗಿಣಿ ಪಟ್ಟಣಕೆ ನಡೆಯುತ್ತದೆ. ತಿರುಗಿಣಿ ಪಟ್ಟಣದ ಜನರು ಕಾಟಯ್ಯ ಚಿತ್ತಯ್ಯನ ದಂಡುನೋಡಿ ವರ್ಣನೆಯನ್ನು ಮಾಡುತ್ತಾರೆ. ಇದರ ಜೊತೆಗೆ ಚಿತ್ತಯ್ಯ ಕಾಟಯ್ಯಗೆ ಈ ಭೂಮಿ ಮೇಲೆ ಎದುರಾಗಿರುವವರು ಯಾರು ಉಳಿದಾರು ತಿರುಗಿಣಿ ಪಟ್ಟಣ ಹಾಳಾಗುವುದಂತು ನಿಜ ಎಂದು ಮಾತನಾಡುತ್ತಾರೆ. ಹತ್ತು ಸಾವಿರ ಕುದುರೆ, ಹದಿನೆಂಟು ಸಾವಿರ ಒಂಟೆ, ಮಂದಿ ಮಾರ್ಬಾಲ ಎಲ್ಲರು ಬಂದಿದೀವಿ ಹೋಗಿ ಹೇಳಿರಿ ನಿಮ್ಮ ದೊರೆಗಳಿಗೆ ಎಂದು ಕಾಟಯ್ಯ ಚಿತ್ತಯ್ಯ ಹೇಳುವರು. ದೊರೆಗಳಿಗೆ ಸುದ್ದಿ ಮುಟ್ಟುತ್ತದೆ. ಯರಗುಂಟೆ ಯರಜಿನ್ನ ದೊರೆಗಳಿಗೆ ಸಿಟ್ಟು ಬಂದು ದಂಡು ಕಟ್ಟಿಕೊಂಡು ಚಿತ್ತಯ್ಯ ಕಾಟಯ್ಯನ ಮೇಲೆ ಯುದ್ದ ಮಾಡುತ್ತಾರೆ. ಈ ಯುದ್ದದಲ್ಲಿ ತಿರುಗಿಣಿ ಪಟ್ಟಣ ದೊರೆಗಳು ಸೋಲುತ್ತಾರೆ. ಅಲ್ಲಿಗೆ ತಿರುಗಿಣಿ ಪಟ್ಟಣ ಹಾಳಾಗಿ ಹೊಗುತ್ತದೆ.

ಪೂರ್ವ ದಿಕ್ಕಿನಲ್ಲಿ ನರಸಿಂಹನ ದಂಡು, ಪಶ್ಚಿಮ ದಿಕ್ಕಿನಲ್ಲಿ ಚಿತ್ತಯ್ಯನ ದಂಡು, ದಕ್ಷಿಣ ದಿಕ್ಕಿನಲ್ಲಿ ಕಲುಪಲ್ಲಿ ದಂಡು, ಉತ್ತರ ದಿಕ್ಕಿನಲ್ಲಿ ಬಮ್ಮಯ್ಯನ ದಂಡು, ಮಧ್ಯದಲ್ಲಿ ಕಾಟಯ್ಯನ ದಂಡು

ನಿಂತುಕೊಳ್ಳುತ್ತಿದೆ. ಭೂ ಚಕ್ರದ ಗೊಡಗು ಇರುವ ಜಾಗಕ್ಕೆ ಕಾಟಯ್ಯ ತನ್ನ ದಂಡಿಗೆ ಇರುವಂತೆ ಅಪ್ಪಣೆ ಮಾಡುವನು. ಮೂರು ನೂರು ಗುದ್ದಲಿ ಒಡ್ಡರ ಕರೆಯಿಸಿ, ಹನ್ನೆರಡು ಮಟ್ಟದ ಹಾಲಂಗ ಹೊಡೆಸುತ್ತಾನೆ. ಇಪ್ಪತ್ತನಾಲ್ಕು ಜತೆ ಎತ್ತಿನ ವರಜಿಯ ಕಟ್ಟಿಸಿ ಗೊಡಗನ್ನು ಹೊರಗೆ ಒಡೆಸುತ್ತಾನೆ. ಗೊಡಗು ಹುತ್‌ತೇರಿ ಗುಡ್ಡ ಬಿದ್ದಂಗೆ ಬೀಳುತ್ತದೆ. ಮೂರು ತಿಂಗಳ ಕಾಲ ಹಾಲಂಗದ ಒಳಗೆ ಇಟ್ಟಿರುವ ಕಾರಣ ಗೊಡಗು ಕಪ್ಪಾಗಿದೆ. ಗೊಡಗನ್ನು ಮುಟ್ಟಬಾರದವರು ಮುಟ್ಟಿರುವ ಕಾರಣ ಇದನ್ನು ಸಿದ್ದಿ ಮಾಡದ ಹೊರತು ಇದಕ್ಕೆ ಮೊದಲಿನ ಕಳೆ ಬರುವುದಿಲ್ಲ. ಎಂದು ಕಾಟಯ್ಯ ಚಿತ್ತಯ್ಯಗೆ ಹೇಳುತ್ತಾನೆ. ಬರಮನ ತಲೆಯ ಮೇಲೆ ಗೊಡಗು ಹೊರಿಸಿಕೊಂಡು ತಿರುಗಿಣಿಪಟ್ಟಣ ಬಿಟ್ಟು ಬರುವಾಗ ಅತ್ತಿಯ ಮರವನ್ನು ಹತ್ತಿ ನೋಡುತ್ತಾರೆ.

ಚಿತ್ತಯ್ಯ ಕಾಟಯ್ಯನಂತೆ ಸಿಕ್ಕೋನೋ ನರಸಿಂಹನಂತೆ
ಚಿತೂರುಗಿರಿಗೆ ಅವರು ಹೆಚ್ಚಿ ದೊರೆಗಳಂತೆ
ದಂಡೂನೆ ಕಟ್ಟಿಕೊಂಡು ದರಬಾರ ಕಟ್ಟಿಕೊಂಡು
ಭೂಚಕ್ರದ ಜಂಪಾಲೆ ಹೆಚ್ಚಿನ ಅವಳದ ಗೊಡಗು
ಎತ್ತಿ ಹಿಡಿಸಿಕೊಂಡು ಕತ್ತಲು ಕರಿಮಲೆಗೆ ಸಿಕರಿ ಬೇಟೆ
ಬಂದಿದ್ದರಂತೆ ತಿರುಗಿಣಿ ಪಟ್ಟಣವ ಆಳೂನೆ ಮಾಡಿದರು
ಅಂಬೋದು ಮುಂದೇನೆ ನಮ್ಮೀಗೆ ಅಪಶಾಪಣಿಕೆ
ಬರುತೈತೆ ಮುಂದೆ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ತಿರುಗಿಣಿ ಪಟ್ಟಣದಲ್ಲಿ ಆಡುವ ಮಕ್ಕಳ ಸುಳಿವಿಲ್ಲ. ಜನರನ್ನೆಲ್ಲ ಸಾವಿನ ದವಡೆಗೆ ನೂಕಲಾಗಿತ್ತು. ನಾಶವಾಗಿದ್ದಾರೆ. ಇಂತಹ ಸಮಯದಲ್ಲಿ ಕಾರ್ಣಿಕದ ಕಾಟಯ್ಯ ಕಾಳೆ ಕೆಂಚನ ಮಗನಿಗೂ ಭರಮನ ಮಗಳಿಗೂ ಮದುವೆ ಮಾಡಿದ ನಂತರ ಅವರಿಬ್ಬರೂ ತಿರಿಗಿಣಿ ಪಟ್ಟಣ ಬಿಟ್ಟು ಹೊರಟು ಹೋಗುತ್ತಾರೆ. ತಿರುಗಿಣಿ ಪಟ್ಟಣದ ಹೊರಗೆ ಇರುವ ಕಲ್ಯಾಣಿಗೆ ಬಂದು ಡೇರೆ ಹೊಡೆದು ಆಗ ಹವಳದ ಗೊಡಗನ್ನು ಮುಟ್ಟಬಾರದವರು ಮುಟ್ಟಿರುವ ಕಾರಣ ಮುನ್ನೂರು ಗಬ್ಬದ ಕುರಿ ಮರಿ ಬಲಿಕೊಡುತ್ತಾರೆ. ಅನ್ನದ ರಾಸಿಮಾಡಿ ಬ್ರಾಹ್ಮಣರಿಂದ ಹೋಮ ಮಾಡಿಸುತ್ತಾರೆ. ಗೊಡಗು ಶುದ್ದಿ ಕರಿಸುತ್ತಾರೆ. ಆಗ ಹವಳದ ಗೊಡಗು ಥಳ ಥಳ ಹೊಳೆಯುತ್ತದೆ. ಆಗ ಚಿತ್ತಯ್ಯ ಕಾಟಯ್ಯ ಮತು ಓಬಳಪತಿ ಕಲ್ಯಾಣಿಯಲ್ಲಿ ಸ್ನಾನಮಾಡಿ ನೂರ ಒಂದು ಲಿಂಗದ ಪೂಜೆ ಮಾಡುತ್ತಾರೆ. ನಂತರ ಮೂರು ಜನ ಹನ್ನೆರಡು ಸಾವಿರ ದಂಡಿಗೆ ಅನ್ನಕೊಟ್ಟು ನಂತರ ತಾವು ಕತ್ತಲು ಕರಿಮಲೆಯಲ್ಲಿ ಮಾಡಿ ಮುಚ್ಚಿಟ್ಟಿದ್ದ ಅಡುಗೆಯನ್ನು ಊಟ ಮಾಡುತ್ತಾರೆ.

೨.೩.೭ ಕಪ್ಪೆಯ ಸೃಷ್ಟಿ

ಊಟ ನಂತರ ಕಾಟಯ್ಯ ನಮ್ಮ ಊರಿಗೆ ಹೋಗೋಣ ಎಂದು ಹೇಳಿದಾಗ, ಅಣ್ಣ ನೀನು ಬ್ಯಾಟೆ ಆಡಲು ಬಂದು ಬ್ಯಾಟೆ ಆಡದೆ ಹೋದರೆ ಮನೆಯಲ್ಲಿ ಹೆಂಗಸರು ನಮಗೆ ಮರ್ಯಾದೆ

ಕೊಡುತ್ತಾರಾ? ಎಂದು ಹೇಳಿ ಬೇಟೆ ಆಡದೆ ಊರಿಗೆ ಬರುವುದಿಲ್ಲ ಎಂದು ಹಠ ಹಿಡಿಯುತ್ತಾನೆ. ಮೂರುತಿಂಗಳು ತಿರುಗಿಣಿ ಪಟ್ಟಣದಲ್ಲಿ ಹಲ್ಲಿ ಮರಿಯಾಗಿ ಹಡಗಿದ್ದರೂ ನಿನಗೆ ಬುದ್ಧಿ ಬರಲಿಲ್ಲವೇ ಚಿತ್ತಯ್ಯ ಎಂದು ಕೇಳುತ್ತಾನೆ. ಆದರೂ ಅಣ್ಣನ ಮಾತು ಕೇಳದೆ ಚಿತ್ತಯ್ಯ ಕಹಳೆ ಕೆಂಚನಿಂದ ಕಹಳೆ ಊದಿಸಿ ಮಿಕಗಳು ಹೊರಗೆ ಬರುವಂತೆ ಮಾಡುತ್ತಾನೆ. ಕಹಳೆ ಕೆಂಚ ಕಹಳೆ ಊದಿದ ತಕ್ಷಣ ಕಾಡಿನಲ್ಲಿ ವಾಸವಾಗಿದ್ದ ಕಾಡೆಮ್ಮೆ, ಕಡವೆ, ಸಾರಂಗ, ಮೊಲ, ಕಡತೆ ಮುಂತಾದ ಪ್ರಾಣಿಗಳು ಮಲ ಸೀಮೆಗೆ ಓಡಿ ಹೋಗುತ್ತವೆ. ಆಗ ಮಂಡರ ಕಪ್ಪೆಯು ಎಲ್ಲಾ ಮಿಕಗಳನ್ನು ತಡೆದು ಓಡಲು ಕಾರಣವೇನೆಂದು ಕೇಳಿ ಅದಕ್ಯಾಕೆ ಈ ರೀತಿ ಓಡುತ್ತೀರ ನಾನಿರುವಾಗ ನಿಮಗೆ ಬಂದಿರವ ಭಯವಾದರೂ ಏನು ಎಂದು ಅಭಯ ನೀಡುತ್ತದೆ. ಆಗ ಚಿತ್ತಯ್ಯ ಬೇಹುಗಾರನ್ನ ಕರೆದು ಯಾವ ಯಾವ ಪ್ರಾಣಿಗಳು ಎಲ್ಲಿ ಎಲ್ಲಿ ಇವೆ ಎಂಬುದನ್ನು ನೋಡಿಕೊಂಡುಬರಲು ಕಳುಹಿಸಿದಾಗ ಎದುರಿಗೆ ಕಪ್ಪೆ ಬಂದು ಅವನ ಮುಖಕ್ಕೆ ಉಗಿಯುತ್ತದೆ. ಅದರ ಭಯದಿಂದ ನಾನು ಪರದೇಸಿ ಎಂದು ಹೇಳುತ್ತಾನೆ. ನಂತರ ಕಪ್ಪೆ ಬೇಹುಗಾರನ ಜುಟ್ಟು ಹಿಡಿದು ಮುಖದ ತುಂಬ ಉಗಿದು ಕಳಿಸುತ್ತದೆ. ಅಷ್ಟೇ ಅಲ್ಲ ಮೇಲೆ ಉಚ್ಚೆ ಹೊಯ್ಯತ್ತದೆ.

ಚಿತ್ತಯ್ಯ ಕಾಟಯ್ಯ ಸಿಕ್ಕೋನ ನರಸಿಂಹನ
ಬೇವುಗಾರ ನೀನೆ ಅಲ್ಲವೇ ದಗಡಿ ಮಗನೆ ಅಂಬೋದಂತೆ
ಅವನ ಪಕ್ಕೆಲಬುಗಳನ್ನು ತೆಗೆಯೋದು
ಕಾಟಗೆ ಗಂಡನಾನು ಚಿತ್ತಗೆ ಮಿಂಡನಾನು
ಸಿಕ್ಕೋನು ನರಸಿಂಹಗೆ ಗಂತಲುಕೆ ಗಂಡನಾನು
ಗಂಡಾದರೆ ನನು ಮ್ಯಾಲೆ ಯುದ್ದಕ್ಕೆ ಬರಲಿ ಹೆಣ್ಣಾದರೆ
ಸಿತ್ತುರು ಗಿರಿಯ ಮುತ್ತಿನ ಅರಮನಿಯಾಗೆ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಎಂದು ಬೇಹುಗಾರನಿಗೆ ಹೇಳಿ ಕಳುಹಿಸುತ್ತದೆ. ಬೇಹುಗಾರ ಬಂದು ಕಪ್ಪೆ ಹೇಳಿದಂತೆ ಎಲ್ಲಾ ವಿಷಯವನ್ನು ಹೇಳಿದಾಗ ಚಿತ್ತಯ್ಯ ಕಪ್ಪೆಯ ಹುಟ್ಟು ಅಡಗಿಸುವುದಾಗಿ ಕುದುರೆ ಏರಿಕೊಂಡು ಹೋಗುತ್ತಾನೆ. ಆದರೆ ಚಿತ್ತಯ್ಯನ ಸಿಟ್ಟು ಕಪ್ಪೆಯ ಮುಂದೆ ಏನೂ ನಡೆಯುವುದಿಲ್ಲ. ಬೇಹುಗಾರನಿಗೆ ಮಾಡಿದಂತೆ ಮುಖದ ಮೇಲೆ ಉಗಿದು ನಂತರ ಉಚ್ಚೆ ಹೊಯ್ದು ಕಳುಹಿಸುತ್ತದೆ. ಆಗ ಕಾಟಯ್ಯ ಉಪಾಯ ಮಾಡಿ ಕಪ್ಪೆಯನ್ನು ಪಂಚಾಯತಿಗೆ ಕರೆಯುತ್ತಾನೆ. ನ್ಯಾಯಕ್ಕೆ ದೊಡ್ಡವ ಯಾರು ಎಂದು ಪಂಚಾಯತಿಗೆ ಕರೆದಾಗ ಚಿತ್ತಯ್ಯನ ಜುಟ್ಟು ಬಿಟ್ಟು ಪಂಚಾಯತಿ ಕಟ್ಟೆಗೆ ಬರುತ್ತದೆ.

'ಊರಿಲ್ಲ ಕೇರಿಲ್ಲ ನೀರಿಲ್ಲ ನೆರಳಿಲ್ಲ ಪಟ್ಟಣ ಪಾಳ್ಯಾವಿಲ್ಲ
ಅಂಥಂಬ ಆರನ್ನ ಅಡಿವ್ಯಾಗೆ ಅಂಕದ ಕಣವೇನ ಮಾಡ್ಸವಂನತೋ
ಕಣವೇನಾ ಮಾಡ್ಸವನಲ್ಲೋ ಹೆಂಬೇಡಿಗೆ ಹಾಳು
ಬೇವುಗಾರ ಕರಿಯಾಕೆ ಕಳುಸೋನಂತೆ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಬೇಹುಗಾರ ಹೋಗಿ ಹೆಂಬೇಡಿಯ ಮುಂದೆ ಕಾಟಯ್ಯ ನಿನ್ನ ನ್ಯಾಯಕ್ಕೆ ಕರೆದಿರುವನು ಬರಬೇಕೆಂದು ಹೇಳುತ್ತಾನೆ. ದಟ್ಟವಾದ ಅರಣ್ಯದಲ್ಲಿ ಕಣ ಮಾಡಿಸುತ್ತಾನೆ. ಆಗ ಎಂಬೇಡಿ ಏಳೂರು ಅಡ್ಡರ ಮಧ್ಯರಾತ್ರಿ ಬಂಡೆಬಿಟ್ಟು ಸಟ್ಟೆಂಬ ಮಧ್ಯರಾತ್ರಿ ಎಂಬೇಡಿ ನ್ಯಾಯ ಪಂಚಾಯತಿ ಸ್ಥಾನಕ್ಕೆ ಬರುತ್ತದೆ. ಕಾಟಯ್ಯ ಒಂದು ಮಾತಾಡಿದರೆ ಅದು ನೂರು ಮಾತಾಡುತ್ತದೆ. ಬೆಳಗಾದರೂ ಇವರಿಬ್ಬರ ನ್ಯಾಯ ಬಗೆ ಹರಿಯುವುದಿಲ್ಲ. ಏಳೆಂಟು ಗಂಟೆ ಆಗುತ್ತಾ ಬಂದಿತು. ಎಂಬೇಡಿಗೆ ಬಿಸಿಲು ಸಹಿಸಿಕೊಳ್ಳಲು ಆಗುತ್ತಿಲ್ಲ ಹಾಗಾಗಿ ಅದಕ್ಕೆ ಬಾಯಿ ಒಣಗುತ್ತಾ ಬಂದಿತು. ಕಾಟಯ್ಯ ಚಿತ್ತಯ್ಯನಿಗೆ ಸನ್ನೇಮಾಡಿ ಕುದುರೆ ಕಾಲಿನಿಂದ ಎಂಬೇಡಿಯನ್ನು ತುಳಿಸುವಂತೆ ಹೇಳುತ್ತಾನೆ. ಆಗ ಚಿತ್ತಯ್ಯ ಕರಿಕುದುರೆ ಹತ್ತಿಕೊಂಡು ಎಂಬೇಡಿಯನ್ನು ತುಳಿಸುತ್ತಾನೆ. ಆಗ ಎಂಬೇಡಿ ಸೋಲು ಒಪ್ಪಿಕೊಳ್ಳುತ್ತದೆ.

ಹಚ್ಚೋದು ನಿಮ್ಮದೀಪ ಮಾಸಾಮಿ

ಕಟ್ಟೋದು ನಿಮ್ಮ ಉಡುದಾರ ಮಾಸಾಮಿ

ಹುಟ್ಟ ಮಕ್ಕಳಿಗೆ ಹಿಡೋದು ನಿಮ್ಮ ಹೆಸರು ಮಾಸಾಮಿ

ಬದುಕಮ ತೀನಿ ಅಂದು ಕಾಟಯ್ಯನ ಪಾದಕ್ಕೆ ಎರಗೀತಂತೆ *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಯಾವಾಗ ಎಂಬೇಡಿಗೆ ಬಿಸಿಲ ಜಳ ಬಡಿಯಿತೋ ಆಗ ಅದು ಕಾಟಯ್ಯನ ಕಾಲು ಹಿಡಿಯದಿದ್ದರೆ ಸಾಯುವುದು ನಿಜವೆಂದು ಬಗೆದು ಕಾಟಯ್ಯನ ಹತ್ತಿರ ಪ್ರಾಣ ಬಿಕ್ಷೆ ಬೇಡುತ್ತದೆ. ಇದರಿಂದ ಕಾಟಯ್ಯನ ಮನಸ್ಸು ಕರಗುತ್ತದೆ. ಕಾಟಯ್ಯನ ಹೆಸರು ದೀಪ ಹಚ್ಚದು ಮಕ್ಕಳಿಗೆ ಹೆಸರಿಡುವುದು, ಅಷ್ಟೇ ಅಲ್ಲ ಮುಂಗಾರಿನ ಮಳೆಯ ಸಂದರ್ಭದಲ್ಲಿ ಧ್ವನಿಯ ಮೂಲಕ ಉರುಮೆ ಬಡಿಯುತ್ತದೆ.

ಇಂತಹ ಸಮಯದಲ್ಲಿ ಕಾಟಯ್ಯ ಚಿತ್ತಯ್ಯನಿಗೆ ಹೇಳಿ ಎಂಬೇಡಿಯನ್ನು ಬಿಡಿಸುತ್ತಾನೆ. ಆಗ ಬೇಹುಗಾರ ಎಂಬೇಡಿಗೆ ಶಾಪವ ಕೊಡುತ್ತಾನೆ. ನಿನ್ನ ಹಣೆ ಮ್ಯಾಲೆ ಮೂರು ಗೆರ ಮೂಡಲಿ ನಿನ್ನ ಸೊಂಟ ಮುರುದ ಕಾರಣ ನೀನು ನಡೆಯುವ ಬದಲು ಕುಪ್ಪಳಿಸಿ ಕುಪ್ಪಳಿಸಿ ನೆಗೆಯ ಬೇಕು ಎಂದು ಶಾಪ ಕೊಡುತ್ತಾನೆ. ಆಗ ಎಂಬೇಡಿ ಕಾಟಯ್ಯನಿಗೆ ನಿಮ್ಮ ಪ್ರತಾಪವನ್ನು ನನ್ನಂಥ ಹೆಣ್ಣಿನ ಮುಂದೆ ತೋರಿಸುವುದಲ್ಲ. ನಾನು ಮೂರು ಕಾಸಿನ ಹೆಂಗಸು ನೀವು ಸಾವಿರ ರೂಪಾಯಿ ಗಂಡಸರು. ನೀವು ನಮ್ಮಂತವರ ಮೇಲೆ ಯುದ್ಧ ಮಾಡುವುದಕ್ಕಿಂತ ನೆಲ್ಲೂರ ಸೀಮ್ಯಾಗೆ ಎರಮಲ ಎಂಬುದಿದೆ ಅದರ ಮೇಲೆ ಯುದ್ಧಮಾಡಿ ಗೆದ್ದರೆ ನಿಮ್ಮನ್ನ ಗಂಡಸರು ಎನ್ನುತ್ತೇನೆ ಎಂದು ಎರಮಲದ ರೀತಿ ನೀತಿಗಳನ್ನು ಕಾವ್ಯದ ಮೂಲಕ ಹಾಡುತ್ತದೆ.

೨.೩.೮ ಮೊಲದ ಸೃಷ್ಟಿ

ಆರು ಖಂಡುಗದ ಗದ್ದೆ ಹಾರಿಸಿ ಮೇಯೋದು

ಮೂರು ಕಂಡುಗದ ಗದ್ದೆ ಮುಸಿನೋಡಿ ಮೇಯೋದು

ಆರು ಕೆರೆಯ ನೀರು ಹಾರಿಸಿ ಕುಡಿಯೋದು

ಮೂರು ಕೆರಯ ನೀರು ಮುಸಿನೋಡಿ ಕುಡಿಯೋದು

ಹಂಚಿಹುಲ್ಲು ಮೇಯೋದು ಬೆಂಚೆಗೆ ನೀರು ಕುಡಿಯೋದು

ಸಾಣೆಯ ಕಲ್ಲಮೇಲೆ ಮೀಸೆಯ ಮಸಿಯೋದು

ಅದರೂನೆ ಮ್ಯಾಲೆ ನೀವು ಹೋದಾರೆ

ನಿಮ್ಮುನ್ನ ಗಂಡಸರು ಅಂಬುತೀನಿ ನಾನು *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಯರಮೊಲ ಎಂಬೇಡಿಗಿಂತ ಬಲವಾದದ್ದು ಹಾಗಾಗಿ ಅದರ ಮೇಲೆ ಯುದ್ಧಮಾಡಿ ಜಯಿಸಿರಿ ಎಂದು ಎಂಬೇಡಿ ಹೇಳಿದಾಗ ಚಿತ್ತಯ್ಯ ಕಾಟಯ್ಯನ ಅಪ್ಪಣೆಗಾಗಿ ಕೇಳಿದಾಗ ನೀನು ಅಪ್ಪಣೆ ಕೊಟ್ಟದ್ದೆ ಆದರೆ ಎಂಬೇಡಿಯನ್ನು ತುಣಿಸಿದ ಆಗೆ ಇದನ್ನು ಕುದುರೆ ಕಾಲಿನಿಂದ ತುಣಿಸಿ ಬಿಡುತ್ತೇನೆ ಎಂದು ಹೇಳುತ್ತಾನೆ. ಚಿತ್ತಯ್ಯ ಹೀಗೆ ಕಾಟಯ್ಯ ಎಂಬೇಡಿ ಹೇಳುವುದು ನಿಜ ಯರಮೊಲ ಅಷ್ಟು ಸುಲಬವಾಗಿ ಸೋಲುವುದಿಲ್ಲ. ಅದಕ್ಕೆ ಬೇರೆ ಉಪಾಯ ಮಾಡಬೇಕು ಎಂದು ಹೇಳುತ್ತಾನೆ. ಆಗ ಕಾಟಯ್ಯನ ಮಾತು ಮೀರಿ ಚಿತ್ತಯ್ಯ ಅಂತರಿಕ್ಷದ ಮೂಲಕ ಕುದುರೆ ಹಾರಸಿಕೊಂಡು ಹೋಗುತ್ತಾನೆ. ಆಗ ಯರಮೊಲ ಅವನನ್ನು ತಿನ್ನಬೇಕೆಂದು ಬಾಯಿ ತೆರೆಯುತ್ತದೆ. ಆಗ ಕಾಟಯ್ಯ ಅನ್ಯಾಯವಾಗಿ ಚಿತ್ತಯ್ಯ ಸಾಯುತ್ತಾನೆ. ಅವನ ಹೆಂಡತಿ ಮಾಳಮ್ಮ ರಂಡೆಯಾಗುತ್ತಾಳೆಂದು ತಿಳಿದು ಅಪಾಯದಿಂದ ಚಿತ್ತಯ್ಯನನ್ನು ಕಾಪಾಡುತ್ತಾನೆ. ಆ ನಂತರ ಚಿತ್ತಯ್ಯ ಜೂಲು ನಾಯಿಗಳನ್ನು ಯರಮೊಲದ ಮೇಲೆ ಬಿಡುತ್ತಾನೆ. ಒಂದೂ ನಾಯಿ ಉಳಿಯದಂತೆ ತಿಂದು ಹಾಕುತ್ತದೆ. ತೋಟ, ಬಂದೂಕ, ಅಂಬು, ಬಾಣ, ಯಾವುದು ನಾಟುವುದಿಲ್ಲ. ಚಿತ್ತಯ್ಯ ಕಾಳೆ ಕೆಂಚನ್ನ ಕರೆದು ಕಹಳೆ ಊದುವಂತೆ ಹೇಳುತ್ತಾನೆ. ಕಹಳೆಯ ಧ್ವನಿಗೆ ಕಾಡಿನ ಪ್ರಾಣಿಗಳು ದಿಕ್ಕೆದ್ದು ಓಡುತ್ತವೆ. ಓಡುವ ಪ್ರಾಣಿಗಳನ್ನು ಯರಮೊಲ ತಡೆದು ಕೇಳುತ್ತದೆ. ಆಗ ಅವುಗಳು ಈ ರೀತಿ ಹೇಳುತ್ತವೆ. ಚಿತ್ತಯ್ಯ ಕಾಟಯ್ಯ ಮತ್ತು ನರಸಿಂಹ ಇವರು ಮೂರು ಜನ ಅಣ್ಣ ತಮ್ಮರು. ಇವರು ಶಿವನ ವರದಿಂದ ಹುಟ್ಟಿದವರು, ಹಾಗಾಗಿ ಕತ್ತಲು ಕರಿಮಲೆಗೆ ಬ್ಯಾಟೆ ಆಡಲು ಬಂದಿದ್ದಾರೆ. ಹಾಗಾಗಿ ಅವರ ಕೈಗೆ ಸಿಕ್ಕರೆ ಉಳಿಯುವುದು ಕಷ್ಟ. ಅದಕ್ಕಾಗಿ ಪ್ರಾಣ ಉಳಿಸಿಕೊಳ್ಳಲು ಮಲ ಸೀಮೆಗೆ ಓಡುತ್ತಿದ್ದೇವೆ ಎಂದು ಹೇಳುತ್ತವೆ ಪ್ರಾಣಿಗಳು. ಆಗ ಯರಮೊಲ ನಿಮ್ಮ ರಕ್ಷಣೆಗೆ ತಾನಿರುವುದಾಗಿ ಬರವಸೆ ಕೊಡುತ್ತದೆ. ಯಾವಾಗ ಯರಮಲ ಚಿತ್ತಯ್ಯನ ವಿರುದ್ದ ತಿರುಗಿ ಬೀಳುತ್ತದೋ ಆಗ ಕಾಟಯ್ಯ ಚಿಂತಾಮಣಿ ಪುಸ್ತಕ ತೆಗೆದು ನೋಡುತ್ತಾನೆ. ಅದರಲ್ಲಿ ಮಾಳಮ್ಮ ಸಾಕಿಕೊಂಡಿರುವ ಗಿಡುಗ ಮತ್ತು ಮೂಳನಾಯಿ ಯರಮೊಲದ ಸಾವು ಎಂದು ಬರೆದಿರುತ್ತದೆ. ತಕ್ಷಣ ಕಾಟಯ್ಯ ಪತ್ರವನ್ನು ಬೆರೆದು ಗುಂಗಾರಿಯ ಕಾಲಿಗೆ ಕಟ್ಟಿ ಅದಕ್ಕೆ ವಿದ್ಯಾಬುದ್ಧಿ ಹೇಳಿ ಪತ್ರವನ್ನು ಮಾಳಮ್ಮನ ಕೈಗೆ ಕೊಡುವಂತೆ ಹೇಳಿ ಕಳಿಸುತ್ತಾನೆ. ಗುಂಗಾರಿ ಬಂದು ಮಾಳಮ್ಮನ ಕೈಗೆ ಪತ್ರಕೊಡುತ್ತದೆ. ಪತ್ರವನ್ನುನ್ನು ಓದಿಕೊಂಡ ಮಾಳಮ್ಮ ಗಿಡಗನಿಗೂ ಮೂಳುನಾಯಿ ಹಬ್ಬದ ಅಡಿಗೆ ಮಾಡಿ ಊಟಕ್ಕೆ ಹಾಕಿ ಯರಮೊಲವನ್ನು ಕೊಲ್ಲುವ ಬಗೆಯನ್ನು ಹೇಳಿಕೊಟ್ಟು ಕಳುಹಿಸುತ್ತಾಳೆ. ಅವುಗಳು ಮಾಳಮ್ಮ ಹೇಳಿದಂತೆ ಆಕಾಶಕ್ಕೆ ಗಿಡುಗ ಹಾರುತ್ತದೆ, ಆಗ ಪತ್ರಯನ್ನ ಯರಮೊಲದ

ದೃಷ್ಟಿ ಗಿಡುಗನ ಮೇಲೆ ಬೀಳುತ್ತದೆ. ಇದನ್ನು ಗಮನಿಸಿದ ಮೂಳುನಾಯಿ ಕೆಳಗೆ ತೂರಿ ಯರಮಲದ ತೊರಡು ಬೀಜ ಹಿಡಿದು ಕೀಳುತ್ತದೆ. ಆಗ ಯರಮೊಲ ಸತ್ತು ನೆಲಕ್ಕೆ ಬೀಳುತ್ತದೆ. ಆಗ ಹನ್ನೆರಡು ಪಾಟಲ ದಂಡು ಯರಮೊಲವನ್ನು ಕೊಯ್ದು ಸಣ್ಣ ಸಣ್ಣ ಭಾಗ ಮಾಡಿ ಆನೆ ಕುದುರೆ ಮೇಲೆ ಹೇರುತ್ತಾರೆ. ನಂತರ ಚಿತ್ರಗಿರಿಯ ಕಡೆ ಹೊರಡುತ್ತಾರೆ. ಕಾರ್ಣಿಕದ ಕಾಟಯ್ಯ ಮೊಲಗಳ ಸಂಖ್ಯೆ ನಮ್ಮಿಂದ ನಾಶಹೊಂದಿದವು ಎಂಬ ಕಳಂಕವನ್ನು ನಾವು ಹೊತ್ತು ಕೊಳ್ಳಬಾರದು ಎಂದು, ಮರು ಸೃಷ್ಟಿ ಮಾಡುತ್ತಾನೆ. ಅದು ಯಾವ ರೀತಿಯೆಂದರೆ ಅದು ನೀರು ಕುಡಿಬಾರದು ಕರಿಕೆ ಹುಲ್ಲು ಮೇದು ಅಂಗಾಲು ನೆಕ್ಕಿಕೊಂಡರೆ ಬಾಯಾರಿಕೆ ಹಿಂಗುವಂತೆ ಅದು ಓಡುವಾಗ ಕಿವಿಗಳೆರಡು ನೆಟ್ಟಗೆ ನಿಲ್ಲುವಂತೆ ಕಣ್ಣುಗಳು ಪಿಳಿ ಪಿಳಿ ಹೊಳೆಯುವಂತೆ ಮಧ್ಯರಾತ್ರಿಯಲ್ಲಿ ಅದು ಆಹಾರ ತಿನ್ನಬಹುದು ಎಂದು ಆಶಿರ್ವಾದ ಮಾಡುತ್ತಾನೆ.

ಬೇಟೆಯಾಡಿ ಬಂದ ಚಿತ್ತುರಗಿರಿಯ ಮುತ್ತಿನ ಅರಮನೆಯ ಮುಂದೆ ಗಂಗೆಮಾಳಮ್ಮ ಎಲ್ಲರಿಗೂ ಆರತಿ ಬೆಳಗುವಾಗ ಚಿತ್ತಯ್ಯ ನಾಚಿಕೆಯಿಂದ ತನ್ನ ಮುಖವನ್ನು ಹಿಂದಕ್ಕೆ ತಿರುಗಿಸುತ್ತಾನೆ. ಗಂಡ ಹೆಂಡತಿಯರನ್ನು ಸಮಾದಾನ ಮಾಡುತ್ತಾನೆ. ಆ ಹೊತ್ತಿಗೆ ಕಲಿಯುಗ ಪ್ರಾರಂಭವಾಗಿ ದೈವದವರದಿಂದ ಹುಟ್ಟಿದ ಮೂವರು ಮನುಷ್ಯನಿಗೆ ಅವಕಾಶ ಮಾಡಿಕೊಟ್ಟು ತಾವುಗಳು ದೇವರುಗಳಾಗಿ ಬದಲಾದರು. ಗೊಡಗು ಮತ್ತು ಕಹಳೆಯನ್ನು ಮೊದಲು ಎಲ್ಲಿದ್ದವೋ ಅಲ್ಲಿಗೆ ಇಟ್ಟು ಮುಚ್ಚುವರು. ಅವು ಇರುವಂತ ಸ್ಥಳದಲ್ಲಿ ಇಂದಿಗೂ ದೀಪ ಉರಿಯುತ್ತಿದೆ. ಎಂದು ಕಾಡುಗೊಲ್ಲರ ನಂಬಿಕೆ

೨.೩.೯. ಕುರಿನಾಗರ ಈರಜ್ಜ ಹೇಳಿದ ಕಾಡುಗೊಲ್ಲರ ಸೃಷ್ಟಿ ಪುರಾಣ

ಇದೇ ಸೃಷ್ಟಿ ಪುರಾಣವನ್ನು ಯರಬಳ್ಳಿಗೊಲ್ಲರಹಟ್ಟಿವಾಸಿ ಕುರಿ ನಾಗರ ಈರಜ್ಜ ಬೇರೊಂದು ರೀತಿಯಲ್ಲಿ ಹೇಳುತ್ತಾನೆ. ಆತ ಹೇಳುವ ಪ್ರಕಾರ ಭೂದೇವತೆಯು ತನ್ನ ಮಗನಾದ ಶಿವನಿಂದ ಮಕ್ಕಳನ್ನು ಪಡೆಯಬೇಕೆಂದು ಬಯಸಿ ತನ್ನ ಇಂಗಿತವನ್ನು ಶಿವನ ಮುಂದೆ ಇಟ್ಟಾಗ ಶಿವನು ಅವಳ ಮಾತಿಗೆ ಒಪ್ಪುವುದಿಲ್ಲ. ಇದರಿಂದಾಗಿ ಕೋಪಗೊಂಡ ಭೂದೇವತೆ ಶಿವನೊಂದಿಗೆ ಶಪಥ ಮಾಡುತ್ತಾಳೆ. ಏನೇಂದರೆ ಮುಂದೇ ಒಂದಲ್ಲ ಒಂದು ದಿನ ನಿನ್ನಿಂದಲೇ ಮಕ್ಕಳನ್ನು ಪಡೆಯದಿದ್ದ ಮೇಲೆ ನನ್ನ ಹೆಸರು ಭೂದೇವತೆ ಎಂದು ಕರೆಯ ಬೇಡ ಎಂದು ಹೇಳಿ ಬರುತ್ತಾಳೆ. ಇದೇ ಸಮಯದಲ್ಲಿ ಬೆಸ್ತರಹಳ್ಳಿ ಕಾವಲಿಗೆ ಬೆಂಕಿ ಬೀಳುತ್ತದೆ. ಆ ಬೆಂಕಿಯನ್ನು ಕೆಡಿಸುವಂತೆ ಪಾರ್ವತಿಯು ಹೇಳಿದಾಗ ಶಿವನು ಬೆಂಕಿಯನ್ನು ಕೆಡಿಸುವ ಸಮಯದಲ್ಲಿ ಅವನ ಮೈಯಲ್ಲಿ ಬೆವರು ಬರುತ್ತದೆ. ಆಗ ಶಿವನಿಗೆ ಭೂದೇವತೆ ಮಾಡಿರುವ ಶಪಥ ನೆನಪಾಗಿ, ಅವನು ಪಾರ್ವತಿಯನ್ನು ಕರೆದು ಮೈ ಬೆವರಿನ ನೀರಿನ ಒಂದು ಹನಿಯೂ ನೆಲದ ಮೇಲೆ ಬೀಳದಂತೆ ನೋಡಿಕೊಳ್ಳಬೇಕೆಂದು ಹೇಳುತ್ತಾನೆ. ಅದೇ ರೀತಿ ಪಾರ್ವತಿಯು ಮೈ ಬೆವರು ಒರಿಸುವಾಗ ಶಿವನ ಮೈಯಿಂದ ಮೂರು ಉಂಡೆ ಮಣ್ಣು ಬರುತ್ತದೆ. ಆ ಮಣ್ಣಿನ ಉಂಡೆಗಳನ್ನು ಪಾರ್ವತಿಯು ಕಲ್ಲಿನ ಮೇಲಿಟ್ಟು ಮರೆತು ಕೈಲಾಸಕ್ಕೆ ಹೋಗುತ್ತಾಳೆ. ಇವರು ಹೋದ ನಂತರ ಮಳೆ ಬರುತ್ತದೆ. ಮಳೆಯ ನೀರಿನಲ್ಲಿ ಮಣ್ಣು ಉಂಡೆಗಳು ಕರಗಿಹೋಗಿ

ಭೂದೇವತೆಯ ಮಡಿಲು ಸೇರಿಕೊಂಡು ಭೂ ದೇವತೆ ಗರ್ಭಧರಿಸಲು ಕಾರಣವಾಗುತ್ತದೆ. ಆರು ಮೂರು ಒಂಬತ್ತು ತಿಂಗಳು ತುಂಬಿ ಭೂದೇವತೆ ಮೂರು ಗಂಡು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಆ ಮಕ್ಕಳೇ ಕಾಟಯ್ಯ, ಚಿತ್ತಯ್ಯ, ಮತ್ತು ಓಬಳಪತಿ ಇವರು ಹುಟ್ಟಿ ತನ್ನ ತಾಯಿಯಾದ ಭೂದೇವತೆಯನ್ನು ನಮ್ಮ ಕೆಲಸ ಕಾರ್ಯಗಳನ್ನು ಹೇಳಬೇಕೆಂದು ಕೇಳಿದಾಗ, ಅವಳು ನಿಮ್ಮ ಜನನಕ್ಕೆ ಕಾರಣ ಪರಶಿವನು. ಅವನು ಕೈಲಾಸದಲ್ಲಿರುವನು. ನೀವು ಅವನ ಬಳಿಗೆ ಹೋಗಿ ಕೇಳೀರಿ. ನಿಮ್ಮ ಕೆಲಸ ಕಾರ್ಯಗಳನ್ನು ಹಾಗೂ ನಿಮ್ಮ ಕುಲದ ರೀತಿ ನೀತಿಗಳನ್ನು ಕಲಿಸಿಕೊಡುತ್ತಾನೆ ಎಂದು ಹೇಳಿ ಕೈಲಾಸಕ್ಕೆ ಕಳುಹಿಸುತ್ತಾಳೆ. ಭೂಲೋಕದಿಂದ ಕೈಲಾಸಕ್ಕೆ ಹೋಗಿ ಶಿವನಿಗೆ ನಮಸ್ಕಾರ ಮಾಡಿ ತಮಗೆ ಗೊಲ್ಲಕುಲದ ರೀತಿ ನೀತಿಗಳನ್ನು ಹೇಳಬೇಕೆಂದು ಕೇಳಿದಾಗ, ಶಿವನಿಗೆ ಆಶ್ಚರ್ಯವಾಗುತ್ತದೆ. ಆಗ ಶಿವನು ನೀವು ಯಾರು? ಎಲ್ಲಿಂದ ಬಂದಿರುವಿರಿ? ನಿಮ್ಮನ್ನು ಯಾರು ಕಳುಹಿಸಿದರು? ಎಂದು ಕೇಳುತ್ತಾನೆ. ಅದಕ್ಕೆ ಕಾಟಯ್ಯ ನಾವು ಭೂದೇವತೆಯ ಮಕ್ಕಳು ನಮಗೆ ತಂದೆ ನೀವೇ ಅಂತ ನಮ್ಮ ತಾಯಿ ಹೇಳಿ ಕಳುಹಿಸಿದ್ದಾಳೆ. ಹಾಗಾಗಿ ನಮಗೆ ನಮ್ಮ ಕುಲದ ಆಚಾರ ವಿಚಾರ ಮತ್ತು ನಾವು ಮಾಡುವ ಕಾಯಕವನ್ನು ಹೇಳಿದರೆ ನಾವು ಆ ಕೆಲಸ ಮಾಡಿಕೊಂಡು ಇರುತ್ತೇವೆಂದು ಹೇಳುತ್ತಾರೆ. ಆಗ ಶಿವನು ನೆನಪು ಮಾಡಿಕೊಂಡು ಪಾರ್ವತಿಯು ಮರೆತ ಮಣ್ಣಿನ ಉಂಡಗಳೇ ಈ ಮಕ್ಕಳು ಎಂದು ತಿಳಿದು ಕೊನೆಗೂ ತನ್ನ ಬಯಕೆಯನ್ನು ಇಡೇರಿಸಿಕೊಂಡಳು ಎಂದು ತಿಳಿದು, ಅವರು ಬದುಕಿನ ಬಗೆಯನ್ನು ಹೇಳಿಕೊಟ್ಟನು. ನೀವು ಚಿತ್ರಗಿರಿಯನ್ನು ಆಳುವ ದೊರೆಗಳಾಗಿ ಬಾಳಿರಿ ಎಂದು ಆಶಿರ್ವಾದ ಮಾಡಿ ಭೂ ಲೋಕಕ್ಕೆ ಕಳುಹಿಸುತ್ತಾನೆ. ಅವರು ದೊರೆಗಳಾಗಿ ಆಳುವುದಕ್ಕೆ ಮುತ್ತಿಗೊಡಗು, ಐರಾವತ, ಮುತ್ತುರತ್ನದರಾಶಿ, ಹೆಚ್ಚಿನ ಹೆಗ್ಗಾಳೆ ಅರಮನೆಯನ್ನು ಕಟ್ಟಿಸಿಕೊಟ್ಟನು. ಆ ನಂತರ ಇವರು ಚಿತ್ರಗಿರಿಯ ದೊರೆಗಳಾದರು ಎಂದು ಹೇಳುತ್ತಾರೆ.

೨.೩.೧೦. ಸೃಷ್ಟಿ ಪುರಾಣದ ವಿಮರ್ಶೆ

ಕಾಟಯ್ಯ, ಚಿತ್ತಯ್ಯ ಮತ್ತು ಓಬಳಪತಿ ಈ ಮೂರು ಜನರ ಸೃಷ್ಟಿಪುರಾಣವನ್ನು ಗಮನಿಸಿದಾಗ ಕಾಡುಗೊಲ್ಲರು ಪಶುಪಾಲನೆಗಿಂತ ಮುಂಚಿತವಾಗಿ ಬೇಟೆಗಾರರಾಗಿದ್ದರೂ ಎಂಬುದು ಸ್ಪಷ್ಟವಾಗುತ್ತದೆ. ಈ ಮೂರು ಜನರ ಸೃಷ್ಟಿಯೂ ಶಿವನಿಂದ ಆಗುತ್ತದೆ. ಈ ಮೂವರು ದೈವವಾಗಿದ್ದಾರೆ. ಇಂದು ಆರಾಧನೆಗೆ ಒಳಪಟ್ಟವರೆಗೆ ಒಂದು ಕಾಡುಗೊಲ್ಲರು ಆಂಧ್ರದ ಬೆಸ್ತರಳ್ಳಿ ಕಾಡಿನಲ್ಲಿ ಹುಟ್ಟಿದರು ಎಂಬುದು ಅವರು ಹೇಳುವ ಮೌಖಿಕ ಕಾವ್ಯದಿಂದ ತಿಳಿದು ಬರುತ್ತದೆ. ಕಾಡುಗೊಲ್ಲರ ನಡುಗೆ ಆಂಧ್ರ ಪ್ರದೇಶದಿಂದ ಪ್ರಾರಂಭವಾಗಿ ಮಧ್ಯ ಕರ್ನಾಟಕದವರೆಗೆ ಒಂದು ನೆಲೆ ನಿಂತಿರುವುದನ್ನು ಕಾಣಬಹುದು. ಈ ಸೃಷ್ಟಿ ಪುರಾಣಗಳ ಗಮನಿಸಿದಾಗ ನಮಗೆ ಹೊಳೆಯುವ ಪ್ರಮುಖ ಅಂಶವೆಂದರೆ ಇವರು ಮೊದಲು ವೈವಾಹಿಕ ಸಂಬಂಧವನ್ನು ಉಚ್ಚ ಜಾತಿಗಳಲ್ಲಿ ಮೊದಲನೆ ಸ್ಥಾನ ಪಡೆದ ಬ್ರಾಹ್ಮಣ ಜಾತಿಯೊಂದಿಗೆ ಬೆಳೆಸಿರುವುದು ಕಂಡು ಬಂದಿದೆ. ಆಂಧ್ರದಲ್ಲಿ ಶಿವನ ಬೆವರಿನಿಂದ ಹುಟ್ಟಿದ ಇವರು ಅಲ್ಲಿ ನೆಲೆನಿಲ್ಲದೆ ನೇರವಾಗಿ ಚಿತ್ರದುರ್ಗವನ್ನು ಆಳ್ವಿಕೆ ಮಾಡಿರುವ ಬಗ್ಗೆ ಅವರ

ಮೌಖಿಕ ಕಾವ್ಯಗಳು ಹೇಳುತ್ತವೆ. ಚಿತ್ರದುರ್ಗದ ಏಳು ಸುತ್ತಿನ ಕೋಟೆಯನ್ನು ಚಿತ್ರನಾಯಕ ಕಟ್ಟಿಸಿರುವನೆಂದು ಇತಿಹಾಸಕಾರರು ಹೇಳುತ್ತಾರೆ. ಆದರೆ ಅವರು ಕಾಡುಗೊಲ್ಲರು ಎಂದು ಲಿಖಿತ ಆಧಾರಗಳು ದೊರೆಯದ ಕಾರಣ ಈ ಅಭಿಪ್ರಾಯವನ್ನು ಸಮರ್ಥಿಸಲು ಆಗುವುದಿಲ್ಲ. ಅದೇನೇ ಇರಲಿ ಕಾಡುಗೊಲ್ಲರಲ್ಲರುವ ಸೃಷ್ಟಿಪುರಾಣವು ಕಾಡುಗೊಲ್ಲರ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಮೈಲಿಗಲ್ಲು ಎಂದು ಹೇಳಿದರೆ ತಪ್ಪಾಗಲಾರದು. ಕಾಡುಗೊಲ್ಲರಿಗೆ ಹೆಣ್ಣು ಕೊಟ್ಟ ಬ್ರಾಹ್ಮಣ ಬಮ್ಮಯ್ಯ ಕಾಡುಗೊಲ್ಲನಾಗಿ ಪರಿವರ್ತನೆಯಾಗಿರುವುದರ ಜೊತೆಗೆ ಪ್ರತ್ಯೇಕವಾದ ಹೊಸದೊಂದು ಬೆಡಗು ಸೃಷ್ಟಿಯಾಯಿತು. ಆ ಬೆಡಗನ್ನು ಕಾಡುಗೊಲ್ಲರು ಹೆಗಡೆ ಗೊಲ್ಲರು ಎಂದು ಕರೆಯುತ್ತಾರೆ. ಈ ಸೃಷ್ಟಿ ಪುರಾಣದಲ್ಲಿ ಕಾಡುಗೊಲ್ಲರಿಗೆ ಹೆಣ್ಣು ಕೊಡಲು ಒಪ್ಪದ ಬ್ರಾಹ್ಮಣ ಬಮ್ಮಯ್ಯನನ್ನು ಪಗಡೆ ಆಟದಲ್ಲಿ ಸೋಲಿಸುವುದರ ಜೊತೆಗೆ ಬ್ರಾಹ್ಮಣನಿಗೆ ಮಾಂಸದ ಅಡುಗೆ ಊಟ ಮಾಡಿಸುವುದರ ಮೂಲಕ ಇಡೀ ಬ್ರಾಹ್ಮಣತ್ವವನ್ನು ನಿರಾಕರಿಸುವಂತೆ ಮಾಡಿರುವುದು ಕಂಡುಬರುತ್ತದೆ. ಬ್ರಾಹ್ಮಣ ಕನ್ಯೆಯನ್ನು ಮದುವೆ ಆದ ಚಿತ್ತಯ್ಯ ಸಂಸಾರದಲ್ಲಿ ಯಾವ ರೀತಿಯ ಸುಖವನ್ನು ಅನುಭವಿಸಲಿಲ್ಲ.

ಚಿತ್ತಯ್ಯನ ಮದುವೆಯು ಕಾಡುಗೊಲ್ಲರ ಸಂಪ್ರದಾಯದಂತೆ ನಡೆದಿರುವುದನ್ನು ಈ ಸೃಷ್ಟಿ ಪುರಾಣ ಹೇಳುತ್ತದೆ. ಅರುಣೆ ತರುವ ಶಾಸ್ತ್ರದಿಂದ ಪ್ರಾರಂಭವಾಗಿ ಧಾರೆ ಮುಹೂರ್ತದ ವರೆಗೂ ಕಾಡುಗೊಲ್ಲರ ಸಂಪ್ರದಾಯದ ಪ್ರಕಾರ ಸೊಳ್ಳೀರು ಹೊಯ್ಯವುದು, ನೆಂಟರ ಪೂಜೆ, ಜಾಡಿಪೂಜೆ ಮುಂತಾದ ಶಾಸ್ತ್ರಗಳನ್ನು ಮಾಡುವುದರ ಮೂಲಕ ಮದುವೆ ಮಾಡಿಕೊಳ್ಳುತ್ತಾನೆ. ಕಾಡುಗೊಲ್ಲರಲ್ಲಿ ವರ್ಣಸಂಕರವಾದದ್ದು ತಿಳಿದು ಬರುತ್ತದೆ.

ಈ ಸೃಷ್ಟಿ ಪುರಾಣದಲ್ಲಿ ಬಹುಮುಖ್ಯವಾದ ವಿಷಯವೆಂದರೆ ಶಿವ–ಪಾರ್ವತಿಯರಿಂದ ಸೃಷಿಯಾದ ಕಾಡುಗೊಲ್ಲರ ನಾಯಕರಾದ ಕಾಟಯ್ಯ, ಚಿತ್ತಯ್ಯ, ಓಬಳಪತಿ ಈ ಮೂರು ಜನರನ್ನು ಸಾಕುವ ಜವಾಬ್ಧಾರಿಯನ್ನು ಕಾಡಿನಲ್ಲಿರುವ ಮರಗಳಿಗೆ ನೀಡಿರುವುದನ್ನು ಗಮನಿಸಿದರೆ, ಕಾಡುಗೊಲ್ಲರು ಪ್ರಾರಂಭದ ಕಾಲಘಟ್ಟದಲ್ಲಿ ತಮ್ಮ ಮಕ್ಕಳನ್ನು ಅಡವಿಯಲ್ಲಿ ಬಿಟ್ಟು ಹೋಗುತ್ತಿದ್ದಿರಬಹುದು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಎತ್ತಪ್ಪನ ಕಾವ್ಯದಲ್ಲಿ ಎತ್ತಪ್ಪ ಒಬ್ಬ ಅನಾಥ. ಅವನ ತಂದೆ ತಾಯಿ ಯಾರೋ ಗೊತ್ತಿಲ್ಲ. ಗೌರಸಮುದ್ರದ ಮಾರಮ್ಮ ಸಾಕಿ ದೊಡ್ಡವನನ್ನಾಗಿ ಮಾಡುತ್ತಾಳೆ. ಅದೇ ರೀತಿ ಜುಂಜಪ್ಪನ ಕಾವ್ಯದಲ್ಲಿಯೂ ಜುಂಜಪ್ಪನ ತಂದೆಯ ಹೆರಿಗೆಯಾದ ಬಳಿಕ ಕಂಬಕ್ಕ ಮತ್ತು ದೇವರದಯಾಮಾರ ಬಿಟ್ಟು ಹೋಗುತ್ತಾರೆ. ಹೀಗೆ ಅನಾಥರಾದ ಮಕ್ಕಳಿಗೆ ಶಿವ ಪಾರ್ವತಿಯರೇ ತಾಯಿ ತಂದೆಗಳು ಈ ನಿಯಮ ಈ ಸೃಷ್ಟಿಪುರಾಣಕ್ಕೂ ಅನ್ವಹಿಸುತ್ತದೆ.

ಸೃಷ್ಟಿಪುರಾಣದಲ್ಲಿ ಕಾಡುಗೊಲ್ಲರ ಸೃಷ್ಟಿಯ ಜೊತೆಗೆ ನೀರಿನ ಸೃಷ್ಟಿಯು ಆಗಿರುವುದನ್ನು ಗಮನಿಸಬಹುದು. ಭೂಮಿಯ ಮೇಲೆ ಕಾಡುಗೊಲ್ಲರು ಹುಟ್ಟಿದಂತಹ ಸಮಯದಲ್ಲಿ ಕಾಟಯ್ಯನಿಗೆ ಬಾಯರಿಕೆ ಆಗುತ್ತದೆ. ಆಗ ಅಣ್ಣನ ಬಾಯಾರಿಕೆಯನ್ನು ನೀಗಿಸುವ ಸಲುವಾಗಿ ಓಬಳಪತಿ ತನ್ನ ಬಾಣವನ್ನು ಭೂಮಿಗೆ ಬಿಟ್ಟ ಆ ಮೂಲಕ ಪಾತಾಳ ಲೋಕದಲ್ಲಿದ್ದ ಗಂಗೆಯನ್ನು ಭೂಮಿಯ ಮೇಲೆ ಹರಿಯುವಂತೆ ಮಾಡಿದನು.

ಕಾಡುಗೊಲ್ಲರ ಹತ್ತಿರವಿರುವ ಸಂಪತ್ತನ್ನು ವಶಮಾಡಿಕೊಳ್ಳಬೇಕೆಂಬ ಬಮ್ಮಯ್ಯನ ಬಯಕೆ ಈಡೇರದಂತೆ ಹಾಗೆಯೇ ಕಮರಿ ಹೋಗಿರುವುದನ್ನು ಕಾಣಬಹುದು. ಕಾಡುಗೊಲ್ಲರನ್ನು ಪಗಡೆ ಆಟದಲ್ಲಿ ಸೋಲಿಸುವ ಮೂಲಕ ಅವರ ಸಂಪತ್ತನ್ನು ಕಬಳಿಸಬೇಕೆಂಬ ಬಮ್ಮಯ್ಯನ ದುರಾಲೋಚನೆ ಕಾಟಯ್ಯನ ಮುಂದೆ ನಡೆಯುವುದಿಲ್ಲ. ಕಾಡುಗೊಲ್ಲರು ಕಾಡಿನಲ್ಲಿರುವ ಕಾರಣದಿಂದ ಅವರು ದಡ್ಡರಲ್ಲ ಎಂಬುದನ್ನು ಕಾಟಯ್ಯನ ಮೂಲಕ ಅರಿತಕೊಳ್ಳಬಹುದು. ಕಾಟಯ್ಯ ಸೌಮ್ಯ ಸ್ವಭಾವದವನಾಗಿದ್ದರೂ ಚಾಣಾಕ್ಷನಾಗಿದ್ದನು. ಅವನು ಚಿಂತಾಮಣಿ ಪುಸ್ತಕದ ಮೂಲಕ ಶಿಕ್ಷಣವನ್ನು ಕಲಿತಿರುವುದು ಕಂಡುಬರುತ್ತದೆ. ಕಾಡುಗೊಲ್ಲರಿಗೆ ಶಿವನ ಆಜ್ಞೆಯಂತೆ ಪ್ರಕೃತಿಯೇ ಅಂದರೆ ಭೂಮಿ ಆಕಾಶ ನೀರು ಕಾಡು ಇವುಗಳೇ ಅವರಿಗೆ ಜ್ಞಾನದ ಆಕಾರಗಳು. ಕಾಟಯ್ಯ ತ್ರಿಕಾಲ ಜ್ಞಾನಿ.

ಈ ಕಾವ್ಯದಲ್ಲಿ ಕಾಡುಗೊಲ್ಲರು ತಮ್ಮ ಸ್ವಾರ್ಥಕ್ಕಾಗಿ ಅಮಾಯಕ ಜನರನ್ನು ಬಲಿ ತೆಗೆದುಕೊಂಡಿರುವುದನ್ನು ಕಾಣಬಹುದು. ತನ್ನ ಮುಂಗೋಪದಿಂದಾಗಿ ಮಾಳಮ್ಮನ್ನು ದೂರ ಮಾಡಿಕೊಳ್ಳುತ್ತಾನೆ. ಅಂಜನೇಯನ ತಾಯಿಯನ್ನು ಕಾಡಿಗೆ ಬಿಡಲು ಸ್ಪಷ್ಟವಾದ ಕಾರಣ ನೀಡಿಲ್ಲ. ಹಿಂದೆ ಅನ್ಯೆತಿಕ ಸಂಬಂಧ ಹೊಂದಿದ ಹೆಣ್ಣು ಮಕ್ಕಳನ್ನು ಕಣ್ಣು ಕಟ್ಟಿ ಕಾಡಿಗೆ ಬಿಡುವ ಪದ್ಧತಿಯು ಜಾರಿಯಲ್ಲಿತ್ತು. ಆ ಕಾರಣದಿಂದ ಅಂಜನಾದೇವಿಯನ್ನು ಕಾಡಿಗೆ ಬಿಟ್ಟಿರಬಹುದು ತಂದೆ ಗೊತ್ತಿರದ ಅಂಜನೇಯನಿಗೆ ಶಿವ-ಪಾರ್ವತಿಯರೇ ತಂದೆ ತಾಯಿಗಳಾಗುತ್ತಾರೆ.

ಕಾಡುಗೊಲ್ಲರು ಪ್ರಾಚೀನ ಕಾಲದಿಂದಲೂ ಹೆಣ್ಣನ್ನು ಮಾಡುತ್ತಾ ಬಂದಿರುವುದನ್ನು ಈ ಸೃಷ್ಟಿ ಪುರಾಣದಲ್ಲಿ ಗುರುತಿಸಬಹುದು. ಬೇಟೆ ಆಡಲು ಹೊರಟ ಚಿತ್ತಯ್ಯನಿಗೆ ಆರತಿ ಬೆಳಗಲು ಬಂದ ಮಾಳಮ್ಮನಿಗೆ ಚಿತ್ತಯ್ಯನ ಆಳುಗಳಿಂದ ಅವಮಾನಮಾಡಿಸುತ್ತಾನೆ. ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಆಳುಗಳಿಗಿಂತ ಕೀಳಾಗಿ ನೋಡಿರುವುದು ಕಂಡುಬಂದಿದೆ. ಹೆಣ್ಣಿನ ಜನ್ಮದಿಂದ ಬೇಸತ್ತ ಮಾಳಮ್ಮ "ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಿದ್ದರೆ ಮಣ್ಣಿನಲ್ಲಿ ಮರ ಹುಟ್ಟಿ ದಾರಿ ಹೋಕರಿಗೆ ನೆರಳಾಗಿ ಇರುತ್ತಿದ್ದೆ" ಎಂದು ಹೇಳುತ್ತಾಳೆ. 'ಹೆಣ್ಣು ಹೆರಲುಬೇಡ ಹೆರವರಿಗೆ ಕೊಡಬೇಡ ಹೆಣ್ಣು ಹುಟ್ಟಲಿಲ್ಲ ಎಂದು ಕೊರಗಬೇಡ" ಎಂದು ಹೆಣ್ಣು ಮಕ್ಕಳಿಗೆ ಹೇಳುತ್ತಾಳೆ. ಅಗಸರ ಲಕ್ಕಮ್ಮ ಮಾಡದಿರುವ ತಪ್ಪಿಗೆ ಮರಣದಂಡನೆಗೆ ಒಳಗಾಗುತ್ತಾಳೆ. ಪದ್ಮವತಿಯು ಚಿತ್ತಯ್ಯನ ಕುದುರೆಯ ಕಾಲಿನ ಕೊರಸಿನಿಂದ ಸಾಯುತ್ತಾಳೆ.

ಏಡಿ ಮತ್ತು ಮೊಲವನ್ನು ಬೇಟೆ ಆಡುವುದನ್ನು ಕಾಟಯ್ಯ ವಿರೋಧಿಸುತ್ತಾನೆ ಆದರೆ ಬ್ರಾಹ್ಮಣ ಬಮ್ಮಯ್ಯ ಪ್ರಚೋಧಿಸುತ್ತಿರುವುದನ್ನು ಈ ಸೃಷ್ಟಿಪುರಾಣದಲ್ಲಿ ಕಾಣಬಹುದು. ಬುಡಕಟ್ಟು ಸಮುದಾಯಗಳು ಯಾವ ಪ್ರಾಣಿ ಪಕ್ಷಿಗಳ ನಾಶವನ್ನು ಬಯಸಲ್ಲ ಎಂಬುದಕ್ಕೆ ಇಲ್ಲಿ ನಿದರ್ಶನ ಕೊಡಬಹುದು. ಅಂಜನೇಯನ ಕಣ್ಣು ನುಂಗಿದಂತ ಏಡಿ ಮರಳಿ ಕೊಡವ ಒಪ್ಪಂದದ ಸಮಯದಲ್ಲಿ ತ್ರಿಮೂರ್ತಿಗಳು ಏಡಿಯನ್ನು ಅಡ್ನಾಡಿ ಎಂದು ನಾಮಕರಣ ಮಾಡಿರುವುದು ತಿಳಿದುಬರುತ್ತದೆ, ಕಾಟಯ್ಯ, ಚಿತ್ತಯ್ಯ ಬೇಟೆ ಆಡುವ ಸಂದರ್ಭದಲ್ಲಿ ಏಡಿಗಳ ಸಂತತಿಯು ಕಡಿಮೆ ಇತ್ತು ಎಂದು

ಕಾಣುತ್ತದೆ. ಆ ಕಾರಣದಿಂದ ಹೆಣ್ಣು ಏಡಿಗೆ ಜೀವಧಾನ ಮಾಡಿ ಒಂದು ಏಡಿಗೆ ನೂರು ಏಡಿಗಳು ಒಂದೇ ಬಾರಿಗೆ ಹುಟ್ಟಲಿ ಎಂದು ವರಕೊಡುತ್ತಾರೆ.

ಮೊಲದ ಬೇಟೆ ಆಡಿ ಮಾಂಸವನ್ನೆಲ್ಲ ಆನೆ ಕುದುರೆಗಳ ಮೇಲೆ ಹೇರಿಕೊಂಡು ಒಂದು ತುಂಡು ಮಾಂಸವನ್ನು ಮಾತ್ರ ಬಿಟ್ಟು ಅದಕ್ಕೆ ಜೀವದಾನ ಮಾಡುತ್ತಾರೆ. ಅದುಕ್ಕೆ ಬದುಕುವ ವಿಧಾನವನ್ನು ಹೇಳುತ್ತಾರೆ. ಅದು ನೀರು ಕುಡಿಯುವಂತಿಲ್ಲ ಬಾಯಾರಿಕೆ ಆದಾಗ ಅಂಗಾಲು ನೆಕ್ಕಿಕೊಂಡರೆ ಬಾಯಾರಿಕೆ ನೀಗುತ್ತದೆ. ಕರಿಕೆಯ ಹುಲ್ಲನ್ನು ಮಾತ್ರ ಮೇಯಬೇಕು ಅದು ಮೇಯುವಾಗ ಕಿವಿಗಳು ತಲೆಯ ಮೇಲಿರಬೇಕು, ಕಣ್ಣುಗಳು ಪಕ್ಕದಲ್ಲಿರಬೇಕು ಎಂದು ಆಶೀರ್ವಾದ ಮಾಡಿ ಅವುಗಳ ಸಂತತಿ ಹೆಚ್ಚಲಿ ಎಂದು ಹಾರೈಸುವುದು ಕಂಡುಬರುತ್ತದೆ.

ಈ ಸೃಷ್ಟಿ ಪುರಾಣದ ಪಾರಂಪರಿಕ ಜ್ಞಾನವನ್ನು ಕಂಡುಕೊಳ್ಳಬಹುದು. ಕಾಡುಗೊಲ್ಲರ ನಾಯಕರಾದ ಕಾಟಯ್ಯ, ಚಿತ್ತಯ್ಯ, ಓಬಳಪತಿ ಇಂದಿಗೂ ಅಮವಾಸ್ಯೆಯ ದೈವಗಳಾಗಿವೆ. ಕಾಡುಗೊಲ್ಲರು ಹೆಣ್ಣು ತರುವಾಗ ಅನುಸರಿಸಬೇಕಾದ ನಿಯಮಗಳನ್ನಿಲ್ಲಿ ಕಾಣಬಹುದು. ಹನ್ನೆರಡು ಆಯಗಾರರೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿರಬೇಕು ಎಂಬುದನ್ನು ಕಾಟಯ್ಯನ ಮೂಲಕ ತಿಳಿದುಕೊಳ್ಳಬಹುದು.

ತಿರಿಗಿಣಿ ಪಟ್ಟದ ದೊರೆಗಳನ್ನು ನಾಶ ಮಾಡಿದರೂ ಆ ಪಟ್ಟಣ್ಣ ಮತ್ತೆ ಬೆಳೆಯಲಿ ಎಂದು, ಮ್ಯಾಸಬೇಡರ ಯುವಕ ಮತ್ತು ಯುವತಿಗೆ ಮದುವೆ ಮಾಡಿರುವುದನ್ನು ಕಾವ್ಯದಲ್ಲಿ ಗಮನಿಸಬಹುದು. ಜನಪದರು ನುಡಿದಂತೆ ನಡೆದವರು ಎಂಬುದು ಈ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ಮೌಲ್ಯಗಳ ಮೂಲಕ ತಿಳಿದುಕೊಳ್ಳಬಹುದು.

೨.೪.ಓಬಳ ಪತಿ ಸೃಷ್ಟಿ

ಜಿ ಶಂ ಪರಮಶಿವಯ್ಯ ಅವರು ತಮ್ಮ ಮಹಾ ಪ್ರಬಂಧದಲ್ಲಿ ಶಿವನ ಬೆವರಿನಿಂದ ಕಾಟಯ್ಯ ಚಿತ್ತಯ್ಯ ಹುಟ್ಟಿದರು ಎಂದುಹೇಳುತ್ತಾರೆ. ಓಬಳನರಸಿಂಹನ ಬಗೆಗೆ ಹೇಳುವುದಿಲ್ಲ. ಮತ್ತು ಕಾಡುಗೊಲ್ಲರು ತಮ್ಮನ್ನು ಯಾದವ ಕುಲದವರೆಂದೂ ಕೃಷ್ಣನ ಪರಂಪರೆಗೆ ಸೇರಿದವರೆಂಬ ಭಾವನೆ ಇದೆ ಎಂದು ಹೇಳಿದ್ದಾರೆ. ಇವರು ಆಚರಿಸುವ ಮೂಲ ದೈವವೆಲ್ಲವೂ ಶೈವ ಮೂಲಕ್ಕೆ ಸೇರಿವೆ ಎಂದೂ ಗೇಳುವ ಇವರು ಓಬಳನರಸಿಂಹನ ಬಗೆಗೆ ಹೇಳುವುದಿಲ್ಲ. ವೈದಿಕ ಸಂಪ್ರದಾಯದ ಪ್ರಭಾವದಿಂದ ಓಬಳನರಸಿಂಹನ ಸೃಷ್ಟಿ ಆನಂತರ ಆಗಿರಬಹುದು. ಕಾಡುಗೊಲ್ಲರಲ್ಲಿ ಶೈವ, ವೈಷ್ಣವ ಎರಡೂ ಸಂಪ್ರದಾಯ ಎಷ್ಟೇ ಪ್ರಭಾವ ಬೀರಿದರೂ ಅದರ ಮೂಲ ಮಾತ್ರ ಶೈವದ್ದೇ ಎಂದು ಗುತಿಸಬಹದು." *(ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ ಪುಟ ೧೧. ೨೦೧೫)*

ಓಬಳಪತಿ ಹುಟ್ಟಿನ ಸಂದರ್ಭದಲ್ಲಿ ಅವನ ಸ್ವಭಾವ ಗುಣ ಲಕ್ಷಣಗಳನ್ನು ಕುರಿತು ಈ ಕೆಳಗಿನಂತೆ ಚಿತ್ರಿಸುತ್ತದೆ.

ಅಂಗೈಲಿ ಆರುಕೋಟಿಲಿಂಗ
ಮುಂಗೈಲಿ ಮುನ್ನೂರು ಕೋಟಿಲಿಂಗ
ಸಂದಿ ಸಂದಿಗಳ ಸಹಸ್ರ ಕೋಟಿಲಿಂಗ
ನೆಟ್ಟ ನಿರುವಾಣಿ ಚಕ್ರ ಸಂನ್ಯಾಸಿ
ಏಗಿ ಜಂಗಾಮ ಪಂಚ ಮುಖದೋನು
ಪಂಚೇಳು ಕಳಸದವನು
ನೀಲಿ ನಾಮದೋನು ನಿತ್ಯ ಮಾಲಿಂಗ
ಉಗ್ರ ಅವತಾರದ ಉರಿ ಬಾಣದ
ನರಸಿಂಹ ಹುಟ್ಟೋನಂತೋ. *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಚಿತ್ತಯ್ಯ ನಂತರ ಶಿವನು ಮೂರನೆಯ ಕೆಂಡಕ್ಕೆ ನೀರು ಹಾಕಿದಾಗ, ಓಬಳಪತಿ ಹುಟ್ಟಿದನು. ಇವನು ಅಂಗೈಯಲಿ ಆರುಕೋಟಿಲಿಂಗ. ಮುಂಗೈಯಲಿ ಮೂರು ಕೋಟಿಲಿಂಗ, ಶಂಖ, ಚಕ್ರ, ಸಂನ್ಯಾಸಿ, ಜಂಗಮ, ಐದುಮುಖದೋನು, ಪಂಚೇಳು ಕಳಶದೋನು. ನೀಲಿನಾಮ ಧರಿಸಿದವನು ನಿತ್ಯ ಶಿವನನ್ನು ಪೂಜಿಸುವವನು. ಉಗ್ರಾವತಾರದ ಪುರುಷ ಉರಿಬಾಣವನ್ನು ಕೈಯಲ್ಲಿ ಹಿಡಿದುಕೊಂಡು ನರಸಿಂಹ ಹುಟ್ಟಿದನು. ನರಸಿಂಹ ಎನ್ನುವುದು ವಿಷ್ಣುವಿನ ರೂಪ. ಇದು ಸಾಮಾನ್ಯವಾಗಿ ಕಾಡುಗೊಲ್ಲರು ವೈಷ್ಣವೀಕರಣಗೊಂಡಿರುವುದನ್ನು ಹೇಳುತ್ತದೆ. ಅಂದರೆ ಈ ಹಿಂದೆ ವೈಷ್ಣವ ಧರ್ಮಕ್ಕೂ ಹಾಗೂ ಶೈವಧರ್ಮಕ್ಕೂ ಸಾಕಷ್ಟು ಸಂಘರ್ಷಗಳು ನಡೆದಿರುವುದನ್ನು ಕಂಡುಬರುತ್ತದೆ. ಕಾಡುಗೊಲ್ಲರ ಎಲ್ಲ ಬೆಡಗುಗಳು ವೈಷ್ಣವೀಕರಣಗೊಂಡಿಲ್ಲ. ಕೆಲವು ಬೆಡಗುಗಳು ಮಾತ್ರ. ಇನ್ನೊಂದು ವಿಶೇಷವೆಂದರೆ ಇಲ್ಲಿ ವಿಷ್ಣುವಿನ ಕೈಯಲ್ಲಿ ಲಿಂಗಗಳನ್ನು ಹಿಡಿಸುವುದರ ಜೊತೆಗೆ ಶಿವಲಿಂಗವನ್ನು ಪೂಜೆ ಮಾಡುವಂತೆ ಮಾಡಿರುವುದು ಗಮನಾರ್ಹ ವಿಷಯ. ಶೈವ ಮತ್ತು ವೈಷ್ಣವರ ಸಂಕರ ನಡೆದಿದೆ. ಈ ರೀತಿಯಾಗಿ ಮೂರು ಜನ ಮಕ್ಕಳನ್ನ ಸೃಷ್ಟಿಮಾಡಿದ ಶಿವನು ಅವರನ್ನು ಸಾಕಿ ದೊಡ್ಡವರನ್ನಾಗಿ ಮಾಡುವ ಜವಾಬ್ದಾರಿಯು ತಮ್ಮದೆಂದು ತಿಳಿದು ಪಾರ್ವತಿಗೆ ಮೂರು ಮಕ್ಕಳನ್ನು ಮಡಿಲಿಗೆ ಕಟ್ಟಿಕೊಳ್ಳುವಂತೆ ಹೇಳುತ್ತಾನೆ. ಆಗ ಪಾರ್ವತಿ ನಿರಾಕರಸುತ್ತಾಳೆ. ಇವರು ಕೆಂಡದಲ್ಲಿ ಹುಟ್ಟಿ ಕೆಂಡದಲ್ಲಿ ಬೆಳೆದಿದ್ದಾರೆ, ಇವರನ್ನು ಮುಟ್ಟಿದರೆ ನಾವು ಸುಟ್ಟು ಹೋಗುತ್ತೇವೆಂಬ ಉದ್ದೇಶದಿಂದ ಪಾರ್ವತಿಗೆ ಭಯವಾಗುತ್ತದೆ. ಹಾಗಾಗಿ ಅವಳು ನಿರಾಕರಿಸುತ್ತಾಳೆ. ಶಿವನಿಗೆ ಮೊದಲೆ ಪಾರ್ವತಿಯ ಮೇಲೆ ಸಿಟ್ಟು ಇರುತ್ತದೆ. ಮೂರನೆಯ ಕಣ್ಣಿನಿಂದ ಪಾರ್ವತಿಯನ್ನು ಸುಡಲು ಮುಂದಾಗುತ್ತಾನೆ. ಈ ಮೂವರನ್ನು ಸೃಷ್ಟಿಮಾಡುವುದು ಅವನಿಗೆ ಇಷ್ಟ ಇರುವುದಿಲ್ಲ. ಪಾರ್ವತಿಯ ಬಲವಂತಕ್ಕೆ ಇವರನ್ನು ಸೃಷ್ಟಿಮಾಡಿರುತ್ತಾನೆ. ಹೀಗಾಗಿ ಕೋಪಗೊಂಡು ಪಾರ್ವತಿಯನ್ನು ಸಾಯಿಸಲು ಮುಂದಾದಾಗ ಪಾರ್ವತಿಯು ಮೂರು ಮಕ್ಕಳನ್ನು ಮಡಿಲಿಗೆ ಕಟ್ಟಿಕೊಳ್ಳುತ್ತಾಳೆ. ಇದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ಚಿತ್ತಯ್ಯ ಮತ್ತು ನರಸಿಂಹ ಅವಳ ಎದೆಗೆ ಬಾಯಿ ಹಾಕಿ ರಕ್ತ ಬರುವ ಹಾಗೆ ಹಾಲು ಕುಡಿಯುತ್ತಾರೆ.

ಹೀಗೆ ಬಿಟ್ಟರೆ ಇವರು ಪಾರ್ವತಿಯನ್ನು ಸಂಪೂರ್ಣ ತಿಂದು ಬಿಡುತ್ತಾರೆ. ಹಾಗಾಗಿ ಇವರಿಂದ ಪಾರ್ವತಿಯನ್ನು ರಕ್ಷಿಸಬೇಕೆಂದು ಒಂದು ವೇಳೆ ಪಾರ್ವತಿ ಸತ್ತರೆ ಪಾರ್ವತಿಯ ಹೆಸರು ಈ ಭೂಮಿ ಮೇಲೆ ಉಳಿಯುವುದಿಲ್ಲ ಎಂದು ಐದು ಜನ ತಾಯಂದಿರನ್ನು ಸೃಷ್ಟಿ ಮಾಡಿದನು. ಈ ತಾಯಂದಿರಿಗೆ ಈ ಮೂರು ಮಕ್ಕಳನ್ನು ಸಾಕುವಂತೆ ಆಜ್ಞೆಮಾಡಿದನು. ಈ ಐದು ಜನ ತಾಯಂದಿರನ್ನು ಕುರಿತ ಪದ್ಯ ಈ ರೀತಿ ಇದೆ.

ಬೇವಿನ ಮರದಮ್ಮ ಬೆಲ್ಲ ಕೋಡಮ ನೀನೂ
ಆಲದ ಮರದಮ್ಮ ಹಾಲು ಕೋಡಮ ನೀನೂ
ಹತ್ತಿಯ ಮರದಮ್ಮ ಎತ್ತಿ ಮುದ್ದಾಡಮ್ಮ
ಭೂ ದೇವತೆ ಭೂಮಮ್ಮ ಬರವಣಿಗೆ ಕಲಿಸಮ್ಮ
ಆಕಾಶದಮ್ಮ ವಿದ್ಯಾಬುದ್ಧಿ ಕಲಿಸಮ್ಮ" *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಮಾನವನ ಬೆಳವಣಿಗೆಗೆ ಪ್ರಕೃತಿಯ ಗಿಡಮರಗಳ ಅವಶ್ಯಕತೆಯನ್ನು ತಿಳಿಸುವುದಲ್ಲದೆ ಪ್ರಕೃತಿಯನ್ನು ನಾಶ ಮಾಡಿದರೆ ಜೀವಿಗಳ ಬದುಕು ತುಂಬಾ ಹೀನಾಯವಾಗುತ್ತದೆ. ಪ್ರಕೃತಿ ಇದ್ದರೆ ಮಾತ್ರ ಜೀವ ಜಗತ್ತು ಅದು ನಮಗೆ ಬೇಡಿದ್ದನ್ನು ಕೊಡುವ ಶಕ್ತಿಯನ್ನು ಪಡೆದುಕೊಡಿರುತ್ತದೆ. ಹೀಗಾಗಿ ಆದಿವಾಸಿಗಳು ಜನಪದರು ಗಿಡ ಮರ, ನೀರು, ಭೂಮಿ, ಆಕಾಶ ಮುಂತಾದವುಗಳನ್ನು ಆರಾಧಿಸುತ್ತಾ ಬಂದಿರುವುದನ್ನು ಕಾಣುತ್ತೇವೆ.

ಜನಪದರ ಬದುಕು ಪರಿಸರವನ್ನು ಹೊಂದಿಕೊಂಡ ರೀತಿಯನ್ನು ಸ್ಪಷ್ಟವಾಗಿ ಈ ಸಾಲುಗಳು ಪ್ರತಿನಿಧಿಸುತ್ತವೆ. ಪಶುಪಾಲಕರಾಗಿರುವ ಕಾಡುಗೊಲ್ಲರು ಸಂದರ್ಭಾನುಸಾರವಾಗಿ ಜೀವಿಸಲು ಮರಗಳನ್ನು ಅವಲಂಭಿಸಿರುವುದು ಕಂಡುಬರುತ್ತದೆ. ತಂದೆ ತಾಯಿಗಳು ಮಕ್ಕಳನ್ನು ಸಾಕಲು ಅಸಮರ್ಥರಾದಾಗ ಪ್ರಕೃತಿಯೆ ಆ ಕೆಲಸವನ್ನು ಮಾಡುತ್ತದೆ. ಅಂದರೆ ಪರದೇಶಿಯಾದ ಮಕ್ಕಳಿಗೆ ಈ ಕಾವ್ಯದಲ್ಲಿ ಬೇವಿನಮರ ಬೆಲ್ಲವನ್ನು ಕೊಟ್ಟು ಸಾಕುತ್ತದೆ, ಅದೇ ರೀತಿ ಆಲದ ಮರ ಹಾಲು, ಹತ್ತಿಯಮರ ಪ್ರೀತಿ, ಭೂದೇವತೆ ಬರವಣಿಗೆ, ಹಾಗೆ ಆಕಾಶ ವಿದ್ಯಾಬುದ್ಧಿ ಕಲಿಸುತ್ತವೆ ಎಂದು ಹೇಳುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇಂದರೆ, ಬೇವಿನಮರ ವಾಸ್ತವವಾಗಿ ಕಹಿಯನ್ನು ಹೊಂದಿದ್ದರೂ ಅದು ಮನುಷ್ಯನ ಆರೋಗ್ಯವನ್ನು ಉತ್ತಮ ಸ್ಥಿತಿಯಲ್ಲಿ ಇಡುತ್ತದೆ. ಇದು ರೋಗ ನಿರೋಧಕ ಶಕ್ತಿಯನ್ನು ಒಳಗೊಂಡಿದೆ. ಹಾಗಾಗಿ ತಮ್ಮ ಹೊಲಗಳಲ್ಲಿ ಜನಪದರು ಬೇವಿನಮರ ಬೆಳೆಸುತ್ತಾರೆ. ಇದರ ಜೊತೆಗೆ ಬೇವಿನಮರದ ಮುಟ್ಟಿನಿಂದಲೆ ತಮ್ಮ ಮನೆಗಳನ್ನು ಕಟ್ಟಿಕೊಳ್ಳತ್ತಾರೆ. ಇದರ ಉದ್ದೇಶ ದೀರ್ಘಕಾಲ ಬಾಳಿಕೆ ಬರುತ್ತದೆ ಎನ್ನುವುದು ಒಂದಾದರೆ, ಮನುಷ್ಯನ ಆರೋಗ್ಯಕೆ ಸಹಕರಿಸುತ್ತದೆ ಎನ್ನುವುದು ಕೂಡ ಮುಖ್ಯವಾಗುತ್ತದೆ. ಹಾಗೆಯೇ ಪ್ರಕೃತಿಯ ಪ್ರತಿಯೊಂದು ಮರವು ಮನುಷ್ಯನಿಗೆ ಆರೋಗ್ಯ ಆಯಸ್ಸು ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ಜನಪದರು ಪ್ರಕೃತಿಯ ಆರಾಧಕರಾಗಿದ್ದರು. ಎಲ್ಲೊ ಒಂದು ಕಡೆ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಜನನ ಸಾಕಷ್ಟು

ಅನುಮಾನಗಳಿಗೆ ಆಸ್ಪದಕೊಡುತ್ತವೆ. ನನ್ನ ಅನುಮಾನದ ಪ್ರಕಾರ ಚಿತ್ತಯ್ಯ ಕಾಟಯ್ಯ ಚಿಕ್ಕೊನು ನರಸಿಂಹ ಎತ್ತಯ್ಯ ದೇವರ ದಯಾಮಾರ, ಜುಂಜಪ್ಪ, ವೀರಯರ್ರಣ್ಣ ವೀರಮಿಂಚಣ್ಣ ಇವರುಗಳ ತಂದೆ ತಾಯಿಗಳು ಶಿವಪಾರ್ವತಿಯರೇ ಆಗಿರುತ್ತಾರೆ. ಕಾಡುಗೊಲ್ಲರು ಪಶುಪಾಲಕರಾಗಿರುವ ಕಾರಣ ಅಲೆಮಾರಿಗಳು ಹಾಗಾಗಿ ಇವರು ತಮ್ಮ ಮಕ್ಕಳನ್ನು ಸರಿಯಾಗಿ ಪಾಲನೆ ಪೋಷಣೆ ಮಾಡದೇ ಕಾಡಿನಲ್ಲಿ ಬಿಟ್ಟು ಹೋಗಿರಬಹುದು, ಇಲ್ಲವೇ ಇವರೆಲ್ಲ ಬೇರೆ ಸಮುದಾಯದ ಸ್ತ್ರೀಯರೊಂದಿಗೆ ಸಂಬಂಧ ಹೊಂದಿ ಹುಟ್ಟಿರುವ ಅವಕಾಶಗಳು ಹೆಚ್ಚಾಗಿ ಕಂಡುಬರುತ್ತವೆ. ಎತ್ತಯ್ಯ ಎತ್ತು ತುಪ್ಪದಲ್ಲಿ ಹುಟ್ಟಿದ ತಂದೆಯ ಸಂಪರ್ಕವಿಲ್ಲದೆ ಜುಂಜಪ್ಪ ಹುಟ್ಟಿದ ಇತಂಹ ಅನೇಕ ಕಾರಣಗಳು ಅನುಮಾನಕ್ಕೆ ಕಾರಣವಾಗುತ್ತವೆ.

ಈ ಮೂರು ಜನರ ಸೃಷ್ಟಿಯ ಹಿಂದೆ ಒಂದು ಸತ್ಯ ಅಡಗಿದೆ ಕಾಡುಗೊಲ್ಲರು ಕೊಡುವ ಪ್ರತಿಮೆಗಳ ಮೂಲಕ ನಾವು ನೋಡಿದಾಗ ಬೆಂಕಿ, ಬೆವರು, ಕೆಂಡ, ಮತ್ತು ಗಂಡಬೇರುಂಡ ಇವುಗಳು ಕಾಮದ ಕ್ರಿಯೆಯ ಮೂಲಕ ಸೃಷ್ಟಿ ಪ್ರಕ್ರಿಯೆಯನ್ನು ಹೇಳುತ್ತವೆ. ಈ ರೀತಿಯ ಪ್ರತಿಮೆಗಳು ಶಿಷ್ಟ ಮತ್ತು ಪರಿಶಿಷ್ಟ ಎರಡರಲ್ಲು ಕಂಡುಬಂದಿರುವುದು ಸಾಮಾನ್ಯವಾಗಿದೆ. ಇಲ್ಲಿ ಶಿವ ಪಾರ್ವತಿಯ ಲೈಂಗಿಕ ಕ್ರಿಯೆಯಿಂದ ಕಾಡುಗೊಲ್ಲರ ಸೃಷ್ಟಿಯಾಗಿರಬಹುದು ಇಲ್ಲವೇ ಯಾರೋ ಅರಣ್ಯವಾಸಿಗಳ ಲೈಂಗಿಕ ಕ್ರಿಯೆಗಳಿಂದ ಸೃಷ್ಟಿಯಾಗಿರಬಹುದು. ಆದಿಮ ಕಾಲದಲ್ಲಿ ಮನಷ್ಯ ಪ್ರಾಣಿಗಳಂತೆ ಮಕ್ಕಳನ್ನು ಬಿಟ್ಟುಹೋಗುತ್ತಿದ್ದ ಎಂಬ ಮಾಹಿತಿ ಮೌಖಿಕ ಕಥೆಗಳಿಂದ ದೊರೆಯುತ್ತದೆ. ಈ ಕಾರಣದಿಂದ ಇವರು ಕಾಡುವಾಸಿಗಳಾಗಿರಬಹುದು. ಈ ಮಕ್ಕಳು ಅನಾಥರು ಆದ ಕಾರಣ ಇವರ ಅಳುವನ್ನು ಕೇಳಿ ಪಾರ್ವತಿಯ ಮನಸ್ಸು ಮರುಗಿರಬಹುದು. ಏಕೆಂದರೆ ಆ ಮೂರು ಮಕ್ಕಳು ಅನಾಥರಾಗಿರುವ ಕಾರಣ ಅವರನ್ನು ಸಾಕಲು ನಿರಾಕರಿಸುತ್ತಾಳೆ. ಪಾರ್ವತಿ ಶಿವನ ಬಲವಂತದಿಂದ ಒಪ್ಪಿಕೊಳ್ಳುತ್ತಾಳೆ. ಆದರೆ ಒಬ್ಬಳು ಮೂರು ಮಕ್ಕಳಿಗೆ ಹಾಲುಣಿಸುವುದು ಕಷ್ಟ ಎಂದು ತಿಳಿದು, ಅವರನ್ನು ಮತ್ತೆ ಕಾಡು ಪಾಲು ಮಾಡಿ ಹೋಗುತ್ತಾರೆ. ಇದೇ ಸಂದರ್ಭದಲ್ಲಿ ಆಲದಮರ, ಬೇವಿನಮರ, ಹತ್ತಿಯಮರ, ಮತ್ತು ಭೂದೇವತೆ ಹಾಗೂ ಆಕಾಶಗಳ ಸೃಷ್ಟಿಸಿರುವುದು ಕಂಡುಬರುತ್ತದೆ. ಅಂದರೆ ಇದರ ಅರ್ಥ ಅನಾಥ ಮಕ್ಕಳನ್ನು ಮತ್ತೆ ಅನಾಥರಾಗಿ ಬಿಟ್ಟು ಹೋಗುವುದು. ಇಲ್ಲಿ ಪಾರ್ವತಿ ಬಳಸುವ ಪದ ಕೆಂಡ ಎಂಬುದು ಅನ್ಯೆತಿಕತೆಯ ಸಂಕೇತವಿರಬಹುದು. ಆ ಕಾರಣಕ್ಕಾಗಿ ಅವರನ್ನು ಸಾಕಲು ನಿರಾಕರಿಸಿರಬಹುದು.

ಮಕ್ಕಳನ್ನು ಸಾಕುವ ಜವಾಬ್ದಾರಿಯಿಂದ ನುಸುಳಿಕೊಂಡವರಿಗೆ ಬಿಟ್ಟೆನೆಂದರೆ ಬಿಡದೀಮಾಯೆ ಎಂಬಂತೆ ಶಿವ ಪಾರ್ವತಿಯರು ಕೈಲಾಸದಲ್ಲಿ ಊಟಮಾಡಿ ಕುಳಿತುಕೊಂಡು ಎಲೆ ಅಡಿಕೆ ಹಾಕಿಕೊಳ್ಳುವಂತಹ ಸಮಯದಲ್ಲಿ ಪಾರ್ವತಿಗೆ ಮಕ್ಕಳ ನೆನಪಾಗಿ ಶಿವನಿಗೆ ಈ ರೀತಿ ಹೇಳುತ್ತಾಳೆ. "ನಾಯಿನೆ ಹೀದು ನಡುನೀರಿಗೆ ಹಾಕೋದು," ಆದರೆ ನಾವು ನಾಯಿಗಿಂತ ಕೀಳಾದೆವಲ್ಲ ಎಂಬ ನೋವು ಕಾಡುತ್ತದೆ. ನಮ್ಮ ಮಕ್ಕಳ ಕಷ್ಟ ಸುಖ ನೋಡಬೇಕಾದವರು ನಾವು ಅದನ್ನು ಬಿಟ್ಟು ನಮ್ಮ

ಮಕ್ಕಳನ್ನು ಯಾರೋ ಬೇರೆಯವರ ಕೈಗೆ ಕೊಟ್ಟು ನಮ್ಮ ಅರಮನೆಯಲ್ಲಿ ನಾವಿದ್ದರೆ ನಮಗೂ ನಾಯಿಗೂ ಏನು ವ್ಯತ್ಯಾಸ. ಮುಂದೆ ಯಾರಾದರೂ ಒಂದು ಮಾತು ಅನ್ನಬಹುದು, ನಿಮ್ಮ ತಂದೆ ತಾಯಿ ಯಾರು? ನಿಮ್ಮ ಕುಲವೇನು? ನಿಮ್ಮ ದೇವರು ಯಾವುದು? ಎಂದು ಯಾರಾದರೂ ಕೇಳಿದರೆ ಮಕ್ಕಳು ಏನು ಹೇಳುತ್ತಾರೆ? ಎಂದು ಶಿವನಿಗೆ ಪ್ರಶ್ನಿಸಿದಾಗ 'ಶಿವನು ಪಾರ್ವತಿಯು ಕಾಳಿಂಗನ ಮೇಲೆ ರಥಗಳನ್ನು ಹೂಡಿಕೊಂಡು ಚಿತ್ರದುರ್ಗದ ಕಾಡಿನಲ್ಲಿ ಇಳಿದು ಅಲ್ಲಿ ಬಂಗಾರದ ಅರಮನೆ ಸೃಷ್ಟಿಮಾಡಿದನು. ಆಗ ಮಕ್ಕಳಿಗೆ ಕಾಗದ ಬರೆದು ಗುಂಗಾರಿಯ ಕಾಲಿಗೆ ಕಟ್ಟಿಕಳುಹಿಸಿದನು. ಕಾಗದವನ್ನು ಓದಿಕೊಂಡ ಕಾಟಯ್ಯ ತಮ್ಮಂದಿರನ್ನು ಕರೆದುಕೊಂಡು ಚಿತ್ರಗಿರಿ ಪಟ್ಟಣಕ್ಕೆ ಬಂದನು. ಚಿತ್ರದುರ್ಗದ ಅರಮನೆಯನ್ನು ಅದು ಅರಣ್ಯದಲ್ಲಿರುವುದರಿಂದ ಮೂವರು ಅಣ್ಣ–ತಮ್ಮಗಳು ಈ ರೀತಿ ಮಾತನಾಡುತ್ತಾರೆ.' ಇಲ್ಲಿ "ಊರಿಲ್ಲ ಕೇರಿಲ್ಲ ನೀರಿಲ್ಲ ನೆರಳಿಲ್ಲ ಪಟ್ಟಣ ಪಾಳ್ಯವಿಲ್ಲ ಇಂಥಂಬ ಆರನ್ನ ಅಡಿವ್ಯಾಗೆ ಯಂಗಮ್ಮ ನಾವು ಬಾಳೋದು ಯಂಗಮ್ಮ ನಾವು ಬದುಕೋದು ಹಾಗಾಗಿ ಚಿತ್ತರಗಿರಿ ಸರಿಯಿಲ್ಲ, ಮತ್ತೆ ನಾವು ಗೋವರ್ಧನಗಿರಿಗೆ ಹೋಗುವುದು ಎಂದು ಹಿಂತಿರುಗಿದಾಗ", ಶಿವ ಪಾರ್ವತಿಯರು ಅಲ್ಲಿಯೇ ಪ್ರತ್ಯಕ್ಷರಾದರು. ಎಲ್ಲಿಗೆ ಹೋಗುತ್ತಿದ್ದೀರಿ ನೀವೂ, ನಾವು ನಿಮಗಾಗಿ ಅರಮನೆ ಕಟ್ಟಿಸಿದಿವಿ ಹಾಗಾಗಿ ನೀವು ಇಲ್ಲಿನ ದೊರೆಗಳು ಆಗಿ ಆಳ್ವಿಕೆ ಮಾಡಬೇಕುಬೇಕು ಎಂದು ಹೇಳುತ್ತಾನೆ. ಆಗ ಕಾಟಯ್ಯ ಇಲ್ಲಿ ಯಾರಾದರೂ ನರಮನುಷ್ಯರು ಬದುಕಲು ಸಾಧ್ಯವೆ? ಇದು ದಟ್ಟವಾದ ಅಡವಿ. ಇಲ್ಲಿ ಊರುಗಳಿಲ್ಲ ಕೇರಿಗಳಿಲ್ಲ, ನೀರಿಲ್ಲ ನೆರಳಿಲ್ಲ, ಪಟ್ಟಣಗಳೆ ಮೊದಲಿಲ್ಲ ಇಂತ ಅಡಿಯಲ್ಲಿ ನಮ್ಮನ್ನ ನಾವು ರಕ್ಷಣೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ನಾವು ಗೋವರ್ಧನಗಿರಿಗೆ ಮರಳಿ ಹೋಗುವುದಾಗಿ ಹೇಳುತ್ತಾನೆ. ಆಗ ಶಿವ ನೀವು ಇಲ್ಲಿ ಉಳಿದು ಆಳ್ವಿಕೆ ಮಾಡಲು ಎಲ್ಲಾ ವ್ಯವಸ್ಥೆ ಮಾಡುವುದಾಗಿ ಮತ್ತು ಅವರು ಕೇಳಿದ ವರವನ್ನು ಕೊಡುವುದಾಗಿ ಹೇಳಿದಾಗ, ಕಾಟಯ್ಯ ದೊರೆಗಳ ಬಳಿ ಯಾವ ಯಾವ ವಸ್ತುಗಳು ಇರಬೇಕು ಎಂಬುದನ್ನು ಮನವರಿಕೆ ಮಾಡಿಕೊಂಡು ಈ ರೀತಿ ಕೇಳುತ್ತಾನೆ. ಇಲ್ಲಿ ಗಮನಿಸಬಹುದಾದ ವಿಷಯವೆಂದರೆ ಗುಂಗಾರಿಯು ವಿಷಯವನ್ನು ಮುಟ್ಟಿಸುವ ಮಾಧ್ಯಮವಾಗಿ ಕೆಲಸಮಾಡಿರುವುದು ಕಂಡುಬರುತ್ತದೆ. ಚಿತ್ರಗಿರಿ ಎಂಬುದು ಚಿತ್ರದುರ್ಗವೆಂದು ಹೇಳುತ್ತಾರೆ. ಚಿತ್ರಗಿರಿಯು ಬರ ಪೀಡಿತ ಪ್ರದೇಶ ಹಾಗಾಗಿ ಅಲ್ಲಿ ನೀರಿನ ಕೊರತೆ ಇದೆ. ಜನರ ಕೊರತೆ ಇದೆ. ಊರುಗಳು ಮೊದಲೆ ಇಲ್ಲ. ಇಲ್ಲಿ ಬದುಕ ಬೇಕೆಂದರೆ ಏನೆಲ್ಲ ಬೇಕು ಎಂದು ಕಾಟಯ್ಯ ಹೇಳುತ್ತಾನೆ.

"ಕರಿಯಾನೆ ಕೊಡಬೇಕು ಸ್ವಾಮಿ
ನಮ್ಮಿಗೆ ಬಿಳಿಯಾನೆ ಕೊಡಬೇಕು
ನಮ್ಮಿಗೆ ರೀವಾಲು ಬಂದೂಕ ಕೊಡಬೇಕು ಸ್ವಾಮೋ
ವಂಬು ಬಾಣ ಕೊಡಬೇಕು ಸ್ವಾಮಿ
ನಮ್ಮಿಗೆ ಕಾಮಧೇನು ಕಲ್ಪವೃಕ್ಷ

ಐರಾವತ ಕೊಡಬೇಕು ಸ್ವಾಮೋ

ಎಗ್ಗಾಳೆ ಕೊಡಬೇಕು ನೀನೂ

ಮಾಸಾಮಿ ಭೂಚಕ್ರದ ಜಂಪಾಲೆ

ಹೆಚ್ಚಿನ ಹವಳದ

ಗೊಡಗೂನೆ ಕೊಡಬೇಕು ಸ್ವಾಮೋ" *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಒಂದು ರಾಜ್ಯವನು ಆಳುವ ಅರಸರಿಗೆ ಏನೇನು ಬೇಕೋ ಅಂತಹ ಎಲ್ಲಾ ಬಿರುದುಗಳನ್ನು ಶಿವನಿಂದ ಪಡೆದುಕೊಂಡನು. ಕಾಟಯ್ಯ ಕರಿಯ ಆನೆ, ಬಿಳಿಯ ಆನೆ, ಬಂದೂಕು, ರೀವಾಲು, ವಂಬುಬಾಣ, ಕಾಮಧೇನು ಕಲ್ಪವೃಕ್ಷ, ಐರಾವತ, ಹೆಗ್ಗಾಳೆ, ಭೂಚಕ್ರದಗೊಡಗು ಇವು ರಾಜನಿಗೆ ಅನಿವಾರ್ಯ ಕೂಡ ಅವುಗಳನ್ನು ಪಡೆದುಕೊಂಡನು. ಮುತ್ತು ರತ್ನದ ರಾಶಿ ರಾಮ ಲಕ್ಷ್ಮಣರೆಂಬ ಹೊನ್ನಿನ ಕಣಜಗಳನ್ನು ಶಿವನಿಂದ ಪಡೆದುಕೊಂಡನು. ಬಹಳ ವಿಸ್ಮಯವೆಂದರೆ ಇಲ್ಲಿ ರೀವಾಲು ಬಂದೂಕ ಇವು ಇತ್ತೀಚಿನ ಪದಗಳು ಅಷ್ಟೇ ಅಲ್ಲ ಇವು ಅರೆಬಿಕ್ ಪದಗಳು. ಭಾರತಕ್ಕೆ ಬಂದ ಮುಸಲ್ಮಾನರ ಪದಗಳು ಕಾಡುಗೊಲ್ಲರ ಬದುಕಿನೊಳಗೆ ಪ್ರವೇಶ ಮಾಡಿರುವುದು ಕಂಡುಬರುತ್ತದೆ. ಪದ ಹೇಳುವ ವ್ಯಕ್ತಿ ತನಗರಿವಿಲ್ಲದೆ ಲೋಕರೂಢಿಯಾಗಿ ಕಲಿತುಕೊಂಡಿರುವ ಪದಗಳು ಉಲ್ಲೇಖಗೊಂಡಿವೆ. ಮೇಲೆ ಹೇಳಿದ ಎಲ್ಲಾ ವಸ್ತಗಳನ್ನು ಕೊಡುವುದಾರೆ ಇರುವುದಾಗಿ ಹೇಳಿದಾಗ, ಅವುಗಳನ್ನು ಶಿವ ದಯಪಾಲಿಸಿದ. ಕಾಟಯ್ಯ ಅವುಗಳನ್ನು ತಮ್ಮಂದಿರುಗಳಿಗೆ ಗೊತ್ತಾಗದಂತೆ ನೆಲಮಾಳಿಗೆ ಒಳಗೆ ಇಟ್ಟು ಭದ್ರಮಾಡಿದನು. ಏಕೆಂದರೆ ತಮ್ಮಂದಿರು ಕಾಟಯ್ಯನಷ್ಟು ಬುದ್ಧಿವಂತರಾಗಿರಲಿಲ್ಲ. ಅವರು ದೈಹಿಕವಾಗಿ ಹೋರಾಡುತ್ತಾರೆ, ಆದರೆ ಬೌದ್ಧಿಕವಾಗಿ ಹಿಂದುಳಿದಿದ್ದಾರೆ. ಹಾಗಾಗಿ ಕಾಟಯ್ಯನಿಗೆ ಇವುಗಳ ರಕ್ಷಣೆಯ ಹೊಣೆ ಇರುವುದರಿಂದ ವಿಷಯವನ್ನು ಗೌಪ್ಯವಾಗಿಟ್ಟನು.

೨.೫ ಎತ್ತಪ್ಪನ ಸೃಷ್ಟಿ ಪುರಾಣ

ಎತ್ತಪ್ಪನ ಸೃಷ್ಟಿ ಪುರಾಣವು ತುಮಕೂರು ಭಾಗದಲ್ಲಿ ಒಂದು ರೀತಿ ಕಂಡು ಬಂದರೆ ಚಳ್ಳಕೆರೆ, ಚಿತ್ರದುರ್ಗ ಭಾಗದಲ್ಲಿ ಮತ್ತೊಂದು ಬಗೆಯಲ್ಲಿ ಕಂಡು ಬರುತ್ತದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಅಂಬೆರಾಯ ಮತ್ತು ತುಂಬೆರಾಯ ಎಂಬುವವರು ಏಳು ಗೂಡಿನ ದನಗಳನ್ನು ಆಳಿಕೊಂಡಿದ್ದರು. ಅವರು ಮದುವೆಯಾಗದೆ ತಮ್ಮ ಬದುಕನ್ನು ದನಕಾಯುವುದಕ್ಕೆ ಮೀಸಲಿಟ್ಟಿದ್ದರು. ಅವರಿಗೆ ಮಕ್ಕಳಿರಲಿಲ್ಲ ಮತ್ತು ವಯಸ್ಸಾದ ಕಾರಣ ಅವರಿಗೆ ದನಕಾಯುವಷ್ಟು ಶಕ್ತಿ ಇರದಿದ್ದರಿಂದ, ದನಕಾಯುವ ಹುಡುಗನಿಗಾಗಿ ಹುಡುಕುತ್ತಿದ್ದರು. ಇಂತಹ ಸಂದರ್ಭದಲ್ಲಿ ಕೈಲಾಸದಲ್ಲಿ ಶಿವನ ಹಸುವಾದ ಕಾಮಧೇನು ಎಂಬುದು ಮಧ್ಯರಾತ್ರಿ ಭೂಲೋಕಕ್ಕೆ ಬಂದು ಗೌರಸಮುದ್ರದ ಮಾರಮ್ಮನ ಹೂವಿನ ತೋಟದಲ್ಲಿ ಹುಲ್ಲು ತಿಂದು ಕೈಲಾಸಕ್ಕೆ ಹೊಗುತ್ತಿರುತ್ತದೆ. ಈ ಕಾರ್ಯ ಎಷ್ಟು ದಿನವಾದರೂ ಗೊತ್ತಾಗದಂತೆ ನಡೆಯುತ್ತಿರುತ್ತದೆ. ಒಂದು ದಿನ ಮಾರಮ್ಮ ರಾತ್ರಿ ಕಾವಲು ಕಾಯುತ್ತಾಳೆ. ಮಧ್ಯರಾತ್ರಿ ದೇವಲೋಕದಿಂದ ಕಾಮಧೇನು ಹಸು ಬಂದು ಮಾರಮ್ಮನ ತೋಟದಲ್ಲಿ ಮೇಯುತ್ತಿರುತ್ತದೆ. ಹೊಟ್ಟೆ

ತುಂಬ ತಿಂದ ನಂತರ ಅದು ಹೋಗಬೇಕು ಎನ್ನವುದರೊಳಗಾಗಿ ಮಾರಮ್ಮ ಅದನ್ನು ಹಿಡಿದು ಕಟ್ಟಿಹಾಕಿ, ಅದರ ಹಾಲು ಕರೆದು ಬಿಸಿಮಾಡಿ ಹೆಪ್ಪು ಹಾಕಿ ಮೊಸರು ಮಾಡಿ, ಮೊಸರಿನಿಂದ ಮಜ್ಜಿಗೆ ಮಾಡಿ ಬಂದ ಬೆಣ್ಣೆಯಿಂದ ತುಪ್ಪ ಕಾಯಿಸಿ ನೆಲುವಿನ ಮೇಲೆ ಇಡುತ್ತಾಳೆ.

ಒಂದು ದಿನ ಮಾರಮ್ಮ ಹಬ್ಬದ ಅಡುಗೆಯನ್ನು ಮಾಡಿ ಲೊಕ ಸಂಚಾರ ಹೊರಟಿರುವ ತಂದೆ ತಾಯಿಗಳಾದ ಶಿವ ಪಾರ್ವತಿಯರನ್ನು ಕರೆಯುತ್ತಾಳೆ. ಮಗಳ ಆಹ್ವಾನವನ್ನು ಗಮನಿಸಿದ ಶಿವ, ಮಾರಮ್ಮನ ತೊಟದಲ್ಲಿ ರಥವನ್ನು ಇಳಿಸುತ್ತಾನೆ. ಇಳಿದು ಬಂದ ತಂದೆ ತಾಯಿಗೆ ಕೈ ಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಊಟಕ್ಕೆ ಬಡಿಸುತ್ತಾಳೆ. ಊಟ ಮಾಡುವಾಗ ಅವರ ಯೋಗ ಕ್ಷೇಮ ವಿಚಾರಿಸುತ್ತಾಳೆ. ಬಾಳೆ ಎಲೆಯನ್ನು ಹಾಸಿ ಪಂಚಾಮೃತವನ್ನು ಬಡಿಸುತ್ತಾಳೆ. ಆಗ ತುಪ್ಪ ಹಾಕುವುದನ್ನು ಮರೆಯುತ್ತಾಳೆ. ಆಗ ಶಿವನು ನೆಲುವು ತೋರಿಸಿ ಅದರಲ್ಲಿ ಇರುವುದು ಏನು? ಎಂದು ಕೇಳಿದಾಗ ಮಾರಮ್ಮನಿಗೆ ನೆನಪಾಗಿ ಅದು ನಿಮ್ಮ ಕಾಮಧೇನು ಹಸುವಿನ ತುಪ್ಪ. ಅದನ್ನು ನಿಮಗೆ ಊಟಕ್ಕೆ ಬಡಿಸುಲು ನಿಮ್ಮನ್ನು ಕರೆದದ್ದು ಎಂದು ಹೇಳಿ ನೆಲುವಿನ ಮೇಲೆ ಇರುವ ತುಪ್ಪದ ಮಗಿಯನ್ನು ನೋಡಿದಾಗ, ಅದರಲ್ಲಿ ಒಂದು ಗಂಡು ಮಗು ಇರುತ್ತದೆ. ಆಗ ಮಾರಮ್ಮನಿಗೆ ಆಶ್ಚರ್ಯವಾಗುತ್ತದೆ. ಆಗ ಶಿವನು ಮುಗುಳು ನಗು ನಗುತ್ತಾನೆ. ಕಾರಣ ಕೇಳಿದಾಗ ಇವನು ಎತ್ತು ತುಪ್ಪದಲ್ಲಿ ಹುಟ್ಟಿರುವುದರಿಂದ ಎತ್ತಪ್ಪ ಎಂದು ನಾಮಕರಣ ಮಾಡಿ, ಮುಂದೆ ಇವನು ಅಂಬೇರಾಯ ತುಂಬೆರಾಯರ ದನಗಳನ್ನು ಕಾಯುವ ಸಲುವಾಗಿ ನಾವೇ ಸೃಷ್ಟಿ ಮಾಡಿದ ಶಿಶು. ಅಷ್ಟೆ ಅಲ್ಲ ಅಂಬೆರಾಯ ತುಂಬೆರಾಯ ದೇವತೆಗಳು ಗಳಿಸದೇ ಇರುವ ಪುಣ್ಯವನ್ನು ಗಳಿಸಿದ್ದಾರೆ. ಹಾಗಾಗಿ ಸ್ವರ್ಗದ ಬಾಗಿಲು ತೆರೆದಿದ್ದರೂ ಕೂಡ ಅವರು ಬರಲಿಕ್ಕೆ ತಯಾರಿಲ್ಲ. ಜೊತೆಗೆ ಗೋವುಗಳನ್ನು ಕಾಯುವುದರ ಮೂಲಕ ನನ್ನ ಮನಸ್ಸು ಗೆದ್ದಿರುವರು. ಅವರು ಮಾಡಿದ ಪುಣ್ಯದಿಂದ ನಾವು ಗೋವು ನಾಶವಾಗಬಾರದೆಂದು ಎತ್ತಯ್ಯನನ್ನು ಸೃಷ್ಟಿಮಾಡಿದೆವು. ಐದು ವರುಷದ ತನಕ ಸಾಕಿ ಆನಂತರ ಈ ಮಗುವನ್ನು ಹುಡುಕಿಕೊಂಡು ಅಂಬೆರಾಯ ತುಂಬೆರಾಯ ಬರುತ್ತಾರೆ. ಅವರಿಗೆ ಈ ಮಗು ಒಪ್ಪಿಸು ಎಂದು ಹೇಳಿ ಮಾಯವಾಗುತ್ತಾರೆ.

ಈ ಪುರಾಣಕಥೆ ಚಳ್ಳಕೆರೆಯ ಸುತ್ತಮುತ್ತ ಪ್ರಚಲಿತದಲ್ಲಿದೆ ನಂತರ ಅಂಬೆರಾಯ ತುಂಬೆರಾಯ ಏಳು ಗೂಡಿನ ದನಗಳನ್ನು ಕಾಯುತ್ತಿರುವ ಸಮಯದಲ್ಲಿ ಹಾಲು ಕುರುಬರು ಹಂಡೆಕುರುಬರು ದಾರಿ ಮಾರ್ಗವಾಗಿ ಹೋಗುತ್ತಿರುವಾಗ ಎತ್ತಯ್ಯನ ಹಾವಿನ ಗೂಡಿನ ಬಳಿ ಉಳಿದು ಕೊಳ್ಳುತ್ತಾರೆ. ಆಗ ಎತ್ತಯ್ಯ ಅವರಿಗೆ ಅಡುಗೆ ಮಾಡಿ ಊಟಕ್ಕೆ ಕರೆದಾಗ ಅವರು ಊಟ ಮಾಡಲು ನಿರಾಕರಿಸುತ್ತಾರೆ. ನಂತರ ಸುರನಾರಿಯ ಬಿಲ್ಲು ಹೂಡಿ ತುಗ್ಗಲಿ ಮರಕ್ಕೆ ಹೊಡೆದಾಗ ತುಗ್ಗಲಿ ಮರ ಬೆಂಕಿಹತ್ತಿ ಉರಿಯುತ್ತದೆ. ಇದರಿಂದ ಭಯ ಭೀತರಾಗಿ ಅವರು ಎತ್ತಯ್ಯ ಮಾಡಿದ ಅಡುಗೆಯನ್ನು ಊಟ ಮಾಡುತ್ತಾರೆ. ಆದರೂ ಎತ್ತಯ್ಯ ಮಾಡಿದ ಅಡುಗೆ ಹಾಗೆ ಉಳಿಯುತ್ತದೆ. ಇವನ ಸತ್ಯಕ್ಕೆ ಮೆಚ್ಚಿ ಕುರುಬರು ಗೆಜ್ಜೆಕಾಲು ಮಲ್ಲಮ್ಮನನ್ನು ಎತ್ತಯ್ಯನಿಗೆ ಮದುವೆ ಮಾಡುತ್ತಾರೆ. ಎಷ್ಟು ವರ್ಷವಾದರೂ

ಮಕ್ಕಳಾಗದ ಕಾರಣ ವಲಗಾನಿ ಎಂಬ ಅಳಿಯನನ್ನು ದನ ಕಾಯಲು ನೇಮಿಸಿಕೊಳ್ಳುತ್ತಾನೆ. ಸಂಪೂರ್ಣವಾಗಿ ದನ ಕಾಯುವ ಜವಾಬ್ದಾರಿಯನ್ನು ವಲಗಾನಿಗೆ ವಹಿಸಿ ತಾನು ವಿಶ್ರಾಂತಿ ಪಡೆಯುತ್ತಾನೆ. ಹೀಗಿರಲು ವಲಗಾನಿಯು ನಾಗಸಾನಿಯರ ಉಪಟಳಕ್ಕೆ ಬಲಿಯಾಗುತ್ತಾನೆ. ವಲಗಾನಿಯ ಬಳಿ ಇರುವ ಬಂಗಾರದ ಸುಣ್ಣದಡಬ್ಬಿ ತೆಗೆದುಕೊಂಡು ಹಿತ್ತಾಳೆಯ ಸುಣ್ಣದಡಬ್ಬಿ ಕೊಡುತ್ತಾರೆ. ಇದರಿಂದ ಭಯಗೊಂಡ ವಲಗಾನಿ ಬಂಗಾರದ ಸುಣ್ಣದಡಬ್ಬಿಯನ್ನು ವಾಪಸ್ಸು ತೆಗೆದುಕೊಂಡು ಬರಲು ಹೋದಾಗ, ಅವನನ್ನು ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡಿಸಿ ವಾಪಸ್ಸು ಕಳುಹಿಸುತ್ತಾರೆ. ಈ ವಿಷಯ ಎತ್ತಯ್ಯನಿಗೆ ಗೊತ್ತಾಗಿ ವಲಗಾನಿಯನ್ನು ಹೊಡೆಯುತ್ತಾನೆ. ಗೆಜ್ಜೆಕಾಲ ಮಲ್ಲಮ್ಮನಿಂದ ವಲಗಾನಿಯ ಪ್ರಾಣ ಉಳಿಯುತ್ತದೆ.

ಕಾಡುಗೊಲ್ಲರು ಸಾಕಷ್ಟು ನಾಯಕರು ಮದುವೆಯನ್ನು ನಿರಾಕರಿಸುತ್ತಾರೆ. ಬ್ರಹ್ಮಚಾರಿಗಳಾಗಿದ್ದು ಪುಣ್ಯ ಸಂಪಾದಿಸಬೇಕೆಂಬುದು ಅವರ ನಿಲುವಾಗಿತ್ತು. ಆದರೆ ವ್ಯವಸ್ಥೆ ಅವರನ್ನು ಹಾಗೆ ಇರಲು ಬಿಡುವುದಿಲ್ಲ. ಬಲವಂತವಾಗಿ ಒಪ್ಪಿಸುತ್ತದೆ. ಇದರಿಂದಾಗಿ ಅವರು ಮದುವೆ ಆದರೂ ಹೆಂಡತಿಯಿಂದ ದೂರ ಇರಲು ಬಯಸುತ್ತಾರೆ. ಉದಾ: ಚಿನ್ನಮ್ಮನನ್ನು ಮದುವೆಯಾದ ಕೆಂಗುರಿ ಮಲ್ಲೆಗೌಡ, ಗೆಜ್ಜೆಕಾಲು ಮಲ್ಲಮ್ಮನನ್ನು ಮದುವೆಯಾದ ಎತ್ತಯ್ಯ. ಮದುವೆಯಾದರೂ ಎತ್ತಯ್ಯ ಗುಡ್ಡದ ಬೋರಿಯೊಂದಿಗೆ ಸಂಬಂಧ ಇಟ್ಟುಕೊಳ್ಳುವುದು. ವೀರಮಿಂಚಣ್ಣ ಮದುವೆಯಾಗುವುದನ್ನು ಅವನ್ನು ಸಾಕಿಕೊಂಡಿರುವ ಗೋವುಗಳಿಗೆ ಇಷ್ಟವಿರಲಿಲ್ಲ ಎಂಬುದನ್ನು ತಿಳಿಯುತ್ತದೆ.

ಚಳ್ಳಕೆರೆಯ ಸುತ್ತ ಮುತ್ತ ಪ್ರಚಲಿತದಲ್ಲಿರುವ ಪಾಠಾಂತರದಲ್ಲಿ ಎತ್ತಯ್ಯ ಮದುವೆಯಾಗುವುದು ದನಗಳಿಗೆ ಇಷ್ಟವಿರಲಿಲ್ಲ. ಹಾಗಾಗಿ ಒಂದು ತಿಂಗಳ ಕಾಲ ಹೆಂಡತಿಯ ಮನೆಯಲ್ಲಿದ್ದು ನಂತರ ಕಾಡಿನಲ್ಲಿದ್ದ ದನಗಳ ಬಳಿಗೆ ಎತ್ತಯ್ಯ ಹೋದಾಗ ಅವು ಅವನನ್ನು ಹತ್ತಿರಕ್ಕೆ ಸೇರಿಸಿ ಕೊಳ್ಳುತ್ತಿರಲಿಲ್ಲ. ಮುಂದೆ ಬಂದರೆ ಗುದ್ದುತ್ತಿದ್ದವು ಹಿಂದೆ ಕಾಲಿನಿಂದ ಒದೆಯುತ್ತಿದ್ದವು ಇದಕ್ಕೆ ಕಾರಣವೇನೆಂದು ಕೇಳಿದಾಗ ಕಲ್ ಕಚ್ಚಿ ಬೇವು ಕಚ್ಚಿ, ಏಳು ಬಾವಿ ಮುಳುಗಿ ಗೋಮೂತ್ರ ಸೇವಿಸಿ ಚಿತ್ರದೇವರ ಹಟ್ಟಿಯ ಪೂಜಾರಿಯಿಂದ ತೀರ್ಥ ಹಾಕಿಸಿಕೊಂಡು ಬಂದು ನಮ್ಮನ್ನು ಸೇರಬಹುದು ಪುನಃ ಹೆಣ್ಣು ಮಕ್ಕಳ ಸಹವಾಸ ಮಾಡುವುದಿಲ್ಲ ಎಂದು ಭಾಷೆ ತೆಗೆದುಕೊಂಡು ಹತ್ತಿರಕ್ಕೆ ಸೇರಿಸಿಕೊಳ್ಳುತ್ತವೆ. ಆ ಕಾರಣಕ್ಕೆ ಎತ್ತಯ್ಯ ಮತ್ತೆ ಗೆಜ್ಜೆಕಾಲು ಮಲ್ಲಮ್ಮನನ್ನು ಸೇರುವುದಿಲ್ಲ ಅವಳು ಮಾಡಿದ ಅಡಿಗೆಯನ್ನು ಊಟಮಾಡುವುದಿಲ್ಲ.

"ವಲಗಾನಿ ದೃಶ್ಯ ಮತ್ತು ಮೈಲಣ್ಣನ ದೃಶ್ಯ ಸಾಮ್ಯತೆಯಿಂದ ಕೂಡಿದೆ. ಬೇಟೆಗಾರ ನಿನ್ನ ಸೊತ್ತು ನಾನೇನು ತಿಂದಿದ್ದೀನಿ ನನ್ಯಾಕೆ ಹಿಡುಕೊಂಡೆ? ಎಂದು ಕೇಳಿತು ಇಲ್ಲಮ್ಮ ನಾನು ಬೇಟೆಗಾರ ಅಲ್ಲ. ಏಳು ಗೂಡಿನ ದನ ಅತ್ಲ ಕೊತ್ಲ ಆಗಿವೆ ಹುಲ್ಲು ನೀರು ಇರೋ ಜಾಗ ತೋರ್ಸ್" ಅಂತ ಆಣೆ ಪ್ರಮಾಣ ಮಾಡಿದ" *(ಮೀರಾಸಾಬಿಹಳ್ಳಿ ಶಿವಣ್ಣ 'ಕಾಡುಗೊಲ್ಲ ಬುಡಕಟ್ಟು ವೀರರು', ಪುಟ ೨೪೭, ೨೦೦೫)*

"ದನಕರುಗಳು ಐಶ್ವರ್ಯ ಒಂದು ಭಾಗವೇ ಆಗಿದ್ದುದರಿಂದ ಅರಣ್ಯದ ಏಕಾಂತದಲ್ಲಿರುವ ದನಗಾಯಿಗಳನ್ನು ಹೆಣ್ಣು ಮಕ್ಕಳ ನೆರವನ್ನು ಪಡೆದುಕೊಂಡಂತೆ ಎತ್ತಪ್ಪನ ಕಾವ್ಯದಲ್ಲಿ ಎತ್ತಪ್ಪ ಹೆಣ್ಣು ಮಕ್ಕಳ ನೆರವನ್ನು ಪಡೆದುಕೊಂಡಂತೆ ಮಾಹಿತಿ ಇದೆ. *(ಕೃಷ್ಣಮೂರ್ತಿ ಹನೂರು 'ಸಾವಿರದ ಸಿರಿಬೆಡಗು' ಪುಟ ೮೧ ೨೦೧೫.)*

ಸಾಮಾನ್ಯವಾಗಿಪ್ರತಿಯೊಬ್ಬ ಕಾಡುಗೊಲ್ಲ ನಾಯಕ ಬ್ಯಾಡರೊಂದಿಗೆ ಹೋರಾಡಿ ಮಡಿದ ಬಗ್ಗೆ ಸಾಕಷ್ಟು ಕಾವ್ಯಗಳು ದೊರೆಯುತ್ತವೆ. ಮ್ಯಾಸ ಬೇಡರು ದನದ ಮಾಂಸದ ಮೇಲಿನ ಆಸೆಯಿಂದ ತಮ್ಮ ಹೆಣ್ಣು ಮಕ್ಕಳನ್ನು ಕಾಡುಗೊಲ್ಲರಿಗೆ ಸೂಳೆಯಾಗಿ ಮಾಡಿದ್ದಾರೆ. ಇಂತಹ ಘಟನೆ ಎತ್ತಯ್ಯನ ಕಾವ್ಯದಲ್ಲೂ ಕಂಡು ಬರುತ್ತದೆ.

ಎತ್ತಯ್ಯ ಹುಲ್ಲು ನೀರಿಗಾಗಿ ಸಂಡೂರು ಬಮ್ಮನ ಕಾವಲಿಗೆ ದನಗಳನ್ನು ಹೊಡೆಯುತ್ತಾನೆಂಬ ಸುದ್ಧಿಯನ್ನು ಕೇಳಿದ ಗೆಜ್ಜಕಾಲು ಮಲ್ಲಮ್ಮ ಕಂಕ ಮ್ಯಾಸಬೇಡರು ಬಲು ಮೋಸಗಾರರು ಹಾಗಾಗಿ ಸಂಡೂರಿಗೆ ದನಗಳನ್ನು ತೆಗೆದುಕೊಂಡು ಹೋಗುವುದು ಬೇಡವೆಂದು ತಡೆಯುತ್ತಾಳೆ. ಆಗ ಎತ್ತಯ್ಯ ಕೋಪಗೊಂಡು ಅಡಿಕೆ ಎಲೆಯ ಚೀಲ ತೆಗೆದುಕೊಂಡು ಅವಳ ತಲೆಗೆ ಹೊಡೆಯುತ್ತಾನೆ. ಇದರಿಂದಾಗಿ ಮಲ್ಲಮ್ಮ ಹಿಂದೆ ಸರಿಯುತ್ತಾಳೆ. ಸಂಡೂರು ಬಮ್ಮನ ಕಾವಲಿಗೆ ದನಗಳನ್ನು ಹೊಡೆದುಕೊಂಡು ಹೋಗುತ್ತಾನೆ ಆಗ ಸಂಡೂರು ಬಮ್ಮನ ಸೂಳೆ ಗುಡ್ಡದ ಬೋರಿ ಎತ್ತಯ್ಯನ ಸೌಂದರ್ಯಕ್ಕೆ ಮಾರು ಹೋಗುತ್ತಾಳೆ. ಪರನಾರಿಯರ ಸಹೋದರನಂತಿದ್ದ ಎತ್ತಯ್ಯ ಮುಚ್ಚಲರ ಮನೆಯ ಹೆಣ್ಣು ಮಗಳು ನೀನು ನನಗೆ ತಂಗಿಯಾಗಬೇಕು. ನಾವಿಬ್ಬರೂ ಸೇರುವುದು ಸರಿಯಲ್ಲ ಎಂದು ವಿವೇಕವನ್ನು ಹೇಳಿದಾಗ, ಅದು ಅವಳಿಗೆ ಸಹಿಸಲಾರದ ಅವಮಾನವಾಗುತ್ತದೆ. ಅವಳು ತನ್ನ ಮಿಂಡನಾದ ಬಮ್ಮನ ಬಳಿ ದೂರು ಹೇಳುತ್ತಾಳೆ. ಬಮ್ಮನು ಎತ್ತಯ್ಯನ ಮೇಲೆ ಯುದ್ಧ ಸಾರುತ್ತಾನೆ. ಯುದ್ಧದಲ್ಲಿ ಎತ್ತಯ್ಯ ಸಾವಿರಾರು ಜನ ಮ್ಯಾಸಬೇಡರನ್ನು ಕೊಲ್ಲುತ್ತಾನೆ. ಇನ್ನೇನು ಯುದ್ಧ ಮುಗಿಯಿತು ಎಂದು ತಿಳಿದು ದಾಹ ತೀರಿಸಿಕೊಳ್ಳಲು ನೀರು ಕುಡಿಯಲು ತಲೆಯನ್ನು ಬಗ್ಗಿಸಿದಾಗ ಬಮ್ಮನ ತನ್ನ ಬಾಣದಿಂದ ಎತ್ತಯ್ಯನ ಶಿರ ಕಡಿಯುತ್ತಾನೆ. ಕಡಿದ ಶಿರವನ್ನು ತೆಗೆದುಕೊಂಡು ಹೋಗಿ ತನ್ನ ಸೂಳೆಯಾದ ಗಡ್ಡದ ಬೋರಿಗೆ ಕೊಡುತ್ತಾನೆ. ಗುಡ್ಡದ ಬೋರಿ ಎತ್ತಯ್ಯನ ಶಿರವನ್ನು ಕಾಲ ಕೆಳಗೆ ಇಟ್ಟು ಸ್ನಾನ ಮಾಡಬೇಕೆಂದಿರುತ್ತಾಳೆ. ಆಗ ಎತ್ತಯ್ಯನ ಅಳಿಯ ವಲಗಾನಿ ಬಂದು ಎತ್ತಯ್ಯನ ಶಿರವನ್ನು ತೆಗೆದುಕೊಂಡು ಹೋಗುತ್ತಾನೆ. ಎತ್ತಯ್ಯನನ್ನು ತಳುಕಿನ ಗುಡ್ಡದಲ್ಲಿ ಸಮಾಧಿ ಮಾಡಿದ ಬಗ್ಗೆ ಕುರುಹುಗಳಿವೆ.

'ಎತ್ತೆಲ್ಲಿ ಕಾದಣ್ಣ ಮುತ್ತೆಲ್ಲಿ ಮುಡುದಣ್ಣ
ಎತ್ತಿಗೂ ನೀರೆಲ್ಲಿ ಕುಡಿಸಿದೆ ತಳುಕಿನ
ಮತ್ತಿನ ಸಾಗ್ಗರದ ವಳಿಯಾಗೆ' *(ಮೀರಾಸಾಬಿಹಳ್ಳಿ ಶಿವಣ್ಣ 'ಕಾಡುಗೊಲ್ಲ ಬುಡಕಟ್ಟು ವೀರರು' ಪುಟ ೨೪೭, ೨೦೦೫)*

"ಬಹುಶಃ ಎತ್ತಪ್ಪನಿಗೆ ತಂದೆ ತಾಯಿ ಯಾರು ಗೊತ್ತಿಲ್ಲದ ಒಬ್ಬ ಅನಾಥ ಬಾಲಕನಿರಬೇಕು. ಗೌರಸಮುದ್ರದ ಮಾರಿ ಈ ಅನಾಥ ಬಾಲಕನನ್ನು ತಂದು ಅಂಬೆರಾಯ ತುಂಬೆರಾಯರ ಎತ್ತು ಕಾಯಲು ತೊಡಗಿಸಿದಂತೆ ಕಾಣುತ್ತದೆ. ಹೀಗಾಗಿ ಎತ್ತು ಕಾಯುವ ಅಪ್ಪ ಎಂಬುದೇ ಎತ್ತಿನ+ಅಪ್ಪ+ಎತ್ತಿನಪ್ಪ>ಎತ್ತಪ್ಪ>ಎತ್ತಪ್ಪ ಆಗಿರಬೇಕು ಎಂಬ ಊಹೆಯೇ ಸಾಧುವೆನಿಸುತ್ತದೆ." *(ಮೀರಾಸಾಬಿಹಳ್ಳಿ ಶಿವಣ್ಣ 'ಕಾಡುಗೊಲ್ಲ ಬುಡಕಟ್ಟು ವೀರರು' ಪುಟ ೨೦೩, ೨೦೦೫)*

ಕಲ್ಲು ಕರಗ ಹೊತ್ತು ದೇವಲೋಕದಿಂದ ಬಂದ ದೇವಕನ್ನಿಕೆಯರು ಕಳ್ಳ ಮಡುನಲ್ಲಿ ಜಲಕ್ರೀಡೆ ಆಡಲು ತಮ್ಮ ಮೈಮೇಲಿನ ಬಟ್ಟೆ ತೆಗೆದು ದಂಡೆ ಮೇಲಿಟ್ಟು ನೀರಿಗೆ ಇಳಿಯುವರು ಮಡುವೆಲ್ಲ ಬೆಂಕಿ ಹತ್ತಿಕೊಂಡಂತೆ ಆಗುತ್ತದೆ. ಎತ್ತನ ಗೂಡಿನಲ್ಲಿಯ ಎತ್ತಯ್ಯನಿಗೆ ಇದು ಕಾಣಿಸಿತು. ಎತ್ತಯ್ಯನಿಗೆ ಸ್ವಲ್ಪ ಹುಡುಗಾಟ ಆಡೋಣವೆನಿಸಿ ರೇವುಂಡೆ ಮರದ ಕೆಳಗೆ ಮೂರುತಿಂಗಳು ಮಗುವಾಗಿ ಅಳಲಿಕ್ಕೆ ಪ್ರಾರಭಿಸುತ್ತಾನೆ.ಮಗು ಅಳುವ ಶಬ್ಧ ಕೇಳಿ ದೇವಕನ್ನಿಕೆಯರು ಬೆತ್ತಲೆಯಾಗಿ ಮೇಲಕ್ಕೆ ಬಂದು ಮುದ್ದಾಗಿದ್ದ ಮಗು ಎತ್ತಿಕೊಂಡು ಮುದ್ದಾಡುತ್ತಾರೆ. ತುಟಿಗೆ ತುಟಿ ತಗಲಿಸಿ ಗರ್ಭವತಿಯರಾದರು. ಅವರು ದೇವೇಂದ್ರನ ಉದ್ಯಾನವನಕ್ಕೆ ನೀರು ತೆಗೆದುಕೊಂಡು ಹೋಗಲು ತಂದಿದ್ದ ಕರಗಗಳು ಅವರ ಪಾತಿವ್ರತ್ಯ ಅವು ಕೆಟ್ಟಿದ್ದರಿಂದ ಕರಗಿ ನೀರಾದವು. ಕುಪಿತಗೊಂಡ ದೇವಗನ್ನಿಕೆಯರು " ನಮ್ಮನ್ನ ಬತಗೆಡಿಸಿಗೆದೋನು ಆಳೊತಕ್ಕ ಆಳಿ ಬಾಳೊತಕ್ಕ ಬಾಳಿ ಸಂಡೂರು ಬ್ಯಾಡರ ಕೈಲಿ ತಲೆ ಹೋಗಲಿ" ಎಂದು ಶಾಪಕೊಟ್ಟರು.ಇದನ್ನು ದಾಸರಹಳ್ಳಿ ದಾಸಜ್ಜ ಹೇಳಿದ್ದಾರೆ. ಅವರು ದೇವಲೋಕಕ್ಕೆ ಬರಿಗೈಲಿ ಹೋಗುತ್ತಾರೆ. ದೇವೇಂದ್ರನ ಹೂವಿನ ವನ ಒಣಗಿತು ದೇವೇಂದ್ರನಿಗೆ ಇವರ ಶೀಲಗೆಟ್ಟಿದ್ದು ಗೊತ್ತಾಗಿ ಅವರ ಪಿಂಡ ತೆಗೆದು ತುಂಗಭದ್ರಾ ಹೊಳೆಗೆ ಹಾಕುವನು.

ಎತ್ತಯ್ಯನ ಸೃಷ್ಟಿ ಪುರಾಣದಲ್ಲಿ ತೀ ನಂ ಶಂಕರನಾರಾಯಣರವರು ಅಲ್ಪ ಸ್ವಲ್ಪ ಭಿನ್ನತೆಯನ್ನು ಗುರುತಿಸಿದ್ದಾರೆ. ಇವರ ಸಂಶೋಧನೆಯ ಪ್ರಕಾರ ಬ್ರಾಹ್ಮಣನ ಪ್ರವೇಶವಾಗುತ್ತದೆ. "ಪ್ರತಿನಿತ್ಯವೂ ಬ್ರಾಹ್ಮಣರು ಇವರ ಹಾವಿನ ಗೂಡಿನ ಬಳಿಗೆ ಬಂದು ಅಡ್ಡೆಗಳಲ್ಲಿ ಹಾಲನ್ನು ತುಂಬಿಕೊಂಡು ಹೋಗುತ್ತಿದ್ದರು. ಆದರೆ ತೆಗೆದುಕೊಂಡ ಹಾಲಿಗೆ ಪ್ರತಿಯಾಗಿ ಅಂಬೇರಾಯ ಮತ್ತು ತುಂಬೇರಾಯರಿಗೆ ಏನನ್ನು ಕೊಡುತ್ತಿರಲಿಲ್ಲ. ಆದರೂ ಕೂಡ ತಾವು ಮುದುಕರಾಗುವವರೆಗೂ ಅಂಬೇರಾಯ ಮತ್ತು ತುಂಬೇರಾಯರು ಬ್ರಾಹ್ಮಣರಿಗೆ ಹಾಲನ್ನು ಕೊಟ್ಟರೂ ಆದರೂ ಬ್ರಾಹ್ಮಣರ ದುರಾಸೆ ತಪ್ಪಲಿಲ್ಲ." *(ತೀ.ನಂ ಶಂಕರನಾರಾಯಣ ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಪುಟ ೧೪೦, ೨೦೦೭)*

ಕಾಡುಗೊಲ್ಲರ ಚಿತ್ರದೇವರ ಕಾವ್ಯದಲ್ಲಿ ಮಾತ್ರ ಬ್ರಾಹ್ಮಣರ ಪ್ರವೇಶವಿದೆ. ಆದರೆ ಎತ್ತಯ್ಯನ ಕಾವ್ಯದಲ್ಲಿಯೂ ಬ್ರಾಹ್ಮಣರು ಪ್ರವೇಶ ಪಡೆದಿರುವುದು ಆಶ್ಚರ್ಯವಾದ ಸಂಗತಿ. ಚಿತ್ರದುರ್ಗದ ಯಾವ ಭಾಗದಲ್ಲಿಯೂ ಬ್ರಾಹಣರ ಪ್ರವೇಶ ಕುರಿತು ಮಾಹಿತದಾರರು ಮಾಹಿತಿ ಹೇಳಿಲ್ಲ.

ಬ್ರಾಹ್ಮಣರು ಬೆಂಕಿ ಮಳೆ ಸುರಿದು ಅಂಬೇರಾಯ ಮತ್ತು ತುಂಬೇರಾಯರ ದನಗಳಿಗೆ ತೊಂದರೆ ಮಾಡುತ್ತಾರೆ. ಜೊತೆಗೆ ದನಗಳು ಕಂದು ಹಾಕಿದ ಎಳೆ ಕರುಗಳ ಜಾಗದಲ್ಲಿ ಬಾಳೆಗಿಡಗಳು ಬೆಳೆಯುವಂತೆ

ಮಾಡಿರುವುದು ಮತ್ತು ಪ್ರಕೃತಿಯಲ್ಲಿ ಇಲ್ಲದೇ ಇರುವ ಸಸ್ಯವನ್ನು ಸೃಷ್ಟಿಮಾಡಿ ನಮ್ಮಿಂದ ಬಾಳೆ ಸೃಷ್ಟಿಯಾಯಿತು ಎಂಬುದು ಒಂದು ವಿಧವಾದರೆ, ಸತ್ತ ಪ್ರಾಣಿಗಳು ಬೆಳೆಯುವ ಸಸ್ಯಗಳಿಗೆ ಗೊಬ್ಬರವಾಗುತ್ತವೆಂಬುದು ಇದರಿಂದ ಗೊತ್ತಾಗುತ್ತದೆ. ಅಂದರೆ ಈ ಭೂಮಿಯ ಮೇಲೆ ಯಾವ ವಸ್ತುವು ಪ್ರಯೋಜನಕ್ಕೆ ಬರುವುದಿಲ್ಲ ಎಂದು ನಿರಾಕರಣೆ ಮಾಡುವಂತಿಲ್ಲ

ತೀ ನಂ ಶಂಕರನಾರಾಯಣರವರ ಪ್ರಕಾರ ಅಂಬೇರಾಯ ಮತ್ತು ತುಂಬೇರಾಯ ಗೌರಸಮುದ್ರದ ಮಾರಮ್ಮನ ಬಳಿ ಬಂದು ಅಳಲನ್ನು ತೋಡಿಕೊಂಡಾಗ ಗೌರಸಮುದ್ರದ ಮಾರಮ್ಮ ನೇರವಾಗಿ ಕೈಲಾಸಕ್ಕೆ ಹೋಗಿ ಶಿವನಿಂದ ಎತ್ತಯ್ಯನನ್ನು ವರವಾಗಿ ಪಡೆದುಕೊಂಡು ಬರುತ್ತಾಳೆ.

"ಎತ್ತಯ್ಯ ಬಂದು ಪಶುಪಾಲನೆಯಲ್ಲಿ ತೊಡಗುತ್ತಾನೆ. ಅಂಬೇರಾಯ ಮತ್ತು ತುಂಬೇರಾಯರು ಕೈಲಾಸ ಸೇರುತ್ತಾರೆ. ಎತ್ತಯ್ಯ ತುಪ್ಪಾಡಿ ಕಾವಲಿಗೆ ದನಬಿಟ್ಟು ಮುನಿಯ ತಪೋಭಂಗಮಾಡಿದ್ದರಿಂದ ಸಂಡೂರು ಕಾವಲಿನ ಮಡಗಿನಲ್ಲಿ ಸ್ನಾನ ಮಾಡುತ್ತಿದ್ದ ದೇವಗನ್ನಕೆಯರ ಆಗ್ರಹಕ್ಕೆ ಗುರಿಯಾಗಿ ಸಂಡೂರು ಬ್ಯಾಡರ ಕೈಯಲ್ಲಿ ತಲೆ ಹೋಗಲಿ ಎಂಬ ಶಾಪಕ್ಕೆ ಗುರಿಯಾಗುತ್ತಾನೆ. *(ಡಾ. ಮೀರಾಸಾಬಿಹಳ್ಳಿ ಶಿವಣ್ಣ, 'ಕಾಡುಗೊಲ್ಲರ ಸಂಸ್ಕೃತಿ' ಪುಟ ೪೦, ೨೦೦೪)*

ಮೀರಾಸಾಬಿಹಳ್ಳಿ ಶಿವಣ್ಣನವರು ವಲಗಾನಿಯ ಜನನದ ಸಂದರ್ಭವನ್ನು ಉಲ್ಲೇಖಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಅಂದರೆ ಇದರಿಂದ ಎತ್ತಯ್ಯ ಪವಾಡ ಪುರುಷನಾಗಿ ಮೆರೆಯುತ್ತಾನೆ. ಎತ್ತಯ್ಯ ಯರಬಳ್ಳಿ ಗೊಲ್ಲರಹಟ್ಟಿಯಲ್ಲಿ ಮದುವೆಯಾಗುತ್ತಾನೆ. ಹೆಂಡತಿಯ ಊರಿಗೆ ಎತ್ತಯ್ಯ ಹೋಗಿದ್ದಾಗ ಅತ್ತೆ ತಿಂಗಳ ಮುಟ್ಟಾಗಿರುತ್ತಾಳೆ. ಹಾಗಾಗಿ ಅವಳು ಎತ್ತಯ್ಯನ ಸತ್ಯವನ್ನು ಪರೀಕ್ಷೆ ಮಾಡಲು ಅರಳಿ ಮರದಲ್ಲಿ ಇರುವ ಎಲೆಗಳು ಒಂದೂ ಇಲ್ಲದಂತೆ ಮಾಡಲಿ ಎಂದು ಮನಸ್ಸಿನಲ್ಲಿ ಅಂದು ಕೊಂಡದ್ದನ್ನು ಎತ್ತಯ್ಯ ತಿಳಿದು ಹಾಗೆ ಮಾಡುತ್ತಾನೆ. ಮತ್ತೆ ಮುಟ್ಟಾಗಿದ್ದ ಅತ್ತೆ ಎತ್ತಯ್ಯನ ಪವಾಡದಿಂದ ಗರ್ಭಿಣಿಯಾಗಿ ಮಗು ಪಡೆಯುತ್ತಾಳೆ. ಹೀಗಾಗಿ ಅವನಿಗೆ ವಲಗಾನಿ ಎಂದು ಹೆಸರಿಡುತ್ತಾರೆ. ಅವನೇ ಮುಂದೆ ಎತ್ತಯ್ಯನ ಸಾಕು ಮಗನಾಗಿ ದನ ಕಾಯಲು ತೊಡಗುತ್ತಾನೆ. ಹಾಗೆಯೇ ಮಡಿದ ಎತ್ತಯ್ಯನಿಗೆ ಮರು ಜೀವಕೊಡುತ್ತಾನೆ. ಇಂದೂ ಕೂಡ ಸನ್ನೇಯ ಗೊಲ್ಲರ ಯುವಕ ಹೆಗಲು ಕೊಡದಿದ್ದರೆ ಎತ್ತಯ್ಯನ ಮಂಚ ಹೇಳುವುದಿಲ್ಲ.

ಕೆ ಎಂ ಮೇತ್ರಿಯವರು ಬೇರೊಂದು ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಮೂರು ಜನ ತ್ರಿಮೂರ್ತಿಗಳ ಉಲ್ಲೇಖವಾಗಿದೆ. ಇದರ ಜೊತೆಗೆ "ಹೊನ್ನ ಬಾಳೆಗೊಂಡನ ಮಗಳಾದ ಗೆಜ್ಜೆಕಾಲು ಮಲ್ಲಮ್ಮಳೊಂದಿಗೆ ವಿವಾಹ ತಾಯಿ ಮಾರಮ್ಮಳಿಗೆ ಮರೆತ. ಮಾರಮ್ಮ ದುಃಖಿತಳಾಗಿ ಅಡವಿ ಸೇರಿ ದೇವರಿಗೆ ಮೊರೆ ಹೋಗಿ ಎತ್ತಯ್ಯನಿಗೆ ದಾರಿ ಕಾಣಿಸಲು ಯೋಚಿಸಿದಳು" *(ಕೆ ಎಂ ಮೇತ್ರಿ 'ಕೃಷ್ಣಗೊಲ್ಲರ ಕಥನ ಕಾವ್ಯಗಳು' ಪುಟ ೧೪. ೨೦೦೦)*

ಕಾಡುಗೊಲ್ಲರು ಬುಡಕಟ್ಟು ಸಮುದಾಯವಾಗಿರುವುದರಿಂದ ಅವರಲ್ಲಿ ಶಿಷ್ಟರಂತೆ ತ್ರಿಮೂರ್ತಿಗಳ ಪರಿಕಲ್ಪನೆ ಬರುವುದಿಲ್ಲ. ಇವರು ಶೈವಾರಾಧಕರಾಗಿರುವುದರಿಂದ ಇವರ ಎಲ್ಲಾ ಸಾಂಸ್ಕೃತಿಕ ನಾಯಕರ

ಜನನ ಶಿವನ ಕೃಪೆಯಿಂದ ಸೃಷ್ಟಿಯಾಗಿದೆ. ತೀ ನಂ ಶಂಕರನಾರಾಯಣರವರು ಮತ್ತು ಮೀರಾಸಾಬಿಹಳ್ಳಿ ಶಿವಣ್ಣನವರ ವಿಷಯಗಳಿಗೆ ವಿರುದ್ಧವಾಗಿ ಹೇಳಿರುವುದು ಗಮನಿಸಬೇಕಾದ ಅಂಶವಾಗಿದೆ. ಶಂಕರನಾರಾಯಣ ಎತ್ತಯ್ಯ ಮದುವೆಯಾಗುವುದು ಕಾಡುಗೊಲ್ಲರ ಹಟ್ಟಿಯಾದ ಯರಬಳ್ಳಿಗೊಲರಹಟ್ಟಿಯಲ್ಲಿ ಎಂದು ಉಲ್ಲೇಖಿಸಿದ್ದಾರೆ. ಮಾಹಿತಿದಾರರು ಕೂಡ ಎತ್ತಯ್ಯ ಕುರುಬರಲ್ಲಿ ಮದುವೆಯಾಗಿರುವುದನ್ನು ಒಪ್ಪಿಕೊಳ್ಳುವುದಿಲ್ಲ, ಹಾಗಾಗಿ ಇಲ್ಲಿ ಮೇತ್ರಿಯವರು ಹೇಳಿರುವುದು ಗಮನಾರ್ಹವಿಚಾರವಾಗಿದೆ. ಏಕೆಂದರೆ ಆಗ ತಾನೆ ಬೆಳೆಯುತ್ತಿದ್ದ ಕಾಡುಗೊಲ್ಲರ ಸಂತತಿ ಅನಿವಾರ್ಯವಾಗಿ ಬೇರೆ ಸಮುದಾಯವನ್ನು ಅವಲಂಬಿಸಬೇಕಿತ್ತು. ತಮ್ಮ ಸಂತತಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಚಿತ್ತಯ್ಯ ಬ್ರಾಹ್ಮಣರ ಕನ್ಯೆಯಾದ ಮಾಳಮ್ಮನನ್ನು ಮದುವೆಯಾದಂತೆ ಎತ್ತಯ್ಯ ಕುರುಬರ ಮನೆಯಲ್ಲಿ ಮದುವೆಯಾಗಿರಬಹುದು.

೨.೬. ಕೆಂಗುರಿ ಮಲೆಗೊಂಡನ ಸೃಷ್ಟಿಪುರಾಣ:

ಕಾಡುಗೊಲ್ಲರಲ್ಲಿ ಎತ್ತಯ್ಯನ ನಂತರ ಪ್ರಭಾವ ಬೀರಿದ ಸಾಂಸ್ಕೃತಿಕ ನಾಯಕ ಜುಂಜಪ್ಪ. ಜುಂಜಪ್ಪನ ಸೃಷ್ಟಿಪುರಾಣವು ಮೂರು ತಲೆಮಾರುಗಳಿಂದ ಕೂಡಿದೆ. ಬುಡಕಟ್ಟು ಮಹಾಕಾವ್ಯಗಳಲ್ಲಿ ಜುಂಜಪ್ಪನ ಕಾವ್ಯವು ಒಂದು. ಇದು ಕಾಡುಗೊಲ್ಲರ ಇತರ ಕಾವ್ಯಗಳಿಗಿಂತ ಗಾತ್ರದಲ್ಲಿ ದೊಡ್ಡದು. ಹಾಗಾಗಿ ತನ್ನದೇ ಆದಂತಹ ವಿಶಿಷ್ಟತೆಯನ್ನು ಪಡೆದುಕೊಂಡ ಈ ಕಾವ್ಯವು ಕಾಡುಗೊಲ್ಲರ ಮಹಾಕಾವ್ಯವೆಂದು ಹೆಸರಾಗಿದೆ.

ಜುಂಜಪ್ಪನ ಕಾವ್ಯವು ಮೂರು ತಲೆಮಾರುಗಳಿಂದ ಸಾಗುವುದರಿಂದ ಮೊದಲನೆ ತಲೆಮಾರಿನ ಕಾವ್ಯವೂ ದೇವರ ದಯಾಮಾರನಿಂದ ಪ್ರಾರಂಭವಾಗುತ್ತದೆ. ಜುಂಜಪ್ಪನ ಏಳು ಜನ ತಾತಂದಿರಲ್ಲಿ ಕೊನೆಯವನು ದೇವರ ದಯಾಮಾರ. ಏಳು ಜನ ತಾತಂದಿರ ಹೆಸರುಗಳು ಈ ರೀತಿ ಇವೆ. ಬಕ್ಕತಲೆ ಚಿತ್ತಯ್ಯ, ಬರಿತಲೆ ಚಿತ್ತಯ್ಯ, ಮಾಪಲ್ಲಿ ಚಿತ್ತಯ್ಯ, ಮೋಪಲ್ಲಿ ಚಿತ್ತಯ್ಯ, ಪೂಜಾರಿ ಚಿತ್ತಯ್ಯ ಗನಗುಡಿ ಚಿತ್ತಯ್ಯ ಚಿತ್ತಯ್ಯ ಮತ್ತು ದೇವರ ದಯಾಮಾರ. ಇವರ ಜೊತೆಗೆ ಒಬ್ಬಳು ತಂಗಿಕೂಡ ಇದ್ದಾಳೆ. ಅವಳ ಹೆಸರು ಬಡಚಿತ್ತಮ್ಮ. ಈ ಹೆಸರುಗಳಲ್ಲಿ ಅನೇಕ ಪಾಠಾಂತರಗಳಾಗಿವೆ. ಇದಕ್ಕೆ ಮುಖ್ಯ ಕಾರಣ ಪ್ರದೇಶಿಕತೆ ಎಂದು ಹೇಳಬಹುದು.

ಪೂಜಾರಿ ಶಿವಣ್ಣ ಹೇಳಿದ ಹೆಸರು ಭಿನ್ನವಾಗವೆ. ಜುಂಜಪ್ಪ ಎಂಬ ಮಹಾಕಾವ್ಯದಲ್ಲಿ ಈ ರೀತಿ ಇವೆ. ಬಕ್ಕತಲೆ ದೊಡ್ಡಯ್ಯ ದಳವಾಯಿ ದೊಡ್ಡಯ್ಯ, ದೊಡ್ಡ ಸಿದ್ದೇಗೌಡ ಪೂಜಾರಿ ದೊಡ್ಡಯ್ಯ, ಚಿಕ್ಕ ಸಿದ್ದೇಗೌಡ ಕಲ್ಲೇಗೌಡ ದೇವರ ದಯಾಮಾರ ಇವರು ಏಳುಜನ ಚಿತ್ತಮುತ್ತಿಗೊಲ್ಲರು ಎಂದು ಹೇಳಿದ್ದಾರೆ. ಈ ಏಳು ಜನರಲ್ಲಿ ಆರು ಜನರಿಗೆ ಮದುವೆಯಾಗಿದೆ. ಆದರೆ ಯಾರೊಬ್ಬರಿಗೂ ಮಕ್ಕಳಾಗಿಲ್ಲ. ಆಕಾರಣದಿಂದ ಇವರು ತಮ್ಮ ಮನೆದೇವರಾದ ಚಿತ್ರದೇವರನ್ನು ಕೇಳಿದಾಗ. ಅದು ದೇವರ ದಯಾಮಾರನಿಗೆ ಮದುವೆ ಮಾಡಿದರೆ ಮಾತ್ರ ಮಕ್ಕಳಾಗುವುದಾಗಿ ಹೇಳುತ್ತದೆ. ಆಗ ಅಣ್ಣ ತಮ್ಮರು ನಿರ್ಣಯಿಸಿ ದೇವರ ದಯಾಮಾನಿಗೆ ಮದುವೆ ಮಾಡಲು ನಿರ್ಧರಿಸುತ್ತಾರೆ. ಆದರೆ

ದೇವರ ದಯಾಮಾರ ಎಲ್ಲಿದ್ದಾನೆ ಎಂಬುದೇ ಅವರಿಗೆ ಗೊತ್ತಿರುವುದಿಲ್ಲ ದೇವರ ದಯಾಮಾರನ ಜೀವನ ಚರಿತ್ರೆ ಗಮನಿಸಿದರೆ ಬುಡಕಟ್ಟು ಸಂಸ್ಕೃತಿ ಎಂಬುದು ಹೇಗಿತ್ತು ಎಂದು ಗೊತ್ತಾಗುತ್ತದೆ.

ಅವನು ಕೊನೆಯ ಮಗನಾದ ದೇವರ ದಯಾಮಾರ ಏಳು ವರ್ಷದಲ್ಲಿ ಏಳು ಕರು ಹೊಡೆದುಕೊಂಡು ಹೋದವನು ಹದಿನಾಲ್ಕು ವರ್ಷವಾದರೂ ಹಟ್ಟಿಯ ಕಡೆ ಮುಖಮಾಡಿರಲಿಲ್ಲ. ಹಾಗಾಗಿ ಅವನು ಬದುಕಿರುವನೋ ಇಲ್ಲವೇ ಸತ್ತಿರುವನೋ ಎಂಬ ಅನುಮಾನದಿಂದ ಮತ್ತು ಅವನಿಗೆ ಮದುವೆ ಮಾಡಿದರೆ ಮಾತ್ರ ಮಾರನಗೊಲ್ಲರ ವಂಶ ಉಳಿಯುತ್ತದೆ ಎಂಬ ಕಾರಣಕ್ಕಾಗಿ ಆರು ಜನ ಅಣ್ಣ ತಮ್ಮರು ದೇವರ ದಯಾಮಾರನನ್ನು ಕಾಡಿನಲ್ಲಿ ಹುಡುಕುತ್ತಾ ಹೋಗುತ್ತಾರೆ. ಎಷ್ಟು ಹುಡುಕಿದರೂ ದೇವರ ದಯಾಮಾರನ ಸುಳಿವು ಸಿಗುವುದಿಲ್ಲ. ದಾರಿ ಮಧ್ಯದಲ್ಲಿ ಗೌರಸಮುದ್ರದ ಮಾರಮ್ಮನ ದರುಶನವಾಗುತ್ತದೆ. ಆಗ ಅವಳನ್ನು ಮಾತನಾಡಿಸಿ ಕಣಿ ಹೇಳುವಂತೆ ಕೇಳುತ್ತಾರೆ. ಅದಕ್ಕೆ ಅವಳು ಒಪ್ಪುವುದಿಲ್ಲ. ಏಕೆಂದರೆ ಅವಳಿಗೆ ಇವರ ಮೇಲೆ ಸಿಟ್ಟಿದೆ. ಕಾರಣ ಹದಿನಾಲ್ಕು ವರುಷದಿಂದ ತಮ್ಮನ ನೆನಪು ಮಾಡಿಕೊಳ್ಳದ ಇವರು ಈಗ ಹುಡುಕುತ್ತಿರುವುದೇ ಕಾರಣ ಹಾಗಾಗಿ ಅವಳು ಸುಳ್ಳು ನೆಪ ಹೇಳುತ್ತಾಳೆ. ಗೊಲ್ಲರ ಶಾಸ್ತ್ರ ಮೂರು ದಿವಸವಾದರೂ ಮುಗಿಯುವುದಿಲ್ಲ. ಮುಂದೆ ನನ್ನ ಗಂಡ ಹೋಗಿದ್ದಾನೆ ಅವನ ಹಿಂದೆ ನಾನು ಹೋಗಲಿಲ್ಲ ಎಂದರೆ ಅವನು ನನ್ನ ಹೊಡೆಯುತ್ತಾನೆಂದು ಹೇಳುತ್ತಾಳೆ. ಆದರೂ ಅವಳನ್ನು ಬಿಡದೆ ಕಾಡಿದಾಗ ಕಣಿ ಹೇಳಲು ಒಪ್ಪಿಕೊಳ್ಳುತ್ತಾಳೆ. ಮಾರಮ್ಮ ಕಣಿಯ ಮೂಲಕ ದೇವರ ದಯಾಮಾರ ಇರುವ ಸ್ಥಳವನ್ನು ಹೇಳುತ್ತಾಳೆ. ಇದರಿಂದ ಅವರು ಮಾರಮ್ಮನಿಗೆ ನಮಸ್ಕಾರ ಮಾಡಿ ದಯಾಮಾರನ ಬಳಿಗೆ ಹೋಗುತ್ತಾರೆ. ಆಗ ದೇವರ ದಯಾಮಾರ ಎಂದೂ ಬಾರದ ಅಣ್ಣಂದಿರು ಇವತ್ತು ಬಂದಿರುವುದೆಂದರೆ ಏನೋ ಕಾರಣ ವಿರಬೇಕೆಂದು ಬಂದ ಕಾರಣವನ್ನು ಕೇಳುತ್ತಾನೆ. ಅವರು ನೀನು ಮದುವೆಯಾದರೆ ಮಾತ್ರ ನಮ್ಮ ವಂಶ ಉಳಿಯುತ್ತದೆ ಇಲ್ಲದಿದ್ದರೆ ನಾಶವಾಗುತ್ತದೆ ಎಂದು ತಮ್ಮನ ಬಳಿ ಗೋಳಾಡುತ್ತಾರೆ. ದೇವರ ದಯಾಮಾರ ಮದುವೆಗೆ ಒಪ್ಪುವುದಿಲ್ಲ. ನಂತರ ಅವರು ಬಂದ ದಾರಿಗೆ ಸುಂಕವಿಲ್ಲವೆಂದು ವಾಪಸ್ಸು ಬರುತ್ತಾರೆ. ನಂತರ ಅಣ್ಣನಪತ್ನಿಯರು ಹೋಗಿ ಮೈದುನ ಹತ್ತಿರ ಹೇಳುತ್ತಾರೆ. ಅತ್ತಿಗೆಯರನ್ನು ಹೆತ್ತ ತಾಯಿಯನ್ನು ನೋಯಿಸಿದರೂ ಒಂದೆ ಎಂದು ಇವರು ನೊಂದುಕೊಂಡರೆ ಮುಂದೆ ನನಗೆ ಒಳ್ಳೆಯದಾಗುವುದಿಲ್ಲವೆಂದು ತಿಳಿದು ಮದವೆಯಾಗಲು ಒಪ್ಪಿಕೊಳ್ಳುತ್ತಾನೆ.

ದೇವರ ದಯಾಮಾರನಿಗೆ ಮದುವೆಯಲ್ಲಿ ಆಸಕ್ತಿ ಇರುವುದಿಲ್ಲ. ಅವನು ಮುಗ್ಧ, ಪಶುವಿನಂತವನು. ಬಹಳ ಕಾಲ ಹಟ್ಟಿಯ ಮುಖವನ್ನೇ ನೋಡದವನು. ಅವನ ಸಂಬಂಧವೆಲ್ಲ ಪಶುಗಳೊಂದಿಗೆ ಮಾತ್ರ, ಅವನು ಪಶುಗಳನ್ನು ಕಾಯುವುದರಲ್ಲಿಯೇ ದೇವರನ್ನು ಕಾಣುತ್ತಿದ್ದನು. ಅವನಿಗೆ ಹಸುಗಳೆಂದರೆ ಎಲ್ಲಿಲ್ಲದ ಪ್ರೀತಿ ಹಾಗಾಗಿ ಇವನನ್ನು ದೇವರ ದಯಾಮಾರ ಎಂದು ಕರೆಯುತ್ತಿದ್ದರು.

ದೇವರ ದಯಾಮಾರನಿಗೆ ಯರಬಳ್ಳಿ ಗೊಲ್ಲರಹಟ್ಟಿಯಲ್ಲಿ ಸನ್ನೇಯಗೊಲ್ಲರ ಹೆಣ್ಣು ಕಂಬಕ್ಕನನ್ನು ಗೊತ್ತು ಮಾಡಿದ್ದರು. ದೇವರ ದಯಾಮಾರನನ್ನು ಮಧುಮಗ ಮಾಡಿಕೊಂಡು ಯರಬಳ್ಳಿ ಗೊಲ್ಲರಹಟ್ಟಿಗೆ ಬಂದಾಗ, ದೇವರ ದಯಾಮಾರ ರಾತ್ರೋ ರಾತ್ರಿ ತಾನು ತಂದ ಚೂರಿ ಬಿಟ್ಟು ಹೋಗಿರುತ್ತಾನೆ.

ಇದರಿಂದಾಗಿ ಬೆಳಿಗ್ಗೆ ಎದ್ದು ಎಲ್ಲರೂ ದಯಮಾರನನ್ನು ಹುಡುಕುತ್ತಾರೆ. ದಯಾಮಾರ ನೇರವಾಗಿ ಹಾವಿನ ಗೂಡಿಗೆ ಹೋಗಿರುತ್ತಾನೆ. ಹಾಗಾಗಿ ಅವನನ್ನು ಹುಡುಕುತ್ತಾ ಕುಳಿತರೆ ಮದುವೆಯ ಸಮಯ ಮುಗಿದು ಹೋಗುತ್ತದೆ ಎಂದು ದಯಾಮಾರ ಬಿಟ್ಟು ಹೋಗಿರುವ ಚೂರಿಗೆ ಕಂಬಕ್ಕನನ್ನು ಧಾರೆ ಎರೆಯುತ್ತಾರೆ. ನಂತರ ಅವರ ಊರುಗಳಿಗೆ ಹೋಗುತ್ತಾರೆ. ಒಂದು ತಿಂಗಳಾದ ನಂತರ ಕಂಬಕ್ಕನನ್ನು ಗಂಡನ ಮನೆಗೆ ಕರೆದುಕೊಂಡು ಬರುತ್ತಾರೆ. ಕಂಬಕ್ಕನಿಗೆ ಪ್ರಾರಂಭದಲ್ಲಿ ಚನ್ನಾಗಿ ನೋಡಿಕೊಂಡು ಆ ನಂತರ ಅವಳ ವಾರಗಿತ್ತಿಯರು ಮತ್ತು ಮಾವಂದಿರು ಕೊಡಬಾರದ ಕಷ್ಟ ಕೊಡುತ್ತಾರೆ. ಏಳು ಕಂಡುಗ ರಾಗಿ ಒಬ್ಬಳೆ ಬೀಸಬೇಕು ಮತ್ತು ಕುಟ್ಟಬೇಕು ಎಮ್ಮೆ ಹಾಲು ಕರೆಯಬೇಕು, ಕಸಮುಸುರೆ ಸಗಣಿ ಗುಡಿಸಬೇಕು. ನೀರು ತರುವುದು ಇದರ ಜೊತೆಗೆ ಅಪವಾದಗಳು ಬೇರೆ ಕಂಡವರಿಗೆ ಬಸಿರಾಗುತ್ತಾಳೆಂಬ ಅಪವಾದ ಇದನ್ನೆಲ್ಲ ಸಹಿಸಿಕೊಳ್ಳಲಾರದೆ ಕೆರೆಗೋ ಬಾವಿಗೂ ಹಾರಿ ಪ್ರಾಣ ಕಳೆದುಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಳ್ಳುತ್ತಾಳೆ. ಆಗ ಗೌರಸಮುದ್ರದ ಮಾರಮ್ಮ ಅವಳಿಗೆ ದೇವರ ದಯಾಮಾರ ಇರುವಂತಹ ಜಾಗ ತೋರಿಸುತ್ತಾಳೆ. ಕಂಬಕ್ಕ ದೇವರ ದಯಾಮಾರನ ಗೂಡಿನ ಹತ್ತಿರ ಹೋಗುತ್ತಿದ್ದಂತೆ ದನಗಳು ಬೆದರುತ್ತವೆ. ಇದರಿಂದಾಗಿ ದೇವರ ದಯಾಮಾರ ಯಾವುದೋ ಪೀಡೆಯೋ ಪಿಶಾಚಿಯೋ ಬಂದಿದೆ ಎಂದು ಮರಬಿಲ್ಲು ಹೂಡಿ ನಿಂತಾಗ ಕಂಬಕ್ಕ ನಾನು ಮಾವ ನಿನ್ನ ಹೆಂಡತಿ ಎಂದು ಹೇಳುತ್ತಾಳೆ. ಇದರಿಂದಾಗಿ ಅವಳನ್ನು ಅನೇಕ ಪರೀಕ್ಷೆಮಾಡಿ ಏಳು ಬಾವಿ ಮುಳುಗಿಸಿ, ಏಳು ಕೆರೆ ಮುಳುಗಿಸಿ, ಕಲ್ಲು ಕಚ್ಚಿಸಿ, ಬಾವಿಯಿಂದ ದನಗಳ ಗೂಡಿನ ತನಕೆ ದೇಕಿಸುತ್ತಾನೆ. ಇದರಿಂದಾಗಿ ಅವಳು ಪತಿವ್ರತೆ ನನ್ನ ಹೆಂಡತಿಯ ಎಂದು ತಿಳಿದು, ಕಾರೆಹಣ್ಣು ಕವಳೆಹಣ್ಣು, ತಿನ್ನಿಸಿ ಮೈ ಕೈ ತುಂಬಿಕೊಳ್ಳುವಂತೆ ಮಾಡುತ್ತಾನೆ. ದೇವರ ದಯಾಮಾರ. ನಂತರ ಒಂದು ವರ್ಷದ ಒಳಗಾಗಿ ಗರ್ಭಿಣಿಯಾಗುತ್ತಾಳೆ. ಗೊಲ್ಲರ ಸಂಪ್ರದಾಯದ ಪ್ರಕಾರ ತವರು ಮನೆಯವರು ಹೊಸ ಸೀರೆಯನ್ನು ಉಡುಸಿ ಸೀಮಂತ ಕಾರ್ಯ ಮಾಡಬೇಕೆಂದು ಬಯಸಿ ಗಂಡನಿಗೆ ಹೇಳಿದಾಗ, ದೇವರ ದಯಾಮಾರನು, ತನ್ನ ಏಳು ಹೂಡಿನ ದನಗಳನ್ನು ಹಾಲು ಕುರುಬರಿಗೆ ಹಂಡೆ ಕುರುಬರಿಗೆ ನೋಡಿಕೊಳ್ಳಲು ಹೇಳಿ ಕಂಬಕ್ಕನನ್ನು ಕಾಡಿನಲ್ಲಿ ಕರೆದು ಕೊಂಡು ಬರುವಾಗ ದಯಾಮಾರನನ್ನು ಒಂದು ಹಸುವಿನ ಕರು ಹಿಂಬಾಲಿಸುತ್ತದೆ. ಇದರಿಂದಾಗಿ ಅದನ್ನು ವಾಪಸ್ಸು ಹೊಡೆದಾಗ ಅದು ಅಲ್ಲಿಯೇ ಇದ್ದ ಪಾಳೆಗಾರರ ದನಗಳೊಂದಿಗೆ ಸೇರಿಕೊಳ್ಳುತ್ತದೆ. ಹೀಗೆ ಬರುತ್ತಿರುವಾಗ ಕಂಬಕ್ಕಳಿಗೆ ಬಾಯಾರಿಕೆಯಾಗುತ್ತದೆ. ನೀರನ್ನು ಹುಡುಕಿ ತರಲು ದೇವರ ದಯಾಮಾರ ಹೋಗುತ್ತಾನೆ. ಅವನು ಎಷ್ಟು ಹುಡುಕಿದರೂ ನೀರು ದೊರೆಯುವುದಿಲ್ಲ ಮತ್ತು ತಾನೂ ಹೋದ ದಾರಿಯನ್ನು ಮರೆಯುತ್ತಾನೆ. ಈ ಕಡೆ ಕಂಬಕ್ಕಳಿಗೆ ಬಾಯಾರಿಕೆ ಜಾಸ್ತಿಯಾಗಿ ಹೆರಿಗೆಯ ನೋವು ಕಾಣಿಸಿಕೊಳ್ಳುತ್ತದೆ. ಆಕೆಯು ಕೂಡ ನೀರು ಹುಡುಕುತ್ತಾಳೆ. ಎಲ್ಲಿಯೂ ನೀರು ದೊರೆಯುವುದಿಲ್ಲ. ಬಾಯಾರಿಕೆ ತಡೆದುಕೊಳ್ಳಲಾರದೆ ಅಲ್ಲಿ ಇಲ್ಲಿ ತಿರುಗಾಡುತ್ತಾಳೆ. ನಂತರ ಹೆರಿಗೆ ನೋವು ಜಾಸ್ತಿಯಾಗಿ ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವನ್ನು ತಾನು ಉಟ್ಟು ಅರ್ಧ ಸೀರೆಯನ್ನು ಹರಿದು ಅದಕ್ಕೆ ಜೋಲಿ ಮಾಡಿ ಅದರಲ್ಲಿ ಮಲಗಿಸಿ ನೀರನ್ನು ಮತ್ತು ಗಂಡನನ್ನು ಹುಡುಕಿಕೊಂಡು ಹೋಗುತ್ತಾಳೆ. ಅಷ್ಟೆ ಅಲ್ಲದೆ ಅವಳು ಕೂಡ ದಾರಿ ತಪ್ಪಿ ಹಸಿವು ಸಹಿಸಿಕೊಳ್ಳಲಾರ ಸಾಯುತ್ತಾಳೆ.

ಇತ್ತ ಕಡೆ ದಾರಿ ಕಾಣದೆ ದೇವರ ದಯಾಮಾರನು ಸಾಯುತ್ತಾನೆ. ಇಬ್ಬರು ಸತ್ತು ಮಗು ಅನಾತವಾಗುತ್ತದೆ. ಕಾಡಿನಲ್ಲಿ ಶಿವ ಪಾರ್ವತಿಯು ಲೋಕಸಂಚಾರ ಮಾಡುವ ಸಮಯದಲ್ಲಿ ಈ ಮಗುವಿನ ಅಳುವ ಧ್ವನಿ ಕೇಳಿಸಿತು. ಇದರಿಂದಾಗಿ ಪಾರ್ವತಿ ರಥ ಇಳಿಸುವಂತೆ ಶಿವನಿಗೆ ಹೇಳುತ್ತಾಳೆ. ಬಂದು ನೋಡಿದರೆ ಕಾಡಿನಲ್ಲಿ ಹಸುಕಂದ ಅಳುತ್ತಿರುತ್ತದೆ. ಇದು ಮಾರನಗೊಲ್ಲರ ದೇವರದಯಾಮಾರ ಮತ್ತು ಕಂಬಕ್ಕ ಆ ಇಬ್ಬರು ಹಸಿವು ತಡೆಯಲಾದೆ ಸತ್ತು ಹೋಗಿದ್ದಾರೆ. ಏನಾದರೂ ಮಾಡಿ ಈ ಮಗುವನ್ನು ಮಾರನಗೊಲ್ಲರಿಗೆ ಒಪ್ಪಿಸಬೇಕೆಂದು. ಶಿವ ಪಾರ್ವತಿ ತೀರ್ಮಾನಿಸಿ ಆಲದ ಮರದಲ್ಲಿ ಜೋಲಿಯನ್ನು ಕಟ್ಟಿ. ಆ ಮಗುವಿನ ಕಾವಲಿಗಾಗಿ ನಾಗೇಂದ್ರನನ್ನು ನೇಮಕ ಮಾಡಿ ಗೌರಸಮುದ್ರದ ಮಾರಮ್ಮನ ಕನಸ್ಸಿನಲ್ಲಿ ಶಿವ ಪಾರ್ವತಿ ಮಾರನಗೊಲ್ಲರ ದೇವರ ದಯಾಮಾರನ ಬಗ್ಗೆ ತಿಳಿಸಿ ಮಾಯವಾಗುವರು ನಂತರ ಗೌರಸಮುದ್ರದ ಮಾರಮ್ಮ ದಯಾ ಮಾರನ ತಂಗಿಯಾದ ಬಡ ಚಿತ್ತಯ್ಯನ ಕನಸ್ಸಿನಲ್ಲಿ ಹೋಗಿ ಕಾಡಿನಲ್ಲಿರುವ ದೇವರ ದಯಾಮಾರನ ಮಗನ ಸುದ್ದಿ ಹೇಳಿದಳು. ಆಗ ಬಡಚಿತ್ತಮ್ಮ ತನ್ನ ಆರು ಜನ ಅಣ್ಣಂದಿರನ್ನು ಕರೆದು ಕೊಂಡು ಹುಡುಕುತ್ತಾ ಬಂದಳು. ಆಗ ಆ ಕಂದ ಎಲ್ಲಿಯೂ ದೊರೆಯುವುದಿಲ್ಲ. ಇದರಿಂದಾಗಿ ಆರು ಜನ ಅಣ್ಣಂದಿರು ಅವಳನ್ನು ಹೊಡೆಯಲು ಹೋದಾಗ ಗೌರಸಮುದ್ರಮಾರಮ್ಮ ಬಂದು ದಾರಿ ತೋರಿಸಿದಳು. ಆಲದ ಮರದ ಕೆಳಗೆ ಹೋಗಿ ಸೆರಗೊಡ್ಡಿ ಬೇಡಿದಾಗ ಜೋಲಿಯಲ್ಲಿರುವ ಮಗು ಬಂದು ನೇರವಾಗಿ ಬಡಚಿತ್ತಮ್ಮನ ಮಡಿಲಿಗೆ ಬಂದು ಬಿದ್ದಿತು. ಆಗ ಕಾವಲು ಕಾಯುತ್ತಿದ್ದ ನಾಗೇಂದ ಇಲ್ಲಿಗೆ ನನ್ನ ಜವಾಬ್ದಾರಿ ಮುಗಿಯಿತೆಂದು ಹೊರಟು ಹೋಗುವನು.

ಏಳು ಅಣ್ಣಂದಿರು ಮಗುವನ್ನು ತೆಗೆದುಕೊಂಡು ಬಂದು ಚಿಕ್ಕ ದೇವರಹಟ್ಟಿ ಸೇರುವರು. ವಂಶದ ಒಂದೇ ಕುಡಿಯಾದ ಆ ಮಗುವಿಗೆ ಕೆಂಗುರಿ ಮಲ್ಲೆಗೌಡ ಅಂದು ನಾಮಕರಣ ಮಾಡುವರು. ಕೆಲವು ಕಾಲ ಚೆನ್ನಾಗಿ ಸಾಕಿದ ಮೇಲೆ ನಂತರ ಅವರಿಗೂ ಮಕ್ಕಳಾದವು. ಹೀಗಾಗಿ ಕೆಂಗುರಿ ಮಲ್ಲೇಗೌಡನನ್ನೂ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಜೊತೆಗೆ ಈ ಮಗು ಹುಟ್ಟುತ್ತಲೆ ತಂದೆ ತಾಯಿ ಪ್ರಾಣವನ್ನು ಬಲಿ ತೆಗೆದು ಕೊಂಡಿದೆ ಎಂದು ಅದನ್ನು ವ್ಯಾಪಾರಕ್ಕೆಂದು ಕರೆದುಕೊಂಡು ಕಾಡಿನಲ್ಲಿ ಮಲಗಿಸಿ ಬರುತ್ತಾರೆ. ಆ ಮಗು ಹಾಗೂ ಹೀಗೂ ಅಂಬೆರಾಯ ತುಂಬೆರಾಯರ ಕೈ ಸೇರಿ ಆ ನಂತರ ಹೊನ್ನಟ್ಟಿ ಹಾಲೆಗೌಡನ ಮನೆ ಸೇರುಯುತ್ತದೆ. ಹೊನ್ನಟ್ಟಿ ಹಾಲೆಗೌಡನಿಗೂ ದೊಡ್ಡಕ್ಕಜ್ಜಿಗೂ ಬಹಳ ದಿನಗಳ ಕಾಲದಿಂದ ಮಕ್ಕಳಿರಲಿಲ್ಲ. ಅಂಬೇರಾಯ ತುಂಬೇರಾಯರ ದನಗಳ ದೆಸೆಯಿಂದ ಕೆಂಗುರಿ ಮಲೆಗೌಡ ಹೊನ್ನಟ್ಟಿ ಹಾಲೆಗೌಡನಿಗೆ ದೊರೆತನು. ಇಲ್ಲಿ ಕೆಂಗುರಿ ಮಲೆಗೌಡನನ್ನು ಕೊಡುವಾಗ ಒಕ್ಕಲಿಗರನ್ನು ಗೊಲ್ಲರ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ ಮಾಡಿ ಸಾಕು ಮಗ ಎನ್ನುವುದಕ್ಕಿಂತ ತನ್ನ ಹೊಟ್ಟೆಯಲ್ಲಿ ಹುಟ್ಟಿದ್ದ ಮಗ ಎಂದು ಹೇಳಿಕೊಳ್ಳಬೇಕು ಎಂದು ಬಲಗೈ ಭಾಷೆ ಎಡಗೈ ನಂಬಿಕೆ ತೆಗೆದುಕೊಂಡು ಆ ಮಗುವನ್ನು ಕೊಟ್ಟು ದನ ಹೊಡೆದುಕೊಂಡು ಹೋಗುವರು.

ಕೆಂಗುರಿ ಮಲ್ಲೇಗೌಡ ಹೊನ್ನಟ್ಟಿ ಹಾಲೇಗೌಡರ ಮನೆ ಸೇರಿದಾಗ ಹೊನ್ನಟ್ಟಿ ಹಾಲೇಗೌಡನಿಗೆ ಬಹಳ ಬಡತನವಿತ್ತು. ಅವನ ಪಟೇಲಗಿರಿಯನ್ನು ಕೂಡ ಕಳೆದುಕೊಂಡಿದ್ದ. ಇಂತಹ ಸಮಯದಲ್ಲಿ

ಕೆಂಗುರಿ ಮಲ್ಲೆಗೌಡ ಕಾಲಿಕ್ಕಿದ ದೆಸೆಯಿಂದ ಅವನ ಬಡತನ ಬಯಲಾಗಿ ಅವನ ಪಾಟೇಲಗಿರಿ ವಾಪಸ್ಸು ಬಂದಿತು. ಮತ್ತು ಪಶುಪಾಲಕರ ಕುಲದಿಂದ ಬಂದ ಕೆಂಗುರಿ ಮಲ್ಲೇಗೌಡನಿಗೆ ಸುಮ್ಮನೆ ಕಾಲ ಹರಣಮಾಡುವುದು ಸರಿಬರಲಿಲ್ಲ. ಹಾಗಾಗಿ ಅವನ ಹೊನ್ನಟ್ಟಿ ಹಾಲೇಗೌಡನ ಬಳಿಗೆ ಬಂದು ಏಳು ಹಸುವಿನ ಕರುಗಳನ್ನು ತಂದು ಮನಸ್ಸು ಮಾಡಿದ್ದೇನೆಂದು ಹೇಳಿದಾಗ ಅದಕ್ಕೆ ಹೊನ್ನಟ್ಟಿ ಹಾಲೆಗೌಡ ಒಪ್ಪಿ ದೊಡ್ಡಕ್ಕನನ್ನು ಹೊನ್ನು ಕೇಳಿದಾಗ ಆಕೆ ಕೊಡಲು ಒಪ್ಪುವುದಿಲ್ಲ. ಆದರೂ ಮಗನ ಮೇಲಿನ ಪ್ರೀತಿಯಿಂದ ಹೆಂಡತಿಯೊಂದಿಗೆ ಜಗಳವಾಡಿ ಹೊನ್ನು ತೆಗೆದುಕೊಂಡು ಚಿಕ್ಕದೇವರಹಟ್ಟಿಗೆ ಬರುವನು ಮಲ್ಲೇಗೌಡನು ಮೂಗನ ರೀತಿ ಮಾಡಿ ಕರೆದುಕೊಂಡು ಬಂದಿದಾನೆ. ದೊಡ್ಡಪ್ಪನೋರ ಏಳು ಗೂಡಿನ ದನದ ಕೊಟ್ಟಿಗೆಗೆ ಬಂದು ಹೊನ್ನಟ್ಟಿ ಹಾಲೆಗೌಡ ಒಳ್ಳೋಳ್ಳೆಯ ಕರುಗಳನ್ನು ತೋರಿಸಿ ಇವು ಇರಲೇನು ಮೂಗ ಎಂದರೆ ಅವನ್ನೆಲ್ಲ ಬೇಡ ಅಂದು ನೂಕಿದರೆ ಮೂರತಾಕೆ ಬಿದ್ದು ಒದ್ದಾಡುವ ಕರುಗಳನ್ನು ಒಪ್ಪಿಕೊಂಡು ದುಡ್ಡುಕೊಟ್ಟು ಹೊಡೆದುಕೊಂಡು ಬರುತ್ತಾರೆ. ಸ್ವಲ್ಪ ದೂರ ಬಂದ ನಂತರ ಬಾಯಿ ತಡಿಲಾರದೆ ಹೊನ್ನಟ್ಟಿ ಹಾಲೇಗೌಡ ಕೆಂಗುರಿ ಮಲ್ಲೇಗೌಡನನ್ನು ಕುರಿತು ಏನಪ್ಪ ನೂಕಿದರೆ ಮೂರುತಾಕೆ ಬಿದ್ದು ಏಳುತ್ತವೆ ಈ ಕರುಗಳು ಇವು ನಮ್ಮನ್ನ ಉದ್ದಾರ ಮಾಡುತ್ತಾವ ಎಂದು ಕೇಳಿದಾಗ, ಕೋಪಗೊಂಡ ಮಲ್ಲೇಗೌಡ ಏಳು ಕರುಗಳನ್ನು ಬಾವಿಗೆ ನೂಕಿದನು. ಆಗ ಇವನಿಗೆ ಅಂದಿದ್ದು ತಪ್ಪಾಯಿತೆಂದು ಮಗನನ್ನು ಕರೆದುಕೊಂಡು ಕಳುವಾರಳ್ಳಿಗೆ ಬರುತ್ತಾನೆ. ಆಗ ದೊಡ್ಡಕ್ಕ ತಂದೆ ಮಕ್ಕಳಿಬ್ಬರಿಗೂ ಸಮಾಧಾನ ಮಾಡಿದರು. ಪುನಃ ಕೆಂಗುರಿ ಮಲ್ಲೇಗೌಡ ಏಳು ಕರುಗಳನ್ನು ತರಬೇಕೆಂದು ಹಾಲೆಗೌಡನ ಮುಂದೆ ಹೇಳಿದಾಗ ಮತ್ತೆ ಕ್ವಾಮ್ಟಿಗಸೆಟ್ಟರ ಮನೆಯಲ್ಲಿ ಸಾಲ ತಂದು ಚಿಕ್ಕ ದೇವರಹಟ್ಟಿಗೆ ಬಂದು ದನಗಳನ್ನು ಕೊಂಡು ಬರುವಂತಹ ಸಮಯದಲ್ಲಿ ಕಲ್ಯಾಣಿಯಲ್ಲಿ ನೂಕಿದನು. ಹಿಂದೆ ನೂಕಿದ್ದ ಕರಗಳು ಮೈ ಕೈ ತುಂಬಿಕೊಂಡು ಚನ್ನಾಗಿ ಆಗಿದ್ದವು. ಅವುಗಳನ್ನು ಹೊಡೆದುಕೊಂಡು ಬಂದು ಕಳುವಾರಳ್ಳಿ ದಿಣ್ಣೆಯಲ್ಲಿ ಗೂಡು ಹಾಕಿಕೊಂಡು ಇರುತ್ತಾನೆ. ಇವನ ತಂದೆ ತಾಯಿಗಳಿಗೆ ಇವನನ್ನು ಬಿಟ್ಟಿರಲು ಆಗುತ್ತಿರಲಿಲ್ಲ. ಹಾಗಾಗಿ ಅವರು ಕೆಂಗುರಿ ಮಲ್ಲೇಗೌಡನನ್ನು ಮನೆಯಲ್ಲಿ ಮಲಗಿಸಿಕೊಳ್ಳುತ್ತಿದ್ದರು. ಇದು ಅವನಿಗೆ ಇಷ್ಟವಾಗುತ್ತಿರಲಿಲ್ಲ ಆದುದರಿಂದ ಅವರು ಮಲಗಿದ ಸಮಯ ನೋಡಿ ಎದ್ದು ಹಸುವಿನ ಗೂಡಿಗೆ ಬಂದು ಮಲಗುತ್ತಿದ್ದನು. ಹೀಗೆ ಇದ್ದರೆ ಸರಿಯಾಗುವುದಿಲ್ಲ. ಎಂದು ಏಳೇಳು ಹದಿನಾಲ್ಕು ದನಗಳನ್ನು ಹೊಡೆದುಕೊಂಡು ತಳುಕಿನ ಗುಡ್ಡಕ್ಕೆ ಹೋಗುತ್ತಾನೆ. ಇದು ಹೊನ್ನಟ್ಟಿ ಹಾಲೆಗೌಡನಿ ಮತ್ತು ದೊಡ್ಡಕ್ಕಳಿಗೆ ಗೊತ್ತಾಗುತ್ತಿರಲಿಲ್ಲ. ಇಂತಹ ಸಮಯದಲ್ಲಿ ಅವರಿಬ್ಬರು ಮಗನನ್ನು ಹುಡುಕಿ ಸುಮ್ಮನಾದರು.

ಕೆಂಗುರು ಮಲ್ಲಪ್ಪ ತಂದೆ ತಾಯಿಗಳಿಗೆ ಮಕ್ಕಳ ಭಾಗ್ಯ ಕರುಣಿಸು ಎಂದು ಶಿವ ಪಾರ್ವತಿಯರಲ್ಲಿ ಪ್ರಾರ್ಥಿಸುತ್ತಾನೆ. ಹುಟ್ಟು ಬಂಜೆಯಾಗಿದ್ದ ದೊಡ್ಡಕ್ಕಜ್ಜ ಇಳಿವಯಸ್ಸಿನಲ್ಲಿ ಗರ್ಭಿಣಿಯಾಗುವಳು. ನಾಲ್ಕು ಮಕ್ಕಳ ತಾಯಿಯಾಗುತ್ತಾಳೆ. ನಾಮಕರಣನೂ ಮಾಡುತ್ತಾರೆ. ದೊಡ್ಡಾಲ, ಚಿಕ್ಕಾಲ, ದೊಡ್ಡಾಲಮ್ಮ, ಮತ್ತು ಚಿಕ್ಕಾಲಮ್ಮ ಎಂದು ಹೆಸರಿಟ್ಟರ. ಇವರು ದೊಡ್ಡವರಾಗಿ ಮದುವೆ ವಯಸ್ಸಿಗೆ ಬಂದಾಗ

ಊರಿನಲ್ಲಿರುವ ಜನರೆಲ್ಲ ಮಕ್ಕಳಿಗೆ ಮದುವೆ ಮಾಡುವಂತೆ ಹೇಳಿದಾಗ ಹಿರೆಮಗನ ಮದುವೆ ಮಾಡದ ಹೊರತು ಚಿಕ್ಕ ಮಕ್ಕಳ ಮದುವೆ ಮಾಡುವಂತಿಲ್ಲ ಎಂದು ತನ್ನ ಇಬ್ಬರ ಮಕ್ಕಳನ್ನು ಕರೆದು ಹಿರೇಮಗನನ್ನು ಹುಡುಕಲು ಕಳುಹಿಸಿದರು. ಗೌರಸಮುದ್ರದ ಮಾರಮ್ಮನ ಸಹಾಯದಿಂದ ದೊಡ್ಡಾಲ ಮತ್ತು ಚಿಕ್ಕಾಲ ಕೆಂಗುರಿ ಮಲ್ಲೇಗೌಡನನ್ನು ಹುಡುಕುವರು ಮತ್ತು ಊರಿಗೆ ಬರುವಂತೆ ಬೇಡಿಕೊಂಡಿಕೊಳ್ಳುವರು. ಆಗ ಮಲ್ಲೇಗೌಡ ತಮ್ಮಂದಿರೊಂದಿಗೆ ಏಳು ಗೂಡಿನ ದನಗಳನ್ನು ಏಳು ಕೊಪ್ಪರಿಗೆ ಹೊನ್ನುಗಳನ್ನು ಎತ್ತುಗಳ ಮೇಲೆ ಏರಿಕೊಂಡು ಕಳವಾರಹಳ್ಳಿಗೆ ಬರುತ್ತಾನೆ.

ಕೆಂಗುರಿ ಮಲೆಗೌಡನಿಗೆ ಮದುವೆ ಮಾಡಬೇಕೆಂದು ಹೆಣ್ಣು ನೋಡಲು ಕಂಬೇರಹಟ್ಟಿಗೆ ಕಂಬೇರ ಚಿನ್ನಮ್ಮನನ್ನು ಗೊತ್ತು ಮಾಡಿ ಮದುವೆ ಮಾಡುತ್ತಾರೆ. ಮದುವೆ ಆಗಿ ಅರಿಶಿಣದಾರ ಹರಿದಲೆ, ಹೆಂಡತಿಯನ್ನು ಬಿಟ್ಟು ದನಗಳನ್ನು ಹೊಡೆದುಕೊಂಡು ದೇಶಾಂತರ ಹೋಗುತ್ತಾನೆ.

೨.೬. ಜುಂಜಪ್ಪನ ಸೃಷ್ಟಿ ಪುರಾಣ:

ಜುಂಜಪ್ಪನ ಸೃಷ್ಟಿ ಪುರಾಣವು ಹಲವಾರು ಭಿನ್ನ ಪಾಠಾಂತರಗಳನ್ನು ಒಳಗೊಂಡಿದೆ. ಅದರಲ್ಲಿ ನಾನು ತಿಳುವಳಿಕೆದಾರರಿಂದ ಪಡೆದ ಮಾಹಿತಿಯನ್ನು ಇಲ್ಲಿ ಉಲ್ಲೇಖಿಸಿದ್ದೇನೆ. ಕಂಬೇರಹಟ್ಟಿಗೆ ಹೆಣ್ಣು ಕೇಳಲು ಹೊನ್ನಟ್ಟಿ ಹಾಲೇಗೌಡ ಮತ್ತು ದೊಡ್ಡಕ್ಕ ಹೊದಾಗ ಕಂಬೇರಗೊಲ್ಲರು ಶುಕ್ರವಾರ ಹುಟ್ಟಿದ್ದರಿಂದ ಚಿನ್ನಮ್ಮ ಅವಳನ್ನು ಬಚ್ಚಿಟ್ಟು ಉಳಿದ ಆರು ಜನ ಹೆಣ್ಣು ಮಕ್ಕಳನ್ನು ತೋರಿಸುತ್ತಾರೆ. ಇದರಿಂದ ಹಾಲೆಗೌಡನಿಗೆ ಮತ್ತು ದೊಡ್ಡಕ್ಕನಿಗೆ ನಿರಾಸೆಯಾಗುತ್ತದೆ. ಪುನಃ ಗೌರಸಮುದ್ರದ ಮಾರಮ್ಮನ ಸಹಾಯದಿಂದ ಹೆಣ್ಣು ಕೇಳಲು ಹೋದಾಗ ಚಿನ್ನಮ್ಮನನ್ನು ಬಲವಂತದಿಂದ ಹೊರಗೆ ಕರೆಯುತ್ತಾರೆ. ಆ ಹೆಣ್ಣು ಹಾಲೆಗೌಡನಿಗೆ ಇಷ್ಟವಾಗುತ್ತಾಳೆ. ನಂತರ ಆ ಹೆಣ್ಣನ್ನು ಗೊತ್ತು ಮಾಡಿ ಬರುತ್ತಾರೆ ಆಕೆ ಹುಟ್ಟಿ ಹನ್ನೆರಡು ವರುಷ ಋತುಮತಿಯಾಗಿ ಹನ್ನೆರಡು ವರುಷ, ಒಟ್ಟು ಇಪ್ಪತ್ನಾಲ್ಕು ವರುಷ ವಯಸ್ಸಾಗಿರುತ್ತದೆ. ಆದರೂ ಅವಳನ್ನು ಮದುವೆ ಮಾಡಿಕೊಡಲು ಅವರಿಗೆ ಇಷ್ಟವಿರುವುದಿಲ್ಲ. ಹಾಗಾಗಿ ಆಕೆಯನ್ನು ಬಚ್ಚಿಟ್ಟಿರುತ್ತಾರೆ. ಬಲವಂತದಿಂದ ಆ ಹೆಣ್ಣನ್ನು ಗೊತ್ತುಮಾಡಿ ಮದುವೆ ಮಾಡಿಕೊಂಡು ಬರುತ್ತಾರೆ. ಆದರೆ ಕೆಂಗುರಿ ಮಲೆಗೌಡನಿಗೆ ಸಂಸಾರದಲ್ಲಿ ಆಸಕ್ತಿ ಇರದ ಕಾರಣ ದನಗಳ ಮೇಲಿನ ಪ್ರೀತಿಯಿಂದ ಅವುಗಳನ್ನು ಹಿಂಬಾಲಿಸಿಕೊಂಡು ಹೋಗುತ್ತಾನೆ. ಅವನು ಹೋಗಿ ಹನ್ನೆರಡು ವರ್ಷವಾಗುತ್ತದೆ. ಹೆಂಡತಿಯ ಮುಕವನ್ನು ನೋಡಿರುವುದಿಲ್ಲ. ಅಲ್ಲಿಗೆ ಚಿನ್ನಮ್ಮಳಿಗೆ ಮದುವೆಯಾಗಿ ಒಟ್ಟು ಮುವ್ವತ್ತಾ ಆರುವರುಷ ವಯಸ್ಸಾಗಿರುತ್ತದೆ. ಹೊಟ್ಟೆಗೆ ಮಕ್ಕಳಿಲ್ಲದವಳು ಕಟ್ಟೆಗೆ ನೀರಲ್ಲದವಳು ಗೊಡ್ಡಿ ಬಂಜೆ ಎಂದು ಸರಿ ವಾರಗಿತ್ತಯರು ಆಡಿಕೊಳ್ಳುತ್ತಾರೆ.

"ಹಂಚಿ ಹುಲ್ಲಿನ ಅರಮನೆಯಲ್ಲಿ ಒಬ್ಬಳೆ ಇದ್ದ ಚಿನ್ನಮ್ಮನನ್ನು 'ಹೊಟ್ಯಾಗ ಮಕ್ಕಳಿಲ್ಲದವಳು ಕಟ್ಟೆಗ ನೀರಿಲ್ಲದವಳು'ಕರೆತಲೆ ಮುಂಡೆಯರು ಹಂಗಿಸಿದರು. ನಿಂದಕರ ನುಡಿಗಳನ್ನು ತಾಳಲಾರದೆ ಚಿನ್ನಮ್ಮ ಮಂಚಕ್ಕೆ ಮಕಾಡೆ ಮಲಗಿದಳು" *(ಡಾ. ಗಂಗಾಧರ ದೈವಜ್ಞ 'ಬುಡಕಟ್ಟು ಹುಟ್ಟು-ಸಾವಿನ ನಡುವೆ'; ಪುಟ ೧೨, ೨೦೧೫)*

ಇದರಿಂದ ಅವಳ ಮನಸ್ಸಿಗೆ ನೋವಾಗುತ್ತದೆ. ಒಂದು ದಿನ ಅವರ ಮನೆ ದೇವರಾದ ಶಿವಚಿತ್ರಲಿಂಗ ಬಿಕ್ಷೆ ಬೇಡುವುದಕ್ಕೆ ಚಿನ್ನಮ್ಮನ ಮನೆಗೆ ಬರುತ್ತಾನೆ. ಭಿಕ್ಷೆ ನೀಡಲು ಹೋದಾಗ ಮಕ್ಕಳ ಪ್ರಸ್ತಾಪ ಬರುತ್ತದೆ. ಮಕ್ಕಳಾಗಿರದ ಕಾರಣ ಅವನು ಬಿಕ್ಷೆ ಹಾಕಿಸಿಕೊಳ್ಳದೆ ವಾಪಸ್ಸು ಹೋಗುತ್ತಾನೆ. ಆ ನಂತರ ಮೂಡಲ ತಮ್ಮಪ್ಪ ಬಿಕ್ಷೆಗೆ ಬರುತ್ತಾನೆ. ಅವನು ಗೊಡ್ಡಿ ಬಂಜೆಯ ಕೈಯಲ್ಲಿ ಭಿಕ್ಷೆ ಬೇಡವೆಂದು ವಾಪಸ್ಸು ಹೋಗುತ್ತಾನೆ. ನಂತರ ಗೌರಸಮುದ್ರದ ಮಾರಮ್ಮ ಭಿಕ್ಷೆ ಬೇಡಲು ಬರುತ್ತಾಳೆ. ಆಗ ಚಿನ್ನಮ್ಮ ಆಕೆಯ ಬಳಿ ತನ್ನ ಮನದ ದುಗುಡವನ್ನು ಹೇಳುತ್ತಾಳೆ. ಮಕ್ಕಳ ಫಲ ಇದೆಯೋ ಇಲ್ಲವೋ ಎಂದು ಕೇಳಿದಾಗ ೩೬ ವರ್ಷದಲ್ಲಿ ಎಂತಹ ಮಕ್ಕಳ ಫಲ ನಿನಗೆ ಅಂದು ಬೈಯ್ಯುತ್ತಾಳೆ. ಕೊನೆಗೆ ಕಾಲು ಹಿಡಿದು ಮಕ್ಕಳ ಫಲ ಕೊಡುವವರೆಗೆ ಬಿಡುವುದಿಲ್ಲವೆಂದು ಪಟ್ಟು ಹಿಡಿಯುತ್ತಾಳೆ. ಇದರಿಂದಾಗಿ ನಿನಗೆ ಕಷ್ಟ ಬರುತ್ತದೆ. ಹಾಗಾಗಿ ಮಕ್ಕಳ ಫಲ ಬೇಡವೆಂದು ಎಷ್ಟು ಹೇಳಿದರೂ ಕೇಳದಂತೆ ಹಠಮಾಡುತ್ತಾಳೆ. 'ಸಂಜೆ ಹುಟ್ಟಲಿ ಮುಂಜಾನೆ ಸಾಯಲಿ ಬಂಜೆ ಅಂಬ ಸೊಲ್ಲು ಅಡಗಲಿ' ಎಂದು ಹೇಳಿದಾಗ ನಾಲ್ಕು ಮಕ್ಕಳನ್ನು ಕೊಡುವುದಾಗಿ ಹೇಳಿ ಬಲಗೈ ಭಾಷೆ ಕೊಟ್ಟು ಎಡಗೈ ನಂಬಿಕೆಕೊಟ್ಟು, ನೇರವಾಗಿ ಕೈಲಾಸದಲ್ಲಿರುವ ಶಿವನ ಅರಮನೆಗೆ ಹೋಗಿ ಒಳ ಹೋಗದೆ ಹೆಬ್ಬಾಗಿಲ ಬಳಿ ನಿಂತುಕೊಳ್ಳುತ್ತಾಳೆ. ಶಿವ ಪಾರ್ವತಿಯರು ಊಟ ಮಾಡುವಂತಹ ಸಮಯ ಮಗಳು ಬಂದು ನಿಂತಿರುವುದು ನೋಡಿ ಅವರಿಗೆ ಆಶ್ಚರ್ಯವಾಗುತ್ತದೆ. ಅಷ್ಟೆ ಅಲ್ಲ ಕುತೂಹಲವಾಗುತ್ತದೆ. ಎಂದು ಬಂದರೂ ಈ ರೀತಿ ಬಾಗಿಲ ಬಳಿಯಲ್ಲಿ ನಿಂತಿರಲಿಲ್ಲ. ಹೀಗೆ ಯಾಕೆ ನಿಂತಿದ್ದಿಯಾ ಎಂದು ಕೇಳಿದಾಗ, ನಾನು ಕೇಳಿದ ವರಗಳನ್ನು ಕೊಟ್ಟರೆ ಮಾತ್ರ ಒಳಗೆ ಬರುತ್ತೇನೆ. ಕುಳಿತು ಊಟ ಮಾಡುತ್ತೇನೆ. ಇಲ್ಲದಿದ್ದರೆ ಹಾಗೆ ವಾಪಸ್ಸು ಹೋಗುತ್ತೇನೆಂದು ಹಠ ಹಿಡಿಯುತ್ತಾಳೆ. ಆಗ ಶಿವ ಪಾರ್ವತಿಯರು ಮಾರಕ್ಕ ಕೇಳಿದ ವರ ಕೊಡುವುದಾಗಿ ಮಾತುಕೊಡುತ್ತಾರೆ. ಬರೀ ಮಾತುಕೊಟ್ಟರೆ ಸಾಲದು ಬಲಗೈ ಭಾಷೆ ಕೊಡಬೇಕು ಎಡಗೈ ನಂಬಿಕೆ ಕೊಡಬೇಕು ಎಂದು ಕೇಳಿದಾಗ ಅದೇ ರೀತಿ ಭಾಷೆ ಕೊಟ್ಟರು. ಆ ನಂತರ ಗೌರಸಮುದ್ರದ ಮಾರಕ್ಕ ಶಿವ ಪಾರ್ವತಿಯರ ಜೊತೆ ಕುಳಿತು ಊಟ ಮಾಡುವಳು ಊಟ ಮುಗಿದ ನಂತರ ಶಿವ ಪಾರ್ವತಿಯರು ಅಡಿಕೆ ಎಲೆ ಹಾಕಿಕೊಳ್ಳುತ್ತಾ ಕುಳಿತಿರುವಾಗ ಗೌರಸಮುದ್ರದ ಮಾರಕ್ಕ ಬಂದಿರುವ ಕೆಲಸ ಏನೆಂದು ಕೇಳಿದಾಗ ಕೆಂಗುರಿ ಮಲ್ಲೇಗೌಡನ ಹೆಂಡತಿ ಎಂಬುವಳು ಹುಟ್ಟಿ ಹನ್ನೆರಡು ವರುಷ ಋತುಮತಿಯಾಗಿ ಹನ್ನೆರಡು ವರುಷ ಮದುವೆಯಾಗಿ ಹನ್ನೆರಡು ವರುಷ ಮುವ್ವತ್ತಾರು ವರುಷ ವಯಸ್ಸಾಗಿದೆ. ಅಣ್ಣಂದಿರ ಹೆಂಡತಿಯರು ಸರಿ ವಾರಿಗೆಯವರು ಎಲ್ಲರು ಆಕೆಯನ್ನು ಗೊಡ್ಡಿ ಬಂಜೆ ಎಂದು ಜರಿಯುತ್ತಿದ್ದಾರೆ. ಹಾಗಾಗಿ ಅವಳ ನೋವನ್ನು ನೋಡಲಾರದೆ ಮಕ್ಕಳ ಫಲಕೊಡುವುದಾಗಿ ನಂಬಿಕೆ ಕೊಟ್ಟು ಬಂದಿದ್ದೇನೆಂದು ಹೇಳುತ್ತಾಳೆ. ಈ ತೋಟದಲ್ಲಿ ಸಾಕಷ್ಟು ಮಕ್ಕಳಿದ್ದಾರೆ. ಅವರಲ್ಲಿ ಯಾರನ್ನು ಬೇಕಾದ ನಾಲ್ಕು ಜನರನ್ನು ಕರೆದುಕೊಂಡು ಹೋಗು ಎಂದು ಹೇಳುತ್ತಾನೆ. ಆಗ ಮಾರಕ್ಕ ಅವರಿವರನ್ನು ಕಳುಹಿಸಿದರೆ ಕರೆದುಕೊಂಡು ಹೋಗುವುದಕ್ಕೆ ಬಂದಿಲ್ಲ. ನಿನ್ನ ಮಗ ನನ್ನ ತಮ್ಮನಾದ ವೀರಭದ್ರನನ್ನು ಕಳುಹಿಸಬೇಕು ಎಂದು ಹೇಳಿದಾಗ ಅದು ಮಾತ್ರ ಸಾಧ್ಯವಿಲ್ಲ ಅವನೇನಾದರೂ ಭೂ ಲೋಕಕ್ಕೆ

ಹೋದರೆ ಭೂಲೋಕ ಸುಟ್ಟು ಹಾಳಾಗಿ ಹೋಗುತ್ತದೆ. ಅವನು ಒಬ್ಬನನ್ನೂ ಬಿಟ್ಟು ಯಾರನ್ನಾದರೂ ಕರೆದುಕೊಂಡು ಹೋಗು ಎಂದು ಹೇಳುತ್ತಾನೆ. ಆಗ ಗೌರಸಮುದ್ರದ ಮಾರಮ್ಮ ಮಾತುಕೊಟ್ಟಿದ್ದಿಯಾ ಎಂದು ನೆನಪು ಮಾಡಿದಾಗ ಕೊಟ್ಟ ಭಾಷೆಯಂತೆ ವೀರಭದ್ರನನ್ನು ಭೂಲೋಕಕ್ಕೆ ಕಳುಹಿಸಲು ಒಪ್ಪುತ್ತಾನೆ. ಉಳಿದ ಇಬ್ಬರು ಮಾರಣ್ಣ ಮೈಲಣ್ಣರನ್ನು ತೋಟದಲ್ಲಿ ಏಳು ಕಾಲುವೆಗಳ ನೀರನ್ನು ಒಂದೇ ಕಾಲುವೆಗೆ ತಿರವಿ ನೀರನ್ನ ಬಾಳೆ ತೋಟಕ್ಕೆ ಬಿಡುತ್ತಾರೆ. ವೀರಭದ್ರ ಕೆದರಿದ ಮಂಡೆ ಉಗ್ರವಾದ ಕಣ್ಣು ಬಿಟ್ಟುಕೊಂಡಳು ಶಿವಪೂಜೆ ಮಾಡುತ್ತಿರುತ್ತಾನೆ. ನಂತರ ಒಂದು ಹೆಣ್ಣು ಮಗು ಈ ನಾಲ್ಕು ಜನರನ್ನು ಹುಲ್ಲಿನ ಬೀಜಮಾಡಿ ಮಾರಕ್ಕನ ಕೈಗೆ ಕೊಡುತ್ತಾನೆ. ಮತ್ತು ಆ ನಾಲ್ಕು ಜನರನ್ನು ಕಾಪಾಡುವ ಜವಾಬ್ದಾರಿಯನ್ನು ಅವಳಿಗೆ ಹೇಳಿ ನಂತರ ಅವರ ಸೃಷ್ಟಿಯನ್ನು ಕುರಿತು ಹೇಳುತ್ತಾನೆ. ನಾಲ್ಕು ಹುಲ್ಲಿನ ಬೀಜಗಳನ್ನು ತೆಗೆದುಕೊಂಡು ಹೋಗಿ ಎತ್ತಯ್ಯನ ಬೀಜದಹೋರಿ ಹೊಟ್ಟೆ ಒಳಗೆ ಹಾಕಬೇಕು. ನಂತರ ಅದು ಚಿನ್ನಮ್ಮನ ಮನೆಯಮುಂದೆ ಹೋಗಿ ಕಾಲು ಕೆದರಿ ರೆಂಕೆ ಒಡೆದು ಗಂಜು ಹೊಯ್ದು ಸೆಗಣಿ ಹಾಕಿ ಬರುತ್ತದೆ. ಎತ್ತಯ್ಯನ ಹೋರಿ ಒಂದು ದಿನ ನಿನ್ನ ಮನೆಯ ಅಂಗಳದಲ್ಲಿ ಕಾಲು ಕೆದರಿ ಡರಿಕೆ ಹೊಡೆದು ಗಂಜು ಹೊಯ್ದು ಸಗಣಿ ಹಾಕುತ್ತದೆ. ಆ ಸಗಣಿಯಲ್ಲಿ ಗೊರಜಿ ಸೊಪ್ಪು ಬೆಳೆಯುತ್ತದೆ. ಆ ಗೊರಜಿ ಸೊಪ್ಪನ್ನು ಕೊಯ್ದುಕೊಂಡು ಬೇಯಿಸಿ ಊಟಮಾಡು ಎಂದು ಹೇಳಿ ಹೊರಟಳು ನಂತರ ಎತ್ತಯ್ಯನ ಗೂಡಿಗೆ ಹೋಗಿ ಅವನ ಹೋರಿಯ ಹೊಟ್ಟೆ ಒಳಗೆ ನಾಲ್ಕು ಬೀಜಗಳನ್ನು ಹಾಕಿದಳು. ಅದು ಬೆಳಿಗ್ಗೆ ಸೂರ್ಯ ಹುಟ್ಟ ಹೊತ್ತಿಗೆ ಬಂದು ಚಿನ್ನಮ್ಮ ಮನೆಯ ಮುಂದೆ ಕಾಲು ಕೆರೆದು ಡರಿಕೆ ಹೊಡೆದು ಗಂಜು ಹೊಯ್ದು ಸಗಣಿ ಹಾಕಿ ಹೊರಟು ಹೋಗುತ್ತದೆ. ನಂತರ ಅದರಲ್ಲಿ ಗೊರಜಿಯ ಸೊಪ್ಪು ಬೆಳೆಯುತ್ತದೆ. ಅದನ್ನು ಕೊಯ್ದುಕೊಂಡು ಬಂದು ತಿನ್ನುವಳು ಅದೇ ಸಮಯಕ್ಕೆ ಕೆಂಗುರಿ ಮಲ್ಲೇಗೌಡನು ಚಿನ್ನಮ್ಮನ ಮನೆಗೆ ಬಂದು ಒಂದು ದಿನ ಇದ್ದು ಪುನಃ ಹೊರಟು ಹೋಗುತ್ತಾನೆ. ಇದರಿಂದಾಗಿ ಚಿನ್ನಮ್ಮ ಗರ್ಭ ಧರಿಸುತ್ತಾಳೆ.

ಬುಡಕಟ್ಟು ವೀರರ ಒಂದು ವಿಶೇಷವೆಂದರೆ ತನ್ನ ತಾಯಿಯ ಹೊಟ್ಟೆಯಲ್ಲಿರುವಾಗಲೆ ಮಾತನಾಡುತ್ತಾರೆ. ಅದೇ ರೀತಿ ಜುಂಜಪ್ಪ ಕೂಡ ತಾಯಿಯ ಹೊಟ್ಟೆಯಲ್ಲಿರುವಾಗ ಮಾತನಾಡುತ್ತಾನೆ. ಇದರಿಂದಾಗಿ ಚಿನ್ನಮ್ಮನಿಗೆ ಭಯವಾಗುತ್ತದೆ. ಏಕೆಂದರೆ ಹೊಟ್ಟೆ ಒಳಗೆ ಇರುವುದು ದೆವ್ವನೋ ಪೀಡೆಯೋ ಇರಬೇಕೆಂದು ಹೆದರುತ್ತಾಳೆ. ಸಾಮಾನ್ಯವಾಗಿ ಮಕ್ಕಳು ಹುಟ್ಟಿದ ಒಂದು ವರ್ಷದ ವರೆಗೆ ಮಾತನಾಡುವುದಿಲ್ಲ. ಆದರೆ ಜುಂಜಪ್ಪ ಮಾತನಾಡಿರುವುದು ವಾಸ್ತವಕ್ಕೆ ವಿರುದ್ಧವಾದುದು. ನಂಬಿಕೆಗೆ ಅನರ್ಹವಾದುದು. ಹಾಗಾಗಿ ಜುಂಜಪ್ಪನ ತಾಯಿ ಭೀತಿಗೆ ಒಳಗಾಗುತ್ತಾಳೆ. ಆಕೆ ಜುಂಜಪ್ಪ ಈ ರೀತಿ ಸಮಾದಾನ ಮಾಡುತ್ತಾನೆ. ಹೆದರಬೇಡಮ್ಮ ನಾನು ವೀರಭದ್ರನ ಅವತಾರದ ಜುಂಜಪ್ಪನಾಗಿ ನಿನ್ನ ಹೊಟ್ಟೆಯಲ್ಲಿ ಹುಟ್ಟುತ್ತೇನೆ. ನಾನು ದೆವ್ವವಲ್ಲ ಪೀಡೆಯಲ್ಲ ಮತ್ತು ನಾನು ಎಲ್ಲರೂ ಹುಟ್ಟುವ ಜಾಗದಲ್ಲಿ ಹುಟ್ಟುವುದಿಲ್ಲ. ಬೆನ್ನಿನಲ್ಲಿ ಹುಟ್ಟುತ್ತೇನೆ. ಮಾರಣ್ಣ ಮೈಲಣ್ಣ ಪಕ್ಕೆಯಲ್ಲಿ ಹುಟ್ಟುತ್ತಾರೆ. ನಾವು ಹುಟ್ಟುವಾಗ ಸೂಲಗಿತ್ತಿಯರನ್ನು ಕರೆಸಬೇಡಮ್ಮ ನಾನು ಹುಟ್ಟಿದ ತಕ್ಷಣ ಮುಟ್ಟಬೇಡ. ನಾನು

ಸೋಮವಾರ ಹೊತ್ತು ಹುಟ್ಟುವ ಸಮಯದಲ್ಲಿ ಬೆನ್ನಿನಲ್ಲಿ ಹೊಡೆಯುತ್ತೇನೆಂದು ಹೇಳುತ್ತಾನೆ? ಬುಡಕಟ್ಟು ವೀರರು ಅಯೋನಿಜರು. ಯೊನಿಪೂಜಕರಾಗಿದ್ದರೂ ಯೋನಿಯಲ್ಲಿ ಹುಟ್ಟುವುದು ಪಾಪ ಮೈಲಿಗೆ ಎಂದು ತಿಳಿದಿರುವುದು ಆಶ್ಚರ್ಯ ಮೂಡಿಸುತ್ತದೆ. ವೀರರ ಪ್ರಾಮುಖ್ಯತೆಯನ್ನು ಹೆಚ್ಚಿಸುವ ಸಲುವಾಗಿ ಈ ರೀತಿ ಕಟ್ಟು ಕತೆಯನ್ನು ಕಟ್ಟೆ ಜನರನ್ನು ನಂಬಿಸುವ ಕೆಲಸ ಎಲ್ಲಾ ಸಾಂಸ್ಕೃತಿಕ ನಾಯಕರ ಹುಟ್ಟಿನ ಸಂದರ್ಭವನ್ನು ತಿಳಿದಾಗ ಅರ್ಥವಾಗುತ್ತದೆ ಇತರೆ ಸಮುದಾಯಗಳಲ್ಲಿ ಪ್ರಚಲಿತವಿರುವ ಸೃಷ್ಟಿಪುರಾಣಗಳನ್ನು ಗಮನಿಸಿದರೆ ತಿಳಿಯುತ್ತದೆ. ಅದೇ ರೀತಿ ಸೋಮವಾರದ ದಿನ ಸೂರ್ಯೋದಯದ ಸಮಯಕ್ಕೆ ಚಿನ್ನಮ್ಮನಿಗೆ ಹೆರಿಗೆ ನೋವು ಕಾಣಿಸಿಕೊಳ್ಳುತ್ತದೆ. ಆಗ ಅವಳು ಕಳುವಾರಹಳ್ಳಿ ದಿಣ್ಣೆಯ ಮೇಲೆ ಹೋಗುತ್ತಾಳೆ. ಸೊಸೆಗೆ ನೋವು ಎದ್ದಿರುವ ವಿಷಯ ತಿಳಿದುಕೊಂಡು ಸಿರಾದ ರಂಗಣ್ಣನ ತಾಯಿಯಾದ ಸೂಲಗಿತ್ತಿಯನ್ನು ಕರೆದುಕೊಂಡು ಬರುತ್ತಾನೆ. ಅವಳು ಬರುವುದರೊಳಗೆ ಜುಂಜಪ್ಪ ಹುಟ್ಟಿರುತ್ತಾನೆ. ಆಗ ಅವನನ್ನು ನೋಡಬೇಕೆಂದು ಸೂಲಗಿತ್ತಿ ಬಟ್ಟೆ ಸರಿಸಿದಾಗ ಕಣ್ಣು ಕುರುಡಾಗುತ್ತದೆ. ಆಗ ಜುಂಜಪ್ಪನಿಗೆ ಮುಡುಪು ಕಟ್ಟಿಕೊಳ್ಳುತ್ತಾಳೆ. ಮತ್ತು ಬಂದ ದಾರಿಗೆ ಸುಂಕವಿಲ್ಲವೆಂದು ಹೊರಟು ಹೋಗುತ್ತಾಳೆ.

ಈ ಸೃಷ್ಟಿ ಪುರಾಣವು ಸಂಪೂರ್ಣವಾಗಿ ಭಿನ್ನ ಸ್ವರೂಪದ್ದಾಗಿದೆ. ಇತರೆ ಪಾಠಾಂತರಗಳಲ್ಲಿ ಗೌರಸಮುದ್ರದ ಮಾರಕ್ಕನೆ ಮಕ್ಕಳನ್ನು ಪಡೆಯುವ ದಾರಿ ತೋರಿಸಿದರೆ ಈ ಪಾಠಾಂತರದ ಪ್ರಕಾರ ಗೌರಸಮುದ್ರದ ಮಾರಮ್ಮ ನೇರವಾಗಿ ಶಿವನ ಬಳಿಗೆ ಹೋಗಿ ವರ ಪಡೆದು ಬರುತ್ತಾಳೆ.

ಡಾ.ಚಲುವರಾಜು ಸಂಪಾದಿಸಿರುವ ಜುಂಜಪ್ಪನ ಕಾವ್ಯದಲ್ಲಿ ಚಿನ್ನಮ್ಮ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ವರ ಪಡೆಯುತ್ತಾಳೆ. ಆಗ ಹೆಣ್ಣು ಮಗು ಪಡೆಯುವಂತೆ ಎತ್ತಯ್ಯ ಸನ್ನೆ ಮಾಡುತ್ತಾನೆ.

"ಗೌರಸಮುದ್ರದ ಮಾರಿ ಮಕ್ಕಳ ವರವನ್ನು ಚಿನ್ನಮ್ಮನಿಗೆ ಕೊಡಿಸಲು ತಂದಯಾದ ಈಶ್ವರನ ಬಳಿಗೆ ಹೋದಳು 'ನರಲೋಕ ಸುರಲೋಕ ಒತ್ತಿ ಆಳುವಂಥ ಮಗನನ್ನು ಬೇಡಿದಳು ಚಿನ್ನಮ್ಮನಿಗೆ "ಅಂಥ ಮಗನನ್ನು ಎಲ್ಲಿತರಲಿ? ಎಂದು ಈಶ್ವರ ಯೋಚಿಸಿದ. ಗೌರಸಂದ್ರದಮಾರಿ ಬಿಡಲಿಲ್ಲ; ತಂದೆಯ ಕಾಲನ್ನು ಹಿಡಿದು ಪೀಡಿಸಿದಳು" *(ಜಿ. ಶಂ. ಪರಮಶಿವಯ್ಯ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಪುಟ-೨೮೨ ,೧೯೭೫)*

"ಕೈಲಾಸದಿಂದ ಹನ್ನೆರಡು ಯೋಜನ ದೂರದಲ್ಲಿ ಕಬ್ಬಿಣದ ಬಾಗಿಲನ್ನು ಮಾಡಿಸಿ, ಹೂವಿನ ವನದಲ್ಲಿ ವೀರಭದ್ರನನ್ನು ಬಿಟ್ಟಿದ್ದರು. ಅವನ ಕೈಯಲ್ಲಿ ಹೂವಿನ ಬುಟ್ಟಿ ಏತ ಎತ್ತುವವನು ಅವನು. ಕಾಲುವೆಗುಂಟ ನೀರು ತಿರುವವನು ನೂರೊಂದು ಹೂವು ಬಿಡಿಸುವವನು ಅವನು ನೂರೊಂದು ಲಿಂಗದ ಪೂಜೆ ಮಾಡುವವನು ಅವನು ಅಂಥ ವೀರಭದ್ರನನ್ನು ಕೊಡಿ" ಎಂದಳು ಗೌರಸಂದ್ರದ ಮಾರಿ ಅವನ ಪುಂಡಾಟ ತಡೆಯಲಾರದೆ ಅವನನ್ನು ಸೆರೆಯಲ್ಲಿಟ್ಟಿದ್ದೀವಿ, ಅಂಥ ಮಗನನ್ನು ಕೇಳುತ್ತಿಯೇನಮ್ಮ? ಎಂದರು ಈಶ್ವರ ಪಾರ್ವತಿ. ಗೌರಸಂದ್ರದಮಾರಿ ಅವನನ್ನೇ ಬೇಡಿದಳು." *(ಜಿ. ಶಂ. ಪರಮಶಿವಯ್ಯ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಪುಟ-೨೮೨, ೧೯೭೫)*

ಮಾಹಿತಿದಾರರಿಂದ ಸಂಗ್ರಹಿಸಿದ ಪಾಠಾಂತರಕ್ಕೂ ಇದಕ್ಕೆ ಸಾಮ್ಯತೆಯಿದೆ.

ಶಿವ ಪಾರ್ವತಿಯಣ್ಣ
ಆಗಲೆ ನರ ಲೋಕುಕು ಸಂಚಾರ
ಬರುತ್ತಾರೆ ಪರಮೇಶ್ವರನು ಗಳಿಗಾಗೋ
ಮೂರು ಗಂಡು ಸಂತಾನ ಪಸ್ಸುಕೊಟ್ಟು ಬಿಟ್ಟಿದಿನಿ
ಮೂರು ಗಂಡು ಮಕ್ಕಳ ಹಿಂದೆ
ಒಂದು ಹೆಣ್ಣು ಮಗು ಹುಟ್ಟ ಬಾರದು
ಬೋ ಕಷ್ಟ ಬರುತ್ತೈತೆ

ಒಂದು ದಿನದ ಮಟ್ಟಿಗೆ ಏಳು ತೆರೆಕಟ್ಟಿ ಚಿನ್ನಮ್ಮ ಎದೆ ಹಾಲನ್ನು ಕುಡಿಯುತ್ತಾನೆ. ಆನಂತರ ಯಾವತ್ತೂ ಎದೆಹಾಲು ಕುಡಿಯುವುದಿಲ್ಲ. ಜುಂಜಪ್ಪ ಜೆನಿಗೆ ಹೋಯ್ಸಿಕೊಂಡು ಬರಲು ಚಿಕ್ಕದೇವರಹಟ್ಟಿಗೆ ತಾಯಿ ಚಿನ್ನಮ್ಮನನ್ನು ಕರೆದುಕೊಂಡು ಹೋಗುತ್ತಾನೆ. ಆಗ ಜುಂಜಪ್ಪನ ತಾತಂದಿರು ಜೆನಿಗೆ ಹಾಲು ಕೊಡಲು ನಿರಾಕರಿಸುತ್ತಾರೆ. ಏಕೆಂದರೆ ಜುಂಜಪ್ಪನ ತಂದೆ ದನ ಹೊಡೆದುಕೊಂಡು ಹೋಗಿ ಹದಿನಾಲ್ಕು ವರ್ಷವಾದರೂ ತಿರುಗಿ ಬಂದಿರಲಿಲ್ಲ. ಆ ಕಾರಣದಿಂದ ಚಿನ್ನಮ್ಮ ಯಾರೋ ಕಂಕರಿಗೆ ಬ್ಯಾಡರಿಗೆ ಬಸುರಾಗಿ ಹಡೆದುಕೊಂಡು ಬಂದಿದ್ದಾಳೆ. ಇವು ನಮ್ಮ ಕುಲಕ್ಕೆ ಸೇರಿದವುಗಳಲ್ಲ ಎಂದು ಏಳು ದಿನಗಳ ಕಾಲ ಹಟ್ಟಿಯ ಹೊರಗೆ ದ್ವಾರ ಬಾಗಿಲಲ್ಲಿ ನಿಲ್ಲಿಸುತ್ತಾರೆ. ಸ್ವಾತಿಮಳೆ ಸ್ವಾನೆಮಳೆ ಸುರಿಯುತ್ತಿರುತ್ತದೆ. ಅದೇ ಸಮಯದಲ್ಲಿ ಪೂಜಾರಿ ಚಿತ್ತಯ್ಯನ ಹೆಂಡತಿ ಬಡಚಿತ್ತಮ್ಮನ ಮಕ್ಕಳು ಹೇಗಿದ್ದಾರೋ ನೋಡೋಣ ಎಂದು ಬಟ್ಟೆ ತೆಗೆದು ನೋಡುತ್ತಾಳೆ. ಜುಂಜಪ್ಪ ಉರಿಗಣ್ಣು ಬಿಟ್ಟಿದ್ದರಿಂದ ಮೂರ್ಛೆ ಹೋಗಿ ಬೀಳುತ್ತಾಳೆ. ಯಾಕೆ ಈ ರೀತಿ ಮಾಡಿದನೆಂದರೆ ಅವಳು ಚಿನ್ನಮ್ಮನನ್ನು ಬೈದಿದ್ದಳು. ಆ ನಂತರ ಜುಂಜಪ್ಪ ಗೌರಸಮುದ್ರದ ಮಾರಮ್ಮನನ್ನು ಕರೆದು ಹಟ್ಟಿಯ ತುಂಬ ವಾಂತಿ ಬೇದಿ ಸುರುವಾಗುವಂತೆ ಮಾಡಿಸಿದನು. ಆಗ ಹಟ್ಟಿಯಲ್ಲಿದ್ದ ಗೌಡರು ಪೂಜಾರಿಗಳು ಇದು ಯಾವುದೋ ದೇವರ ಕಾಟವೆಂದು ತಿಳಿದು ಗೌರಸಮುದ್ರದ ಮಾರಮ್ಮನನ್ನು ಕಣಿ ಕೇಳಿದಾಗ ಮಾರಕ್ಕ ಜುಂಜಪ್ಪನ ಹುಟ್ಟಿನ ಬಗ್ಗೆ ಹೇಳಿ ಅವನು ಪವಾಡ ಪುರುಷ, ಅವನಿಗೆ ಜೆನಿಗೆ ಹಾಲು ಹಾಕಿ ಕಳುಹಿಸಿದರೆ ಹಟ್ಟಿ ಉಳಿಯುತ್ತದೆ. ಇಲ್ಲವಾದರೆ ಹಟ್ಟಿ ನಾಶವಾಗುತ್ತದೆಂದು ಹೇಳಿತ್ತಾಳೆ. ಆಗ ಚಿನ್ನಮ್ಮನನ್ನು ಹಟ್ಟಿಯ ಒಳಗೆ ಬಿಟ್ಟುಕೊಂಡು ಜುಂಜಪ್ಪನಿಗೆ ಚಿತ್ರದೇವರ ಪೂಜಾರಿ ವೀರಜುಂಜಪ್ಪ ಎಂದು ನಾಮಕರಣ ಮಾಡುತ್ತಾನೆ. ನಂತರ ಚಿತ್ರದೇವರಿಂದಲೆ ನೇರವಾಗಿ ಜೆನಿಗೆಯನ್ನು ತೆಗೆದುಕೊಂಡು ಬಂದು ಮಾರಣ್ಣ ಮೈಲಣ್ಣನಿಗೆ ಹಾಕುತ್ತಾನೆ. ಜುಂಜಪ್ಪ ಆ ನಂತರ ಇವರು ಮೂರು ವರುಷದವರಿದ್ದಾಗ ಮಾರಕ್ಕ ಹುಟ್ಟುತ್ತಾಳೆ. ಮಾರಕ್ಕ ಹುಟ್ಟಿದರೆ ತಂದೆಗೆ ಮರಣ ಎಂದು ತಿಳಿದಿದ್ದರಿಂದ ಜುಂಜಪ್ಪ ಹುಟ್ಟಿದ ತಕ್ಷಣ ಹೆಣ್ಣು ಮಗುವಿನ ಕುತ್ತಿಗೆ ಮುರಿಯುವಂತೆ ಹೇಳುತ್ತಾನೆ.

ಹೆತ್ತ ಕರುಳು ಮುರಿಯದಂತೆ ಬದುಕಿಸುತ್ತದೆ. ಮಾರಕ್ಕ ಹುಟ್ಟಿದ ಒಂದು ವರ್ಷದಲ್ಲಿ ಕೆಂಗುರಿ ಮಲೆಗೌಡ ಮಾರಿ ಜಾತ್ರೆಯ ಸಮಯದಲ್ಲಿ ಸಾಯುತ್ತಾನೆ. ಅವನ ಸಾವಿನಿಂದಾಗಿ ಚಿನ್ನಮ್ಮನಿಗೆ ನಾನಾ ರೀತಿಯ ಕಷ್ಟಗಳು ಬರುತ್ತವೆ. ಕಟ್ಟಿಗೆ ಮಾರಿ ಜೀವನ ಮಾಡುವ ಪರಿಸ್ಥಿತಿ ಬರುತ್ತದೆ. ಒಂದು ದಿನ ಕಟ್ಟಿಗೆ ಕಡಿಯಲೆಂದು ಕಾಡಿಗೆ ಹೋದಾಗ ಆಕೆಯ ಮೈ ಮೇಲಿರುವ ಒಂದು ಸೀರೆಯು ಗಾಳಿಯಲ್ಲಿ ಹಾರಿ ಹೋಗುತ್ತದೆ. ಇದರಿಂದಾಗಿ ಪೊದೆಯ ಹಿಂದೆ ಕುಳಿತುಕೊಡು ಅಳುತ್ತಿರುತ್ತಾಳೆ. ಅದೇ ದಾರಿಯಲ್ಲಿ ಸಿರಾ ಸೀಮೆಗೆ ವ್ಯಾಪಾರಕ್ಕೆಂದು ಹೋಗಿದ್ದ ಅವಳ ಅಣ್ಣಂದಿರು ಬರುತ್ತಿರುತ್ತಾರೆ. ಎರಿಜಿನ್ನ, ಮರಿಜಿನ್ನ, ಕೀವಟ್ಟೆಯ ಮರಿಪಿಡ್ಡ, ಬೇವಿನ ಎಲೆ ಚಿನ್ನ, ದೊಡ್ಡಚಿನ್ನ, ಚಿಕ್ಕಚಿನ್ನ, ಕಡೆಲಿಹುಟ್ಟಿನ ಕಟ್ವಾನಿ ಎಂಬ ಏಳು ಜನರಲ್ಲಿ ದೊಡ್ಡಚಿನ್ನೆಗೌಡನಿಗೆ ಚಿನ್ನಮ್ಮ ಅಳುವ ಧ್ವನಿ ಕೇಳಿಸುತ್ತದೆ. ಆಗ ತನ್ನ ತಲೆಗೆ ಸುತ್ತಿಕೊಂಡಿರುವ ಹದಿನಾರು ಮಳದ ಜೋತರವನ್ನು ತೆಗೆದುಕೊಡುತ್ತಾನೆ. ಆಗ ಅವರು ತಂಗಿಗೆ ಬಂದಿರು ಕಷ್ಟವನ್ನು ಕೇಳಿ ಮರುಕ ಪಟ್ಟು ತವರು ಮನೆಗೆ ಕರೆದುಕೊಂಡು ಹೋದರು ಬಲವಂತದಿಂದ. ಬೇಕಂತಲೆ ಮೂರು ದಿನ ತವರು ಮನೆಯಲ್ಲಿಟ್ಟುಕೊಂಡು ಹೊಸ ಸೀರೆ ಉಡಿಸಿ ಮಡಿಲಕ್ಕಿ ಹೊಯ್ದು ಕಡೆಲಿ ಹುಟ್ಟಿದ ಕಟ್ವಾಣಿಯನ್ನು ಜೊತೆಗೆ ಕಳುಹಿಸುತ್ತಾರೆ. ಅವರು ಬರುವುದನ್ನು ನೋಡಿದ ಕೂಡಲೆ ಜುಂಜಪ್ಪ ಉರಿಗಣ್ಣು ಬಿಟ್ಟ. ಆ ಜ್ವಾಲೆಗೆ ತಡೆದುಕೊಳ್ಳಲಾರದ ಕಟ್ವಾಣಿ ಓಡಿ ಹೋದನು. ಜುಂಜಪ್ಪ ತನ್ನ ತಾಯಿಯ ಮೇಲೆ ಅನುಮಾನ ಪಟ್ಟು ಮೂರು ಮಕ್ಕಳನ್ನು ಎತ್ತಿಕೊಂಡು ಮರದ ಮೇಲೆ ಕುಳಿತುಕೊಳ್ಳುತ್ತಾನೆ. ಹೊನ್ನಟ್ಟಿ ಹಾಲೇಗೌಡನನ್ನು ಕರೆದು ತನ್ನ ತಾಯಿ ಮಾಡಿರುವ ತಪ್ಪಿಗಾಗಿ ಹದಿಮೂರು ಗುಡಿಕಟ್ಟಿನ ಗೌಡಗಳು ಶಾನಭೋಗರು ಮುಂದೆ ಒಣಗಿದ ಒನಕೆಯಿಂದ ಒಳನಾರು ತೆಗೆಸುತ್ತಾನೆ. ಕಬ್ಬಿಣದ ಜರಡಿಯಲ್ಲಿ ನೀರು ತರುವಂತೆ ಹೇಳುತ್ತದೆ. ಹುತ್ತದ ನಾಗನನ್ನು ಹಿಡಿಯುವಂತೆ ಮಾಡುತ್ತಾನೆ. ಸತ್ತು ಎಷ್ಟೋ ದಿನವಾಗಿರುವ ತಂದೆಯನ್ನು ಎಚ್ಚರಿಸಿ ಮಾತನಾಡಿಸುವಂತೆ ಮಾಡುತ್ತಾನೆ. ಅಷ್ಟೇ ಅಲ್ಲ ಏಳೇಳು ಹದಿನಾಲ್ಕು ತೆರೆಕಟ್ಟಿ ಹದಿನಾಲ್ಕು ತೆರೆದಾಟಿ ತಾಯಿಯ ಎದೆಹಾಲು ನಾಲ್ಕು ಜನ ಮಕ್ಕಳ ಬಾಯಲ್ಲಿ ಬಿದ್ದರೆ ಮಾತ್ರ ನಮ್ಮಮ್ಮ ಪತವ್ರತೆಯೆಂದು ಒಪ್ಪಿಕೊಳ್ಳುವುದಾಗಿ ಹೇಳುತ್ತಾನೆ. ಅವನು ಮಾಡುವ ಎಲ್ಲಾ ಪರೀಕ್ಷೆಯಲ್ಲಿ ತಾಯಿ ಚಿನ್ನಮ್ಮ ಗೆಲ್ಲುತ್ತಾಳೆ ಆನಂತರ ತಾಯಿಯನ್ನು ಪತವ್ರತೆ ಎಂದು ಒಪ್ಪಿಕೊಂಡು ಮಕ್ಕಳನ್ನು ಚಿನ್ನಮ್ಮನ ಕೈಗೆ ಕೊಡುತ್ತಾನೆ. ಅಲ್ಲಿಗೆ ಅವರಿಗೆ ಬಂದ ಕಷ್ಟಗಳೆಲ್ಲ ಬಗೆ ಹರಿಯುತ್ತವೆ.

ಆಗ ಕಂಬೇರಗೊಲ್ಲರು ಏಳು ಜನ ಅಣ್ಣ ತಮ್ಮಗಳೂ ಬಂದು ಜುಂಜಪ್ಪನನ್ನು ಒಳಗೊಂಡಂತೆ ಎಲ್ಲರನ್ನು ತವರ ಮನಗೆ ಕರೆದುಕೊಂಡು ಹೋಗಿ ಚನ್ನಾಗಿ ಆರೈಕೆ ಮಾಡಿದರು. ನಂತರ ಏಳು ಜನರೂ ಏಳು ಹಸುವಿನ ಕರುಗಳನ್ನು ಕೊಟ್ಟು ದನಕಾಯಲು ನೇಮಿಸಿಕೊಂಡರು. ಜುಂಜಪ್ಪನಿಗೆ ಕೊಟ್ಟ ಏಳು ಹಸುವಿನ ಕರುಗಳು ಏಳು ಗೂಡಿನ ದನಗಳನ್ನು ಮಾಡಿದವು. ಆದರೆ ಕಂಬೇರಗೊಲ್ಲರ ದನಗಳು ಮಾತ್ರ ಎಲ್ಲವೂ ಗೊಡ್ಡಿಗೆ ಬಿದ್ದವು. ಇದರಿಂದಾಗಿ ಕಂಬೇರ ಗೊಲ್ಲರಿಗೆ ಜುಂಜಪ್ಪನ ಮೇಲೆ ಹೊಟ್ಟೆ ಉರಿ ಉಂಟಾಯಿತು. ಆಗ ಏಳೂರ ಗೌಡರನ್ನು ಒಂದು ಕಡೆ ಪಂಚಾಯಿತಿ

ಸೇರಿಸಿ ಜುಂಜಪ್ಪ ನಮಗೆ ಮೋಸಮಾಡಿದ್ದಾನೆ. ನಮ್ಮ ದನಗಳನ್ನು ಅವನವು ಎಂದು ಹೇಳಿಕೊಳ್ಳುತ್ತಿದ್ದಾನೆ. ಎಂದು ಅಪವಾದ ಹೊರಿಸಿದರು. ಆಗ ಜುಂಜಪ್ಪ ಪಂಚಾಯಿತಿಯ ಗೌಡರು ಹೇಳುವ ನ್ಯಾಯಕ್ಕೆ ಬದ್ಧರಾಗಿರುವುದಾಗಿ ಹೇಳುತ್ತಾನೆ. ಏಳು ಜನ ಅಣ್ಣ- ತಮ್ಮಂದಿರಲ್ಲಿ ಕಡೆಲಿ ಹುಟ್ಟಿನ ಕಟ್ಟಣಿ ಎಂಬುವವನು ದನಗಳಿಗೆ ಮಂತ್ರಹಾಕಿ ಕರೆಯುವ ವಿದ್ಯೆಯನ್ನು ಕಲಿತುಕೊಂಡಿರುವುದಾಗಿ ಮತ್ತು ಎಲ್ಲಾ ದನಗಳನ್ನು ತಮ್ಮ ವಶಮಾಡಿಕೊಳ್ಳುವುದಾಗಿ ಹೇಳಿದಾಗ ದೊಡ್ಡಚಿನ್ನಗೌಡ ಒಪ್ಪಿದನು . ಆಗ ದೊಡ್ಡಚಿನ್ನಗೌಡ ಪಂಚಾಯಿತಿಯ ಮುಂದೆ ಈ ರೀತಿ ಹೇಳುತ್ತಾನೆ. ಯಾರು ತಮ್ಮ ದನಗಳನ್ನು ತಮ್ಮ ಕಡೆ ಕೂಗಿ ಕರೆದು ಕೊಳ್ಳುತ್ತಾರೋ ಅವರ ಹಿಂದೆ ಬಂದ ದನಗಳು ಅವರವು ಎಂಬುದಾಗಿ ಹೇಳಿದನು ಇದಕ್ಕೆ ಜುಂಜಪ್ಪ ಒಪ್ಪಿಕೊಂಡನು. ಜುಂಜಪ್ಪ ಒಂದು ಕಡೆ ಪುಳುಗಾಯಿ ಹಿಡಿದು ಇವನ ದನಗಳನ್ನೆಲ್ಲಾ ಒಂದು ಕಡೆ ಕರೆದುಕೊಂಡನು. ಕಂಬೇರಗೊಲ್ಲರ ದನಗಳು ಕಟ್ಟಾಣಿಯ ಹಿಂದೆ ಹೋದವು. ಆಗ ಜುಂಜಪ್ಪ ಏಳು ಗೂಡಿನ ದನಗಳನ್ನು ಹೊಡೆದುಕೊಂಡು ಬಂದು ಕಳುವಾರಳ್ಳಿ ದಿಣ್ಣೆಯ ಮೇಲೆ ಏಳು ಗೂಡುಗಳನ್ನು ಹಾಕಿ ಕರುಗಳನ್ನು ಒಂದು ಗೂಡಿಗೆ ಹಾಕಿ ದನಗಳನ್ನು ಒಂದು ಗೂಡಿಗೆ ಕೂಡಿ ಸುಖವಾಗಿ ಕಾಲ ಕಳೆಯುತ್ತಿರುವಾಗ. ಈ ಸುಖ ಕಂಬೇರಗೊಲ್ಲರು ಸಹಿಸದಾದರು. ಏನಾದರೂ ಮಾಡಿ ಜುಂಜಪ್ಪನಿಗೆ ಕೇಡುಂಟು ಮಾಡಬೇಕೆಂದು ಹುಲಿಕುಂಟೆ ತಮ್ಮಣ್ಣನ ಬಳಿಗೆ ಹೋಗಿ ಹುಲಿಕುಂಟೆಕೆರೆಗೆ ಮಾಟಕ ಮಾಡುವಂತೆ ಅವನು ಕೇಳಿದಷ್ಟು ಹೊನ್ನು ಕೊಟ್ಟು ಬಂದರು. ಅಮವಾಸ್ಯೆ ದಿನ ನಟ್ಟ ನಡು ಇರುಳಿನಲ್ಲಿ ಮಾಟಕ ಮಾಡಲು ಬೇಕಾಗಿರುವ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಕಂಬೇರಗೊಲ್ಲರು ಹುಲಿಕುಂಟೆ ಕೆರೆಗೆ ಬಂದರು ಆಗ ಹುಲಿಕುಂಟೆ ತಮ್ಮಣ್ಣನು ಬಂದು ರಂಗಹಾಕಿ ಮಂತ್ರಹಾಕಿ ಒಂದು ಹೊಟ್ಟೆ ಕರುವಿಗೆ ಮಾಟಕ ಮಾಡಿ ಆ ಕರುವನ್ನು ಹುಲಿಕುಂಟೆ ಕೆರೆಯಲ್ಲಿ ಹೂತು ಹೋಗುತ್ತಾರೆ. ಬೆಳಿಗ್ಗೆ ಎದ್ದ ಮಾರಣ್ಣ ಮೈಲಣ್ಣ ಎಲ್ಲಾ ಹಸುವಿನ ಹಾಲು ಕರೆದು ದನಗಳನ್ನು ಮೇಯಲು ಬಿಟ್ಟರು ಎಲ್ಲಾ ದನಗಳು ಮೇದು ಮದ್ಯಾಹ್ನದ ಹೊತ್ತಿಗೆ ಸರಿಯಾಗಿ ಕೆರೆಗೆ ನೀರಿಗೆ ಬಂದವು ಗೊಡ್ಡುಗಾಳಿ ಎಂಬ ಹಸು ಎಲ್ಲ ದನಗಳನ್ನು ನೀರು ಕುಡಿಯದಂತೆ ತಡೆಯುತ್ತದೆ. ಆಗಜುಂಜಪ್ಪ ಬಂದು ಕೆರೆಯ ನೀರು ಹೆಪ್ಪುಗಟ್ಟಿರುವುದು ನೋಡಿ ಎಲ್ಲಾ ಮಾರಿಯರನ್ನು ಕರೆದು ಕೆರೆಯಲ್ಲಿರುವ ವಿಷವನ್ನು ಕಡೆಗೋಲಿನಿಂದ ಕಡೆದು ವಿಷವನ್ನು ಹೊರಗೆ ತೆಗೆದರು ಆ ನಂತರ ದನಗಳು ಬಂದು ನೀರು ಕುಡಿದು ದಣಿವಾರಿಸಿಕೊಂಡವು. ಆಗ ಆ ಕೆರೆಯಲ್ಲಿ ಒಂದು ಕರು ಮಿಸುಕಾಡುತ್ತದೆ. ಇದು ನಮ್ಮ ಸೋದರ ಮಾವಗಳ ಕರು ಹೊತ್ತುಕೊಂಡು ಹೋಗಿ ಬಿಟ್ಟು ಬನ್ನಿರಿ ಎಂದು ಜುಂಜಪ್ಪ ತಮ್ಮಂದಿರಿಗೆ ಹೇಳಿದನು. ಅದರಂತೆ ಅವರು ಕರುವನ್ನು ಹೊತ್ತುಕೊಂಡು ಹೋಗಿ ಇದು ನಿಮ್ಮ ಕರು ತೆಗೆದುಕೊಳ್ಳಿರಿ ಎಂದು ಹೇಳಿದಾಗ, ಏಳು ಜನ ಮಾವಗಳು ಕವಣೆಕಲ್ಲಿನಿಂದ ಹೊಡೆಯುತ್ತಾರೆ. ಇದರಿಂದ ಇಬ್ಬರ ಮೈಯಲ್ಲಿ ರಕ್ತ ಹೆಪ್ಪುಗಟ್ಟುತ್ತದೆ. ವಾಪಸ್ಸು ಬರುತ್ತಾರೆ. ಆಗ ಜುಂಜಪ್ಪ ಮತ್ತೆ ಕಳುಹಿಸುತ್ತಾನೆ. ಈ ಬಾರಿ ಮಾವಗಳು ಹುಣಿಸೆ

ಬರಲಿನಿಂದ ಹೊಡೆದು ಕಳಿಸುತ್ತಾರೆ. ಕೊನೆಗೆ ಜುಂಜಪ್ಪನೆ ಹೊತ್ತುಕೊಂಡು ಹೋದಾಗ ಏಳು ಜನ ಮಾವಗಳು ಪಂಚಾಯಿತಿ ಕಲೆಯುತ್ತಾರೆ. ಪಂಚಾಯಿತಿಯಲ್ಲಿ ಈ ಕರುವಿನ ತಾಯಿ ನಮ್ಮದಾಗಿದ್ದರೆ ಹಾಲು ಕುಡಿಸಲಿ ಎಂದು ಹೇಳುತ್ತಾರೆ. ಆ ಮಾತಿಗೆ ಜುಂಜಪ್ಪ ಒಪ್ಪಿಕೊಳ್ಳುತ್ತಾನೆ. ಆದರೆ ಕಡೆಲಿ ಹುಟ್ಟಿದ ಕಟ್ಟಾಣಿ ಮೊದಲೆ ಹಸುವಿನ ಮೊಲೆಯನ್ನು ಬಾರೆ ಮುಳ್ಳಿನಿಂದ ಚುಚ್ಚಿ ಗಾಯ ಮಾಡಿರುತ್ತಾನೆ. ಇದರಿಂದಾಗಿ ಹಸು ಹಾಲು ಕುಡಿಸುವುದಿಲ್ಲ. ಆಗ ಪಂಚಾಯಿತಿಯವರು ಕರುವನ್ನು ಜುಂಜಪ್ಪನದೆಂದು ತೀರ್ಪುಕೊಡುತ್ತಾರೆ. ಸೋದರಮಾವಗಳು ಬರವಣಿಗೆಯನ್ನು ಕೂಡ ಬರೆದು ಕೊಡುತ್ತಾರೆ.

ಆ ಕರುವನ್ನು ಹೊತ್ತುಕೊಂಡು ಬಂದು ಏಳು ಕೆರೆಯಲ್ಲಿ ಮುಳುಗಿಸಿ ಏಳು ಕೆರೆಯಲ್ಲಿ ಏಳಿಸಿ ಬಡಮೈಲ ಬಟ್ಟಣ್ಣ ಎಂದು ನಾಮಕರಣ ಮಾಡಿ ನಿಡುಗಲ್ಲು ಪರ್ವತದಂತೆ ಬೆಳೆಯಲಿ ಎಂದು ಆಶಿರ್ವಾದ ಮಾಡಿದನು ಜುಂಜಪ್ಪ. ಅದು ಅದೇ ರೀತಿ ಬೆಳೆಯಿತು ಅದು ಕಂಬೇರ ಗೊಲ್ಲರಿಗೆ ಗಂಡನಾಗಿ ನಿಂತಿತು.

ಒಟ್ಟಾರೆ ಏನಾದರೂ ಮಾಡಿ ಜುಂಜಪ್ಪನ ದನಗಳನ್ನು ನಾಶಮಾಡಬೇಕು ಎಂದು ಜುಂಜಪ್ಪನ ಮಾವಗಳು ಮರಡಿ ರಂಗಣ್ಣನಿಗೆ ಹೋಗಿ ಮಳೆಬಾರದಂತೆ ಮಾಡಬೇಕು ಆಗ ಜುಂಜಪ್ಪ ಪ್ರಪಂಚ ಅರಿಯದವ ಹುಲ್ಲು ನೀರಿಗಾಗಿ ಹುಡುಕಿಕೊಂಡು ಹೋಗುವುದು ಅವನಿಗೆ ಸಾಧ್ಯವಿಲ್ಲ. ಹಾಗಾಗಿ ಸತತವಾಗಿ ಏಳು ವರ್ಷ ಮಳೆಬಾರದ ಹಾಗೆ ನೋಡಿಕೊಳ್ಳುವುದು ಎಂದು ಹೇಳಿ ಮಳೆ ಕಳೆದರು. ಇದರಿಂದ ಜುಂಜಪ್ಪನ ದನಗಳಿಗೆ ಮೇವು ದೊರೆಯದಂತಾಯಿತು. ಈ ಕಷ್ಟಕ್ಕೆ ಕಾರಣ ಮರಡಿ ರಂಗಪ್ಪ ಎಂದು ತಿಳಿದು ಅವನ ತಲೆಗೆ ಕೊಡಲಿಯಿಂದ ಹೊಡೆಯುತ್ತಾನೆ.

"ಜುಂಜಪ್ಪನ ಹುಟ್ಟಿನ ಬಗೆಗಿರುವ ಸೃಷ್ಟಿ ಪುರಾಣದ ಕತೆಯನ್ನು ಗಮನಿಸಿದಾಗ ಇಲ್ಲಿಯ ನಾಯಕ ಜುಂಜಪ್ಪ ಹುಟ್ಟು ದೈವದ ಮೂಲದಿಂದ ಬಂದದ್ದು, ಜುಂಜಪ್ಪ ವೀರಭದ್ರನ ಅವತಾರ ನರಲೋಕ ಸುರಲೋಕ ಒತ್ತಿ ಆಳುವಂತಹ ವೀರನನ್ನೇ ಭೂಲೋಕಕ್ಕೆ ಕರೆತರುವ ಪ್ರಯತ್ನ ಕೈಲಾಸದಲ್ಲಿಯೂ ಪುಂಡಾಟಿಕೆ ಮಾಡುತಿದ್ದ ವೀರಭದ್ರನನ್ನು ಶಿವ ಹೇಗೆ ಬಂದಿಸಿಟ್ಟಿದ್ದ ಎಂದು ತಿಳಿಸುವ ಚಿತ್ರಣ, ನರಲೋಕದಲ್ಲಿ ಮಾನವ ರೂಪದಲ್ಲಿ ಜನಿಸಬೇಕಾದರೆ ವೀರಭದ್ರ ಶಿವನಿಂದ ಪಡೆದುಕೊಂಡು ಬಿರುದಾವಳಿಗಳು ಮತ್ತು ಆಯುಧಗಳು, ಎಲ್ಲರನ್ನೂ ಮೀರಿಸುವಂತಹ ಶಕ್ತಿ ಸಾಮರ್ಥ್ಯಗಳು ಚಿನ್ನಮ್ಮನ ಹೊಟ್ಟೆಯೊಳಗಿದ್ದಾಗಲೇ ಮಾತನಾಡುವುದು, ಅವಳಿಗೆ ತಿಳುವಳಿಕೆ ಹೇಳುವುದು ಮತ್ತು ನಡುಬೆನ್ನಿನಿಂದ ಹುಟ್ಟುವುದು, ಹುಟ್ಟಿದ ತಕ್ಷಣ ಹುತ್ತಿನ ಮೇಲೆ ಕುಳಿತುಕೊಳ್ಳುವುದು,ದುಷ್ಟ ಶಕ್ತಿಗಳೊಡನೆ ಹೋರಾಡುವುದು, ಹೋರಾಟದಲ್ಲಿ ಸಹಾಯಕ್ಕಾಗಿ ಬಡ ಮೈಲನನ್ನು ಬಳಸಿಕೊಳುಳುವುದು, ಮುಂತಾದ ಚಿತ್ರಣಗಳನ್ನು ಕಲ್ಪಿಸಿಕೊಂಡರೆ ಇಲ್ಲಿ ಹೋರಾಟ ಮಾಡುವುದಕ್ಕಾಗಿಯೇ ಈ ನಾಯಕನನ್ನು ಹೀಗೆ ಭಯಂಕರವಾಗಿ ಸೃಷ್ಟಿಸಿದ್ದರು. ಎಂಬುದು ಸ್ಪಷ್ಟವಾಗುತ್ತದೆ. ಭಯಾನಕ ಶಕ್ತಿ ಮತ್ತು ಆಯುಧಗಳನಿಟ್ಟುಕೊಂಡು ಹೋರಾಟ ಮಾಡುವುದು ಈ

ಚರಿತ್ರೆಯ ನಾಯಕನಿಗೆ ಅವಶ್ಯಕವಿತ್ತು ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ" *(ಡಿ ಬಿ. ನಾಯಕ (ಸಂ) 'ಗಿರಿಜನ ಸಿರಿ' 'ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಸೃಷ್ಟಿಪುರಾಣಗಳು' ಪುಟ ೨೮೪–೨೮೫, ೨೦೦೩)*

ಅಧ್ಯಾಯ : ಮೂರು

ಕಾಡುಗೊಲ್ಲರ ಕುಲ-ಬಳಿ, ಬೆಡಗುಗಳು

೩.೧. ಚಿತ್ತಮುತ್ತಿ, ಸನ್ನಮುತ್ತಿ ಕುಲ

೩.೨. ಎಗಡೆಗೊಲ್ಲರು

೩.೩. ಕೋಣನಗೊಲ್ಲರು

೩.೪. ಮೆರನಗೊಲ್ಲರು

೩.೫. ಅಜ್ಜೇರಗೊಲ್ಲರು

೩.೬. ಶೀಲವಾಡಿಗೊಲ್ಲರು

೩.೭. ಕರಡಿಗೊಲ್ಲರು.

೩.೮. ಬಡಗೊಲ್ಲರು.

೩.೯. ತೋಳಯ್ಯನ ಗೊಲ್ಲರು

೩.೧೦. ಕೆಂಗುರಿಗೊಲ್ಲರು.

ಅಧ್ಯಾಯ: ಮೂರು

ಕಾಡುಗೊಲ್ಲರ ಕುಲ-ಬಳಿ, ಬೆಡಗುಗಳು

ಡಾ. ದೇವಿಪ್ರಸಾದ್ ಚಟ್ಟೋಪಾಧ್ಯಾಯರು ಬುಡಕಟ್ಟುಗಳನ್ನು ಕುರಿತಾಗಿ ಹೀಗೆ ಹೇಳಿದ್ದಾರೆ. "ಅನಾಗರಿಕ ವ್ಯವಸ್ಥೆಯನ್ನು ದಾಟಿ ನಾಗರಿಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರಿಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ, ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮ ಕಾಲದ ವಿಧವಿಧವಾದ ನಂಬಿಕೆಗಳು ಹಾಗೆ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರಿಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ" *(ಬೋರಲಿಂಗಯ್ಯ ಹೀ ಚಿ. ಬುಡಕಟ್ಟು ದೈವಾರಾಧನೆ, ಪುಟ-೨, ೨೦೧೫.)*

ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಈ ಮಾತುಗಳು ಕಾಡುಗೊಲ್ಲರ ಬದುಕಿಗೆ ತುಂಬ ಹತ್ತಿರವಾಗಿವೆ ಎಂಬುದು ನನ್ನ ಭಾವನೆ. ಏಕೆಂದರೆ ಕಾಡುಗೊಲ್ಲರಲ್ಲಿ ಅನೇಕ ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು ಇಂದು ಜೀವಂತವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಕಾಡುಗೊಲ್ಲರು ಅಲೆಮಾರಿ ಬದುಕನ್ನು ರೂಢಿಸಿಕೊಂಡ ಕಾಲದಲ್ಲಿ ಹೆರಿಗೆಯಾದ ಬಾಣಂತಿಯನ್ನು ಮನೆ ಒಳಗೆ ಸೇರಿಸಿಕೊಳ್ಳಲು ಮನೆಯೇ ಇರದ ಕಾರಣ, ತಾತ್ಕಾಲಿಕವಾಗಿ ಮಗುವನ್ನು ಬಾಣಂತಿಯನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ತಾವು ವಾಸವಾಗಿರುವ ಜಾಗದಲ್ಲಿಯೇ ಮುತ್ತುಗದ ಎಲೆಗಳಿಂದ ಗುಬ್ಬವನ್ನು ನಿರ್ಮಾಣ ಮಾಡುತಿದ್ದರು. ಈ ಗುಬ್ಬವು ಹೆರಿಗೆಯಾದ ಬಾಣಂತಿಗೆ ಮತ್ತು ಮಗುವಿಗೆ ಉತ್ತಮವಾದ ವಾತಾವರಣವನ್ನು ನಿರ್ಮಾಣ ಮಾಡುತ್ತಿತ್ತು ಎಂಬ ಭಾವನೆ ಅವರಲ್ಲಿತ್ತು. ಇದರ ಜೊತೆಗೆ ಹೆರಿಗೆ ಸಮಯದಲ್ಲಿ ಹೆಣ್ಣು ಪುರುಷನಿಂದ ದೂರವಿರಬೇಕಾಗಿತ್ತು. ಆ ಕಾರಣಕ್ಕಾಗಿ ಇಂತಹ ಆಚರಣೆಗಳು ಹುಟ್ಟಿಕೊಂಡಿರಬಹುದು. ಇದು ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡುವ ಸಲುವಾಗಿ ರೂಪಿಸಿಕೊಂಡ ವ್ಯವಸ್ಥೆ ಆಗಿರಲೂಬಹುದು. ಬುಡಕಟ್ಟು ಸಮುದಾಯ ಯಾವುದೇ ಒಂದು ಆಚರಣೆ, ಸಂಪ್ರದಾಯವನ್ನು ಆಚರಿಸುತ್ತದೆ ಎಂದರೆ ಅದರ ಹಿಂದೆ ಒಂದು ತಿಳುವಳಿಕೆ ಅಡಕವಾಗಿರುತ್ತದೆ. ಆ ತಿಳುವಳಿಕೆಯನ್ನು ಹುಡುಕಾಟ ಮಾಡದ

ಸಂಶೋಧಕರು ಅದೊಂದು ಅನಿಷ್ಟ ಪದ್ಧತಿ ಎಂದು ಅವಹೇಳನ ಮಾಡಿ ಆ ಸಮುದಾಯದ ಬಗ್ಗೆ ಕೆಟ್ಟ ಅಭಿಪ್ರಾಯ ಸಮಾಜದಲ್ಲಿ ಬರುವಂತೆ ಮಾಡಿದ್ದಾರೆ. ಹಾಗಂದ ಮಾತ್ರಕ್ಕೆ ಈ ಸಂಪ್ರದಾಯಗಳು ಹಾಗೆ ಮುಂದುವರಿಯಲಿ ಎಂದು ಹೇಳಲು ಬಯಸುವುದಿಲ್ಲ. ಕಾಲಕ್ಕೆ ಅನುಗುಣವಾಗಿ ಆ ಸಂಪ್ರದಾಯಗಳ ಆಚರಣೆಗಳಿಂದ ಆ ಸಮುದಾಯಕ್ಕೆ ಯಾವುದೇ ಪ್ರಯೋಜನವಿಲ್ಲ ಎಂದ ಮೇಲೂ ಅದನ್ನು ಆಚರಣೆ ಮಾಡುವುದರಲ್ಲಿ ಅರ್ಥವಿಲ್ಲ ಎನ್ನುವುದು ನನ್ನ ಭಾವನೆ. ಅದೇನೆ ಇರಲಿ ಕಾಡುಗೊಲ್ಲರು ಒಂದು ಕಡೆ ನೆಲೆನಿಂತು ಕೃಷಿಯನ್ನು ಅವಲಂಬಿಸಿರುವ ಮತ್ತು ಶಿಕ್ಷಣ ಪಡೆಯುತ್ತಿರುವ ಕಾಲದಲ್ಲಿಯೂ ಕೂಡ. ಹಿಂದೆ ಗುಬ್ಬ ಹಾಕುವಂತೆ, ಇಂದು ಕೂಡ ಗುಬ್ಬ ಹಾಕಿ ಬಾಣಂತಿ ಮತ್ತು ಮಗುವನ್ನು ಅದರಲ್ಲಿ ಬಿಡುವ ಸಂಪ್ರದಾಯ ಇನ್ನೂ ರೂಢಿಯಲ್ಲಿರುವುದು ವಿಷಾಧನೀಯ ಸಂಗತಿ. ಇಂತಹ ಅನೇಕ ಸಂಪ್ರದಾಯಗಳು ಅವರ ಬದುಕಿನಲ್ಲಿ ರೂಢಿಗತವಾಗಿ ಬಂದಿರುವುದು ಸ್ಪಷ್ಟವಾಗಿದೆ.

ಆರಂಭದಲ್ಲಿ ಎರಡು ಮೂರು ಕುಲಗಳಿದ್ದು ಅವುಗಳಲ್ಲಿ ಈಗ ೨೭ ಉಪ ಬೆಡಗುಗಳಾಗಿರುವುದು ಕಂಡುಬರುತ್ತದೆ. ಕಾಡುಗೊಲ್ಲರು ಇಂದು ಅರೆ ಅಲೆಮಾರಿಯಾಗಿ ಮತ್ತು ಒಂದು ಕಡೆ ನೆಲೆನಿಂತ ಕಾರಣ ಕಾಡುಗೊಲ್ಲರಲ್ಲಿ ಅನೇಕ ಬೆಡಗುಗಳು ಸೃಷ್ಟಿಯಾಗಲು ಕಾರಣಗಳಾಗಿವೆ. ಕಾಡುಗೊಲ್ಲರಲ್ಲಿ ಆರಂಭದಲ್ಲಿ ಎರಡೇ ಕುಲಗಳಿದ್ದು ಹೆಣ್ಣು ಮಕ್ಕಳ ಸಂತತಿ ಕಡಿಮೆಯಾಗಿದ್ದರಿಂದ ಇತರೇ ಸಮುದಾಯದೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದು ಅನಿವಾರ್ಯವಾಗಿತ್ತು. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಚಿತ್ತಯ್ಯ ಬ್ರಾಹ್ಮಣ ಕನ್ಯೆಯಾದ ಗಂಗೆಮಾಳಮ್ಮನನ್ನು ಮದುವೆಯಾದ. ಅದರಂತೆ ಮುಖ್ಯವಾಗಿ ಕಾಡುಗೊಲ್ಲರ ನಾಯಕರುಗಳು, ಬೇರೆ ಸಮುದಾಯದ ಸ್ತ್ರೀಯರನ್ನು ಅನಿವಾರ್ಯ ಕಾರಂಗಳಿಗಾಗಿ ಲೈಂಗಿಕತೆಗೆ ಬಳಸಿಕೊಂಡಿರುವುದು ಕಂಡುಬರುತ್ತದೆ. ಉದಾ: ಕರಡಿ ಬುಳ್ಳಪ್ಪ, ಕರಿಓಬವ್ವನನ್ನು ಇಟ್ಟುಕೊಳ್ಳುವುದು, ಇಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗಲು ಬೇರೆ ಸಮುದಾಯದವರನ್ನು ಲೈಂಗಿಕವಾಗಿ ಬಳಸಿಕೊಳ್ಳುವುದು. ಅಥವಾ ಕಾಡುಗೊಲ್ಲರ ಸಮುದಾಯ ಪ್ರಬಲವಾದ ರೀತಿಯಲ್ಲಿ ಬೆಳೆಯದಿರುವುದು ಈ ಸ್ಥಿತಿಗೆ ಕಾರಣವಾಗಿದೆ. ಇತರೆ ಸಮುದಾಗಳು ಎಲ್ಲ ರೀತಿಯಿಂದಲೂ ಬದಲಾವಣೆಯತ್ತ ಸಾಗಿದರೆ, ಕಾಡುಗೊಲ್ಲರು ಮಾತ್ರ ಹಾಗೇ ಉಳಿದಿರುವುದು ಸೋಜಿಗದ ಸಂಗತಿಯಾಗಿದೆ.

'ಜೀ.ಶಂ.ಪರಮಶಿವಯ್ಯ'ನವರು ಕಾಡುಗೊಲ್ಲರಲ್ಲಿ ಮುಖ್ಯವಾಗಿ ಪ್ರಧಾನ ಎನ್ನಬಹುದಾದ ಬೆಡಗುಗಳು ಮೂರು. ಒಂದನೆಯದು ಚಿತ್ತಮುತ್ತಿ, ಎರಡನೆಯದು ಸನ್ನಮುತ್ತಿ, ಮೂರನೆಯದು ರಾಮಮುತ್ತಿ. ನಂತರ ಬರುವ ಬೆಡಗುಗಳೆಲ್ಲಾ ಇವುಗಳ ಉಪಬೆಡಗುಗಳು

ಕಾಡುಗೊಲ್ಲರಲ್ಲಿ ಮೂಲದಲ್ಲಿ ಎರಡು ಬೆಡಗುಗಳಿದ್ದವು. ೧. ಚಿತ್ತಮುತ್ತಿ ಇದನ್ನು ಸೂರ್ಯನ ವಂಶವೆಂದು ಗುರುತಿಸಿದ್ದಾರೆ. ೨. ಸಣ್ಣಮುತ್ತಿ ಇದನ್ನು ಚಂದ್ರನ ವಂಶವೆಂದು ಹೇಳುತ್ತಾರೆ. ಚಿತ್ತಮುತ್ತಿ ಒಟ್ಟು ಏಳು ಉಪಬೆಡಗುಗಳು ಸಣ್ಣಮುತ್ತಿ ವಂಶದಲ್ಲಿ ೧೩ ಉಪ ಬೆಡಗುಗಳಿವೆ. ಆ ನಂತರ ಸೇರಿಕೊಂಡ ರಾಮಮುತ್ತಿ ವಂಶದಲ್ಲಿ ಒಟ್ಟು ಏಳು ಬೆಡಗುಗಳು ಕಾಡುಗೊಲ್ಲರಲ್ಲಿ ಒಟ್ಟು ೨೭

ಬೆಡಗುಗಳಿರುವುದು ಕಂಡು ಬಂದಿದ್ದು, ಮೂಲದಲ್ಲಿ ಕೇವಲ ಎರಡು ವಂಶಗಳಿದ್ದು ಮೂರು ವಂಶಗಳಾಗಿ ಮತ್ತು ಇಪ್ಪತ್ತೇಳು ಬೆಡಗುಗಳಾಗಿವೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಮತ್ತು ಈ ಸಮುದಾಯದ ಹೆಣ್ಣು ಮಕ್ಕಳು ಅಂತರ್ ಜಾತಿ ವಿವಾಹವಾದಾಗ ಅವರ ಸಂತತಿಯನ್ನು ಗುರುತಿಸುವುದಕ್ಕಾಗಿ ಅವರಿಗೆ ಒಂದು ಬೆಡಗು ನೀಡಿ ಒಳಗಿನವರನ್ನಾಗಿಯಿರಿಸಿ ಕೊಂಡಿರುವುದು ಕಂಡು ಬರುತ್ತದೆ. ಈ ರೀತಿ ವರ್ಣ ಸಂಕರ ನಡೆದಿದ್ದರಿಂದ ಕಾಡುಗೊಲ್ಲರ ಹೀರಿಯರು ಅವರಿಗೆ ಪ್ರತೇಕವಾದ ದೈವ ಮತ್ತು ಸಮುದಾಯದ ನಿರ್ಧಿಷ್ಟಪಡಿಸಿದ ಕೆಲಸಗಳನ್ನು ಹಂಚಿರುವುದು ಕಂಡುಬರುತ್ತದೆ.

೩. ಕಾಡುಗೊಲ್ಲರ ಕುಲಗಳು

ಗೊಲ್ಲರು ಅಂಬ ಕುಲನ
ನಾನು ತಯಾರು ಮಾಡಬೇಕು ಲಕ್ಷ್ಮಿ
ಅಂದು ವಿಷ್ಣು ಮಹಾಲಕ್ಷ್ಮಿಗೆ ಹೇಳಿದ *(ಚಲುವರಾಜು, ಜುಂಜಪ್ಪ, ಪುಟ ೨೩, ೧೯೯೭)*

ಕಾಡುಗೊಲ್ಲರ ಕುಲಬಳಿಗಳ ಬಗ್ಗೆ ಅವರದೆ ಆದ ಪರಿಕಲ್ಪನೆಗಳಿವೆ. ಅವರ ಪ್ರಕಾರ ಕಾಡುಗೊಲ್ಲರನ್ನು ಯಾರು ಸೃಷ್ಠಿ ಮಾಡಬೇಕೆಂದು ವೈಕುಂಠದಲ್ಲಿ ವಿಷ್ಣು ಲಕ್ಷ್ಮಿಯರ ಮಧ್ಯೆ ಚರ್ಚೆ ನಡೆಯುತ್ತದೆ. ಗೋವರ್ಧನ ಎಂಬ ಬೆಟ್ಟದ ಕೆಳಗಿರುವ ಗೋವರ್ಧನಗಿರಿ ಎಂಬ ಊರಿನಲ್ಲಿ ಒಬ್ಬ ಮಹಾರಾಜ ಆಳ್ವಿಕೆ ಮಾಡಿಕೊಂಡಿದ್ದ. ಅವನಲ್ಲಿರುವ ಪ್ರಾಮಾಣಿಕತೆ ಮತ್ತು ಶಿವನ ಭಕ್ತಿಯಿಂದ ಕಾಲ ಕಾಲಕ್ಕೆ ಸರಿಯಾಗಿ ಮಳೆ ಬೆಳೆ ಆಗುತ್ತಿತ್ತು. ಹಾಗಾಗಿ ಅವನ ಆಡಳಿತದಲ್ಲಿ ಪ್ರಜೆಗಳು ನೆಮ್ಮದಿಯಿಂದ ಬಾಳುತ್ತಿದ್ದರು. ಎಲ್ಲಾ ಸೌಭಾಗ್ಯಗಳು ಕೊಟ್ಟಿದ್ದ ದೇವರು ಅವನಿಗೆ ಮಕ್ಕಳ ಸಂತಾನ ಕೊಟ್ಟಿರಲಿಲ್ಲ. ಅನೇಕ ದೇವರುಗಳಿಗೆ ಹರಕೆ ಹೊತ್ತು ಅನೇಕ ಜನಪರ ಕೆಲಸಗಳನ್ನು ಮಾಡಿಸಿದ, ಬಾವಿ ತೋಡಿಸಿ, ದೇವಾಲಯ ಕಟ್ಟಿಸಿ ಜನಪರವಾದ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದ. ಆದರೆ ಮಕ್ಕಳಿಲ್ಲ ಎಂಬ ಕೊರಗು ಮಾತ್ರ ನಿರಂತರವಾಗಿ ಕಾಡುತ್ತಿತ್ತು. ಇವನ ಭಕ್ತಿ ಎಂಬುದು ಮುಕ್ಕೋಟಿ ದೇವರಿಗೂ ಮುಟ್ಟಿತು. ಆ ಸಮಯದಲ್ಲಿ ಮಹಾ ವಿಷ್ಣುವು ಭೂ ಲೋಕದಲ್ಲಿ ಅವತರಿಸಬೇಕೆಂದು ತನ್ನ ಮಡದಿಯಾದ ಲಕ್ಷ್ಮಿಗೆ ಹೇಳುತ್ತಾನೆ. ಹಲವಾರು ವರ್ಷಗಳಿಂದ ದೇವರ ಸೇವೆ ಮಾಡುತ್ತಾ ಬಂದಿರುವ. ಗೋವರ್ಧನಗಿರಿ ರಾಜನಿಗೆ ಮಗಳಾಗಿ ಹುಟ್ಟು, ನಾನು ಅದೇ ಗಿರಿಯ ಪಕ್ಕದಲ್ಲಿ ಇರುವ ಗೊಲ್ಲರಹಟ್ಟಿಯಲ್ಲಿ ಒಬ್ಬ ಬಡವನ ಮನೆಯಲ್ಲಿ ಹುಟ್ಟುತ್ತೇನೆ. ನಾವಿಬ್ಬರು ಪ್ರಾಯಕ್ಕೆ ಬಂದಾಗ ಯಾರಿಗೂ ಕಾಣದಂತೆ ಸಂಮಿಲನ ಹೊಂದಿ, ಕಾಡುಗೊಲ್ಲರ ಹುಟ್ಟಿಗೆ ಕಾರಣರಾಗೋಣ ಎಂದು ಹೇಳಿ ಆಶಿರ್ವಾದ ಮಾಡಿ ಕಳುಹಿಸಿದ. ಗೋವರ್ಧನ ಅರಸನ ಹೆಂಡತಿಯು ಮೂರು ತಿಂಗಳು ಗರ್ಭವತಿಯಾದಳು. ಈ ವಿಷಯವನ್ನು ಕೇಳಿ ಗೋವರ್ಧನ ರಾಜ ಅತಿ ಸಂತೋಷ ಪಟ್ಟು ಕೊನೆಗೂ ನಂಬಿದ ದೇವರು ಕೈಬಿಡಲಿಲ್ಲ ಎಂದು ಎಲ್ಲಾ ದೇವರುಗಳಿಗೆ ಕೈಮುಗಿಯುತ್ತಾನೆ. ಒಂಬತ್ತು ತಿಂಗಳು ತುಂಬಿ ಒಂಬತ್ತು ಗಳಿಗೆ ಒಳಗೆ ಸೋಮವಾರ ದಿನ ಸಾಯಂಕಾಲ ೪ ಗಂಟೆಗೆ ಸುಂದರವಾದ ಹೆಣ್ಣು ಮಗುವಿಗೆ ತಾಯಿಯಾಗುತ್ತಾಳೆ. ರಾಜನು ಇಡೀ ಊರಿಗೆ ಸಿಹಿ ಹಂಚುವನು.

ಮಹಾವಿಷ್ಣುವು ಬಡವನ ಮನೆಯಲ್ಲಿ ಹುಟ್ಟಿ ಗೋವುಗಳನ್ನು ಕಾಯ್ದುಕೊಂಡು ನೆಮ್ಮದಿಯಿಂದ ಜೀವಿಸತೊಡಗಿರುತ್ತಾನೆ. ಮಹಾವಿಷ್ಣುವಿಗೆ ಹದಿನಾರು ವರುಷ ತುಂಬುತ್ತ ಬಂದಿತು. ಆಗ ಲಕ್ಷ್ಮಿಯ ನೆನಪು ಕಾಡಿತು.

ಗೋವರ್ಧನ ರಾಜ ಮಗಳನ್ನು ಬಹಳ ಪ್ರೀತಿಯಿಂದ ಸಾಕ್ಕಿದ್ದ. ಮಗಳಿಗೆ ಹನ್ನೆರಡು ವರ್ಷ ತುಂಬಿತು. ಅವಳು ಋತುಮತಿಯಾದಳು. ಆಗ ಅವಳನ್ನು ನೋಡಿಕೊಳ್ಳಲು ದಾಸಿಯರನ್ನು ನೇಮಕ ಮಾಡಿ, ಪ್ರತಿನಿತ್ಯ ಆಕೆಗೆ ಸ್ನಾನ ಮಾಡಿಸಿ ತಲೆ ಬಾಚಿ ಹೂವು ಮುಡಿಸಿ, ತಕ್ಕಡಿಲ್ಲಿಟ್ಟು ತೂಕ ಮಾಡಿಸುತ್ತಿದ್ದ ಅವಳು ಒಂದೇ ಮಲ್ಲಿಗೆ ಹೂವಿನ ತೂಕದಲ್ಲಿದ್ದಳು. ಆಕೆಯ ಅರಮನೆಗೆ ಪರಪುರುಷರ ಪ್ರವೇಶವನ್ನು ನಿಷೇಧಿಸಲಾಗಿತ್ತು. ಬೀಸುಗತ್ತಿ ಪಾರದವರನ್ನು ಕಾವಲು ಕಾಯಲು ನೇಮಕ ಮಾಡಿದ್ದ. ಇಂತಹ ಸಮಯದಲ್ಲಿ ಯಾರು ಕೂಡ ಅವಳನ್ನು ನೋಡುವುದು ಮಾತನಾಡಿಸುವುದು ಯಾರಿಂದಲು ಸಾಧ್ಯವಾಗುತ್ತಿರಲಿಲ್ಲ. ಆಗ ವಿಷ್ಣು ಲಕ್ಷ್ಮಿಯ ನೆನಪು ಮಾಡಿಕೊಂಡಾಗ ಗೋವರ್ದನ ಗಿರಿಯ ಅರಮನೆಗೆ ಬರುವುದು ಅಷ್ಟು ಸುಲಭವಾಗಿರಲಿಲ್ಲ. ಒಂದು ಉಪಾಯ ಮಾಡಿದ. ಗಾಳಿಯ ರೂಪ ತಾಳಿ ಅರಮನೆಯ ಕಿಟಕಿಯ ಮೂಲಕ ಯುವರಾಣಿಯ ಅರಮನೆಗೆ ಬಂದನು. ಆಗ ಲಕ್ಷ್ಮಿಯು ವಿಷ್ಣುವನ್ನು ಗುರುತಿಸಿ. ಇಬ್ಬರು ಮಿಲನ ಹೊಂದಿದರು. ಇದರಿಂದಾಗಿ ಒಂದೇ ಮಲ್ಲಿಗೆ ಹೂವಿನ ತೂಕವಿದ್ದ ಯುವರಾಣಿಯು ಎರಡು ಮಲ್ಲಿಗೆ ಹೂವಿನ ತೂಕವಾದಳು. ಇದರಿಂದಾಗಿ ಅವಳನ್ನು ನೋಡಿಕೊಳ್ಳುವ ದಾಸಿಯರಿಗೆ ಭಯವಾಗಿ ಅವರು ಪರಿಪರಿಯಾಗಿ ಬೇಡಿಕೊಂಡರು. ಅವಳು ನಾನು ಯಾವ ಪುರುಷನ ಜೊತೆ ಕೂಡಿಲ್ಲವೆಂದು ಹೇಳುತ್ತಾಳೆ. ಆಗ ಈ ವಿಷಯವನ್ನು ರಾಜನಿಗೆ ಹೇಳಿದಾಗ ರಾಜನು ಮಗಳನ್ನು ಕರೆದು ತೂಕ ಹಾಕಿ ನೋಡಿದಾಗ ಒಂದು ಮಲ್ಲಿಗೆ ಹೂವಿನ ತೂಕ ಇರಬೇಕಾದವಳು ಎರಡು ಮಲ್ಲಿಗೆ ಹೂವಿನ ತೂಕ ಆಗಿರುವುದು ಕಂಡುಬರುತ್ತದೆ. ಇದರಿಂದಾಗಿ ನೊಂದ ರಾಜನು ಮಗಳನ್ನು ಮುದ್ದಿಸಿ ರಮಿಸಿ ಕೇಳುತ್ತಾನೆ. ಆದರೂ ಅವಳು ನಡೆದಿರುವ ವಿಷಯವನ್ನು ಹೇಳಿದಾಗ ಅದಕ್ಕೆ ರಾಜನು ಒಪ್ಪದೆ ಆಳುಗಳನ್ನು ಕರೆದು ಇವಳು ನೀತಿಗೆಟ್ಟವಳು ಪರಪುರುಷನೊಂದಿಗೆ ಕೂಡಿದ್ದಾಳೆ. ಹೀಗಾಗಿ ಇವಳನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ. ಆಗ ಲಕ್ಷ್ಮಿಯು ತನ್ನ ತಂದೆಯಲ್ಲಿ ಒಂದು ಬಿನ್ನಹ ಮಾಡಿಕೊಳ್ಳುತ್ತಾಳೆ. ಅದೇನೆಂದರೆ ನಾನು ತಪ್ಪು ಮಾಡಿದ್ದೆನೆಂದು ನೀವು ಭಾವಿಸಿದ್ದೀರಿ. ಇಲ್ಲೇ ಗೋವರ್ಧನ ಗಿರಿಯಲ್ಲಿ ಕೃಷ್ಣನ ಗೋವುಗಳಿವೆ. ಅವುಗಳಲ್ಲಿ ಒಂದು ಪ್ರಾಯದ ಹಸುವಿನ ಕರು ತಂದು ಅದನ್ನು ನನಗೆ ಯಾವ ರೀತಿ ಹಾರೈಕೆ ಮಾಡಿದಿರೊ ಹಾಗೆ ಅದಕ್ಕು ಮಾಡಿ, ಅದು ಮೂರು ತಿಂಗಳೊಳಗಾಗಿ ಗರ್ಭವತಿ ಯಾಗದಿದ್ದರೆ ನಾನು ನೀವು ಹೇಳಿದಂತೆ ಕಾಡಿಗೆ ಹೋಗುವುದಾಗಿ ಹೇಳಿದಳು. ದೊರೆಯು ಪ್ರಾಯಕ್ಕೆ ಬಂದ ಹಸುವಿನ ಕರು ತಂದು ಅದನ್ನು ನೆಲಮಾಳಿಗೆಯಲ್ಲಿಟ್ಟು, ಅದಕ್ಕೆ ಬೇಕಾಗುವ ನೀರು ಮೇವನ್ನು ಅಲ್ಲಿಯೆ ಕೊಡುತ್ತಿದ್ದರು. ಮತ್ತು ಪ್ರತಿನಿತ್ಯ ಅದರ ತೂಕ ಮಾಡುತ್ತಾರೆ. ಅದು ಆರಂಭದಲ್ಲಿ ಒಂದು ಮಲ್ಲಿಗೆ ಹೂವಿನ ತೂಕ ಹೊಂದಿತ್ತು. ಮೂರು ತಿಂಗಳ ನಂತರ ತೂಕ ನೋಡಿದಾಗ ಎರಡು ಮಲ್ಲಿಗೆ ಹೂವಿನ ತೂಕವಾಗಿರುವುದು ತಿಳಿಯುತ್ತದೆ. ರಾಜನಿಗೆ ಆಶ್ಚರ್ಯವಾಗಿ ಇವರು ನರಮಾನವರಿಗೆ

ಗರ್ಭಧರಿಸಿಲ್ಲ. ಸೂರ್ಯ ಚಂದ್ರರಿಗೆ ಗರ್ಭಧರಿಸಿದ್ದಾರೆಂದು ತಿಳಿದು ಅವರನ್ನು ಕಾಡಿಗೆ ಕಳುಹಿಸದಂತೆ ಮನೆಯಲ್ಲಿಯೆ ಇಟ್ಟು ಸಾಕಿದನು. ಅವರಿಗೆ ಒಂಭತ್ತು ತಿಂಗಳು ತುಂಬಿ ಲಕ್ಷ್ಮಿಯು ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ.

"ಸಿಕ್ಕಮನೆ ಹಿಟ್ಟೊತ್ತು ಅಂಬೋ
ಎಷ್ಟೊತ್ತಿನಾಗ ಮಹಾಲಕ್ಷ್ಮಿ
ಒಂದು ಗಂಡು ಮಗುವನ್ನು ಹಡದಾಳಣ್ಣ ಗಳಿಗಾಗೋ॥
ಸಂಜೆ ಉಂಬೊತ್ತಿಗೆ ಹುಟ್ಟಿದೋನಿಕೆ ಸನ್ಮುತ್ತಿ
ಎಂದು ಹೆಸರಿಟ್ಟರು ಶಂಕರನೆ.
ಸಿಕ್ಕಮಾನೆ ಹಿಟ್ಟೊನ್ತಿಗೆ
ಹುಟ್ಟಿದನಲ್ಲಾ
ಮಹಾಲಕ್ಷ್ಮಿ ಮಗುವಿಗೆ
ಸಿಕ್ಕಮುತ್ತಿ ಎಂದು
ಹೆಸರಿಟ್ಟರಂತೋ ಗಳಿಗಾಗೋ" *(ಚಲುವರಾಜು, ಜುಂಜಪ್ಪ, ಪುಟ ೩೨, ೧೯೯೭)*

ಈ ಇಬ್ಬರ ಮಕ್ಕಳಿಗು ಸಿಕ್ಕಮುತ್ತಿ ಮತ್ತು ಸನ್ನಮುತ್ತಿ ಎಂದು ನಾಮಕರಣ ಮಾಡುವರು. ಪುನಹ ಹಸುವಿನ ಕರು ಮತ್ತು ಲಕ್ಷ್ಮಿ ಇಬ್ಬರೂ ಗರ್ಭಧರಿಸುವರು. ಒಂಬತ್ತು ತಿಂಗಳ ನಂತರ ಇಬ್ಬರು ಒಂದೊಂದು ಹೆಣ್ಣು ಮಕ್ಕಳಿಗೆ ಜನ್ಮ ನೀಡುವರು. ಇವರು ಬಾಲ್ಯಾವಸ್ಥೆಯನ್ನು ದಾಟಿ ಪ್ರಾಯಕ್ಕೆ ಬಂದಾಗ ಹಸುವಿನ ಕರುವಿನ ಗರ್ಭದಲ್ಲಿ ಹುಟ್ಟಿದ ಹೆಣ್ಣು ಮಗುವಿಗೆ ಮತ್ತು ಲಕ್ಷ್ಮಿ ಹೊಟ್ಟೆಯಲ್ಲಿ ಹುಟ್ಟಿರುವ ಗಂಡುಮಗು ಅಂದರೆ ಚಿತ್ತಮುತ್ತಿಗೆ ಕೊಟ್ಟು ಮದುವೆ ಮಾಡುವರು. ಲಕ್ಷ್ಮಿಹೊಟ್ಟೆಯಲ್ಲಿ ಹುಟ್ಟಿರುವ ಹೆಣ್ಣು ಮಗುವಿಗೆ ಹಸುವಿನ ಹೊಟ್ಟೆಯಲ್ಲಿ ಹುಟ್ಟಿದ ಗಂಡು ಮಗುವಿಗೆ ಕೊಟ್ಟು ಮದುವೆ ಮಾಡಿದರು. ಹೀಗೆ ಇವರಿಬ್ಬರಿಗೂ ಮದುವೆಯಾಗಿ ಮಕ್ಕಳಾಗಿ ಇರುವಂತಹ ಕಾಲದಲ್ಲಿ ಇವರ ಮನೆದೇವರುಗಳಾದ ಚಿತ್ರದೇವರು ಮತ್ತು ಕಾಟಮದೇವರು ಬಂದು ಗೋವರ್ಧನ ಗಿರಿಯ ರಾಜನನ್ನು ಈ ರೀತಿ ಕೇಳುತ್ತಾರೆ. ಇವರ ಕುಲ ಗೋಕುಲ ಇವರು ನಮ್ಮನ್ನು ಪೂಜೆ ಮಾಡಲು ಯೋಗ್ಯರು. ಇವರಿಂದ ಕಾಡುಗೊಲ್ಲರ ಕುಲ ಬೆಳೆಯಬೇಕಿದೆ. ಇವರನ್ನು ನಮ್ಮ ಜೊತೆ ಕಳುಹಿಸಿಕೊಡಿರಿ ಎಂದು ಕೇಳಿದಾಗ ಗೋವರ್ದನ ಗಿರಿರಾಜನು ಸಂತೋಷಪಟ್ಟು ಸನ್ನಮುತ್ತಿ ಮತ್ತು ಸಿತ್ತಮುತ್ತಿಯವರನ್ನು ಕಳುಹಿಸಿಕೊಡುತ್ತಾನೆ. ಆ ನಂತರ ಇವರು ಚಿತ್ರದೇವರನ್ನು ಚಿತ್ತಮುತ್ತಿ ವಂಶಸ್ಥರು ಕಾಟಮದೇವರನ್ನು ಸನ್ನಮುತ್ತಿ ವಂಶಸ್ಥರು ಪೂಜೆ ಮಾಡಿಕೊಂಡಿದ್ದರು.

ಈ ಕತೆಯನ್ನು ಗಮನಿಸಿದಾಗ ಕಾಡುಗೊಲ್ಲರ ಮೂಲ ದೇವರುಗಳಾದ ಕಾಟುಮಲಿಂಗ ಮತ್ತು ಚಿತ್ರಲಿಂಗ ಇವರು ಶೈವ ಪರಂಪರೆಯ ಹಿನ್ನೆಲೆಯುಳ್ಳವರು. ಇಲ್ಲಿ ಪ್ರಸ್ತಾಪಿಸಿದ ಕತೆಯನ್ನು

ಗಮನಿಸಿದರೆ ವೈಷ್ಣವೀಕರಣಗೊಂಡಿರುವುದು ಕಂಡುಬರುತ್ತದೆ. ಕತೆ ಹೇಳವ ವ್ಯಕ್ತಿ ವೈಷ್ಣವೀಕರಣದ ಪ್ರಭಾವಕ್ಕೆ ಒಳಗಾಗಿರುವುದರಿಂದ ಚಿತ್ತಮುತ್ತಿ ಮತ್ತು ಸನ್ನಮುತ್ತಿ ಶಿವನ ವರದಿಂದ ಹುಟ್ಟಿದರು ಎಂಬುದರ ಬದಲು, ಅಂದರೆ ವಿಷ್ಣುವಿನ ಮೂಲದಿಂದ ಹುಟ್ಟಿದರು ಎಂಬುದನ್ನು ಪ್ರಸ್ತುತ ಪಡಿಸುತ್ತಪಡಿಸಲು ಪ್ರಯತ್ನಿಸಿದಂತಿದೆ. ಇದು ಹೇಗಾಯಿತು ಎಂಬುದಕ್ಕೆ ಹಿ. ಚಿ. ಬೋರಲಿಂಗಯ್ಯನವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು ಮಧ್ಯಕಾಲಿನ ಕರ್ನಾಟಕದ ಚಾರಿತ್ರಿಕ ಘಟ್ಟ ಶಂಕರಾಚಾರ್ಯ ರಾಮಾನುಜಾಚಾರ್ಯ ಮತ್ತು ಮದ್ವಾಚಾರ್ಯರು ತಮ್ಮ ವೈದಿಕ ಮೌಲ್ಯಗಳ ಪುನರುತ್ತಾನಕ್ಕೆ ಪ್ರಯತ್ನ ಪಟ್ಟ ಸಂದರ್ಭಗಳಲ್ಲಿಯೆ ಅನೇಕ ದೇಸಿ ಪಂಥಗಳು ಕೂಡ ತಮ್ಮತಮ್ಮ ಪರಂಪರೆ ಉಳಿವಿಗಾಗಿ ಹೋರಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿಯೇ ಶೈವ ಮತ್ತು ವೈಷ್ಣವ ಪಂಥಗಳು ತಮ್ಮ ತಮ್ಮ ಜನಪ್ರಿಯತೆಗಾಗಿ ಅನೇಕ ಹೊಸ ಹೊಸ ಪಂಥಗಳನ್ನು ಹುಟ್ಟು ಹಾಕಿದವು. ಆದರೆ ದೇಸಿ ಪಂಥಗಳನ್ನು ಮುನ್ನೆಡೆಸುವ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಬೈರವ, ಹಾಗೂ ತಿರುಪತಿ ವೆಂಕಟರಮಣ ಹೆಚ್ಚು ಜನಪ್ರಿಯರಾದರು. ತಿರುಪತಿಯ ದಾಸಯ್ಯಗಳು, ಚುಂಚನಗಿರಿಯ ಜೋಗಪ್ಪಗಳು, ಮಾದಪ್ಪನ ಕಂಸಾಳೆ ಗುಡ್ಡದವರು, ಹಾಗೂ ಮಂಟೇಸ್ವಾಮಿ ನೀಲಗಾರರು ಒಂದು ರೀತಿಯಲ್ಲಿ ದೇಸಿ ಪುರೋಹಿತರಾಗಿ ಸ್ಥಳಿಯ ಜೀವನ ಕ್ರಮಗಳ ಚೌಕಟ್ಟಿನಲ್ಲಿಯೇ ತಮ್ಮ ತಮ್ಮ ಪಂಥಕ್ಕಾಗಿ ಭಕ್ತರನ್ನು ಸಂಪಾದಿಸಿದರು (ಬೋರಲಿಂಗಯ್ಯ ಹೀ ಚಿ., 'ಬುಡಕಟ್ಟು ದೈವಾರಧಾನೆ', ಪುಟ ೪೬, ೨೦೧೫)

ಈ ಅಭಿಪ್ರಾಯ ಕಾಡುಗೊಲ್ಲರಿಗೂ ಅನ್ವಯವಾಗುತ್ತದೆ. ಏಕೆಂದರೆ ಕಾಡುಗೊಲ್ಲರು ಕೂಡ ವೈಷ್ಣವೀಕರಣಗೊಳ್ಳುತ್ತಿದ್ದಾರೆ. ಕಾಡುಗೊಲ್ಲರ ಎಲ್ಲಾ ಬೆಡಗುಗಳು ವೈಷ್ಣವೀಕರಗೊಂಡಿಲ್ಲ. ಮಾರಗೊಲ್ಲರಿಂದ ಬೇರೆಯಾದ ಕರಡಿಗೊಲ್ಲರು ಮತ್ತು ಸನ್ನೆಯಗೊಲ್ಲರಿಂದ ಬೇರೆಯಾದ ಸೋಮನಗೊಲ್ಲರು ಮಾತ್ರ ವೈಷ್ಣವೀಕರಣಗೊಂಡಿರುವುದು ಕಂಡುಬಂದಿದೆ. ಕರಡಿಗೊಲ್ಲರು ವೈಷ್ಣವೀಕರಣಗೊಳಲು ಮ್ಯಾಸಬೇಡರ ಹೆಣ್ಣು ಕರಿಓಬವ್ವ, ಕರಡಿಬುಳ್ಳಪ್ಪನ ದೊಡ್ಡಮಗ ಚಿತ್ತಯ್ಯನಿಗೆ ಮ್ಯಾಸ ಬೇಡರ ಕುಲದಲ್ಲಿ ಹೆಣ್ಣು ತಂದು ಮದುವೆ ಮಾಡಿರುವುದು ಕಾರಣವಾಗಿರಬಹುದು. ಹಾಗೆಯೇ ಸನ್ನೇರಗೊಲ್ಲರಿಗೂ ಸೊಮನಗೊಲ್ಲರಿಗು ನಡೆದ ಜಗಳವು ಕಾರಣವಾಗಿರಬಹುದು. ಎನ್ನುವುದಕ್ಕಿಂತ ಬೋರಲಿಂಗಯ್ಯನವರು ಹೇಳಿರುವ ರೀತಿ ವೈಷ್ಣವೀಕರಣಗೊಂಡಿದ್ದಾರೆ. ಬುಡಕಟ್ಟು ಧರ್ಮಕ್ಕೆ ಹೊಂದಿಕೆಯಾಗುವಂತೆ ಮಾಡಿಕೊಂಡಿದ್ದಾರೆ.

ಇದೇ ಕತೆಯಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದು. ಸಿರಾ ತಾಲ್ಲೂಕಿನವರು ಒಂದು ರೀತಿ ಹೇಳಿದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಮತ್ತೊಂದು ರೀತಿಯಲ್ಲಿ ಹೇಳುತ್ತಾರೆ. ಕತೆಯಲ್ಲಿ ಭಿನ್ನತೆ ಇದ್ದರು ಥೀಮ್ ಮಾತ್ರ ಒಂದೇ ಆಗಿದೆ. ಅದು ಯಾವ ರೀತಿ ಎಂದರೆ ಹಸುವಿನ ಕರು ಗಂಡು ಮಗುವನ್ನು ಹಾಕಿತು. ಅದೇ ರೀತಿ ಲಕ್ಷ್ಮಿದೇವಿಯು ಹೆಣ್ಣು ಮಗುವನ್ನು ಹಡೆದಳು. ಅವರಿಬ್ಬರ ಮದುವೆಯಾಗಿ ಕಾಡುಗೊಲ್ಲರು ಉತ್ಪತ್ತಿಯಾದರು ಎಂದು ಹೇಳುತ್ತಾರೆ. ಹಾಗೆಯೇ ಮತ್ತೊಂದು ಅಭಿಪ್ರಾಯದ ಪ್ರಕಾರ ಹಸುವಿನ ಕರು ಒಂದು ಗಂಡು ಮಗುವನ್ನು ಮತ್ತು ಒಂದು ಹೆಣ್ಣು ಮಗುವನ್ನು ಹಾಕಿತು. ಅದೇ ರೀತಿ ಲಕ್ಷ್ಮಿಯು ಕೂಡ ಒಂದು ಹೆಣ್ಣು ಒಂದು ಗಂಡಿಗೆ ಜನ್ಮ ನೀಡಿದಳು.

ಇವರಿಬ್ಬರ ಮದುವೆ ಮಾಡುವುದರ ಮೂಲಕ ನೆಂಟರು ಬಂಟರಾದರು ಎಂದು ಹೇಳುತ್ತಾರೆ. ಈ ಕತೆಯು ಮುಖ್ಯವಾಗಿ ಕುಲಗಳು ಯಾವ ರೀತಿ ಹುಟ್ಟಿಕೊಂಡವು ಎಂಬುದನ್ನು ಹೇಳುತ್ತದೆ. ಪ್ರಾರಂಭದಲ್ಲಿ ಯಾರೊಂದಿಗೆ ಸಂಬಂಧ ಬೆಳೆಸಬೇಕು ಎಂಬುದು ಗೊತ್ತಾಗದ ಕಾರಣ ಅಣ್ಣ ತಮ್ಮಂದಿರು ನೆಂಟರು ಬಂಟರಾದರು.

ಕತೆಯಲ್ಲಿ ಏನೇ ಭಿನ್ನತೆ ಇದ್ದರೂ ಈ ಕತೆಯು ಕಾಡುಗೊಲ್ಲರ ಅಸ್ತಿತ್ವವನ್ನು ಚಾರಿತ್ರಿಕತೆಯನ್ನು ರೂಪಿಸಿಕೊಟ್ಟಿದೆ. ಇಂದಿಗೂ ವೈವಾಹಿಕ ಸಂಬಂಧಗಳು ಏರ್ಪಡುವುದು ಈ ಕತೆಯ ಆಧಾರದ ಮೇಲೆಯೇ ಮತ್ತು ಇವರು ಗೋವಿನ ಹೊಟ್ಟೆಯಲ್ಲಿ ಹುಟ್ಟಿದರು ಎಂಬುವುದನ್ನು ಪ್ರತಿನಿಧಿಸುತ್ತದೆ. ಪಶುಪಾಲಕ ಸಮುದಾಯಗಳಲ್ಲಿ ಪ್ರಚಲಿತವಿರುವ ಸೃಷ್ಟಿ ಪುರಾಣಗಳನ್ನು ಗಮನಿಸಿದರೆ, ಸಾಮಾನ್ಯವಾಗಿ ಅವರ ಸಮುದಾಯದ ಮೂಲ ಪುರುಷರು ಅಥವಾ ಮಹಿಳೆಯರು ಒಂದಿಲ್ಲ ಒಂದು ಕಥೆಯಲ್ಲಿ ಅವರ ಸಾಕುಪ್ರಾಣಿಗಳಿಂದಲೂ ಪ್ರಾರಂಭವಾಗಿರುತ್ತದೆ.

ಗೋವರ್ಧನ ಗಿರಿರಾಜನ ಮಗಳ ಹೆಸರು ಸ್ಪಷ್ಟವಾಗಿಲ್ಲ ಜೊತೆಗೆ ಕಾಡುಗೊಲ್ಲರು ಶೈವ ಸಂಸ್ಕೃತಿಯ ಆರಾಧಕರು. ಈ ಕತೆಯ ನಾಯಕಿಯಾದ ಗೋವರ್ಧನಗಿರಿ ರಾಜನ ಮಗಳು ಅನೈತಿಕ ಸಂಬಂಧದ ಮೂಲಕ ಗರ್ಭಧರಿಸಿರುವ ಸಂಭವವುಂಟು. ಇದನ್ನು ಸಮಾಜ ಕೀಳಾಗಿ ಕಂಡ ಕಾರಣದಿಂದ ತಮ್ಮ ಪಾವಿತ್ರತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಕಲ್ಪಿತವಾದಂತಹ ಕತೆಯನ್ನು ಸೃಷ್ಟಿಮಾಡಿರಬಹುದೆಂಬ ಅನುಮಾನ ಕಾಡುತ್ತದೆ. ಆ ಕಾರಣದಿಂದ ಇವರು ಯಾರ ಮಕ್ಕಳು ಎಂದು ಸಮಾಜ ಕೇಳಿದಾಗ, 'ದೇವರ ಮಕ್ಕಳು' ಎಂದು ಹೇಳುವ ಮೂಲಕ ನೈತಿಕತೆಯನ್ನು ಕಾಪಾಡಿಕೊಂಡು ಬಂದಿದೆ, ಎಲ್ಲಾ ಬುಡಕಟ್ಟು ಕಾವ್ಯಗಳಲ್ಲಿ ಈ ರೀತಿಯ ಕೆಲಸ ನಡೆದಿರುವುದು ಕಂಡು ಬರುತ್ತದೆ. ಒಂದು ಕಾಲದಲ್ಲಿ ಅನೈತಿಕತೆಯನ್ನು ಒಪ್ಪಿಕೊಂಡ ಬುಡಕಟ್ಟು ಸಮುದಾಯ ನಾಗರಿಕ ಸಮಾಜದ ಕಡೆ ಮುಖ ಮಾಡಿದ ತಕ್ಷಣ ಈ ರೀತಿಯ ಬದಲಾವಣೆಯನ್ನು ಮಾಡಿಕೊಂಡಿರುವ ಸಾಧ್ಯತೆಯೇ ಹೆಚ್ಚು.

ಪರಾಗಸ್ಪರ್ಶವಾಗದೆ ಯಾವ ಜೀವಿಯು ಗರ್ಭಧರಿಸುವುದಿಲ್ಲ ಹಾಗಾಗಿ ತಾವು ಪವಿತ್ರರು ಎಂದು ಹೇಳಿಕೊಳ್ಳುವ ಸಲುವಾಗಿ ಒಂದು ಬೆಡಗಿನವರು ನಾವು ಸೂರ್ಯನ ವರದಿಂದ ಹುಟ್ಟಿರುವುದಾಗಿ ಹೇಳಿಕೊಂಡರೆ ಮತ್ತೊಂದು ಬೆಡಗಿನವರು ತಾವು ಚಂದ್ರನ ವರದಿಂದ ಹುಟ್ಟಿರುವುದಾಗಿ ಹೇಳಿಕೊಳ್ಳುತ್ತಾರೆ. ಪ್ರಕೃತಿಯ ನಿಯಮದ ಪ್ರಕಾರ ಯಾವ ಪ್ರಾಣಿಯೇ ಪರಸ್ಪರ ವಿರುದ್ಧವಾದ ಜೀವಿಗೆ ಜನ್ಮ ನೀಡುವುದಿಲ್ಲ. ಆದರೂ ಈ ಕತೆಯು ಕಾಡುಗೊಲ್ಲರ ಮೂಲ ಶೋಧಿಸುವಲ್ಲಿ ಮೊದಲನೆ ಆಕಾರವಾಗಿರುವುದನ್ನು ಗಮನಿಸಬೇಕಾದುದು ಮಹತ್ವದ ವಿಚಾರ. ಇಲ್ಲಿ ಶೈವ ಮತ್ತು ವೈಷ್ಣವ ಧರ್ಮವನ್ನು ಸಂಕರ ಮಾಡುವಲ್ಲಿ ಸಮುದಾಯ ಸೋಲನ್ನು ಅನುಭವಿಸಿರುವುದನ್ನು ಕಾಣಬಹುದು. ಇಲ್ಲ ಆಗಿರುವ ತಪ್ಪಿನಿಂದಾಗಿ ಎರಡು ಬೆಡಗುಗಳಲ್ಲಿ ಒಬ್ಬರು ವೈಷ್ಣವ ಪರಂಪರೆಯನ್ನು ಪುಷ್ಟಿಕರಿಸಿದರೆ ಇನ್ನೊಬ್ಬರು ಶೈವ ಪರಂಪರೆಯನ್ನು ಪುಷ್ಟಿಕರಿಸಿದ್ದಾರೆ. ಎಷ್ಟೋ ಸಮುದಾಯಗಳು

ತಮ್ಮ ಹೆಣ್ಣು ತಪ್ಪು ಮಾಡಿದಾಗ ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟಿರುವ ಕಾರಣದಿಂದ ಅವರ ಹೊಟ್ಟೆಯಲ್ಲಿ ಹುಟ್ಟಿರುವ ಮಕ್ಕಳುಗಳೆ ಕಾಡುವಾಸಿಗಳು ಆಗಿರುವ ಸಾಧ್ಯತೆ ಉಂಟು.

೩.೧. ಚಿತ್ತಮುತ್ತಿ (ಸೂರ್ಯನ ಕುಲ)

ಚಿತ್ತಮುತ್ತಿ ಕುಲದಲ್ಲಿ ಕರಡಿಗೊಲ್ಲರು ಚಿತ್ತಗೊಲ್ಲರು, ಮಾರಗೊಲ್ಲರು, ಬಾಲಗೊಲ್ಲರು, ಅಬಾಲಗೊಲ್ಲರು, ಕಂಚಿಗೊಲ್ಲರು,), ಬಡಗೊಲ್ಲರು, ತೋಳನಗೊಲ್ಲರು, ಕೆಂಗುರಿಗೊಲ್ಲರು, ಈ ಎಲ್ಲ ಬೆಡಗುಗಳು ಏಳೇಳು ಗುಡಿಕಟ್ಟುಗಳನ್ನು ಒಳಗೊಂಡಿವೆ. ಈ ಬೆಡಗುಗಳಿಗೆ ಅಮವಾಸ್ಯೆಯ ದೇವರು ಚಿತ್ರಲಿಂಗ. ಇವರ ಕಟ್ಟೆಮನೆ ಕರಿಓಬ್ಬವ್ವನಹಳ್ಳಿಯಲ್ಲಿದೆ.

೩.೧..೧. ಕರಡಿಗೊಲ್ಲರು

ನಾನು ಚಿಕ್ಕವನಿಂದಲೂ ಕೇಳುತಿದ್ದ ಕತೆ ಎಂದರೆ ಕರಡಿಗೊಲ್ಲರ ಕತೆ ಚಿತ್ತಮುತ್ತಿ ಬೆಡಗಿನಲ್ಲಿ ಬರುವ ಈ ಬೆಡಗು ಕರಿಓಬ್ಬವ್ವನಹಳ್ಳಿ ಕಟ್ಟೆಮನೆಗೆ ಸೇರಿದ ಕುಲವಾಗಿದೆ. ಈ ಬೆಡಗಿನ ಮನೆದೇವರು ಚಿತ್ರದೇವರು ಕರಡಿಗೊಲ್ಲರು ತಾಳಿ ಕಟ್ಟುವುದಿಲ್ಲ.

ಈ ಕತೆಯ ಆರಂಭ ಈ ರೀತಿ ಇದೆ, ಸನ್ನೆಯಗೊಲ್ಲರ ಹೆಣ್ಣುಮಗಳು ಮಂಚಿಕಾಟಮ್ಮ ಎನ್ನುವ ಮಹಿಳೆ ಪ್ರತಿನಿತ್ಯ ಹಾಲು ಮೊಸರು ಮಾರಲು ಮದ್ದನ ಕುಂಟೆಯಿಂದ ಚಿತ್ರದುರ್ಗಕ್ಕೆ ಹೋಗುತಿದ್ದಳು. ಮದ್ದನಕುಂಟೆ ಮತ್ತು ಚಿತ್ರದುರ್ಗಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಮರಡಿಬೆಟ್ಟವಿದೆ. ಆ ಬೆಟ್ಟದಲ್ಲಿ ಕರಡಿಗಳು ವಾಸವಾಗಿದ್ದವು. ಅದರಲ್ಲಿ ಒಂದು ಕರಡಿಯು ತುಂಬ ಬುದ್ದಿವಂತ ಕರಡಿ. ಈ ಕರಡಿಯು ದಾರಿಯಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರಿಗೆ ತೊಂದರೆ ಕೊಡುತ್ತಿರುತ್ತದೆ. ಗಂಡಸರಾದರೆ ಅವರ ಸಂತೆಯ ಗಂಟನ್ನು ಕಸಿದುಕೊಂಡು ಕಳುಹಿಸುತ್ತದೆ. ಜೊತೆಗೆ ಉಗುರಿನಿಂದ ಜಿಬುರಿ ಗಾಯಗೊಳಿಸುತ್ತದೆ. ಹೆಂಗಸರಾದರೆ ಹೊತ್ತುಕೊಂಡುಹೋಗಿ ಗುಹೆಯಲ್ಲಿ ಇಟ್ಟುಕೊಳ್ಳುತ್ತಿತ್ತು. ಇದು ಯಾರಿಗೂ ಎದುರುತ್ತಿರಲಿಲ್ಲ. ಆದರೆ ಮಂಚಿಕಾಟಮ್ಮನ ಸೋದರ ಮಾವ ಮ್ಯಾಕೆ ಮಾರಗೊಂಡನಿಗೆ ಮಾತ್ರ ಹೆದುರುತಿತ್ತು ಎಂದು ಹಿರಿಯರು ಹೇಳುತ್ತಾರೆ.

ಒಂದು ದಿನ ಮಂಚಿಕಾಟಮ್ಮ ಹಾಲು ಮೊಸರು ಮಾರಿ ಇಂದಿರುಗಿ ಬರುವಾಗ ಡೊಂಬರ ಆಟ ಪ್ರಾರಂಭವಾಗುತ್ತದೆ. ಈ ಆಟ ನೋಡುತ್ತ ನಿಂತ ಕಾಟಮ್ಮನಿಗೆ ಹೊತ್ತು ಮುಳುಗಿದುದೆ ಗೊತ್ತಾಗುವುದಿಲ್ಲ. ಹಿಂದೆ ಕಾಡುಗೊಲ್ಲರ ಹೆಣ್ಣು ಮಕ್ಕಳು ಹಟ್ಟಿಯ ಬಿಟ್ಟು ಒಂದು ದಿನಾನೂ ಹೊರಗೆ ಇರುವಂತಿರಲಿಲ್ಲ. ಇದರಿಂದಾಗಿ ಕಾಟಮ್ಮ ಭಯ ಬೀತಳಾಗಿ ಓಡಿ ಓಡಿ ಬರುತ್ತಿರುತ್ತಾಳೆ. ಅದೇ ಸಮಯಕ್ಕೆ ಸರಿಯಾಗಿ ಕರಡಿಯು ದಾರಿಯ ಮಧ್ಯದಲ್ಲಿ ಒಂದು ಗುಂಡಿಯನ್ನು ತೆಗೆದುಕೊಂಡು ಅದು ಕಾಣದಂತೆ ಹೊಂಗೆಯ ಸೊಪ್ಪು ಮುಚ್ಚಿ ಕಾಯುತ್ತ ಕುಳಿತಿತ್ತು. ಮೊದಲೆ ಅಮಾವಾಸ್ಯೆಯ ಕತ್ತಲು ಬೇರೆ ಕಾಟಮ್ಮ ಕಣ್ಣು ಕಾಣದೆ ಗುಂಡಿಯಲ್ಲಿ ಬಿದ್ದಳು ಆಗ ಕರಡಿಯು ಅವಳ ಸೋದರ ಮಾವನ ಧ್ವನಿಯಲ್ಲಿ ಮಾತನಾಡಿ ಉಗಣೆ ಬಳ್ಳಿಯ ಸಹಾಯದಿಂದ ಕಾಟಮ್ಮನನ್ನು ಮೇಲಕ್ಕೆ ಎಳೆದುಕೊಂಡು ತನ್ನ ಗುಹೆಗೆ ತೆಗೆದುಕೊಂಡು ಹೋಯಿತು.

ಎಷ್ಟು ದಿನವಾದರೂ ಕಾಟಮ್ಮ ಬಾರದಿರುವುದನ್ನು ಕಂಡು ಮ್ಯಾಕೆ ಮಾರಗೊಂಡ ಇದ್ದ ಒಂದು ಹೆಣ್ಣು ಕೈ ಬಿಟ್ಟುಹೋದುದಕ್ಕೆ ನೊಂದುಕೊಂಡು ಸುಮ್ಮನಾದನು. ಒಂದು ದಿನ ಮ್ಯಾಕೆ ಮಾರಗೊಂಡನು ಮೇಕೆ ಮೇಯಿಸಲೆಂದು ಮರಡಿ ಬೆಟ್ಟಕ್ಕೆ ಬಂದನು. ಆ ದಿನ ಕರಡಿ ತನ್ನ ಮೈಗೆ ಹತ್ತಿರುವ ಕಾಯಿಲೆಯನ್ನು ವಾಸಿಮಾಡಿಕೊಳ್ಳಲು ಉತ್ತರ ದೇಶಕ್ಕೆ ಹೋಗಿತ್ತು. ತನ್ನ ಕರಡಿಮರಿಗಳನ್ನು ಜೋಪಾನವಾಗಿ ನೋಡಿಕೊಳ್ಳುವಂತೆ ಹೇಳಿ ಹಲಸಿನ ಹಣ್ಣು, ಮಾವಿನಹಣ್ಣು, ಅಂಟು ತರುವುದಾಗಿ ಹೇಳಿ ತಾನು ಬರುವುದರೊಳಗಾಗಿ ದ್ವಾಸೆ ಹೋಯ್ಯುವಂತೆ ಹೇಳಿತು. ಅದೇ ರೀತಿ ಮಾಡುತ್ತೇನೆಂದು ಕರಡಿಗೆ ಕಾಟಮ್ಮ ನಂಬಿಕೆ ಬರುವಂತೆ ಮಾತನಾಡಿದಳು. ಕಾಟಮ್ಮನನ್ನು ನಂಬಿ ತನ್ನ ಮರಿಗಳನ್ನು ಅವಳ ಕೈಗೆ ಕೊಟ್ಟು. ಗುಹೆಗೆ ದೊಡ್ಡದೊಂದು ಗುಂಡುದಬ್ಬಿ ಹೋಗಿತ್ತು. ಅದೇ ಬೆಟ್ಟಕ್ಕೆ ಮೇಕೆ ಕಾಯಲು ಬಂದ ಮ್ಯಾಕೆ ಮಾರುಗೊಂಡ ಬೇಸರವನ್ನು ಕಳೆಯುವ ಸಲುವಾಗಿ ತನ್ನ ಪಳುಗಾಯಿಯನ್ನು ನುಡಿಸಲು ಪ್ರಾರಂಭಿಸಿದನು. ಈ ಪಳುಗಾಯಿ ಧ್ವನಿ ಕೇಳಿದ ಕಾಟಮ್ಮ ಇದು ನನ್ನ ಸೋದರ ಮಾವನ ಧ್ವನಿಯೆ ಹೊರತು ಬೇರೆಯವರ ಧ್ವನಿಯಲ್ಲ ಎಂದು ಗುರುತಿಸಿ. ಕೂಗಿದರೆ ಧ್ವನಿ ಕೇಳುವುದಿಲ್ಲವೆಂದು ತಿಳಿದು ಗುಹೆಯ ಹತ್ತಿರ ಮೇಯುತ್ತಿದ್ದ ಮೇಕೆ ಮರಿಯ ಕಿವಿ ಹಿಡಿದು ಜಗ್ಗಿದಳು. ಅದು ದೊಡ್ಡ ಧ್ವನಿಯನ್ನು ಮಾಡಿ ಕೂಗಿಕೊಂಡಿತು. ಆಗ ಮ್ಯಾಕೆ ಮಾರುಗೊಂಡ ಗುಹೆಯ ಬಳಿ ಬಂದು ನೋಡಿದಾಗ ಕಾಟಮ್ಮನ ಕೈಯನ್ನು ಗುರುತಿಸಿ ಗುಹೆಗೆ ಅಡ್ಡವಾಗಿ ಇಟ್ಟಿರುವ ಗುಂಡನ್ನು ಪಕ್ಕಕ್ಕೆ ಸರಿಸಿ ಗುಯೆಯ ಒಳಗೆ ನುಗ್ಗಿ ಚೆನ್ನಾಗಿ ಹೆಂಚುಕಾಯಿಸಿ ಹಂಚಿನ ಮೇಲೆ ಕರಡಿ ಮರಿಗಳ ತಲೆಯನ್ನು ಕಡಿದು ರಕ್ತ ಬೀಳುವಂತೆ ಮಾಡಿ ಕಾಟಮ್ಮನ್ನು ಕರೆದುಕೊಂಡು ಹಟ್ಟಿಗೆ ಬಂದನು.

ಇನ್ನೊಂದು ಅಭಿಪ್ರಾಯದ ಪ್ರಕಾರ ಕಾಟಮ್ಮನನ್ನು ಕರಡಿ ಮದುವೆಯಾಗಿತ್ತು. ಅವಳಿಗೆ ಮಕ್ಕಳು ಕೂಡ ಆಗಿದ್ದವು ಎಂದು ಹೇಳುತ್ತಾರೆ. ನನ್ನ ಅನಿಸಿಕೆಯ ಪ್ರಕಾರ ಕರಡಿ ಕೇವಲ ಸಂಕೇತ ಮಾತ್ರ ಆಗಿರುವ ಸಾಧ್ಯತೆ ಇದೆ. ಆದರೆ ಕಾಡುಗೊಲ್ಲರು ತಮ್ಮ ಕುಲದ ಪಾವಿತ್ರತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಈ ಕತೆಯನ್ನು ಸೃಷ್ಟಿ ಮಾಡಿರಬಹುದು. ಕಾಡುಗೊಲ್ಲರು ತಮ್ಮ ಪ್ರಾವಿತ್ರತೆಯನ್ನು ವೈಭವೀಕರಿಸುವ ಸಲುವಾಗಿ ಸತ್ಯಕ್ಕೆ ಹತ್ತಿರವಾಗಿರುವ ಕಥೆಯನ್ನು ತಿರುಚಿ ಹೇಳಿದ್ದಾರೆ.

ಈ ಕಥೆಯಲ್ಲಿ ಜಾಂಬವಂತನ ಉಲ್ಲೇಖ ಬರುತ್ತದೆ. ಜಾಂಬವಂತ ಎಂದರೆ ಮಾದಿಗ ಸಮುದಾಯದ ವ್ಯಕ್ತಿ. ಆ ಕಾರಣದಿಂದ ನಾವು ಮಾದಿಗರನ್ನು ಮದುವೆ ಆದರೆ ತಮ್ಮ ಪಾವಿತ್ರತೆಗೆ ದಕ್ಕೆ ಬರುತ್ತದೆ ಎಂದು ಮೊದಲೇ ಕಾಟಮ್ಮನನ್ನು ಮದುವೆಯಾದ ಜಾಂಬುವಂತನನ್ನು ಕೊಂದು ಮೇಕೆ ಮಾರಗೊಂಡ ಮಂಚಿಕಾಟಮ್ಮನನ್ನು ಮದುವೆ ಆಗುತ್ತಾನೆ. ಇದರ ಜೊತೆಗೆ ಕಾಟಮ್ಮನಿಗೆ ಎರಡು ಮಕ್ಕಲು ಕೂಡ ಆಗಿರುತ್ತವೆ. ಅವರುಗಳನ್ನು ಕೊಂದು ಶಿಶುಹತ್ಯೆ ಶಾಪಕ್ಕೆ ಗುರಿಯಾಗುತ್ತಾನೆ. ಈ ಕಾರಣದಿಂದ ಅವನಿಗೆ ಹುಟ್ಟಿದ ಮಾಕ್ಕಳು ಸಾಯುತ್ತಿರುತ್ತವೆ. ಇದರಿಂದಾಗಿ ಪಾಶ್ಚಾತ್ತಾಪ ಪಟ್ಟು ಮೇಕೆ ಮಾರಗೊಂಡ ತನ್ನ ಮನೆದೇವರಾದ ಚಿತ್ರ ದೇವರ ಮೊರೆ ಹೋದಾಗ ಚಿತ್ರದೇವರು ನಿನಗೆ ಶಿಶುಹತ್ಯೆಯಪಾಪ ಮೆಟ್ಟಿಕೊಂಡಿರುವುದರಿಂದ ನಿನ್ನ ಮಕ್ಕಳು ಸಾಯುತ್ತಿದ್ದಾರೆ. ಇದಕ್ಕೆ ಪರಿಹಾರವೆಂದರೆ ಮುಂದೆ ಹುಟ್ಟುವ ಮಕ್ಕಳಿಗೆ ಕರಡಿಬುಳ್ಳಪ್ಪ ಎಂದು ಹೆಸರು ಕರೆದರೆ ಅವರು ಬದುಕುವ ಸಾಧ್ಯತೆ

ಇದೆ. ಎಂದು ಚಿತ್ರದೇವರು ಹೇಳಿದಾಗ, ಮೇಕೆ ಮಾರಗೊಂಡ ಅದೇ ರೀತಿ ಮಾಡಿದನು. ಹಾಗಾಗಿ ಕರಡಿಬುಳ್ಳಪ್ಪ ಮತ್ತು ಬುಳ್ಳನಾಯಕ ಸಾವಿನಿಂದ ಪಾರಾದರು. ಈ ಕರಡಿಯ ನೆನಪಿಗಾಗಿ ಇವರನ್ನು ಕರಡಿಗೊಲ್ಲರು ಎಂದು ಕರೆಯುವ ವಾಡಿಕೆ ಇದೆ.

೩.೧.೨. ಬಡಗೊಲ್ಲರು

ಕರಡಿಗೊಲ್ಲರಲ್ಲಿಯೇ ಇದೊಂದು ಉಪಬೆಡಗು ಇದು ಸೃಷ್ಟಿಯಾಗಲು ಕಾರಣ ಕರಡಿಬುಳ್ಳಪ್ಪನ ಹೆಂಡತಿಯಾದ ಕರಿಓಬವ್ವಳಿಗೆ ಮಕ್ಕಳಾಗಿರುವುದಿಲ್ಲ. ಈ ಕಾರಣದಿಂದ ಕರಡಿಬುಳ್ಳಪ್ಪ ತಾನು ಸಂಪಾದಿಸಿರುವ ಆಸ್ತಿಯನ್ನು ತನ್ನ ಮಕ್ಕಳಿಗೆ ಸಮನಾಗಿ ಹಂಚುವಂತಹ ಸಮಯದಲ್ಲಿ ಕರಿಓಬವ್ವ ಕರಡಿಬುಳ್ಳಪ್ಪನನ್ನು ಕುರಿತು ನನ್ನಿಂದ ಬಂದಿರುವ ಎಲ್ಲಾ ಆಸ್ತಿಯನ್ನು ಹಿರಿಯ ಹೆಂಡತಿ ಮಕ್ಕಳಿಗೆ ಹಂಚಿಕೊಟ್ಟರಿ ನನಗೆ ಮಾತ್ರ ಏನು ಕೊಡಲಿಲ್ಲವೆಂದು ಕೇಳಿದಾಗ ನಿನಗೆ ಏನು ಬೇಕು ಕೇಳು ಕೊಡುತ್ತೇನೆಂದು ಹೇಳುತ್ತಾನೆ. ಅದಕ್ಕೆ ಓಬವ್ವ ಹಿರಿಯ ಹೆಂಡತಿಯ ಮಗನಾದ ಚಿತ್ತಯ್ಯನನ್ನು ದತ್ತುಕೊಡಬೇಕೆಂದು ಕೇಳಿಕೊಳ್ಳುತ್ತಾಳೆ. ನಂತರ ನಾನು ನಿನ್ನ ಜೊತೆಗೆ ಸಂಸಾರ ಮಾಡಿದ ನೆನಪಿಗಾಗಿ ನನ್ನ ಹೆರಿನಲ್ಲಿ ಒಂದು ಕಟ್ಟೆಮನೆ ಕಟ್ಟಿಸಿಕೊಡಬೇಕೆಂದು ಕೇಳುತ್ತಾಳೆ. ಅವಳು ಕೇಳಿದ ಬಯಕೆಯನ್ನು ಇಡೇರಿಸಿದನು ಕರಡಿಬುಳ್ಳಪ್ಪ. ಚಿತ್ತಯ್ಯನನ್ನು ದತ್ತು ಪಡೆದುಕೊಂಡ ಓಬವ್ವ ಅವನಿಗೆ ತನ್ನ ಸಮುದಾಯವಾದ ಮ್ಯಾಸಬೇಡರ ಹೆಣ್ಣು ತಂದು ಮದುವೆ ಮಾಡುತ್ತಾಳೆ. ಇದರಿಂದಾಗಿ ಉಳಿದ ಆರು ಜನ ಅಣ್ಣ-ತಮ್ಮಂದಿರು ಕರಡಿಬುಳ್ಳಪ್ಪನ ಮಕ್ಕಳು ಕರಿಓಬವ್ವನ ಮಗನನ್ನು ಶೋಷಣೆ ಮಾಡಲು ಶುರುಮಾಡಿದರು. ಹೀನ ಜಾತಿಯವನೆಂದು ಹಟ್ಟಿಯ ಒಳಗೆ ಸೇರಿಸಿಕೊಳ್ಳುವುದಿಲ್ಲ ಜೊತೆಗೆ ದೇವರಿಗೂ ಕರೆಯುವುದಿಲ್ಲ. ಈ ರೀತಿ ಇರುವಂತಹ ಸಮಯದಲ್ಲಿ ದೊಡ್ಡದೇವರು ಮಾಡಬೇಕೆಂದು ಏಳುಕಂಬಿಗಳು ಒಂದು ಕಡೆ ಸೇರಬೇಕು ಇಲ್ಲದಿದ್ದರೆ ಚಿತ್ರದೇವರು ಕಾಟ ಕೊಡುತ್ತದೆಂದು ತಿಳಿದು ದೊಡ್ಡದೇವರು ಮಾಡಲು ತೀರ್ಮಾನಿಸುತ್ತಾರೆ. ಆ ಸಂದರ್ಭದಲ್ಲಿ ಏಳು ಕಂಬಿಗಳನ್ನು ಹರಿವಾಣದಲ್ಲಿ ಇಟ್ಟು ಅವುಗಳಿಗೆ ಅಭಿಷೇಕ ಮಾಡುವಂತಹ ಸಮಯದಲ್ಲಿ ಆರು ಜನರು ತಂದಿರುವ ಮೀಸಲು ಹಾಲು ಕಡಿಮೆ ಬೀಳುತ್ತವೆ. ಇದರಿಂದಾಗಿ ಮುಂದೆ ಏನು ಮಾಡಬೇಕೆಂದು ತೋಚದೇ ನೆಲ ಕೆರೆಯುತ್ತಾ ಕುಳಿತಿರುತ್ತಾರೆ. ಆಗ ಕರಿಓಬವ್ವನ ಸಾಕುಮಗ ಚಿತ್ತಯ್ಯ ಮಂಗಾರಿ ಬುರಡೆಯಲ್ಲಿ ಮೀಸಲು ಹಾಲುತಂದು ಅಭಿಷೇಕ ಮಾಡುತ್ತಾನೆ ಇದರಿಂದಾಗಿ ಹರಿವಾಣ ತುಂಬಿ ಹರಿಯುತ್ತದೆ. ಇದನ್ನು ನೋಡಿದ ಇವನ ತಮ್ಮಂದಿರು ಇವನ ಸತ್ಯಕ್ಕೆ ಮೆಚ್ಚಿ ಕುಲದಲ್ಲಿ ಸೇರಿಸಿಕೊಳ್ಳುತ್ತಾರೆ. ಇವನ ಕುಲವನ್ನು ಬಡಗೊಲ್ಲರು ಎಂದು ಕರೆಯುತ್ತಾರೆ. ಕಾರಣ ಆರು ಜನ ಅಣ್ಣ-ತಮ್ಮಗಳು ಹಡ್ಡೆಯಲ್ಲಿ ಮೀಸಲು ಹಾಲುತಂದು ಅಭಿಷೇಕ ಮಾಡಿದರೂ ತಂಬದಿರುವ ಹರಿವಾಣ ಕರಿಓಬವ್ವನ ಮಗ ಮಂಗಾರಿ ಬುರಡೆ ಎನ್ನುವುದು ಸಣ್ಣ ಕುಡಿಕೆ ರೀತಿಯಲ್ಲಿ ಇರುತ್ತದೆ ಅದರಲ್ಲಿ ತಂದಿರುವ ಮೀಸಲು ಹಾಲು ಹರಿವಾಣವನ್ನು ತುಂಬಿಸಿತು ಎಂದರೆ ಅವನು ಸತ್ಯವಂತ ಎಂದುಕೊಂಡು ಬಡಗೊಲ್ಲ ಎಂದು ಕರೆದರು. ಇವರು ಸಹ ಏಳು ಗುಡಿಕಟ್ಟುಗಳನ್ನು ಹೊಂದಿದ್ದು ಇವರಿಗೂ ಕರಡಿಗೊಲ್ಲರಿಗೂ ಯಾವುದೇ ರೀತಿಯ ತಾರತಮ್ಯ ಕಂಡುಬರುವುದಿಲ್ಲ ಇವರ ಮುಖ್ಯ ಗಡಿಕಟ್ಟು ಪರುಶುರಾಮಪುರ ಇವರ ಏಳು ಗುಡಿಕಟ್ಟುಗಳೆಂದರೆ

೧. ಪರುಶುರಾಮಪುರ, ಚಳ್ಳಕೆರೆ ತಾಲ್ಲೂಕು.

೨. ಹೊರಕೆ ದೇವರಪುರ ಹೊಳಲ್ಕೆರೆ ತಾಲ್ಲೂಕು.

೩. ಕೆರೆಯಗಳಹಳ್ಳಿ ಹೊಳಲ್ಕೆರೆ ತಾಲ್ಲೂಕು.

೪. ದೇಪುರದಹಟ್ಟಿ ಹೊಳಲ್ಕೆರೆ ತಾಲ್ಲೂಕು.

೫. ದೊಡ್ಡಕಿಟ್ಟದಹಳ್ಳಿ ಹೊಳಲ್ಕೆರೆ ತಾಲ್ಲೂಕು.

೬. ಚಿಕ್ಕಕಿಟ್ಟದಹಳ್ಳಿ ಹೊಳಲ್ಕೆರೆ ತಾಲ್ಲೂಕು.

೭. ಕೊಟ್ಟಿಗೇಣು ಹೊಳಲ್ಕೆರೆ ತಾಲ್ಲೂಕು.

೩.೧.೩. ತೋಳನ ಗೊಲ್ಲರು

ಕಾಡುಗೊಲ್ಲರಲ್ಲಿ ತೋಳನ ಬೆಡಗು ಎಂಬುದೊಂದಿದೆ ಆ ಬೆಡಗು ಸೃಷ್ಟಿಗೊಂಡ ಬಗ್ಗೆ ಅವರಲ್ಲಿ ಒಂದು ಕತೆ ರೂಢಿಯಲ್ಲಿದೆ. ಇದು ಕರಡಿಗೊಲ್ಲರ ಬೆಡಗಿಗೆ ಸೇರಿದ ಬೆಡಗು. ಇದೊಂದು ಪ್ರಾಣಿಯ ಹೆಸರು. ಕಾಡುಗೊಲ್ಲರು ಬುಡಕಟ್ಟು ಸಮುದಾಯವಾಗಿರುವುದರಿಂದ ಇವರ ಬೆಡಗಿನ ಸಾಕಷ್ಟು ಹೆಸರುಗಳು ಪ್ರಾಣಿಗಳ ಹೆಸರಿನಲ್ಲಿವೆ. ಉದಾ: ಕೆಂಗುರಿಗೊಲ್ಲರು, ಕೋಣನಗೊಲ್ಲರು, ಕರಡಿಗೊಲ್ಲರು, ಸನ್ನೇಯಗೊಲ್ಲರು, ಅದೇ ರೀತಿ ತೋಳಯ್ಯನ ಗೊಲ್ಲರು ಕೂಡ. 'ಮಂಗರಾಯಪ್ಪನವರು' ಹೇಳುವಂತೆ ಕಾಡುಗೊಲ್ಲರ ಇಬ್ಬರು ಅಣ್ಣ-ತಮ್ಮಗಳು ಒಂದೇ ಮನೆಯಲ್ಲಿ ವಾಸಮಾಡುತ್ತಿರುತ್ತಾರೆ. ಅವರಲ್ಲಿ ಮೊದಲನೆಯವನು ಚಿತ್ತಯ್ಯ ಬೇಸಾಯ ಮಾಡುತ್ತಿರುತ್ತಾನೆ. ಎರಡನೇಯವನು ಕದುರಣ್ಣ ಕುರಿಕಾಯುತ್ತಿರುತ್ತಾನೆ. ಇವನೊಂದಿಗೆ ಅತ್ತಿಗೆ ಕುರಿಕಾಯಲು ಹೋಗುತ್ತಿರುತ್ತಾಳೆ. ಚಿತ್ತಯ್ಯನೊಂದಿಗೆ ಬೇಸಾಯದಲ್ಲಿ ಕದುರಣ್ಣನ ಹೆಂಡತಿ ಕೈ ಜೋಡಿಸುತ್ತಿರುತ್ತಾಳೆ. ಕುರಿಕಾಯಲು ಹೋಗುತ್ತಿದ್ದ ಅತ್ತಿಗೆ ಮೈದನು ಅನೈತಿಕವಾಗಿ ಕೂಡಿದ ಕಾರಣದಿಂದ ಚಿತ್ತಯ್ಯನ ಹೆಂಡತಿ ಗರ್ಭವತಿಯಾದಳು, ಈ ವಿಷಯ ತಿಳಿದ ಚಿತ್ತಯ್ಯ ಇದಕ್ಕೆ ಕಾರಣ ಯಾರು ಎಂದು ಕೇಳಿದಾಗ ನನಗೆ ಗೊತ್ತಿಲ್ಲ ತೋಳಕ್ಕೆ ಬಸಿರಾಗಿರಬಹುದು ಎಂದು ಹಾರಿಕೆ ಉತ್ತರ ಕೊಡುತ್ತಾನೆ. ತಮ್ಮ ತಾನು ಮಾಡಿದ ತಪ್ಪನ್ನು ತೋಳದ ಮೇಲೆ ಹಾಕಿದ ಕಾರಣದಿಂದ ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ತೋಳದ ಕುಲದವರಾದರು.

೩.೧.೪. ಕೆಂಗುರಿಗೊಲ್ಲರು

ಇದು ಮಾರಗೊಲ್ಲರ ಉಪಬೆಡಗು. ಇದು ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ತಾನೆ ಕುರಿಯಾಗುವ ಪ್ರಸಂಗದಿಂದ ಈ ಬೆಡಗು ಸೃಷ್ಟಿಯಾಗಿದೆ. ಯಾರೋ ಒಬ್ಬ ಕಾಡುಗೊಲ್ಲರ ನಾಯಕ ತಮ್ಮ ದೇವರಾದ ಚಿತ್ರದೇವರು ಮಾಡುವಂತಹ ಸಮಯದಲ್ಲಿ ಚಿತ್ರದೇವರಿಗೆ ಬಲಿಕೊಡಲು ಅಥವಾ ವ್ಯಾಸಕೊಯ್ಯಲು ಏಳು ಗುಡಿಕಟ್ಟಿನ ಅಣ್ಣ-ತಮ್ಮಗಳು ಹಿರಿಯ ಲಿಂಗವಿರುವ ಚಿತ್ರಹಳ್ಳಿಯಲ್ಲಿ ಎಲ್ಲರೂ ಒಂದು ಕಡೆ ಸೇರಿದಾಗ ದೇವರು ಹೊಳೆಗೆ ಹೋಗಿ ಪುನಃ ಹಟ್ಟಿಯ ಒಳಗೆ ಬರಬೇಕಂದರೆ ಹಟ್ಟಿಯ ಹೊರಗೆ ಬೀಡುಬಿಟ್ಟು ಅಲ್ಲಿ ಕೆಂದ ಕುರಿಯನ್ನು ಬಲಿಕೊಟ್ಟು ಮಾಂಸದ ಅಡುಗೆಯನ್ನು

ಮಾಡಿ ದೇವರಿಗೆ ಎಡೆಹಾಕಿ ಆನಂತರು ಅಲ್ಲಿ ಸೇರಿರುವ ಎಲ್ಲ ಒಕ್ಕಲುಗಳು ಜೊತೆಯಲ್ಲಿ ಊಟಮಾಡಿ ದೇವರನ್ನು ಹಟ್ಟಿಯ ಒಳಗೆ ತರುವ ಪದ್ಧತಿಯನ್ನು ಹಿಂದಿನಿಂದಲು ಮಾಡಿಕೊಂಡು ಬರುತ್ತಿದ್ದರು ಅದೇ ರೀತಿಯಾಗಿ ಈ ಭಾರಿಯು ಹಾಗೆ ಮಾಡಲು ಪ್ರಯತ್ನಿಸಿದಾಗ ತಮ್ಮಲ್ಲಿರುವ ಎಲ್ಲಾ ಕುರಿಹಟ್ಟಿಗಳನ್ನು ಹುಡುಕಿದರೂ ಕೆಂದ ಕುರಿಸಿಗುವುದಿಲ್ಲ. ಆ ಕಾರಣದಿಂದ ದೇವರ ಗೌಡನು ಒಂದು ದಿನ ಸಮಯವನ್ನು ತೆಗೆದುಕೊಂಡು ಕೆಂದು ಕುರಿಯನ್ನು ಹುಡುಕಿಕೊಂಡು ಬರಲು ಹೋಗುತ್ತಾನೆ. ಇಡೀ ಗೊಲ್ಲಾಳಿಕೆಯನ್ನು ತಿರುಗಿದರೂ ಕೆಂದಕುರಿ ಸಿಗುವುದಿಲ್ಲ. ಆದುದರಿಂದ ಕೊಟ್ಟ ಮಾತನ್ನು ಹೇಳಿ ಉಳಿಸಿಕೊಳ್ಳಲಿ ಎಂದು ಯೋಚಿಸುತ್ತಾ ಕುಳಿತಿದ್ದಾಗ ಅವನಿಗೆ ಹೊಳೆದ ಉಪಾಯವೆಂದರೆ ತಲೆಮರಸಿಕೊಳ್ಳುವುದು ಅದೇ ರೀತಿಯಾಗಿ ಅವನು ತನ್ನ ಕುರಿಹಟ್ಟಿಯಲ್ಲಿ ಕುರಿಮರಿಯನ್ನು ಮುಚ್ಚು ದೊಡ್ಡುಬುಟ್ಟಿಯಲ್ಲಿ ಸೇರಿಕೊಳ್ಳುತ್ತಾನೆ. ಇದನ್ನು ಕಾಡುಗೊಲ್ಲರು ಜಲ್ಲೆ ಎಂದು ಕರೆಯುತ್ತಾರೆ. ಕೊಟ್ಟಿರುವ ಸಮಯ ಮೀರುತ್ತಾ ಬಂದಿದ್ದರಿಂದ ಹಟ್ಟಿಯ ಯಜಮಾನರು ಗೌಡನನ್ನು ಹುಡುಕುತ್ತಾ ಕುರಿಹಟ್ಟಿಗೆ ಬಂದರು. ಅಲ್ಲಿ ಗೌಡನಿಗೆ ಬದಲಾಗಿ ಕಂದುಬಣ್ಣದ ಕುರಿ ಕಂಡುಬರುತ್ತದೆ. ಆಗ ಯಜಮಾನರು ಗೌಡಬರುವುದು ತಡವಾಗಬಹುದು ಎಂದು ಆ ಕಂದುಬಣ್ಣದ ಕುರಿಯನ್ನು ಬಲಿಕೊಟ್ಟು ಅದರ ಮಾಂಸದ ಅಡಿಗೆ ಮಾಡಿ ಗೌಡನಿಗಾಗಿ ಕಾಯುತ್ತಾರೆ. ಎಷ್ಟು ಹೊತ್ತಾದರೂ ಗೌಡ ಬಾರದಿರುವುದನ್ನು ನೋಡಿ ತಮ್ಮ ದೇವರನ್ನು ಕೇಳುತ್ತಾರೆ. ಆಗ ಚಿತ್ರದೇವರು ನೀವು ನನಗೆ ಬಲಿಕೊಟ್ಟಿರುವುದು ಗೌಡನನ್ನು ಎಂದು ಹೇಳುತ್ತದೆ. ಹಾಗಾಗಿ ಗೌಡನ ವಂಶದವರನ್ನು ಕೆಂಗುರಿಗೊಲ್ಲರ ಎಂದು ಕರೆಯಿರಿ ಎಂದು ಅವರ ದೇವರು ಹೇಳಿದ್ದರಿಂದ ಅವರು ಕೆಂಗುರಿಗೊಲ್ಲರಾದರು.

೩.೨. ಚಂದ್ರಮುತ್ತಿ(ಸನ್ನ(ಣ್ಣ)ಮುತ್ತಿ) (ಚಂದ್ರನ ಕುಲ)

ಚಂದ್ರಮುತ್ತಿ ಕುಲದಲ್ಲಿ ಸನ್ನೆಯಗೊಲ್ಲರು, ಯಗಡೆಗೊಲ್ಲರು, ಅಬ್ಬಗೊಲ್ಲರು, ಸೋಮನಗೊಲ್ಲರು, ಅಜ್ಜೆರಗೊಲ್ಲರು, ಕೋಣನಗೊಲ್ಲರು, ಬಮ್ಮನಗೊಲ್ಲರು, ಕಟ್ಟಿಗೆಗೊಲ್ಲರು, ಉಪಗಳಗೊಲ್ಲರು, ಕೊಡತೆಗೊಲ್ಲರು, ಮುಂತಾದವು ಉಪಬೆಡಗುಗಳಿವೆ ಇವು ಸಹ ಏಳೇಳು ಗುಡಿಕಟ್ಟೆಗಳನ್ನು ಹೊಂದಿವೆ. ಇವರು ಕಾಟಮಲಿಂಗ, ಕೇತೆಲಿಂಗ, ಪಾತೇಲಿಂಗ, ಬೋರಪ್ಪ, ಸಿದ್ದಪ್ಪ ಮುಂತಾದ ದೈವಗಳನ್ನು ಆರಾಧಿಸುತ್ತಾರೆ. ಇವರ ಕಟ್ಟೆಮನೆ ತಾಳವಟ್ಟಿಯಲ್ಲಿದೆ.

೩.೨.೧. ಯಗಡೆಗೊಲ್ಲರು

ಯಗಡಮುತ್ತಿ ವಂಶಸ್ಥರಾದ ಇವರನ್ನ ಯಗಣ್ಣೇರು ಎಗಡೆರು ಎಂಬುದಾಗಿ ಕರೆಯುವ ವಾಡಿಕೆಯುಂಟು, ಇದು ಬಹಳ ಪ್ರಾಚೀನವಾದ ಬೆಡಗು. ಇವರು ಬೆಸ್ತರಹಳ್ಳಿ ಕಟ್ಟೆಮನೆಗೆ ಸೇರಿದವರು. ಈ ಕುಲದ ಹುಟ್ಟಿನ ಬಗ್ಗೆ ಈ ರೀತಿಯ ಕತೆ ಜನಜನಿತವಾಗಿದೆ. ಕಾಡುಗೊಲ್ಲರ ಮೂಲ ಸಾಂಸ್ಕೃತಿಕ ನಾಯಕರಾದ ಕಾಟಯ್ಯ, ಚಿತ್ತಯ್ಯ, ಓಬಳಾಪತಿ ಈ ಮೂವರು ಬೆಸ್ತರಹಳ್ಳಿ ಕಾವಲಿನಲ್ಲಿ ಶಿವನ ಮಕ್ಕಳಾಗಿ ಹುಟ್ಟಿ, ಗೋವರ್ಧನ ಗಿರಿಯಲ್ಲಿ ಬಾಳುತಿದ್ದ ಸಮಯದಲ್ಲಿ, ಶಿವ ಪಾರ್ವತಿಯರ ಆಜ್ಞೆಯ ಮೇರೆಗೆ ಚಿತ್ರಗಿರಿಯಲ್ಲಿ ದೊರೆಗಳಾಗಿ ಆಳ್ವಿಕೆ ಮಾಡುವಂತಹ ಸಮಯದಲ್ಲಿ ಚಿತ್ರಗಿರಿಯ

ಪಟ್ಟದ ಪ್ರಸ್ತಾಪವಾದಾಗ ನಿಯಮದ ಪ್ರಕಾರ ಎಲ್ಲರಿಗಿಂತಲೂ ಹಿರಿಯವನು ಕಾಟಯ್ಯನಿಗೆ ಪಟ್ಟವಾಗಬೇಕು. ಆಗ ಚಿತ್ತಯ್ಯ ಹಿರಿಯಣ್ಣನಿಗೆ ಪಟ್ಟ ಕಟ್ಟಿ ಮದುವೆ ಮಾಡಿ ತಾನೂ ಮದುವೆಯಾಗಬೇಕು ಎಂದು ಬಯಸಿದಾಗ, ಕಾಟಯ್ಯ ಹೇಳುತ್ತಾನೆ, "ನಾನು ಯೋಗಿ ಕಣಪ್ಪ ನನಗೆ ಮುತ್ತೈದೆ ತನ ಇಲ್ಲ ಮತ್ತು ದೊರೆತನ ನನಗಿಲ್ಲ ಸಿತ್ತಯ್ಯ ಮುತ್ತೈದೆ ತನ ನಿನಗಿದೆ ಮತ್ತು ಚಿತ್ರಗಿರಿಯ ಮುತ್ತಿನ ಅರಮನೆಯ ದೊರೆಯು ನೀನಾಗಬೇಕು" ಎಂದು ಹೇಳಿದಾಗ ಚಿತ್ತಯ್ಯನು ಮದುವೆಯಾಗಲು ಒಪ್ಪುತ್ತಾನೆ. ಆಗ ಹೆಣ್ಣು ಹುಡುಕಲು ಮೂರು ದಿಕ್ಕು ಹುಡುಕಿದರು ಸಿತ್ತಯ್ಯಗೆ ಸರಿಯಾದ ಹೆಣ್ಣು ದೊರೆಯುವುದಿಲ್ಲ. ಆಗ ಸೋತು ಸಿತ್ತಯ್ಯ ಕಾಟಯ್ಯನ ಮುಂದೆ ಹೇಳುತ್ತಾನೆ. ತಾನು ಮದುವೆ ಆಗುವ ಹೆಣ್ಣು ಈ ಭೂಮಿ ಮೇಲೆ ಹುಟ್ಟಿಲ್ಲ ಬಿಡು ಎಂದು ಹೇಳುತ್ತಾನೆ. ಆಗ ಕಾಟಯ್ಯ ಶಿವನು ಕೊಟ್ಟಿರುವ ಸಿಂತಾಮಣಿ ಹೊತ್ತಿಗೆ ತೆಗೆದು ನೋಡುತ್ತಾನೆ. ಅದರಲ್ಲಿ ಬೆಸ್ತರಹಳ್ಳಿಯ ಬ್ರಾಹ್ಮಣರ ಮನೆಯಲ್ಲಿ ಬಮ್ಮಯ್ಯನ ಮಗಳು ಮಾಳಮ್ಮ ಚಿತ್ತಯ್ಯನಿಗೆ ಸರಿಯಾದ ಹೆಣ್ಣು ಎಂದು ಬರೆದಿರುತ್ತದೆ. ಕಾಟಯ್ಯ ಚಿತ್ತಯ್ಯನಿಗೆ ಹೇಳಿದಾಗ ಚಿತ್ತಯ್ಯ ಬಮ್ಮಯ್ಯನ ಮನೆಗೋಗಿ ಹೆಣ್ಣು ಕೊಡಬೇಕು ಎಂದು ಕೇಳಿದಾಗ, ಆತ ಇವರು ಕಾಡುಗೊಲ್ಲರು ಇವರಿಗೆ ಪಗಡೆ ಆಡಲು ಬರುವುದಿಲ್ಲ ಪಗಡೆ ಆಟದಲ್ಲಿ ಇವರನ್ನು ಸೋಲಿಸಿ ಇವರ ಬಳಿ ಇರುವ ರಣದಲೆ, ರಣಸುರ, ರಣಬೇರೆಂಬ ಹವಳದ ಗೊಡಗು ಹೆಚ್ಚಿನ ಹೆಗ್ಗಾಳೆ ಮುಂತಾದವುಗಳನ್ನು ಪಡೆಯಬಹುದು ಎಂದು ಆಸೆಪಟ್ಟು, ಕಾಟಯ್ಯನನ್ನು ಪಗಡೆ ಆಡಲು ಹೇಳಿದಾಗ, 'ನೀವು ಬ್ರಾಹಣರು ನಿಮ್ಮ ಜೊತೆಗೆ ನಮಗೆ ಪಗಡೆ ಆಡಲು ಬರುವುದಿಲ್ಲವೆಂದಾಗ' ಹಾಗಾದರೆ ಹೆಣ್ಣು ಕೊಡುವುದಿಲ್ಲ ಎಂದು ಪಟ್ಟು ಹಿಡಿಯುತ್ತಾನೆ. ಆಗ ಕಾಟಯ್ಯ ಪಗಡೆ ಆಡಲು ಒಪ್ಪಿಕೊಳ್ಳುತ್ತಾನೆ. ಆಟದ ಪಣಕ್ಕೆ ನಾನು ಮಾಳಮ್ಮನನ್ನು ಕಟ್ಟುತ್ತೇನೆ ನೀವು ಏನು ಕಟ್ಟುತ್ತೀರಾ ಎಂದು ಕೇಳಿದಾಗ ನಮ್ಮ ಬಳಿ ಏನೂ ಇಲ್ಲ ಎಂದು ಇವರು ಹೇಳಿದಾಗ ಬಮ್ಮಯ್ಯ ನಿಮ್ಮ ಬಳಿ ಗೊಡಗು ಹೆಗ್ಗಾಳೆ ಇವೆ. ಅವನ್ನೆ ಕಟ್ಟಿರಿ ಎಂದು ಹೇಳಿದಾಗ, ಸರಿ ಆಟ ಪ್ರಾರಂಭವಾಗುತ್ತದೆ. ಮೂರು ಬಾರಿ ಆಟದಲ್ಲಿ ಬಮ್ಮಯ್ಯ ಸೋಲುತ್ತಾನೆ. ಆ ನಂತರ ಊರಿಗೆ ಹೋಗಿ ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತೇನೆಂದು ಸುಳ್ಳು ಹೇಳಿ ಹೋದವನು ತಿರುಗಿಬರಲಿಲ್ಲ. ಏಕೆಂದರೆ ಇವರು ಕಾಡುಗೊಲ್ಲರು ಊರಿನೊಳಗೆ ಬರುವುದಿಲ್ಲ ಎಂದು ತಿಳಿದು ಮನೆಯಲಿ ಅವಿತು ಕೊಳ್ಳುತ್ತಾನೆ. ಆಗ ಕಾಟಯ್ಯನಿಗೆ ಇವನ ಕಳ್ಳಾಟ ಗೊತ್ತಾಗಿ ಸುಳ್ಳು ಹೇಳಿದ ಬಮ್ಮಯ್ಯ ಉಪಾಯ ಮಾಡಿ ಮಾಯದ ಹುಲಿಯನ್ನು ತಯಾರು ಮಾಡಿ ಅದಕ್ಕೆ ಜೀವಕೊಟ್ಟು ಪ್ರತಿನಿತ್ಯ ಬಮ್ಮಯ್ಯ ಸಂಧ್ಯಾವಂದನೆ ಮಾಡುವ ಹಳ್ಳದ ಹತ್ತಿರ ಬಿಡುತ್ತಾನೆ. ಆಗ ಅದನ್ನು ನೋಡಿದ ಬಮ್ಮಯ್ಯ ಭಯದಿಂದ ಊರಿಗೆ ಬಂದು ಢಂಗುರ ಹೊಡೆಸುತ್ತಾನೆ. ಯಾರು ಹುಲಿಯನ್ನು ಹೊಡೆಯುತ್ತಾರೋ ಅವರಿಗೆ ಮಗಳನ್ನು ಕೊಡುವುದಾಗಿ ಢಂಗುರ ಸಾರಿಸಿದ. ಆಗ ಕಾಟಯ್ಯನು ಚಿತ್ತಯ್ಯಗೆ ಹೇಳಿ ಹುಲಿಯನ್ನು ಹೊಡಿಸಿದ ಮತ್ತು ಸಿತ್ತಯ್ಯ ಹುಲಿಯ ಉಗುರು ಮತ್ತು ಬಾಲ ಕತ್ತರಿಸಿ ಇಟ್ಟುಕೊಂಡಿದ್ದ. ಎಂದಿನಂತೆ ಪ್ರತಿನಿತ್ಯ ಬಟ್ಟೆತೊಳೆಯಲು ಹೋಗುತ್ತಿದ್ದ ಅಗಸರ ಸಿದ್ದ ತನ್ನ ಕುಂಟ ಕತ್ತೆಯನ್ನು ಹುಡುಕಿಕೊಂಡು ಬರುವ ಸಮಯದಲ್ಲಿ ಅವನು ಬರುವ ದಾರಿಯಲ್ಲಿ ಹುಲಿ ಸತ್ತು ಬಿದ್ದಿತ್ತು. ಇದನ್ನು ನೋಡಿದ ಸಿದ್ದ ಭಯಗೊಂಡು

ಬಂದು ನೋಡುತ್ತಾನೆ ಹುಲಿ ಸತ್ತು ಬಿದ್ದಿರುತ್ತದೆ. ಆಗ ಅಗಸರವನು ಗಂಗೆಮಾಳಮ್ಮನನ್ನು ಮದುವೆಯ ಆಗಬೇಕೆಂದು ಬಯಸಿ ಹುಲಿಯ ಉಗುರು ಮತ್ತು ಬಾಲ ಕತ್ತರಿಸಿಕೊಂಡು ಬ್ರಾಹ್ಮಣ ಬಮ್ಮಯ್ಯನ ಮನೆಯ ಮುಂದೆ ಹುಲಿ ಹೊಡೆದಿರುವುದಾಗಿ ಹೇಳಿ ಗಂಗೆಮಾಳಮ್ಮನ್ನು ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಆಗ ಸಿತ್ತಯ್ಯನು ಅಲ್ಲಿಗೆ ಬಂದು ಹುಲಿಯ ಚೂಪಾದ ಉಗುರು ಮತ್ತು ಬಾಲ ತೋರಿಸಿ ನಾನೆ ಹುಲಿ ಹೊಡೆದದ್ದು ಎಂದು ಹೇಳಿದಾಗ ಎಲ್ಲ ಜನರು ನೋಡಿ ಅಗಸರ ಸಿದ್ದನನ್ನು ಸುಣಕಲ್ಲಿಗೆ ಬಿರಿಹೊಯ್ದು. ಚಿತ್ತಯ್ಯನಿಗೂ ಮಾಳಮ್ಮಗೂ ಮದುವೆ ಮಾಡುವಂತೆ ಹೇಳುತ್ತಾರೆ. ಆಗ ಬ್ರಾಹ್ಮಣ ಬಮ್ಮಯ್ಯ ನಾವು ಬ್ರಾಹ್ಮಣರು ಮಾಂಸ ತಿಂಬೋರಲ್ಲ ಮದ್ದು ತಿಂಬೋರಲ್ಲ, ಅವರು ಕಾಡುಗೊಲ್ಲರು ಮಾಂಸ ಮದ್ದು ತಿನ್ನುತ್ತಾರೆ. ಅವರಿಗೆ ಹೆಣ್ಣು ಕೊಡಲು ಆಗುವುದಿಲ್ಲವೆಂದು ಉಲ್ಪಾ ಹೊಡೆಯುತ್ತಾನೆ. ಆಗ ಕಾಟಯ್ಯ ಇದಕ್ಕೊಂದು ಉಪಾಯ ಮಾಡುತ್ತಾನೆ. ಕೆಂದಕುರಿಯನ್ನು ಕೊಯ್ದು ಅದರ ಕೊಬ್ಬು ತೆಗೆದು ಹಸುವಿನ ತುಪ್ಪದ ಜೊತೆಗೆ ಸೇರಿಸಿ ತುಪ್ಪ ಮಾರುವ ವ್ಯಕ್ತಿಯಾಗಿ ಬ್ರಾಹ್ಮಣರ ಕೇರಿಗೆ ಬಂದು ತುಪ್ಪ ಮಾರುವಾಗ ಬಮ್ಮಯ್ಯ ಬಂದು ತುಪ್ಪ ಕೊಂಡುಕೊಳ್ಳುತ್ತಾನೆ. ಅವನು ಊಟ ಮಾಡುವಾಗ ಮನೆಯ ಮೇಲೆ ಹತ್ತಿ ನೋಡಿ ಕಾಟಯ್ಯ ಕೆಳಗೆ ಇಳಿದು ಬಂದು, ಬ್ರಾಹ್ಮಣ ನಿನ್ನ ಕುಲ ಇಲ್ಲಿಗೆ ಕೆಟ್ಟಿತು. "ನನಗೆ ನಿನ್ನ ತಂಗಿಕೊಟ್ಟರೆ ಕುಲ ಕೆಡುತ್ತೈತೆ ಅಂದೆ ಮಾಂಸ ತಿಂದ್ರೆ ಕುಲ ಕೆಡೊದಿಲ್ಲವೆ" (ಹಿರೇಮಠ ಎಸ್.ಎಸ್. 'ಜನಪದ ಸಮಾಜ ಸಂಸ್ಕೃತಿ' ಪುಟ ೩೫, ೨೦೦೫) ನೀನು ಊಟ ಮಾಡಿರುವುದು ಹಸುವಿನ ತುಪ್ಪವಲ್ಲ ಅದು ಕೆಂದಕುರಿಯ ತುಪ್ಪವೆಂದು ಹೇಳಿದಾಗ ಬಮ್ಮಯ್ಯ ತನ್ನ ತಂಗಿಯನ್ನು ಚಿತ್ತಯ್ಯಗೆ ಕೊಟ್ಟು ಮದುವೆ ಮಾಡುವನು. ಆಗ ಕಾಟಯ್ಯ ಬ್ರಾಹ್ಮಣ ಬಮ್ಮಯ್ಯನನ್ನು ಕಾಡುಗೊಲ್ಲರ ಕುಲಕ್ಕೆ ಸೇರಿಸಿಕೊಂಡನು. ಅವರನ್ನು ಹೆಗಡೆ ಗೊಲ್ಲರು ಎಂದು ಕರೆದು ಅವರಿಗೆ ಬೆಸ್ತರಹಳ್ಳಿಯನ್ನು ಕಟ್ಟೆಮನೆಯನ್ನಾಗಿ ಮಾಡಿಕೊಟ್ಟನು. ಬಿರುದಾವಳಿಗಳನ್ನು ಕೊಟ್ಟನು ಅಂದಿನಿಂದ ಯಗಡೆಗೊಲ್ಲರು ಚಿತ್ತಯ್ಯನಿಗೆ ನೆಂಟರಾಗಿ ಕಾಟಯ್ಯನಿಗೆ ತಮ್ಮನಾಗಿ ಬಾಳಿ ಬದುಕಿದರು.

ಬ್ರಾಹ್ಮಣರು ಯಾಗ ಮಾಡುವ ಸಂದರ್ಭದಲ್ಲಿ ಯಗಡೆಗೊಲ್ಲರು ಸೃಷ್ಟಿ ಯಾಗಿರಬಹುದು. ಏಕೆಂದರೆ ಅವರು ಕುಲ ಮೂಲ ಪುರುಷ ಬ್ರಾಹ್ಮಣ ಬಮ್ಮಯ್ಯಲಿಂಗನಾದುದರಿಂದ ಈತ ಬ್ರಾಹ್ಮಣ ಕುಲದಿಂದ ಗೊಲ್ಲನಾಗಿ ಬದಲಾದುದು ಒಂದು ವಿಶೇಷ. ಈ ಬೆಡಗಿನವರ ವಿಶೇಷವೆಂದರೆ ಅವರು ಅಮಾವಾಸ್ಯೆಯ ದೇವರು ಬಮ್ಮಯ್ಯನಾದುದರಿಂದ ಸೋಮವಾರದ ದಿನವನ್ನು ವಾರದ ದಿನವೆಂದು ಕರೆಯುತ್ತಾರೆ. ಪ್ರತಿ ಸೋಮವಾರ ಅವರು ಸಾಕಿರುವ ದನ ಎಮ್ಮೆ ಮುಂತಾದವುಗಳ ಹಾಲು ಕರೆಯದೆ ಅವುಗಳ ಹಾಲನ್ನು ಕರುಗಳು ಕುಡಿಯಲು ಬಿಡುತ್ತಾರೆ.

ಈ ಕತೆಗೆ ಪೂರಕವಾಗಿ 'ಎಸ್.ಎಸ್ ಹಿರೇಮಠ'ರವರು ತಮ್ಮ ಕೃತಿ 'ಜನಪದ ಸಮಾಜ ಸಂಸ್ಕೃತಿ' ಎಂಬುದರಲ್ಲಿ "ಇದು ಕಲ್ಪಿತ ಕತೆಯಾದರೂ ಸಾಂಸ್ಕೃತಿಕ ಹೋರಾಟದ ಮುಖ್ಯ ಅಸ್ತ್ರ ಮತ್ತು ಮಗ್ಗುಲು" *(ಹಿರೇಮಠ ಎಸ್.ಎಸ್. 'ಜನಪದ ಸಮಾಜ ಸಂಸ್ಕೃತಿ' ಪುಟ೩೧, ೨೦೦೫)* ಎಂದು ಅಭಿಪ್ರಾಯ ಪಟ್ಟಿದ್ದಾರೆ.

"ವರ್ಣ ಸಂಕರದ ಈ ಕತೆ ಕಾಡುಗೊಲ್ಲರಲ್ಲಿ ಸೃಷ್ಟಿ ಯಾಗಿರುವುದರಿಂದ ಅವರ ಪರವಾಗಿಯೇ ಇದೆ. ಬ್ರಾಹ್ಮಣರ ವರ್ಣಧರ್ಮದ ಅನುಲೋಮ ನೀತಿಯನ್ನು ದಿಕ್ಕರಿಸಲಾಗಿದೆ" *(ಹಿರೇಮಠ ಎಸ್.ಎಸ್. ಜನಪದ ಸಮಾಜ ಸಂಸ್ಕೃತಿ ಪುಟ ೩೭. ೨೦೦೫)*

ಇದು ಕಲ್ಪಿತ ಕತೆಯಾದರೂ ಇದರಲ್ಲಿ ವಾಸ್ತವಾಂಶ ಇಲ್ಲದಿಲ್ಲ ಕಾಡುಗೊಲ್ಲರಿಗೂ ಬ್ರಾಹ್ಮಣರಿಗೂ ಏನು ಮಾತುಕತೆ ನಡೆದಿತ್ತೊ ಅದೇ ರೀತಿ ಈ ಬೆಡಗಿನ ಆಚರಣೆ, ಸಂಪ್ರದಾಯಗಳು ಇನ್ನೂ ಮುಂದುವರಿಯುತ್ತಿರುವುದು ಕಂಡುಬರುತ್ತದೆ. ಈ ಬೆಡಗಿನವರು ಹಿರಿಯವರು ಸತ್ತಾಗ ಕರಿ ಮಾಡುತ್ತಾರೆ. ಇದಕ್ಕೆ ಪ್ರೇರಣೆ ಎಂದರೆ ಕಾಟಯ್ಯ ಸಿತ್ತಯ್ಯಗೆ ಗಂಗೆಮಾಳಮ್ಮನನ್ನು ಮದುವೆ ಮಾಡಲು ಬ್ರಾಹ್ಮಣನ ಬತ ಹಳಿಯಲು ಕೆಂದ ಕುರಿಯ ಮಾಂಸ ತಿನ್ನಿಸಿದ ಕಾರಣಕ್ಕಾಗಿ ಇಂದಿಗೂ ಕರಿ ಮಾಡುವ ಪದ್ದತಿ ಆಚರಣೆಯಲ್ಲಿದೆ.

ಕರಿ ಮಾಡುವುದೆಂದರೆ ವ್ಯಕ್ತಿಯೊರ್ವ ಸತ್ತ ಮೂರನೆಯ ದಿವಸ ಕಾಗೆಗೆ ಕೂಳು ಹಾಕುವ ಶಾಸ್ತ್ರಮಾಡುತ್ತಾರೆ. ಆ ದಿನ ಇತರೆ ಬೆಡಗಿನವರಿಗೆ ಸಿಹಿ ಊಟವನ್ನು ಹಾಕಿಸಿ ನಂತರ ಸಾಯಂಕಾಲ ತಮ್ಮ ಬೆಡಗಿನವರೊಂದಿಗೆ ಕುರಿ ಕೊಯ್ದು ಮಾಂಸದ ಆಹಾರ ಊಟ ಮಾಡುತ್ತಾರೆ. ಇದನ್ನೆ ಕರಿ ಮಾಡುವುದು ಎಂದು ಕರೆಯುತ್ತಾರೆ. ಇವರಲ್ಲಿ ಪ್ರಚಲಿತವಿರುವ ಕತೆಯಲ್ಲಿ ಹಲವಾರು ಸಮುದಾಯದವರು ಪರಸ್ಪರ ಸಂಬಂಧ ಹೊಂದಿರುವುದು ಕಂಡುಬರುತ್ತದೆ.

ಕಾಡುಗೊಲ್ಲರು ತಮ್ಮ ಜನಸಂಖೆಯನ್ನು ಹೆಚ್ಚಿಸಿಕೊಳ್ಳುವ ಉದ್ಧೇಶದಿಂದ ಅನಿವಾರ್ಯವಾಗಿ ಇನ್ನೊಂದು ಜಾತಿಯೊಂದಿಗೆ ವೈವಾಹಿಕ ಸಂಬಂಧ ಮಾಡಿರುವುದು ವಾಸ್ತವ ವಿಚಾರ. ಇಲ್ಲಿ ಬಹಳ ಆಶ್ಚರ್ಯಕರ ಸಂಗತಿ ಎಂದರೆ ಅತ್ಯಂತ ಕೆಳಮಟ್ಟದ ಸಮುದಾಯವೊಂದು ಸಮಾಜದಲ್ಲಿಯೇ ಅತ್ಯಂತ ಉಚ್ಚ ಜಾತಿಯಾದ ಬ್ರಾಹಣರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದರೆ ಜೊತೆಗೆ ಬ್ರಾಹ್ಮಣ ಬೊಮ್ಮೈಲಿಂಗನನ್ನು ಕಾಡುಗೊಲ್ಲರಾಗಿ ಪರಿವರ್ತನೆ ಮಾಡಿದ್ದಾರೆ. ಈ ಕತೆಯಲ್ಲಿ ಬಹಳ ಮುಖ್ಯವಾಗುವುದು ಆಹಾರದ ಜಿಜ್ಞಾಸೆ. ಸಸ್ಯಾಹಾರ ಆಹಾರ ಮತ್ತು ಮಾಂಸ ಆಹಾರಗಳಿಗಿರುವ ಮೈಲಿಗೆಯನ್ನು ಮುರಿದು ಹಾಕುವುದರ ಮೂಲಕ ಸಸ್ಯಾಹಾರ ಆಹಾರದ ಪ್ರತಿಪಾದಕನಾದ ಬೊಮ್ಮೈಲಿಂಗನನ್ನು ಮಾಂಸಾಹಾರ ಸ್ವೀಕರಿಸುವವನಾಗಿ ಮಾಡಿದ್ದಾರೆ. ಆ ಕಾಲಘಟ್ಟದಲ್ಲಿಯೇಗಬ್ರಾಹರನ್ನು ಪಗಡೆ ಆಟದಲ್ಲಿ ಸೋಲಿಸುವ ಸಾಮರ್ಥ್ಯ ಒಂದು ಸಾಮಾನ್ಯ ಬುಡಕಟ್ಟು ಸಮುದಾಯಕ್ಕೆ ಇದೆ ಎಂದರೆ ಆಶ್ಚರ್ಯವಲ್ಲವೇ. ಅಂದರೆ ಬ್ರಾಹಣರು ಪುಸ್ತಕ ಓದಿ ವಿದ್ಯಾಭ್ಯಾಸ ಕಲಿತರೆ ಕಾಡುಗೊಲ್ಲರು ಅಡವಿಯಲ್ಲಿ ತಿರುಗುವುದರ ಮೂಲಕ ವಿದ್ಯಾಭ್ಯಾಸವನ್ನು ಕಲಿತಿರುವುದು ಕಂಡು ಬರುತ್ತದೆ.

ಪಗಡೆ ಆಟದ ಮೂಲಕ ಕಾಡುಗೊಲ್ಲರನ್ನು ಸೋಲಿಸಿ, ಅವರ ಸಂಪತ್ತು ಪಡೆಯಬೇಕೆಂದು ಬಂದ ಬ್ರಾಹ್ಮಣ ತಾನೆ ಹಗ್ಗವನ್ನು ಕೊಟ್ಟು ಕೈಯನ್ನು ಕಟ್ಟಿಸಿಕೊಂಡಿರು ಘಟನೆ ಕಾಡುಗೊಲ್ಲರ ಚರಿತ್ರೆ ಒಳಗೆ ನಡೆದಿರುವುದು ಕಂಡು ಬಂದಿದೆ. ಯಾವ ಮಾರ್ಗದಲ್ಲಿ ಬಾಹ್ಮಣ ಬಂದರೂ ಅವನನ್ನು

ಕಾಡುಗೊಲ್ಲರು ಸೋಲಿಸಿದ್ದಾನೆ. ಬ್ರಾಹ್ಮಣನ ಬುದ್ಧಿವಂತಿಕೆ ಯಾವ ವಿಧದಲ್ಲೂ ಕೆಲಸ ಮಾಡದಿರುವುದು ಒಂದು ಬಗೆಯ ಸೋಜಿಗವೇ ಸರಿ ಅಷ್ಟೇ ಅಲ್ಲ ಇಡೀ ತನ್ನ ಬ್ರಾಹ್ಮಣತ್ವವನ್ನು ನಿರಾಕರಣೆ ಮಾಡಿ ಕಾಡುಗೊಲ್ಲರ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಅವರ ಆಚಾರ ವಿಚಾರಗಳನ್ನು ಅನುಸರಿಸಿಕೊಂಡು ಕಾಡುಗೊಲ್ಲರಂತೆ ತಾನೂ ಒಂದು ಕಟ್ಟೆ ಮನೆಯನ್ನು ಕಟ್ಟಿಕೊಂಡು ಇಂದಿಗೂ ಕೂಡ ಗೊಲ್ಲರಲ್ಲಿ ಒಂದು ಬೆಡಗಾಗಿರುವುದು ಕಂಡುಬರುತ್ತದೆ.

ಈ ಕತೆ ಶಿಷ್ಟ ಸಮುದಾಯದ ಮೇಲೆ ಪರಿಶಿಷ್ಟರು ಸಾಧಿಸಿದ ವಿಜಯವನ್ನು ಹೇಳುತ್ತದೆ. ಅಷ್ಟೆ ಅಲ್ಲ ಈ ಬೆಡಗಿನವರು ಹೆಚ್ಚಾಗಿ ಕುಂದುರುಪೆ ತಾಲ್ಲುಕಿನಲ್ಲಿ ಕಂಡುಬರುತ್ತಾರೆ. ಬೆಸ್ತರಹಳ್ಳಿ ಇವರ ಕಟ್ಟೆಮನೆಯಾಗಿದೆ.

೩.೨.೨. ಕೋಣನಗೊಲ್ಲರ ಕುಲ

ತಾಳವಟ್ಟಿ ಕಟ್ಟೆಮನೆಗೆ ಸೇರಿದ ಪ್ರಮುಖ ಬೆಡಗಾದ ಸೋಮಮುತ್ತಿ ವಂಶದಲ್ಲಿ ಹಲವಾರು ಉಪಬೆಡಗುಗಳು ಬರುತ್ತವೆ. ಅವುಗಳೆಂದರೆ ಬೊಮ್ಮನಗೊಲ್ಲರು, ಉಪಗಳಗೊಲ್ಲರು, ಕಟ್ಟಿಗೆಗೊಲ್ಲರು, ಕೊಡತೆಗೊಲ್ಲರು, ಮತ್ತು ಕೋಣನಗೊಲ್ಲರು ಎಂಬುದಾಗಿ ಅನೇಕ ಉಪಬೆಡಗುಗಳಿವೆ. ಅವುಗಳು ರೂಪುಗೊಂಡ ರೀತಿಯನ್ನ ಕತೆಯ ರೂಪದಲ್ಲಿ ಹೇಳಿದ್ದಾರೆ. ಒಂದೇ ಗುಡಿಕಟ್ಟಿನ ಒಕ್ಕಲಾಗಿದ್ದರು ಪ್ರಾದೇಶಿಕವಾಗಿ ಭಿನ್ನತೆಯನ್ನು ಪಡೆದುಕೊಡಿದ್ದಾರೆ.

ಮೊದಲನೆಯದಾಗಿ ಬರಗಾಲದ ಸಮಯದಲ್ಲಿ ತಮ್ಮಣ್ಣ ಮತ್ತು ಬಮ್ಮಣ್ಣ ಎನ್ನುವ ಸಹೋದರರು ತಮ್ಮ ಹೊಟ್ಟೆಪಾಡಿಗಾಗಿ ದೇಶಾಂತರ ಹೋದಂತಹ ಸಮಯದಲ್ಲಿ ಯಾವುದೋ ಒಂದು ಊರಿನಲ್ಲಿ ಬಾವಿ ತೆಗೆಯುವ ಕೆಲಸವನ್ನು ಮಾಡುತಿದ್ದರು. ಆಗ ಅದೇ ಕೆಲಸಕ್ಕೆ ವಲಸೆ ಬಂದಂತಹ ಉಪ್ಪಾರರ ಕುಟುಂಬವು ಬರುತಿತ್ತು. ಆ ಕುಟುಂಬದಲ್ಲಿ ಒಂದು ಹರೆಯದ ಹೆಣ್ಣು ಹುಡುಗಿ ಇದ್ದಳು. ಅವಳ ಸೌಂದರ್ಯಕ್ಕೆ ಮನಸೋತ ತಮ್ಮಣ್ಣ ಆಕೆಯೊಂದಿಗೆ ದೈಹಿಕ ಸಂಬಂಧ ಇಟ್ಟುಕೊಂಡನು. ಕಾಲನಂತರ ಆಕೆಯು ಮೂರುತಿಂಗಳ ಗರ್ಭವತಿಯಾದಳು ಇದರಿಂದ ನಮ್ಮ ಕುಲದ ಮಾನ ಮರ್ಯದೆ ಹಾಳಾಗುವುದೆಂದು ತಿಳಿದು ಆಕೆಯನ್ನು ಬಿಟ್ಟು ಯಾವುದೋ ಕಾಣದ ದೇಶಕ್ಕೆ ಓಡಿಹೋದಾಗ, ಉಪ್ಪಾರರ ಕುಟುಂಬವು ಗೊಲ್ಲರ ಹಿರಿಯರನ್ನು ಪಂಚಾಯಿತಿ ಕೂಡಿಸಿ ಅವರ ಹೆಣ್ಣಿಗೆ ನ್ಯಾಯ ದೊರಕಿಸಿ ಕೊಡುವಂತೆ ಕೇಳಿದರು. ಆಗ ಹಿರಿಯರು ತಮ್ಮಣ್ಣ ಮಾಡಿದ ತಪ್ಪಿಗೆ ಕ್ಷಮೆ ಕೇಳಿ, ಮೈದುನನ ಜೊತೆಗೆ ಅತ್ತಿಗೆಯನ್ನು ಜೊತೆಮಾಡಿ ಕಳುಹಿಸಿದರು. ತಮ್ಮಣ್ಣನ ಹೆಂಡತಿಯು ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಅದೇ ಸಮಯದಲ್ಲಿ ಬರಗಾಲ ಕಳೆದು ಮಳೆಗಾಲ ಪ್ರಾರಂಭವಾಯಿತು. ಆಗ ಮುಂಗಾರಿನ ಮಳೆಯು ಕೆರೆಕಟ್ಟೆ ತುಂಬುವಂತೆ ಜೋರಾಗಿ ಬಂದಿತು. ಇದರಿಂದ ಎಲ್ಲಾ ರೈತರು ಬಿತ್ತಲು ಹಾತೊರೆಯುತ್ತಿದ್ದರು. ಆಗ ಬಮ್ಮಣ್ಣ ಅತ್ತಿಗೆಯ ಬಳಿ ಬಂದು ಹೊಲ ಬಿತ್ತಲು ಕರೆಯುತ್ತಾನೆ. ಆಗ ನಾಗಮ್ಮ ಮೈದುನನ ಮಾತಿಗೆ ನಾನು ಮೂರು ತಿಂಗಳ ಬಾಣಂತಿ ಇರುವುದರಿಂದ ನಾನು ಹೊಲ ಬಿತ್ತಲು ಬಂದರೆ ಮಗುವಿಗೆ ಕಾಯಿಲೆ ಆಗುತ್ತದೆ. ಹೀಗಾಗಿ ನಾನು ಬರುವುದು

ಸರಿಯಲ್ಲ, ಯಾರನ್ನಾದರು ಕರೆದುಕೊಂಡು ಹೋಗು ಎಂದು ಹೇಳಿದಳು. ಇದರಿಂದ ಕೋಪಗೊಂಡು ಬಮ್ಮಣ್ಣ ಅತ್ತಿಗೆಯೊಂದಿಗೆ ಜಗಳವಾಡಿ ಅಣ್ಣನನ್ನು ಹುಡುಕುತ್ತ ಆಂಧ್ರಕ್ಕೆ ಹೋದನು. ತಿರುಗಿ ಬೇಗ ಬರಲಿಲ್ಲ. ಇಂಥಹ ಸಮಯದಲ್ಲಿ ಉಪ್ಪಾರ ನಾಗಮ್ಮ ಹಡೆದಿರುವ ಮಗುವಿಗೆ ತಮ್ಮಣ್ಣನೆಂದು ಹೆಸರಿಟ್ಟರು. ಅವನು ವಯಸ್ಸಿಗೆ ಬಂದಾಗ ಅವನನ್ನು ಕಾಡುಗೊಲ್ಲರು ಹಟ್ಟಿಯ ಒಳಗೆ ಬಿಟ್ಟುಕೊಂಡಿರಲಿಲ್ಲ. ಇಂತಹ ಸಮಯದಲ್ಲಿ ಕಾಡುಗೊಲ್ಲರ ಹಟ್ಟಿಗೆ ಮದಿಸಿದ ಕೋಣವೊಂದು ಬಂದು ಬಹಳ ತೊಂದರೆ ಕೊಡುತಿತ್ತು. ಆಗ ಆ ಹಟ್ಟಿಯ ಹಿರಿಯರೆಲ್ಲ ಸೇರಿ ಕೋಣವನ್ನು ಹೊಡೆದವರಿಗೆ ಅವನು ಕೇಳಿದ ಸಂಪತ್ತು ಕೊಡುವುದಾಗಿ ಢಂಗೂರ ಸಾರಿದರು. ಇದನ್ನು ಕೇಳಿಸಿಕೊಂಡ ತಮ್ಮಣ್ಣ ಕೋಣವನ್ನು ಹೊಡೆದನು. ಇದರಿಂದಾಗಿ ಹಿರಿಯರು ಹೇಳಿದ ಮಾತಿನಂತೆ ತಮ್ಮಣ್ಣನನ್ನು ಕರೆದು ಕೇಳಿದಾಗ ನನ್ನ ತಂದೆ ಚಿಕ್ಕಪ್ಪ ದೇಶಾಂತರ ಹೋಗಿದ್ದಾರೆ. ಹೀಗಾಗಿ ನನಗೆ ನಿಮ್ಮ ಸಂಪತ್ತು ಬೇಡ ನನ್ನನ್ನು ನಿಮ್ಮ ಕುಲದಲ್ಲಿ ಸೇರಿಸಿಕೊಳ್ಳಿರಿ ಎಂದು ಬೇಡಿಕೊಂಡನು. ಆಗ ಪೂಜಾರಿ ಈರಣ್ಣನು ಕಾಡುಗೊಲ್ಲರ ಶಾಸ್ತ್ರಾನುಸಾರ ಬೇವಿನ ಕಡ್ಡಿಯಲ್ಲಿ ನಾಲಿಗೆ ಸುಡಿಸಿ ಮೂರುಬಾರಿ ನೆಲವನ್ನು ನೆಕ್ಕಿಸಿ ಕೋಣವನ್ನು ಹೊಡೆದ ವೀರನಾದುದರಿಂದ 'ಕೋಣನಗೊಲ್ಲರು' ಎಂದು ನಾಮಕರಣ ಮಾಡಿದರು ಮತ್ತು ಅವನಿಗೆ ಅನೇಕ ಬಿರುದಾವಳಿಗಳನ್ನು ಕೊಟ್ಟರು. ಅವು ಯಾವುವೆಂದರೆ ಹಟ್ಟಿಯ ಗೌಡಿಕೆ ಮತ್ತು ಕ್ಯಾತಪ್ಪನ ಜಾತ್ರೆಯಲ್ಲಿ ಕಳಶ ತೆಗೆಯುವುದು. ಇದಕ್ಕೆ ನಿಡಿಗಲ್ಲ ದೊರೆಗಳು ಸಾಕ್ಷಿಗಾಗಿ ಸಹಿಮಾಡಿದರು.

ಇದೆ ಕತೆಯನ್ನು ಚಿಕ್ಕೇನಹಳ್ಳಿ ಗೊಲ್ಲರಹಟ್ಟಿವಾಸಿ ಚಿಕ್ಕಣ್ಣ ಮತ್ತು ಬಂಜಿಗೆರೆ ಗೊಲ್ಲರಟ್ಟಿವಾಸಿ ಕ್ಯಾತಜ್ಜ ಎಂಬುವವರು ಭಿನ್ನವಾದ ನೆಲೆಯಲ್ಲಿ ಹೇಳುತ್ತಾರೆ. ಕ್ಯಾತೆದೇವರ ಪೂಜಾರಿಯು ಉಪ್ಪಾರ ಹೆಣ್ಣು ನಾಗಮ್ಮನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿರುತ್ತಾನೆ. ಪೂಜಾರಿಯ ಈ ಕಾರ್ಯಕ್ಕೆ ಪ್ರತಿನಿತ್ಯ ಪಂಜು ಹಿಡಿದು ಕರೆದುಕೊಡು ಹೋಗುವ ವ್ಯಕ್ತಿ ಕಟ್ಟಿಗೆಗೊಲ್ಲರ ತಿಮ್ಮಣ್ಣನಿಗೆ ಗೊತ್ತಾಗುತ್ತದೆ. ಅವನು ಈ ವಿಷಯವನ್ನು ಹಟ್ಟಿಯಲ್ಲಿ ಪ್ರಚಾರ ಮಾಡಿದಾಗ ಪೂಜಾರಿಯು ತಾನು ಮಾಡಿರುವ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಆ ನಂತರ ಆಕೆಯ ಹೊಟ್ಟೆಯಲ್ಲಿ ಹುಟ್ಟಿರುವ ತಮ್ಮಣ್ಣನನ್ನು ಕುಲದಲ್ಲಿ ಹಾಕಿಕೊಳ್ಳಲು ಕಾಡುಗೊಲ್ಲರ ಮಾರನಗೊಲ್ಲರಲ್ಲಿ ಒಂದು ಹೆಣ್ಣು ಗೊತ್ತು ಮಾಡುತ್ತಾರೆ. ಆಗ ಆ ಹೆಣ್ಣು ನೋಡಲು ಹಿರಿಯ ಹೆಂಡತಿಯ ಮಗನನ್ನು ಕಳುಹಿಸುತ್ತಾನೆ. ಆಗ ಹೆಣ್ಣಿನವರು ಒಪ್ಪುತ್ತಾರೆ. ನಂತರ ಮದುವೆ ಮಾಡುವ ಸಮಯದಲ್ಲಿ ನೆಂಟರಿಗೆ ತಮ್ಮಣ್ಣನನ್ನು ತೋರಿಸಿದಾಗ ಅವರು ನಾವು ಸೂಳೆ ಮಗನಿಗೆ ಹೆಣ್ಣು ಕೊಡುವುದಿಲ್ಲ ಎಂದು ಪಟ್ಟು ಹಿಡಿದಾಗ, ನಿಡಿಗಲ್ಲ ದೊರೆಯು ಪೂಜಾರಿ ಮಾನ ಬೀದಿಯಲ್ಲಿ ಕಳೆಯಬಾರದೆಂದು ಮಾರನಗೊಲ್ಲರನ್ನು ಒಪ್ಪಿಸಿ ಮದುವೆ ಮಾಡಿಸುತ್ತಾನೆ. ಆ ನಂತರ ತಮ್ಮಣ್ಣನು ನಿಡಿಗಲ್ಲ ದೊರೆಗಳಿಗೆ ಕಾಟ ಕೊಡುತಿದ್ದ ಕೋಣವನ್ನು ಸಾಯಿಸುವುದರ ಮೂಲಕ ತನ್ನ ಪರಾಕ್ರಮವನ್ನು ತೋರಿಸಿದನು. ಇದರಿಂದ ಮೆಚ್ಚಿದ ಸಮಸ್ತ ಕಾಡುಗೊಲ್ಲ ಸಮುದಾಯವು ಆತನು ಕೋಣದೊಂದಿಗೆ ಹೋರಾಡಿ ಗೆದ್ದಿದ್ದರಿಂದ ಕೋಣನಗೊಲ್ಲರು ಎಂಬ ಕುಲಕೊಟ್ಟು ತಾವು ಪ್ರತಿವರ್ಷ ಮಾಡುವ ಕ್ಯಾತೇದೇವರ ಜಾತ್ರೆಯಲ್ಲಿ ಈ ವೀರಗಾರರ ಗುಂಪು ಕಳಶ ಸ್ಥಾಪನೆ

ಮಾಡುವ ಹಾಗೂ ಜಾತ್ರೆಯ ಕೊನೆಯ ದಿನ ಕಳಶ ತೆಗೆಯುವ ಸಂಪ್ರದಾಯವನ್ನು ರೂಡಿಸಿಕೊಡು ಬಂದಿದ್ದಾರೆ. ಇದಲ್ಲದೆ ಹಟ್ಟಿಯ ಗೌಡಿಕೆಯನ್ನು ಕೂಡ ಅವರೆ ಮಾಡಬೇಕಾಗಿದೆ. ಮದುವೆಯಲ್ಲಿ ಜಾಡಿಹಾಸುವ ತೆಗೆಯುವ ಕೆಲಸವನ್ನು ಮಾಡುತ್ತಾರೆ.

ಈ ಎರಡು ಕಥೆಗಳ ಅಭಿಪ್ರಾಯಗಳನ್ನು ಗಮನಿಸಿದಾಗ ಕತೆಯ ಆಶಯ ಒಂದೇ ಆಗಿದ್ದು ಹೇಳುವ ವಿಧಾನಗಳು ಪ್ರಾದೇಸಿಕವಾಗಿ ಭಿನ್ನತೆಯನ್ನು ಪಡೆದುಕೊಡಿರುವುದು ಕಂಡುಬರುತ್ತದೆ. ಜೊತೆಗೆ ಬುಡಕಟ್ಟು ಸಮುದಾಯವು ಅನ್ಯ ಸಮುದಾಯವನ್ನು ತನ್ನ ಕುಲಕ್ಕೆ ಸೇರಿಸಿಕೊಳ್ಳುವಾಗ ಅನೇಕ ಪ್ರಯೋಗಗಳಿಗೆ ಒಳಪಡಿಸಿ ಆ ಎಲ್ಲ ಪರೀಕ್ಷೆಯಲ್ಲಿ ಪಾಸಾದರೆ ಮಾತ್ರ ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ಅಷ್ಟೆ ಅಲ್ಲ ಅದಕ್ಕೊಂದು ಹೊಸ ಹೆಸರು ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಹೊಸದಾಗಿ ಹುಟ್ಟಿಕೊಂಡಿರುವ ಕುಲವು ದೂರ ನಿಲ್ಲುವ ಪರಿಸ್ಥಿತಿ ಉಂಟಾಗುತ್ತದೆ. ಈ ಪವಿತ್ರತೆಗೆ ಮಹತ್ವ ನೀಡಿದ ಸಮುದಾಯಗಳು ಹೆಚ್ಚಾಗಿ ಆ ಪವಿತ್ರತೆಯನ್ನು ಕಾಪಾಡಿಕೊಳ್ಳಲು ಅನೇಕ ಕಟ್ಟು ಪಾಡುಗಳನ್ನು ನಿರ್ಮಾಣ ಮಾಡಿರುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬಹದಾದ ವಿಷಯವೆಂದರೆ ಸಮುದಾಯಗಳು ಪೂಜಾರಿಯನ್ನು ದೇವರ ರೂಪ ಮತ್ತು ಆತ ತಪ್ಪು ಮಾಡುವುದಿಲ್ಲ, ಎಂಬ ಭಾವನೆ ಅವರಲ್ಲಿರುವುದರಿಂದ ಪೂಜಾರಿಯು ಮಾಡಿದ ತಪ್ಪನ್ನು ಬೇರೆಯವರ ಮೇಲೆ ಹಾಕಿರುವುದು ಈ ಕತೆಯಲ್ಲಿ ಕಂಡುಬರುತ್ತದೆ. ಇಲ್ಲಿ ಎರಡು ಸಮುದಾಯದ ಸಮ್ಮಿಲನದಿಂದ ಹುಟ್ಟಿದ ಮಗು ತಮ್ಮಣ್ಣ ಮದವೇರಿದ ಕೋಣವನ್ನು ಬಗ್ಗುಬಡಿಯುತ್ತಾನೆಂದರೆ ಅಂತರ್ ಜಾತಿ ಸಂಬಂಧದಿಂದ ಹುಟ್ಟಿದ ಮಕ್ಕಳು ಬಲಿಷ್ಟರಾಗಿರುತ್ತಾರೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ಅದೇ ರೀತಿ ನಾಗಮ್ಮನೊಂದಿಗೆ ಸಂಬಂಧ ಇಟ್ಟುಕೊಂಡಿದ್ದ ವ್ಯಕ್ತಿಯು ತನ್ನ ಕುಲದ ಪದ್ಧತಿಯನ್ನು ಮೀರಿದನು ಎಂಬ ಕಾರಣಕ್ಕೆ ದೇಶಾಂತರ ಹೋದವನು ವಾಪಸ್ಸು ಹಟ್ಟಿಗೆ ಬರುವುದಿಲ್ಲ. ಬಂದರೆ ಕುಲದಿಂದ ಹೊರಗೆ ಹಾಕುತ್ತಾರೆಂಬ ಭಯ ಅವನಿಗೆ ಇರುವುದರಿಂದ, ಅವನು ಕಣ್ಮರೆಯಾಗಿದ್ದಾನೆ. ಈ ಕತೆಯಲ್ಲಿ ಬರಗಾಲದ ಭೀಕರತೆಯಿಂದಾಗಿ ಹೊಸದೊಂದು ಕುಲಸೃಷ್ಟಿಯಾಗಿದೆ. ಪೂಜಾರಿಯ ಲೈಂಗಿಕತೆಯಿಂದಾಗಿ ತಮ್ಮಣ್ಣ ಮತ್ತು ತಮ್ಮಣ್ಣನ ತಾಯಿ ಬಹು ವರ್ಷಗಳ ಕಾಲ ಕುಲವಿಲ್ಲದವರಾಗಿ ಬಾಳಿರುವುದು ಕಂಡು ಬಂದಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯ ಕಾಡುಗೊಲ್ಲರಲ್ಲಿರುವ ಮಡಿವಂತಿಕೆ.

೩.೨.೩. ಅಜ್ಜೇರಗೊಲ್ಲರು

ಈ ಬೆಡಗು ಸನ್ನೇಗೊಲ್ಲರ ಬೆಡಗಿನಲ್ಲಿ ಸೇರುವ ಉಪಬೆಡಗು, ಈ ಕುಲ ಸೃಷ್ಟಿಯಾದುದರ ಬಗ್ಗೆ ಮಾಹಿತಿಯನ್ನು ಕೊಟ್ಟವರು ಸಿರಾ ತಾಲ್ಲೂಕಿನ ದಾಸರಹಳ್ಳಿವಾಸಿ ಪೂಜಾರಿ ದಾಸಪ್ಪನವರು. ಕ್ಷೇತ್ರ ಕಾರ್ಯದ ಸಂಧರ್ಭದಲ್ಲಿ ಬೇಟಿಯಾದಾಗ ಮಾಹಿತಿ ನೀಡಿದರು. ಕರಡಿಗೊಲ್ಲರ ಯುವತಿ ಕುಲ್ಡೀರಮ್ಮ ಎಂಬುವಳು ಹುಟ್ಟು ಕುರುಡಿ. ಆಕೆ ಕುರುಡಿಯಾದರು ಸುಂದರವಾಗಿದ್ದಳು. ಪ್ರತಿನಿತ್ಯ ಹಳ್ಳಕ್ಕೆ ಹೋಗಿ ಬರುವುದು ಅವಳಿಗೆ ರೂಢಿ ಇದ್ದಕಾರಣ ಅವಳು ಅವರಿವರ ಸಹಾಯದಿಂದ

ಹಳ್ಳದ ದಾರಿ ಹಿಡಿದು ಬಟ್ಟೆ ಪಾತ್ರೆತೊಳೆಯಲು ಹಳ್ಳಕ್ಕೆ ಹೊಗುತಿದ್ದಳು. ಅದೇ ಹಳ್ಳಕ್ಕೆ ಬಟ್ಟೆ ತೊಳೆಯಲು ಅಗಸರ ಸೋಮಣ್ಣ ಬರುತಿದ್ದ. ಅಲ್ಲಿಯೇ ಬಟ್ಟೆ ತೊಳೆಯುತಿದ್ದ ಈರಮ್ಮನನ್ನು ನೋಡಿ ಅವಳ ಸೌಂದರ್ಯಕ್ಕೆ ಮನಸೋತು ಆಕೆಯೊಂದಿಗೆ ದೈಹಿಕ ಸಂಬಂಧ ಇಟ್ಟುಕೊಂಡಿದ್ದ. ಇದನ್ನು ಗಮನಿಸಿದ ಆಕೆಯ ಸೋದರಮಾವ ಆಕೆಯನ್ನು ಮದುವೆಯಾಗಬೇಕಾದವನು ಅವಳ ತಂದೆ ತಾಯಿಗೆ ವಿಷಯ ತಿಳಿಸಿದಾಗ, ಗೊಲ್ಲರ ಕುಲಾಚಾರ ಪ್ರಕಾರ ಪರಜಾತಿಯ ಯುವಕನೊಂದಿಗೆ ಕೂಡಿದ ಮಹಿಳೆಯನ್ನು ಹಟ್ಟಿಯ ಒಳಗೆ ಸೇರಿಸುವುದಿಲ್ಲ. ಇದು ಅವರ ಪದ್ಧತಿ. ಮಗಳು ಕುರುಡಿ ಎಂಬುದನ್ನು ಸಹ ನೋಡದೆ ಆಕೆಯನ್ನು ಹಟ್ಟಿಯಿಂದ ಹೊರಗೆ ಹಾಕಿದರು. ಆಗ ಆಕೆಯನ್ನು ಪ್ರೀತಿಸುತ್ತಿದ್ದ ಅಗಸರ ಸೋಮಣ್ಣ ಬಂದು ಅವಳನ್ನು ತನ್ನ ಮನೆಗೆ ಕರೆದಾಗ, ಆಕೆಯು ತಾನು ಕಾಡುಗೊಲ್ಲರ ಮಹಿಳೆ ಊರಿನಲ್ಲಿವಾಸ ಮಾಡುವಂತಿಲ್ಲ ನಮ್ಮ ಮನೆ ದೇವರುಗಳಾದ ಕಾಟಯ್ಯ, ಚಿತ್ತಯ್ಯ ನನಗೆ ಕೊಡಬಾರದ ಕಷ್ಟಕೊಡುತ್ತಾರೆ. ಹಾಗಾಗಿ ನಾನು ಊರು ಪ್ರವೇಶಿಸುವುದಿಲ್ಲ. ಊರು ಮತ್ತು ಹಟ್ಟಿಯನ್ನು ಬಿಟ್ಟು ಅರಣ್ಯದಲ್ಲಿ ಗುಡಿಸಲು ಕಟ್ಟಿಕೊಂಡು ವಾಸಮಾಡುವ ಎಂದು ಹೇಳಿದಾಗ ಅದಕ್ಕೆ ಆತ ಒಪ್ಪಿ ಅಡವಿಯಲ್ಲಿ ಗುಡಿಸಲು ಕಟ್ಟಿಕೊಂಡು ಇಬ್ಬರೂ ಅಲ್ಲಿಯೆ ನೆಲೆಸಿದರು. ಈರಮ್ಮ ಗರ್ಭವತಿಯಾದಳು ಒಂಬತ್ತು ತುಂಬಿ ಸೋಮವಾರದ ಸಾಯಂಕಾಲ ಆರು ಗಂಟೆಯ ಸಮಯದಲ್ಲಿ ಎರಡು ಗಂಡು ಮಕ್ಕಳಿಗೆ ಜನ್ಮ ನೀಡಿದಳು ಆದರೆ ಆಕೆಗೆ ನೀರು ಹಾಕುವವರು ದಿಕ್ಕಿರಲಿಲ್ಲ. ಆಗ ಆಕೆಯ ಗಂಡ ಸೋಮಣ್ಣ ಆ ಮಕ್ಕಳಿಗೆ ಜನಿಗೆ ಹೊಯ್ದು ಮನೆಯೊಳಗೆ ಕರೆದುಕೊಂಡನು.

ಹೀಗೆ ಕಾಲ ಕಳೆಯುತ್ತಿರುವ ಈರಮ್ಮನ ಮಕ್ಕಳು ದೊಡ್ಡವರಾದರು ಇದೇ ಸಮಯದಲ್ಲಿ ನಿಡುಗಲ್ಲ ದೊರೆಗಳು ದಂಡು ಕಟ್ಟಿಕೊಂಡು ಗೊಲ್ಲರಹಟ್ಟಿಯ ಮೇಲೆ ದಾಳಿಮಾಡಿದರು. ಆ ದಾಳಿಯಲ್ಲಿ ಗೊಲ್ಲರಿಗೂ ಮತ್ತು ಮ್ಯಾಸಬೇಡರಿಗೂ ಯುದ್ದ ನಡೆದು ಮ್ಯಾಸಬೇಡರ ದಂಡು ಕಾಡುಗೊಲ್ಲರ ದೇವರು ಮತ್ತು ದನಗಳನ್ನು ಅಪಹರಿಸಿದರು. ಇದರಿಂದಾಗಿ ಗೊಲ್ಲರಹಟ್ಟಿಯ ಗೋಳು ಕೇಳುವವರೆ ಇಲ್ಲವಾದರು. ಆಗ ಈ ಸುದ್ಧಿಯನ್ನು ಕೇಳಿದ ಈರಮ್ಮನ ತಂದೆ ತಾಯಿಗಳು ಮಾನ ಮರ್ಯಾದೆ ಕಾಪಾಡುವುದು ತನ್ನ ಕರ್ತವ್ಯವೆಂದು ತೀಳಿದು, ಮಕ್ಕಳನ್ನು ಕರೆದು ಇದುವರೆಗೆ ಮಕ್ಕಳಿಗೆ ಹೇಳದೆ ಮರೆಮಾಚಿದ್ದ ಎಲ್ಲಾ ವಿಷಯವನ್ನು ಗಂಡ ಹೆಂಡತಿ ಹೇಳಿದರು. ಇದರಿಂದ ಕ್ರೋದಗೊಂಡ ಆ ಯುವಕರು ತಮ್ಮ ತಾತಂದಿರಿಗೆ ಆಗಿರುವ ಅವಮಾನಕ್ಕೆ ಪ್ರತೀಕಾರವನ್ನು ತೀರಿಸಿಕೊಳ್ಳಲು ಮ್ಯಾಸಬೇಡರೊಂದಿಗೆ ಯುದ್ಧಮಾಡಿ ಯುದ್ಧದಲ್ಲಿ ಮ್ಯಾಸಬೇಡರನ್ನು ಸೋಲಿಸಿ, ಅವರ ದೇವರು ಮತ್ತು ದನಗಳನ್ನು ರಕ್ಷಿಸಿಕೊಂಡು ಬಂದು ಹಟ್ಟಿಯ ಮುಖ್ಯಬಾಗಿಲಲ್ಲಿ ನಿಂತರು. ಆಗ ಹಟ್ಟಿಯ ಯಜಮಾನರು ನೀವು ಯಾರು ಯಾವ ತಾಯಿ ತಂದೆಯ ಮಕ್ಕಳಪ್ಪ ಎಂದು ಕೇಳಿದರು. ಅವರು ನಾವು ಕುಲ್ಡೀರಮ್ಮನ ಮಕ್ಕಳು ಎಂದು ಹೇಳಿದಾಗ ಅವರು ಸಂತೋಷ ಪಟ್ಟು ಹಟ್ಟಿಯ ಒಳಗೆ ಸೇರಿಸಿಕೊಂಡು ಆ ನಂತರ ಗೊಲ್ಲರ ಸಂಪ್ರದಾಯದ ಪ್ರಕಾರ ಏಳು ಕೆರೆ ಏಳು ಬಾವಿ ಮುಳುಗಿಸಿ ಗೋವುಕಚ್ಚಿ ಬೇವುಕಚ್ಚಿ ಬೇವಿನಕಡ್ಡಿಯಲ್ಲಿ ನಾಲಿಗೆ ಸುಡಿಸಿ ಮೂರುಬಾರಿ ನೆಲನೆಕ್ಕಿಸಿ ಮೂರುಬಾರಿ

ಕುರೆ ಕುರೆ ಎಂದು ನಾಯಿ ಕರೆವಂತೆ ಕರೆದು ಗೋಮೂತ್ರ ಕುಡಿಸಿ ಕುಲಕ್ಕೆ ಸೇರಿಸಿಕೊಂಡರು. ಇಷ್ಟೆಲ್ಲ ಆದ ಮೇಲೆ ಇವರು ಗೊಲ್ಲರು ಅಗಸರು ಸಮ್ಮಿಲನದಿಂದ ಹುಟ್ಟಿದ ಕಾರಣ ಗೊಲ್ಲರಾಗಿ ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹಟ್ಟಿಯ ಹಿರಿಯ ಯಜಮಾನರು ತೀರ್ಮಾನಿಸುತ್ತಾರೆ. ಕಾಡುಗೊಲ್ಲ ಸಮುದಾಯದಲ್ಲಿ ಮಡಿಮೈಲಿಗೆ ಆಚರಣೆಯಲ್ಲಿರುವುದರಿಂದ ಹುಟ್ಟಿದಾಗ ಋತುಮತಿಯಾದಾಗ ಸತ್ತಾಗ ಈ ಮೈಲಿಗೆಯನ್ನು ತೊಳೆಯಲು ಅಗಸರ ಅವಶ್ಯಕತೆ ಇರುವುದರಿಂದ ಅಗಸರು ದೊರೆಯದಿದ್ದಾಗ ಅಗಸರು ಮಾಡುವಂತ ಎಲ್ಲಾ ಕೆಲಸವನ್ನು ನೀವು ಮಾಡಬೇಕು ಎಂದು ಹೇಳಿ ಅವರಿಗೆ ಕರಡಿಗೊಲ್ಲರು ಹೆಣ್ಣುಕೊಟ್ಟು ವಂಶ ಬೆಳೆಯುವಂತೆ ಮಾಡಿದರು. ಸನ್ನಯಗೊಲ್ಲರು ತಮ್ಮಕುಲದ ಉಪಬೆಡಗಾಗಿ ಅಜ್ಜೇರಗೊಲ್ಲರು ಎಂದು ಹೆಸರಿಟ್ಟು ಈ ಕುಲದಲ್ಲಿ ಹೆಣ್ಣು ಗಂಡು ಬೆಳೆದು ಹಾಲುಕ್ಕುವಂತೆ ಉಕ್ಕಲಿ ಎಂದು ಹಾರೈಯಿಸಿದರು.

ಈ ಕತೆಯನ್ನು ಗಮನಿಸಿದಾಗ ಕಸುಬುದಾರು ದೊರೆಯದಿದ್ದಾಗ ಕಸುಬುದಾರರನ್ನು ತಮ್ಮಲ್ಲಿಯೇ ಯಾವ ರೀತಿ ಸೃಷ್ಟಿಮಾಡಿಕೊಳ್ಳಬಹುದು ಎಂಬದನ್ನು ತಿಳಿದುಕೊಳ್ಳಬಹುದು. ಕ್ಷೇತ್ರಕಾರ್ಯ ಮಾಡುವಾಗ ಕೆಲವು ಹಟ್ಟಿಗಳು ಹಾಳು ಬಿದ್ದಿರುವುದು ಕಂಡುಬರುತ್ತದೆ. ಆ ಹಟ್ಟಿಗಳೆಲ್ಲಾ ದಾಳಿ ಕೋರರ ದಾಳಿಗೆ ತುತ್ತಾಗಿ ಇಲ್ಲವೆ ಮಹಾಮಾರಿಯಾದ ಪ್ಲೇಗು ಬಂದು ಹಟ್ಟಿಗಳು ಹಾಳು ಬಿದ್ದಿರುವ ಸಂಬವವುಂಟು. ಈ ಕತೆಯಲ್ಲಯು ಕೂಡ ಕಾಡುಗೊಲ್ಲರ ಹೆಣ್ಣು ಪರ ಪುರುಷನೊಂದಿಗೆ ಕೂಡಿದಳು ಎಂಬ ಕಾರಣಕ್ಕೆ ಹಟ್ಟಿಯಿಂದ ಹೊರ ಹಾಕುತ್ತಾರೆ. ಆಕೆಯ ಮಕ್ಕಳು ವೀರರಾಗಿ ಹಟ್ಟಿಯ ಸಂಪತ್ತನ್ನು ಕಾಪಾಡಿದಾಗ, ಅವರ ಕುಲಾಚಾರದ ಪ್ರಕಾರ ಶಾಸ್ತ್ರಮಾಡಿ ಕುಲಕ್ಕೆ ಸೇರಿಸಿಕೊಂಡಿದ್ದಾರೆ. ಮತ್ತು ಅವರ ಜವಾಬ್ದಾರಿಯನ್ನು ಕೂಡ ಹಿರಿಯರು ನಿರ್ಣಯಿಸುತ್ತಾರೆ. ಕುಲಕ್ಕೆ ಅವಶ್ಯಕತೆ ಇದ್ದವರನ್ನು ಕುಲಕ್ಕೆ ಸೇರಿಕೊಳ್ಳುವ ನಿಯಮಗಳನ್ನು ಅವರೆ ರೂಪಿಸಿರುತ್ತಾರೆ.

೩.೨.೪.ಶೀಲವಾಡಿಗೊಲ್ಲರು

ಕಾಡುಗೊಲ್ಲರ ಬೆಡಗುಗಳಲ್ಲಿ ಶೀಲವಾಡಿಗೊಲ್ಲರು ಎಂಬ ಬೆಡಗಿದೆ. ಇದು ಪೋಲ್ಯಾರಗೊಲ್ಲರ ಉಪಬೇಡಗು. ಪೋಲ್ಯಾರಗೊಲ್ಲರ ಪ್ರಮುಖ ಆರಾಧ್ಯದೈವ ಪಾತೇದೇವರು. ಈ ದೇವರು ಅನೇಕ ಪವಾಡಗಳನ್ನು ಮಾಡಿ ಕಲ್ಲತ್ತಗಿರಿಯಿಂದ ರೆಡ್ಡಿಗರ ಮನೆಯಲ್ಲಿ ಉಳಿದುಕೊಂಡು, ರೆಡ್ಡಿಗರು ಈ ದೇವರು ಬಂದ ಮೇಲೆ ಬಡತನದಿಂದ ದೂರವಾದರು. ಶ್ರೀಮಂತಿಕೆಯ ಮದ ಅವರನ್ನು ಕಾಡಿದುದುರ ಫಲವಾಗಿ ಅವರು ಪಾತೆಲಿಂಗನನ್ನು ಸರಿಯಾಗಿ ಆರಾಧನೆ ಮಾಡದೆ ಕಡೆಗಣಿಸಿದ್ದರು. ಇದರಿಂದ ಕೋಪಗೊಂಡ ಪಾತೇದೇವರು ಅವರ ಸಂಪತ್ತನೆಲ್ಲ ಕಣ್ಣು ಬಿಟ್ಟು ಸುಟ್ಟು ನಾಶಮಾಡಿ., ಅಲ್ಲಿಂದ ನೇರವಾಗಿ ಉಪ್ಪಾರ ಚಿಕ್ಕಣ್ಣನ ಮನೆಗೆ ಬಂದು ಊಟಕ್ಕೆ ಇಡುವಂತೆ ಕೇಳಿದಾಗ, ಆಗ ಹೊಟ್ಟೆ ಬಟ್ಟೆಗೆ ಇಲ್ಲದೆ ತಾಪತ್ರಯ ಪಡುತ್ತಿದ್ದ ಚಿಕ್ಕಣ್ಣ ಅಡುಗೆ ಮಾಡಿ ಬಡಿಸಿದಾಗ ಅವರೆಲ್ಲರು ಉಣ್ಣುವ ಅನ್ನವನ್ನು ಈತನೊಬ್ಬನೆ ಉಂಡುಬಿಟ್ಟ. ಆಗ ಚಿಕ್ಕಣ್ಣ ಚಿಂತೆ ಮಾಡುತ್ತ ಕುಳಿತಾಗ ಅವನ ಚಿಂತೆಯ ಕಾರಣವನ್ನು ತಿಳಿದ ಪಾತೇಲಿಂಗ ಅವನ ಬಡತನವನ್ನು ಬಯಲು ಮಾಡಿದ. ಪಾತೇಲಿಂಗನು

ಕೆಲವು ಕಾಲ ಚಿಕ್ಕಣ್ಣನ ಮನೆಯಲ್ಲಿದ್ದು ಆ ನಂತರ ಕೂಡ್ಲಹಳ್ಳಿಯ ಪೋಲಮುತ್ತಿಗೆ ಒಲಿಯುತ್ತಾನೆ. ಪಾತೇಲಿಂಗ ಉಗ್ರರೂಪದವನು. ಅವನ ಕಾಟವನ್ನು ಸಹಿಸಿಕೊಳ್ಳದೆ ಚಿಕ್ಕಣ್ಣ ಕೂಡ್ಲಹಳ್ಳಿಗೆ ಸಾಗಹಾಕುತ್ತಾನೆ.

ಹೀಗಿರಲಾಗಿ ಛಲಾವಾದಿ ಬಸಮ್ಮನ ತೋಟಕ್ಕೆ ಹೂವು ತರಲು ಹೋಗಿ ಪೋಲಮುತ್ತಿ ಬೈಸಿಕೊಂಡು ಇಂತಿರುಗಿದ. ಇದರ ಜೊತೆಗೆ ಪಾತೇದೇವರನ್ನು ಬಯ್ದಳು. ಈ ಮಾತನ್ನು ಪೋಲುಮುತ್ತಿ ಪಾತೇದೇವರಿಗೆ ಹೇಳಿದ. ಪಾತೇದೇವರು ಉರಿಗಣ್ಣು ಬಿಟ್ಟಿದ್ದರಿಂದ ಬಸಮ್ಮನ ಹೂವಿನ ತೋಟ ಹತ್ತಿಕೊಡು ಉರಿಯತೊಡಗಿತು. ಆಗ ಬಸಮ್ಮ ತನ್ನ ಮಕ್ಕಳು ಸೊಸೆಯರೊಂದಿಗೆ ಓಡಿ ಬಂದು ಪಾತೇದೇವರಿಗೆ ಶರಣಾಗಿ ತಪ್ಪಾಯಿತು ಎಂದು ಬೇಡಿಕೊಂಡಳು. ತನ್ನ ಹಿರಿಯ ಮಗ ಹಿರಿಯ ಸೊಸೆಯನ್ನು ಪಾತೇದೇವರಿಗೆ ಬಿಟ್ಟುಕೊಡುವುದಾಗಿ ಭಾಷೆಕೊಟ್ಟಳು. ಅಂದಿನಿಂದ ಆ ಕುಟುಂಬದವರು ಶೀಲವಂತರ (ಗಾಣಿಗ ಲಿಂಗಾಯಿತರ) ನಡಾವಳಿಗಳನ್ನು ಬಿಟ್ಟು ಗೊಲ್ಲ ನಡಾವಳಿಗಳನ್ನು ನಡೆಯತೊಡಗಿದರು. ಶೀಲವಾಡಿ (ಜಂಗಮ) ಗೊಲ್ಲರೆಂದು ಕರೆದು ಕೊಳ್ಳುವ ಇವರು ಲಿಂಗ ಧರಿಸುವುದಿಲ್ಲ. ಎಲ್ಲ ಕಾಡುಗೊಲ್ಲರಂತೆ ಮಾಂಸ ತಿನ್ನುತ್ತಾರೆ. ಆದರೆ ಕೋಳಿ ತಿನ್ನುವುದಿಲ್ಲ. ಈ ಕತೆಗೆ ಪೂರಕವಾಗಿ ಮೀರಾಸಾಬಿಹಳ್ಳಿ ಶಿವಣ್ಣನವರು ಈ ರೀತಿ ಹೇಳಿದ್ದಾರೆ. "ದ್ರಾವಿಡ ಸಂಸ್ಕೃತಿಯಲ್ಲಿ ಪೂರ್ವಜರ ಆರಾಧನೆಗೆ ಮಹತ್ವ ಪೂರ್ಣವಾದ ಸ್ಥಾನವಿದೆ. ಹಿಂಸಾತ್ಮಕವಾಗಿಯೋ ಆಕಸ್ಮಿಕವಾಗಿಯೋ ಆ ಕಾಲದಲ್ಲಿ ಗತಿಸಿದ ಗಂಡಸರು, ಹೆಂಗಸರು ಹುಡುಗರು ಹುಡುಗಿಯರು ವೀರರು ಕೆಲವೋಮ್ಮೆ ದೃಷ್ಟರು ಈ ತೆರನಾದ ಆರಾಧನೆಗೆ ಪಾತ್ರರಾಗುತ್ತಾರೆ." *(ಮೀರಾಸಾಬಿಹಳ್ಳಿ ಶಿವಣ್ಣ., 'ಕಾಡುಗೊಲ್ಲ ಬುಡಕಟ್ಟು ವೀರರು' ಪುಟ ೯೭, ೨೦೦೫)*

"ಮುಂದುವರಿದಂತೆ ದ್ರಾವಿಡ ಸಂಸ್ಕೃತಿಯಲ್ಲಿ ಪ್ರತಿವರ್ಷ ಹಿರಿಯರನ್ನು ನೆನೆಯುವ ಹಬ್ಬವನ್ನು ಹಿರೆರಹಬ್ಬ ಎಂಬ ಹೆಸರಿನಿಂದ ಆಚರಿಸುತ್ತರೆ. ಅಂದು ತಮ್ಮ ಮನೆತನದ ಹಿರಿಯರ ಸಮಾಧಿಗಳಿಗೆ ಹೋಗಿ ಹಣ್ಣು ಕಾಯಿ ಒಡೆದು ಪೂಜೆ ಮಾಡಿಕೊಡು. ಹೊಸ ಬಟ್ಟೆಗಳನ್ನೆನಾದರೂ ತಂದಿದ್ದರೆ ಅವನ್ನು ಸಮಾಧಿಯ ಬಳಿ ತೆಗೆದುಕೊಂಡು ಹೋಗಿ ಸಮಾಧಿಯ ಮೇಲೆ ಇಟ್ಟು ಹಿರಿಯರಿಗೆ ಅರ್ಪಿಸಿದ ಶಾಸ್ತ್ರ ಮಾಡುತ್ತಾರೆ". *(ಮೀರಾಸಾಬಿಹಳ್ಳಿ ಶಿವಣ್ಣ., 'ಕಾಡುಗೊಲ್ಲ ಬುಡಕಟ್ಟು ವೀರರು' ಪುಟ. ೯೭, ೨೦೦೫)*

'ಬುಡಕಟ್ಟುಗಳೆಲ್ಲ ಇಂದು ಜಾತಿಯತ್ತ ವಾಲುತಿರುವ ಸಹಜ ಪ್ರವೃತ್ತಿಯಲ್ಲಿ ವಿಚಿತ್ರವೆಂಬತೆ ಉಚ್ಚಜಾತಿಯೊಂದು ತನ್ನ ಸಂಪ್ರದಾಯಗಳನ್ನು ಬಿಟ್ಟುಕೊಟ್ಟು ಬುಡಕಟ್ಟಿನತ್ತವಾಲಿದ್ದು ಜನಾಂಗಿಯ ಚರಿತ್ರಯಲ್ಲೆ ವಿಶಿಷ್ಟವಾದುದು. ಆನಾಗಿಯ ಇತಿಹಾಸದಲ್ಲಿ ಅನುಲೋಮ ಪ್ರವೃತ್ತಿಯನ್ನು ನೋಡುತ್ತೆವೆ. ಆದರೆ ಇಲ್ಲಿ ವಿಲೋಮ ಪ್ರವೃತ್ತಿ ಕಾಣುತ್ತಿರುವುದು ಆಶ್ಚರ್ಯಗಳಲ್ಲಿ ಒಂದು." *(ಮೀರಾಸಾಬಿಹಳ್ಳಿ ಶಿವಣ್ಣ., ಗೊಲ್ಲಕಡಗ ಪುಟ-೧೬. ೧೯೯೯.)*

೩.೩. ರಾಮಮುತ್ತಿ

೧. ಮೆರೆರಾಯ, ೨. ಹರೆರಾಯ, ೩. ಕಂಬಿರಾಯ, ೪. ಕಾಳೆರಾಯ, ೫. ಒಡೆರಾಯ, ೬. ಒನಿಕೆರಾಯ, ೭. ಯಣ್‌ರಾಯ, ೮. ಜಡೆರಾಯ ಇವರಿಗೆ ಏಳು ಗುಡಿಕಟ್ಟೆಗಳಿವೆ. ಇವರ ಆರಾಧ್ಯ

ದೈವ ರಾಮಲಿಂಗ ಮತ್ತು ತಿಮ್ಮಪ್ಪ. ಹಾಗಾಗಿ ಎಲ್ಲಾ ಬೆಡಗುಗಳು ಮುಖ್ಯವಾಗುತ್ತವೆ. ಯಾವುದೋ ಒಂದು ಬೆಡಗು ಮುಖ್ಯ ಅಲ್ಲ.

"ಕಾಡುಗೊಲ್ಲರಲ್ಲಿ ಸುಮಾರು ಉಪವರ್ಗಗಳನ್ನು ಗುರುತಿಸಬಹುದು. ಈ ಉಪವರ್ಗಗಳನ್ನು ಬೆಡಗುಗಗಳೆಂದು ಕರೆಯುತ್ತಾರೆ. ಇವರಲ್ಲಿ ಚಿತ್ತಮುತ್ತಿ ಕುಲದವರು, ಚಂದಮುತ್ತಿ ಕುಲದವರು. ರಾಮೇಗೌಡನ ಕುಲದವರು ಎಂಬ ಮುಖ್ಯವಾದ ವಿಭಾಗಗಳಿವೆ" (ಅಂಗಡಿ ಎಸ್ ಎಸ್, ಕರ್ನಾಟಕದ ಬುಡಕಟ್ಟು ಭಾಷೆ ಪುಟ-೨೨೫, ಕಾಡುಗೊಲ್ಲರ ಭಾಷೆ ಮತ್ತು ಸಂಸ್ಕೃತಿ ಲೇಖನ) ಎಸ್.ಎಸ್.ಅಂಗಡಿ ಮತ್ತು ಎಂ.ಗುರುಲಿಂಗಯ್ಯ ಮುಂತಾದವರು ಬೆಡಗುಗಳನ್ನು ಉಪಬೆಡಗುಗಳೆಂದು ಗುರುತಿಸಿರುವುದು ಕಂಡು ಬರುತ್ತದೆ. ಆದರೆ ಇವರು ಗುರುತಿಸಿರುವುದು ಪ್ರಧಾನ ಬೆಡಗುಗಳು. ಈ ಮೂರು ಬೆಡಗುಗಳ ಒಳಗೆ ಬರುವುವು ಉಪ ಬೆಡಗಳಿವೆ ಹೇಳಬಹುದು. ಈ ಮೂರು ಬೆಡಗುಗಳು ಪ್ರಾರಂಭದಿಂದಲೂ ಪ್ರಚಲಿತದಲ್ಲಿರುವವು ಉಪ ಬೆಡಗುಗಳು ಆ ನಂತರ ಸೇರಿಕೊಂಡಿವೆ ಇವುಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆಯದ ಕಾರಣ ಬೆಡಗುಗಳ ಬಗ್ಗೆ ಸ್ಪಷ್ಟತೆ ಇಲ್ಲ. ಸಮುದಾಯದ ಹೊರಗಿನಿಂದ ಅಧ್ಯಯನ ಮಾಡಿದಾಗ ಇಂತಹ ತಪ್ಪುಗಳು ನಡೆಯುವುದು ಸಹಜ. ವಿದ್ವಾಂಸರು ಹೇಳಿರುವ ಬೆಡಗುಗಳ ಬಗೆಗೆ ಗಮನಿಸಿದರೆ ಊರು ಗೊಲ್ಲರು ಮತ್ತು ಕಾಡುಗೊಲ್ಲರು ಎಂದು ವಿಂಗಡಿಸಿ ಅದರಲ್ಲಿ ಕಾಡುಗೊಲ್ಲರಲ್ಲಿ ಮೂರು ಉಪ ಬೆಡಗುಗಳಿವೆ ಎಂದು ಹೇಳಿದ್ದಾರೆ.

ಕಾಡುಗೊಲ್ಲರಲ್ಲಿ ಅನೇಕ ಒಳಪಂಗಡಗಳಿರುವಂತೆ ಇತರೆ ಗೊಲ್ಲರು ಗುರುತಿಸಿದ್ದಾರೆ. ಊರುಗೊಲ್ಲರು, ಹನುಮಗೊಲ್ಲರು, ಭಜಂತ್ರಿಗೊಲ್ಲರು, ವೈದ್ಯಗೊಲ್ಲರು, ಹಂದಿಗೊಲ್ಲರು, ಪೆದ್ದಟ್ಟಿಗೊಲ್ಲರು ಭಜಂತ್ರಿಗೊಲ್ಲರು, ದಾಸಗೊಲ್ಲರು ಇತ್ಯಾದಿ. ಎಮ್ ಗುರುಲಿಂಗಯ್ಯ ಕರ್ನಾಟಕದ ಕಾಡುಗೊಲ್ಲ ಸಮುದಾಯ ಎಂಬ ಕೃತಿಯಲ್ಲಿ. ಊರ ಗೊಲ್ಲರಿಗೂ ಮತ್ತು ಕಾಡುಗೊಲ್ಲರಿಗೂ ಯಾವುದೇ ರೀತಿಯ ವೈವಾಹಿಕ ಸಂಬಂಧಗಳು ನಡೆದು ಬಂದಿರುವುದು ತಿಳಿದು ಬಂದಿಲ್ಲ ಊರು ಗೊಲ್ಲರು ಗೊಲ್ಲರಹಟ್ಟಿ ಸಂಸ್ಕೃತಿಯಿಂದ ಹೊರ ಬಂದ ಕಾರಣ ಅವರನ್ನು ಮತ್ತೆ ಹಟ್ಟಿಯ ಒಳಗೆ ಸೇರಿಸದೆ ಅವರನ್ನು ದೂರವಿಟ್ಟಿರಬಹುದು. ಅವರು ಸ್ಥಿತ್ಯಂತರ ಹೊಂದಿದ ಗೊಲ್ಲರಾಗಿ ಕಂಡುಬರುತ್ತಾರೆ.

ಕಾಡುಗೊಲ್ಲರ ಸಂಸ್ಕೃತಿಯನ್ನು ಕುರಿತು ಸುಧೀರ್ಘವಾದ ಅಧ್ಯಯನಗಳು ನಡೆಯದ ಕಾರಣ ಅನೇಕ ವಿದ್ವಾಂಸರು ಅವರ ಕುಲಬಳಿ ಹುಟ್ಟಿದ ಕತೆಗಳನ್ನು ಸಂಗ್ರಹಿಸಿರುವುದು ಕಂಡುಬಂದಿಲ್ಲ. ಕಂಬಿಗೊಲ್ಲರು ಕಾಡುಗೊಲ್ಲರಲ್ಲಿ ಉಪಬೆಡಗು, ಮಾರನಗೊಲ್ಲರುಲ್ಲಿಯ ಉಪಬೆಡಗು. ವಿಪರ್ಯಾಸವೆಂದರೆ ತೀ.ನಂ.ಶ ಮತ್ತು ಎಂ.ಗುರುಲಿಂಗಯ್ಯ ಅವರು ಊರು ಗೊಲ್ಲರ ಪಟ್ಟಿಯಲ್ಲಿ ಸೇರಿಸಿರುವುದು ಕಂಡುಬಂದಿದೆ. ಅಂದರೆ ಸಮುದಾಯದ ಒಳಗಡೆ ಪ್ರವೇಶ ಮಾಡದ ಹೊರತು ಆ ಸಮುದಾಯದ ಒಳ ಆಂತರ್ಯವನ್ನು ಅರಿಯುವುದು ಕಷ್ಟದ ಕೆಲಸ. ಇಂತಹ ಸಂಗತಿಗಳಿಂದ ತಿಳಿದು ಬರುವುದೇನೆಂದರೆ ಅನೇಕ ವಿದ್ವಾಂಸರು ಸಮುದಾಯಗಳನ್ನು ಅಧ್ಯಯನ ಮಾಡುವಲ್ಲಿ ಸಾಕಷ್ಟು ತಪ್ಪುಗಳನ್ನು ಎಸಗಿದ್ದಾರೆ. ಏಕೆಂದರೆ ಕಾಡುಗೊಲ್ಲರ ವಂಶಗಳ ಬಗ್ಗೆ ಅಧ್ಯಯನ ಮಾಡುವಾಗ

ಅಧ್ಯಯನಕಾರರು ಸಮುದಾಯದ ಒಳಗಿನ ಸದಸ್ಯನಾಗಿ ಅಧ್ಯಯನಕ್ಕೆ ತೊಡಗಿದರೆ ಮಾತ್ರ ಒಳಸುಳಿವುಗಳನ್ನು ಬಿಟ್ಟುಕೊಡುತ್ತಾರೆ.

೩.೩.೧. ಮೆರನಗೊಲ್ಲರು ಮತ್ತು ಹರಿನಗೊಲ್ಲರು

ಚಿತ್ತಮುತ್ತಿ ಸನ್ನಮುತ್ತಿ ಮತ್ತು ಬಾಲಮುತ್ತಿಯನ್ನು ಸೆರೆಮನೆಯಿಂದ ಬಿಡಿಸಿ ಕ್ಷೌರಿಕ ಕುಲದಿಂದ ಗೊಲ್ಲರಾದ ಕತೆ ಉತ್ತರ ಭಾರತದಿಂದ ಬಂದ ನಾಲ್ಕು ಜನ ಕಾಡುಗೊಲ್ಲರ ವಂಶಸ್ಥರಲ್ಲಿ ಮೊದಲನೆಯವನು. ಚಂದಮುತ್ತಿ ಎರಡನೆಯವನು ಸಿತ್ತಮುತ್ತಿ ಮೂರನೆಯವನು ಬಾಲಮುತ್ತಿ ನಾಲ್ಕನೆಯವನು ಗೋಪಾಲಮುತ್ತಿ ಈ ನಾಲ್ಕು ಜನರು ದೆಹಲಿಯ ಸುಲ್ತಾನರ ದಬ್ಬಾಳಿಕೆಯನ್ನು ಸಹಿಸಿಕೊಳ್ಳದೆ, ಅಲ್ಲಿಂದ ನೇರವಾಗಿ ವಿಜಯನಗರ ಸಾಮ್ರಾಜ್ಯದ ತುಂಗಭದ್ರ ನದಿಯ ದಂಡೆಯಲ್ಲಿ ವಾಸಮಾಡುತ್ತಾರೆ. ಆ ಸಮಯದಲ್ಲಿ ವಿಜಯನಗರದ ಅರಸ ತಾವು ವಾಸವಾಗಿರುವ ಭೂಮಿಗೆ ತೆರಿಗೆ ಕೊಡಬೇಕೆಂದು ಪತ್ರವನ್ನು ಬರೆದಾಗ ಇವರು ನಾವೇ ರಾಜರು ನಾವು ಯಾಕೆ ತೆರಿಗೆ ಕೊಡಬೇಕೆಂದು ರಾಜರು ಕಳಿಸಿರುವ ಪತ್ರವನ್ನು ಬೆಂಕಿಯಲ್ಲಿ ಸುಟ್ಟುಬಿಡುತ್ತಾರೆ.(ವಿಜಯನಗರದ ಅರಸ ಯಾರು ಎಂಬುದು ತಿಳಿದು ಬಂದಿಲ್ಲ.) ಇದರಿಂದ ಕೋಪಗೊಂಡ ವಿಜಯನಗರದ ಅರಸ ಚಂದಮುತ್ತಿ, ಸಿತ್ತಮುತ್ತಿ. ಬಾಲಮುತ್ತಿ ಈ ಮೂವರನ್ನು ಸೆರೆಹಿಡಿದು ನೆಲಮಾಳಿಗೆಯಲ್ಲಿ ಇಡುತ್ತಾನೆ. ನಾಲ್ಕನೆಯವನು ಗೋಪಾಲಮುತ್ತಿ ಸೆರೆ ಸಿಗದೆ ತಪ್ಪಿಸಿಕೊಂಡು ದೇಶಾಂತರ ಹೋಗುತ್ತಾನೆ. ರಾಜ ಸೆರೆಯಾದವರಿಗೆ ಅನ್ನ ನೀರು ಕೊಡದಂತೆ ಆಜ್ಞೆಮಾಡುತ್ತಾನೆ. ಗೋಪಾಲಮುತ್ತಿಯ ಮಕ್ಕಳು ಗಾಳಿ ಮತ್ತು ಧೂಳಿ ಎಂಬುವವರು ಊರ ಹೊರಗೆ ಟಗರುಗಳನ್ನು ಸಾಕಿಕೊಂಡು ಅವುಗಳಿಗೆ ವಿದ್ಯಾಬುದ್ಧಿ ಕಲಿಸಿಕೊಂಡು ಅವರು ಊರೊಳಗೆ ಬರಲು ಕಾಯುತ್ತಿದ್ದರು. ಇವರ ತಂದೆ ಸೆರೆಯಾಗದ ಕಾರಣ ಊರಹೊರಗೆ ಇಟ್ಟಿದ್ದರು. ಜೊತೆಗೆ ರಾಯರಿಂದ ಮನ್ನಣೆ ಪಡೆಯಬೇಕೆಂಬ ಬಯಕೆಯಿಂದ ಇವರು ಟಗರುಗಳಿಗೆ ಹಿಂಗಾಣಿ ಮುಂಗಾಣಿ ಕಲಿಸಿಕೊಂಡು ಇರುವಂತ ಸಮಯದಲ್ಲಿ ಅದೇ ನಗರದ ಮುಂದೆ ಜಟ್ಟಿಕಾರರು ಹೋಗುತ್ತಿದ್ದರು. ಅವರು ಈ ಟಗರುಗಳಿಗೆ ನೀವು ಕಲಿಸಿದ ವಿದ್ಯೆಯನ್ನು ದೊರೆಗಳಿಗೆ ತೋರಿಸಿ ಎಂದು ಗಾಳಿ ಧೂಳಿಗಳಿಬ್ಬರು ಹೇಳಿ ಕಳುಹಿಸಿದರು ದೊರೆಯ ನಮ್ಮ ಹಿಂದೆ ಬಂದಂತಹ ಟಗರುಗಳನ್ನು ತೋರಿಸಿ ಇವು ಸಾಮಾನ್ಯ ಟಗರುಗಳಲ್ಲ ವಿದ್ಯಾ ಬುದ್ಧಿ ಕಲಿತಿವೆ ಎಂದು ಹೇಳಲು ಅವುಗಳನ್ನು ಪರೀಕ್ಷಿಸಿ ಅವುಗಳ ಕೌಶಲ್ಯಕ್ಕೆ ಮೆಚ್ಚಿ ಇವು ಯಾರವು ಎಂದು ಕೇಳಿದನು. ಆಗ ಜಟ್ಟಿಗಳು ಈ ಊರ ಮುಂದೆ ಗಾಳಿ ಧೂಳಿಗಳೆಂಬ (ಯಾಡರ) ತಂದೆ ತಾಯಿ ಇಲ್ಲದ ತಬ್ಬಲಿ ಮಕ್ಕಳಿದ್ದಾರೆ. ಅವರು ಸಾಕಿದ ಈ ಟಗರುಗಳು ಎಂದು ಹೇಳಲು, ಆಗ ಊರ ಮುಂದೆ ಇರುವ ಗಾಳಿ ಧೂಳಿ ಎಂಬುವವರನ್ನು ಕರೆಸಿ ಎಂದು ದೊರೆಗಳು ಅಪ್ಪಣೆ ಮಾಡಿದರು. ಆಗ ಅವರ ರಾಜನ ಮುಂದೆ ಬಂದಾಗ, ಈ ಟಗರುಗಳಿಗೆ ಚನ್ನಾಗಿ ವಿದ್ಯೆ ಬುದ್ಧಿ ಕಲಿಸಿದ್ದೀರಿ ನಮ್ಮ ಮನಸ್ಸಿಗೆ ಚನ್ನಾಗಿ ಸಂತೋಷವಾಯಿತು. ಈ ಟಗರುಗಳನ್ನು ನಮ್ಮ ಆಸ್ಥಾನಕ್ಕೆ ಸಲ್ಲಿಸತಕ್ಕದು ಮತ್ತು ನೀವು ಏನು ಕೇಳಿದರೂ ಕೊಡುತ್ತೇವೆಂದು ರಾಯರು ಹೇಳುತ್ತಾರೆ. ಆಗ ಗಾಳಿ ಧೂಳಿ ಇಬ್ಬರು ತಾವುಕೊಟ್ಟ ಸಕಲ ಭಾಗ್ಯವು ನಮ್ಮಲ್ಲಿ ಇದೆ. ಸ್ವಾಮಿ ನಮಗೆ ಗಾಳಿ ಧೂಳಿ ಎಂಬ ಹೆಸರುಗಳಿಗೆ

ಬದಲಾಗಿ ಬೇರೆ ಹೆಸರನ್ನು ನಾಮಕರಣ ಮಾಡಬೇಕೆಂದು ಕೇಳಿಕೊಂಡಾಗ ರಾಯರು ಗಾಳಿ ಧೂಳಿಗೆ ಹರೆರಾಯ ಮೆರೆರಾಯ ಎಂದು ನಾಮಕರಣ ಮಾಡಿ ತಮ್ಮ ಇಲಾಖೆಯಲ್ಲಿ ಇಬ್ಬರಿಗೂ ಒಂದೊಂದು ಕೆಲಸವನ್ನು ಕೊಟ್ಟು ಅರಮನೆಯಲ್ಲಿ ಇಟ್ಟು ಕೊಂಡಿದ್ದನು. ಹರೆರಾಯನಿಗೆ(ಹಲವುರಾಯ) ಒಂದು ಗಂಡು ಮಗು ಹುಟ್ಟಿತು. ಆ ಮಗುವಿಗೆ ರಾಮಗೊಂಡ ಎಂದು ಹೆಸರಿಸಿದರು. ಆತ ದಿನದಿಂದ ದಿನಕ್ಕೆ ದೊಡ್ಡವನಾಗಿ ಬೆಳೆಯುತ್ತಲಿರಲು, ರಾಯರು ತನ್ನ ನೂರಾರು ಸೈನಿಕರನ್ನು ಕರೆದುಕೊಂಡು ಶಿಕಾರಿಗೆಂದು ಹೋಗುವಾಗ ರಾಮಗೊಂಡನು ಅರಮನೆಯಲ್ಲಿಯೇ ಇರಲಿ ಎಂದು ಹೇಳಿ ಹೋದನು. ರಾಮಗೊಂಡನು ಅರಮನೆಯಲ್ಲಿದ್ದ ಯುವರಾಣಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಹಾಸ್ಯ ಮಾಡುತಿದ್ದನು. ಇದನ್ನು ನೋಡಿದ ಯಾರೋ ಹೀನಕುಲದ ಸಣ್ಣ ಮನುಷ್ಯನು ರಾಮಗೊಂಡನ ತಂದೆಯಾದ ಹರೆರಾಯಗೊಂಡನಿಗೆ ಹೇಳಿದನು. ಆಗ ಹರೆರಾಯಗೊಂಡನು ನನ್ನ ಮಗ ಉಂಡ ಮನೆಗೆ ಎರಡು ಬಗೆದನು ಎಂದು ತಿಳಿದು ರಾಮಗೊಂಡನ ತಲೆಯನ್ನು ಕಡಿದು. ತಮ್ಮನ ಮಗನಾದ ಹರೆರಾಮಗೊಂಡನನ್ನು ಕರೆದು ಅವನ ತಲೆಯನ್ನು ಹರಿವಾಣದಲ್ಲಿ ಇಟ್ಟು ತುಂಬಿದ ಊರಿನಲ್ಲಿ ಮೆರವಣಿಗೆ ಮಾಡುವಂತೆ ಹೇಳಿದನು. ಹರೆರಾಯನು ತನ್ನ ದೊಡ್ಡಪ್ಪ ಹೇಳಿದಂತೆ ಊರೆಲ್ಲ ಮೆರವಣಿಗೆ ಮಾಡಿಕೊಂಡು ಬರುತಿದ್ದ ಸಮಯದಲ್ಲಿ ಊರಿನಲ್ಲಿ ಗದ್ದಲ ಆಗುವುನ್ನು ಕೇಳಿಸಿಕೊಂಡ ರಾಯರು ಈ ಗದ್ದಲಕ್ಕೆ ಕಾರಣವೇನೆಂದು ಕೇಳಿದಾಗ ಇವನು ಅರಸನ ಮಗಳನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿದ್ದನು. ಅ ತಪ್ಪಿಗಾಗಿ ಅವನ ತಲೆಯನ್ನು ಕಡಿಯಾಗಿದೆ. ಎಂದು ಹೇಳಿದಾಗ ದೊರೆಯು ಅವನ ಮಾತು ಮೆಚ್ಚಿ ನಿನಗೆ ಏನು ಕೇಳುತಿಯ ಕೇಳು ಎಂದಾಗ ಸ್ವೋತ್ತು ಜೇನೊಚ್ಚದರೆನು ಹಾದತ್ವಾ ಪ್ರಭುಗಳೆ ಎಂಬುದಾಗಿ ಸಕಲ ದೇಶಗಳಲ್ಲಿ ಪ್ರಖ್ಯಾತಿಯಾಗಿದೆ. ನಮ್ಮ ರಾಮಗೊಡನು ಸತ್ಯಕ್ಕ ತಪ್ಪದೆ ಇದ್ದರೆ ಜೀವಂತನಾಗಲಿ ಎಂದು ನಾಗ ಬೆತ್ತದಿಂದ ಅವನ ದೇಹವನ್ನು ಮುಟ್ಟಲು ಯಥಾ ಪ್ರಕಾರ ಶಿವಾ ಶಿವಾ ಎಂದು ಎದ್ದನು ಅಂದಿನಿಂದ ಇವನನ್ನು ಮೆರೆರಾಯಗೊಂಡ ಎಂಬುದಾಗಿ ಕರೆದರು ಇವನ ಶಿರಸ್ಸನ್ನು ಹರಿವಾಣದಲ್ಲಿ ಇಟ್ಟು ಮೆರೆವಣಿಗೆ ಮಾಡಿದ್ದರಿಂದ ಅವನನ್ನು ಹರೆರಾಯಗೊಂಡ ಎಂದು ಕರೆದರು. ಹಾಗೆಯೇ ರಾಯರು ಇವರಿಬ್ಬರನ್ನು ತಮ್ಮ ಕಛೇರಿಯಲ್ಲಿ ಕೆಲಸಕ್ಕೆ ತೆಗೆದು ಕೊಂಡು ಸೆರೆಯಲ್ಲಿದ್ದ ಚಂದಮುತ್ತಿ ಚಿತ್ತಮುತ್ತಿ ಮತ್ತು ಬಾಲಮುತ್ತಿ ಸೆರೆಯಲ್ಲಿದ್ದ ಕಾರಣ ಅವರಿಗೆ ಪ್ರತಿದಿನವು ಬುತ್ತಿ ನೀರು ಹೊತ್ತು ಬರುತಿದ್ದ ಅವರ ಹೆಣ್ಣು ಮಕ್ಕಳು ಈ ರೀತಿ ಮಾತನಾಡಿಕೊಂಡು ಬರುತಿದ್ದರು. ಐದು ವರುಷದಿಂದ ನಮ್ಮ ತಂದೆಗಳಿಗೆ ಬುತ್ತಿ ಹೊತ್ತು ಸಾಕಾಗಿದೆ. ಕೈಯಿಂದ ನಮ್ಮ ಕೈಲಿ ಆಗದು. ನಮ್ಮ ತಂದೆಗಳ ಬಂದನವನ್ನು ಯಾರು ಬಿಡಿಸುತ್ತಾರೋ ಅವರನ್ನು ಮದುವೆ ಆಗುವುದಾಗಿ ಮಾತನಾಡಿಕೊಳ್ಳುತ್ತಿದ್ದರು. ಈ ವೇಳೆ ಕೈ ಕಾಲು ತೊಳೆದುಕೊಳ್ಳುತ್ತಿದ್ದ ಮೆರೆರಾಯಗೊಂಡ ಈ ಮಾತುಗಳನ್ನು ಕೇಳಿಸಿಕೊಂಡು, ಅವರ ಬಳಿಗೆ ಬಂದು, ಅವರಿಂದ ಭಾಷೆ ತೆಗೆದುಕೊಡು, ಅಲ್ಲಿಯೇ ಹರಿಯುವ ಗಂಗೆಯ ಮೇಲೆ ಆಣೆ ಮಾಡಿಸಿಕೊಂಡು. ನಿಮ್ಮ ತಂದೆಗಳ ಸೆರೆಯನ್ನ ಬಿಡಿಸುವುದಾಗಿ ಮಾತುಕೊಟ್ಟು, ಅಲ್ಲಿಂದ ದೊರೆಗಳ ಅರಮನೆಗೆ ಹೋಗುತ್ತಾನೆ. ದೊರೆಗಳು ಮಲಗಿರುವುದನ್ನು ನೋಡಿ ಇದೇ ಸರಿಯಾದ ಸಮಯವೆಂದು ಸೆಪ್ಪೆದಂಟನ ಆಯುಧದಿಂದ

ಚನ್ನಾಗಿ ಕ್ಷೌರ ಮಾಡಿವನು. ಬೆಳಿಗ್ಗೆ ಎದ್ದು ಮುಖ ನೋಡಿಕೊಂಡ ದೊರೆ ನನ್ನ ಮುಖ ಕ್ಷೌರ ಮಾಡಿದವರು ಯಾರೆಂದು ಕೇಳಲು ಸ್ವಾಮಿ ಅದನ್ನು ಕ್ಷೌರಿಕ ಮಾಡಿದ್ದಲ್ಲ, ನನ್ನ ಕುಶಲತೆಯಿಂದ ನಾನೇ ಮಾಡಿದ್ದು ಎಂದು ಮೆರೆಗೊಂಡ ಹೇಳುತ್ತಾನೆ. ರಾಯನು ಮೆಚ್ಚಿ ನೀನು ಏನು ಬೇಕಾದರೂ ಕೇಳು ಕೊಡುತ್ತೇನೆಂದು ಹೇಳಲು. ಮೆರೆಗೊಂಡ ಸ್ವಾಮಿ ಸೆರೆಯೊಳಗೆ ಇರುವ ಚಂದಮುತ್ತಿ, ಚಿತ್ತಮುತ್ತಿ ಬಾಲಮುತ್ತಿ ಈ ಮೂರು ಜನರನ್ನು ಸೆರೆಯಿಂದ ಬಿಡಬೇಕೆಂಬುದಾಗಿ ಕೇಳಿಕೊಳ್ಳುತ್ತಾನೆ. ಆ ಮಾತಿಗೆ ರಾಯನು ಒಪ್ಪಿ ಸೆರೆಯಾಳುಗಳನ್ನು ಬಿಡಿಸಿದನು. ಅವರು ಯಾರು ಎಂದು ರಾಯನು ಕೇಳಿದಾಗ ರಾಮಗೊಂಡನು ಈ ಮೂವ್ವರು ಮಂದಿ ನನ್ನ ಸೋದರ ಮಾವಂದಿರು ಎಂದು ಹೇಳುತ್ತಾನೆ. ಆ ಐದು ಜನ ಹೆಣ್ಣು ಮಕ್ಕಳನ್ನು ಕರೆಯಿಸಿ ನೀವು ಆಡಿರುವ ಮಾತಿನಂತೆ ಸಮಸ್ಥ ಜನರ ಸಮುಖದಲ್ಲಿ ಮೆರೆರಾಯ, ಹರೆರಾಯ, ಕಂಬಿರಾಯ, ಕಾಳೆರಾಯ ಹಾಗೂ ಎಣ್‌ರಾಯನನ್ನು ಮದುವೆಯಾದರು. ಚಂದಮುತ್ತಿ ಮಾದವಂಶಸ್ಥರಾದ ಕಾಟಮನಾಯಕ ಓಬೆರಾಜನು ತಿಪ್ಪರಾಜನು, ತುಗ್ಗಲಿಚಿತ್ತನಾಯ್ಕ, ಶ್ರೀಕಾಮಗೇತಿ ರಾಜನ ಚಿತ್ತನಾಯಕ, ಇನ್ನೂ ಮುಂತಾದ ಕರಪಾಲದವರು ಕೂಡಿ ಈ ಮೆರೆರಾಯಗೊಂಡನಿಗೆ ಕುಲದಲ್ಲಿ ಸೇರಿಸಿಕೊಳ್ಳಲು ಇವರ ವಂಶದ ಗುರುವಾದ ಬಲಮುದಿ ಬಸಪ್ಪದೇವರ ಕೈಯಿಂದ ಇವರಿಗೆ ವಿಭೂತಿ ಇಡಿಸಿ ಸುದ್ಧಿಕರಿಸಿ ಮದುವೆ ಮಾಡುವರು. ಮದುವೆ ಮಾಡುವಾಗ ಭೂತದ ಗೌಡಿಕೆ ನನಗೆ-ತನಗೆ ಎಂದು ಅವರವರಲ್ಲಿಯೇ ಗುದ್ದಾಡಿಕೊಂಡು ರಾಯರ ಬಳಿಗೆ ಹೋದರು ರಾಯರು ಮೆರೆರಾಯಗೊಂಡನ ಸೋದರಮಾವಂದಿರನ್ನು ಬಿಡಿಸಲು ಸಾಕಷ್ಟು ರೀತಿ ತೊಂದರೆ ಅನುಭವಿಸಿದ್ದರಿಂದ ಅವನಿಗೆ ಬೂತದ ಮುದ್ದೆ ಕೊಡಲಿ ಎಂಬುದಾಗಿ ಅಪ್ಪಣೆಯಾಯಿತು. ಈ ಮಾತಿಗೆ ಮೆರೆರಾಯಗೊಂಡನು ದೊಡ್ಡಿಗೆ ಬಂದು ಪಂಚಾಯಿತಿ ಮಾಡುವನ ಬಳಿ ಆ ಮುದ್ದೆ ತರಿಸಿ ನೋಡಲಾಗಿ ಅದರೊಳಗೆ ಹುಳುಗಳಾಗಿ ಗರಿಬೆಳೆದುಕೊಂಡಿದ್ದವು. ಅಂತದನ್ನು ಯಾರು ಉಂಡು ಸಹಿಸಿಕೊಳ್ಳುತ್ತಾರೋ ಅವರಿಗೆ ಭೂ ಮುದ್ದೆ ಗೌಡಿಕೆಯನ್ನು ಜಾಡಿಗೌಡಿಕೆಯನ್ನು ಅಚಂದ್ರಾರ್ಕ ಇರುವ ಪರಿಯಂತ ಕೊಡುತ್ತೇವೆ ಎಂಬುದಾಗಿ ಗೊತ್ತು ಮಾಡಲು ಆ ಮುದ್ದೆ ಉಂಡು ರೂಢಿಮಾಡಿಕೊಂಡು ಸಹಿಸಿಕೊಳ್ಳದವರಿಗೆ ಕುಲಕ್ಕೆ ವರ್ತಮಾಡಿ ದೊಡ್ಡಿ ಬಿಟ್ಟು ಹೋಗಬೇಕು ಎಂಬುದಾಗಿ ಆಜ್ಞೆ ಮಾಡಿದ್ದರಿಂದ ಸರ್ವ ಜನರು ತಮ್ಮ ಕೈಲಾಗದು ಎಂದು ಹೇಳಿದ್ದರಿಂದ ಚಂದಮುತ್ತಿ ಚಿತ್ತಮುತ್ತಿ, ಬಾಲಮುತ್ತಿ, ಕಾಮಗೇತಿ ರಾಜಮುತ್ತಿ, ತುಗ್ಗಲಿಚಿತ್ತಮುತ್ತಿ ಇಂಥರಾಜ ವಂಶಸ್ಥರಾದ ಕಾಟನಚಿತ್ತಮುತ್ತಿ ಮೋದಲಾದವರು ಸೇರಿ ರಾಮಗೊಂಡನನ್ನು ಕರೆದು ಅದನ್ನು ಊಟಮಾಡು ಅಂದು ಸರ್ವಜನರು ಕೇಳಿಕೊಂಡರು. ಆ ಮಾತಿಗೆ ಮೆರೆರಾಯಗೊಂಡನು ಊಟಮಾಡುತ್ತೇನೆಂದು ಸಮಸ್ತ ಗುಂಪಿನವರಿಗೆ ವಂದಿಸಿ ತನ್ನ ಗುರುವಾದ ಬಲಮುದಿ ಬಸಪ್ಪದೇವರಲ್ಲಿ ಪ್ರಾರ್ಥಿಸಿ ಅಪ್ಪಣೆ ತೆಗೆದುಕೊಂಡು, ಕಂಪಲದ ಕುಲದ ಮುಂದೆ ಆ ಮುದ್ದೆಯನ್ನು ಹರಿವಾಣದಲ್ಲಿ ತರುವರು ಚಂದಮುತ್ತಿ ಹೆಂಡತಿ ಕಾಳಮ್ಮ ಮಂದರಾಜ ವಂಶಸ್ಥರಾದ ಕಾಟಮಚಿತ್ತನ ಹೆಂಡತಿ ಬೋರಮ್ಮ ಇವರಿಬ್ಬರು ಹರಿವಾಣ ತಂದು ಕುಲದವರ ಮುಂದೆ ಇಟ್ಟರು. ಹರೆರಾಯಗೊಂಡನಿಗೆ ನೀರುಕೊಟ್ಟರು. ಗೋಸುಮುತ್ತಿ ಹೆಂಡತಿ ಯಲ್ಲಮ್ಮ ಮೆರೆರಾಯನ ಕೈತೊಳೆದಳು. ಕೈ ತೊಳೆದುಕೊಂಡು

ಬಂದು ಆ ಭೂವದಮುದ್ದೆಯನ್ನು ಊಟಮಾಡಿದನು. ಆಗ ಸರ್ವ ಜನರು ಕೂಡಿ ಗೌಡಿಕೆಕೊಟ್ಟು ಹಾಲುತುಪ್ಪ ತರಿಸಿ ಗೌಡಿಕೆಯನ್ನು ಮೆರೆರಾಯಗೊಂಡನಿಗೆ ಕೊಟ್ಟರು ಮೆರೆರಾಯಗೊಂಡ ರಾಯರ ಬಳಿಗೆ ಬಂದು ಏನೆಂದರೆ ನಾಡಗೌಡಿಕೆ ಕೊಡಬೇಕೆಂದು ಕಂಪಳದಲ್ಲಿ ಹೇಳಿಕೊಂಡನು. ರಾಯನು ಅದೇಪ್ರಕಾರ ನಾಡ ಗೌಡಿಕೆ ಕೊಟ್ಟರು. ಮೆರೆರಾಯಗೊಂಡನಿಗೆ 'ಮುತ್ತಿನ ಜಗಜಾಡಿ ಸತ್ತಿಗಳವಂದವು ಡಾಸು ತಂದು ಹೀರೆಕೆದಿಗೆ ತಂದು ಕೀರ್ತಿ ಇಜ್ಜುವರ ತಂದು ವಜ್ರ ಕೇಚರ ಕಠಾರಿ' ಎಂಬ ಬಿರುದನ್ನು ಕಂದಿಲು ವಂಶದವರು ಮೆರೆಗೋಡರಾನಿಗೆ ಕೊಡಿಸಿದರು. ನಿಮ್ಮ ಕುಲದಲ್ಲಿ ಏನೇ ವ್ಯವಹಾರ ನಡೆದರೂ ಅದನ್ನು ನೀವೇ ಪರಿಹರಿಸುವುದು ಎಂದು ಹೇಳಿ ಸರ್ವಜನರು ಹಾಲು ತುಪ್ಪದ ಮೂಲಕ ಮಹಾರಾಜ ಸನ್ನಿಧಿಯಲ್ಲಿ ಪ್ರಮಾಣ ಮಾಡಿಸಿದರು. ಈ ಪ್ರಮಾಣಕ್ಕೆ ಯಾರಾದರು ತಪ್ಪಿದರೆ ಗೋಹತ್ಯೆ, ಬ್ರಹ್ಮಹತ್ಯೆ, ಶಿಶುಹತ್ಯೆ, ಗುರುಹತ್ಯೆ ಮಾಡಿದಂತೆ ಎಂಬುದಾಗಿ ಆ ಚಂದ್ರರ್ಕ ಪರಿಯಂತ ಢಂಗೂರ ಸಾರಿದರು. ರಾಯ ಮೆಚ್ಚಿ ಮೆರೆರಾಯಗೊಂಡನಿಗೆ ಹಳೆಬೀಡು, ರಾಮೇನಹಾಳ್ ಉಂಬಳಿಯನ್ನು ಕೊಟ್ಟರು. ಇದಕ್ಕೆ ಸಾಕ್ಷಿ ಪೆನುಗೊಂಡ ಬೆಟ್ಟದ ಮೇಲಿರುವ ಶಾಸನ ಹಂಪೆ ವಿರುಪಾಕ್ಷನ ಕಲ್ಲು ಕಂಬದ ಮೇಲಿನ ಶಾಸನ ದೊರೆಗಳು ಶಾಸನ ಹಾಕಿಸಿದರು. ತುಂಗಭಂದ್ರ ದಕ್ಷಿಣ ದಿಕ್ಕಿನಲ್ಲಿ ರಾಮಗೊಂಡನು ರಾಮೇನಹಳ್ಳಿ ಎಂಬ ಊರನ್ನು ಕಟ್ಟೆಮನೆಯನ್ನಾಗಿ ಮಾಡಿಕೊಂಡನು. ತಾಳವಟ್ಟನ್ನು ಚಂದಮುತ್ತಿ ಕಟ್ಟೆಮನೆಯನ್ನಾಗಿ ಮಾಡಿಕೊಂಡನು. ಕರಿಓಬೇನಹಳ್ಳಿ ಬುಳ್ಳನಾಯಕ ಕಟ್ಟೆಮನೆಯನ್ನಾಗಿ ಮಾಡಿಕೊಂಡನು.

ಇದೇ ಕತೆಯನ್ನು ಚಿತ್ರದುರ್ಗ ಜಿಲ್ಲೆ ಅದೇ ತಾಲೂಕು ಜೋಡಿ ಚಿಕ್ಕೇನಹಳ್ಳಿ ಗೊಲ್ಲರಹಟ್ಟಿಯ ದೊಡ್ಡ ತಿಮ್ಮಜ್ಜ ಬೇರೋಂದು ರೀತಿಯಲ್ಲಿ ಹೇಳುತ್ತಾರೆ. 'ಮೆರನಗೊಲ್ಲರು ಮತ್ತು ಹರೆನಗೊಲ್ಲರು ಹರೆರಾಯ ಮರೆರಾಯ ಎಂಬ ಸಹೋದರರು ಹುಟ್ಟಿದರು. ಇವರಿಗೆ ಮೊದಲು ಹೆಸರೇ ಇರಲಿಲ್ಲವೆಂದರ ಕುಲ ಎಲ್ಲಿಂದ ಬರಬೇಕು. ಇವರಿಗೆ ಗಾಳಿ ಧೂಳಿ ಎಂಬ ಹೆಸರಗಳಿದವು. ಊರಿನಲ್ಲಿ ಗೋಲಿ ಗಜ್ಜುಗ ಆಡಿಕೊಂಡದ್ದರು. ಹೈದರಾಲಿ ಮತ್ತು ಟಿಪ್ಪುಸುಲ್ತಾನ ಕಾಲದಲ್ಲಿ ಸೆರೆ ಆಳುಗಳಾದ ಕಾಡುಗೊಲ್ಲರು, ಕಾಟುಮಲಿಂಗ ಚಿತ್ರಲಿಂಗ ಇವರಿಬ್ಬರು ಮೊದಲು ಸಹೋದರರಾಗಿದ್ದು ಆ ನಂತರದಲ್ಲಿ ನೆಂಟರಾದರು. ಇವರನ್ನು ಸೆರೆಯಲ್ಲಿಟ್ಟ ಸಂದರ್ಭದಲ್ಲಿ ಇವರ ಹೆಣ್ಣು ಮಕ್ಕಳು ದಿನ ನಿತ್ಯ ತಮ್ಮ ತಂದೆಗಳಿಗೆ ಬೆಳಿಗ್ಗೆ ಮತ್ತು ಸಾಯಂಕಾಲ ಊಟವನ್ನು ಹಟ್ಟಿಯಿಂದ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು. ಈ ಹೆಣ್ಣು ಮಕ್ಕಳು ಈ ಕೆಲಸವನ್ನು ಮಾಡಿ ರೋಸಿ ಹೋಗಿದ್ದರು. ಇಂತಹ ಸಮಯದಲ್ಲಿ ಇವರು ಈ ರೀತಿ ಮಾತನಾಡುತ್ತಾರೆ. ಯಾರು ನಮ್ಮ ಅಪ್ಪಂದಿರನ್ನು ಸೆರೆಬಂಧನವನ್ನು ಬಿಡಿಸುತ್ತಾರೋ ಅವರನ್ನು ಇಬ್ಬರು ಮದುವೆಯಾಗುವುದಾಗಿ ಮಾತನಾಡಿಕೊಳ್ಳುತ್ತಾ ಹೋಗುವಂತಹ ಸಮಯದಲ್ಲಿ ಗಿಡದ ಮರೆಯಲ್ಲಿ ಮೆರೆರಾಯ ನಿಂತು ಕೇಳಿಸಿಕೊಂಡ. ಆ ಹೆಣ್ಣು ಮಕ್ಕಳಿಗೆ ಗೊತ್ತಾಗದಂತೆ ಆ ರಾತ್ರಿಯೇ ರಾಜನ ಅರಮನೆಗೆ ಹೋಗಿ ರಾಜನಿಗೆ ಗೊತ್ತಾಗದಂತೆ ಸೆಪ್ಪೆದಂಟಿನ ಸಹಾಯದಿಂದ ಒಂದು ಮುಖದ ಕ್ಷೌರ ಮಾಡಿ ಬರುತ್ತಾನೆ. ರಾಜ ಅರಮನೆಯ ಸುತ್ತ ಸೈನಿಕರನ್ನು ಕಾವಲು ಇಟ್ಟಿರುತ್ತಾನೆ. ಅದರೂ ಅವರ ಕಣ್ಣಿಗೆ ಬೀಳದಂತೆ ಹೋಗಿ ಕ್ಷೌರಮಾಡಿ ಬರುತ್ತಾನೆ. ಬೆಳಿಗ್ಗೆ ಎದ್ದು ನಿಲುಗನ್ನಡಿಯಲ್ಲಿ

ಮುಖ ನೋಡಿಕೊಂಡ ರಾಜನು ಆಳುಗಳನ್ನು ಕರೆದು ಯಾರು ಈ ಕೆಲಸ ಮಾಡಿದ್ದು ಎಂದು ಕೇಳಿದಾಗ ಎಲ್ಲರು ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ತನ್ನ ರಾಜ್ಯದಲ್ಲಿರುವ ಎಲ್ಲಾ ಕ್ಷೌರಿಕರನ್ನು ಕರೆದು ಕೇಳಿದರೂ ಯಾರು ಒಪ್ಪಿಕೊಳ್ಳುವುದಿಲ್ಲ. ಆಗ ದೊರೆ ಇಡೀ ಊರಿನ ತುಂಬ ಢಂಗೂರ ಹೊಡೆಯಿಸಿ ಹೇಳುತ್ತಾನೆ. ಯಾರು ನನ್ನ ಒಂದು ಮುಖದ ಕ್ಷೌರ ಮಾಡಿರುವರೋ ಅವರು ಇನ್ನೊಂದು ಮುಖದ ಕ್ಷೌರವನ್ನು ಯಾರಿಗೂ ತಿಳಿಯದಂತೆ ಮಾಡಿದ್ದೆ ಆದರೆ, ನನ್ನ ರಾಜ್ಯದಲ್ಲಿ ಅರ್ಧ ಭಾಗವನ್ನು ಕೊಡುವುದಾಗಿ ಹೇಳುವನು. ಇದನ್ನು ತಿಳಿದ ರಾಮಗೊಂಡನು ಮಾರನೆಯ ದಿನ ರಾಜನಿಗೂ ಅವನ ಸೈನಿಕರಿಗೂ ತಿಳಿಯದಂತೆ ಬಂದು ಇನ್ನೊಂದು ಕಡೆಯ ಮುಖದ ಕ್ಷೌರವನ್ನು ಮಾಡುತ್ತಾನೆ. ಪುನಃ ಬೆಳಿಗ್ಗೆ ಎದ್ದು ಕನ್ನಡಿಯಲ್ಲಿ ಮುಖ ನೋಡಿಕೊಂಡ ರಾಜನು ಕ್ಷೌರಿಕನನ್ನು ಕರೆಸಿ ಏನು ಬೇಕು ಕೇಳು ಎಂದಾಗ, ನನಗೆ ಏನೂ ಬೇಡ ಸೆರೆಯಲ್ಲಿಟ್ಟಿರುವ ನನ್ನ ಸೋದರ ಮಾವಂದಿರ ಬಿಡುಗಡೆ ಮಾಡಿರೆಂದು ಕೇಳಿವನು. ಆಗ ದೊರೆಯು ಅವರನ್ನು ಬಿಡುಗಡೆ ಮಾಡುವನು. ಹೇಳಿದ ಮಾತಿನಂತೆ ಆ ಹೆಣ್ಣು ಮಕ್ಕಳನ್ನು ದೊರೆ ಅವರನ್ನು ಕರೆಸಿ ಕೇಳಿದಾಗ ಅವರು ನಾವು ಹೇಳಿದ್ದು ನಿಜವೆಂದು ಒಪ್ಪಿಕೊಂಡು ತಮ್ಮ ತಂದೆಗಳಿಗೆ ಮದುವೆ ಮಾಡಲು ಹೇಳಿವರು. ಅಷ್ಟೇ ಅಲ್ಲದೆ ಅವರನ್ನು ಗೊಲ್ಲರ ಕುಲಕ್ಕೆ ಸೇರಿಸಿಕೊಡು ಕರಡಿಯ ಗೊಲ್ಲರು ತಿಮ್ಮಪ್ಪನನ್ನು ಅಮವಾಸ್ಯೆ ದೇವರಾಗಿ ಬಿಟ್ಟುಕೊಟ್ಟರು. ರಾಮೇನಹಳ್ಳಿ ಎಂಬುದು ಕಟ್ಟೇಮನೆಯನ್ನಾಗಿ ಮಾಡಿಕೊಂಡರು.

ಯರಬಳ್ಳಿ ಗೊಲ್ಲರಹಟ್ಟಿಯ ಕುರಿನಾಗರ ವೀರಣ್ಣ ಎಂಬುವವರು ಮೆರೆನಗೊಲ್ಲರು ಹರಿನಗೊಲ್ಲರು ಕುಲ ಪಡೆದ ರೀತಿಯನ್ನು ಬೇರೊಂದು ನೆಲೆಯಲ್ಲಿ ಹೇಳಿದ್ದಾರೆ. 'ಒಂದು ದಿನ ಒಬ್ಬ ಬ್ರಾಹ್ಮಣ ಶಿವಲಿಂಗವನ್ನು ಪೂಜೆ ಮಾಡಲೆಂದು ಹೂವುಕೊಯ್ದು ಶಿವಲಿಂಗದ ಮುಂದೆ ಇಟ್ಟಾಗ ಎಲ್ಲಿಂದಲೋ ಬಂದ ಹಸುವೊಂದು ಆ ಹೂವು ತಿಂದಿತು. ಆಗ ಸಿಟ್ಟಿಗೆದ್ದ ಬ್ರಾಹ್ಮಣ ಹಸುವನ್ನು ಕಲ್ಲಿನಿಂದ ಹೊಡೆದು ಕೊಂದನು. ಇದರಿಂದಾಗಿ ಹಸುವಿನ ಹೊಟ್ಟೆ ಹೊಡೆದು ಕರುಳುಗಳು ಹೊರಬಂದವು. ನಂತರ ಬ್ರಾಹ್ಮಣ ಅನ್ಯಾಯವಾಗಿ ಗೋವನ್ನು ಕೊಂದೆನಲ್ಲ ಎಂದು ಅದನ್ನು ಸಮಾಧಿ ಮಾಡಿ ಪುಣ್ಯ ಕಟ್ಟಿಕೊಳ್ಳೋಣವೆಂದು ಊರಿಗೆ ಹೋಗಿ ಜನರನ್ನು ಕರೆಸಿಕೊಂಡು ಬರುವುದರೊಳಗಾಗಿ ಹಸು ಮಾಯವಾಗಿ ಮಲದಂತಹ ಎರಡು ಮಾಂಸದ ಮುದ್ದೆಗಳು ಮಾತ್ರ ಉಳಿದಿದ್ದವು. ಮುಂದೆ ಹಲವು ಮಲವುಗಳೆ ಹರೆರಾಯ ಮೆರೆರಾಯರಾಗಿ ರೂಪುಗೊಂಡರು. ಇವರು ಪ್ರಭುದ್ದಮಾನಕ್ಕೆ ಬಂದು ಚಿತ್ತಮುತ್ತಿ ಸನ್ನಮುತ್ತಿಯನ್ನು ಸೆರೆಯಿಂದ ಬಿಡಿಸಿದರು. ನಂತರ ಮದುವೆಯಾಗುವುದು ಕುಲದ ಬಿರುದು ಪಡೆಯುವುದು ಹೀಗೆ ಮುಂದುವರಿಯುತ್ತದೆ.

ಈ ಮೂರು ಕತೆಗಳನ್ನು ಗಮನಿಸಿದಾಗ ಕಾಡುಗೊಲ್ಲರಲ್ಲದ ಒಂದು ಸಮುದಾಯ ಕಾಡುಗೊಲ್ಲರಲ್ಲಿಯ ಕುಲವನ್ನು ಪಡಯಲು ಏನೆಲ್ಲ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಕತೆಯಲ್ಲಿ ನಾನು ಪ್ರಮುಖವಾಗಿ ಗಮನಿಸಿದ ಪಶುಪಾಲಕ ಸಮುದಾಯ ಇಡೀ ರಾಜ ಪ್ರಭತ್ವವನ್ನು ಪ್ರಶ್ನೆ ಮಾಡಿರುವುದು ಕಂಡುಬರತ್ತದೆ. ಪಶುಪಾಲಕರಿಗೆ ನಮ್ಮನ್ನು ಆಳುವವರು ಇದ್ದಾರೆಯೇ ಎಂಬ ಪ್ರಶ್ನೆ ಎದುರಾಗಿದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಇಂತ ರಾಜ ಪ್ರಭುತ್ವದ ವಿರುದ್ದ

ಹೋರಾಡಿದ್ದಾರೆ. ಇಂತಹದೆ ಒಂದು ಸಂದರ್ಭ ವಡ್ಡಾರಾಧನೆಯ ಸುಕುಮಾರ ಸ್ವಾಮಿಯ ಕತೆಯಲ್ಲಿಯು ಉಲ್ಲೇಖವಾಗಿದೆ. ಸುಕುಮಾರ ಸ್ವಾಮಿಯು 'ನಮ್ಮನಾಳರ್ ಒಳರೇ' ಎಂದು ಕೇಳುತ್ತಾನೆ. ಇಲ್ಲಿ ಕಾಡುಗೊಲ್ಲರು ಪ್ರಶ್ನೆ ಮಾಡಿರುವುದು ವಿಜಯನಗರದ ಅರಸರನ್ನು ನಾವೇ ರಾಜರು ನಾವು ಇನ್ನೊಬ್ಬರಿಗೆ ತೆರಿಗೆ ಕೊಡಬೇಕೆ ಎಂದು ರಾಜ ಬರೆದಿರುವ ಪತ್ರವನ್ನು ಸುಟ್ಟುಹಾಕುವುದು. ಕಾವಲಿನ ಮೇಲೆ ನಮಗೆ ಮಾತ್ರ ಹಕ್ಕಿರುವುದು ಎಂಬುದನ್ನು ಪ್ರತಿನಿದಿಸುತ್ತದೆ. ಯಾಡರು ಎಂಬ ಪದ ಕೂಡ ಉಲ್ಲೇಖವಾಗಿದೆ, ಅದರ ಅರ್ಥ ಏನು ಎಂಬುದರ ಬಗ್ಗೆ ಅವರಲ್ಲಿ ಮಾಹಿತಿಯಿಲ್ಲ. ಹಸ್ತ ಪ್ರತಿಯಲ್ಲಿ ದೊರೆತಿರುವ ಮಾಹಿತಿಯು ಸಂಶೋದಕನಿಗೆ ಹೊಸದಾರಿಯನ್ನು ತೋರಿಸುತ್ತದೆ ಇದು ಕೇವಲ ಕತೆ ಎಂದು ತಿಳಿದರೆ ಹೊಸ ಮಾಹಿತಿಗಳು ದೊರೆಯುವುದಿಲ್ಲ. ಹರೆರಾಯ ಮೆರೆರಾಯ ಕುಲಪಡೆದ ಬಗ್ಗೆ ಹಂಪೆ ವಿರೂಪಾಕ್ಷೇಶ್ವರ ದೇವಾಲಯದ ಕಂಬದಲ್ಲಿ ಬರವಣಿಗೆ ಇದೆ ಎಂದು ಹೇಳಲಾಗಿದೆ. ಪೆನುಗೊಂಡದ ಬೆಟ್ಟದ ಮೇಲೆ ಶಾಸನವಿದೆ ಹಸ್ತ ಪ್ರತಿಯಲ್ಲಿರುವ ಎಲ್ಲಾ ಸಂಪ್ರದಾಯಗಳು ಇಂದು ಕೂಡ ಆಚರಣೆಯಲ್ಲವೆ. ಕೆಲವು ಸಲ ಸಂಶೋಧಕನಿಗೆ ಮೌಖಿಕ ಕತೆಗಳು ಆಕಾರವಾಗಬಲ್ಲವು ಎಂಬುದಕ್ಕೆ ಈ ಕತೆಗಳೆ ಸಾಕ್ಷಿ. ಸಾಮಾನ್ಯವಾಗಿ ಪಶುಪಾಲಕರು ಹುಲ್ಲುಗಾವಲಿನ ಮೇಲೆ ಯಾರು ಹಿಡಿತ ಹೊಂದಿರುತ್ತಾರೋ ಅವರ ವಿರುದ್ದ ತಿರುಗಿ ಬೀಳುವುದರ ಜೊತೆಗೆ ಪ್ರಭುತ್ವ ಮಾಡುವಂತಹ ತಪ್ಪುಗಳನ್ನು ಎತ್ತಿತೋರಿಸಿದ್ದಾರೆ.

ಈ ಕತೆಗಳಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವೆಂದರೆ ಇಡೀ ಪ್ರಭತ್ವವನ್ನು ಪ್ರಶ್ನಿಸಿದವನು ಗೋಪಾಲಮುತ್ತಿ, ಅಷ್ಟೇ ಅಲ್ಲ ಗೋಪಾಲಮುತ್ತಿ ಪ್ರಭುತ್ವದ ದಬ್ಬಾಳಿಕೆಯನ್ನು ವಿರೋಧಿಸಿ ತಲೆ ಮರೆಸಿಕೊಳ್ಳುತ್ತಾನೆ. ಆ ನಂತರ ತನ್ನ ಮಕ್ಕಳ ಮೂಲಕ ಪ್ರತೀಕಾರ ತೀರಿಸಿಕೊಳ್ಳುತ್ತಾನೆ. ಈ ಕತೆಯು ಪ್ರಾದೇಶಿಕವಾಗಿ ಭಿನ್ನತೆಯನ್ನು ಪಡೆದುಕೊಂಡಿದ್ದರೂ ಕತೆಯಲ್ಲಿ ವಾಸ್ತವ ಇಲ್ಲವೆಂದು ನಿರಾಕರಿಸುವಂತಿಲ್ಲ. ಈ ಕತೆಯ ಮೂಲಕ ಒಂದು ಬೆಡಗು ಬಂದು ಸೇರಿಕೊಂಡರೆ ಆ ಬೆಡಗಿಗೆ ಪ್ರತ್ಯೇಕವಾದ ಬಿರುದು ಬಾವಲಿಗಳು, ಪ್ರತ್ಯೇಕವಾದ ಕಟ್ಟೇಮನೆ, ಆ ಬೆಡಗಿನಲ್ಲಿ ಅನೇಕ ಉಪಬೇಡಗುಗಳು ಸೃಷ್ಟಿಗೊಂಡಿರುವುದನ್ನು ಗಮನಿಸಬಹುದು. ಕಾಡುಗೊಲ್ಲರ ಯಾವುದೇ ಶುಭ ಸಂದರ್ಭದಲ್ಲಿ ಹರಿನಗೊಲ್ಲರು ಮೆರನಗೊಲ್ಲರು ಇರಲೇಬೇಕು. ಇವರು ಭಾಗವಹಿಸಲಿಲ್ಲ ಎಂದರೆ ತಾವು ಮಾಡಬೇಕಾದ ಜಾಡಿಯ ಪೂಜೆ ಹಾಗೆ ನಿಲ್ಲುತ್ತದೆ.

ಮೆರನಗೊಲ್ಲರು ಮತ್ತು ಹರಿನಗೊಲ್ಲರು ಕ್ಷೌರಿಕ ವೃತ್ತಿಯಿಂದ ಬಂದರೂ ಅವರ ಬೆಡಗುಗಳನ್ನು ಶೋಷಣೆಯ ರೀತಿಯಲ್ಲಿ ತಾರತಮ್ಯಕ್ಕೆ ಒಳಗಾಗಿಲ್ಲ. ಇತರೇ ಬೆಡಗುಗಳಿಗೆ ಇಲ್ಲದ ಪ್ರಾಮುಖ್ಯತೆಯನ್ನು ಇವರಿಗೆ ಕೊಟ್ಟಿರುವುದನ್ನು ಕಾಣಬಹುದು. ಆಂಧ್ರ ಕರ್ನಾಟಕ ಒಳಗೊಂಡಂತೆ ಇವರ ಜನ ಸಂಖ್ಯೆ ವ್ಯಾಪಿಸಿಕೊಂಡಿದೆ. ಇವರು ವೈವಾಹಿಕ ಸಂಬಂಧವನ್ನು ಕರಡಿಗೊಲ್ಲರೊಂದಿಗೂ ಹಾಗೂ ಸನ್ನೇಯಗೊಲ್ಲರೊಂದಿಗೂ ಬೆಳೆಸಬಹುದು. ಆದರೆ ಇತ್ತೀಚೆಗೆ ಇವರಲ್ಲಿ ಕೆಲವು ನಿಷೇಧಗಳನ್ನು ಮಾಡಲಾಗಿದೆ. ಯಾಕೆಂದರೆ ಪೂರ್ವದಿಂದಲೂ ನೆಂಟರು ಬಂಟರಾಗಿ ಕರಡಿಗೊಲ್ಲರು ಮತ್ತು

ಸನ್ನೆಯಗೊಲ್ಲರು ಜೊತೆಯಾಗಿ ಬಂದವರು. ಹರಿನಗೊಲ್ಲರು ಮತ್ತು ಮೆರನಗೊಲ್ಲರ ಪ್ರವೇಶದಿಂದಾಗಿ ಅಣ್ಣ ತಮ್ಮಗಳಾಗುವ ಸಂಭವವುಂಟಾದ ಕಾರಣದಿಂದ ಸನ್ನೆಯಗೊಲ್ಲರು ಹರಿನಗೊಲ್ಲರು ಮತ್ತೆ ಮೆರನಗೊಲ್ಲರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದಿಲ್ಲ. ಕರಡಿಗೊಲ್ಲರೊಂದಿಗೆ ಮಾತ್ರ ಬೆಳೆಸುತ್ತಾರೆ. ವಿಜಯನಗರದ ಅರಸರ ನೇತೃತ್ವದಲ್ಲಿ ನಡೆದ ಮಾತು ಕತೆಯಂತೆ ತಮ್ಮ ಬಿರುದಾವಳಿಗಳನ್ನು ಇಂದು ಕೂಡ ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರತಿಯೊಂದು ಮದುವೆ ಇಲ್ಲವೆ ದೇವರ ಕಾರ್ಯಗಳಲ್ಲಿ ಜಾಡಿಯನ್ನು ಹಾಸಿ ಅದಕ್ಕೆ ಪೂಜೆ ಮಾಡಿ ಮೂರು ಕಟ್ಟೆಮನೆಗಳಿಗೆ ವೀಳ್ಯದೆಲೆಯನ್ನು ಕೊಡುವ ಶಾಸ್ತ್ರವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

೩.೩.೧೧. ಭೂವದ ಮುದ್ದೆಯ ಆಚರಣೆ

ವಿಜಯನಗರದ ಅರಸರ ಮುಂದೆ ೬ ವರ್ಷಗಳ ಕಾಲ ತಿಪ್ಪೆಯಲ್ಲಿ ಹೂತಿಟ್ಟಿದ್ದ ಭೂವದ ಮುದ್ದೆಯನ್ನು ಉಂಡು ಸಹಿಸಿಕೊಂಡರೂ ಇಂದಿಗೂ ಕೂಡ ಆ ಆಚರಣೆ ಮುಂದುವರಿದುಕೊಂಡು ಬಂದಿದೆ. ಪ್ರತಿಯೊಂದು ಮದುವೆಯಲ್ಲಿಯೂ ಭೂವದ ಮುದ್ದೆಯನ್ನು ಮಾಡಿ ಅದರಲ್ಲಿ ಕಾಯಿ ಬೆಲ್ಲವನ್ನು ಸೇರಿಸಿ ಸಮುದಾಯದವರಿಗೆ ತಿನ್ನಲು ಕೊಡುತ್ತಾರೆ. ನಾಗರಿಕತೆಯ ಜಗತ್ತಿನಲ್ಲಿಯೂ ಅದು ಮುಂದುವರಿದುಕೊಂಡು ಬಂದಿದೆ.

ಈ ಕತೆಯ ನಾಯಕರು ಕೂಡ ಅನೈತಿಕ ಸಂಬಂಧದ ಮೂಲದಿಂದ ಬಂದವರು. ಹಾಗಾಗಿ ಇವರಿಗೆ ಗಾಳಿ ಧೂಳಿ ಎಂದು ನಾಮಕರಣ ಮಾಡಿರಬಹುದು. ಅಂದರೆ ಗಾಳಿಯಿಂದ ಮತ್ತು ಧೂಳಿನಿಂದ ಹುಟ್ಟಿದವರು ಎಂದು ಹೇಳುತ್ತಾರೆ.

ಯರಬಳ್ಳಿ ಗೊಲ್ಲರಹಟ್ಟಿವಾಸಿ ಕುರಿನಾಗರ ಈರಜ್ಜ ಹೇಳುವ ಪ್ರಕಾರ ಕತೆಯು ವಾಸ್ತವತೆಯಿಂದ ದೂರ ಉಳಿಯುತ್ತದೆ. ಈ ಕತೆಗಳೆಲ್ಲ ಕಲ್ಪಿತ ಕತೆಗಳಾದರೂ ಅವುಗಳ ನಿರೂಪಣೆಯಂತೆ ಆಚರಣೆಯಲ್ಲಿರುವುದು ಆಶ್ಚರ್ಯದ ಸಂಗತಿ. ಕಾಡುಗೊಲ್ಲರು ಕಟ್ಟಿಕೊಂಡಿರುವ ಕತೆಗಳಾದರೂ ಅವರು ಅನುಸರಿಸಿದ ಬದುಕಿಗೂ ಸಂಬಂಧವಿದೆ.

ಕಾಡುಗೊಲ್ಲರಲ್ಲಿ ೨೭ ಉಪಬೆಡಗುಗಳಾಗಿ ಸೃಷ್ಟಿಯಾಗಲು ಬ್ರಾಹ್ಮಣರು, ಅಗಸರು, ಉಪ್ಪಾರರು ಮ್ಯಾಸಬೇಡರು, ಲಿಂಗಾಯತರು, ಕ್ಷೌರಿಕರು, ಮಾದಿಗರು, ಕುರುಬರು, ಒಕ್ಕಲಿಗರು ಕಾರಣರಾಗಿದ್ದಾರೆ ಎಂಬುದು ಕುಲ ಬಳಿಗಳ ಅಧ್ಯಯನದಿಂದ ಕಂಡುಬರುತ್ತದೆ.

ಅಧ್ಯಾಯ : ನಾಲ್ಕು

ಪಂಚಲಿಂಗಗಳು

೪. ಕಾಟಮಲಿಂಗ

೪.೧. ಕಾಟಮಲಿಂಗನ ಪವಾಡಗಳು

೪.೨. ಚಿತ್ರಲಿಂಗ

೪.೩. ಕೇತೆಲಿಂಗ

೪.೪. ಪಾತೇಲಿಂಗ

೪.೫. ರಾಮಲಿಂಗ

ಅಧ್ಯಾಯ: ನಾಲ್ಕು

ಪಂಚಲಿಂಗಗಳು

ಕಾಡುಗೊಲ್ಲರಲ್ಲಿ ಪಂಚಲಿಂಗಗಳ ಕಲ್ಪನೆ ಅಭಿವ್ಯಕ್ತಿಗೊಂಡಿರಲು ಕಾರಣ ಅವರಲ್ಲಿರುವ ಸೃಷ್ಟಿಪುರಾಣಗಳು ಎಂದು ಹೇಳಬೇಕಾಗುತ್ತದೆ. ಕಾಡುಗೊಲ್ಲರ ಪ್ರಮುಖವಾಗಿ ಐದು ಜನ ಸಾಂಸ್ಕೃತಿಕ ನಾಯಕರು. ಕಾಟಯ್ಯ, ಚಿತ್ತಯ್ಯ, ಕೇತಪ್ಪ, ಪಾತಪ್ಪ, ರಾಮಗೊಂಡ ಇವರು ಶಿವನ ಕೃಪೆಯಿಂದ ಸೃಷ್ಟಿಯಾಗಿದ್ದಾರೆ. ಈ ಐವರು ಸಾಂಸ್ಕೃತಿಕ ನಾಯಕರು ಶಿವನ ಅವತಾರದವರೆಂದು ಕಲ್ಪಿಸಿಕೊಂಡು ಲಿಂಗದ ಪರಿಕಲ್ಪನೆಯಲ್ಲಿ ಪೂಜಿಸುತ್ತಿರುವುದು ಕಂಡು ಬರುತ್ತದೆ

೪. ಕಾಟಮಲಿಂಗ

ಕಾಡುಗೊಲ್ಲರ ಪಂಚಲಿಂಗಗಳಲ್ಲಿ ಮೊದಲನೆಯದು ಕಾಟಮಲಿಂಗ. ಈತ ಕಾಡುಗೊಲ್ಲರ ಮೊದಲ ಈರಗಾರ. ಸನ್ನೆಗೊಲ್ಲರ ಆರಾಧ್ಯ ದೈವ. ಅಷ್ಟೆ ಅಲ್ಲ ಇದು ಪ್ರಾರಂಭದ ದೈವಕೂಡ. ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ನಾಯಕರು ಎಂದರೆ ಕಾಟಯ್ಯ ಮತ್ತು ಚಿತ್ತಯ್ಯ. ಕಾಟಯ್ಯನದು ಚಂದ್ರವಂಶ. ಚಿತ್ತಯ್ಯನದು ಸೂರ್ಯವಂಶ. ಕಾಟಯ್ಯ ಸಂದಮುತ್ತಿ ವಂಶಕ್ಕೆ ಅಮವಾಸ್ಯೆಯ ದೇವರು. ಚಿತ್ತಯ್ಯ ಚಿತ್ತಮುತ್ತಿ ವಂಶಕ್ಕೆ ಅಮವಾಸ್ಯೆಯ ದೇವರು. ಇವೆರಡು ಕಾಡುಗೊಲ್ಲರ ಮೂಲ ದೇವರುಗಳೆಂದರೆ ತಪ್ಪಾಗಲಾರದು.

'ಮೇಘದ ಮಳೆಯ ಬಲ್ಲ
ಭೂಮಿಯ ಜಲವೇ ಬಲ್ಲ
ಹಿಂದೆ ಹೋಗದು ಬಲ್ಲ
ಮುಂದೆ ಬರುವುದು ಬಲ್ಲ
ಕಾರ್ಣಿಕದ ಕಾಟಯ್ಯ
ಕರಿಯಾಲೆ ಜಂಗಾಮ
ಜಪ ಬದಕಿಸುವ ಜಾಪದ ಮುನಿಕಾಟಯ್ಯ' *(ಲಕ್ಕವನಹಳ್ಳಿ ಚಿಕ್ಕಣ್ಣ ಹಾಡಿದ ಚಿತ್ರ ದೇವರ ಕಾವ್ಯ)*

ಕಾಟಯ್ಯನನ್ನು ಶಿವನ ಮತ್ತೊಂದು ರೂಪವೆಂದು ಕಾಡುಗೊಲ್ಲರ ಭಾವನೆ. ಆದರೆ ಶಿವನಂತೆ ಸಂಸಾರಿಯಲ್ಲ. ಸಾಂಸಾರಿಕ ಜೀವನದಿಂದ ಮುಕ್ತಿ ಪಡೆದವನು. ಯೋಗಿ, ಜಂಗಮ ಮತ್ತು ತ್ರಿಕಾಲ ಜ್ಞಾನಿ. ಇವನಿಗೆ ಲೌಕಿಕ ಜೀವನದಲ್ಲಿ ಆಸಕ್ತಿ ಇರದ ಕಾರಣ ರಾಜ್ಯದ ವ್ಯಾಮೋಹ ಸಂಸಾರದ ಮೋಹ ತ್ಯಜಿಸಿದವನು. ಇವನು ಪಟ್ಟಣ, ನಗರ, ಊರು ಇವುಗಳಿದಂದ ದೂರವಿರಲು ಪ್ರಯತ್ನಿಸಿದನು. ಈತನೇ ಯರಬಳ್ಳಿ ಗೊಲ್ಲರಹಟ್ಟಿಯಲ್ಲಿ ನಿಂಗಣ್ಣನಾಗಿ, ಚೆನ್ನಮ್ಮನಾಗತಿಹಳ್ಳಿಯಲ್ಲಿ ಕೇತಪ್ಪನಾಗಿ ಮತ್ತು ಕೂಡಲಹಳ್ಳಿಯಲ್ಲಿ ಪಾತಪ್ಪನಾಗಿ ನೆಲೆಗೊಂಡಿದ್ದಾನೆ. ಈತ ಮೂಲತಃ ಸನ್ನೆರಗೊಲ್ಲರ ಅಮವಾಸ್ಯೆಯ ದೇವರು ಈ ಅಮವಾಸ್ಯೆಗೆ ಸೇರಿದ ಏಳು ಗುಡಿಕಟ್ಟುಗಳಿವೆ. ಅದರಲ್ಲಿ ಹಿರಿಯಲಿಂಗವಾಗಿ ಯರಬಳ್ಳಿಗೊಲ್ಲರಹಟ್ಟಿಯಲ್ಲಿ ನೆಲೆಗೊಂಡಿದ್ದಾನೆ. ಅವನು ಅಲ್ಲಿಗೆ ಬರುವುದಕ್ಕಿಂತ ಮುಂಚೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲ್ಲೂಕಿನಲ್ಲಿ ಹೇಮರೆಡ್ಡಿ ಮತ್ತು ಭೀಮರೆಡ್ಡಿ ಎಂಬುವರ ಮನೆಯಲ್ಲಿ ನೆಲೆಗೊಂಡಿದ್ದಾನೆಂದು ತಿಳುವಳಿಕೆದಾರರು ಹೇಳುತ್ತಾರೆ. ಆದರೆ ರೆಡ್ಡಿಗಳು ತಮ್ಮ ಮನೆಯಲ್ಲಿ ದೇವರಿದೆ ಎಂಬುದರ ಪರಿಜ್ಞಾನವಿಲ್ಲದೆ ಆ ದೇವರಿಗೆ ಮೈಲಿಗೆ ಮಾಡುತ್ತಾರೆ. ಇದರಿಂದ ಕೋಪಗೊಂಡ ನಿಂಗಣ್ಣ ಅವರ ಮನೆಯನ್ನು ಬಿಟ್ಟು ಕರ್ನಾಟಕಕ್ಕೆ ಬಂದು ಯರಬಳ್ಳಿಗೊಲ್ಲರಹಟ್ಟಿಯಲ್ಲಿ ನೆಲೆಸಿದ್ದಾನೆ. ಎಂಬುದು ಕಾಡುಗೊಲ್ಲರ ನಂಬಿಕೆ ಏಕೆಂದರೆ ಕಾಡುಗೊಲ್ಲರು ಸಂಪ್ರದಾಯ ಶರಣರು ಊರಿನಿಂದ ದೂರದಲ್ಲಿ ವಾಸಿಸುತ್ತಿರುವುದರಿಂದ ಮೈಲಿಗೆಯಿಂದ ದೂರವಿರಬಹುದು ಎಂದು ಭಾವಿಸಿ ಅಲ್ಲಿಗೆ ಬರುತ್ತಾನೆ. ಕಾಟಮಲಿಂಗ ಸನ್ನೆಗೊಲ್ಲರ ಅಮವಾಸ್ಯೆಯ ದೇವರು ಆಗಿರುವುದರಿಂದ ಇದರ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಯರಬಳ್ಳಿ ಗೊಲ್ಲರಹಟ್ಟಿಯನ್ನು ಸೇರಿಕೊಂಡಿರುವ ಬಗ್ಗೆ ಆ ಹಟ್ಟಿಯ ಮಾಹಿತಿದಾರರು ಈ ರೀತಿ ಹೇಳುತ್ತಾರೆ. ಸನ್ನೆಯಗೊಲ್ಲರಿಗೆ ಕಾಟಯ್ಯನೆ ಏಕೆ ಅಮವಾಸ್ಯೆಯ ದೇವರಾದನೆಂದರೆ ಅವನೇ ಈ ವಂಶದ ಮೂಲಪುರುಷ. ಅಂದರೆ ಹಿರಿಯ ವ್ಯಕ್ತಿ. ಕಾಡುಗೊಲ್ಲರಲ್ಲಿ ಒಂದು ಪದ್ಧತಿ ರೂಢಿಯಲ್ಲಿದೆ. ಸತ್ತ ವ್ಯಕ್ತಿಯನ್ನು ಕುಲದ ಆಚಾರ ವ್ಯಕ್ತಿ ಎಂದು ಗುರುತಿಸಿ ಆ ವ್ಯಕ್ತಿಯು ಪವಾಡ ಪುರುಷನಾಗಿದ್ದರೆ ಅವನನ್ನು ವೀರಗಾರನೆಂದು ಗುರುತಿಸುತ್ತಾರೆ. ಹಾಗಾಗಿ ಇಲ್ಲಿ ಕಾಟಯ್ಯ ವೀರಗಾರ. ಇವನು ಸತ್ತ ನಂತರ ಸನ್ನಮುತ್ತಿ ಬೆಡಗಿನವರು ಈತನನ್ನು ದೇವರೆಂದು ಸ್ವೀಕರಿಸಿ ಅವನ ಹೆಸರಿನಲ್ಲಿ ಅಮವಾಸ್ಯೆಯ ಕೂಳು ತಿಂದರು. ಆ ಕಾರಣದಿಂದ ಸನ್ನಮುತ್ತಿ ಬೆಡಗಿನವರಿಗೆ ಕಾಟಯ್ಯ ಅಮವಾಸ್ಯೆ ದೇವರು. ಈ ನಿಯಮ ಉಳಿದ ಎಲ್ಲಾ ಲಿಂಗಗಳಿಗೆ ಅನ್ವಯವಾಗುತ್ತದೆ.

೪.೧. ಕಾಟಮಲಿಂಗನ ಪವಾಡಗಳು

೪.೧.೧. ಹೇಮರೆಡ್ಡಿ ಮನೆತನದವರಿಗೆ ಬಡತನ ಬರುವಂತೆ ಮಾಡಿದ್ದು

'ಅಲ್ಲಿಂದ ಇಲ್ಲಿಂದ ಕಲ್ಯಾಣ ಪುರದಿಂದ

ಮತ್ತೆ ಹೇಮರೆಡ್ಡಿ ಮನೆಯಿಂದ

ಇರುಳೆಲ್ಲ ಬಂದ ಬಸವಣ್ಣ' *(ಈ ಪದವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)*

ಈಗಾಗಲೆ ಪ್ರಸ್ತಾಪಿಸಿದಂತೆ ಕಾಟಮಲಿಂಗ ನಿಂಗಣ್ಣ ಎಂಬ ಹೆಸರಿನಿಂದ ಆಂಧ್ರ ಪ್ರದೇಶದಿಂದ ಬಂದಿದೆ. ಅದು ಈ ರೀತಿ ಬರಲು ಕಾರಣವೆಂದರೆ ರೆಡ್ಡಿಗಳು ನಿಂಗಣ್ಣನನ್ನು ನವಣೆ ಚೀಲ ಮತ್ತು ಹುರುಳಿ ಚೀಲದಲ್ಲಿಟ್ಟು ಮರೆತು ಬಿಟ್ಟಿದ್ದರು. ಅದಕ್ಕೆ ಪೂಜೆ ಸಹ ಮಾಡುತ್ತಿರಲಿಲ್ಲ. ಆದುದರಿಂದ ರೆಡ್ಡಿಗಳಿಗೆ ಸಂಪತ್ತಿನ ಮದ ಬಂದಿದೆ ಎಂದು ತಿಳಿದು, ಅವರ ಸಂಪತ್ತು ನಾಶವಾಗುವಂತೆ ಮಾಡಿ ಅಲ್ಲಿಂದ ಹೊರ ಬರುತ್ತಾನೆ. ಇಲ್ಲಿ ಗಮನಿಸಬಹುದಾದ ಮುಖ್ಯ ಅಂಶವೆಂದರೆ ಇದು ದೇವರ ಪಯಣ ಅಲ್ಲ. ಕಾಡುಗೊಲ್ಲ ಸಮುದಾಯದ ನಡಿಗೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಕಾಡುಗೊಲ್ಲರು ಆಂಧ್ರದ ಗಡಿಭಾಗಗಳಲ್ಲಿ ಬಹುಕಾಲ ವಾಸವಾಗಿದ್ದು ಆ ನಂತರ ಕರ್ನಾಟಕದ ಮಧ್ಯ ಭಾಗಕ್ಕೆ ಬಂದರು ಎಂಬುದಕ್ಕೆ ಸಾಕಷ್ಟು ಐತಿಹ್ಯಗಳು ಹಾಗೂ ಅವರು ವಾಸಿಸಿರುವ ನೆಲೆಗಳು ದೊರೆಯುತ್ತವೆ.

೪.೧.೨. ನಾಗ ಸಂಸ್ಕೃತಿ ಅಸ್ಥಿರಗೊಳಿಸಿ ಲಿಂಗ ಸಂಸ್ಕೃತಿ ಸ್ಥಿರಗೊಳಿಸಿದ್ದು

'ಕಳ್ಳೆಗೊಲ್ಲರ ಮನೆಯ ಹಾಲು ಬಾನವನುಂಡು
ಅಪ್ಪ ಮದಸೊಕ್ಕಿ ಮನಗ್ಯಾನೆ ನಾಗಪ್ಪ'

(ಈ ಪದವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)

ಕಾಡುಗೊಲ್ಲರು ಪ್ರಾಚೀನ ಕಾಲದಿಂದ ನಾಗಾರಾಧನೆ ಮಾಡಿಕೊಂಡು ಬಂದಿದ್ದರು ಎಂಬುದಕ್ಕೆ ಕುರುಹುಗಳಾಗಿ ಇಂದಿಗೂ ಕೂಡ ಅವರ ಪರಿಸರದಲ್ಲಿ ಉಳಿದಿರುವ ನಾಗಪ್ರತಿಮೆಗಳು. ಕಾಡುಗೊಲ್ಲರು ತಮ್ಮ ಯಾವುದೇ ಪೆಟ್ಟಿಗೆ ದೇವರಿಗೆ, ವೀರಹಲಗಿಗೆ ಬೆಳ್ಳಿ ನಾಗಪ್ರತಿಮೆಯನ್ನು ಮುಡಿಸಿರುತ್ತಾರೆ. ಇದಕ್ಕೆ ಕಾರಣ ಕಾಡುಗೊಲ್ಲರು ಮೂಲತಃ ನಾಗಾರಾಧಕರು. ಆಂಧ್ರದಿಂದ ಬಂದು ಯರಬಳ್ಳಿಗೊಲ್ಲರ ಹಟ್ಟಿಯನ್ನು ಪ್ರವೇಶಿಸಲು ಬಯಸಿದ ನಿಂಗಣ್ಣನನ್ನು ಉದಿ ಬಾಗಿಲಲ್ಲಿ ನಾಗದೇವತೆ ತಡೆಯುತ್ತದೆ. ಒಳಗೆ ಹೋಗಲು ಅಪ್ಪಣೆ ಕೊಡುವುದಿಲ್ಲ. ನಿಂಗಣ್ಣ ಸುಳ್ಳು ಹೇಳುತ್ತಾನೆ ಭಿಕ್ಷೆ ಬೇಡಿಕೊಂಡು ತಿರುಗಿ ಬರುವುದಾಗಿ ಹೇಳುತ್ತಾನೆ ಆದರೂ ನಾಗದೇವತೆ ಅಲ್ಲಿ ಊರಿಲ್ಲ ಕೇರಿಲ್ಲ ನರ ಮನುಷ್ಯರ ಸುಳಿವೇ ಇಲ್ಲ, ಹಾಗಾಗಿ ನಿನಗೆ ಭಿಕ್ಷೆ ದೊರೆಯುವುದಿಲ್ಲ ಹಿಂತಿರುಗಿ ಹೋಗು ಎಂದು ಹೇಳಿದಾಗ, ನಿಂಗಣ್ಣ ಊರಿದೆ ಕೇರಿಯೂ ಇದೆ. ಮಕ್ಕಳು ಆಡುತಾವೆ ಕಂದಮ್ಮಗಳು ಅಳುವ ಧ್ವನಿ ಕೇಳುತ್ತಿದೆ. ಆದುದರಿಂದ ನನಗೆ ಭಿಕ್ಷೆ ಬೇಡಲು ಅವಕಾಶ ಕೊಡಬೇಕೆಂದು ಕೇಳುತ್ತಾನೆ. ಆದರೂ ನಾಗದೇವತೆ ನಿಂಗಣ್ಣನನ್ನು ಒಳಗೆ ಬಿಡಲು ಒಪ್ಪುವುದಿಲ್ಲ. ಇದರಿಂದ ಕೋಪಗೊಂಡ ನಿಂಗಣ್ಣ ಎಷ್ಟು ಕೇಳಿದರೂ ಹಟ್ಟಿಯ ಒಳಗೆ ಬಿಡದ ನಾಗಪ್ಪನ ಮೇಲೆ ಆಗ ಏಳು ಜನ ದುರುಗಿಯರನ್ನು ಯುದ್ಧಕ್ಕೆ ಕಳುಹಿಸುತ್ತಾನೆ. ನಾಗಪ್ಪ ಅವರನ್ನು ಸೋಲಿಸಿ ಕಳುಹಿಸುತ್ತಾನೆ. ಕೊನೆಗೆ ನಿಂಗಣ್ಣ ತನ್ನ ಜೋಳಿಗೆಯಲ್ಲಿರುವ ಮಂಕು ಬೂದಿ ತೆಗೆದು ನಾಗಪ್ಪನ ಮೇಲೆ ಎಸೆಯುತ್ತಾನೆ ಇದರಿಂದಾಗಿ ನಾಗಪ್ಪ ತನ್ನ ಎರಡು ಕಣ್ಣುಗಳನ್ನು ಕಳೆದುಕೊಳ್ಳುತ್ತಾನೆ. 'ಎಲ್ಲಿಂದ ಬಂದಪ್ಪ ಜೋಗಪ್ಪ ನನ್ನ ಕಣ್ಣುಗಳನ್ನು ಕೊಟ್ಟದ್ದೆ ಆದರೆ ನಿನ್ನನ್ನು ಹಟ್ಟಿಯ ಒಳಗೆ ಬಿಡುತೀನಿ' ಎಂದು ನಿಂಗಣ್ಣನಿಗೆ ಶರಣಾಗುತ್ತಾನೆ. ಆಗ ನಿಂಗಣ್ಣ ನಾಗಪ್ಪನಿಗೆ

ಕಣ್ಣುಗಳನ್ನು ಕೊಡುತ್ತಾನೆ. ಅವನಿಗೆ ಹಟ್ಟಿಯ ಪ್ರವೇಶಕ್ಕೆ ಅವಕಾಶ ಕೊಡುತ್ತದೆ. ಇದರ ಅರ್ಥ ಈಗಾಗಲೆ ನೆಲೆಗೊಂಡ ನಾಗದೇವತೆಯ ಮೇಲೆ ಅತಿಕ್ರಮಣ ಮಾಡಿ ನಾಗ ಸಂಸ್ಕೃತಿಯ ಬದಲಾಗಿ ಲಿಂಗ ಸಂಸ್ಕೃತಿಯು ಪ್ರಧಾನ ಸ್ಥಿತಿಯನ್ನು ಹೊಂದಿರುವುದನ್ನು ಕಾಣಬಹುದು. ಇದು ಕಾಡುಗೊಲ್ಲರು ಹಿಂದೆ ಪ್ರಾಚೀನ ಸಂಸ್ಕೃತಿಯಾದ ನಾಗಾರಾಧನೆಯನ್ನು ಮಾಡುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಕಾಡುಗೊಲ್ಲರ ಪಂಚಲಿಂಗಗಳ ಪಯಾಣ ಆಂಧ್ರದಿಂದ ಪ್ರಾರಂಭವಾಗಿರುವುದನ್ನು ಗಮನಿಸಬಹುದು. ಅಂದರೆ ಹೊಸದೊಂದು ಸಂಸ್ಕೃತಿಯನ್ನು ಪ್ರವೇಶ ಮಾಡಿಕೊಳ್ಳವುದಕ್ಕೆ ಏನೆಲ್ಲ ಪ್ರಯತ್ನಗಳು ನಡೆದಿವೆ ಎಂಬುದು ನಾಗಪರಂಪರೆ ಆ ಸಮಾಜದಿಂದ ದೂರವಾಗಿರುವುದನ್ನು ಗಮನಿಸಿದರೆ ತಿಳಿಯುತ್ತದೆ. ಹಟ್ಟಿಯ ಒಳಗೆ ಪ್ರವೇಶ ಪಡೆದ ನಿಂಗಣ್ಣ ಅನೇಕ ಪವಾಡಗಳನ್ನು ಮಾಡಿ ಕಾಡುಗೊಲ್ಲರು ಹೇಗಿರಬೇಕು ಎಂಬುದನ್ನು ಹೇಳಿಕೊಡುತ್ತಾನೆ ಕಾಡುಗೊಲ್ಲರನ್ನು ಭಕ್ತರನ್ನಾಗಿ ಮಾಡಿಕೊಳ್ಳಲು

'ಹಾಲು ಮೀಸಲು ನಿನದಯ್ಯ ತನಿ ಮೀಸಲು ನಿನದಯ್ಯ

ಮಕ್ಕಳ ಹೆಸರು ನಿನದಯ್ಯ ನಾಗಪ್ಪ

ಹಟ್ಯಾಗೆ ತಾವ ಕೊಡಿಸಯ್ಯ' *(ಈ ಪದ್ಯವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)* ಎಂದು ನಾಗಪ್ಪನನ್ನು ಕೇಳಿಕೊಳ್ಳುತ್ತಾನೆ. 'ಹಟ್ಟಿಕೊಡೆಂದರೆ ಕೊಡುತೀನಿ ಪಟ್ಟಣಕೊಡೆಂದರೆ ಕೊಡುತೀನಿ ಆದರೆ ಮಕ್ಕಳ ಹೆಸರು ಕೊಡಲಾರೆ ಎನ್ನುತ್ತಾನೆ. ಊರು ಬೇಕಾದರೆ ಕೊಡುತೀನಿ ಕೇರಿಬೇಕಾದರೆ ಕೊಡುತೀನಿ ಆದರೆ ಬಾಲಮ್ಮಗಳ ಹೆಸರನ್ನು ಮಾತ್ರ ಕೊಡುವುದಿಲ್ಲ ಎನ್ನುತ್ತಾನೆ'. ಇದರಿಂದ ಕೋಪಗೊಂಡ ನಿಂಗಣ್ಣ ನಾಗಪ್ಪನನ್ನು ಸಿಂಬೆಮಾಡಿಕೊಂಡು ತಲೆಯ ಮೇಲಿಟ್ಟುಕೊಂಡು ಹಟ್ಟಿಯ ಒಳಗೆ ನಡೆಯುತ್ತಾನೆ. ಅಲ್ಲಿ ಆಡುವ ಮಕ್ಕಳನ್ನು ನೋಡಿ ಸಂತೋಷ ಪಡುತ್ತಾನೆ.

೪.೧.೩. ಕಪ್ಪೆ ಮತ್ತು ಏಡಿ ನಿಷೇಧಗೊಳಿಸಿದ್ದು

'ಏಡಿ ತಿಂಬರಯ್ಯ ಗ್ವಾಡಿಗೊರಸರಯ್ಯ

ಹಾಳ ರೆಡ್ಡಿಯೆಂಬ ತೆಲುಗಾರು ಮನಿಯಾಗೆ

ಇರುಲಾರದೆ ಬಂದೆ ಬಸವಣ್ಣ.' *(ಈ ಪದ್ಯವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)*

ಆಂಧ್ರದಿಂದ ನಿಂಗಣ್ಣ ಕಾಡುಗೊಲ್ಲರ ಹಟ್ಟಿಗೆ ಬರಲು ಬಹುಮುಖ್ಯವಾದ ಕಾರಣವೆಂದರೆ ರೆಡ್ಡಿಗಳು ತಮ್ಮ ಮನೆಯಲ್ಲಿ ಕಪ್ಪೆ ಮತ್ತು ಏಡಿ ತಿಂದು ಮನೆಯ ಗೋಡೆಗೆ ತಿಕ್ಕುತ್ತಿದ್ದರು. ಅಷ್ಟೇ ಅಲ್ಲದೆ ಋತುಸ್ರಾವವಾದ ಹೆಣ್ಣು ಮಕ್ಕಳು ಮನೆಯ ಒಳಗಡೆಯೇ ಇರುತ್ತಿದ್ದರು. ಇದು ನಿಂಗಣ್ಣನಿಗೆ ಮೈಲಿಗೆಯನ್ನುಂಟು ಮಾಡುತ್ತಿತ್ತು. ಆದುದರಿಂದ ಕಾಡುಗೊಲ್ಲರಿಗೆ ಒಲಿದು ಬಂದಿದ್ದಾನೆಂದು ಹೇಳುತ್ತಾರೆ.

೪.೧.೪. ಹಂದಿ ಮತ್ತು ಕೋಳಿ ನಿಷೇಧಗೊಳಿಸಿದ್ದು

ಕಾಟಮಲಿಂಗ ತಮಗೆ ಏಕೆ ಒಲಿದ ಎಂಬುದಕ್ಕೆ ಕೊಡುವ ಕಾರಣ ಕಾಡುಗೊಲ್ಲರು ಕಾಡಿನಲ್ಲಿ ವಾಸವಾಗಿದ್ದರು. ಹಂದಿ ಕೋಳಿ ತಿನ್ನುತ್ತಿರಲಿಲ್ಲ. ಇವೆರಡನ್ನು ನಿಷೇಧಿಸಲು ಕಾರಣ ಇವು ಮಲ ತಿನ್ನುತ್ತವೆ ಎಂಬುದೇ ಮುಖ್ಯವಾದುದು. ಹಾಗಾಗಿ ರೆಡ್ಡಿಗಳು ಕಪ್ಪೆ, ಏಡಿ, ಹಂದಿ, ಕೋಳಿ ಮುಂತಾದವನ್ನು ತಿನ್ನುತಿದ್ದರು. ಆ ಕಾರಣದಿಂದ ಅವರ ಮನೆಯಲ್ಲಿ ಇರಲಾರದೆ ಬಂದೆ ಬಸವಣ್ಣ ಎಂದು ದೇವರ ಬಾಯಿಯಿಂದಲೆ ಹೇಳಿಸಿರುವುದನ್ನು ಅವರ ಕಾವ್ಯದಿಂದ ತಿಳಿದು ಬರುತ್ತದೆ. ಇದು ಸಹ ಕಲ್ಯಾಣದುರ್ಗದಿಂದ ಬಂದು ಯರಬಳ್ಳಿಗೊಲ್ಲರ ಹಟ್ಟಿಯನ್ನು ಸೇರಿಕೊಂಡಿದೆ. ಏಕೆ ರೆಡ್ಡಿಯರ ಮನೆ ಬಿಟ್ಟು ಬಂತು ಎಂಬುದಕ್ಕೆ ಅವರು ಕೊಡುವ ಕಾರಣ, ಕಪ್ಪೆ, ಏಡಿ ತಿಂದು ಗೋಡೆಗೆ ಒರಸುವರು. ಅಷ್ಟೆ ಅಲ್ಲ ಅವರ ಮನೆಮಾತು ತೆಲುಗು ಆಗಿರುವುದರಿಂದ ಅಲ್ಲಿರಲು ಮನಸ್ಸು ಆಗಲಿಲ್ಲ. ಕಾಡುಗೊಲ್ಲರು ಉತ್ತಮರಾಗಿದ್ದಾರೆ. ಮಡಿ ಮೈಲಿಗೆಯಲ್ಲಿ ಶುದ್ದರಾಗಿದ್ದಾರೆ. ಆ ಕಾರಣದಿಂದ ಗೊಲ್ಲರಿಗೆ ಒಲಿದು ಬಂದೆ ಎಂಬುದಾಗಿ ಹೇಳುತ್ತಾರೆ. ನಿಂಗಣ್ಣನ ಜೊತೆಗೆ ಬಸವಣ್ಣ ಕೂಡ ಬಂದಿರುವ ಪ್ರಸ್ತಾಪ ಅವರ ಕಾವ್ಯದಲ್ಲಿ ಉಲ್ಲೇಖವಾಗಿದೆ. ಎಲ್ಲ ಸಮುದಾಯಗಳ ಶ್ರೇಷ್ಟತೆಯ ವ್ಯಸನ ಕಾಡಿರುವಂತೆ ಕಾಡುಗೊಲ್ಲರಿಗೂ ಕಾಡಿದೆ. ಹಾಗಾಗಿ ನಾವು ಕಾಡಿನಲ್ಲಿ ವಾಸವಾಗಿರುವುದರಿಂದ, ಕಪ್ಪೆ, ಏಡಿ, ಹಂದಿ, ಕೋಳಿ ತಿನ್ನದೇ ಇರುವುದರಿಂದ ಪವಿತ್ರರು ಎಂದುಕೊಂಡಿದ್ದಾರೆ. ಕಾಡುಗೊಲ್ಲರ ಮನೆಮಾತು ಕನ್ನಡವಾಗಿರುವುದರಿಂದ ತೆಲುಗು ಭಾಷೆಯ ಮೇಲೆ ಕೀಳರಿಮೆ ಬಂದಿದೆ. ಒಂದು ವೇಳೆ ರೆಡ್ಡಿಗಳು ಕನ್ನಡಿಗರಾಗಿದ್ದರೆ ಅಲ್ಲಿ ಉಳಿಯುತ್ತಿದ್ದನೇನೋ. ಆದರೆ ಅವರ ಮನೆಮಾತು ತೆಲುಗು ಆಗಿರುವ ಕಾರಣದಿಂದ ಅವರ ಮನೆಯನ್ನು ಬಿಟ್ಟು ಬಂದೆ ಎಂದು ಕೊಡುವ ಕಾರಣ ಗಮನಾರ್ಹವಾದದ್ದು ಅಷ್ಟೇ ಅಲ್ಲ ಅಡವಿಯಗೊಲ್ಲರನ್ನು ದೇವರೇ ಸಮರ್ಥನೆ ಮಾಡಿಕೊಳ್ಳುತ್ತಿರುವುದು ಅಷ್ಟೇ ಮುಖ್ಯವಾದ ಸಂಗತಿ. ಅಡವಿಯಗೊಲ್ಲರು ದಿಟವಾಗಿದ್ದಾರೆ ಹಾಗಾಗಿ ಅವರನ್ನು ಹುಡುಕಿಕೊಂಡು ಬಂದೆ ಎಂದು ಹೇಳುತ್ತಾನೆ.

೪.೧.೫. ಕಾಟಮಲಿಂಗನ ಸ್ವರೂಪ

ಕಾಟಮಲಿಂಗ ಬಂದ ಅವತಾರವನ್ನು ಪದ್ಯಗಳಲ್ಲಿ ತುಂಬ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ರೆಟ್ಟೆಗೆಲ್ಲ ವಿಭೂತಿ ಬಳಿದುಕೊಂಡು, ಬೆರಳುಗಳಿಗೆ ಹೊನ್ನಿನ ಉಂಗುರ ಹಾಕಿಕೊಂಡು ಮುತ್ತಿನ ಕಾಳೋಟು, ಉದ್ದಿನ ಕಾಳೋಟು, ಕಡಲೆ ಕಾಳೋಟು, ರೂಪ ಧರಿಸಿ ಬರುತ್ತಾನೆ. ಅಂದರೆ ಹೊಸದೊಂದು ಸಂಸ್ಕೃತಿಯನ್ನು ಪ್ರವೇಶ ಮಾಡಿಕೊಳ್ಳವುದಕ್ಕೆ ಏನೆಲ್ಲ ಪ್ರಯತ್ನಗಳು ನಡೆದಿವೆ ಎಂಬುದು ನಾಗಪರಂಪರೆ ಆ ಸಮಾಜದಿಂದ ದೂರವಾಗಿರುವುದನ್ನು ಗಮನಿಸಿದರೆ ತಿಳಿಯುತ್ತದೆ.

೪.೧.೬. ಹುರುಳಿಯ ವ್ರತ

ಕಾಡುಗೊಲ್ಲರು ಪ್ರಮುಖವಾಗಿ ನಾಲ್ಕು ರೀತಿಯ ಧಾನ್ಯಗಳನ್ನು ನಿಷೇಧಿಸಿಕೊಂಡಿದ್ದಾರೆ. ಈ ಧಾನ್ಯಗಳ ನಿಷೇಧ ಕೇವಲ ಚಂದಮುತ್ತಿ ವಂಶದ ಬೆಡಗುಗಳಾದ ಸನ್ನೆಯಗೊಲ್ಲರು ಹುರುಳಿ ಹಾಗೂ ನವಣೆಯನ್ನು ವರ್ಷವಿಡಿ ತಿನ್ನುವುದಿಲ್ಲ. ಹೀಗಾಗಿ ಇವರನ್ನು ಪೂರ್ಣ ಬತದವರು

ಎಂದು ಕರೆಯುತ್ತಾರೆ. ಎರಡನೆಯದು ಎಗಡೆಗೊಲ್ಲರು ತೊಗರಿ ನಿಷೇಧಿಸಿಕೊಂಡಿದ್ದಾರೆ. ಮೂರನೆಯವರು ಅಲಸಂದೆ ನಿಷೇಧಿಸಿಕೊಂಡಿದ್ದಾರೆ ಮತ್ತು ಸೋಮನಗೊಲ್ಲರು ಹುರುಳಿ-ನವಣೆಯನ್ನು ವರ್ಷದಲ್ಲಿ ಆರು ತಿಂಗಳು ಮಾತ್ರ ನಿಷೇಧಿಸಿಕೊಂಡಿದ್ದಾರೆ. ಹಾಗಾಗಿ ಇವರನ್ನು ಅರ್ಧ ಬತದವರು ಎಂದು ಕರೆಯುತ್ತಾರೆ. ನಾವು ಇಲ್ಲಿ ಚರ್ಚಿಸಬೇಕಿರುವುದು ಕಾಟಮದೇವರ ಒಕ್ಕಲುಗಳಾದ ಸನ್ನೆಯಗೊಲ್ಲರ ಬಗೆಗೆ. ಏಕೆಂದರೆ ಇವರ ಅಮವಾಸ್ಯೆಯ ದೇವರು ಕಾಟಮಲಿಂಗ. ಕಾಡುಗೊಲ್ಲರು ವ್ರತ ಎಂಬುದನ್ನು ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಬತ ಎಂದು ಕರೆಯುತ್ತಾರೆ. ವ್ರತ>ಬತವಾಗಿದೆ ಆಡು ಭಾಷೆಯಲ್ಲಿ, ಇದೊಂದು ವಿಶೇಷವಾದ ಆಚರಣೆಯಾಗಿದೆ. ಕಾಡುಗೊಲ್ಲರಲ್ಲಿ ಸನ್ನೆಗೊಲ್ಲರ ಕುಲವನ್ನು ಯಾರೂ ಪ್ರಶ್ನೆ ಮಾಡುವಂತಿಲ್ಲ. ಏಕೆಂದರೆ ಈ ಕುಲವು ಪ್ರಾರಂಭದಿಂದಲು ಅಸ್ತಿತ್ವದಲ್ಲಿರುವುದರಿಂದ ಮತ್ತು ಹಸುವಿನ ಹೊಟ್ಟೆಯಲ್ಲಿ ಹುಟ್ಟಿದವರು ಎಂಬ ಕಾರಣದಿಂದ ಅವರು ಪವಿತ್ರರು ಎಂಬ ಭಾವನೆ ಕಾಡುಗೊಲ್ಲರಲ್ಲಿದೆ. ಸನ್ನೆಯಗೊಲ್ಲರನ್ನು ಪೂರ್ಣ ಬತದವರು ಎಂದು ಕರೆಯುತ್ತರೆ. ಅಂದರೆ ವರ್ಷದ ಮುನ್ನೂರ ಅರವತ್ತೈದು ದಿನ ಅವರು ಹುರುಳಿ- ನವಣೆಯನ್ನು ಆಹಾರಕ್ಕೆ ಬಳಸುವಂತಿಲ್ಲ. ಕಾರಣ ಕೇಳಿದರೆ ನಮ್ಮ ದೇವರಿಗೆ ಆಗಿಬರುವುದಿಲ್ಲ ಎಂಬ ನೆಪವನ್ನು ಹೇಳಿ ಜಾರಿಕೊಳ್ಳುತ್ತಾರೆ. ಆಹಾರಗಳಲ್ಲಿಯೇ ಅತ್ಯಂತ ಪೌಷ್ಟಿಕಾಂಶದಿಂದ ಕೂಡಿದ ಹುರುಳಿ-ನವಣೆ ನಿಷೇಧಿಸಿರುವುದು ಆಶ್ಚರ್ಯಕರ ವಿಷಯವಾಗಿದೆ. ಕಾಟಮದೇವರಿಗೆ ಸೇರಿದ ಅದರಲ್ಲೂ ಯರಬಳ್ಳಿ ಗುಡಿಕಟ್ಟೆಗೆ ಸೇರಿದ ಎಲ್ಲಾ ಒಕ್ಕಲುಗಳು ವರ್ಷಪೂರ್ತಿ ತಮ್ಮ ಮನೆಯಲ್ಲಿ ಒಲೆಯ ಮೇಲೆ ಹುರುಳಿ ಮತ್ತು ನವಣೆಯನ್ನು ಬೇಯಿಸುವಂತಿಲ್ಲ ಹಾಗೂ ಮುಟ್ಟುವಂತಿಲ್ಲ, ಹೊಲದಲ್ಲಿ ಬೆಳೆಯುವಂತಿಲ್ಲ. ಈ ರೀತಿ ವ್ರತವನ್ನು ಕೈಗೊಂಡಿರುವವರನ್ನು ಪೂರ್ಣ ಬತದವರೆಂದು ಕರೆಯುತ್ತಾರೆ. ಈ ವ್ರತದಲ್ಲಿ ಸಡಿಲಿಕೆ ಎಂದರೆ ಒಂದು ವೇಳೆ ಹುರುಳಿ ನವಣೆಯನ್ನು ಬಳಸುವುದು ಅನಿವಾರ್ಯವಾದಲ್ಲಿ ದೇವರಿಗೆ ಇಂತಿಷ್ಟು ದಂಡದ ಹಣವನ್ನು ಕೊಟ್ಟು ಹುರುಳಿ ನವಣೆಯನ್ನು ಆಹಾರವಾಗಿ ಬಳಸಬಹುದು ಎಂದು ಹೇಳುತ್ತಾರೆ. ಹುರುಳಿ ನವಣೆಯನ್ನು ಸನ್ನೆಯಗೊಲ್ಲರ ಮನೆಗೆ ಬರುವ ಕರಡಿಗೊಲ್ಲರು ಬೇಯಿಸುವಂತಿಲ್ಲ. ಆದರೆ ಸನ್ನೆಯಗೊಲ್ಲರ ಹೆಣ್ಣುಮಗಳು ಕರಡಿಗೊಲ್ಲರ ಸೊಸೆಯಾಗಿ ಹೋಗುವುದರಿಂದ ಆಕೆ ಹುರುಳಿ, ನವಣೆಯನ್ನು ಬೇಯಿಸಬಹುದು. ಅದರಲ್ಲೂ ಮದುವೆಯಾಗುವುದಕ್ಕಿಂತ ಮುಂಚಿತವಾಗಿ ಅಂದರೆ ಸನ್ನೆಯಗೊಲ್ಲರ ಮನೆಯಲ್ಲಿರುವಾಗ ಬೇಯಿಸುವಂತಿಲ್ಲ. ಯರಬಳ್ಳಿಗೊಲ್ಲರ ಹಟ್ಟಿಯಲ್ಲಿ ಇಂದಿಗೂ ಕೂಡ ಹುರುಳಿ ನವಣೆಯನ್ನು ಬಳಸುತ್ತಿಲ್ಲ ಮತ್ತು ಹೊಲದಲ್ಲಿ ಬೆಳೆಯುತ್ತಿಲ್ಲ, ಗುಗ್ಗರಿ ಹಬ್ಬದಲ್ಲಿ ಕಾಳು ಬೇಯಿಸುವಾಗ ಒಂದು ಹುರುಳಿ ಕಾಳು ನವಣೆಕಾಳು ಇರದಂತೆ ನೋಡಿಕೊಳ್ಳಬೇಕು. ತೊಗರಿ, ಅವರೆ, ಅಲಸಂದೆ, ಹೆಸರು, ಮುಂತಾದವು ದೇವರಿಗೆ ಸೇರುತ್ತವೆ. ಹುರುಳಿ ನವಣೆಯ ಆಹಾರವನ್ನು ಪ್ರತಿನಿತ್ಯ ಬಳಸುವ ಒಲೆಯ ಮೇಲೆ ಬೇಯಿಸುವಂತಿಲ್ಲ, ಅದರಲ್ಲೂ ಸೋಮವಾರದ ದಿವಸ ಯಾವುದೇ ಕಾರಣಕ್ಕೂ ಹುರುಳಿ ನವಣೆಯನ್ನು ಮುಟ್ಟುವಂತಿಲ್ಲ. ಹುರುಳಿ ಮತ್ತು ನವಣೆ ಬೆಳೆಯುವ ಹೊಲದಲ್ಲಿ ಓಡಾಡಿದರೆ ಸ್ನಾನಮಾಡಿ ಮನೆಯ ಒಳಗೆ ಪ್ರವೇಶಿಸಬೇಕು ಎಂಬ ನಿಯಮವಿದೆ.

೪.೧.೭. ಹಾಲು ಗುಡ್ಡದಯ್ಯ

ಹಾಲುಗುಡ್ಡದಯ್ಯ ಅಥವಾ ಹಾಲುಗುಡದಪ್ಪ ಮದನಕುಂಟೆ ಗ್ರಾಮದ ಜನರ ಮನೆದೇವರು. ಹಾಲು ಗುಡ್ಡದ ಬಳಿಯೇ ಇರುವ ಗುಡಿಯ ಕಾಟಮಲಿಂಗ (ನಿಂಗಣ್ಣ) ದೇವರಿಗೆ ಈ ಹೆಸರು ಬಂದಿದೆಯಷ್ಟೆ. ಈ ದೇವರ ಮೇಲೆ ಪ್ರಚಲಿತವಿರುವ ಕಥನಗೀತೆ ಬಹಳ ದೀರ್ಘವಾದುದು. ಸುಮಾರು ಏಳುನೂರು ತ್ರಿಪದಿಗಳಲ್ಲಿ ಐತಿಹಾಸಿಕ ಕಾಲ್ಪನಿಕ, ಪೌರಾಣಿಕ ಹಾಗು ಕುತೂಹಲಕರ ಘಟನೆಗಳನ್ನೊಳಗೊಂಡದ್ದ ಈ ಕಥನ ಗೀತೆ. ಮದನಕುಂಟೆ ಗ್ರಾಮದ ಬಹುತೇಕಗೊಲ್ಲರು ಈ ದೇವರ ಭಕ್ತರು" *(ಕೃಷ್ಣಮೂರ್ತಿ ಹನೂರು, 'ಕತ್ತಲದಾರಿ ದೂರ' ಪುಟ ೨. ೧೯೮೧)*

ಹಾಲು ಗುಡ್ಡದಯ್ಯನನ್ನು ಕುರಿತು ಮಾಹಿತಿದಾರರು ಈ ರೀತಿ ಗುರುತಿಸಿದ್ದಾರೆ. ಹಾಲುಕುಡಿದಪ್ಪ ಹಾಲುಗುಡದಪ್ಪ ಆಗಿದ್ದಾನೆ. ಅಂದರೆ ಹುತ್ತಕ್ಕೆ ಹಾಲು ಹಾಕುವಾಗ ನಾಗರ ಹಾವು ಕಾಣಿಸಿಕೊಳ್ಳುತ್ತದೆ. ಆದುದರಿಂದ ಅದನ್ನು ಹಾಲುಕುಡಿದಪ್ಪ ಎಂದು ಕರೆಯುತ್ತಾರೆ. ನಾಗಪ್ಪ ಈ ನಾಗಪ್ಪನೇ ನಿಂಗಣ್ಣನನ್ನು ಹಟ್ಟಿಯೊಳಗೆ ಬಿಡದಂತೆ ತಡೆಯುತ್ತದೆ. ಆಗ ನಿಂಗಣ್ಣ ತನ್ನ ಪವಾಡದ ಮೂಲಕ ನಾಗಪ್ಪನನ್ನು ಶರಣಗತನಾಗಿ ಮಾಡಿಕೊಂಡನು. ಹಾಗಾಗಿ ನಿಂಗಣ್ಣನೇ ಬೇರೆ ನಾಗಪ್ಪನೇ ಬೇರೆ ಇವೆರಡು ಸನ್ನೆಯಗೊಲ್ಲರಗೆ ಆರಾಧ್ಯ ದೇವರುಗಳು.

ಸಂದಮುತ್ತಿ ಬೆಡಗಿಗೆ ಸೇರಿದ ಸನ್ನೆಯಗೊಲ್ಲರು ಮತ್ತು ಸೋಮನಗೊಲ್ಲರು ಅಬ್ಬಗೊಲ್ಲರು, ಎಗಡೆಗೊಲ್ಲರು ಈ ನಾಲ್ಕು ಬೆಡಗುಗಳಿಗೂ ಕಾಟಮಲಿಂಗ ಅಮವಾಸ್ಯೆಯ ದೇವರು. ಯಾವುದೋ ಒಂದು ಸಣ್ಣ ಜಗಳ ಕಾಟಮಲಿಂಗ ಮತ್ತು ಕೇತೆಲಿಂಗ ಎಂದು ವಿಭಾಗ ಮಾಡಿರುವುದು ಕೇಳಿಬರುತ್ತದೆ. ಒಂದು ಕಾಲದಲ್ಲಿ ಒಂದೇ ಬೆಡಗಿಗೆ ಸೇರಿದ ಸನ್ನೆಯಗೊಲ್ಲರು ಮತ್ತು ಸೋಮನಗೊಲ್ಲರು ಯಾವುದೋ ಕ್ಷುಲ್ಲಕ ಕಾರಣಕ್ಕೆ ಜಗಳವಾಡಿ ಕಾಟಮಲಿಂಗವನ್ನು ಒಂದು ಬಾವಿ ಒಳಗೆ ಹಾಕಿದರು. ನಂತರ ಕೆಲವು ದಿನಗಳ ತರುವಾಯ ಇಬ್ಬರಲ್ಲಿ ವೈಮನಸ್ಸು ಮುರಿದು ಸನ್ನಯಗೊಲ್ಲರು ಮೊದಲು ಬಾವಿ ಒಳಗೆ ಕೈ ಇಟ್ಟಾಗ ಅವನಿಗೆ ತಾಳಿ ದೊರೆಯುತ್ತದೆ. ಅದನ್ನು ದೇವರು ಮಾಡಿಕೊಂಡನು. ನಂತರ ಎರಡನೆಯವನಾದ ಸೊಮಗೊಲ್ಲರು(ಆಗ ಇನ್ನು ಕುಲ ಸೃಷ್ಟಿಯಾಗಿರಲಿಲ್ಲ)ಕೈ ಇಟ್ಟಾಗ ಅವನಿಗೆ ಲಿಂಗ ದೊರೆಯುತ್ತದೆ. ಅದನ್ನು ಕೇತೆಲಿಂಗ ಎಂದು ಮಾಡಿಕೊಂಡನು. ಅವರು ಬೇರೆ ಬೇರೆಯಾಗಿ ತಮ್ಮ ಕಟ್ಟೇಮನೆಗಳು ಒಂದೇ ಆದರೂ ಗುಡಿಕಟ್ಟೆಗಳು ಬೇರೆ ಬೇರೆಯಾಗಿವೆ. ಸನ್ನೆಯಗೊಲ್ಲರಲ್ಲಿ ಅನೇಕ ಬೆಡಗುಗಳು ಸೃಷ್ಟಿಯಾಗಿವೆ. ಅದರಂತೆ ಸೊಮನಗೊಲ್ಲರಲ್ಲಿ ಅನೇಕ ಬೆಡಗುಗಳು ಸೃಷ್ಟಿಯಾಗಿವೆ. ಅಂತೆಯೆ ಕಾಟಮುಲಿಂಗನ ಆರಾಧನೆಗೂ ಕೇತೆಲಿಂಗನ ಆರಾಧನೆಗೂ ಸಾಕಷ್ಟು ರೀತಿಯ ಭಿನ್ನಾಭಿಪ್ರಾಯಗಳಿವೆ. ಚಂದ್ರನ ವರದಿಂದ ಉದಯಿಸಿದಂತ ಕಾಟಮಲಿಂಗ ತನ್ನ ಭಕ್ತರಿಗೆ ಅನೇಕ ನಿರ್ಬಂಧಗಳನ್ನು ವಿಧಿಸಿದ್ದಾನೆ. ಜೀವನ ಪೂರ್ತಿ ಹುರುಳಿ ನವಣೆಯನ್ನು ಆಹಾರಕ್ಕಾಗಿ ಬಳಸುವಂತಿಲ್ಲ.

"ಅಜ್ಜೇರಗೊಲ್ಲರು 'ಹುರುಳಿಯವರು' 'ಉಳ್ಳೇರು' ಎಂಬ ಹೆಸರಿನಿಂದಲೂ ಸಹ ಕರೆಯುತ್ತಾರೆ. ಇವರ ದೇವರಾದ ಈರಣ್ಣ (ಕೇತೆಲಿಂಗ/ಕ್ಯಾತೆದೇವರು)ನಿಗೆ ಹುರುಳಿ ಮತ್ತು ನವಣೆ ಸೇರುವುದಿಲ್ಲ

ಎಂಬ ನಂಬಿಕೆ ಇದೆ. ಆದ್ದರಿಂದ ಇವರು ಹುರುಳಿ, ನವಣೆ ತಿನ್ನುವುದಿಲ್ಲ ಮತ್ತು ತಮ್ಮ ಹೊಲದಲ್ಲಿ ಬೆಳೆಯುವುದಿಲ್ಲ. ಅಷ್ಟೇ ಅಲ್ಲದೇ ಇವರು ಹುರುಳಿ ಮತ್ತು ನವಣೆ ಹೊಲಗಳಲ್ಲಿ ನಡೆದಾಡುವುದು ಇಲ್ಲ. ಅಂಥ ಹೊಲಗಳು ಬಂದಾಗ ಇತರರು ಇವರನ್ನು ಹೊತ್ತು ನಡೆಸುವರು ಅಥವಾ ಇವರೆ ಬೇರೆ ದಾರಿ ಬಳಸಿಕೊಂಡು ಬರುತ್ತಾರೆ. ಅಜ್ಜೇರಗೊಲ್ಲರು ತಮ್ಮ ನೆಂಟರಾದ ಕರಡೆಗೊಲ್ಲರಲ್ಲಿ ಹೆಣ್ಣು ತರುತ್ತಾರೆ. ಮನೆಗೆ ಬಂದ ಸೊಸೆ ಇಲ್ಲಿ ಮಾತ್ರ ಹುರುಳಿಕಾಳು ಸಾರು ಮಾಡುವಂತಿಲ್ಲ ಮತ್ತು ಹುರುಳಿಯನ್ನು ಯಾವ ರೂಪದಲ್ಲಿಯೂ ತಿನ್ನುವಂತಿಲ್ಲ. ಹಿರಿಯೂರು ತಾಲೂಕಿನ ನನ್ನಿವಾಳದ ಗುಡ್ಡದಲ್ಲಿ ವರ್ಷದಲ್ಲಿ ಒಂದು ಸಲ ಮಾತ್ರ ಅಜ್ಜೇರು ಕಾಟಮದೇವರ ಹೆಸರಿನಲ್ಲಿ ಹುರುಳಿ ಮತ್ತು ನವಣೆಯ ಅಡುಗೆ ಮಾಡಿ ಊಟ ಮಾಡುವರು. ಆ ದಿನದ ಹೊರತು ಈ ಧಾನ್ಯಗಳು ಇಡೀ ವರ್ಷ ತಮಗೆ ನಿಷಿದ್ಧ.” *(ಕಾಳೆಗೌಡ ನಾಗವಾರ,'ಬೇವಿನಹಳ್ಳಿ ಕಾಡುಗೊಲ್ಲರ ಹಟ್ಟಿ' ಪುಟ ೫೮, ೨೦೧೫)*

ಕಾಳೇಗೌಡ ನಾಗವಾರ ಅವರು ಹೇಳಿರುವ ಮಾತು ಸೋಮನಗೊಲ್ಲರಿಗೆ ಅನ್ವಯವಾಗುತ್ತದೆ. ಏಕೆಂದರೆ ಸೋಮನಗೊಲ್ಲರು ಅರ್ಧ ಬತದವರು. ಸನ್ನೆಯಗೊಲ್ಲರು ಪೂರ್ಣ ಬತದವರು. ಇವರು ಮಾತ್ರ ವರ್ಷ ಪೂರ್ತಿ ಹುರುಳಿ, ನವಣೆ ಮುಟ್ಟುವುದಿಲ್ಲ. ಇಲ್ಲಿ ಕೇತಲಿಂಗ ಸೋಮನಗೊಲ್ಲರ ಬೆಡಗಿಗೆ ಸೇರಿದ ದೇವರು. ಹಾಗಾಗಿ ಇವರು ವರ್ಷದಲ್ಲಿ ಒಮ್ಮೆ ಮಾತ್ರ ಹುರುಳಿ, ನವಣೆಯನ್ನು ನೈವೆದ್ಯಮಾಡಿ ಆನಂತರ ಮುಟ್ಟುವುದಿಲ್ಲ. ಆದರೆ ಅಜ್ಜೇರಗೊಲ್ಲರು ಸನ್ನೆಯಗೊಲ್ಲರ ಒಂದು ಉಪಬೆಡಗು, ಸನ್ನೆಯಗೊಲ್ಲರು ವರ್ಷಪೂರ್ತಿ ಹುರುಳಿ, ನವಣೆ ತಿನ್ನದ ಕಾರಣ ಇವರು ಕೂಡ ಹುರುಳಿ ನವಣೆ ತಿನ್ನುವುದಿಲ್ಲ. ಅಜ್ಜೇರಗೊಲ್ಲರು ಏಕೆ ಹುರಳಿ, ನವಣೆಯನ್ನು ಮುಟ್ಟುವುದಿಲ್ಲ ಮತ್ತು ತಿನ್ನವುದಿಲ್ಲ ಎಂದರೆ, ಅವರು ಕರಡಿಗೊಲ್ಲರ ಹೆಣ್ಣುಮಕ್ಕಳ ಹೊಟ್ಟೆಯಲ್ಲಿ ಹುಟ್ಟಿದ ಕಾರಣ ಸನ್ನೆಯಗೊಲ್ಲರು ಕುಲ ಕೊಟ್ಟರು. ಈಕೆಯು ಅಗಸರವನನ್ನು ಮದುವೆಯಾಗಿದ್ದಳು.

೪.೧.೮. ಅಮವಾಸ್ಯೆ ದೈವವಾಗಿ ಕಾಟಮಲಿಂಗ

೧. ಯರಬಳ್ಳಿಗೊಲ್ಲರಹಟ್ಟಿ, ಕರಿಯಟ್ಟಿ ಕಂಬದೇವರಹಟ್ಟಿ, ಗುಂಟನೂರು, ತುರುವೆಕೆರೆ, ಹಾಯ್ಕಲ್ ಕಾಟನಹಟ್ಟಿ, ಕಲ್ಲಹಳ್ಳಿಯ ಎಲ್ಲ ಹಟ್ಟಿಗಳಲ್ಲಿ ಕಾಟಮಲಿಂಗ ಇರುವುದನ್ನು ಗಮನಿಸಬಹುದು. ಇದರ ಜೊತೆಗೆ ಅನೇಕ ವೀರಗಾರ ದೇವರುಗಳು ಇರುವುದನ್ನು ಕೂಡ ಕಾಣಬಹುದು. ವೀರಯರ್‍ರಣ್ಣ, ವೀರಸಾತಣ್ಣ, ವೀರಜಂಪಣ್ಣ ವೀರಸಿಂಪಣ್ಣ ಮುಂತಾದ ವೀರಗಾರ ದೇವರುಗಳ ಪ್ರಭಾವದಿಂದ ಕಾಟಮಲಿಂಗ ಹಿಂದೆಸರಿದು ಮೆರೆದೇವರುಗಳಾಗಿ ವೀರಗಾರರಿದ್ದಾರೆ. ಕಾಟಮಲಿಂಗ ಉದ್ಭವಲಿಂಗ. ಇದು ಒಂದು ಕಡೆ ಸ್ಥಾಪಿತವಾದುದು. ಇದರಲ್ಲಿ ಎಂಟು ಕಂಬಿಗಳಿವೆ ಅವುಗಳು ಒಂದೊಂದು ಗುಡಿಕಟ್ಟಿನಲ್ಲಿ ಒಂದೊಂದು ಇವೆ. ಈ ಎಂಟು ಕಂಬಿಗಳು ೫ ಇಲ್ಲವೆ ೧೦ ವರ್ಷಗಳಿಗೊಮ್ಮೆಯಾದರೂ ಯರಬಳ್ಳಿಗೊಲ್ಲರಹಟ್ಟಿಯಲ್ಲಿ ಸೇರುತ್ತವೆ.

'ಏಡಿ ತಿಂಬರಯ್ಯ ಗ್ವಾಡಿಗೊರಸರಯ್ಯ
ಕಾಡುಗೊಲ್ಲರ ಮನೆಯಾಗೆ ಹೊನ್ನಕಂಬಿ

ನೀವು ನಮ್ಮಿಗೆ ತರವಲ್ಲ

ಎಂದು ಏಡಿ ತಿನ್ನುವುದನ್ನು ನಿಂಗಣ್ಣ ನಿಷೇಧಿಸಿದನು

ಕಪ್ಪೆ ತಿಂದಿರೆಂದ ಬಟ್ಟೆಗೆ ಒರಸಿರೆಂದ

ಹಟ್ಟಿಗೊಲ್ಲರ ಮನೆಯಾಗೆ ಹೊನ್ನಕಂಬಿ

ನವಣೆ ಬತವ ಹಿಡಿಸ್ಯಾನೆ

ಏಡಿ ತಿಂದಿರಯ್ಯ ಗ್ವಾಡಿಗೊರಸಿರೆಂದ

ಕಾಡಗೊಲ್ಲರ ಮನಿಯಾಗೆ ಹೊನ್ನಕಂಬಿ'

ಉಳ್ಳಿಯ ಬತವ ಹಿಡಿಸ್ಯಾನೆ'. *(ಈ ಪದ್ಯವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)*

ಏಡಿ, ಕಪ್ಪೆ, ಹುರಳಿ, ನವಣೆ ಇವುಗನ್ನು ತಿನ್ನದೆ ಇದ್ದರೆ ನಾನು ನಿಮಗೆ ಒಲಿಯುತ್ತೇನೆ. ಎಂದು ನಿಂಗಣ್ಣ ಹೇಳಿದಾಗ, ನಾವು ಒಕ್ಕಲ ಮಕ್ಕಳು ನಾವು ಹುರುಳಿ, ನವಣೆ ನಮಗೆ ತಿನ್ನಲು ಆಹಾರ. ಹಾಗಾಗಿ ಅವುಗಳನ್ನು ಬೆಳೆಯದೆ ಇರಲು ಸಾಧ್ಯವಿಲ್ಲ, ಆದುದರಿಂದ ನೀನು ಪೋಳಿ ಕಳ್ಳಿಯಲ್ಲಿ ಇರು ಎಂದು ಕಾಡುಗೊಲ್ಲರು ಹೇಳುತ್ತಾರೆ. ಆ ಕಾರಣದಿಂದ ಕಾಡುಗೊಲ್ಲರು ತಮ್ಮ ದೇವಾಲಯದ ಸುತ್ತಲು ಕಳ್ಳಿ ಬೇಲಿ ಹಾಕುವ ಸಂಪ್ರದಾಯ ಬೆಳೆಸಿಕೊಂಡರು.

'ಮುತ್ತಿನ ಹೊರಕಳ್ಳೆ ಮುತ್ತೀನ ಒಳಕಳ್ಳೆ

ಮುತ್ತ ಕೆತ್ತಿಸಿದ ಎರಕಳ್ಳೆ ಒಳಗೆ

ಹತ್ತಿಕೊಂಡವನೆ ನಿರುವಾಣಿ

ಚಿನ್ನಾದ ಹೊರಕಳ್ಳೆ ಚಿನ್ನಾದ ಒಳಕಳ್ಳೆ

ಚಿನ್ನಕೆತ್ತಿಸಿದ ಎರದ ಕಳ್ಳೆ ಒಳಗೆ' *(ಈ ಪದ್ಯವನ್ನು ಉಪ್ಪಿಟ್ಟು ಶಾಂತಮ್ಮ ಮತ್ತು ಸಂಗಡಿಗರು ಹಾಡಿರುವ ಹಾಲುಕುಡಿದಪ್ಪನ ಕಾವ್ಯದಿಂದ ಆಯ್ದು ಕೊಂಡಿದೆ.)*

ಆರಂಭದ ಕಾಲಘಟ್ಟದಲ್ಲಿ ಕಾಡುಗೊಲ್ಲರ ಎಲ್ಲ ದೈವಗಳು ಕಳ್ಳಿ ಮರೆಯಲ್ಲಿಯೇ ನೆಲೆಗೊಂಡಿರುವುದನ್ನು ಕಾಣಬಹುದು. ಇಂದೂ ಕೂಡ ಯರಬಳ್ಳಿಗೊಲ್ಲರ ಹಟ್ಟಿಯಲ್ಲಿ ದೇವರು ಆಧುನಿಕತೆಗೆ ಒಳಗಾಗಿಲ್ಲ. ಜನಪದರ ವರ್ಣನೆ ಗಮನಿಸಿದರೆ ಅವರಿಗೆ ಕಳ್ಳಿ ಎನ್ನುವುದು ಚಿನ್ನದಷ್ಟೆ ಶ್ರೇಷ್ಠ ಎಂಬುದು ಮೇಲಿನ ಪದ್ಯವನ್ನು ಗಮನಿಸಿದರೆ ತಿಳಿಯುತ್ತದೆ. ಅಂದರೆ ಅವರು ಚಿನ್ನ ಬೆಳ್ಳಿಯನ್ನು ತಮ್ಮಲ್ಲಿರುವ ವಸ್ತುಗಳಲ್ಲಿಯೇ ಕಾಣುತ್ತಿದ್ದರು.

೪.೧.೯. ಅಮವಾಸ್ಯೆಯ ಕೂಳು

ಶಿಷ್ಟರಲ್ಲಿ ಸತ್ತವರಿಗೆ ತಿಥಿ ಮಾಡುವ ಕಾರ್ಯವಿರುವಂತೆ ಕಾಡುಗೊಲ್ಲರಲ್ಲಿ ಸತ್ತವರಿಗೆ ಮುಕ್ತಿಯನ್ನು ಒದಗಿಸಲು ಅಮವಾಸ್ಯೆಯ ಕೂಳು ಮಾಡುತ್ತಾರೆ. ಇಲ್ಲಿ ಕೂಳು ಎಂಬುದು ಹಳಗನ್ನಡ ಪದ

ಕಾಡುಗೊಲ್ಲರಲ್ಲಿ ಇನ್ನು ಬಳಕೆಯಲ್ಲಿರುವುದನ್ನು ಗಮನಿಸಬಹುದು. ಕಾಡುಗೊಲ್ಲರಲ್ಲಿ ದೇವರ ಪಟ್ಟದ ಪೂಜಾರಿ ಮತ್ತು ಅಮವಾಸ್ಯೆಯ ಪೂಜಾರಿ ಎಂದು ಇಬ್ಬರನ್ನು ನೇಮಕ ಮಾಡುತ್ತಾರೆ. ಕಾಡುಗೊಲ್ಲರ ಪೂಜಾರಿಗಳು ಬ್ರಾಹ್ಮಣರನ್ನು ಮೀರಿಸುವಂತಹ ಕಟ್ಟುನಿಟ್ಟಾದ ವ್ರತವನ್ನು ಆಚರಿಸುತ್ತಾರೆ. ಅಂದರೆ ಅವರ ಅಡುಗೆಯನ್ನು ಅವರೆ ಮಾಡಿಕೊಳ್ಳುತ್ತಾರೆ. ಇತರರು ಬಳಸುವ ನೀರನ್ನು ಬಳಸದೆ ಪ್ರತ್ಯೇಕವಾದ ಒರತೆ ತೆಗೆದು ಅದರ ನೀರನ್ನು ಬಳಸಬೇಕು. ಆ ಒರತೆಗೆ ಯಾರು ನರಳು ಸಹ ಬೀಳಬಾರದು. ಒಂದು ವೇಳೆ ಯಾರ ನೆರಳಾದರೂ ಬಿದ್ದರೆ ಅಲ್ಲಿ ನಾಗರಹಾವು ಇರುತ್ತದೆ ಎಂಬ ನಂಬಿಕೆ. ನೆರಳು ಬಿದ್ದರೆ ಹೊಸ ಒರತೆ ತೆಗೆದು ನೀರನ್ನು ಬಳಸಬೇಕು. ಈ ರೀತಿಯ ವ್ಯವಸ್ಥೆ ಯರಬಳ್ಳಿಗೊಲ್ಲರ ಹಟ್ಟಿಯಲ್ಲಿ ಜೀವಂತವಾಗಿರುವುದನ್ನು ಕಾಣಬಹುದು. ಪೂಜಾರಿಗಳು ಊರು ಅಥವಾ ಪಟ್ಟಣಗಳನ್ನು ಪ್ರವೇಶಿಸುವಂತಿರಲಿಲ್ಲ. ಆದರೆ ಇಂದು ಆ ವ್ಯವಸ್ಥೆ ಸಡಿಲಗೊಂಡಿದೆ. ಯರಬಳ್ಳಿಯಂತಹ ಕೆಲವು ಹಟ್ಟಿಗಳಲ್ಲಿ ಮಾತ್ರ ಪೂಜಾರಿಗಳು ಊರು ಪಟ್ಟಣ ಪ್ರವೇಶಿಸುವುದಿಲ್ಲ. ಬಸ್ಸು, ರೈಲು ಹತ್ತುವುದಿಲ್ಲ, ಆಸ್ಪತ್ರೆಗೆ ಹೋಗುವಂತಿಲ್ಲ, ವಿದ್ಯುತ್ ತಂತಿಯ ಕೆಳಗೆ ನಡೆಯುವಂತಿಲ್ಲ, ಎಲ್ಲರು ಊಟಮಾಡುವ ತಟ್ಟೆಯಲ್ಲಿ ಊಟ ಮಾಡುವಂತಿಲ್ಲ, ಪರಸ್ತ್ರೀಯರ ಸಂಗ ಮಾಡುವಂತಿಲ್ಲ. ಕಾಡುಗೊಲ್ಲರು ದೇವರ ಸಾಕ್ಷತ್ ರೂಪವನ್ನು ಪೂಜಾರಿಯಲ್ಲಿ ಕಾಣುತ್ತಿದ್ದರು. ಕಾಡುಗೊಲ್ಲರ ಮೇಲೆ ಆಧುನಿಕತೆಯ ಗಾಳಿ ಬೇಸಿದಂತೆ ಕಾಡುಗೊಲ್ಲರ ಪೂಜಾರಿಗಳು ಬದಲಾಗುತ್ತಿದ್ದಾರೆ. ಬಸ್ಸು, ಲಾರಿಗಳಲ್ಲಿ ಪಯಣ ಮತ್ತು ಹೋಟೆಲ್‌ಗಳಲ್ಲಿ ಊಟ ಮಾಡುತ್ತಿದ್ದಾರೆ.

ದೇವರ ಪಟ್ಟದ ಪೂಜಾರಿಯಷ್ಟೆ ಪವಿತ್ರತೆಯನ್ನು ಕಾಪಾಡಿಕೊಂಡಿರುವ ಅಮವಾಸ್ಯೆ ಪೂಜಾರಿಯು, ಇಂದು ಕೂಡ ಕಂಚಿನತಟ್ಟೆ ಬಿಟ್ಟರೆ, ಬಾಳೆಯ ಎಲೆಯಲ್ಲಿ ಊಟ ಮಾಡುತ್ತಾರೆ. ಈತನ ಕೆಲಸ ಒಂದು ವರ್ಷದಲ್ಲಿ ಯಾರ್‍ಯಾರ ಮನೆಯಲ್ಲಿ ಯಾರ್‍ಯಾರು ಸತ್ತಿರುವರೋ, ಅವರಿಗೆ ಮೋಕ್ಷ ಕಲ್ಪಿಸುವ ಸಲುವಾಗಿ ವಿಷದ ಕೂಳನ್ನು ಊಟ ಮಾಡಬೇಕು. 'ಕುಂಬಾರರ ಮನೆಯಿಂದ ಹೊಸದೊಂದು ಮಡಕೆಯನ್ನು ಕೊಂಡು ತರುತ್ತಾರೆ. ಈ ಆಚರಣೆಯನ್ನು ಸಾಮಾನ್ಯವಾಗಿ ಕಾಳಹಬ್ಬ ಅಥವಾ ಗುಗ್ಗರಿಹಬ್ಬದಲ್ಲಿ ಮಾಡುತ್ತಾರೆ. ಮೊದಲು ಹೊಂಗೆ ಸೊಪ್ಪು ಮತ್ತು ಬೇವಿನಸೊಪ್ಪಿನಿಂದ ಚಪ್ಪರ ಹಾಕುತ್ತಾರೆ. ಸೊಪ್ಪಿನ ಗುಡಿಸಲಿನಲ್ಲಿ ಅದರಲ್ಲಿ ಮೂರು ಒಲೆಗುಂಡು ಇಟ್ಟು ಅದಕ್ಕೆ ಬೆಂಕಿಹಚ್ಚಿ ಒಲೆಯ ಮೇಲೆ ಮಡಕೆಯನ್ನಿಟ್ಟು ಅದರಲ್ಲಿ ಒಂದು ಹಿಡಿ ಅಕ್ಕಿ ಹಾಕುತ್ತಾರೆ. ಹೊಳೆಯಿಂದ ತಂದಿರುವ ನೀರು, ಸ್ವಲ್ಪ ಬೇವಿನಸೊಪ್ಪು ಮತ್ತು ಸ್ವಲ್ಪ ಬೆಲ್ಲ ಹಾಕಿ ಮಧ್ಯರಾತ್ರಿಯಲ್ಲಿ ಬತ್ತಲೆಯಾಗಿ ಅಮವಾಸ್ಯೆ ಕೂಳು ಬೇಯಿಸುತ್ತಾನೆ. ಅದು ಚೆನ್ನಾಗಿ ಬೆಂದ ನಂತರ ಸತ್ತವರ ಹೆಸರಿನಲ್ಲಿ ಬೆನವಗಳನ್ನು ಇಟ್ಟು ಪೂಜೆ ಮಾಡುತ್ತಾನೆ. ಆನಂತರ ಮಾಡಿರುವ ಅಡುಗೆಯನ್ನು ಊಟಮಾಡುತ್ತಾನೆ. ಅಲ್ಲಿಗೆ ಸತ್ತಿರುವ ವ್ಯಕ್ತಿಗೆ ಮೋಕ್ಷ ಒದಗಿತು ಎಂದು ತಿಳಿದುಕೊಳ್ಳುವರು. ಈ ಅಮವಾಸ್ಯೆಯ ಪೂಜಾರಿಗೆ ಅಮವಾಸ್ಯೆಯ ಕೂಳು ತಿನ್ನವುದಕ್ಕೆ ಸತ್ತ ವ್ಯಕ್ತಿಯ ಮನೆಯವರು ನಿಗದಿಪಡಿಸದ ಹಣ ಕೊಡಬೇಕಾಗುತ್ತದೆ. ಅದು ಐದರಿಂದ ಹತ್ತು ರೂಪಾಯಿಗಳ ವರೆಗೆ ಮಾತ್ರ ಇರುತ್ತದೆ. ಈ ಅಮವಾಸ್ಯೆಯ ಕೂಳನ್ನು ಮದುವೆಯಾಗಿರುವ ವ್ಯಕ್ತಿಗೆ ಮಾತ್ರ ಮಾಡುತ್ತಾರೆ. ಆದರೆ ಮದುವೆ ಆಗದೆ ಸತ್ತಿರುವ ವ್ಯಕ್ತಿಗೆ

ಇಲ್ಲವೆ ಮಡಿಳಿಗೆ ಮಾಡುವುದಿಲ್ಲ. ಇದೊಂದು ವಿಶಿಷ್ಟವಾದ ಆಚರಣೆಯಾಗಿದೆ. ಏಕೆಂದರೆ ಯಾವ ಅನ್ನವನ್ನಾದರೂ ತಿನ್ನಬಹುದು. ಆದರೆ ಅಮವಾಸ್ಯೆ ಕೂಳು ತಿನ್ನುವುದು ಬಲು ಕಷ್ಟದ ವಿಷಯವೆಂದು ಅಮವಾಸ್ಯೆಯ ಪೂಜಾರಿ ಹೇಳುತ್ತಾನೆ. ಕಾಡುಗೊಲ್ಲರು ಒರಿಯರಲ್ಲಿ ಅತಿಯಾದ ನಂಬಿಕೆ ಇಟ್ಟಿರುವಂತೆ ಬೇರೆ ಯಾವ ಸಮುದಾಯಗಳು ನಂಬಿಕೆ ಇಟ್ಟಿಲ್ಲ. ಏಕೆಂದರೆ ಸಣ್ಣೆಯಗೊಲ್ಲರಿಗೆ ಒರಿಯ ವ್ಯಕ್ತಿಯೆಂದರೆ ಕಾಟಯ್ಯ. ಅವನ ಹೆಸರಿನಲ್ಲಿಯೇ ದೀಪ ಧೂಪ ಹಾಕುವುದರಿಂದ ಅವನ ಹೆಸರಿನಲ್ಲಿಯೇ ಅಮವಾಸ್ಯೆಯ ಕೂಳನ್ನು ಮಾಡುತ್ತಾರೆ. ಅಂದರೆ ಕಾಟಯ್ಯನನ್ನು ಆರಾಧನೆ ಮಾಡುವುದು ಬೇರೆ ಅಮವಾಸ್ಯೆಯ ದೇವರಾಗಿ ಸ್ವೀಕರಿಸುವುದು ಬೇರೆ. ಕಾಟಮಲಿಂಗ ಸಾಮಾನ್ಯವಾಗಿ ಸಣ್ಣೆಯಗೊಲ್ಲರಿಗೆ, ಅಜ್ಜಗೊಲ್ಲರಿಗೆ ಅಜ್ಜೇರಗೊಲ್ಲರಿಗೆ ಆರಾಧನೆಯ ದೇವರಾಗಿರುವಂತೆ ಹಣಿನಗೊಲ್ಲರಿಗೂ ಮತ್ತು ಮರನಗೊಲ್ಲರಿಗೂ ದೇವರಾಗಿರುವುದು ಕಂಡುಬರುತ್ತದೆ.

"ಯರಬಳ್ಳಿಗೊಲ್ಲರಹಟ್ಟಿಯ ಹಾಲುಕುಡಿದಪ್ಪ ದೇವರ ಪೂಜಾರಿಗೆ ಕಟ್ಟುವ ಪಟ್ಟ ಅತ್ಯಂತ ವೈಶಿಷ್ಟ್ಯಪೂರ್ಣವಾದುದು. ಈ ಸಮಾರಂಭವನ್ನು ಅವರು 'ಹುಣಿಸೆಗೆ ಹಾಲು ಹೊಯ್ಯೋದು' ಎಂದು ಕರೆಯುತ್ತಾರೆ. ಹುಣಿಸೆ ಮರದ ಸಸಿಗೆ ಹಾಲು ಹೊಯ್ಯುವ ಸಂಪ್ರದಾಯದ ಹಿನ್ನೆಲೆಯಲ್ಲಿ ಬಹುಶಃ ಹುಣಿಸೆಮರದ ರೀತಿಯಲ್ಲಿ ದೀರ್ಘಕಾಲ ಅವರ ಸತ್ವ ಸಾಮರ್ಥ್ಯಗಳು ಹೆಚ್ಚಲಿ ಎಂಬ ಆಶಯವಿದ್ದಂತಿದೆ. ಈ ಸಂದರ್ಭದಲ್ಲಿ ಬೇಡರು ತಮ್ಮ ದೇವರ ಎತ್ತುಗಳನ್ನು ಈ ಸಮಾರಂಭಕ್ಕೆ ಎತ್ತಿನ ಕಿಲಾರಿಗಳ ಮೂಲಕ ತರುತ್ತಾರೆ. ಈ ಪಟ್ಟವಾಗುವ ಪೂಜಾರಿಗೆ ಹಟ್ಟಿ ಮಣೆಗಾರರು ಚರ್ಮದ ಚಪ್ಪಲಿ ಮಾಡಿ ತರುತ್ತಾರೆ. ಈ ಜೋಡಿ ಚಪ್ಪಲಿಯನ್ನು ಇಬ್ಬರು ಮಣೆಗಾರರು ಮಾಡುತ್ತಾರೆ. ಒಬ್ಬೊಬ್ಬರು ಒಂದೊಂದು ಕಾಲಿನದು. ಆದರೆ ಮಾಡುವವರಿಗೆ ಇಂಥದೆ ಕಾಲಿನ ಚಪ್ಪಲಿ ಎಂಬ ಸೂಚನೆ ಕೊಟ್ಟಿರುವುದಿಲ್ಲ. ಆಕಸ್ಮಿಕವಾಗಿ ಇಬ್ಬರು ಮಣೆಗಾರರೂ ಬೇರೆ ಬೇರೆ ಕಾಲಿನ ಚಪ್ಪಲಿಯನ್ನೇ ತಯಾರಿಸಿ ತರುವುದು ಆಶ್ಚರ್ಯಗಳಲ್ಲಿ ಒಂದು." *(ಮೀರಾಸಾಬಿಹಳ್ಳಿ ಶಿವಣ್ಣ 'ಕಾಡುಗೊಲ್ಲರ ಸಂಸ್ಕೃತಿ' ಪುಟ೧೨. ೨೦೦೪)*

೪.೧.೧೦. ಕಾಟಮದೇವರ ಪೂಜಾರಿಯ ಆಯ್ಕೆ

ಕಾಟಮದೇವರು ಪವಾಡ ಪುರುಷ ದೈವ ಎಂಬುದು ಕಾಡುಗೊಲ್ಲರ ನಂಬಿಕೆ. ಹೀಗಾಗಿ ಅದರ ಪೂಜೆಯನ್ನು ಮಾಡುವ ಪೂಜಾರಿಯನ್ನು ಅದೇ ಆಯ್ಕೆ ಮಾಡಿಕೊಳ್ಳುತ್ತದೆ ಎಂಬ ನಂಬಿಕೆ ಅವರಲ್ಲಿದೆ. ಆ ನಂಬಿಕೆಯನ್ನು ಜೀವಂತವಾಗಿ ಸಹ ಉಳಿಸಿಕೊಂಡು ಬಂದಿದ್ದಾರೆ. ಇದು ದೇವರ ಬಗ್ಗೆ ಭಕ್ತಿಯನ್ನು ಭಯವನ್ನು ಹೆಚ್ಚಿಸುತ್ತದೆ. ಅಂದರೆ ಪೂಜಾರಿಯ ವಂಶಸ್ಥರಲ್ಲಿ ತನಗೆ ಬೇಕಾಗಿರುವ ಪೂಜಾರಿಯನ್ನು ದೇವರೆ ಆಯ್ಕೆ ಮಾಡುತ್ತದೆ. ಒಂದು ವೇಳೆ ಪೂಜಾರಿಯಾಗಲು ದೇವರು ಗುರುತಿಸಿರುವ ವ್ಯಕ್ತಿಯು ಇಷ್ಟ ಪಡದಿದ್ದರೆ, ಏನಾದರೂ ಪವಾಡ ಮಾಡಿ ತನ್ನ ಪೂಜಾರಿಯನ್ನಾಗಿ ಮಾಡಿಕೊಳ್ಳುತ್ತದೆ. ಈಗಿನ ಪೂಜಾರಿ ಬಿ.ಎ. ಮಾಡಿದ್ದರೂ ಸಹ ದೇವರ ಮಾರ್ಗದರ್ಶನದಂತೆ ನಡೆಯುತ್ತಾನೆ. ಕಾವಿ ಬಟ್ಟೆಯನ್ನುಟ್ಟು, ಗಡ್ಡ ಬಿಟ್ಟು ಒರತೆಯ ನೀರಿನಲ್ಲಿ ಅಡುಗೆ ಮಾಡಿಕೊಂಡು

ಊಟ ಮಾಡುತ್ತಾನೆ. ಅಂದರೆ ವಿದ್ಯಾವಂತರಾದವರೂ ದೇವರ ನಿಯಮಗಳಿಗೆ ಬದ್ಧರಾಗಿರಬೇಕು ಎಂಬುದು ಕಾಡುಗೊಲ್ಲರ ನಿಯಮ. ಈ ಪೂಜಾರಿಯನ್ನು ಯಾರೂ ಮುಟ್ಟಿ ನಮಸ್ಕರಿಸುವಂತಿಲ್ಲ.

"ತುಂಬ ಕಟ್ಟುನಿಟ್ಟಿನ ಹಾಲುಕುಡಿದಪ್ಪ ದೈವದ ಕಳ್ಳಿಗುಡಿಯ ಪೌಳಿಯೊಳಕ್ಕೆ ಕಾಡುಗೊಲ್ಲರಲ್ಲದವರಿಗೆ ಪ್ರವೇಶವೇ ಇಲ್ಲ. ಉಚ್ಚ ಜಾತಿಗೆ ಸೇರಿದವರೂ ಬಂದರೂ ಅವರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ಈ ದೇವರ ಪೂಜಾರಿಗಳದ್ದು ಶಿಸ್ತಿನ ಜೀವನ. ಅವರು ಬಸ್ಸು ಹತ್ತುವಂತಿಲ್ಲ. ಎಲ್ಲಿಗೆ ಹೋಗಬೇಕೆಂದರೂ ನಡೆದೇ ಹೋಗಬೇಕು! ಹಟ್ಟಿಯ ಜನ ಬಳಸುವ ನೀರನ್ನು ಬಳಸುವಂತಿಲ್ಲ! ಇವರು ತಮಗಾಗಿಯೇ ತೋಡಿಕೊಂಡ ಚಿಲುಮೆಯ ನೀರನ್ನೇ ಕುಡಿಯಬೇಕು! ನಂತರ ಈ ಚಿಲುಮೆಯನ್ನು ಬೇರೆ ಯಾರಾದರೂ ಮುಟ್ಟಿ ಅಪವಿತ್ರಗೊಳಿಸಿಬಿಟ್ಟಾರೆಂದು ಕಳ್ಳಿ ತೊಟ್ಟು ಇಲ್ಲವೇ ಕಲ್ಲು ಬಂಡೆಯಿಂದ ಮುಚ್ಚುತ್ತಾರೆ!.*(ಮೀರಾಸಾಬಿಹಳ್ಳಿ ಶಿವಣ್ಣ 'ಕಾಡುಗೊಲ್ಲರ ಸಂಸ್ಕೃತಿ' ಪುಟ ೫, ೨೦೦೪)*

೪.೧.೧೧. ಹುಣಿಸೆ ಗಿಡಕ್ಕೆ ಹಾಲು ಹಾಕುವುದು:

ಇದು ಯರಬಳ್ಳಿಗೊಲ್ಲರ ಹಟ್ಟಿಯಲ್ಲಿ ಮಾತ್ರ ಆಚರಣೆಯಲ್ಲಿರುವ ಪದ್ಧತಿಯಾಗಿದೆ. ಈ ಆಚರಣೆಯು ಪೂಜಾರಿಗೆ ಪಟ್ಟಕಟ್ಟುವ ಸಮಯದಲ್ಲಿ ಮಾತ್ರ ಕಂಡುಬಂದಿದೆ. ಈ ಆಚರಣೆಯು ಮಧ್ಯರಾತ್ರಿ ಎರಡು ಗಂಟೆಯ ಸಮಯದಲ್ಲಿ ಪಟ್ಟದ ಪೂಜಾರಿ, ದಳವಾಯಿ ಹಾಗೂ ಒಬ್ಬ ಉರಿಮೆ ಬಡಿಯುವ ಛಲವಾದಿ ಸೇರಿ ಎಲ್ಲರೂ ಮಲಗಿರುವ ಸಮಯದಲ್ಲಿ ಯಾರಿಗೂ ಕಾಣಿಸದಂತೆ ಒಂದು ಹುಣಸೆಯ ಗಿಡ ಅದು ಎರಡು ಎಲೆಯನ್ನು ಮಾತ್ರ ಬಿಟ್ಟಿರಬೇಕು. ಅಂತಹ ಗಿಡವನ್ನು ದೇವರು ಹುಡುಕಿಕೊಂಡು ಹೋಗಿ ಹಾಲು ಹಾಕಿ ಬರುತ್ತದೆ. ಕರಿಯ ಕಂಬಳಿಯ ಗದ್ದಿಗೆ ಮೇಲೆ ಅದಕ್ಕೆ ಒರತೆಯಿಂದ ತಂದಿರುವ ನೀರನ್ನು ಚಿಮುಕಿಸಿ, ವಿಭೂತಿ ಇಟ್ಟು, ಹಣ್ಣು ಕಾಯಿ ಹೊಂಬಾಳೆ ಎಲೆ ಅಡಿಕೆ ಇಟ್ಟು, ಪಟ್ಟದ ಪೂಜಾರಿಯಿಂದ ಶಾಸ್ತ್ರೋಕ್ತವಾಗಿ ಪೂಜೆ ಮಾಡಿಸುತ್ತಾರೆ. ಆನಂತರ ಹುಣಸೆ ಗಿಡವನ್ನು ಹುಡುಕಿ ಹಾಲು ಹಾಕುತ್ತಾರೆ. ಇದರ ಉದ್ದೇಶ ಹುಣಿಸೆ ಮರ ಬದುಕಿರುವವರೆಗೆ ಪೂಜಾರಿಯು ನಿಷ್ಠೆಯಿಂದ ಇರಬೇಕು ಎಂಬುದು ಇದರ ಆಶಯ. ಇವರು ಹುಣಿಸೆಗೆ ಹಾಲು ಹಾಕುವುದರಿಂದ ಹುಣಿಸೆ ಕಟ್ಟಿಗೆಯನ್ನು ಅಡುಗೆ ಮಾಡಲು ಬಳಸುವುದಿಲ್ಲ. ಇದು ಒಂದು ಕಾರಣವಿರಬೇಕು.

೪.೧.೧೨. ಕಾಳಹಬ್ಬ ಅಥವಾ ಗುಗ್ಗರಿಹಬ್ಬ:

ಈ ಹಬ್ಬವನ್ನು ಸುಗ್ಗಿಯ ಸಂಕೇತವಾಗಿ ಮಾಡುತ್ತಾರೆ. ಸಾಮಾನ್ಯವಾಗಿ ಶಿವರಾತ್ರಿ ಹಬ್ಬವಾಗಿ ೯ ದಿನಗಳಿಗೆ ಮಾಡುತ್ತಾರೆ. ಸುಗ್ಗಿಯು ಮುಗಿದು ಎಲ್ಲ ಧಾನ್ಯಗಳು ಮನೆ ಸೇರಿರುವಂತಹ ಸಮಯದಲ್ಲಿ ಈ ಹಬ್ಬ ಪ್ರಾರಂಭವಾಗುತ್ತದೆ. ಈ ಹಬ್ಬವನ್ನು ಮೊದಲು ಯರಬಳ್ಳಿಗೊಲ್ಲರಹಟ್ಟಿಯಲ್ಲಿ ಪ್ರಾರಂಭಿಸುತ್ತಾರೆ. ಅಲ್ಲಿ ಏಳು ಗುಡಿಕಟ್ಟಿನ ಒಕ್ಕಲುಗಳು ಸೇರುತ್ತಾರೆ. ಮೂರು ದಿನಗಳ ಕಾಲ ಗುಗ್ಗರಿ ಹಬ್ಬ ಮಾಡುತ್ತಾರೆ.

ಮೊದಲನೆಯ ದಿನ ದೇವರನ್ನು ಸ್ನಾನಕ್ಕೆ ಹೊಳೆಗೆ ತೆಗೆದುಕೊಡು ಹೋಗುವುದು. ಯರಬಳ್ಳಿ ಕಾಟುಮ ದೇವರನ್ನು ಹಾಲುಕುಡಿದಪ್ಪ ನಿಂಗಣ್ಣ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ದೇವರು

ಹಾಲು ಕುಡಿಯುವಾಗ ಜನರ ಕಣ್ಣಿಗೆ ಬಿದ್ದುದರ ಪರಿಣಾಮವಾಗಿ ಹಾಲುಕುಡಿದಪ್ಪ ಎಂದು ಕರೆಯುವರು ಎಂಥಹ ಸಂದರ್ಭ ಬಂದರೂ ಅದು ಮಾತನಾಡುವುದಿಲ್ಲ ಕೇವಲ ಹೂವು ಕೊಡುವುದು ಗಣೆಯ ಮೂಲಕ ಭವಿಷ್ಯ ಹೇಳುವುದು, ಕುರುಹು ತೋರಿಸುವುದು ಮಾತ್ರ ಮಾಡುತ್ತದೆ. ಯಾರ ಮೈಮೇಲೆ ಬರುವುದಿಲ್ಲ.

೪.೧.೧೩. ಹೊಳೆಗೆ (ಜಲದಿ) ಹೋಗುವುದು

ಯರಬಳ್ಳಿಗೊಲ್ಲರ ಹಟ್ಟಿಯ ಕಾಟಮಲಿಂಗ ಹೊರಗೆ ಹೊರಡುವುದೇ ಕಡಿಮೆ. ಅದಕ್ಕೆ ಮೈಲಿಗೆ ಆಗುವುದಿಲ್ಲ. ಯರಬಳ್ಳಿಯಲ್ಲಿರುವುದು ಹಿರಿಯಕಂಬಿ. ಇದೇ ರೀತಿ ಏಳು ಕಂಬಿಗಳಿವೆ. ಅಂದರೆ ಏಳು ಜನ ಅಣ್ಣ ತಮ್ಮಂದಿರು ಹಂಚಿಕೊಂಡಿರುವ ಕಂಬಿಗಳು. ಈ ಏಳು ಕಂಬಿಗಳು ಒಂದು ಹತ್ತಿರ ಸೇರುವುದು ಯರಬಳ್ಳಿ ಪೂಜಾರಿಗೆ ಪಟ್ಟಕಟ್ಟುವಾಗ ಮಾತ್ರ. ಇಲ್ಲವೇ ಹುಣಸೆಗೆ ಹಾಲು ಹಾಕುವಾಗ ಮಾತ್ರ. ಹಿರಿಕಂಬಿಯು ವಿದ್ಯುತ್ ತಂತಿಯ ಕೆಳಗೆ ನಡೆಯುವುದಿಲ್ಲ ಮತ್ತು ಸುತ್ತಲೂ ದನಗಳು ಸುತ್ತುವರಿದಿರುತ್ತವೆ. ದನಗಳ ಮಧ್ಯದಲ್ಲಿಯೇ ದೇವರು ಹೊಳೆಗೆ ಸ್ನಾನಕ್ಕೆ ಹೋಗುತ್ತದೆ. ಹುರುಳಿ ನವಣೆ ಹೊಲದಲ್ಲಿ ಹೋಗುವುದಿಲ್ಲ. ಎಲ್ಲ ಭಕ್ತರು ದೂರನಿಂತು ನಮಸ್ಕಾರ ಮಾಡಬೇಕು. ದೇವರು ತೋರಿಸುವ ಜಾಗದಲ್ಲಿ ಒರತೆ ತೆಗೆದು ನೀರು ಕಂಡ ತಕ್ಷಣ ಒರತೆಯ ಮುಂದೆ ಕರಿಯ ಕಂಬಳಿ ಹಾಸಿ ಒರತೆಯ ನೀರನ್ನು ಚಿಮುಕಿಸಿ ವಿಭೂತಿ ಇಟ್ಟು ಮೂರು ಬೆನವಗಳನ್ನು ಇಟ್ಟು ಅವುಗಳಿಗೆ ವಿಭೂತಿ ಹಚ್ಚಿ ಮೂರು ಎಲೆ ಮೂರು ಅಡಿಕೆ ಇಟ್ಟು ಪಟ್ಟದ ಪೂಜಾರಿ ಮೊದಲು ಒಂದು ಮಡಕೆ ಇಲ್ಲವೆ ಕಂಚಿನ ತಂಬಿಗೆಯಲ್ಲಿ ನೀರು ತುಂಬಿ ಅದಕ್ಕೆ ಹಂಗುದಾರ ಕಟ್ಟಿ ಪೂಜೆಮಾಡುತ್ತಾರೆ. ಆ ಕಂಚಿನ ಇಲ್ಲವೇ ಮಡಕೆಯಲ್ಲಿರುವ ನೀರನ್ನು ತೆಗೆದುಕೊಂಡು ದೇವರ ವಸ್ತುಗಳನ್ನು ತೊಳೆಯುತ್ತಾರೆ. ಸಾಮಾನ್ಯವಾಗಿ ಕಾಡುಗೊಲ್ಲರ ಎಲ್ಲಾ ದೇವರುಗಳು ಪೆಟ್ಟಿಗೆಯ ರೂಪದಲ್ಲಿವೆ. ಆ ಪೆಟ್ಟಿಗೆಗೆ ಕಂಬಿಯನ್ನು ಕಟ್ಟಿ ಪೂಜಾರಿಯ ಮೇಲೆ ದೇವರನ್ನು ಹೊರಿಸುತ್ತಾರೆ. ಎಲ್ಲ ವಸ್ತುಗಳನ್ನು ಒರತೆ ನೀರಿನಿಂದ ತೊಳೆದ ನಂತರ ಅವುಗಳಿಗೆ ಮುಖಪದ್ಮ ಮುಢಿಸಿ, ರೇಷ್ಮೆ ಬಟ್ಟೆ ಸುತ್ತಿ, ಹೊಂಬಾಳೆ ಮುಡಿಸಿ, ಹೂವಿನ ಹಾರಹಾಕಿ ಎಂಟು ಗಂಟೆಯ ಹೊತ್ತಿಗೆ ಹೊಳೆ ಪೂಜೆ ಮಾಡುತ್ತಾರೆ. ಹೊಳೆ ಪೂಜೆಗೆ ಸಾಕಷ್ಟು ಜನ ಸೇರುತ್ತಾರೆ. ಅವರಿಗೆ ದೇವರು ಕಾಣದಂತೆ ಕಂಬಳಿಯಿಂದ ತೆರೆ ಕಟ್ಟಿರುತ್ತಾರೆ. ಯಾವುದೇ ಕಾರಣಕ್ಕೂ ಹೆಣ್ಣು ಮಕ್ಕಳು ದೇವರನ್ನು ನೋಡುವಂತಿಲ್ಲ.

೪.೧.೧೪. ಕುರಿ (ಹೊಳೆಮರಿ) ಬಲಿ ಕೊಡುವುದು:

ಕಾಡಗೊಲ್ಲರು ತಮ್ಮ ಪ್ರತಿಯೊಂದು ದೇವರಿಗೂ ಕುರಿ ಬಲಿಕೊಡುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ದೇವರು ಬೆರಗಿನಿಂದ ಹೊರಗೆ ಹೊರಟ ನಂತರ ಎಲ್ಲ ಒಕ್ಕಲುಗಳ ದೇವರ ಮೇಲಿರುತ್ತದೆ. ಅಷ್ಟೇ ಅಲ್ಲ ಕೆಲವು ಮಂತ್ರವಾದಿಗಳು ದೇವರಿಗೆ ಕಣ್ ಕಟ್ ಮಾಡುತ್ತಾರೆ ಎಂಬ ಕಾರಣದಿಂದ ಅವರು ಮಾಡುವ ಮಾಟ ದೇವರಿಗೆ ತಾಗಬಾರದೆಂಬ ಕಾರಣಕ್ಕೆ ದೇವರು ಹೊಳೆಯನ್ನು ಬಿಟ್ಟ ತಕ್ಷಣ ದೇವರನ್ನು ಪೂರ್ವ ದಿಕ್ಕಿನ ಕಡೆ ಮುಖಮಾಡಿ ನಿಲ್ಲಿಸಿ, ದೇವರಗೌಡನು

ಪಂಜು ಬೆಳಗಿದ ನಂತರ, ಅಗಸ ಹಾಸಿದ ಮಡಿ ಬಟ್ಟೆಯ ಮೇಲೆ ಸ್ವಲ್ಪ ದೂರಬಂದು, ಕುರಿಯ ಮರಿ ಇಲ್ಲವೇ ಮೇಕೆ ಮರಿಯನ್ನು ಮಚ್ಚಿನಿಂದ ನಡು ಮಧ್ಯಕ್ಕೆ ಕಡಿಯುತ್ತಾರೆ. ಕಡಿದ ಮರಿಯನ್ನು ಎರಡು ಭಾಗ ಮಾಡಿ ಆ ಕಡೆ ಒಂದು ಭಾಗ, ಈ ಕಡೆ ಒಂದು ಭಾಗ ಎಸೆಯುತ್ತಾರೆ. ನಂತರ ನಿಂಬೆ ಹಣ್ಣಿನ ದೃಷ್ಟಿ ತೆಗೆಯುತ್ತಾರೆ. ಅದಾದ ನಂತರ ತೆಂಗಿನ ಕಾಯಿಯಿಂದ ದೃಷ್ಟಿ ತೆಗೆಯುತ್ತಾರೆ.

ಈ ಆಚರಣೆಯಲ್ಲಿ ಒಂದು ಕಡೆ ಪ್ರಾಣಿ ಹಿಂಸೆ ನಡೆದರೆ, ದೇವರಿಗೆ ದೃಷ್ಟಿತಾಗುತ್ತದೆ ಎನ್ನವುದೇ ಅವರ ತಪ್ಪು ಕಲ್ಪನೆ. ಅಂತಹದರಲ್ಲಿ ದೇವರ ಹೆಸರು ಹೇಳಿ ಬಲಿ ಕೊಡುವುದು ಪ್ರಾಣಿ ಹಿಂಸೆಯೆ ಸರಿ. ಇದು ಅವರ ಅಜ್ಞಾನವನ್ನು ಹೇಳುತ್ತದೆ. ಬಲಿಕೊಟ್ಟಿರುವ ಮರಿಯನ್ನು ಅಗಸರವನು ತಿನ್ನುತ್ತಾನೆ. ಪಂಜುಗಳ ಬಳಕೆಯು ಕೂಡ ಕತ್ತಲಲ್ಲಿ ದಾರಿ ತೋರಲು ಬಳಸಿರುವುದು ಕಂಡುಬರುತ್ತದೆ. ದೇವರಿಗೆ ಮಾಟ ಮಂತ್ರ ಕಣ್ ಕಟ್ ಮಡಿಸುತ್ತಾರೆ. ಎಂದು ಹೇಳುವ ಮತ್ತು ಅದು ದೇವರಿಗೆ ತಾಗದಂತೆ ನೋಡಿಕೊಳ್ಳಲು ಬಲಿಕೊಡುವ ಪದ್ಧತಿಯನ್ನು ಗಮನಿಸಿದರೆ ಆ ದೈವಗಳಲ್ಲಿರುವ ಶಕ್ತಿ ಎಂತಹದ್ದು ಎಂದು ಅರ್ಥೈಸಿಕೊಳ್ಳ ಬೇಕಾಗುತ್ತದೆ.

೪.೧.೧೫. ಧಾನ್ಯಗಳನ್ನು ಬೇಯಿಸುವ ಆಚರಣೆ:

ಕಾಡುಗೊಲ್ಲರು ಪ್ರತಿಯೊಂದು ಮನೆಯವರು ತಂದು ಕೊಟ್ಟಿರುವ ಧಾನ್ಯಗಳಲ್ಲಿ ಹುರುಳಿ ನವಣೆ ಇಲ್ಲದಂತೆ ಮತ್ತೊಮ್ಮೆ ಪರೀಕ್ಷಿಸಿ. ಕುಂಬಾರರ ಮನೆಯಿಂದ ತಂದಿರುವ ಹೊಸ ಸೋರೆಯಲ್ಲಿ ಹಾಕುತ್ತಾರೆ. ಬಾಯಿಗೆ ಬಟ್ಟೆ ಕಟ್ಟಿಕೊಂಡು ಮೂರು ಬೆನವಗಳನ್ನು ಇಟ್ಟು ಅವುಗಳಿಗೆ ವಿಭೂತಿ ಹಚ್ಚಿ ಪೂಜೆ ಮಾಡಿ ಒಲೆ ಹಚ್ಚುತ್ತಾರೆ. ಅಗ್ನಿ ಪೂಜೆ ಮಾಡಿದ ನಂತರ ಆ ದಿನ ರಾತ್ರಿ ಇಡೀ ಕಾಳುಗಳನ್ನು ಚೆನ್ನಾಗಿ ಬೇಯಿಸಿ ಬೆಳಿಗ್ಗೆ ೭ರಿಂದ ೮ ಗಂಟೆಯ ಒಳಗೆ ಕಾಳಿನ ರಾಶಿಯನ್ನು ದೇವರ ಮುಂದೆ ಮಾಡುತ್ತಾರೆ. ಇನ್ನೊಂದು ವಿಶೇಷವೆಂದರೆ ಕಾಳಿಗೆ ಉಪ್ಪು ಹಾಕದೆ ಬೇಯಿಸುತ್ತಾರೆ. ದೇವರ ಮುಂದೆ ಹಾಕಿದ ನಂತರ ಕಾಳಿನ ರಾಶಿಯಲ್ಲಿಯ ಮೂರು ಹಿಡಿ ತೆಗೆದು ದೇವರಿಗೆ ಅರ್ಪಿಸುತ್ತಾರೆ. ಆ ನಂತರ ರಾಶಿ ಪೂಜೆ ಮಾಡಿ ಪ್ರತಿ ಮನೆಗೂ ಹಂಚುತ್ತಾರೆ. ಅಂದರೆ ಮೊದಲು ಬೆಳೆದ ಧಾನ್ಯಗಳನ್ನು ಭೂಮಿತಾಯಿಗೆ ಅರ್ಪಿಸಲಾಗುತ್ತದೆ. ಪ್ರತಿ ವರ್ಷ ಭೂಮಿತಾಯಿ ಅನ್ನ ಕೊಡುತ್ತಾಳೆಂಬ ನಂಬಿಕೆ ಅವರಲ್ಲಿದೆ. ಈ ಆಚರಣೆ ಕಾಡುಗೊಲ್ಲರು ಪಶುಪಾಲನೆಯೊಂದಿಗೆ ಕೃಷಿ ಅವಲಂಭಿಸಿರುವುದನ್ನು ಸೂಚಿಸುತ್ತದೆ. ಕೃಷಿ ಅವಲಂಬಿಸಿದ ನಂತರ ಒಂದು ಕಡೆ ನೆಲೆ ನಿಲ್ಲುವುದನ್ನು ರೂಢಿಸಿಕೊಂಡರು, ಕಾಡುಗೊಲ್ಲರು ಕೃಷಿಯನ್ನು ಮಾತೃ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಆರಾಧನೆ ಮಾಡುತ್ತಾರೆ. ಕಾಳಹಬ್ಬದ ಎರಡನೆಯ ದಿನ ಎಲ್ಲ ಒಕ್ಕಲುಗಳಿಂದ ಹಬ್ಬದ ಖರ್ಚಿನ ಹಣವನ್ನು ವಸೂಲಿ ಮಾಡುತ್ತಾರೆ. ಬಹಳ ಒಕ್ಕಲುಗಳಿರುವ ಕಾರಣ ಪ್ರತಿ ಮನೆಯವರು ೧೦೦ ರೂಪಾಯಿ ಮತ್ತು ಐದು ಸೇರು ಅಕ್ಕಿ ಕೊಡಬೇಕು. ಗೌಡರು ದೇವರ ಹಬ್ಬಕ್ಕೆ ಬಂದ ನೆಂಟರಿರಬಹುದು. ಅಣ್ಣ-ತಮ್ಮಂದಿರಬಹುದು. ಆದರೆ ಕಲೆಯದವರನ್ನು ದೇವರ ಕೆಲಸದಲ್ಲಿ ಸೇರಿಸಿಕೊಳ್ಳುವುದಿಲ್ಲ. ಮಾಸಿಕ ಋತುಸ್ರಾವವಾದ ಸ್ತ್ರಿ ಹೆಣ್ಣು ಮಕ್ಕಳಿಂದ ದೇವರಿಗೆ ಮೈಲಿಗೆ ಆಗುತ್ತದೆಂಬ ಕಾರಣಕ್ಕೆ ದೇವರ ಕೆಲಸ ಕಾರ್ಯಗಳಿಗೆ

ಅವರನ್ನು ಬಳಸಿಕೊಳ್ಳುವುದಿಲ್ಲ. ಕೆಲವು ಕಡೆ ಮುಟ್ಟಾಗದ ಸ್ತ್ರೀಯರನ್ನು ಬಳಸಿಕೊಳ್ಳುತ್ತಾರೆ. ಎಲ್ಲರು ಕೊಟ್ಟಿರುವ ಅಕ್ಕಿಯನ್ನು ಸ್ವಚ್ಚ ಮಾಡುವ ಕೆಲಸ ಮಾತ್ರ ಸ್ತ್ರೀಯರದ್ದು. ದೇವರ ಹರಿಸೇವೆ ಮಾಡುವುದು ಕೂಡ ಪುರುಷರೆ. ತಮ್ಮ ಸಮುದಾಯದಲ್ಲಿನ ಅಡುಗೆಯಲ್ಲಿ ಅನುಭವವಿರುವವರು ಅಚ್ಚುಕಟ್ಟಾಗಿ ಅಡುಗೆ ಮಾಡುತ್ತಾರೆ. ಸಾಮಾನ್ಯವಾಗಿ ಇವರು ಪಾಯಸ, ತರಕಾರಿಗಳ ಪಲ್ಯೆ, ಅನ್ನ, ಸಾರು ಮಾಡಿ ದೇವರಿಗೆ ಬಂದಿರುವ ಎಲ್ಲ ಭಕ್ತರಿಗೆ ಊಟಕ್ಕೆ ಹಾಕುತ್ತಾರೆ. ಕಲೆಯದವರು ಹರಿಸೇವೆಯ ಊಟ ಮಾಡುವಂತಿಲ್ಲ. ಎಲ್ಲರು ಊಟಮಾಡಿದ ನಂತರ ಕಾಟಮಲಿಂಗನನ್ನು ಹೊರತು ಪಡಿಸಿ ಉಳಿದೆಲ್ಲ ದೇವರುಗಳನ್ನು ಹೊತ್ತುಕೊಂಡು ಕುಣಿಯುತ್ತಾರೆ. ಆನಂತರ ದೇವರನ್ನು ದೇವಸ್ಥಾನದ ಒಳಗೆ ಸೇರಿಸುತ್ತಾರೆ.

೪.೧.೧೬. ಪ್ರಮುಖ ಎಡೆಗೆ ಮೀಸಲು ಹಾಲು ಕರೆಯುವುದು

ದೇವರು ಆರಾಧನೆ ಪ್ರಾರಂಭವಾಗುವುದಕ್ಕಿಂತ ಒಂದು ವಾರ ಮೊದಲೇ ಮೀಸಲಿಗಾಗಿ ಬಿಟ್ಟಿರುವ ಹಸುಗಳ ಹಾಲನ್ನು ಯಾರು ಕರೆಯುವಂತಿಲ್ಲ. ಅವುಗಳಿಗೆ ವಾರದ ಹಸುಗಳೆಂದು ಕರೆದು ದೇವರಿಗೆ ಬಿಟ್ಟಿರುತ್ತಾರೆ. ಯಾವಾಗ ದೇವರು ಮಾಡುವ ಬಗ್ಗೆ ತಿಳಿಸುತ್ತಾರೋ ಆನಂತರ ಮೀಸಲು ಬಿಟ್ಟಿರುವ ಹಸುವಿನ ಕೆಚ್ಚಲಿಗೆ ಒರತೆ ನೀರನ್ನು ಚಿಮುಕಿಸಿ, ಪೂಜಾರಿಯ ಮನೆತನದವರು ಹಾಲು ಕರೆದುಕೊಂಡು ಹೋಗುತ್ತಾರೆ. ಹಾಲನ್ನು ಚೆನ್ನಾಗಿ ಕಾಯಿಸಿ ಹೆಪ್ಪು ಹಾಕುತ್ತಾರೆ. ನಂತರ ದೊಡ್ಡ ಎಡೆಯ ದಿನ ಆ ಮೊಸರು ಕಡೆದು ಮಜ್ಜಿಗೆ ಮಾಡುತ್ತಾರೆ. ಅದರಲ್ಲಿ ಬಂದಿರುವ ಬೆಣ್ಣೆಯಿಂದ ತುಪ್ಪ ಮಾಡಿ ದೇವರಿಗೆ ದೀಪ ಹಚ್ಚಲು ಬಳಸುತ್ತಾರೆ. ಮಜ್ಜಿಗೆಗೆ ಬೆಲ್ಲ, ಬಾಳೆಹಣ್ಣು ಸೇರಿಸಿ ಪ್ರಸಾದ ಮಾಡುತ್ತಾರೆ. ನೂರಾವೊಂದು ಎಡೆ ಮಾಡಿ ದೇವರಿಗೆ ಅರ್ಪಿಸಿ, ಆನಂತರ ಸ್ತ್ರೀಯರನ್ನು ಹೊರತುಪಡಿಸಿ, ಉಳಿದ ಎಲ್ಲ ಭಕ್ತರು ಊಟ ಮಾಡುತ್ತಾರೆ. ಸೋಮನಗೊಲ್ಲರಿಗೆ ಕೇತೆಲಿಂಗ ಅಮವಾಸ್ಯೆ ದೇವರು ಮತ್ತು ಅವರ ಮೂಲ ಪುರುಷ. ಅವನ ಹೆಸರಿನಲ್ಲಿ ಸತ್ತ ವ್ಯಕ್ತಿಗೆ ಅಮವಾಸ್ಯೆ ಪೂಜೆ ಮಾಡಿಸುತ್ತಾರೆ. ಎಗಡೆಗೊಲ್ಲರಿಗೆ ಬೊಮ್ಮಲಿಂಗ ಮೂಲ ವ್ಯಕ್ತಿ. ಅವನ ಹೆಸರಿನಲ್ಲಿ ಅವರ ಹಿರಿಯರಿಗೆ ಅಮಾವಾಸ್ಯೆ ಪೂಜೆ ಮಾಡಿಸಿಕೊಳ್ಳಬೇಕು. ಎಗಡೆಗೊಲ್ಲರ ಬೆಡಗು ಸೃಷ್ಟಿಯಾದುದರ ಬಗ್ಗೆ ಹೀಗಾಗಲೆ ಸಾಕಷ್ಟು ಹಿಂದಿನ ಅಧ್ಯಾಯದಲ್ಲಿ ಚೆರ್ಚಿಸಿರುವ ಕಾರಣ, ಇಲ್ಲಿ ಅದರ ಅವಶ್ಯಕತೆ ಇಲ್ಲ. ಎಗಡೆಗೊಲ್ಲರ ಬೆಡಗು ಬ್ರಾಹ್ಮಣರಿಂದ ಸೃಷ್ಟಿಯಾದ ಕಾರಣ ಮತ್ತು ಬ್ರಾಹ್ಮಣನನ್ನು ಕಾಡುಗೊಲ್ಲರಾಗಿ ವರ್ಣಸಂಕರ ಮಾಡಿದ ಕಾರಣದಿಂದ ಇವರಲ್ಲಿಯೂ ಕರಿ ಮಾಡುವ ಪದ್ಧತಿ ಜಾರಿಯಲ್ಲಿದೆ. ಏಕೆಂದರೆ ಬ್ರಾಹ್ಮಣ ಗೊಲ್ಲರಾಗಿ ವರ್ಣ ಸಂಕರ ಹೊಂದಿದ ಕಾಲದಲ್ಲಿ ಕಾಟಯ್ಯ ಉಪಾಯ ಮಾಡಿ ಕೆಂದ ಕುರಿಯ ಮಾಂಸವನ್ನು ಬಮ್ಮಯ್ಯನಿಗೆ ತಿನಿಸಿದ ಕಾರಣ, ಎಗಡೆಗೊಲ್ಲರಲ್ಲಿ ಕರಿಮಾಡುವ ಪದ್ಧತಿ ರೂಢಿಯಲ್ಲಿದೆ. ಅಂದರೆ ಸತ್ತ ವ್ಯಕ್ತಿಯ ಮೂರನೆಯ ದಿವಸದ ಆಚರಣೆಯನ್ನು ಮಾಡುವಂತ ಸಂದರ್ಭದಲ್ಲಿ ಮೊದಲು ಸಿಹಿ ಅಡುಗೆಯ ಊಟ ಮಾಡಿ, ಆನಂತರ ರಾತ್ರಿ ಯಾರಿಗೂ ಗೊತ್ತಾಗದಂತೆ ಕುರಿಯನ್ನು ಕೊಯ್ದು ಬೇಯಿಸಿ ತಿನ್ನುತ್ತಾರೆ. ಅದು ಆ ಬಡಗಿನವರಿಗೆ ಬಿಟ್ಟರೆ ಯಾರಿಗೂ ಗೊತ್ತಾಗುವುದಿಲ್ಲ.

ಇವರಿಗೆ ಕುಲ ಕೊಟ್ಟ ಕಾರಣಕ್ಕೆ ಬೊಮ್ಮಯ್ಯನ ನೆನಪಿಗಾಗಿ ಈ ಆಚರಣೆಯನ್ನು ಎಗಡೆಗೊಲ್ಲರು ಇನ್ನೂ ಉಳಿಸಿಕೊಂಡು ಬಂದಿದ್ದಾರೆ.

ಎಗಡೆಗೊಲ್ಲರಿಗೆ ತೊಗರಿ ನಿಷೇಧಿತ ಧಾನ್ಯವಾಗಿದೆ. ಇವರು ತೊಗರಿ ಬೇಳೆಯನ್ನು ಬೆಳೆಯುವಂತಿಲ್ಲ ಮತ್ತು ತಿನ್ನುವಂತಿಲ್ಲ. ಕಾರಣ ಕೇಳಿದರೆ ಅವರ ಸಮುದಾಯದ ನಾಯಕ ಹೊಲವನ್ನು ಉಳುಮೆ ಮಾಡುವಂತಹ ಸಮಯದಲ್ಲಿ ತೊಗರಿಯ ಕುಳೆ ಅವನ ಕಾಲಿನಲ್ಲಿ ನೆಟ್ಟು ಗಾಯವಾಯಿತು. ಆ ಕಾರಣದಿಂದ ಆತ ತನ್ನ ಸಮುದಾಯದವರಿಗೆ ತೊಗರಿ ಪ್ರಾಣಕ್ಕೆ ಕುತ್ತು ತರುತ್ತದೆ ಹಾಗಾಗಿ ತೊಗರಿಯನ್ನು ತಿನ್ನಬೇಡಿರಿ ಎಂದು ಹೇಳಿದ ಕಾರಣದಿಂದ ನಾವು ತೊಗರಿಯನ್ನು ನಿಷೇದಿಸಿರುವುದಾಗಿ ಹೇಳಿದರೆ, ಇನ್ನೊಂದು ಅಭಿಪ್ರಾಯದ ಪ್ರಕಾರ ಅವರ ದೇವರು ತೊಗರಿ ಬೇಳೆಸಾರು ಊಟ ಮಾಡಿ ಆರೋಗ್ಯ ಕೆಡಿಸಿಕೊಂಡ ಹಿನ್ನೆಲೆಯಲ್ಲಿ, ಅದು ತನ್ನ ಒಕ್ಕಲುಗಳಿಗೆ ಈ ರೀತಿ ಹೇಳಿತಂತೆ. 'ತೊಗರಿ ಒಂದನ್ನು ಬಿಟ್ಟು ಬೇರೆ ಯಾವ ಧಾನ್ಯ ತಿಂದರೂ ಸಹಿಸಿಕೊಳ್ಳುತ್ತೇನೆ', ಹೀಗಾಗಿ ಅವರು ಒಲೆಯ ಮೇಲೆ ಇಂದೂ ತೊಗರಿ ಬೇಳೆಯನ್ನು ಬೇಯಿಸುವುದಿಲ್ಲ. ಮತ್ತೊಂದು ಅಭಿಪ್ರಾಯದ ಪ್ರಕಾರ ಎಗಡೆಗೊಲ್ಲರ ಸಾಂಸ್ಕೃತಿಕ ನಾಯಕ ವೀರಚಿಕ್ಕಣ್ಣ ದನಕಾಯುವ ಕೆಲಸ ಮಾಡುತ್ತಿರುತ್ತಾನೆ. ಅವನಿಗೆ ಒಂದು ದಿನ ಅವನ ತಾಯಿಯು ತೊಗರಿ ಕಾಳು ಸಾರು ಮತ್ತು ರಾಗಿಮುದ್ದೆ ಊಟಕ್ಕೆ ನೀಡಿದಂತಹ ಸಮಯದಲ್ಲಿ ಅವನಿಗೆ ಅದರಲ್ಲಿ ಹುಳು ದೊರೆಯುತ್ತದೆ. ಅದನ್ನು ನೋಡಿದವನೆ ತನ್ನ ಸಮುದಾಯದವರಿಗೆ ತೊಗರಿ ಕಾಳಿನ ಬಳಕೆಯನ್ನು ನಿಷೇಧಿಸುತ್ತಾನೆ. ಈ ಬೆಡಗಿನವರು ಯುಗಾದಿ ಹಬ್ಬದಲ್ಲಿ ಹೋಳಿಗೆ ಮಾಡಲು ತೊಗರಿಯನ್ನು ಬಳಸದೆ ಕಡಲೆ ಬೇಳೆ ಬಳಸಿ ಹೋಳಿಗೆ ಮಾಡುತ್ತಾರೆ. ಒಂದು ವೇಳೆ ಊಟ ಮಾಡುವಂತಹ ಅನಿವಾರ್ಯವಿದ್ದರೆ ಮನೆಯ ಹೊರಗೆ ಒಲೆ ಹೂಡಿ ಅಡುಗೆ ಮಾಡಿಕೊಂಡು ಉಂಡು, ಕೈ ತೊಳೆದುಕೊಂಡು ಮನೆಯ ಒಳಗೆ ಹೋಗುತ್ತಾರೆ. ಇವರು ಸೋಮವಾರ ಯಾವುದೇ ಕಾರಣಕ್ಕೂ ಬೇಳೆಯ ಸಾರು ಮಾಡುವುದಿಲ್ಲ. ಅದಲ್ಲದೆ ಆ ದಿನ ತಾವು ಸಾಕಿರುವ ಹಸು, ಇಲ್ಲವೆ ಎಮ್ಮೆ ಮುಂತಾದ ಸಾಕು ಪ್ರಾಣಿಗಳ ಹಾಲು ಕರೆದುಕೊಳ್ಳದೆ ಕರುಗಳಿಗೆ ಕುಡಿಯಲು ಬಿಡುತ್ತಾರೆ. ಏಕೆಂದರೆ ವಾರ ಪೂರ್ತಿ ಹಾಲು ಕರೆದು ಕುಡಿದ ಇವರು, ಒಂದು ದಿನವಾದರೂ ಕರುಗಳು ಸಂತೋಷವಾಗಿ ಹಾಲು ಕುಡಿಯಲಿ ಎಂಬ ಮನಸ್ಥಿತಿ ಅವರಲ್ಲಿದೆ. ಒಂದು ವೇಳೆ ಮರೆತು ಹಾಲು ಕರೆದುಕೊಂಡರೆ. ಆ ಹಾಲನ್ನು ಬಳಸದೆ ದೇವರ ಕಳ್ಳಿಯಲ್ಲಿ ಹೊಯ್ಯುತ್ತಾರೆ. ಅಂದರೆ ಕಾಡುಗೊಲ್ಲರಲ್ಲಿ ಪ್ರತಿಯೊಂದು ಬೆಡಗಿಗು ಇಂತಹದೊಂದು ಯಾವುದಾದರೂ ವಿಶೇಷತೆ ಇರುವುದು ಕಂಡು ಬರುವುದರಿಂದ ಅವರ ಸಂಸ್ಕೃತಿ ವಿಶಿಷ್ಟತೆಯಿಂದ ಕೂಡಿದ್ದು. ಎಂದು ಹೇಳಬಹುದು.

೪.೧.೧೭. ಹಿರಿಯರಹಬ್ಬ ಅಥವಾ ಕರು ಉಂಡಹಬ್ಬ

ಈ ಹಬ್ಬವನ್ನು ಎಗಡೆಗೊಲ್ಲರು ಮಾತ್ರ ಮಾಡುತ್ತಾರೆ. ಇದು ಕಾಡುಗೊಲ್ಲರ ಪಶುಪಾಲನ ವೃತ್ತಿಯನ್ನು ತಿಳಿಸುವುದರ ಜೊತೆಗೆ ಅವರ ಅನನ್ಯತೆಯನ್ನು ಹೇಳುತ್ತದೆ. ಈ ಹಬ್ಬವನ್ನು ಅಕ್ಟೋಬರ್ ತಿಂಗಳಲ್ಲಿ ಮಾಡುತ್ತಾರೆ. ಅವರಿಗೆ ಇದು ಹಿರಿಯರ ಹಬ್ಬವಿದ್ದಂತೆ. ಈ ಹಬ್ಬದಲ್ಲಿ ಪ್ರತಿಯೊಬ್ಬರಿಗೂ

ಹೊಸಬಟ್ಟೆಯನ್ನು ತಂದು ಅದನ್ನು ಹಿರಿಯರಿಗೆ ಏರಿಸಿ ಆ ನಂತರ ಉಟ್ಟುಕೊಳ್ಳುತ್ತಾರೆ. ಈ ಹಬ್ಬದಲ್ಲಿ ಗೋಧಿ ಕುಟ್ಟಿ ಹುಗ್ಗಿ ಮಾಡುತ್ತಾರೆ.

೪.೨. ಚಿತ್ರಲಿಂಗ

"ಕಾಡುಗೊಲ್ಲರ ಅದರಲ್ಲು ಚಿತ್ತಮುತ್ತಿ ವಂಶಸ್ಥರ ಮೂಲದೇವರು ಚಿತ್ರಲಿಂಗ. ಕಾಡುಗೊಲ್ಲರ ಪಂಚಲಿಂಗಗಳಲ್ಲಿ ಇದು ಎರಡನೆಯದು. ಚಿತ್ತಮುತ್ತಿ ವಂಶದಲ್ಲಿ ಪ್ರಮುಖವಾಗಿ ಕಂಡುಬರುವ ಉಪಬೆಡಗುಗಳೆಂದರೆ ಚಿತ್ತಗೊಲ್ಲರು, ಮಾರಗೊಲ್ಲರು, ಬಾಲ್ಯಾರಗೊಲ್ಲರು. ಅಬಾಲೆಗೊಲ್ಲರು, ಕಂಚಿಗೊಲ್ಲರು ಕೆಂಗುರಿಗೊಲ್ಲರು ಮುಂತಾದವರು.

ಚಿತ್ತಯ್ಯ ಎಂಬ ಸಾಂಸ್ಕೃತಿಕ ವೀರನು ಕಾಡುಗೊಲ್ಲರ ಸಮುದಾಯದ ದೇವರಾಗಿ ಪೂಜಿಸಲ್ಪಡುತ್ತಾನೆ. ಚಿತ್ತಯ್ಯ ಎಂಬ ಈ ಐತಿಹಾಸಿಕ ವ್ಯಕ್ತಿಯನ್ನು ಚಿತ್ರದೇವರು ಎಂಬ ಹೆಸರಿನಿಂದ ಪೂಜಿಸುತ್ತಾರೆ. ಈ ಚಿತ್ರ ದೇವರ ಮೂಲನೆಲೆ ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿಯಲ್ಲಿದೆ. ಸಾಮಾನ್ಯವಾಗಿ ಕಾಡುಗೊಲ್ಲರಲ್ಲಿ ತಾಳಿ ಕಟ್ಟುವ ಗೊಲ್ಲರು ತಾಳಿ ಕಟ್ಟದಗೊಲ್ಲರು ಎಂಬ ವಿಭಾಗಗಳಿದ್ದು, ತಾಳಿಕಟ್ಟುವ ಗೊಲ್ಲರು ನಂದಿಹಳ್ಳಿ ಗುಡಿಕಟ್ಟಿಗೆ ಸೇರಿದವರಾಗಿದ್ದು ಇವರು ಹಿರಿಯೂರು ತಾಲ್ಲೂಕಿನಲ್ಲಿಯ ಚಿತ್ರದೇವರನ್ನು ತಮ್ಮ ಮನೆ ದೇವರಾಗಿ ಪೂಜಿಸುತ್ತಿದ್ದಾರೆ. ಅಲ್ಲದೆ ಹಿರಿಯೂರು ತಾಲ್ಲೂಕಿನ ವೇಣುಕಲ್ ಗುಡ್ಡ, ಶಿರಾ ತಾಲೂಕಿನ ಕಳೂರಳ್ಳಿ ಹತ್ತಿಕರೆಕಲ್ಲು ಇನ್ನೂ ಮುಂತಾದ ಹಟ್ಟಿಗಳಲ್ಲಿ ಚಿತ್ತಯ್ಯ ಎಂಬ ಹೆಸರಿನ ಚಿತ್ರದೇವರನ್ನು ಕಾಣಬಹುದು. ಸಾಮಾನ್ಯವಾಗಿ ಚಿತ್ರದೇವರ ಕತೆಯು ಬುಡಕಟ್ಟಿನಲ್ಲರುವ ಜಗತ್ತಿನ ಉಗಮದ ಕಥೆಯನ್ನು ಹೇಳುತ್ತದೆ" *(ಗುರುಲಿಂಗಯ್ಯ, ವಿ ನಾಗಪ್ಪ, 'ಕಾಡುಗೊಲ್ಲ' ಪುಟ ೮೪-೮೫. ೨೦೦೮)*

ಗುರುಲಿಂಗಯ್ಯನವರ ಮಾತುಗಳನ್ನು ಗಮನಿಸುವುದಾದರೆ ಕರಡಿಗೊಲ್ಲರ ಎರಡು ಉಪ ಬೆಡಗುಗಳಾದ, ತಾಳಿ ಕಟ್ಟದವರು ಮತ್ತು ತಾಳಿ ಕಟ್ಟುವವರು. ಮೂಲಭೂತವಾಗಿ ಚಿತ್ರದೇವರನ್ನೇ ಪೂಜಿಸಿದರೂ, ಇವರು ಗುಡಿಕಟ್ಟುಗಳು ಬೇರೆ ಬೇರೆಯಾಗಿವೆ. ಗುರುಲಿಂಗಯ್ಯ ಗುರುತಿಸಿದಂತೆ ಚಿತ್ರದೇವರ ಮೂಲನೆಲೆ ಚಿತ್ರಹಳ್ಳಿ ಅಲ್ಲ ನಂದಿಹಳ್ಳಿ ಎಂದು ಹೇಳಬಹುದು. ಏಕೆಂದರೆ ನಂದಿಹಳ್ಳಿಯ ಬಳಿಯ ಹಿರಿಲಿಂಗ ಎಂದು ಹೇಳಬಹುದು. ಇಲ್ಲಿ ಉದ್ಭವಲಿಂಗವಿರುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಏಳು ಗುಡಿಕಟ್ಟುಗಳ ಅಣ್ಣ-ತಮ್ಮಂದಿರು ಸೇರಿ ಏಳು ಕಂಬಿಗೆ ಹಾಲು ಹಾಕಿರುವ ಬಗ್ಗೆ ಕುರುಹುಗಳಿವೆ. ನಂದಿಹಳ್ಳಿ ರಂಗಪ್ಪನ ಪ್ರಭಾವದಿಂದ ಚಿತ್ರದೇವರ ಹಿರಿಲಿಂಗ ಮೂಲೆ ಗುಂಪಾಗಿದೆ. ವೈಷ್ಣವ ಪರಂಪರೆಗೆ ಒಳಗಾದ ತಾಳಿ ಕಟ್ಟದ ಗೊಲ್ಲರು ತಮ್ಮ ಎಲ್ಲಾ ಗುಡಿಕಟ್ಟುಗಳಲ್ಲಿಯೂ ರಂಗಪ್ಪನನ್ನು ಇಟ್ಟುಕೊಂಡಿರುವುದು ವಾಸ್ತವವಾಗಿ ಕಂಡುಬರುತ್ತದೆ. ತಾಳಿ ಕಟ್ಟುವ ಗೊಲ್ಲರ ಗುಡಿಕಟ್ಟು ಬೇವಿನಹಳ್ಳಿಯಲ್ಲಿದೆ. ಇವರು ಹೆಚ್ಚಾಗಿ ವೈಷ್ಣವ ಪ್ರಭಾವಕ್ಕೆ ಒಳಗಾಗಿರುವುದು ಕಂಡುಬಂದಿಲ್ಲ.

ಹಿಂದೆ ಒಂದು ಇದ್ದ ಬೆಡಗು ಎರಡು ಆಗಲಿಕ್ಕೆ ಕಾಡುಗೊಲ್ಲರು ತಮ್ಮದೇ ಆದ ಕತೆಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಕರಡಿ ಬುಳ್ಳಪ್ಪನ ತಾತ ಚಿತ್ತಮುತ್ತಿ. ಈತನ ಮಗ ಮೇಕೆಮಾರಗೊಂಡ.

ಈತನಿಗೆ ಚಂದಮುತ್ತಿ ಮಗಳಾಥ ಮಂಚಿಕಾಟಮ್ಮನನ್ನು ಕೊಡಬೇಕೆಂದು ಮಾತಾಗಿರುತ್ತದೆ. ಆಗ ಮಂಚಿಕಾಟಮ್ಮ ಹಾಲು, ಮೊಸರು ಮಾರುವ ಕಾಯಕ ಮಾಡುತ್ತಿರುತ್ತಾಳೆ. ಅವಳು ಪ್ರತಿ ದಿನ ಹರ್ತಿಕೋಟೆಗೆ ಹೋಗಿ ಹಾಲು ಮೊಸರು ಮಾರುವುದು ಮತ್ತು ಸೂರ್ಯ ಮುಳುಗುವುದರೊಳಗೆ ಹಟ್ಟಿ ಸೇರಬೇಕಿತ್ತು. ಏಕೆಂದರೆ ಕಾಡುಗೊಲ್ಲರ ಹೆಣ್ಣು ಮಕ್ಕಳು ಯಾವುದೇ ಕಾರಣಕ್ಕೂ ಹಟ್ಟಿಯಿಂದ ಹೊರಗಿದ್ದರೆ ಪುನಃ ಆಕೆಯನ್ನು ಹಟ್ಟಿಯ ಒಳಗೆ ಸೇರಿಸುತ್ತಿರಲಿಲ್ಲ. ಹೀಗಾಗಿ ಅವಳು ಬೇಗ ಹಟ್ಟಿ ಸೇರಿಕೊಳ್ಳುತ್ತಿದ್ದಳು. ಇವಳ ಮೇಲೆ ಮರಡಿ ಗುಡ್ಡದಲ್ಲಿ ವಾಸವಾಗಿರುವ ಕರಡಿ ಮನಸು ಮಾಡಿರುತ್ತದೆ. ಇದರಿಂದ ಅದು ಪ್ರತಿನಿತ್ಯ ಅವಳನ್ನು ಕಾಯುತ್ತಿರುತ್ತದೆ. ಒಂದು ದಿನ ಮಂಚಿಕಾಟಮ್ಮ ಪೇಟೆಗೆ ಹಾಲು ಮೊಸರು ಮಾರಿ, ಡೊಂಬರಾಟ ನೋಡುತ್ತಾ ನಿಂತಿರುತ್ತಾಳೆ. ಅವಳು ಆಟದಲ್ಲಿ ಲೀನವಾಗಿ ಹೊತ್ತು ಮುಳುಗಿದ್ದುದು ಗೊತ್ತಾಗುವುದಿಲ್ಲ. ಆಗ ಆಕೆ ಹೊತ್ತು ಮುಳುಗಿದ್ದುದನ್ನು ನೋಡಿ, ಗಾಬರಿಯಾಗಿ ತನ್ನ ಹಟ್ಟಿಯ ಕಡೆ ಪಯಣ ಬೆಳೆಸುವಳು. ಮರಡಿಗುಡ್ಡದ ಹತ್ತಿರ ಬರುವಾಗ ಕತ್ತಲೆಯಾಗುತ್ತದೆ. ಕರಡಿ ಅಲ್ಲಿ ಕಾಯುತ್ತಾ ಕುಳಿತಿತ್ತು. ಆ ಸಮಯಕ್ಕೆ ಸರಿಯಾಗಿ ಕಾಟಮ್ಮ ಕರಡಿ ತೋಡಿರುವ ಗುಂಡಿಯಲ್ಲಿ ಬೀಳುವಳು. ಆಗ ಅವಳು ಯಾರಾದರೂ ಕಾಪಾಡುವಂತೆ ಬೇಡಿಕೊಂಡಳು. ಕರಡಿಯು ಉಗಣೆಬಳ್ಳಿಯ ಸಹಾಯದಿಂದ ಆಕೆಯನ್ನು ಮೇಲಕ್ಕೆ ಎಳೆದುಕೊಂಡು ಮರಡಿಗುಡ್ಡದ ಗವಿಯಲ್ಲಿ ಇಟ್ಟುಕೊಂಡಿತು. ಇದರಿಂದಾಗಿ ಮೇಕೆಮಾರಗೊಂಡನಿಗೆ ಇದ್ದ ಒಂದು ಹೆಣ್ಣು ಕೈ ಬಿಟ್ಟು ಹೋದುದರ ಬಗ್ಗೆ ದುಃಖ ಪಡುತ್ತಾನೆ. ನಂತರ ಮೇಕೆಮಾರಗೊಂಡ ಮೇಕೆ ಕಾಯಲು ಮರಡಿಗುಡ್ಡಕ್ಕೆ ಹೋಗುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಕರಡಿಯು ತನಗೆ ಬಂದಿರುವ ತೊನ್ನು ರೋಗವನ್ನು ವಾಸಿಮಾಡಿಕೊಳ್ಳಲು ಮಲಸೀಮೆಗೆ ಹೋಗಿಬರುವುದಾಗಿ ಹೇಳಿ ಹೋಗುತ್ತದೆ. ಕರಡಿಗೆ ಮದುವೆಯಾಗಿ ಮೂರು ಮರಿಗಳಿರುತ್ತವೆ. ಹೆಣ್ಣು ಕರಡಿ ಸತ್ತು ಹೋಗಿರುತ್ತದೆ. ಆಗ ಆ ಮೂರು ಮರಿಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಕಾಟಮ್ಮನಿಗೆ ಒಹಿಸಿ ಬೇಗ ಬರುವುದಾಗಿ ಬರುವಾಗ ಜೇನುತುಪ್ಪ, ಹಲಸಿನಹಣ್ಣು, ಮಾವಿನಹಣ್ಣು ತರುವುದಾಗಿ ಹೇಳಿ ನಂತರ ತಾನು ಬರುವುದರೊಳಗಾಗಿ ಬೆಲ್ಲದ ಪಾನಕಮಾಡಿ ಸಜ್ಜೆಯ ದೋಸೆ ಮಾಡುವಂತೆ ಹೇಳಿ ಹೋಗುತ್ತದೆ. ಕರಡಿ ಮಲೆನಾಡಿಗೆ ಹೋದ ಸಮಯದಲ್ಲಿ ಮೇಕೆ ಮಾರಗೊಂಡ ಮೇಕೆ ಕಾಯಲು ಮರಡಿಗುಡ್ಡಕ್ಕೆ ಬಂದಿರುತ್ತಾನೆ. ಮೇಕೆ ಕಾಯುವಾಗ ಬೇಜಾರ ಕಳೆಯಲು ಪುಳುಗಾಯಿ ಊದುತ್ತಿರುವಾಗ, ಆ ಧ್ವನಿಯು ಮಂಚಿ ಕಾಟಮ್ಮಗೆ ಕೇಳುತ್ತದೆ. ಈ ರೀತಿಯ ಪುಳುಗಾಯಿ ಊದುವುದು ನನ್ನ ಮಾವ ಬಿಟ್ಟರೆ ಬೇರೆ ಯಾರೂ ಇಲ್ಲ ಎಂದು ತಿಳಿದು ಗುಹೆಯ ಬಳಿ ಮೇಯುತ್ತಿರುವ ಮೇಕೆ ಮರಿಯ ಕಿವಿ ಹಿಡಿದು ಜಗ್ಗುವಳು. ಜಗ್ಗಿದ ರಭಸಕ್ಕೆ ಅದು ಜೋರಾಗಿ ಕೂಗಿಕೊಂಡಿತು. ಅದನ್ನು ಗಮನಿಸಿದ ಮೇಕೆ ಮಾರಗೊಂಡ ಗವಿಯ ಹತ್ತಿರ ಬಂದು ನೋಡಿದ. ಹೆಣ್ಣಿನ ಕೈ ಕಾಣುತ್ತದೆ. ಆ ಕೈಯನ್ನು ಗುರುತಿಸಿ ಇದು ಕಾಟಮ್ಮನ ಕೈ ಎಂದು ತಿಳಿದು ಗವಿಗೆ ಅಡ್ಡವಾಗಿರುವ ಗುಂಡನ್ನು ಸರಿಸಿ ಕಾಟಮ್ಮಳಿಗೆ ಹೊರ ಬರಲು ಹೇಳುತ್ತಾನೆ. ಆದರೆ ಕಾಟಮ್ಮ ತಾನು ಹುಟ್ಟು ರೂಪದಲ್ಲಿರುವುದಾಗಿ ಹೇಳಿದಾಗ. ಆಗ ಮೇಕೆ ಮಾರಗೊಂಡ ತನ್ನ ತಲೆಗೆ ಸುತ್ತಿರುವ ಏಳು ಮಾರುದ್ದದ ರುಮಾಲು ಕೊಡುತ್ತಾನೆ. ನಂತರ ತಾನು ಗುಹೆಯ ಒಳಗೆ ಹೋಗುತ್ತಾನೆ.

ಕರಡಿಯ ಮರಿಗಳನ್ನು ಸಾಯಿಸಿ ಅವುಗಳ ರಕ್ತ ಕಾದ ಹಂಚಿನ ಮೇಲೆ ಬೀಳುವಂತೆ ಮಾಡುತ್ತಾನೆ. ಕಾಟಮ್ಮನನ್ನು ಕರೆದುಕೊಂಡು ತನ್ನ ಹಟ್ಟಿಗೆ ಬರುತ್ತಾನೆ. ಕರಡಿಯು ಜೇನುತುಪ್ಪ, ಹಲಸಿನಹಣ್ಣು, ಮಾವಿನಹಣ್ಣು ಎಲ್ಲವನ್ನು ಹೊತ್ತುಕೊಂಡು ನಮ್ಮ ಕಾಟಿ ದೋಸೆ ಹೊಯ್ತಾಳೆ ನಮ್ಮ ಕಾಟಿ ದೋಸೆ ಹೊಯ್ಯತಾಳೆ ಎಂದು ಸಂತೋಷದಿಂದ ಪದಗಳನ್ನು ಹೇಳಿಕೊಂಡು ಬರುತ್ತದೆ. ಗವಿಯ ಒಳಗೆ ಬಂದು ನೋಡಿದಾಗ ಕಾಟಮ್ಮ ಇರುವುದಿಲ್ಲ. ಮತ್ತು ತನ್ನ ಮೂರು ಮರಿಗಳನ್ನು ಕೊಂದಿರುವುದರಿಂದ ಕೋಪವನ್ನು ಸಹಿಸಿಕೊಳ್ಳದೆ, ಮರಡಿಗುಡ್ಡದಲ್ಲಿ ವಾಸವಾಗಿರುವ ಎಲ್ಲ ಕರಡಿಗಳನ್ನು ಕರೆದುಕೊಂಡು ಗೊಲ್ಲರಹಟ್ಟಿಯ ಮೇಲೆ ದಾಳಿ ಮಾಡುತ್ತದೆ. ಆಗ ಮೇಲೆಮಾರಗೊಂಡ ಎಲ್ಲ ಕರಡಿಗಳಿಗೆ ಬೆಂಕಿಹಚ್ಚಿ ಹೆದುರಿಸಿ ಕಳುಹಿಸುತ್ತಾನೆ ಆದರೆ ಕಾಟಮ್ಮನನ್ನು ಇಷ್ಟ ಪಟ್ಟಿದ್ದ ಕರಡಿ ಮಾತ್ರ ಅಲ್ಲಿಂದ ಕದಲುವುದಿಲ್ಲ. ಹಟ್ಟಿಯ ಯಜಮಾನರನ್ನು ಪಂಚಾಯತಿಗೆ ಕರೆಯಿಸಿ ನ್ಯಾಯ ದೊರಕಿಸಿಕೊಡುವಂತೆ ಕೇಳುತ್ತದೆ. ಆಗ ಮೇಕೆ ಮಾರಗೊಂಡ ಇದು ಮಾತಿಗೆ ಬಗ್ಗುವ ಕರಡಿಯಲ್ಲ. ಹಾಗಾಗಿ ಇದನ್ನು ಕೊಲ್ಲುವುದೇ ಮೇಲು ಎಂದು ತಿಳಿದು ಕರಡಿಯನ್ನು ಕೊಂದನು. ನಂತರ ಮಂಚಿಕಾಟಮ್ಮನ್ನ ಮದುವೆಯಾದನು. ಆಗ ಕಾಟಮ್ಮನ ಹೊಟ್ಟೆಯಲ್ಲಿ ಹುಟ್ಟಿರುವ ಮಕ್ಕಳೆಲ್ಲಾ ಸಾಯುತ್ತಿದ್ದವು. ಇದಕ್ಕೆ ಕಾರಣವೇನೆಂದು ಮನೆಯದೇವರಾದ ಚಿತ್ರದೇವರನ್ನು ಕೇಳಿದಾಗ, ಇದು ಕರಡಿಯ ಶಾಪವೆಂದು ಹೇಳುತ್ತದೆ. ಇದಕ್ಕೆ ಪರಿಹಾರವೇನೆಂದು ಕೇಳಿದಾಗ ಹುಟ್ಟಿದ ಮಕ್ಕಳಿಗೆ ಕರಡಿಯ ಹೆಸರನ್ನಿಟ್ಟು ಕರೆದರೆ ಮಾತ್ರ ಹುಟ್ಟಿದ ಮಕ್ಕಳು ಉಳಿಯುತ್ತವೆಂದು ಹೇಳುತ್ತದೆ. ಮಂಚಿಕಾಟಮ್ಮ ಮೊದಲನೆಯ ಮಗುವಿಗೆ ಬಳ್ಳಯ್ಯ ಎಂದು ಎರಡನೆಯ ಮಗನಿಗೆ ಕರಡಿ ಬುಳ್ಳಪ್ಪನೆಂದು ಹೆಸರನ್ನಿಟ್ಟಳು. ಎರಡು ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರಿಬ್ಬರಿಗೂ ಮದುವೆ ಮಾಡಿದರು. ಅವರಿಗೂ ಮಕ್ಕಳಾದವು. ಅದೇ ಸಮಯಕ್ಕೆ ಸರಿಯಾಗಿ ಹರ್ತಿಕೋಟೆಯ ದೊರೆಯ ಮಗಳು ಕರಿಓಬವ್ವ ಹಾಕಿದ ಒಗಟು ಬಿಡಿಸಿದ ರೀತಿಗೆ ಮನಸೋತು ಮದುವೆಯಾಗುವುದಾಗಿ ಹೇಳುತ್ತಾನೆ. ಅವರು ಈಕೆ ಮ್ಯಾಸಬೇಡರ ಕನ್ಯೆಯಾಗಿರುವುದರಿಂದ ತನ್ನ ಗಂಡನಿಗೆ ಮದುವೆ ಮಾಡಿಕೊಳ್ಳಲು ಇಷ್ಟ ಪಡುವುದಿಲ್ಲ. ಆಕೆ ಸೂಳೆಯಾಗಿ ಮಾತ್ರ ಉಳಿದಳೆಂದು ಕೆಲವರು ಹೇಳಿದರೆ ಇನ್ನೂ ಕೆಲವರು ಆಕೆಯನ್ನು ಕರಡಿಬುಳ್ಳಪ್ಪ ಮದುವೆಯಾದ. ಆದರೆ ಆಕೆಗೆ ಮಕ್ಕಳಾಗದ ಕಾರಣ ಕರಡಿಬುಳ್ಳಪ್ಪನ ಹಿರೇ ಮಗನನ್ನು ದತ್ತು ತೆಗೆದುಕೊಂಡು ತನ್ನ ಸಮುದಾಯದ ಕನ್ಯೆಯನ್ನು ಅವನಿಗೆ ಮದುವೆ ಮಾಡಿದಳು ಎಂದು ಹೇಳುತ್ತಾರೆ.

ಕರಿಓಬವ್ವ ತನ್ನ ಏಳು ಜನ ಮಕ್ಕಳು ಮತ್ತು ಸೊಸೆಯರು ಸುಖವಾಗಿ ಬಾಳುತ್ತಿರುವ ಸಮಯದಲ್ಲಿ ವ್ಯಾಪಾರಿಯೊಬ್ಬನು ಬಾರಿ ಬೆಲೆಯ ರೇಷ್ಮೆ ಸೀರೆ ಮಾರಲು ಬರುತ್ತಾನೆ. ಆದರೆ ಅದನ್ನು ಕೊಳ್ಳುವವರೆ ಇರುವುದಿಲ್ಲ. ಆಗ ಏಳು ಜನ ಸೊಸೆಯರು ನಮ್ಮತ್ತೆ ಎಷ್ಟು ಸಾವುಕಾರ್ತಿ, ಆದರೆ ಏನು ಬಂತು ಒಂದು ರೇಷ್ಮೆ ಸೀರೆ ಕೊಳ್ಳಲಾಗಲಿಲ್ಲ ಎಂದು ಮಾತನಾಡುತ್ತಾರೆ ಆಗ ಕರಿಓಬವ್ವ ವ್ಯಾಪಾರಿ ಬಳಿ ಇರುವ ಸೀರೆಯನ್ನು ಕೊಳ್ಳಲು ಮುತ್ತಿನ ಸೆಟ್ಟಿಯ ಹತ್ತಿರ ಸಾಲ ಮಾಡುತ್ತಾಳೆ ಏಳು ಜೊತೆ ಚಪ್ಪಲಿ ಹೊಲಿಸಿ ಸೊಸೆಯರಿಗೆ ಕೊಡುತ್ತಾಳೆ. ಆಗ ಸೊಸೆಯರಿಗೆ ಸಂತೋಷವಾಗುತ್ತದೆ. ಒಂದು ದಿನ

ಮುತ್ತಿನ ಸೆಟ್ಟಿ ಸಾಲ ವಸೂಲಿಗಾಗಿ ಬರುತ್ತಾನೆ. ಅಷ್ಟರೊಳಗಾಗಿ ಕರಿಓಬವ್ವ ಸಾವನ್ನು ಅಪ್ಪಿರುತ್ತಾಳೆ. ಆಗ ಹಿರಿಯ ಮಗನಾದ ಚಿತ್ತಯ್ಯನನ್ನು ಕೇಳಿದಾಗ ತನ್ನ ಮನೆಯಲ್ಲಿರುವ ಸಂಪತ್ತನ್ನು ಕೊಟ್ಟರೂ ಅವನ ಸಾಲ ತೀರುವುದಿಲ್ಲ. ಅಷ್ಟು ಚಕ್ರ ಬಡ್ಡಿ ಹಾಕಿರುತ್ತಾರೆ. ಮುತ್ತಿನ ಸೆಟ್ಟಿ ಏಳು ಜನ ಅಣ್ಣ-ತಮ್ಮಂದಿರು ಸಂಪತ್ತನ್ನೆಲ್ಲ ಕೊಟ್ಟರೂ, ಸಾಲಕ್ಕೆ ಸರಿ ಹೋಗುವುದಿಲ್ಲ. ಆಗ ಚಿತ್ತಯ್ಯ ತನ್ನ ಹೆಂಡತಿಯ ಕೊರಳಲ್ಲಿರುವ ತಾಳಿಯನ್ನು ಕೊಟ್ಟಾಗ ಉಳಿದವರು ತಾಳಿಯನ್ನು ಕೊಡಲು ನಿರಾಕರಿಸಿ ಮನೆ ಬಿಟ್ಟು ಓಡಿಹೋಗುತ್ತಾರೆ. ಆಗ ಎರಡು ಗುಂಪಾಗುತ್ತದೆ. ತಾಳಿಯನ್ನು ಸಾಲಕ್ಕೆ ಕೊಟ್ಟವರು ಚಿತ್ತಗೊಲ್ಲರು, ತಾಳಿಯನ್ನು ಸಾಲಕ್ಕೆ ಕೊಡದವರು ಮಾರನಗೊಲ್ಲರು. ಅಣ್ಣನ ಮಾತನ್ನು ಮೀರಿದ ಕಾರಣಕ್ಕಾಗಿ ಸಂಬಂಧಗಳು ದೂರವಾದವು. ದೇವರನ್ನು ಹಂಚಿಕೊಂಡರು. ಗುಡಿಕಟ್ಟುಗಳನ್ನು ಹಂಚಿಕೊಂಡರು. ಯಾವುದೇ ಸಂತೋಷ ಇಲ್ಲವೇ ದುಃಖದ ಸಂದರ್ಭದಲ್ಲಿಯೂ ಒಬ್ಬರಿಗೆ ಒಬ್ಬರು ಸೇರಿಕೊಳ್ಳದಂತೆ ದೂರವಾದರು. ಹೀಗಾಗಿ ನಮ್ಮ ಹಾಲು ನಿಮಗೆ ಕಲೆಯುವುದು ಬೇಡ ನಿಮ್ಮ ಹಾಲು ನಮಗೆ ಕೂಡುವುದು ಬೇಡ, ಶವಸಂಸ್ಕಾರ, ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಒಬ್ಬರಿಗೊಬ್ಬರು ಕಲೆಯುವುದು ಬೇಡವೆಂದು ವಾಗ್ದಾನ ಮಾಡಿದರು. ಅದೇ ಪ್ರಕಾರ ಚಿತ್ತಗೊಲ್ಲರು ಮತ್ತು ಮಾರಗೊಲ್ಲರು ಒಂದೇ ತಟ್ಟೆಯಲ್ಲಿ ಊಟ ಮಾಡುವಂತಿಲ್ಲ. ಮದುವೆ ಸಮಾರಂಭಗಳಲ್ಲಿ ಸೇರುವಂತಿಲ್ಲ. ಶವಸಂಸ್ಕಾರಕ್ಕೆ ಹೋಗುವಂತಿಲ್ಲ. ಇಂದು ಕೂಡ ಕಾಡುಗೊಲ್ಲರಲ್ಲಿ ಇದು ಮುಂದುವರೆದುಕೊಂಡು ಬಂದಿರುವುದು ಕಾಣಬಹುದು. ಇವರೆಲ್ಲರೂ ಸೇರಿ ನಂದಿಹಳ್ಳಿಯ ಬಳಿ ಇರುವ ಹಿರೇಲಿಂಗಕ್ಕೆ ಏಳು ಕಂಬಿಗಳನ್ನು ಇಟ್ಟು ಹಾಲು ಹಾಕುವ ಹಬ್ಬ ಮಾಡಿದಾಗ ಚಿತ್ತಗೊಲ್ಲರ ಹಾಲು ಮಾರಗೊಲ್ಲರ ಹಾಲಿನೊಂದಿಗೆ ಕೂಡುವುದಿಲ್ಲ. ಆ ಕಾರಣದಿಂದ ಚಿತ್ತಗೊಲ್ಲರು ಮತ್ತು ಮಾರಗೊಲ್ಲರ ಮಧ್ಯೆ ಅಂತರ ಸೃಷ್ಟಿಯಾಗಿದೆ. ಆದರೆ ಕರಿಓಬವ್ವನ ಸಾಕುಮಗ ತೆಗೆದುಕೊಂಡಿದ್ದ ವ್ಯಕ್ತಿಯ ಹಾಲು ಚಿತ್ತಗೊಲ್ಲರ ಜೊತೆ ಸೇರಿದ್ದರಿಂದ ಅವರನ್ನು ಬಡಗೊಲ್ಲರು ಎಂದು ಕರೆಯುತ್ತಾರೆ. ಬಡಗೊಲ್ಲರಿಗೂ ಅವರಿಗೆ ಕೂಡುತ್ತದೆ. ಆದರೆ ಬಡಗೊಲ್ಲರಿಗೂ ಮಾರನಗೊಲ್ಲರಿಗೂ ಕಲೆಯುವುದಿಲ್ಲ.

ಒಟ್ಟಾರೆ ಇಡಿ ಕತೆಯನ್ನು ಗಮನಿಸಿದಾಗ, ಇಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ಮಂಚಿ ಕಾಟಮ್ಮನನ್ನು ಹೊತ್ತುಕೊಂಡು ಹೋಗಿರುವುದು ಜಾಂಬವ ಕುಲದ ಮಾದಿಗ ವ್ಯಕ್ತಿಯಾಗಿರಬಹುದು. ಕಾಡುಗೊಲ್ಲರಿಗೂ ಮಾದಿಗರಿಗೂ ವೈವಾಹಿಕ ಸಂಬಂಧಗಳು ನಿಷಿದ್ದವಾದ ಕಾರಣ ವ್ಯಕ್ತಿಯ ಬದಾಲಾಗಿ ಪ್ರಾಣಿಯನ್ನು ಪ್ರತಿಮೆಯಾಗಿ ಬಳಸಿರುವುದು ಇದರ ಜೊತೆಗೆ ಜಾಂಬವಂತನಿಗೂ ಮಂಚಿಕಾಟಮ್ಮನಿಗೂ ಲೈಂಗಿಕಕ್ರಿಯೆ ನಡೆದಿರಬಹುದು. ಅದರ ಪ್ರಯುಕ್ತ ಮೂವರು ಮಕ್ಕಳಾಗಿರಬಹುದು. ಆಗ ಹೆಣ್ಣಿನ ಸಂಖ್ಯೆ ಕಡಿಮೆ ಇರುವ ಕಾರಣ ಕರಡಿಗೆ ಹುಟ್ಟಿರುವ ಮಕ್ಕಳನ್ನು ಕೊಂದು ಮತ್ತೆ ಆಕೆಯನ್ನು ಮೇಕೆ ಮಾರಗೊಂಡ ಮದುವೆಯಾಗಿರಬಹುದು. ಆನಂತರ ಅವರಿಗೆ ಮಕ್ಕಳಾಗಿರಬಹುದು. ಅವರ ಹೆಸರುಗಳನ್ನು ಗಮನಿಸಿದರೆ ಅವರು ಜಾಂಬವಂತನ ಮಕ್ಕಳೆ ಇರಬಹುದು.

ಮ್ಯಾಸಬೇಡರ ಮಹಿಳೆಯಾದ ಕರಿಓಬವ್ವನನ್ನು ಕರಡಿಬುಳ್ಳಪ್ಪ ಮದುವೆಯಾಗಿ ಆಕೆಗೂ ಮಕ್ಕಳಾಗಿರಬಹುದು. ಆಕೆಯ ಹೊಟ್ಟೆಯಲ್ಲಿ ಹುಟ್ಟಿರುವ ಕಾರಣದಿಂದ ತನ್ನ ಮಗನಿಗೆ ಗೊಲ್ಲರು

ಹೆಣ್ಣು ಕೊಡಲು ನಿರಾಕರಿಸಿದ ಕಾರಣ, ಆಕೆ ತನ್ನ ಸಮುದಾಯದ ಹೆಣ್ಣು ತಂದು ಮದುವೆ ಮಾಡಿರುವ ಕಾರಣದಿಂದ ಮಾರನಗೊಲ್ಲರಲ್ಲಿ ಉಳಿದ ಐದುಜನ ಅಣ್ಣ- ತಮ್ಮಂದಿರನ್ನು ಕರೆದು ಕೊಂಡು ಬೇರೆಯಾಗಿರಬಹುದು. ಇದರ ಜೊತೆಗೆ ಮ್ಯಾಸಬೇಡರ ಕುಲದಲ್ಲಿ ಜನಿಸಿದ್ದರಿಂದ ಚಿತ್ರದೇವರನ್ನು ಕೊಡದಂತೆ ತಮ್ಮ ವಶಕ್ಕೆ ತೆಗೆದುಕೊಂಡ ಕಾರಣ ಚಿತ್ತಗೊಲ್ಲರು ವೈಷ್ಣವೀಕರಣಗೊಂಡು ತಿರುಪತಿ ತಮ್ಮಪ್ಪನ ಭಕ್ತರಾಗಿರುವ ಸಾಧ್ಯತೆ ಉಂಟು.

ಮೂರನೆಯದಾಗಿ ಈ ಕತೆ ಸ್ವಲ್ಪ ಮಟ್ಟಿಗೆ ವಡ್ಡಾರಾಧನೆಯಲ್ಲಿ ಬರುವ ಸುಕುಮಾರಕಥೆಯನ್ನು ಹೋಲುತ್ತದೆ. ಯಶೋಭದ್ರೆ ರತ್ನಖಚಿತವಾದ ಕಂಬಳಿಯನ್ನು ಕೊಂಡುಕೊಂಡು ತನ್ನ ಸೊಸೆಯರಿಗೆ ಚಪ್ಪಲಿ ಮಾಡಿಸಿದಂತೆ ಇಲ್ಲಿ ಕರಿಹೋಬವ್ವ ರೇಷ್ಮೆಯ ಸೀರೆಯಿಂದ ತನ್ನ ಸೊಸೆಯರಿಗೆ ಚಪ್ಪಲಿ ಹೊಲಿಸಿಕೊಡುತ್ತಾಳೆ.

ನಾಲ್ಕನೆಯದಾಗಿ ಕಾಡುಗೊಲ್ಲರು ಬರಹಕಿಂತ ಹಿರಿಯರ ಮಾತಿಗೆ ಹೆಚ್ಚು ಬೆಲೆ ಕೊಟ್ಟಿರುವುದನ್ನು ಗಮನಿಸಬಹುದು. ಆಗಿನ ಸಂದರ್ಭ ಹೇಗಿತ್ತೋ ಏನೋ ಆದರೆ ಇಂದು ಕೂಡ ಅದೇ ರೀತಿ ನಡೆದುಕೊಳ್ಳುತಿರುವುದು ನಿಜಕ್ಕೂ ಆಶ್ಚರ್ಯಕರ ಸಂಗತಿಯಾಗಿದೆ. ತಮಗೆ ಹೊಂದಿಕೆಯಾಗುವ ಕುಲದಲ್ಲಿಯೇ ವೈವಾಹಿಕ ಸಂಬಂಧ ಬೆಳೆಸುವುದು, ಆಧುನಿಕ ಯುಗದಲ್ಲೂ ಮುಂದುವರೆದಿದೆ. ಕೆಲವು ಕಡೆ ಆಧುನಿಕ ಜೀವನಕ್ಕೆ ಹೊಂದಿಕೊಂಡಂತೆ ಹಳೆಯ ಕಾನೂನುಗಳು ತಲೆ ಕೆಳಕಾಗಿರುವುದನ್ನು ಗಮನಿಸಬಹುದು.

ಚಿತ್ರದೇವರನ್ನು ಆರಾಧನೆ ಮಾಡುವವರ ಕಟ್ಟೆಮನೆ ಕರಿಓವ್ವನಹಳಿಯಲ್ಲಿದ್ದೆ. ಇವರ ಅಮವಾಸ್ಯೆ ದೇವರು ಚಿತ್ರದೇವರು. ಕಾಡುಗೊಲ್ಲರ ಪ್ರತಿಯೊಂದು ಗುಡಿಕಟ್ಟಿನಲ್ಲೂ ಚಿತ್ರದೇವರಿರುವುದು ಕಂಡುಬರುತ್ತದೆ. ಯಾವುದೇ ಆಕಾರವಿಲ್ಲದ ಪೆಟ್ಟಿಗೆಯ ದೇವರು. ಪೆಟ್ಟಿಗೆಯಲ್ಲಿ ಬೆನವನಾಕಾರದ ಸಣ್ಣ ಲಿಂಗವಿರುತ್ತದೆ. ಇಂದು ಅದರ ಸ್ವರೂಪದಲ್ಲಿ ಬದಲಾಗಿದೆ. ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಇವತ್ತು ಏಳು ಹಟ್ಟಿಗಳಿಗಿಂತ ಹೆಚ್ಚು ಹಟ್ಟಿಗಳನ್ನು ಗುಡಿಕಟ್ಟೆಗಳು ಒಳಗೊಂಡಿವೆ. ಕರ್ನಾಟಕದಲ್ಲಿ ಮತ್ತು ಆಂಧ್ರದಲ್ಲಿ ಕರಡಿಗೊಲ್ಲರು ಮತ್ತು ಮಾರನಗೊಲ್ಲರ ಗುಡಿಕಟ್ಟುಗಳನ್ನು ಈ ರೀತಿ ಗುರುತಿಸಬಹುದು. ಅವುಗಳು ಈ ಕೆಳಗಿನಂತಿವೆ.

೧. ನಂದಿಹಳ್ಳಿ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೨. ರಂಗೇನಹಳ್ಳಿ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೩. ಚಿತ್ರಹಳ್ಳಿ ಚಿತ್ರದೇವರು ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಲ್ಲೆ

೪. ಮುಂಗಸವಳ್ಳಿ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೫. ಈಚಲುಗೆರೆ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೬. ಬ್ಯಾಡರಹಳ್ಳಿ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೭. ಮಸ್ಕಲ್ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೮. ಹಾಯ್ಕಲ್ ಚಿತ್ರದೇವರು ಚಿತ್ರದುರ್ಗ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

ಆದರೆ ಒಂದು ದುರಂತವೆಂದರೆ ಎಂಟು ಗುಡಿಕಟ್ಟುಗಳ ಕಾಡುಗೊಲ್ಲರು ವೈಷ್ಣವೀಕರಣಗೊಂಡು ಅವರ ಗುಡಿಕಟ್ಟೆಯಲ್ಲಿ ಚಿತ್ರದೇವರಿದ್ದರೂ ತಿರುಪತಿ ತಿಮ್ಮಪ್ಪನ ಹೆಸರಿನಿಂದ ಗುರುತಿಸಿರುವುದು ಕಂಡುಬರುತ್ತದೆ. ನಂದಿಹಳ್ಳಿ ಚಿತ್ರದೇವರ ಬದಲಾಗಿ ನಂದಿಹಳ್ಳಿ ರಂಗಪ್ಪ ಬಂದು ಕುಳಿತಿದೆ. ರಂಗೇನಹಳ್ಳಿಯಲ್ಲಿಯೂ ರಂಗಪ್ಪ ಇದೆ. ಚಿತ್ರಹಳ್ಳಿ ಮಾತ್ರ ಚಿತ್ರಲಿಂಗೇಶ್ವರವಿದೆ. ಮುಂಗಸವಳ್ಳಿಯಲ್ಲಿ ತಿರುಪತಿ ತಿಮ್ಮಪ್ಪ ಇದೆ. ಈಚಲುಗೆರೆಯಲ್ಲಿ ತಿಮ್ಮಪ್ಪ ಗುಡಿ ಇದೆ. ಬ್ಯಾಡರಹಳ್ಳಿಯಲ್ಲಿ ಬ್ಯಾಡರಹಳ್ಳಿ ತಿಮ್ಮಪ್ಪ ಎಂದು ಹೆಸರಾಗಿದೆ. ಮಸ್ಕಲ್ ತಿಮ್ಮಪ್ಪ, ಹಾಯ್ಕಲ್ ತಿಮ್ಮಪ್ಪನನ್ನು ಕೂಡಿದೆ.

ಎಂಟು ಗುಡಿಕಟ್ಟಿನ ಚಿತ್ತಗೊಲ್ಲರು ಒಂ ವರ್ಷದಲ್ಲಿ ಒಂದು ಸಲ ಒಂದು ಸ್ಥಳದಲ್ಲ ಸೇರಿ ಚಿತ್ರದೇವರ ಆರಾಧನೆ ಮಾಡಬೇಕು. ಹಾಗಾಗಿ ನಂದಿಹಳ್ಳಿಯಲ್ಲಿರುವ ಹಿರೇಲಿಂಗದ ಹತ್ತಿರ ವಾಸೆಕೊಯ್ದು (ಕುರಿಯನ್ನು ಬಲಿಕಟ್ಟು)ಏಳು ಕಂಬಿಗಳನ್ನು ಒಂದು ಹತ್ತಿರ ಕಟ್ಟಿ ಅವುಗಳಿಗೆ ಹಾಲಿನ ಅಭಿಷೇಕ ಮಾಡಬೇಕು. ಕಾಡುಗೊಲ್ಲರು ಪಶುಪಾಲಕರಾಗಿದ್ದು ಮತ್ತು ಅಲೆಮಾರಿಗಳು ಆ ಕಾರಣದಿಂದ ತಮ್ಮ ಬಂದುತ್ವ ಗಟ್ಟಿಗೊಳಿಸಲು ವರ್ಷಕ್ಕೆ ಒಂದು ಸಲ ಏಳು ಜನರು ಹತ್ತಿರ ಸೇರಿಕೊಳ್ಳೋಣ ಎಂಬ ಕಾರಣದಿಂದ ಗುಗ್ಗರಿಹಬ್ಬವನ್ನು ಮಾಡುತ್ತಿದ್ದರು. ಆ ಕಾರಣಕ್ಕಾಗಿ ಹಿರಿಯ ವ್ಯಕ್ತಿಯು ವಾಸಮಾಡುವ ಗುಡಿಕಟ್ಟೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಕೆಲ ಮಾಹಿತಿದಾರರ ಪ್ರಕಾರ ಚಿತ್ರದೇವರ ಉದ್ಭವಲಿಂಗ ಚಿತ್ರಹಳ್ಳಿಯಲ್ಲಿದ್ದರೆ. ಕೆಲವರ ಪ್ರಕಾರ ನಂದಿಹಳ್ಳಿಯಲ್ಲದೆ ಎಂದು ಹೇಳುತ್ತಾರೆ. ಚಿತ್ರಹಳ್ಳಿಗಿಂತ ಸ್ಪಷ್ಟವಾದ ಕುರುಹು ನಂದಿಹಳ್ಳಿಯಲ್ಲಿರುವುದರಿಂದ ನಂದಿಹಳ್ಳಿಯ ಹಿರೇಲಿಂಗವೇ ದೊಡ್ಡ ಮಗನಿರಬಹುದು. ಚಿತ್ರಹಳ್ಳಿಯಲ್ಲಿ ಚಿತ್ತಯ್ಯ ಆಳ್ವಿಕೆ ಮಾಡಿರಬಹದು. ಆದರೆ ದೇವರಾಗಿ ಉದ್ಭವವಾಗಿರುವುದು ನಂದಿಹಳ್ಳಿಯಲ್ಲಿ. ಅಲ್ಲಿ ಏಳು ಕಂಬಿಗಳನ್ನು ಹರಿವಾಣದಲ್ಲಿ ಇಟ್ಟು ಏಳು ಜನ ಅಣ್ಣ-ತಮ್ಮಂದಿರು ಒಂದುಕಡೆ ಸೇರಿ, ಗುಗ್ಗರಿ ಹಬ್ಬ ಮಾಡಿರುವುದುರ ಬಗ್ಗೆ ಸಾಕಷ್ಟು ಕುರುಹುಗಳು ದೊರೆಯುತ್ತವೆ. ಆದರೆ ಒಂದು ದುರಂತವೆಂದರೆ ಚಿತ್ರಹಳ್ಳಿಯ ಚಿತ್ರದೇವರಂತೆ ನಂದಿಹಳ್ಳಿಯ ಚಿತ್ರದೇವರು ಮುಖ್ಯವೇದಿಕೆಗೆ ಬರಲಿಲ್ಲ. ಕಾರಣ ಅಲ್ಲಿ ನಂದಿಹಳ್ಳಿ ರಂಗಪ್ಪ ಹೆಸರು ವಾಸಿಯಾಯಿತು. ಆಕಾರಣಕ್ಕೆ ಚಿತ್ರದೇವರು ಒಂದು ಗುಡಿಯನ್ನು ಕಾಣದೆ ಹಾಗೆ ಉಳಿದುಕೊಂಡಿತು.

೪.೨.೧. ವಾಸೆ ಕೊಯ್ಯುವುದು: (ಕುರಿ ಬಲಿ)

ಅಲೆಮಾರಿಗಳಾಗಿದ್ದ ಸಂದರ್ಭದಲ್ಲಿ ಕಾಡುಗೊಲ್ಲರು ಪ್ರತಿವರ್ಷ ಒಂದು ಹತ್ತಿರ ಕೂಡುವುದು ಸಾಧ್ಯವಾಗದ ಕೆಲಸ. ಆ ಕಾರಣದಿಂದ ೧೦-೧೫ ವರ್ಷಕ್ಕಾದರೂ ಒಂದು ಬಾರಿ ಏಳುಜನರು ಸೇರಿ ದೊಡ್ಡದೇವರ ಹಬ್ಬ ಮಾಡುತ್ತಿದ್ದರು. ಇದರಿಂದಾಗಿ ವಾಸೆಕೊಯ್ಯುವ ಪದ್ಧತಿ ಹುಟ್ಟಿಕೊಂಡಿತು. ಅಂದರೆ ತಮ್ಮ ದೇವರುಗಳು ನೆಲೆಗೊಂಡಿರುವ ಸ್ಥಳ ಎಂದು ಗುರುತಿಸಿರುವ ಜಾಗದಲ್ಲಿ ವಾಸೆಕೊಯ್ದು ದೇವರ ಆರಾಧನೆ ಮಾಡುತ್ತಿದ್ದರು. ವಾಸೆಕೊಯ್ಯಲು ಎದುರು ರೋಮದ ಕೊಬ್ಬಿದ ಕುರಿಯನ್ನು

ಬಳಸುತ್ತಿದ್ದರು. ಈ ಹಬ್ಬ ಪ್ರಾರಂಭವಾಗುತ್ತಿರುವುದು ಈ ರೀತಿ. ಏಳು ಗುಡಿಕಟ್ಟೆಯ ಏಳು ಕಂಬಿಗಳಿರುತಿದ್ದವು. ಹಿರಿಹಟ್ಟಿ ಅಥವಾ ಮೊದಲ ಗುಡಿಕಟ್ಟಯ ಮನೆಯ ಬಳಿ ಸೇರಿ ತಂಕಟೆಗಿಡದ ಬುಡಕ್ಕೆ ಏಳು ಕಂಬಿಗಳನ್ನು ಕಟ್ಟಿ ತಾವು ತಂದಿರುವ ಮೀಸಲು ಹಾಲನ್ನು ಏಳು ಕಂಬಿಗಳಿಗೂ ಹಾಕುತ್ತಿದ್ದರು. ಈ ಪದ್ಧತಿಯು ಪ್ರಾರಂಭದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಕರಡಿಗೊಲ್ಲರು ಎರಡು ಭಾಗವಾಗುವುದಕ್ಕಿಂತ ಮುಂಚಿತವಾಗಿ ಈ ಪದ್ಧತಿ ರೂಢಿಯಲ್ಲಿತ್ತು. ಆದರೆ ಇವರು ಎರಡು ಬೆಡಗಾಗಿ ರೂಪಿತವಾದ ನಂತರ ಎಲ್ಲರೂ ಸೇರಿ ದೇವರು ಮಾಡಲು ಹೋದಾಗ ಮಾರನಗೊಲ್ಲರ ಹಾಲು ಚಿತ್ತಗೊಲ್ಲರ ಹಾಲಿನೊಂದಿಗೆ ಸೇರುವುದಿಲ್ಲ. ಆ ಕಾರಣದಿಂದ ಮಾರನಗೊಲ್ಲರು ತಮ್ಮದೇ ಆದ ಗುಡಿಕಟ್ಟುಗಳನ್ನು ಮಾಡಿಕೊಂಡರು. ತಾವೆ ಸ್ವತಂತ್ರವಾಗಿ ವಾಸೆ ಕೊಯ್ದುಕೊಂಡರು. ಮಾರನಗೊಲ್ಲರು ವಾಸೆ ಕೊಯ್ಯಲು ಪಾಲೇನಹಳ್ಳಿ ಮತ್ತು ಏಣಕಲ್ ಗುಡ್ಡವನ್ನು ಆಯ್ಕೆ ಮಾಡಿಕೊಂಡು ಕಾರ್ತಿಕ ಮಾಸದಲ್ಲಿ ವಾಸೆಕೊಯ್ಯುವ ಹಬ್ಬ ಮಾಡುತ್ತಾರೆ. ಇವರ ಗುಡಿಕಟ್ಟುಗಳು ಮಾತ್ರ ಬೇರೆಯಾಗಿವೆ. ಇವರ ಅಮವಾಸ್ಯೆಯ ದೇವರು ಮಾತ್ರ ಒಂದೆ ಆಗಿದೆ. ಚಿತ್ತಯ್ಯ ಉದ್ಭವವಾಗಿರುವ ಜಾಗ ನಂದಿಹಳ್ಳಿಯಲ್ಲಿರುವುದರಿಂದ ಹಿರೇಲಿಂಗ ಇರುವ ಜಾಗದಲ್ಲಿ ವಾಸೆಕೊಯ್ದು ಹಬ್ಬ ಮಾಡಿರುವುದಕ್ಕೆ ಅಲ್ಲಿರುವ ಕುರುಹುಗಳೆ ಸಾಕ್ಷಿ. ಹಿಂದೆ ಹೇಳಿದಂತೆ ಬಹಳ ವರ್ಷಗಳ ನಂತರ ಏಳು ಹಟ್ಟಿಯ ಅಂಬು ಅಥವಾ ಕಂಬಿಗಳು ಒಂದು ಕಡೆ ಸೇರಿ ಎದುರು ರೋಮದ ಕುರಿಯನ್ನು ಉದ್ಭವಲಿಂಗದ ಮೇಲೆ ಕಡಿಯುತ್ತಾರೆ. ಅದಕ್ಕಿಂತ ಮುಂಚೆ ಹಾಲಿನ ಅಭಿಷೇಕ ಮಾಡುತ್ತಾರೆ. ಅಂದರೆ ಗೊಲ್ಲರು ಎಲ್ಲಿಯೋ ವಾಸವಾಗಿದ್ದರೂ ತಮ್ಮ ಕುಲಾಚಾರವನ್ನು ಮರೆಯುವಂತಿಲ್ಲ. ಅಷ್ಟೆ ಅಲ್ಲದೇ ತಮ್ಮ ಪಾವಿತ್ರತೆಯನ್ನು ಎಷ್ಟರ ಮಟ್ಟಿಗೆ ಕಾಪಾಡಿಕೊಂಡು ಬಂದಿದ್ದಾರೆಂಬುದನ್ನು ಎಲ್ಲರಿಗೂ ತೋರಿಸುವ ಸಲುವಾಗಿ ಈ ಹಬ್ಬವನ್ನು ಮಾಡುತಿದ್ದರು. ಅಲ್ಲಿ ಯಾರಾವಾದರೂ ಹಾಲು ಕಲೆಯಲಿಲ್ಲವೆಂದರೆ, ಅವರನ್ನು ಗುಡಿಕಟ್ಟಿನಿಂದ ಕುಲದಿಂದ ಹೊರಗೆ ಇಡುತ್ತಿದ್ದರು. ರೋಮದ ಕುರಿಯನ್ನು ಕೊಯ್ದು ಹಿಂದೆ ಹಾಗೆ ಸುಟ್ಟು ತಿನ್ನುತ್ತಿದ್ದರು ಎಂದು ಪ್ರತೀತಿ ಇದೆ. ಆದರೆ ಇಂದು ಆ ಸ್ಥಿತಿ ಬದಲಾಗಿದೆ. ಚೆನ್ನಾಗಿ ಮಾಂಸಾರ ಮಾಡಿ ದೇವರಿಗೆ ಎಡೆಕೊಟ್ಟು ಎಲ್ಲರೂ ಊಟ ಮಾಡುತ್ತಾರೆ. ಅಷ್ಟೆ ಅಲ್ಲದೆ ಎಲ್ಲರು ಊಟ ಮಾಡಿ ಉಳಿದ ಮಾಂಸಾಹಾರವನ್ನು ಗುಡಿಯ ಬೇಲಿಕಳ್ಳಿಗೆ ಸುರಿಯುತ್ತಾರೆ. ಗುಡಿಯ ಸುತ್ತ ಹಾಕಿರುವ ಕಳ್ಳಿಗೆ ಪೌಳಿ ಎಂದು ಕರೆಯುತ್ತಾರೆ. ರಾತ್ರಿ ಅಲ್ಲಿಯೇ ಮಲಗಿ ಬೆಳಿಗ್ಗೆ ಎದ್ದು ಎಲ್ಲರು ತಮ್ಮ ದೇವರುಗಳನ್ನು ತೆಗೆದು ಕೊಂಡು ತಮ್ಮ ತಮ್ಮ ಊರುಗಳಿಗೆ ಹೋಗುತ್ತಾರೆ. ಆದರೆ ಇತ್ತೀಚೆಗೆ ವಾಸೆ ಕೊಯ್ಯವ ಪದ್ಧತಿ ನಿಂತು ಹೋಗಿದೆ ಎಂದು ಹೇಳಬಹುದು.

ವಾಸೆಕಲ್ಲಿನ ವಿಶೇಷತೆಯನ್ನು ಗುರುಲಿಂಗಯ್ಯನವರು ಈ ರೀತಿ ಹೇಳುತ್ತಾರೆ. " ಚಿತ್ತಯ್ಯ ಕಾಟಯ್ಯ ನೆಯೂರದ ಜಾಗವೆಂದು ಪ್ರತೀತಿ ಇರುವ ಹಳ್ಳಿಯಲ್ಲಿ ಕಾರಣಾಂತರದಿಂದ ವಾಸೆ ಕಲ್ಲಿನ ಮೇಲೆ ಮಣ್ಣು ಮುಚ್ಚಿಕೊಂಡು ವಾಸೆ ಕಲ್ಲು ಕಾಣದಾಗಿತ್ತು. ಆದ್ದರಿಂದ ಅಲ್ಲಿ ವಾಸೆ ಕೊಯ್ಯುವುದನ್ನು ನಿಲ್ಲಿಸಿದ್ದರಿಂದ ಆ ದೇವರ ಪಟ್ಟದ ಪೂಜಾರಿಗಳು ಪ್ರತಿವರ್ಷ ಸಾಯುತಿದ್ದರಂತೆ. ಕೊನೆಗೆ ಆ ದೇವರನ್ನು ಕೇಳಿದಾಗ ಹಿರಿಯೂರು ತಾಲ್ಲೂಕಿನ ಮುಂಗಸವಳ್ಳಿ ಗೊಲ್ಲರಹಟ್ಟಿಯಲ್ಲಿ ಕಾಟಜ್ಜ ಪದ

ಹೇಳಿ ವಾಸೆ ಕಲ್ಲನ್ನು ಕೂರಿಸುತ್ತಾನೆ. ವಾಸೆಕೊಯ್ದು ದೇವರ ಪಟ್ಟದ ಪೂಜಾರಿಗಳು ಬದುಕಲು ಸಾಧ್ಯವಾಯಿತೆಂದು ಒಬ್ಬ ಹುಡುಗನ ಮೈ ಮೇಲೆ ಬಂದು ಹೇಳಿತಂತೆ ಅದೇ ರೀತಿ ಮುಂಗಸವಳ್ಳಿಗೆ ಹೋಗಿ ಕಾಟಜ್ಜನನ್ನು ಭೇಟಿ ಮಾಡಲಾಗಿ ಆತನಿಗೆ ಗಣೆ ಮೇಲೆ ಪದ ಹೇಳುವುದು ಬರುವುದಿಲ್ಲವೆಂದರೂ ದೇವರ ಅಪ್ಪಣೆಯಂತೆ ಕಾಟಜ್ಜನನ್ನು ಬಲವಂತವಾಗಿ ಚಿತ್ರಹಳ್ಳಿಗೆ ಕರೆದು ಗಣೆ ಊದಿದಾಗ ಅವನಿಗೆ ಅರಿವಿಲ್ಲದೆ ಒಂದು ರಾತ್ರಿ ಒಂದು ಹಗಲು ಪದ ಹೇಳಿ ಮಾರನೆ ದಿನ ಸೂರ್ಯನಿಗೆ ಎದುರಾಗಿ ನಿಂತು ತಲೆ ನೆರಳಿನ ಕೆಳಗೆ ವಾಸೆ ಕಲ್ಲಿದೆ ಎಂದು ಹೇಳಲಾಗಿ ಅಲ್ಲಿ ಅಗೆದು ನೋಡಿದಾಗ ವಾಸೆ ಕಲ್ಲು ಸಿಕ್ಕಿತೆಂದು ಪ್ರತೀತಿ. ನಂತರ ವಾಸೆಕೊಯ್ದು ಪಟ್ಟಕಟ್ಟಿದಾಗ ಆ ಪೂಜಾರಿ ಸಾಯಲಿಲ್ಲ ಎಂಬ ಪ್ರತೀತಿ *(ಗುರುಲಿಂಯ್ಯ. ಎಂ ನಾಗಪ್ಪ ವಿ. 'ಕಾಡುಗೊಲ್ಲ' ಪುಟ ೪೪, ೨೦೦೮)*

ಇಂತಹ ಅನೇಕ ವಿಶೇಷತೆಗಳು ಗುಡಿಕಟ್ಟಿಗೊಂದು ದೊರೆಯುತ್ತವೆ. ಆಂಧ್ರದಲ್ಲಿ ವಾಸವಾಗಿರುವ ಚಿತ್ತಗೊಲ್ಲರು ತಮ್ಮ ಸಾಂಸ್ಕೃತಿಕ ಕೇಂದ್ರವನ್ನು ಮದ್ದನಕುಂಟೆಯಾಗಿ ಮಾಡಿಕೊಂಡಿದ್ದಾರೆ. ಅವರು ವಾಸೆಕೊಯ್ಯುವುದು ಮದ್ದನಕುಂಟೆಯ ಚಿತ್ರದೇವರಿಗೆ. ಆಂಧ್ರದಲ್ಲಿ ಪ್ರಮುಖವಾಗಿ ಚಿತ್ರದೇವರನ್ನು ಎರಡು ಭಾಗವಾಗಿ ಮಾಡಿಕೊಂಡಿದ್ದಾರೆ. ಬಲಭಾಗದ ಅಂಬುಗಳು ಮತ್ತು ಎಡಭಾಗದ ಅಂಬುಗಳು ಎಂದು ಗುರುತಿಸಿದ್ದಾರೆ.

ಬಲಭಾಗದ ಅಂಬುಗಳು ಕರಿಸಿತ್ತನಗೌಡನ ವಂಶದವು. ಈ ಕೆಳಗಿನಂತಿವೆ

೧. ಪೋತುಗಾರನಹಳ್ಳಿ ಚಿತ್ರದೇವರು ಯಜಮಾನ ಗುಡಿಕಟ್ಟು

೨. ರಾಮಸಾಗರದ ಚಿತ್ರದೇವರು (ಪೂಜಾರಿ) ಹುರುಕುಂಡ ತಾಲ್ಲೂಕು

೩. ಬಚ್ಚಿಹಳ್ಳಿ ಮೇಲುಕುಂಟೆ ಚಿತ್ರದೇವರು ಕಲ್ಯಾಣದುರ್ಗ ತಾಲ್ಲೂಕು

೪. ಸದ್ವಿ ಚಿತ್ರದೇವರು ಮತ್ತು ಯಲ್ಲಮ್ಮದೇವರು (ಗೌಡ) ರಾಯದುರ್ಗ ತಾಲ್ಲೂಕು

೫. ಗುದ್ದೂಳು ಚಿತ್ರದೇವರು ಮತ್ತು ಯಲ್ಲಮ್ಮದೇವರು (ನಾಡಿನಗೌಡ) ಕಲ್ಯಾಣದುರ್ಗ ತಾಲ್ಲೂಕು

೬. ಹೊಸುರು ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೭. ಭಾಗಲೆ ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೮. ಸಿನ್ನಮ್ಮನಹಳ್ಳಿ ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೯. ಸದ್ವಿ ಚಿತ್ರದೇವರು ಮತ್ತು ಯಲ್ಲಮ್ಮದೇವರು (ಪಾರುಪತ್ತೇದಾರ) ರಾಯದುರ್ಗ ತಾಲ್ಲೂಕು

ಎಡ ಭಾಗದ ಗೆಜ್ಜೆಕುದುರೆ ತೋಳಯ್ಯನಾಗನ ಭಾಗದ ಅಂಬುಗಳು

೧. ಎಡಕೆರೆ ಚಿತ್ರದೇವರು ಮತ್ತು ಯಲ್ಲಮ್ಮದೇವರು (ಯಜಮಾನ)ಕಲ್ಯಾಣದುರ್ಗ ತಾಲ್ಲೂಕು

೨. ಮಾಮಡೂರು ಚಿತ್ರದೇವರು ಮತ್ತು ಯಲ್ಲಮ್ಮದೇವರು (ಯಜಮಾನ)ಕಲ್ಯಾಣದುರ್ಗ ತಾಲ್ಲೂಕು

೩. ಮಂಗಮ್ಮನಳ್ಳಿ ಚಿತ್ರದೇವರು ಮತ್ತು ಯಲ್ಲಮ್ಮದೇವರು (ದಳವಾಯಿ)ಕಲ್ಯಾಣದುರ್ಗ ತಾಲ್ಲೂಕು

೪. ಮಲ್ಲಿಕಾರ್ಜುನಳ್ಳಿ ನರಸಾಪುರ ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೫. ಕೊಂಡಪುರ ಚಿತ್ರದೇವರು ಮತ್ತು ಯಲ್ಲಮ್ಮದೇವರು ರಾಯದುರ್ಗ ತಾಲ್ಲೂಕು

೬. ಸಿಂತುರಲಹಳ್ಳಿ ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೭. ದಡಗಟ್ಟ ಚಿತ್ರದೇವರು ಮತ್ತು ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲ್ಲೂಕು

೮. ಭೂಸಂದ್ರದ ಚಿತ್ರದೇವರು ಮತ್ತು ಯಲ್ಲಮ್ಮದೇವರು ರಾಯದುರ್ಗ ತಾಲ್ಲೂಕು

ಮಡ್ಕಶಿರಾ ತಾಲ್ಲೂಕಿನಲ್ಲಿ ಕಂಡುಬರುವ ಗುಡಿಕಟ್ಟುಗಳು, ಇವು ಮದ್ದನಕುಂಟೆ ಗುಡಿಕಟ್ಟೆಗೆ ಸೇರಿದ ಅಂಬುಗಳು

೧. ಹೊಸಕೋಟೆ

೨. ಕೊಳಪಾಳ

೩. ಮಂದಲಹಳ್ಳಿ

೪. ತಾಳೆಕರೆ

೫. ಕಂಗಲ್ ಕುಂಟೆ

೬. ಉಪ್ಪಾರಹಳ್ಳಿ

೭. ರೊಳ್ಳೆ

೮. ಕಣಿಮೆಹಟ್ಟಿ

೯. ಕರೆಂದೋವು

೧೦. ಮದುಡಿ

೧೧. ಕರೆದಾಸರಹಳ್ಳಿ

೧೨. ಬೆಟದೂರು

೧೩. ಇಟಿಗೆಹಳ್ಳಿ

೧೪. ಬಳಿಕೆರೆ

೧೫. ಚಿಕ್ಕಬಾಣಿಗೆರೆ

ಮಾರನಗೊಲ್ಲರ ಗುಡಿಕಟ್ಟುಗಳು(ಚಿತ್ರದೇವರು ಅಮಾವಾಸ್ಯೆ)

೧. ಚಿಕ್ಕೇನಹಳ್ಳಿ ಚಿತ್ರದೇವರು ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೨. ಸಾಣೀಕೆರೆ ಚಿತ್ರದೇವರು ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೩. ರೆಡ್ಡಿಹಳ್ಳಿ ಚಿತ್ರದೇವರು ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೪. ಏಣಕಲ್ ಗುಡ್ಡ ಚಿತ್ರದೇವರು ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೫. ಕಳವರಹಳ್ಳಿ ಚಿತ್ರದೇವರು ಶಿರಾ ತಾಲ್ಲೂಕು ತುಮಕೂರು ಜಿಲ್ಲೆ

೬. ಅಮರಾಪುರ ಚಿತ್ರದೇವರು ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ

೭. ಬೆಜ್ಜಿಹಳ್ಳಿ ಚಿತ್ರದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೮. ನೇರ್ಲಿಗೆ ಚಿತ್ರದೇವರ

೪.೩. ಕೇತೆಲಿಂಗ

"ಕೇತೆಲಿಂಗನ ಮೂಲ ನೆಲೆ ಚಳ್ಳಕೆರೆ ತಾಲ್ಲೂಕಿನ ಚೆನ್ನಮ್ಮನಾಗತಿಹಳ್ಳಿಯಲ್ಲಿದೆ. ಇದಕ್ಕೆ 'ಕೇದಾರ'ಲಿಂಗ ಎಂಬ ಹೆಸರಿದೆ. ಇದೇ ಆಡು ಭಾಷೆಯಲ್ಲಿ ಕೇದಾರು>ಕೇತಾರ> ಕೇತ> ಕ್ಯಾತೆ ಎನಿಸಿಕೊಂಡಿರುವ ಸಾಧ್ಯತೆಯೇ ಹೆಚ್ಚಾಗಿದೆ. ಇದು ಬತವಿನ ದೇವರು ಬತ ಅಂದರೆ ವ್ರತ. ಈ ದೇವರಿಗೆ ಹುರುಳಿ ನವಣೆ ಆಗುವುದಿಲ್ಲ. ಈ ದೇವರ ಜಾತ್ರೆ ನಡೆಯುವಾಗ ಯಾರೂ ಈ ಧಾನ್ಯಗಳನ್ನು ಬಳಸುವುದಿಲ್ಲ. ಅವುಗಳನ್ನು ಹಟ್ಟಿಯಿಂದ ಹೊರಗೆ ಹಾಕಿ 'ಹುರುಳಿಬತ' 'ನವಣೆಬತ' ಆಚರಿಸುತ್ತಾರೆ. ಜಾತ್ರೆ ಮುಗಿದ ನಂತರ ಈ ಧಾನ್ಯಗಳನ್ನು ಮತ್ತೆ ಬಳಸುತ್ತಾರೆ. ಹೀಗಾಗಿ ಚೆನ್ನಮ್ಮನಾಗತಿಹಳ್ಳಿಯ ಕ್ಯಾತೆ ದೇವರ ಈ ಒಕ್ಕಲಿನವರನ್ನು 'ಅರ್ಧಬತ'ದವರು ಎಂದು ಕರೆಯುತ್ತಾರೆ. ಆದರೆ ಇದೇ ಕೇತೇ ದೇವರು ಹಿರಿಯೂರು ತಾಲ್ಲೂಕಿನ ಯರಬಳ್ಳಿಹಟ್ಟಿಯಲ್ಲಿ 'ಹಾಲುಗುಡಿದಪ್ಪ' ಎಂಬ ಹೆಸರಿನಲ್ಲಿ ಖ್ಯಾತವಾಗಿದೆ. ಇವರು ವರ್ಷದುದ್ದಕ್ಕೂ ಇವನ್ನು ಬಳಸುವುದಿಲ್ಲ! ಹಾಗಾಗಿ ಇವರನ್ನು ಪೂರ್ಣಬತದವರು ಎಂದು ಕರೆಯುತ್ತಾರೆ". *(ಶಿವಣ್ಣ ಮೀರಾಸಾಬಿಹಳ್ಳಿ, 'ಕಾಡುಗೊಲ್ಲರ ಸಂಸ್ಕೃತಿ', ಪುಟ-೫, ೨೦೦೪)*

೪.೩.೧. ಕೇತೆಲಿಂಗನ ಐತಿಹ್ಯಗಳು

ಕೇತೆಲಿಂಗನ ಐತಿಹ್ಯದ ಬಗ್ಗೆ ಮಾಹಿತಿದಾರರಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. ಏಕೆಂದರೆ ಕಾಡುಗೊಲ್ಲರಲ್ಲಿ ಪ್ರಾದೇಶಿಕ ಭಿನ್ನತೆಯು ಕಂಡುಬರುವುದರಿಂದ, ಒಂದು ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲ. ಮುಖ್ಯವಾಗಿ ಕಾಡುಗೊಲ್ಲರ ನಾಲ್ಕನೆಯ ಬೆಡಗು ಸೋಮನಗೊಲ್ಲರು ಕ್ಯಾತಪ್ಪನ್ನು ಆರಾಧನೆ ಮಾಡುತ್ತಾರೆ. ಈ ದೇವತೆಯ ಸಾಂಸ್ಕೃತಿಕ ಕೇಂದ್ರ ಚೆನ್ನಮ್ಮನಾಗತಿಹಳ್ಳಿ ಇದು ಚಳ್ಳಕೆರೆಯಿಂದ ೧೨ ಕಿ,ಮೀ ಅಂತರದಲ್ಲಿದೆ. ಸೋಮನಗೊಲ್ಲರ ಇತರ ಒಳಪಂಗಡಗಳೆಂದರೆ, ಬಮ್ಮನಗೊಲ್ಲರು, ಕೋಣನಗೊಲ್ಲರು, ಕಟ್ಟಿಗೆಗೊಲ್ಲರು, ಕೊಡತೆಗೊಲ್ಲರು ಮತ್ತು ಉಪಗಳಗೊಲ್ಲರು ಇವರ ಕಟ್ಟೆಮನೆ ತಾಳವಟ್ಟಿ

ಐತಿಹ್ಯ ೧: ಪಂಚಲಿಂಗಗಳಲ್ಲಿ ಒಂದಾದ ಕೇತೆಲಿಂಗ ಅತೀ ತುಂಟ ಸ್ವಭಾವದ್ದು. ಇದರ ತುಂಟತನವನ್ನು ಸಹಿಸದ ಶಿವ ಪಾರ್ವತಿಯರು ಭೂಲೋಕದಲ್ಲಿ ಕಾಡುಗೊಲ್ಲರ ಆರಾಧ್ಯ ದೈವವಾಗಿ ಪವಾಡಗಳನ್ನು ಮಾಡಿ ದೈವವಾಗಿ ಅಲ್ಲಿ ಇರುವಂತೆ ಆಜ್ಞೆ ಮಾಡುತ್ತಾರೆ. ನೂರಾ ಒಂದು ಲಿಂಗಗಳಲ್ಲಿಯೇ ಅತ್ಯಂತ ಶಕ್ತಿಶಾಲಿಯಾದ ಕ್ಯಾತಪ್ಪ ತಂದೆ ತಾಯಿಯರ ಮಾತನ್ನು ಮೀರಲಾರದೆ ಅವರು ಒಪಿಸಿರುವ ಕೆಲಸವನ್ನು ಮಾಡಲು ಕಾಯಕ ಯೋಗಿಯಾದ ತನ್ನ ಜೊತೆಗೆ ಕಳುಹಿಸುವಂತೆ ತಂದೆ ತಾಯಿಗಳನ್ನು ಕೇಳಿದಾಗ ಅವನ ಮಾತಿಗೆ ಪ್ರತಿಮಾತಾಡದೆ ಬಸವನನ್ನು ಕಳುಹಿಸುತ್ತಾರೆ.

ಅಲ್ಲಿಂದ ನೇರವಾಗಿ ಆಂಧ್ರಪ್ರದೇಶದ ಕಲ್ಯಾಣದುರ್ಗ ತಾಲ್ಲೂಕಿನ ಹೇಮರೆಡ್ಡಿ ಮತ್ತು ಭೀಮರೆಡ್ಡಿ ಎಂಬುವರ ಮನೆಯಲ್ಲಿ ಉಳಿದುಕೊಂಡ. ಇವನು ಬಂದಿದ್ದರಿಂದ ರೆಡ್ಡಿಯವರು ಬಡತನದಿಂದ ದೂರವಾದರು. ಶ್ರೀಮಂತಿಕೆ ಬಂದು ಆವರಿಸಿಕೊಂಡಿತು. ಇದರಿಂದಾಗಿ ಅವರಿಗೆ ಅಹಂಕಾರ ಬಂದು ದೇವರನ್ನು ಸರಿಯಾಗಿ ಪೂಜಿಸುತ್ತಿರಲ್ಲಿಲ್ಲ. ಆ ಕಾರಣದಿಂದ ಕ್ಯಾತಪ್ಪ ಅಲ್ಲಿಂದ ಹೊರಬರಲು ಕಾಯುತ್ತಿದ್ದ.

ಐತಿಹ್ಯ ೨: ದೇವರಮರುಕುಂಟೆಯ ನಿವಾಸಿ ಚಿಕ್ಕಣ್ಣ ಹೇಳುವ ಪ್ರಕಾರ ಕೇತೆಲಿಂಗನು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಯ ಸಮಾಕಾಲೀನ ಶಿವಶರಣ. ೧೨ನೆಯ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯ ಸಲುವಾಗಿ ಪ್ರಾಣಾಪಯದಿಂದ ಪಾರಾಗಲು ಗೊಲ್ಲರಹಟ್ಟಿ ಬಂದು ಜೀವಂತ ಸಮಾಧಿಯಾದ ಎಂದು ಹೇಳುತ್ತಾರೆ.

ಐತಿಹ್ಯ ೩: ತೀ ನಂ ಶಂಕರನಾರಾಯಣರು ಹೇಳುವ ಪ್ರಕಾರ ಕೇತೆಲಿಂಗ "ಕೈಲಾಸದಿಂದ ತಪ್ಪಿಸಿಕೊಂಡು ಭೂಲೋಕದಲ್ಲಿ ಭಿಕ್ಷೆ ಬೇಡುತ್ತ ಬಂದ ಅವನು, ಒಂದು ಕೈಯಲ್ಲಿ ನಾಗಬೆತ್ತ ಒಂದು ಕೈಯಲ್ಲಿ ಜೋಳಿಗೆ ಹಿಡಿದು ಬೆರಳುಗಳಲ್ಲಿ ಉಂಗುರವನ್ನು ಧರಿಸಿ ಕೊರಳಲ್ಲಿ ರುದ್ರಾಕ್ಷಿ ಸರವನ್ನು ಹಾಕಿ ತಲೆಗೂದಲನ್ನು ಗಂಟು ಹಾಕಿಕೊಂಡು ಮೈಮೇಲೆ ಲಂಗೋಟಿಯನ್ನು ಮಾತ್ರ ಧರಿಸಿಕೊಂಡು ಹೆಗಲ ಮೇಲೆ ಕರಿಯ ಕಂಬಳಿಯ ಕೊರೆಯನ್ನು ಹೊದ್ದುಕೊಂಡು ಎಲ್ಲರ ಮನೆಗಳಲ್ಲಿ ಬಿಕ್ಷೆ ಬೇಡುತ್ತ ಕಲ್ಯಾಣಪುರಕ್ಕೆ ಬಂದ" *(ತೀ. ನಂ. ಶಂಕರನಾರಾಯಣ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಪುಟ-೧೭೬, ೨೦೧೭)*

ಹೇಮರೆಡ್ಡಿ ಭೀಮರೆಡ್ಡಿಗಳ ಮನೆಯಲ್ಲಿ ಉಳಿದುಕೊಂಡ ಸಮಯದಲ್ಲಿ ರೆಡ್ಡಿಗಳ ಬಡತನವನ್ನು ದೂರಮಾಡಿ ಅವರಿಗೆ ಅಷ್ಟೈಶ್ವರ್ಯ ಕೊಟ್ಟ. ಇದರಿಂದಾಗಿ ರೆಡ್ಡಿಗಳಿಗೆ ಅಹಂಕಾರ ಬಂದು ಕ್ಯಾತಪ್ಪನನ್ನು ಉಳ್ಳಿ-ನವಣೆ ಜೋಳದ ಚೀಲದಲ್ಲಿ ಹಾಕಿ ಮುಚ್ಚಿಟ್ಟಿದ್ದರು. ಪೂಜೆ ಪುನಸ್ಕಾರ ಮಾಡದೆ ಏಡಿ ತಿನ್ನುವುದು ಗೊಡೆಗೆ ಹೊರಸುವುದು, ಕೋಳಿ ತಿನ್ನುವುದು, ಸೂತಕವಾಗಿ ಮನೆಯ ಒಳಗಿರುವುದು, ಇದನ್ನು ಕೇತೆಲಿಂಗನಿಗೆ ಸಹಿಸಿಕೊಳ್ಳಲು ಆಗುವುದಿಲ್ಲ. ಆ ಕಾರಣಕ್ಕಾಗಿ ಬೇರೆಯವರನ್ನು ಕಾಯುತ್ತಿರುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಬೊಮ್ಮನ ಗೊಲ್ಲರ ಬೊಮ್ಮಯ್ಯ ತನ್ನ ಅತ್ತಿಗೆಯೊಂದಿಗೆ ಜಗಳವಾಡಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಕಲ್ಯಾಣದುರ್ಗ ತಾಲ್ಲೂಕಿನಲ್ಲಿ ಉಳಿದುಕೊಳ್ಳುತ್ತಾನೆ. ಅಲ್ಲಿ ಒಂದು ಸೇತುವೆಯ ಮೇಲೆ ಮಲಗಿರುತ್ತಾನೆ. ಆಗ ಹೇಮರೆಡ್ಡಿ ಮನೆಯ ಸೊಸೆಯು ನೀರು ತರಲು ಹೊರಗೆ ಬಂದಾಗ ಸೇತುವೆ ಮೇಲೆ ಮಲಗಿರುವವನನ್ನು ಎಬ್ಬಿಸುತ್ತಾಳೆ. ಎಬ್ಬಿಸಿ ಯಾರು ನೀನು?ಯಾವ ಊರು? ಯಾಕೆ ಬಂದಿದ್ದೀಯ ಎಂದು ಕೇಳಿದಾಗ, ತಾನು ಅತ್ತಿಗೆಯೊಂದಿಗೆ ಜಗಳವಾಡಿ ಬಂದಿರುವ ವಿಷಯ ತಿಳಿಸಿದಾಗ, ಆಕೆಯು ತಮ್ಮ ಮನೆಯಲ್ಲಿಯ ದನ ಕಾಯಲು ಕೇಳಿದಾಗ, ಅನ್ನ ಬಟ್ಟೆ ಕೊಟ್ಟರೆ ಕಾಯುವುದಾಗಿ ಒಪ್ಪಿಕೊಳ್ಳುತ್ತಾನೆ. ಆಕೆ ಬೊಮ್ಮಣ್ಣನನ್ನು ಮನೆಗೆ ಕರೆತಂದು ಅತ್ತೆ ಮಾವಂದಿರಿಗೆ ಪರಿಚಯ ಮಾಡಿ ಈತನಿಗೆ ಅನ್ನ ವಸ್ತ್ರ ಕೊಟ್ಟರೆ ದನ ಕಾಯುತ್ತಾನೆ ಎಂದು ಹೇಳಿದಾಗ, ಅವರು ಒಪ್ಪಿಕೊಂಡು ದನಕಾಯಲು ನೇಮಿಸಿಕೊಂಡರು. ಸ್ವಲ್ಪ ದಿನದಲ್ಲಿಯೇ ಮನೆಯವರಿಗೆಲ್ಲ ಮೆಚ್ಚಿಗೆಯ

ವ್ಯಕ್ತಿಯಾದ. ದನ ಕಾದುಕೊಂಡು ಬಂದು ದೊಡ್ಡಿಗೆ ಕೂಡಿ ಹಾಕಿ ಊಟ ಮಾಡುವಂತಹ ಸಮಯದಲ್ಲಿ ಪ್ರತಿದಿನ ಕೇತಪ್ಪ ಜೋಳದ ಚೀಲದಲ್ಲಿ ಗೆಜ್ಜೆಯ ನಾದವನ್ನು ಮಾಡುತಿದ್ದ. ಇದರಿಂದಾಗಿ ಭಯ ಭೀತನಾದ ಬೊಮ್ಮಣ್ಣ, ಇದು ಯಾವುದೋ ದೆವ್ವನೊ ಪೀಡೆಯೋ ಇರಬೇಕು ಅಂದು ಮನಸ್ಸಿನಲ್ಲಿ ಅಂದುಕೊಂಡು ಮಲಗುತ್ತಾನೆ. ಆಗ ಮಧ್ಯ ರಾತ್ರಿ ಕ್ಯಾತಪ್ಪ ಬೊಮ್ಮಣ್ಣನ ಕನಸಿನಲ್ಲಿ ಬಂದು, ನಾನು ದೆವ್ವವಲ್ಲ ಪೀಡೆಯಲ್ಲ ನಾನೂ ಕ್ಯಾತಪ್ಪ ನಿನಗೆ ಒಲಿದುಕೊಂಡಿರುವುದಾಗಿ ಹೇಳಿದಾಗ, ಬೊಮ್ಮಣ್ಣನಿಗೆ ಸಂತೋಷವಾಗುತ್ತದೆ. ನಾವು ಇಲ್ಲಿರುವುದು ಬೇಡ. ಇವರು ಮೈಲಿಗೆ ಮಾಡಿಕೊಂಡು ಮನೆಯ ಒಳಗೆ ಇರುವುದರ ಜೊತೆಗೆ ಕೋಳಿ, ಏಡಿ ತಿನ್ನುತ್ತಾರೆ. ಇವರಿಗೂ ನಮಗೂ ಆಗಿಬರುವುದಿಲ್ಲ. ನಾಳೆ ಇವರು ರಾಯದುರ್ಗಕ್ಕೆ ಮದುವೆಗೆ ಹೋಗುತ್ತಾರೆ. ಆಗ ಇವರ ದನಗಳನ್ನು ಹೊಡೆದುಕೊಂಡು ನೇರವಾಗಿ ವಸಲುದಿಬ್ಬಕ್ಕೆ ಹೋಗೋಣ ಎಂದು ಹೇಳುತ್ತಾನೆ. ಬಮ್ಮಣ್ಣ ಒಪ್ಪಿಕೊಳ್ಳುತ್ತಾನೆ. ಹೇಮರೆಡ್ಡಿ ಮನೆಯವರೆಲ್ಲ ಬೊಮ್ಮಣ್ಣನ ಮೇಲೆ ನಂಬಿಕೆ ಇಟ್ಟು, ರಾಯದುರ್ಗಕ್ಕೆ ಮದುವೆಗೆ ಹೋಗುವುದಾಗಿ ಹೇಳಿ ಮನೆಯ ಜವಾಬ್ದಾರಿಯನ್ನು ಅವನಿಗೆ ವಹಿಸ ಹೋಗುವರು.

ಅವರು ಹೋಗುವುದನ್ನೇ ಕಾಯುತ್ತಿದ್ದ ಕೇತಪ್ಪ ಗೊಲ್ಲಗೌಡನ ವೇಷಧರಿಸಿ ಬೊಮ್ಮಣ್ಣನ ಮುಂದೆ ಪ್ರತ್ಯಕ್ಷವಾದ. ಮಾಹಿತಿದಾರರು ಹೇಳುವ ಪ್ರಕಾರ ತಲೆಗೆ ಬಿಳಿಯ ಪೇಟಸುತ್ತಿಕೊಂಡು ಕೈಯಲ್ಲಿ ನಾಗಬೆತ್ತ ಹಿಡಿದುಕೊಂಡು ಕಾಲಿಗೆ ಚಪ್ಪಲಿ ಹಾಕಿಕೊಂಡು ದನಕಾಯುವ ಮುದುಕನಂತೆ ಬಂದನು. ಬೊಮ್ಮಣ್ಣನಿಗೆ ಹೇಳಿ ದನ ಮತ್ತು ಕರುಗಳನ್ನು ಕಣ್ಣಿಯಿಂದ ಬಿಡಿಸಿದನು. ಇಬ್ಬರು ಸೇರಿ ರೆಡ್ಡಿಗಳ ಸಂಪತ್ತನ್ನು ದನಗಳ ರೂಪದಲ್ಲಿ ಹೊಡೆದುಕೊಂಡು ಹೋದರು. ಸ್ವಲ್ಪ ದೂರ ಹೋಗುವುದರೊಳಗಾಗಿ ಹೇಮರೆಡ್ಡಿ ಭೀಮರೆಡ್ಡಿಗಳು ಮದುವೆ ಮುಗಿಸಿಕೊಂಡು ಮನೆಗೆ ಬಂದು ನೋಡುತ್ತಾರೆ. ಮನೆಯ ಮುಂದೆ ಕರುವಿನ ಗೂಡಿನಲ್ಲಿ ಒಂದೂ ಕರು ಕಾಣವುದಿಲ್ಲ. ನಾವು ಗೊಲ್ಲರ ಹುಡುಗನನ್ನು ನಂಬಿ ಮೋಸ ಹೋದೆವೆಂದು ತಿಳಿದು ದನಗಳನ್ನು ಹುಡುಕಿಕೊಂಡು ಬರುತ್ತಾರೆ. ಅದೇ ಸಮಯಕ್ಕೆ ಸರಿಯಾಗಿ ಕೇತಪ್ಪ ಬೊಮ್ಮಣ್ಣನನ್ನು ಚಿಕ್ಕ ಬಾಲಕನ ಹಾಗೆ ಮಾಡುತ್ತಾನೆ. ನಂತರ ಕರಿಯ ದನಗಳನ್ನು ಬಿಳಿಯದನಗಳಾಗಿ ಬಿಳಿಯದನಗಳನ್ನು ಹಂಡ ಬಂಡ ದನಗಳಾಗಿ ಬಣ್ಣ ಬದಲಾಯಿಸುತ್ತಾನೆ. ಇದರಿಂದಾಗಿ ರೆಡ್ಡಿಗಳಿಗೆ ಅವರ ದನಗಳ ಗುರುತು ಸಿಗುವುದಿಲ್ಲ. ಅಲ್ಲಿಂದ ನೇರವಾಗಿ ಚಳ್ಳಕೆರೆ ತಾಲ್ಲೂಕಿನ ಪುರ್ಲಹಳ್ಳಿಯ ಹತ್ತಿರವಿರುವ ವಸಲು ದಿಬ್ಬಕ್ಕೆ ಬಂದು ದನಗಳಿಗೊಂದು ಕರುಗಳಿಗೆ ಒಂದು ಗೂಡು ಸಿದ್ದ ದನ ಮತ್ತು ಕರುಗಳನ್ನು ಅವುಗಳ ಗೂಡಿಗೆ ಕೂಡಿ ಹಾಕಿ ಬೊಮ್ಮಣ್ಣನನ್ನು ಮಚ್ಚಮುದ್ರಕ್ಕೆ ಕಳುಹಿಸುತ್ತಾನೆ. ಹಟ್ಟಿಯನ್ನು ಶುದ್ಧಗೊಳಿಸಿ ಆಗ ಹಾದಿಗೆ ಹಂದ್ರ ಬೀದಿಗೆ ಸೆಳೆಕೊಡಿಸಿ ಹಟ್ಟಿಯಲ್ಲಿರುವ ಹುರುಳಿ ನವಣೆ ಕಾಳುಗಳನ್ನು ಹಟ್ಟಿಯ ಹೊರಗೆ ಇಡಿಸಿ ವಸಲು ದಿಬ್ಬದಿಂದ ಕೇತಪ್ಪನನ್ನು ಮಚ್ಚಮುದ್ರಕ್ಕೆ ಗೊಲ್ಲಗೌಡರು ಕರೆದುಕೊಂಡು ಹೋದರು.

೪.೩.೨. ಚಿತ್ರದುರ್ಗದಲ್ಲಿ ಕೇತಪ್ಪನನ್ನು ಬಂಧಿಸಿದ್ದು

ಕರಿಯಣ್ಣ ಮೆಚ್ಚಿನ ಭಕ್ತನಾಗಿ ಕೇತಪ್ಪ ಇರುವಂತಹ ಸಮಯದಲ್ಲಿ ಚಿತ್ರದುರ್ಗದ ಭರಮಪ್ಪನಾಯಕನ ದಂಡು ಗೊಲ್ಲರಹಟ್ಟಿಯ ಮೇಲೆ ದಾಳಿ ಮಾಡುತ್ತದೆ. ಇದರಿಂದ ನೊಂದ ಕರಿಯಣ್ಣ ದೇವರ

ಮೊರೆ ಹೋಗುತ್ತಾನೆ. ಕೇತಪ್ಪ ಯಾವುದೇ ಸಮಯದಲ್ಲಿಯೂ ಹಟ್ಟಿ ಬಿಡಬೇಡಿರೆಂದು ಹೇಳಿದರೂ ಗೊಲ್ಲಗೌಡರು ಹಟ್ಟಿಯಲ್ಲಿಯ ದೇವರು ಬಿಟ್ಟು ಓಡಿಹೋಗುತ್ತಾರೆ. ಕರಿಯಣ್ಣ ಮಾತ್ರ ಭರಮಪ್ಪನ ದಂಡಿನೊಂದಿಗೆ ಹೋರಾಡಿ ಮಡಿಯುತ್ತಾನೆ. ಕೇತಪ್ಪನನ್ನು ಹೊತ್ತುಕೊಂಡು ಹೋಗಿ ಚಿತ್ರದುರ್ಗದಲ್ಲಿ ಸೆರೆಹಾಕುತ್ತಾರೆ. ಇದರಿಂದ ಕೋಪಗೊಂಡ ಕೇತಪ್ಪ ಗೌರಸಮುದ್ರದ ಮಾರಿಗೆ ಉರಿಗಣ್ಣು ಬಿಡುತ್ತಾನೆ. ಅಣ್ಣನ ಸ್ಥಿತಿಯನ್ನು ಗಮನಿಸಿದ ಮಾರಕ್ಕ ನಿಂಗಣ್ಣನಿರುವ ಜಾಗಕ್ಕೆ ಬಂದು ನನ್ನಿಂದ ಏನಾಗಬೇಕು ಎಂದು ಕೇಳಿದಾಗ ಭರಮಪ್ಪನ ವಂಶ ನಾಶವಾಗಬೇಕು. ಜೊತೆಗೆ ಚಿತ್ರದುರ್ಗವೇ ನಾಶವಾಗಬೇಕು ಎಂದು ಆಜ್ಞೆಯನ್ನು ಮಾಡುತ್ತಾನೆ.

೪.೩.೩. ಗೌರಸಮುದ್ರದ ಮಾರಮ್ಮ ಕೇತಪ್ಪನನ್ನು ಬಿಡಿಸಿದ್ದು

ಗೌರಸಮುದ್ರದ ಮಾರಮ್ಮ ಇಡೀ ಊರಿಗೆ ಪ್ಲೇಗು ಹರಡುತ್ತಾಳೆ. ಇದರಿಂದ ಇಡೀ ಊರಿಗೆ ಊರೆ ಸಾಯುತ್ತದೆ. ಇದರಿಂದ ಅಂಜಿದ ಭರಮಪ್ಪ ಈ ರೀತಿ ಆಗುವುದಕ್ಕೆ ಕಾರಣವೇನೆಂದು ಗೌರಸಮುದ್ರದ ಮಾರಮ್ಮನನ್ನು ಕಣಿ ಕೇಳಿದಾಗ ಗೊಲ್ಲರ ದೇವರಾದ ಕೇತಪ್ಪನನ್ನು ಸೆರೆ ಹಾಕಿರುವುದು ಇದಕ್ಕೆ ಕಾರಣ ಎಂದು ಹೇಳಿದಾಗ, ಭರಮಪ್ಪ ತನ್ನ ಹೆಂಡತಿ ಮಕ್ಕಳನ್ನು ಕಳೆದುಕೊಂಡಿರುತ್ತಾನೆ. ಗೊಲ್ಲರ ದೇವರನ್ನು ಪುನಃ ಅವರಿಗೆ ಕೊಟ್ಟರೆ ಮಾತ್ರ ಹೆಂಡತಿ ಮಕ್ಕಳು ಉಳಿಯುತ್ತಾರೆ. ಇಲ್ಲದಿದ್ದರೆ ನೀನೂ ಕೂಡ ಉಳಿಯುದಿಲ್ಲ ಎಂದು ಹೇಳುತ್ತಾಳೆ. ಇದರಿಂದ ಹೆದರಿದ ಭರಮಪ್ಪ ಗೊಲ್ಲಗೌಡರನ್ನು ಕರೆಸಿ ದೇವರನ್ನು ತೆಗೆದುಕೊಂಡು ಹೋಗುವಂತೆ ಹೇಳುವನು. ಆಗ ಕೇತಪ್ಪ ಹಾಗೆ ಬರಲು ಸಿದ್ದನಿರುವುದಿಲ್ಲ. ಛತ್ರಿ ಚಾಮರಗಳ ಮುಖಾಂತರ ಸಕಲ ಗೌರವ ಮರ್ಯಾದೆಯೊಂದಿಗೆ ಕಳುಸಿಕೊಟ್ಟರೆ ಮಾತ್ರ ಹೋಗುವುದಾಗಿ ಹೇಳುತ್ತಾನೆ. ಆಗ ಸಕಲ ಗೌರವ ಮರ್ಯದೆಯೊಂದಿಗೆ ವಸಲು ದಿಬ್ಬಕ್ಕೆ ಕಳುಹಿಸುತ್ತಾನೆ. ಅಲ್ಲಿಂದ ಬಂದ ಕೇತಪ್ಪ ವಸಲು ದಿಬ್ಬದಲ್ಲಿ ಉಳಿದು ಕೊಳ್ಳುತ್ತಾನೆ. ಆ ನಂತರ ಚೆನ್ನಮ್ಮನಾಗತಿಹಳ್ಳಿಯ ಗೌಡರು ಬಂದು ದೇವರನ್ನು ಶುದ್ಧಿಕರಿಸಿ ಹಟ್ಟಿಯ ಒಳಗೆ ಕರೆದುಕೊಂಡು ಹೋಗುತ್ತಾರೆ. ಇದರ ಕುರುಹಾಗಿ ವಸಲು ದಿಬ್ಬದಲ್ಲಿ ಸೋಮನಗೊಲ್ಲರು ಪ್ರತಿವರ್ಷ ಜಾತ್ರೆ ಮಾಡುತ್ತಾರೆ. ಆ ಜಾತ್ರೆಗೆ ಚಿತ್ರದುರ್ಗದ ಭರಮಪ್ಪನ ವಂಶಸ್ಥರು ಮೊದಲು ಮೀಸಲು ಕಲೆಸುತ್ತಾರೆ. ದೇವರನ್ನು ಹೊತ್ತುಕೊಂಡು ಹೋಗಲು ಮುಸ್ಲಿಮರು ಸಹಕರಿಸಿದ್ದರಿಂದ ಅವರು ಕೂಡ ಕೇತಪ್ಪನ ಒಕ್ಕಲುಗಳಾಗಿ ಪರಿವರ್ತನೆ ಹೊಂದಿದರು.

೪.೨.೪. ಕೇತಪ್ಪನ ಜಾತ್ರೆ (ಪರೀಷೆ)

ಹದಿಮೂರು ಗುಡಿಕಟ್ಟಿನ ಸೋಮನಗೊಲ್ಲರು ಸೇರಿ ಕೇತಪ್ಪನ ಜಾತ್ರೆ ಮಾಡುತ್ತಾರೆ. ಈ ಈ ಜಾತ್ರೆ ಪ್ರತಿ ವರ್ಷ ಜನವರಿಯಲ್ಲಿ ಒಂದು ತಿಂಗಳ ಕಾಲ ನಡೆಯುತ್ತದೆ. ಹದಿಮೂರು ಗುಡಿಕಟ್ಟಿನ ದೇವರುಗಳೆಂದರೆ

೧. ಚೆನ್ನಮ್ಮನಾಗತಿಹಳ್ಳಿ ಕೇತೆದೇವರು

೨. ಸೂರನಹಳ್ಳಿ ಕೇತೆದೇವರು ಮತ್ತು ನರಸಿಂಹ ದೇವರು

೩. ರಂಸೇಡು ಕೇತೆದೇವರು ಮತ್ತು ನರಸಿಂಹ ದೇವರು

೪. ಗುಂಜಿಗನೂರು ಕೇತೆದೇವರು ಮತ್ತು ನರಸಿಂಹ ದೇವರು

೫. ಬಸಾಪುರ ಕೇತೆದೇವರು ಮತ್ತು ನರಸಿಂಹ ದೇವರು

೬. ಕ್ಯಾತಗನಹಳ್ಳಿ ಕೇತೆದೇವರು ಮತ್ತು ನರಸಿಂಹ ದೇವರು

೭. ಚಿಕ್ಕೇನಹಳ್ಳಿ ಕೇತೆದೇವರು ಮತ್ತು ನರಸಿಂಹ ದೇವರು

೮. ತಿಪ್ಪಯ್ಯನ ದುರ್ಗ ಕೇತೆದೇವರು ಮತ್ತು ನರಸಿಂಹ ದೇವರು

೯. ಬಂಜಿಗೆರೆ ಈರಣ್ಣ ದೇವರು ಬತವಿನದೇವರು

೧೦. ಯಲಗಟ್ಟೆ ಕೇತೆದೇವರು ಮತ್ತು ನರಸಿಂಹ ದೇವರು

೧೧. ಬಿಲ್ಗೋಡ್ ಕೇತೆದೇವರು ಮತ್ತು ನರಸಿಂಹ ದೇವರು

೧೨. ಐಗಾರ್ಲಹಳ್ಳಿ ಕೇತೆದೇವರು ಮತ್ತು ನರಸಿಂಹ ದೇವರು

೧೩. ಕೋಡಿಹಳ್ಳಿ ಕೇತೆದೇವರು ಮತ್ತು ನರಸಿಂಹ ದೇವರು

ಕೇತಲಿಂಗ ಈ ಹದಿಮೂರು ಗುಡಿಕಟ್ಟೆಗಳ ಪ್ರಮುಖ ಅಮವಾಸ್ಯೆಯ ದೇವರು. ಇದರ ಜೊತೆಗೆ ಕದ್ರಿನರಸಿಂಹನನ್ನು ವಾರದ ದೇವರಾಗಿ ಪೂಜೆ ಮಾಡುತ್ತಾರೆ. ಈ ದೇವರುಗಳ ಜೊತೆಗೆ ಬಂಜಿಗೆರೆ ಈರಣ್ಣ. ಬಾಯಿಬತವಿನ ದೇವರು ಕರಿಯಣ್ಣ, ಸಿರಿಯಣ್ಣ ಸಿಕ್ಕಣ್ಣ ಮುಂತಾದ ಈರಗಾರ ದೇವರುಗಳು ವಸಲು ದಿಬ್ಬಕ್ಕೆ ಬಂದು ಏಳು ಜನ ಅಕ್ಕಮ್ಮಗಳ ಬಾವಿಯಲ್ಲಿ ಸ್ನಾನ ಮಾಡಿಕೊಂಡು ಗದ್ದುಗೆಗೆ ಬರುತ್ತವೆ.

ಕಾಡುಗೊಲ್ಲರು ಮತ್ತು ಇತರೆ ಸಮುದಾಯಗಳು ಜಾತ್ರೆ ಮಾಡುವುದಕ್ಕು ಸಾಕಷ್ಟು ವ್ಯತ್ಯಾಸಗಳಿವೆ. ಕಾಡುಗೊಲ್ಲರು ತಮ್ಮದೇ ಆದ ಸಂಪ್ರದಾಯ ನಂಬಿಕೆಗಳ ಮೂಲಕ ಪರಂಪರೆಯನ್ನು ಅನುಸರಿಸುತ್ತಾರೆ. ಇದು ಅವರ ಸಾಂಸ್ಕೃತಿಕ ಅನನ್ಯತೆಯನ್ನು ಹೇಳುತ್ತದೆ. ಇಲ್ಲಿ ಒಂದು ತಿಂಗಳ ತನಕ ಅನೇಕ ಆಚರಣೆಗಳು ನಡೆಯುತ್ತವೆ. ಈ ಜಾತ್ರೆ ಡಿಸೆಂಬರ್ ಕೊನೆಯ ವಾರದಿಂದ ಪ್ರಾರಂಭವಾಗಿ ಜನವರಿ ಮೂರನೆಯ ವಾರದ ವರೆಗೆ ನಡೆಯುತ್ತದೆ.

೪.೩.೫. ಹುರುಳಿ ಕೈ ತೊಳೆಯುವುದು

ಸೋಮನಗೊಲ್ಲರನ್ನು ಅರ್ಧ ಬತದವರು ಎಂದು ಗುರುತಿಸುತ್ತಾರೆ. ಇದಕ್ಕೆ ಕಾರಣ ಏನು ಇರಬಹುದು ಎಂದು ಕೇಳಿದಾಗ ಕೇತಪ್ಪ ದೇವರ ಪೂಜಾರಿ ಈ ರೀತಿ ಹೇಳುತ್ತಾನೆ. ಕಲ್ಯಾಣದುರ್ಗದಿಂದ ದೇವರನ್ನು ತರುವಾಗ ದೇವರು ಬೊಮ್ಮಣ್ಣನಿಗೆ ಈ ರೀತಿ ಹೇಳುತ್ತದೆ. 'ಹುರುಳಿ ನವಣೆ ಹೊಲವನ್ನು ತಪ್ಪಿಸಿ ಹೋದರೆ ನಿನ್ನ ಮನೆಯಲ್ಲಿ ಬಂಗಾರದ ಹೊಗೆ ಹೊರಡಿಸುವುದಾಗಿ ಹೇಳುತ್ತದೆ'. ಆ ವಿಷಯ ಮರೆತ ಬೊಮ್ಮಣ್ಣ ಹುರುಳಿಯ ಹೊಲದಲ್ಲಿ ದೇವರನ್ನು ಇಟ್ಟು ಜಲಭಾದೆ ಕಳೆದುಕೊಳ್ಳಲು ಕುಳಿತಾಗ ಆ ದೇವರು ಅವನು ಇಟ್ಟಿರುವ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಕುಳಿತು ಕೊಳ್ಳುತ್ತದೆ. ಆ

ಕಾರಣಕ್ಕಾಗಿ ಕೇತೆ ದೇವರು ಹುರುಳಿಯನ್ನು ಇಷ್ಟ ಪಡುವುದಿಲ್ಲ. ಹುರುಳಿ ಕೈತೊಳೆಯುವುದು ಎಂದರೆ ಹಟ್ಟಿಯ ಒಳಗೆ ಮನೆಯ ಒಳಗೆ ಇರುವಂತಹ ಹುರುಳಿ ನವಣೆಯನ್ನು ಹಟ್ಟಿಯ ಹೊರಗೆ ಹಾಕಿ ಮನೆಯನ್ನು ಸ್ವಚ್ಚಗೊಳಿಸುತ್ತಾರೆ. ಮನೆಯಲ್ಲಿ ಎಲ್ಲಯೂ ಒಂದು ಕಾಳು ಮತ್ತು ಹುರುಳಿ ಇರದಂತೆ ನೋಡಿಕೊಳ್ಳವುದೇ ಹುರುಳಿ ಕೈತೊಳೆಯುವುದು. ಈ ಆಚರಣೆ ಮೊದಲು ದೇವರು ಇರುವ ಹಟ್ಟಿಯಿಂದ ಪ್ರಾರಂಭವಾಗಿ ಒಂದುವಾರ ಮುಗಿಯುವುದರೊಳಗಾಗಿ ಕೇತೆದೇವರಿಗೆ ಸೇರಿದ ಒಕ್ಕಲು ಹುರುಳಿ ಕೈ ತೊಳೆಯಲೇಬೇಕು.

೪.೩.೬. ದೇವರಿಗೆ ಕಂಕಣ ಕಟ್ಟುವುದು

ಹುರುಳಿ ಕೈ ತೊಳೆದ ನಂತರ ಕಾಡುಗೊಲ್ಲರ ಪ್ರತಿಯೊಂದು ದೇವರನ್ನು ಮದಲಿಂಗನನ್ನಾಗಿ ಮಾಡಿ ಕಂಕಣ ಕಟ್ಟುವುದು ವಿಶೇಷ. ಕೇತಪ್ಪನನ್ನು ಮದಲಿಂಗ ಮಾಡುವರು. ಪೂಜಾರಪ್ಪನನ್ನೂ ಒಳಗೊಂಡು ಐದು ಜನ ಮುತ್ತೈದೆಯರು ದೇವರಿಗೆ ಹಸೆ ಬರೆದು ತಲೆಗೆ ಹಾಲು ಹಾಕುವ ಶಾಸ್ತ್ರಮಾಡಿ ಕಂಕಣ ಕಟ್ಟುತ್ತಾರೆ. ಕಂಕಣ ಕಟ್ಟಲು ಬಳಸುವ ವಸ್ತುಗಳು ಪೆಟ್ಟಿಗೆಗೆ ಸುತ್ತಲು ಹೊಸಬಟ್ಟೆ, ಪಂಚ ಕಳಶಗಳು, ಐದು ತೆಂಗಿನ ಕಾಯಿ, ಒಂದು ಗೊನೆ ಬಾಳೆಹಣ್ಣು, ೯ ಅರಿಸಿಣದಾರ, ಒಂದು ಸೇರು ಅಡಿಕೆ, ಒಂದು ಕಟ್ಟು ಎಲೆ ಧೂಪ ಮುಂತಾದವುಗಳನ್ನು ಬಳಸುತ್ತಾರೆ.

೪.೩.೭. ಗುಡಿಕಟ್ಟೆಗಳಿಗೆ ಜಾತ್ರೆಯ ಮಾಹಿತಿ ನೀಡುವುದು (ಸಾರು ಕೊಡುವುದು)

ಹದಿಮೂರು ಗುಡಿಕಟ್ಟಿನ ಪೂಜಾರಿಗಳು ಗೌಡರು ಚೆನ್ನಮ್ಮನಾಗತಿಹಳ್ಳಿಯಲ್ಲಿ ಒಂದು ಕಡೆ ಪಂಚಾಯಿತಿ ಸೇರಿ ಜಾತ್ರೆ ನಡೆಸುವ ಬಗ್ಗೆ ಚರ್ಚೆ ಮಾಡುತ್ತಾರೆ. ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಹಿರಿಯರು ಸಲಹೆ ಕೊಡುತ್ತಾರೆ. ಹದಿಮೂರು ಗುಡಿಕಟ್ಟಿನ ಗೌಡರು ಜಾತ್ರೆ ಮಾಡಲು ಬೇಕಾಗುವ ಖರ್ಚುಗಳ ಬಗ್ಗೆ ಚರ್ಚೆ ಮಾಡುತ್ತಾರೆ. ದೇವರ ಕೆಲಸಕ್ಕೆ ಬಾರದೆ ಇರುವವರಿಗೆ ೧೦೦ ರೂಪಾಯಿಗಳ ದಂಡ ವಸೂಲಿ ಮಾಡುತ್ತಾರೆ. ದೇವರ ಕೆಲಸಕ್ಕೆ ಬಂದವರಿಗೆ ೫೦ ರೂಪಾಯಿ ವಸೂಲಿ ಮಾಡುತ್ತಾರೆ. ಹಾಗಾಗಿ ದೇವರ ಕೆಲಸ ಕಾರ್ಯಗಳಿಗೆ ಪ್ರತಿಯೊಂದು ಹಟ್ಟಿಯ ಪ್ರತಿಯೊಂದು ಮನೆಯಲ್ಲಿ ಒಬ್ಬೊಬ್ಬರು ಬರಬೇಕು ಎಂಬ ನಿಯಮವಿದೆ.

೪.೩.೮. ಗುಡಿಕಟ್ಟೆಗಳಲ್ಲಿ ಹುರುಳಿ ಕೈತೊಳೆಯುವುದು

ಮೇಲೆ ಉಲ್ಲೇಖಿಸಿದಂತೆ ಹದಿಮೂರು ಗುಡಿಕಟ್ಟಿನ ಭಕ್ತರು ತಮ್ಮ ತಮ್ಮ ಹಟ್ಟಿಗಳಲ್ಲಿ ಹುರುಳಿ ಕೈತೊಳೆಯುವ ಶಾಸ್ತ್ರ ಮಾಡುತ್ತಾರೆ. ಆ ದಿನದಿಂದ ಜಾತ್ರೆ ಮುಗಿಯುವವರೆಗೆ ತಮ್ಮ ಮನೆಗಳಲ್ಲಿ ಹುರುಳಿ, ನವಣೆ ಬಳಸದಂತ ವೃತ ಹಿಡಿಯುತ್ತಾರೆ. ಹೊರಗಡೆ ಹೋದವರು ಹಟ್ಟಿಯ ಒಳಗೆ ಬಂದಾಗ ಕೈ ಕಾಲು ಮುಖ ತೊಳೆದುಕೊಂಡು ಮನೆಯನ್ನು ಪ್ರವೇಶಿಸಬೇಕು ಎಂಬ ನಿಯಮವಿದೆ.

೪.೩.೯. ಪೂಜೆಯ ಮರವನ್ನು ಕಡಿಯುವುದು

ಪೂಜೆಯ ಮರವೆಂದರೆ ಆಲದಮರ ಇಲ್ಲವೆ ಹತ್ತಿಯ ಮರವಾಗಿರಬೇಕು. ಈ ಮರವನ್ನು ಕಡಿಯುವವರನ್ನು ಮರವಯ್ಯರು ಎಂದು ಕರೆಯುತ್ತಾರೆ. ಈ ಕೆಲಸ ಮಾಡುವವರು ಚಳ್ಳಕೆರೆ

ಹತ್ತಿರವಿರುವ ಕಾಟಪ್ಪನ ಹಟ್ಟಿಯವರು. ಇವರ ಕುರಿತಾಗಿ ಕೇತೆಲಿಂಗನ ಕಾವ್ಯದಲ್ಲಿ ಈ ರೀತಿ ಪದ ಹಾಡುತ್ತಾರೆ.

೧.ತುಪ್ಪ ಬಾನವ ಉಂಡು ಇಪ್ಪತ್ತೇಳ್ಳವು ಮೆದ್ದು
ಚಿಮುಗೊಡಲಿ ಅವರ ಹೆಗಲೇರಿ॥ ತಂದನ್ನ ತಾನೋ
ಚಿಮುಗೊಡಲಿ ಅವರ ಹೆಗಲೇರಿ ಒಪ್ಪವುಳ್ಳ
ಮರವು ಕಡಿದಾರೆ ॥ ತಂದನ್ನ ತಾನೋ ॥
೨ಹಾಲು ಬಾನವನುಂಡು ನಲವತ್ತೆಳ್ಳೆವ ಮೆದ್ದು
ಹೂವಿನಕೊಡಲಿ ಅವರ ಹೆಗಲೇರಿ॥ ಮಾವುಗಳ
ಹಾಯವುಳ್ಳ ಮರವ ಕಡಿದಾರೆ ತಂದನ್ನ ತಾನೋ

(ವಿರುಪಾಕ್ಷಪ್ಪ ಜಿ. 'ಕ್ಯಾತಪ್ಪ ಜಾತ್ರೆಯ ಸಾಂಸ್ಕೃತಿಕ ಅಧ್ಯಯನ' ಕಿರುಪ್ರಬಂಧ ಪುಟ ೪೪, ೨೦೦೯)

ಈ ಮರವಯ್ಯಗಳು ಪೂಜೆಯ ಮರವನ್ನು ಹೆಗಲ ಮೇಲೆ ಹೊತ್ತುಕೊಂಡು ಬರುತ್ತಾರೆ. ದೇವರು ಒಪ್ಪಿರುವ ಮರವು ಯಾರ ಹೊಲದಲ್ಲಿದ್ದರೂ ಹೊಲದವರನ್ನು ಕೇಳಿ ಕಡಿದುಕೊಂಡು ಬರುತ್ತಾರೆ. ನಾನು ಕ್ಷೇತ್ರ ಕಾರ್ಯ ಕೈಗೊಂಡ ಸಮಯದಲ್ಲಿ ಚಿಕ್ಕೇನಹಳ್ಳಿ ಗೊಲ್ಲರಹಟ್ಟಿಯ ಬಳಿ ಅತ್ತಿಯ ಮರ ಕಡಿದುಕೊಂಡು ಬರಲಾಯಿತು. ಮರ ಕಡಿಯಲು ಮರವಯ್ಯನ ವಂಶಸ್ಥರು ಮನೆಗೊಬ್ಬರಂತೆ ತಪ್ಪದೆ ಬರಬೇಕು ಮತ್ತೆ ಅಷ್ಟೆ ಕಟ್ಟು ನಿಟ್ಟಾಗಿ ಉಪವಾಸ ವ್ರತ ಆಚರಿಸಬೇಕು. ಒಂದು ಹನಿ ನೀರೂ ಕೂಡ ಕುಡಿಯದಂತೆ ಮರ ಕಡಿಯುವವರೆಗೆ ಊಟಮಾಡುವಂತಿಲ್ಲ. ತಲೆಗೆ ಬಿಳಿಯ ರುಮಾಲು ಸುತ್ತುತ್ತಾರೆ. ಬಿಳಿಯ ಅಂಗಿ, ಹಿರಿಯರು ಕಚ್ಚೆಪಂಚೆ ಹಾಕಿದರೆ ಹುಡುಗರು ಸಾಧಾರಣ ಬಿಳಿ ಪಂಚೆ ಉಡುತ್ತಾರೆ. ಕಾಲಲ್ಲಿ ಚಪ್ಪಲಿ ಹಾಕುತ್ತಾರೆ. ಇದಕ್ಕೆ ಕಾರಣ ಕೇಳಿದಾಗ ಮಾಹಿತಿದಾರರು ಮತ್ತು ತೀ ನಂ ಶಂಕರನಾರಾಯಣರವರು ಉಲ್ಲೇಖಿಸಿರುವಂತೆ "ಶ್ರೀಮಂತನಾದ ಮಣೆಗಾರನ ಮನೆಯ ಮುಂದೆ ನಿಂತು ಭಿಕ್ಷೆ ಕೇಳಿದ. ಆ ಸಂದರ್ಭದಲ್ಲಿ ಮಣೆಗಾರ ಮತ್ತು ಅವನ ಹೆಂಡತಿ ಊಟ ಮಾಡುತ್ತಿದುದ್ದರಿಂದ ಕೂಗಿದ ತಕ್ಷಣ ಭಿಕ್ಷೆ ನೀಡದೆ ತಡಮಾಡಿದರು. ಕೋಪಗೊಂಡ ಕೇತೆಲಿಂಗ ಮಣೆಗಾರನೊಡನೆ ಜಗಳವಾಡಿದ. ಮಣೆಗಾರನಿಗೆ ಸಿಟ್ಟು ಬಂದು ಅಲ್ಲಿಯೆ ಗೋಡೆಗೆ ತಗುಲಿ ಹಾಕಿದ್ದ ಬಾರುಕೋಲಿನಿಂದ ಕೇತೇಲಿಂಗನಿಗೆ ನಾಲ್ಕು ಬಾರಿಸಿದ. ಆಗ ಕೇತೆಲಿಂಗ ತನ್ನ ಜೋಳಿಗೆಯಲ್ಲಿದ್ದ ಮಂತ್ರದ ಭೂದಿಯನ್ನು ತೆಗೆದು ಅವನ ಮತ್ತು ಅವನ ಹೆಂಡತಿಯ ಮೇಲೆ ಎರಚಿದಾಗ ಅವರಿಬ್ಬರು ನಾಯಿಗಳಾಗಿ ಪರಿವರ್ತಿತರಾದರು. ಆಗ ಅವರಿಬ್ಬರೂ ತಾವು ಮಾಡಿದ ಮಹಾಪರಾದವನ್ನು ಕ್ಷಮಿಸಿ ತಮ್ಮನ್ನು ಉದ್ದಾರ ಮಾಡಬೇಕೆಂದು ಬೇಡಿಕೊಂಡರು. ಆದರೆ ಕೇತೆಲಿಂಗ ತಾನು ಅಷ್ಟಕ್ಕೆ ಬಿಡುವುದಿಲ್ಲವೆಂದು ಅವರ ಧರ್ಮವನ್ನು ಸುಲಿದು ಹಂಚಿಕಡ್ಡಿಯಿಂದ ಪಾದರಕ್ಷೆ ಹೊಲಿದು ಕಾಲಿಗೆ ಮೆಟ್ಟಿಕೊಂಡು ಓಡಾಡುವುದಾಗಿ ಬೆದರಿಕೆ ಹಾಕಿದ" *(ತೀ. ನಂ. ಶಂಕರನಾರಾಯಣ,*

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ಪುಟ ೧೭೬ ಮತ್ತು ೧೭೭, ೨೦೧೭) ಈ ಕಾರಣದಿಂದ ಕೇತೆದೇವರ ಪೂಜಾರಿ ಹೊಸಚಪ್ಪಲಿ ಹಾಕಿಕೊಂಡು ದೇವರನ್ನು ಹೊತ್ತುಕೊಳ್ಳುತ್ತಾನೆ. ಮರವಯ್ಯರು ಕಾಲಿಗೆ ಚಪ್ಪಲಿಯನ್ನು ಹಾಕಿಕೊಂಡು ಮರ ಕಡಿಯಲು ಹೊಗುತ್ತಾರೆ. ಮರವನ್ನು ಶಾಸ್ತ್ರೋಕ್ತವಾಗಿ ಪೂಜೆಮಾಡಿ ಮರವಯ್ಯರ ಮುಖ್ಯಸ್ಥ ಮೊದಲು ಮೂರು ಕಡಿತ ಕೊಡಲಿಯಿಂದ ಕಡಿದ ನಂತರ ಉಳಿದವರು ಮರವನ್ನು ಕಡಿಯುತ್ತಾರೆ. ಮರಕಡಿಯುವುದು ಎಂದರೆ ದೊಡ್ಡಮರವನ್ನು ಬೇರು ಸಹಿತ ಕಡಿಯುವುದಿಲ್ಲ. ಮರದ ಕೊಂಬೆಯನ್ನು ಮಾತ್ರ ಕಡಿಯುತ್ತಾರೆ. ಇದರ ಜೊತೆಗೆ ಒಂದು ಬೇವಿನ ಮರದ ಕೊಂಬೆಯನ್ನು ಕಡಿದುಕೊಂಡು ಬರುತ್ತಾರೆ. ಮರಕಡಿಯುವುದು ಮುಗಿದ ತಕ್ಷಣ ಊಟ ಅಥವಾ ಪ್ರಸಾದ ತಯಾರಾಗಿರುತ್ತದೆ. ಅಲ್ಲಿ ಸೇರಿರುವ ಎಲ್ಲ ಭಕ್ತರು ಪ್ರಸಾದ ಸ್ವೀಕರಿಸಿ ಆ ನಂತರ ಕೆಲವರು ದೇವರ ಮರದ ಹಿಂದೆ ನಡೆದುಕೊಂಡು ಬಂದರೆ ಉಳಿದವರು ಟ್ರ್ಯಾಕ್ಟರ್, ಎತ್ತಿನ ಗಾಡಿ, ಮೋಟರ್ ಸೈಕಲ್ ಮುಂತಾದ ವಾಹನಗಳಲ್ಲಿ ಬರುತ್ತಾರೆ. ಒಟ್ಟು ಪೂಜೆಯ ಮರವನ್ನು ಒಳಗೊಂಡಂತೆ ೨೫ ಮರದ ಬೊಂಬುಗಳನ್ನು ಕಡಿದುಕೊಂಡು ಬರುತ್ತಾರೆ. ಪೂಜೆಯ ಮರವನ್ನು ಹೊರತು ಪಡಿಸಿ ಉಳಿದ ಬೊಂಬು ಅಥವಾ ಗಳಗಳನ್ನು ಗಾಡಿಯಲ್ಲಿ ಇಲ್ಲವೇ ಟ್ರ್ಯಾಕ್ಟರ್‌ಗಳಲ್ಲಿ ಹಾಕಿಕೊಂಡು ಬರುತ್ತಾರೆ.

೪.೩.೧೦. ಕಳ್ಳಿಕಡಿಯುವುದು

ದೇವಸ್ಥಾನದ ಸುತ್ತಲುಕಳ್ಳಿ ಬೇಲಿ ಕಟ್ಟಲು ಕಳ್ಳಿ ಕಡಿಯುವರು. ಕಾಡುಗೊಲ್ಲರು ಕಲ್ಲಿಗಿಂತ ಹೆಚ್ಚಾಗಿ ಕಳ್ಳಿಯನ್ನು ಅವಲಂಬಿಸಿದ್ದಾರೆ. ಆಧುನಿಕ ಕಾಲದಲ್ಲಿಯೂ ಕೆಲವು ಗೊಲ್ಲರ ಹಟ್ಟಿಗಳ ಸುತ್ತಲು ಪಾರಿ ಬೇಲಿ ಇರುವುದು ಕಂಡುಬರುತ್ತದೆ. ಆಂಧ್ರದಲ್ಲಿ ಈಗಲೂ ಸಹ ಹಟ್ಟಿಯ ಸುತ್ತಲೂ ಪಾರಿಬೇಲಿ ಇರುವುದನ್ನು ನೋಡಿದ್ದೇನೆ. ಕೇತಪ್ಪನ ಜಾತ್ರೆ ಪ್ರಾರಂಭವಾದ ನಂತರ ದೇವರು ಇರುವ ಹಟ್ಟಿಯಲ್ಲಿ ದೇವರ ಗುಡಿಯ ಸುತ್ತ ಕಲ್ಲಿನ ಕಾಂಪೌಂಡ್ ಇದ್ದರು ಕೂಡ ಗುಡಿಯ ಸುತ್ತ ಜಾಲಿಯ ಮುಳ್ಳಿನ ಬೇಲಿಯುನ್ನು ಶಾಸ್ತ್ರೋಕ್ತವಾಗಿ ಹಾಕುತ್ತಾರೆ. ಪಂರಂಪರೆಯನ್ನು ಶಾಸ್ತ್ರಕ್ಕಾಗಿ ಉಳಿಸಿಕೊಂಡಿರುವುದು ಕಂಡುಬರುತ್ತದೆ.

೪.೩.೧೧. ಕೇತೆದೇವರ ಗುಡಿಗೆಕಳ್ಳಿ ಹಾಕುವುದು

'ಬಾಳೆ ಎಲಿಯಂಗೆ ಬಗರಿ ತಿರುವಿದಂಗೆ

ಏರೇರಿ ಕಳ್ಳೆ ಮಗುಲಿಗೆ ತಂದನ್ನ ತಾನೋ

ಏರೇರಿ ಕಳ್ಳೆ ಮಗುಲಿಗೆ ನಿಂಗಣ್ಣನ

ಏರಿ ನೋಡ್ಯಾನೆ ಪರಿಸೆಯ ತಂದನ್ನ ತಾನೋ'*(ವಿರುಪಾಕ್ಷಪ್ಪ ಜಿ. 'ಕ್ಯಾತಪ್ಪ ಜಾತ್ರೆಯ ಸಾಂಸ್ಕೃತಿಕ ಅಧ್ಯಯನ' ಕಿರುಪ್ರಬಂಧ ಪುಟ ೪೯, ೨೦೦೯)*

ಕೇತೆದೇವರು ಒಕ್ಕಲುಗಳು ಮನೆಗೊಂದರಂತೆ ಬಂದು ಚನ್ನಮ್ಮನಾಗತಿಹಳ್ಳಿಯಲ್ಲಿ ಒಂದು ಕಡೆ ಕೊಡುವುದರಿಂದ ದೇವರ ಮೇಲಿನ ಪದ್ಯಗಳನ್ನು ಹೇಳಿಕೊಂಡು ಉತ್ಸಾಹ ಭರಿತರಾಗಿ ಕೇತೆ ದೇವರ ಗುಡಿಯ ಸುತ್ತಲು ಕಳ್ಳಿ ಕಟ್ಟುತ್ತಾರೆ. ಅವರಿಗೆ ಅದು ಸಂತೋಷದ ವಿಷಯವಾಗಿರುತ್ತದೆ.

೪.೩.೧೨. ಜೂಜಿನ ಕಳ್ಳಿ:

ಚನ್ನಮ್ಮನಾಗತಿಹಳ್ಳಿಯಲ್ಲಿ ದೇವಸ್ಥಾನದ ಸುತ್ತಲು ಕಳ್ಳಿ ಹಾಕಿಸಿ ಮರುದಿವಸ ಪುರ್ಲಹಳ್ಳಿಯ ಗ್ರಾಮದ ರಿ ಸಂ ನಂ ೫೬-೫೭ರಲ್ಲಿ ವಸಲು ದಿಬ್ಬದಲ್ಲಿ ಕೇತೆದೇವರಿಗೆ ಕಳ್ಳಿಯಿಂದಲೆ ಗುಡಿ ಕಟ್ಟುತ್ತಾರೆ. ಪೂಜೆಯ ಮರವನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಅದರ ಜೊತೆಗೆ ಬೇವಿನ ಕಂಬಕ್ಕು ಮೇಲಿನ ಸಿಪ್ಪೆ ತೆಗೆದು ಅದರ ಸುತ್ತಲು ಅರಿಸಿಣ ಹಚ್ಚಿ ಅದನ್ನು ಊಳಲು ಗುಂಡಿತೆಗೆದು ಆ ಗುಂಡಿಗೆ ಸುತ್ತಲು ನೂರಾವೊಂದು ತಂಬಿಟ್ಟು, ನೂರಾವೊಂದು ಎಲೆ, ನೂರಾವೊಂದು ಅಡಿಕೆ ನೂರಾವೊಂದು ಬಾಳೆಹಣ್ಣು, ಇಟ್ಟು ಜಾಡಿ ಹಾಸಿ ಜಾಡಿಯ ಮೇಲೆ ಕೊಡಲಿಯನ್ನಿಟ್ಟು ಕೇತೆ ದೇವರ ಪೂಜಾರಿ ಪೂಜೆ ಮಾಡುತ್ತಾನೆ. ಇದನ್ನು ನೋಡಲು ಸುತ್ತ ಮುತ್ತ ಇರುವ ಕಾಡುಗೊಲ್ಲರಲ್ಲದೆ ಇತರೆ ಸಮುದಾಯದವರು ಬಂದು ವಸಲು ದಿಬ್ಬದಲ್ಲಿ ಸೇರುತ್ತವೆ. ಬೆಳಗಿನ ಸಮಯ ೭.೩೦ ರಿಂದ ೮.೩೦ ರವರೆಗೆ ಈ ಕೆಲಸ ನಡೆಯುತ್ತದೆ. ಪೂಜೆ ಮಾಡುವುದನ್ನೆ ಕಾಯುತ್ತಿರುವ ಜನರು ಪೂಜೆ ಮಾಡಿ ಬೇವಿನ ಮರ ನಿಲ್ಲುವುದೇ ತಡ ಆಗ ಇಗ ಅನ್ನುವುದರೊಳಗಾಗಿ ಸುತ್ತಲು ಇರುವಂತಹ ಜನರು ಕಳ್ಳಿಯಿಂದ ಗುಡಿ ಸಿದ್ದಪಡಿಸುತ್ತಾರೆ. ನೊಡುಗರಿಗಂತೂ ಅದೊಂದು ರೋಮಾಂಚನದ ಸಂಗತಿಯಾಗಿರುತ್ತದೆ. ಏಕೆಂದರೆ ಯಾರೊಬ್ಬರು ಕಾಲಲ್ಲಿ ಚಪ್ಪಲಿ ಹಾಕಿಕೊಳ್ಳದೆ ಬರಿ ಮೈಯಲ್ಲಿ ಬಾರೆಯ ಕಳ್ಳಿಯಿಂದ ಗುಡಿಯ ರೂಪದಲ್ಲಿ ಕಟ್ಟುತ್ತಾರೆ.

೪.೩.೧೩. ಕಳಶ ಸ್ಥಾಪನೆ

ಈ ಆಚರಣೆಗಳನ್ನು ಪದ್ಯಗಳಿಂದ ತಿಳಿದುಕೊಳ್ಳುವುದಕ್ಕಿಂತ ಕಣ್ಣಾರೆ ನೋಡಿದರೆ ಆಗುವ ಆನಂದವೇ ಬೇರೆ. ಬಾರೆ ಕಳ್ಳಿಯಿಂದ ಗುಡಿ ಕಟ್ಟಿದ ನಂತರ ಗುಡಿಯ ಮೇಲೆ ಕಂಚಿನ ಕಳಶ ಸ್ಥಾಪನೆ ಮಾಡುತ್ತಾರೆ. ಆ ಕಳಶ ಸ್ಥಾಪನೆಯನ್ನು ಎಲ್ಲರಿಗೂ ಮಾಡಲು ಬಿಡುವುದಿಲ್ಲ. ಕೋಣನಗೊಲ್ಲರ ವೀರಗಾರರು ಮಾತ್ರ ಕೇತೆ ದೇವರಿಗೆ ಬಾರೆ ಕಳ್ಳಿಯ ಗುಡಿಗೆ ಕಳಶ ಸ್ಥಾಪನೆ ಮಾಡಬೇಕು. ಅಲ್ಲಿಗೆ ಆ ಕೆಲಸ ಮುಗಿಯುತ್ತದೆ. ಅಂದು ಸಂಜೆ ಬಂಜಗೆರೆಯಿಂದ ಶ್ರೀ ವೀರಣ್ಣ ದೇವರು, ಶ್ರೀ ಬತವಿನ ದೇವರು ಇವುಗಳು ಕ್ಯಾತಗೊಂಡನಹಳ್ಳಿಗೆ ಬಂದು ಸೇರುತ್ತವೆ. ಕ್ಯಾತಗೊಂಡನಹಳ್ಳಿಯಿಂದ ಬಂಜಿಗೆರೆ ಈರಣ್ಣ ಬತವಿನ ದೇವರು ಐಗಾರ್ಲಹಳ್ಳಿ ಶ್ರೀ ತಾಳಿದೇವರು ಚನ್ನಮ್ಮಗಾಗತಿಹಳ್ಳಿಯ ಕೇತೆದೇವರ ದೇವಸ್ಥಾನಕ್ಕೆ ಬರುತ್ತವೆ. ಅಲ್ಲಿಂದ ಎಲ್ಲರು ಕೇತೆ ದೇವರ ಪೂಜಾರಿಯ ಮನೆಯಲ್ಲಿ ಊಟ ಮಾಡಿ ಕ್ಯಾತೆಲಿಂಗನನ್ನು ಒಳಗೊಂಡಂತೆ ಎಲ್ಲ ದೇವರುಗಳು ನೇರವಾಗಿ ವಸಲು ದಿಬ್ಬದಲ್ಲಿರುವ ಅಕ್ಕಮ್ಮಗಳ ಬಾವಿಯ ಬಳಿ ಬಂದು ಗದ್ದಿಗೆಯಾಗುತ್ತವೆ.

೪.೩.೧೪. ಗಂಗಮ್ಮನ ಪೂಜೆ

ಚನ್ನಮ್ಮನಾಗತಿಹಳ್ಳಿಯಿಂದ ಬಂದ ದೇವರುಗಳು ಗದ್ದಿಗೆಮಾಡಿ ಮೊದಲು ಗಂಗೆಯ ಪೂಜೆಯನ್ನು ಅಕ್ಕಮ್ಮಗಳ ಬಾವಿಗೆ ಮಾಡುತ್ತವೆ. ಅಲ್ಲಿ ಪೂಜೆಗೆ ಬಳಸುವ ವಸ್ತುಗಳೆಂದರೆ ಮೂರು ಮಡಕೆಗಳು, ಐದು ಎಲೆ, ಐದು ಅಡಿಕೆ, ಐದು ಉಂಡೆ ತಂಬಿಟು, ಐದು ಬಾಳೆಹಣ್ಣು, ಮೂರು ತೆಂಗಿನ ಕಾಯಿ, ಐದು ಹಂಗುದಾರ ಮುಂತಾದವುಗಳನ್ನು ಕ್ರಮವಾಗಿ ಜೋಡಿಸಿಟ್ಟು ಪೂಜೆ ಮಾಡುತ್ತಾರೆ. ಎಲ್ಲ

ಪೂಜಾರಿಗಳು ಕೈಗೆ ಹಂಗುದಾರ ಕಟ್ಟಿಕೊಳ್ಳುತ್ತಾರೆ. ಪೂಜೆ ಮಾಡಿದ ನಂತರ ಮೂರು ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಸಿ ಆ ನೀರಿನ ಮೂಲಕ ದೇವರ ವಸ್ತುಗಳನ್ನು ತೊಳೆಯುತ್ತಾರೆ. ಸುಮಾರು ರಾತ್ರಿ ಎಂಟು ಗಂಟೆಯವರೆಗೆ ಎಲ್ಲ ದೇವರುಗಳನ್ನು ತೊಳೆದು ಪೆಟ್ಟಿಗೆಯನ್ನು ಕಲಾತ್ಮಕವಾಗಿ ಕಟ್ಟುತ್ತಾರೆ. ಪೆಟ್ಟಿಗೆಯ ಸುತ್ತಾ ಕಟ್ಟಲು ರೇಷ್ಮೆಯ ಸೀರೆ ಬಳಸುತ್ತಾರೆ. ಇದರ ಜೊತೆಗೆ ಬೆಳ್ಳಿಯ ಮುಖಪದ್ಮ, ಬಂಗಾರದ ಮುಖಪದ್ಮ, ಬೆಳ್ಳಿಯ ನಾಗರ ಹೆಡೆ, ಬಂಗಾರದ ತಾಳಿ ಕಟ್ಟುತ್ತಾರೆ. ಬೆಳ್ಳಿಯ ಛತ್ರಿಗಳನ್ನು ಕೂಡ ಇಡುತ್ತಾರೆ. ಸಾಕಷ್ಟು ಹೂವುಗಳನ್ನು ಹಾಕಿರುತ್ತಾರೆ. ಗಂಗೆ ಪೂಜೆ ನೋಡಲು ಸಾಕಷ್ಟು ಭಕ್ತರು ಸೇರುತ್ತಾರೆ. ನಂತರ ದಾಸೋಹವಿರುತ್ತದೆ. ಎಲ್ಲರು ಊಟಮಾಡಿ ದೇವರನ್ನು ಕಳ್ಳಿಗುಡಿಯ ಹತ್ತಿರ ಬಿಟ್ಟು ತಮ್ಮ ಮನೆಗಳಿಗೆ ಹೋಗುತ್ತಾರೆ. ಇದೊಂದು ಅದ್ಭುತ ಕ್ಷಣ. ರಾತ್ರಿ ಒಂಬತ್ತು ಗಂಟೆಗೆ ದೇವರು ಗದ್ದಿಗೆ ಬಿಟ್ಟು ಏಳುತ್ತವೆ. ಆಗ ಅನೇಕ ಭಕ್ತರು ತಮ್ಮ ಕುಂದು ಕೊರತೆಗಳನ್ನು ದೇವರ ಬಳಿ ಹೇಳಿಕೊಳ್ಳತ್ತಾರೆ. ದೆವ್ವ ಹಿಡಿದವರಿಗೆ ದೆವ್ವಬಿಡಿಸುತ್ತದೆ ಒಟ್ಟಾರೆ ಯಾವುದೇ ಕಾಯಿಲೆ ಇದ್ದರೂ ಬಗೆ ಹರಿಸುವುದಾಗಿ ದೇವರು ಹೇಳುತ್ತದೆ. ಭಕ್ತರು ಸಹ ಅದನ್ನು ನಂಬಿದ್ದಾರೆ. ನಂತರ ಎಲ್ಲ ದೇವರುಗಳು ವಸಲು ದಿಬ್ಬದಲ್ಲಿ ನಿರ್ಮಾಣ ಮಾಡಿರುವ ಬಾರೆ ಕಳ್ಳಿಯ ಗುಡಿಯಲ್ಲಿ ಗದ್ದಿಗೆಯಾಗುತ್ತವೆ.

೪.೩.೧೫. ಹುತ್ತದ ಪೂಜೆ

ಕಾಡುಗೊಲ್ಲರು ಸಾಮಾನ್ಯವಾಗಿ ಪ್ರಾಚೀನ ಸಂಸ್ಕೃತಿಯಾದ ನಾಗಾರಾಧನೆಯನ್ನು ಹೊಂದಿದ್ದರು. ಏಕೆಂದರೆ ಪ್ರತಿಯೊಂದು ದೇವರಿಗೂ ನಾಗರ ವಿಗ್ರಹವನ್ನು ಮಾಡಿಸುತ್ತಾರೆ. ನಾಗಪ್ಪ ಹುತ್ತದಲ್ಲಿ ಇರಬಹುದು ಎಂಬ ಕಾರಣಕ್ಕಾಗಿ ಅಥವಾ ಕೇತಪ್ಪ ಗೊಲ್ಲರಹಟ್ಟಿಯನ್ನು ಪ್ರವೇಶಿಸಲು ಬಂದಾಗ ನಾಗಪ್ಪ ತಡೆಯುತ್ತದೆ. ಆ ಕಾರಣಕ್ಕಾಗಿ ಮೊದಲ ಪೂಜೆಯನ್ನು ಹುತ್ತಕ್ಕೆ ಸಲ್ಲಿಸಿ ಆ ನಂತರ ಉಳಿದ ಕಾರ್ಯಗಳನ್ನು ಮಾಡುತ್ತಾರೆ. ಹುತ್ತದ ಪೂಜೆ ಮಾಡುವ ಬಗೆ ಈ ರೀತಿ ಇದೆ, ಹುತ್ತಕ್ಕೆ ಅಕ್ಕಮ್ಮಗಳ ಬಾವಿಯಿಂದ ತಂದ ನೀರನ್ನು ಚಿಮುಕಿಸಿ ಆ ನಂತರ ಹುತ್ತದ ಸುತ್ತಲು ನೂರಾ ಒಂದು ವಿಳ್ಯೆಯ ಎಲೆಯನ್ನು ಜೋಡಿಸಿಟ್ಟು, ನೂರಾ ಒಂದು ಅಡಿಕೆ ಇಟ್ಟು ನೂರಾ ಒಂದು ಬಾಳೆಹಣ್ಣು, ನೂರಾ ಒಂದು ಉತ್ತತ್ತಿ ನೂರಾಒಂದು ತಂಬಿಟ್ಟು ಇಟ್ಟು, ಹದಿಮೂರು ಗುಡಿಕಟ್ಟಿನ ಪೂಜಾರಿಗಳು ಬಾಯಿಗೆ ಬಟ್ಟೆ ಕಟ್ಟಿಕೊಂಡು ಹುತ್ತದ ಸುತ್ತಲು ನಾಲ್ಕು ದಿಕ್ಕಿಗೆ ಪೂಜೆಮಾಡುತ್ತಾರೆ. ಪೂಜೆ ಮುಗಿದ ನಂತರ ಅಲ್ಲಿ ಸೇರಿರುವ ಎಲ್ಲ ಗುಡಿಕಟ್ಟಿನ ಗೌಡರು ಹಾಗೂ ಪೂಜಾರಿಗಳಿಗೂ ಮಡಿಲು ತುಂಬುತ್ತಾರೆ. ಉಳಿದವುಗಳನ್ನು ಭಕ್ತರಿಗೆ ಹಂಚುತ್ತಾರೆ.

೪.೩.೧೬. ಕೋಣದ ಪೂಜೆ

ಕೋಣ ಎಂದರೆ ಗುಂಡಿ ಅಂದರೆ ಕಂಬವನ್ನು ಊಳಲು ತೆಗೆಯುವ ಗುಂಡಿಯನ್ನು ಕೋಣ ಎಂದು ಕರೆಯುತ್ತಾರೆ. ಈ ಗುಂಡಿಯ ಸುತ್ತ ಅಕ್ಕಮ್ಮಗಳ ಬಾವಿಯ ನೀರನ್ನು ಚಿಮುಕಿಸಿ, ಆ ನಂತರ ಕಂಬಳಿ ಗದ್ದಿಗೆ ಹಾಸಿ, ಕೋಣದ ಸುತ್ತಲು ಹುತ್ತದ ಸುತ್ತ ಇಟ್ಟಂತೆ ವಿಳ್ಯೆಯ ಎಲೆಯನ್ನ ಜೋಡಿಸಿ

ಅದರಲ್ಲಿ ನೂರಾವೊಂದು ಅಡಿಕೆ, ನೂರಾವೊಂದು ಬಾಳೆಹಣ್ಣು, ನೂರಾವೊಂದು ಉತ್ತತ್ತಿ ನೂರೊಂದು ತಂಬಿಟ್ಟು ಇಟ್ಟು ಎಳ್ಳುಸಿಗಣೆ ಮುಂತಾದವುಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ಈ ಆಚರಣೆಯನ್ನು ನೋಡಲು ಹದಿಮೂರು ಗುಡಿಕಟ್ಟಿನ ಭಕ್ತರು ಬಂದಿರುತ್ತಾರೆ. ಇಲ್ಲಿ ಹೆಚ್ಚು ಜನ ಸಂದಣಿ ಇರುತ್ತದೆ. ಈ ಪೂಜೆಯನ್ನು ಕೇತೆದೇವರ ಪೂಜಾರಿ ಮಾಡಿದ ನಂತರ ಉಳಿದ ಹನ್ನೆರಡು ಗುಡಿಕಟ್ಟಿನ ಪೂಜಾರಿಗಳು ಪೂಜೆ ಮಾಡುತ್ತಾರೆ. ಕೊಣದ ಪೂಜೆ ಮಾಡಲು ಕಾರಣವೇನೆಂದು ಕೇಳಿದರೆ ಕೇತೆ ದೇವರ ಪೂಜಾರಿ ಚಂದ್ರಣ್ಣ ಈ ರೀತಿ ಹೇಳುತ್ತಾರೆ. ಸೋಮನಗೊಲ್ಲರಲ್ಲಿ ಕೋಣಗೊಲ್ಲರು ಎಂಬ ಉಪಬೆಡಗಿದೆ. ಅದು ಸೃಷ್ಟಿಯಾಗಲು ಕಾರಣ ಕೊಣ. ಹಾಗಾಗಿ ಅದರ ನೆನಪಿಗಾಗಿ ಈ ಪೂಜೆಯನ್ನು ಮಾಡುವುದಾಗಿ ಹೇಳುತ್ತಾರೆ. ಆ ಕತೆಯನ್ನು ಸಂಕ್ಷಿಪ್ತವಾಗಿ ಹೇಳುವುದಾರೆ, ಬೊಮ್ಮಣ್ಣ ಮತ್ತು ಅವನ ಅಣ್ಣ ಬರಗಾಲವನ್ನು ಕಳೆದು ಬರಲು ಬೇರೊಂದು ಊರಿಗೆ ಹೋದಾಗ, ಅಲ್ಲಿ ಉಪ್ಪಾರ ಸ್ತ್ರೀಯೊಂದಿಗೆ ಸಂಬಂಧ ಹೊಂದುತ್ತಾನೆ. ಆಕೆ ಗರ್ಭಧರಿಸಿದಾಗ ಹೇಳದೆ ಕೇಳದೆ ಬಿಟ್ಟು ಹೋಗುತ್ತಾನೆ. ಆಗ ಆ ಊರಿನ ಯಜಮಾನರು ಪಂಚಾಯಿತಿ ಸೇರಿಸಿ ಬೊಮ್ಮಣ್ಣನೊಂದಿಗೆ ತನ್ನ ಊರಿಗೆ ಕಳುಹಿಸುತ್ತಾರೆ. ಆಗ ಅವಳಿಗೆ ಒಂದು ಗಂಡು ಮಗು ಜನಿಸುತ್ತದೆ. ಆ ಮಗುವಿಗೆ ತಮ್ಮಣ್ಣ ಎಂದು ನಾಮಕರಣ ಮಾಡುತ್ತಾರೆ. ಇವನು ಉಪ್ಪಾರ ಹೊಟ್ಟೆಯಲ್ಲಿ ಹುಟ್ಟಿರುವ ಕಾರಣ ಇವರನ್ನು ಹಟ್ಟಿಯ ಒಳಗೆ ಸೇರಿಸಿರುವುದಿಲ್ಲ. ಇದೇ ಸಂದರ್ಭದಲ್ಲಿ ಗೊಲ್ಲರ ಹಟ್ಟಿಗೆ ಪ್ರತಿನಿತ್ಯ ಒಂದು ಕೋಣ ದಾಳಿ ಮಾಡುತ್ತಿರುತ್ತದೆ. ಆ ಕೋಣವನ್ನು ಕೊಂದವರಿಗೆ ಕೇಳಿದ್ದನ್ನು ಕೊಡುವುದಾಗಿ ಢಂಗೂರ ಸಾರಿದಾಗ ಅದನ್ನು ಹೊಡೆಯುವುದಾಗಿ ತಮ್ಮಣ್ಣ ಒಪ್ಪಿಕೊಳ್ಳುತ್ತಾನೆ. ಕೊಟ್ಟ ಮಾತಿನಂತೆ ಕೋಣವನ್ನು ಹೊಡೆದ. ಆಗ ಊರಿನ ಹಿರಿಯರು ಏನು ಬೇಕು ಕೇಳು ಎಂದು ಹೇಳಿದಾಗ ತನಗೆ ಕುಲಕ್ಕೆ ಸೇರಿಸಿಕೊಂಡರೆ ಅಷ್ಟೆ ಸಾಕು ನೀವು ಏನು ಕೊಡುವುದು ಬೇಡ ಎಂದು ಹೇಳುತ್ತಾನೆ. ಅವರು ಕುಲ ಪಡೆದ ನೆನಪಿಗಾಗಿ ಕೋಣದ ಪೂಜೆ ಮಾಡುತ್ತೇವೆ ಎಂದು ಹೇಳುತ್ತಾರೆ.

೪.೩ ೧೭. ಸಪ್ತ ಮಾತ್ರಿಕೆಯರ ಪೂಜೆ (ಏಳು ಮಂದಿ ಅಕ್ಕಮ್ಮಗಳ ಪೂಜೆ)

ಕೇತೆದೇವರ ಜಾತ್ರೆ ನಡೆಯುವುದರ ಜೊತೆಗೆ ಅಕ್ಕಮ್ಮಗಳ ಪೂಜೆಯನ್ನು ಮಾಡುತ್ತಾರೆ. ಕಾಡುಗೊಲ್ಲರು ಸಪ್ತ ಮಾತ್ರಿಕೆಯನ್ನೇ ಅಕ್ಕಮ್ಮಗಳು ಎಂದು ಹೇಳುತ್ತಿರುವುದು ಇಲ್ಲಿ ಕಂಡು ಬರುತ್ತದೆ. ಕೆಲ ಪ್ರದೇಶಗಳಲ್ಲಿ ಸಪ್ತ ಮಾತ್ರಿಕೆಯರನ್ನು ಏಳು ತಾಯಮ್ಮ, ಏಳು ಮಕ್ಕಳ ತಾಯಮ್ಮ ಎಂದು ಕರೆಯುವುದನ್ನು ಗಮನಿಸಬಹುದು. ಇದು ಮಾತೃದೇವತೆಗಳ ಆರಾಧನೆಯ ಸಂಕೇತ. ಈ ಅಕ್ಕಮ್ಮಗಳ ಬಗ್ಗೆ ಒಂದು ಕತೆ ಇದೆ. ಈ ಅಕ್ಕಮ್ಮಗಳು ಯಾರು ಎಲ್ಲಿಂದ ಬಂದವರು ಇವರಿಗೂ ಕೇತಪ್ಪನಿಗೂ ಏನು ಸಂಬಂಧ ಎಂದು ಮಾಹಿತಿದಾರರನ್ನು ಕೇಳಿದಾಗ, ಮಾಹಿತಿದಾರರು ಹೇಳುವ ಪ್ರಕಾರ ಕನ್ನೆಯ ಬಂಡೆಯಲ್ಲಿ ಇರುವ ಬಾವಿಯಲ್ಲಿ ಈಜಾಡಲು ೭ ಜನ ಅಕ್ಕಮ್ಮಗಳು ಅಂದರೆ ದೇವಕನ್ನಿಕೆಯರು ದೇವಲೋಕದಿಂದ ಬರುತ್ತಿದ್ದರು. (ಸಪ್ತಮಾತ್ರಿಕೆಯರು) ಇವರು ಅಲ್ಲಿಯೆ ನೆಲೆಗೊಂಡ ನಿಂಗಣ್ಣನನ್ನು ಗುರುತಿಸಿ ಅವನ ಬಳಿಯೇ ಉಳಿಯುತ್ತಾರೆ. ಆಗ ಇವರ ಭಕ್ತಿಗೆ ಮೆಚ್ಚಿ ಕೇತಪ್ಪ ಇವರಿಗೆ ವರಗಳನ್ನು ಕೊಡುತ್ತಾನೆ. ಅವರು ನಾವು ಮತ್ತೆ ದೇವಲೊಕಕ್ಕೆ ಹೋಗುವುದಿಲ್ಲ ಎಂದು ಇಲ್ಲಿಯೇ ನಿಮ್ಮ ಸೇವೆ

ಮಾಡಿಕೊಂಡಿರುವುದಾಗಿ ಹೇಳಿದಾಗ, ಕೇತಪ್ಪ ಅವರು ಭೂಲೊಕದಲ್ಲಿ ನೆಲೆಸಲು ಅವಕಾಶ ಮಾಡಿಕೊಡುತ್ತಾನೆ. ಅವರಿಗೆ ಮೊದಲ ಪೂಜೆ ಸಲ್ಲುವಂತೆ ಮಾಡುತ್ತಾನೆ. ಈ ಅಕ್ಕಮ್ಮಗಳ ವಿಶೇಷತೆ ಎಂದರೆ ಇವರು ಹಲವಾರು ಕಾಯಿಲೆಗಳನ್ನು ವಾಸಿ ಮಾಡುತ್ತಾರೆ, ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ ಕೊಡುತ್ತಾರೆ ಎಂದು ಗೊಲ್ಲ ಸಮುದಾಯ ನಂಬಿರುವುದರಿಂದ ಇದು ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

೪.೩.೧೮. ಸಪ್ತ ಮಾತ್ರಿಕೆಯರ ವಿಶೇಷತೆ (ಅಕ್ಕಮ್ಮಗಳ ವಿಶೇಷತೆ)

ಈ ಬಾವಿಯಲ್ಲಿ ದೇವಕನ್ಯೆಯರು ವಾಸವಾಗಿರುವುದರಿಂದ ಆ ಬಾವಿಯನ್ನು ಅಕ್ಕಮ್ಮಗಳ ಬಾವಿ ಎಂದು ಕರೆಯುತ್ತಾರೆ. ಕೇತಪ್ಪ ತಾನು ಆಂಧ್ರದಿಂದ ಬಂದ ಮೇಲೆ ತನ್ನ ಬೆತ್ತದಿಂದ ತೋಡಿದ್ದಾನೆಂಬ ನಂಬಿಕೆ ಕಾಡುಗೊಲ್ಲರಲ್ಲಿದೆ. ಈ ಬಾವಿಗೆ ತೀರ್ಥಯಾತ್ರೆಯ ಸ್ಥಾನವಿದೆ. ಇಲ್ಲಿ ಕೇತಪ್ಪನಿಗೂ ಮತ್ತು ದೇವಕನ್ಯೆಯರಿಗೂ ಸಂಬಂಧ ಕಲ್ಪಿಸಿರುವುದು ಕಂಡುಬರುತ್ತದೆ. ಅಂದರೆ ಮೊದಲು ಕಾಡುಗೊಲ್ಲರು ಮಾತೃದೇವತ ಆರಾಧಕರಾಗಿದ್ದು ನಂತರ ಪಿತೃಪ್ರಧಾನ ಆರಾಧಕರಾಗಿರುವ ಸಾಧ್ಯತೆಗಳೆ ಹೆಚ್ಚು ಕಂಡುಬರುತ್ತವೆ. ಪುರಷ ಪ್ರಾಬಲ್ಯ ಜಾಸ್ತಿಯಾದಂತೆ ಸ್ತ್ರೀ ದೇವತೆಗಳು ತನ್ನ ಅಸ್ತಿತ್ವ ಕಳೆದುಕೊಂಡಿರುವುದು ಗಮನಾರ್ಹ ವಿಚಾರ. ಒಬ್ಬ ಬುಡಕಟ್ಟು ದೇವರು ದೇವಲೋಕದ ದೇವಕನ್ಯೆಯರನ್ನೇ ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆ ಎಂದರೆ. ಅವರ ಸಾಮಾನ್ಯವಾಗಿ ದೇವಕನ್ಯೆಯರಾಗಿರುವುದಿಲ್ಲ. ಅವರು ಸಮುದಾಯದ ಮಹಿಳೆಯರು ಅಷ್ಟೇ ಅಲ್ಲ ಅವರು ಮಹಿಳೆಯರನ್ನು ದೇವತೆಯಂತೆ ನೋಡಿಕೊಳ್ಳುತ್ತಿದ್ದರು. ಆ ಕಾರಣದಿಂದ ಯಾವಾಗ ಅವರ ಅಸ್ತಿತ್ವ ಕಡಿಮೆಯಾಯಿತೋ ಆಗ ಅವರಿಗೂ ದೇವಲೋಕಕ್ಕೂ ಸಂಬಂಧ ಕಲ್ಪಿಸಿದರು.

ಪರಮೇಶ್ವರನೇ ಲೊಕ ಕಲ್ಯಾಣಕ್ಕಾಗಿ ಜುಂಜಪ್ಪನ ರೂಪದಲ್ಲಿ ಅವತರಿಸಿ ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸಲು ಕಳುಸಿರುತ್ತಾನೆ. ಜುಂಜಪ್ಪನ ಕತೆಯಲ್ಲಿ ಬರುವ ಮಾರಮ್ಮ ತಂಗಿಯಾಗಿ ಬರುವುದರ ಜೊತೆಗೆ ಇತರೆ ಮಾರಿಯರು ತಂಗಿಯರಾಗಿ ಬರುತ್ತಾರೆ. ಅದೇ ರೀತಿ ಕೇತಪ್ಪದೇವರಿಗೂ ಮಾರಕ್ಕ ತಂಗಿಯಾಗಿ ಬರುತ್ತಾಳೆ. ಪ್ರತಿಯೊಬ್ಬ ಸ್ತ್ರೀ ಪುರುಷರು ಅಕ್ಕಮ್ಮಗಳ ಬಾವಿಯಲ್ಲಿ ಮುಳುಗಿ ಅಕ್ಕಮ್ಮಗಳ ಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ.

ಶಿಷ್ಟ ಪರಂಪರೆಯವರು ದೊಡ್ಡ ದೊಡ್ಡ ನದಿಗಳಿಗೆ ತೀರ್ಥಯಾತ್ರೆ ಕೈಗೊಂಡರೆ ಜನಪದರು ತಮ್ಮ ಸಮುದಾಯದ ದೇವರು ತೆಗೆಸಿರುವ ಬಾವಿಯ ನೀರಿನಲ್ಲಿಯೆ ಸ್ನಾನಮಾಡಿ ತೀರ್ಥಯಾತ್ರೆ ಮುಗಿಸುತ್ತಾರೆ. ಅಂದರೆ ಜನಪದರದು ಆಡಂಭರದ ತೀರ್ಥಯಾತ್ರೆಯಲ್ಲ. ಅವರು ತಾವು ಯಾವ ರೀತಿ ಇರುವರೋ ಹಾಗೆಯೇ ಶಿಷ್ಟ ಪರಂಪರೆಗೆ ಪರ್ಯಾಯವಾಗಿ ಬೇರೊಂದು ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಕೇತಪ್ಪ ದೇವರ ಜಾತ್ರೆಯಲ್ಲಿ ಬರುವ ಅಕ್ಕಮ್ಮಗಳು ಯಾವುದೇ ಪವಾಡ ಮಾಡುವುದಿಲ್ಲ. ಜನರ ನಂಬಿಕೆ ಆ ರೀತಿಯಿದೆ. ದೇವರ ಪ್ರದಕ್ಷಿಣೆ ಮಾಡುವುದರಿಂದ ತಮ್ಮ ಭಾರವೆಲ್ಲ ದೇವರ ಮೇಲೆ ಹಾಕಿ ಮನಸ್ಸು ಹಗುರ ಮಾಡಿಕೊಳ್ಳುತ್ತಾರೆ. ಚಿಂತೆಯಿಂದ ಮುಕ್ತಿ

ಪಡೆಯುತ್ತಾರೆ. ಅವರ ಆರೋಗ್ಯ ಕೆಟ್ಟಿದ್ದರೂ ಸರಿಹೋಗುತ್ತದೆ. ಇದನ್ನು ಪವಾಡವೆಂದು ಭಾವಿಸಿ ತಾವು ತಪ್ಪು ಮಾಡಿದಾಗ ಮೀಸಲು ಕಟ್ಟಿಕೊಳ್ಳುವುದು ಅವರ ವಾಡಿಕೆ.

೪.೩.೧೯ ಮೀಸಲು ಕಟ್ಟುವುದು:

ಬುಡಕಟ್ಟು ಸಮುದಾಯಗಳಲ್ಲಿ ಮೀಸಲು ಕಟ್ಟಿಕೊಳ್ಳುವುದೆಂದರೆ ಹಾಲು, ತುಪ್ಪ, ಗಿಣ್ಣ, ದುಡ್ಡು ಕಾಳುಗಳು ಮುಂತಾದವು ಮೀಸಲಿನ ವಸ್ತುಗಳು. ಮೀಸಲು ಯಾವ ಸಂದರ್ಭದಲ್ಲಿ ಕಟ್ಟಿಕೊಳ್ಳುತ್ತಾರೆಂದರೆ, ಆರೋಗ್ಯ ಸರಿಯಿಲ್ಲದಿರುವಾಗ, ಯಾವುದಾರೂ ಸಮಸ್ಯೆ ಎದುರಾದಾಗ ಬಗೆ ಹರಿಯದ ಕಷ್ಟಗಳ ಬಂದಾಗ, ತಾವು ತಪ್ಪು ಮಾಡಿದ್ದೇವೆ ಎಂಬ ಭಾವನೆಯುಂಟಾದಾಗ, ತಾವು ಸಾಕಿಕೊಂಡಿರುವ ಹಸು, ಕುರಿ, ಮೇಕೆ, ಎಮ್ಮೆ ಮುಂತಾದವು ಕಳೆದು ಹೋದಾಗ ಅಥವಾ ತಾವು ಮೊದಲೆ ನಿರೀಕ್ಷಿಸಿದ ಕರುವನ್ನು ಹಾಕಿದಾಗ, ಕುರಿ ಮರಿ ಈದಾಗ ಮೀಸಲು ಕಟ್ಟಿಕೊಳ್ಳುವುದರ ಮೂಲಕ ಜಾತ್ರೆಯ ಸಮಯದಲ್ಲಾಗಬಹುದು ಇಲ್ಲವೆ ಅವರ ದೇವರ ವಾರದಂದು ದೇವರಿಗೆ ಕೊಟ್ಟು ಬರುತ್ತಾರೆ. ಅದು ಪೂಜಾರಿಯ ಪಾಲಾಗುತ್ತದೆ. ಹಸು ಕರು ಹಾಕಿದಾಗ ಮೊದಲು ಕರೆದ ಹಾಲನ್ನು ಗಿಣ್ಣ ಎಂದು ಕರೆದು ದೇವರಿಗೆ ಅರ್ಪಿಸುತ್ತಾರೆ. ಈ ಕಲ್ಪನೆ ಇತರ ಸಮುದಾಯಗಳಿಗಿಂತ ಗೊಲ್ಲರಲ್ಲಿ ಅಧಿಕವಾಗಿದೆ. ಕೆಲವು ದೇವರುಗಳಿಗೆ ಹಸು ಕುರಿಗಳನ್ನು ಬಿಟ್ಟಿರುತ್ತಾರೆ. ವಾರದಲ್ಲಿ ಒಂದು ದಿನ ದೇವರ ಹೆಸರು ಹೇಳಿ ಕರುವನ್ನು ಹಾಗೆ ಉಂಡು ಬಿಡುತ್ತಾರೆ. ಅಲ್ಲಿ ಅವರು ದೇವರನ್ನು ಕರುವಿನ ರೂಪದಲ್ಲಿ ನೋಡುತ್ತಾರೆ.

ಮೀಸಲು ಕಟ್ಟಿಕೊಳ್ಳುವುದು ಪರಂಪರೆಯಿಂದ ಮುಂದುವರೆದುಕೊಂಡು ಬಂದಿದೆ. ಸಾಮಾನ್ಯವಾಗಿ ನಮ್ಮ ಜನಪದರು ಈಗಲೂ ಹಳ್ಳಿಗಳಲ್ಲಿ ಒಂದು ರೂಪಾಯಿ ಇಲ್ಲವೇ ಎರಡುರೂಪಾಯಿ ಮೀಸಲು ಎಂದು ದೇವರ ಹೆಸರು ಹೇಳಿ ದೇವರಿಗೆ ಕೈ ಮುಗಿದು ಪೂಜೆ ಮಾಡಿ ತಮಗೆ ಬಂದಿರುವ ಕಷ್ಟ ಪರಿಹಾರವಾಗಲೆಂದು ಕಟ್ಟಿಕೊಳ್ಳುತ್ತಾರೆ. ಅದು ಚಿಕ್ಕ ಮಕ್ಕಳಿಗೆ ಕೈಗೆ ಸಿಗಬಾರದು ಎಂದು ಮನೆಯಲ್ಲಿ ಬಳಸುವ ನೆಲವು ಹಗ್ಗಕ್ಕೆ ಕಟ್ಟುತ್ತಿದ್ದರು. ನೆಲವು ಎಂದರೆ ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ಎಲ್ಲರ ಮನೆಯಲ್ಲಯೂ ಇರುತಿತ್ತು. ಈಗ ಕಣ್ಮರೆಯಾಗಿವೆ ಎಂದು ಹೇಳಬಹುದು. ಇದನ್ನು ಹಾಲು, ಮೊಸರು, ತುಪ್ಪ ಇವುಗಳನ್ನು ಬೆಕ್ಕಿನ ಕಾಟದಿಂದ ತಪ್ಪಿಸಲು ಇರಬಹುದು. ಚಿಕ್ಕಮಕ್ಕಳು ದುಡ್ಡನ್ನು ಕೆಳಗೆ ಇಟ್ಟರೆ ಅದು ದೇವರದ್ದೆಂದರೂ ಬಿಡುವುದಿಲ್ಲ. ಆದುದರಿಂದ ಅದನ್ನು ಈ ರೀತಿಯ ಉಪಾಯ ಮಾಡಿದ್ದಾರೆ. ಆದರೂ ಕೆಲವು ಮಕ್ಕಳು ಮೀಸಲು ಕಟ್ಟಿರುವ ದುಡ್ಡಿನಿಂದ ತಿಂಡಿ ತಿಂದಿರುವ ಘಟನೆಗಳು ಸಾಕಷ್ಟಿವೆ. ಇವತ್ತನ ಸಂದರ್ಭದಲ್ಲಿಯೂ ಮೀಸಲು ಕಟ್ಟಿರುವ ದುಡ್ಡು ಪೂಜಾಯುಗಳ ಪಾಲಾಗುವುದನ್ನು ನೋಡಬಹುದು. ಜನಪದರು ತಮ್ಮ ಮಕ್ಕಳು ತಿಂದರೆ ಸಂತೋಷ ಪಡದವರು ಪೂಜಾರಿ ತಿಂದರೆ ಸಂತೋಷ ಪಡುತ್ತಾರೆ. ಇಂತಹ ಮೀಸಲು ಹಣದಿಂದಲೆ ಪೂಜಾರಿಯು ತಮ್ಮ ಸಂಸಾರವನ್ನು ಯಾವುದೇ ಕಷ್ಟಗಳಿಲ್ಲದೆ ಸಾಗಿಸುತ್ತಾರೆ. ಯಾರಿಗಾದರೂ ಹಣದ ಸಮಸ್ಯೆ ಬಂದರೂ ಪೂಜಾರಿಗೆ ಹಣದ ಸಮಸ್ಯೆ ಬರುವುದಿಲ್ಲ.

ಅಕ್ಕಮ್ಮಗಳ ಬಾವಿಯಲ್ಲಿ ಯಾವುದೇ ಕಾಲಕ್ಕೂ ನೀರು ಖಾಲಿಯಾಗುವುದಿಲ್ಲ ಎಂಬ ಪ್ರತೀತಿ ಇದೆ. ಏಕೆಂದರೆ ಅದು ಬಂಡೆಯ ಮೇಲೆ ಇರುವುದರಿಂದ ಬಂಡೆಯ ನೀರು ಮೂರು ಕಾಲಗಳಲ್ಲಿಯೂ ಇರುತ್ತವೆಂದು ಹಿರಿಯರು ಹೇಳುತ್ತಾರೆ. ಬಂಡೆಗಳ ಸಂದುಗಳಿಂದ ನೀರು ಯಾವಾಗಲೂ ಹರಿಯುತ್ತಿರುತ್ತದೆ.

ಸರ್ವರೋಗಗಳಿಗೆ ನೀರೆ ಮದ್ದು ಎನ್ನುವ ರೀತಿಯಲ್ಲಿ ಅದರ ಪವಾಡ ಇಲ್ಲಿ ಹರಡಿದೆ. ಎಂತಹ ಭೀಕರ ರೋಗ ಬಂದರೂ ಆ ನೀರನ್ನು ಕುಡಿದರೆ ಆಥವಾ ಮೈ ಮೇಲೆ ಹಾಕಿಕೊಂಡರೆ ಬಂದಿರುವ ರೋಗ ಬಯಲಾಗಿ ಹೋಗುತ್ತದೆ. ಆದುದರಿಂದ ಜಾತ್ರೆಗೆ ಬಂದ ಪ್ರತಿಯೊಬ್ಬರು ಮೊದಲು ಮಾಡುವ ಕೆಲಸವೆಂದರೆ ಅಕ್ಕಮ್ಮ ಬಾವಿಗಳ ನೀರನ್ನು ಮೈಮೇಲೆ ಹಾಕಿಕೊಂಡು, ದೇವರ ಗುಡಿಯನ್ನು ಮೂರು ಸುತ್ತು ಸುತ್ತುತ್ತಾರೆ. ಕಾಡುಗೊಲ್ಲರು ಕಾಯಿಲೆಗಳು ಬಂದರೂ ಆಸ್ಪತ್ರೆಗೆ ಹೋಗುವುದು ಕಡಿಮೆ. ಆ ಬಾವಿಯ ನೀರನ್ನು ಕುಡಿದು ಕಾಯಿಲೆ ವಾಸಿಮಾಡಿಕೊಳ್ಳವುದಾಗಿ ಹೇಳುತ್ತಾರೆ.

ಇದಕ್ಕೆ ವೈಜ್ಞಾನಿಕ ಕಾರಣವೆಂದರೆ ಮಳೆ ಬಂದಾಗ ನೀರು ಅನೇಕ ಕಡೆಗಳಿಂದ ಹರಿದುಕೊಂಡು ಬರುತ್ತದೆ. ಆಗ ಮಣ್ಣಿನಲ್ಲಿ ಯಾವ ಗುಣವಿರುತ್ತದೆಯೋ ಆಥವಾ ಯಾವ ಸಸ್ಯದಲ್ಲಿ ಯಾವ ಗುಣವಿರುತ್ತದೋ ಹೇಳಲಿಕ್ಕೆ ಬರುವುದಿಲ್ಲ. ನೀರು ಹರಿದುಕೊಂಡು ಬರುವಂತಹ ಸಮಯದಲ್ಲಿ ಎಲ್ಲಾ ರೋಗ ನಿರೋಧಕ ಅಂಶಗಳನ್ನು ತನ್ನಲ್ಲಿ ಕರಗಿಸಿಕೊಂಡು ಬರುತ್ತದೆ. ಆದ್ದರಿಂದ ಆ ನೀರು ಕುಡಿದವರಿಗೆ ಯಾವ ಕಾಯಿಲೆ ಇದ್ದರೂ ವಾಸಿಯಾಗುತ್ತದೆ. ಹಿಂದೆ ಯಾಕೆ ರೋಗದ ಹಾವಳಿ ಕಡಿಮೆ ಇತ್ತು ಎಂದರೆ ಅವರು ಯಾವಾಗಲೂ ಹರಿಯುವ ನೀರು ಕುಡಿಯುತ್ತಿದ್ದರು. ಅದರಿಂದಾಗಿ ರೋಗಗಳಿಂದ ಮುಕ್ತರಾಗಿರುತ್ತಿದ್ದರು. ಜನಪದರು ಈಗಲು ವೈದ್ಯರಿಗಿಂತಲೂ ಉತ್ತಮವಾದ ಪಾಂಡಿತ್ಯವನ್ನು ಪಡೆದವರು ಇದ್ದಾರೆ. ಅವರು ಮನಷ್ಯರಿಗೆ, ಪ್ರಾಣಿಪಕ್ಷಿಗಳಿಗೆ ಯಾವುದೋ ಸಸ್ಯದಿಂದ ಔಷಧಿಯನ್ನು ಮಾಡಿಕೊಡುವುದರ ಮೂಲಕ ರೋಗ ನಿಯಂತ್ರಣ ಮಾಡುತ್ತಾರೆ. ವೇದಗಳ ಕಾಲದಲ್ಲಿಯೇ ಗಿಡ ಮೂಲಿಕೆಗಳ ಬಗ್ಗೆ ಚರ್ಚೆಯಾಗಿದೆ. ಮನಷ್ಯನ ಆರೋಗ್ಯ ಕಾಪಾಡುವಲ್ಲಿ ನೀರಿನಂತೆ ಗಿಡಮೂಲಿಕೆಗಳು ಮುಖ್ಯ.

೪.೩.೨೦. ಹಾವಿನ ಗೂಡು ಪೂಜೆ

ಸಪುರಲಳ್ಳಿಯ ವಸಲು ದಿಬ್ಬದಲ್ಲಿ ಕೇತಪ್ಪ ಕಲ್ಯಾಣದುರ್ಗದಿಂದ ಬೊಮ್ಮಣ್ಣ ಜೊತೆಯಲ್ಲಿ ಬಂದವನು ನೇರವಾಗಿ ಹಟ್ಟಿ ಪ್ರವೇಶ ಮಾಡದೇ ವಸಲು ದಿಬ್ಬದಲ್ಲಿ ಹಾವಿನಗೂಡು ಮತ್ತು ಕರುವಿನ ಗೂಡು ನಿರ್ಮಾಣ ಮಾಡಿ ಹಾವಿಗೂಡಿಗೆ ಹಾವುಗಳನ್ನು ಕರುವಿನ ಗೂಡಿಗೆ ಕರುಗಳನ್ನು ಕೂಡಿ ಹಾಕಿ ಆ ನಂತರ ಮಚ್ಚಮುದ್ರಕ್ಕೆ ಹೋಗುತ್ತಾನೆ. ಆ ಕಾರಣದಿಂದ ಇಂದಿಗೂ ವಸಲು ದಿಬ್ಬದಲ್ಲಿ ಹಾವಿನ ಗೂಡು ಮತ್ತು ಕರುವಿನ ಗೂಡು ಇರುವುದನ್ನು ಕಾಣಬಹುದು. ಇದರಿಂದಾಗಿ ಪ್ರತಿವರ್ಷ ಜಾತ್ರೆ ನಡೆಯುವಾಗ ಹಾವಿನ ಮತ್ತು ಕರುವಿನ ಗೂಡನ್ನು ಪೂಜೆ ಮಾಡುತ್ತಾರೆ. ಅಕ್ಕಮ್ಮ ಬಾವಿಯ

ನೀರನ್ನು ಚಿಮುಕಿಸಿ ಮೂರು ಎಲೆ, ಮೂರು ಅಡಿಕೆ ಎರಡು ಬಾಳೆಹಣ್ಣು, ಎರಡು ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ. ಇದು ಪಶುಪಾಲಕರು ಪಶುಗಳಿಗೆ ಯಾವ ರೀತಿ ಮನ್ನಣೆಯನ್ನು ಕೊಟ್ಟಿದ್ದರು ಎಂಬುದನ್ನು ಸೂಚಿಸುತ್ತದೆ. ಇವರು ಜಾತ್ರೆ ಮಾಡಲು ಇದು ಒಂದು ಕಾರಣವಿರಬಹುದು.

೪.೩.೨೧. ನವಣೆ ವ್ರತ ಅಳಿಯುವುದು

ಕೇತೆ ದೇವರ ಒಕ್ಕಲನ್ನು ಅರ್ಧಬತದವರೆಂದು ಕರೆಯುತ್ತಾರೆ. ಏಕೆಂದರೆ ಇವರು ಒಂದು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಹುರುಳಿ ನವಣೆ ಬತ ಹಿಡಿಯುತ್ತಾರೆ. ಆರು ತಿಂಗಳು ಕಾಲ ಹುರುಳಿ ನವಣೆ ಬತವನ್ನು ಹಿಡಿದು ಯಾವುದೇ ಕಾರಣಕ್ಕೂ ಹುರುಳಿ ನವಣೆಯನ್ನು ಆಹಾರವಾಗಿ ಸ್ವೀಕರಿಸುವಂತಿಲ್ಲ. ಉಳಿದ ಆರು ತಿಂಗಳಲ್ಲಿ ಸ್ವೀಕರಿಸಲು ಅವಕಾಶವಿದೆ. ಕೇತೆದೇವರ ಜಾತ್ರೆಯಲ್ಲಿ ಪ್ರಮುಖವಾಗಿ ಆಚರಣೆಯಲ್ಲಿರುವ ಪದ್ಧತಿ ಎಂದರೆ ನವಣೆ ಕುಟ್ಟುವುದು. ಇದೊಂದು ಆಚರಣೆಯಾಗಿ ಮಾತ್ರ ಉಳಿದುಕೊಂಡು ಬಂದಿದೆ. ಇದು ಬಹುಶಃ ಯಾವ ದೇವರ ಜಾತ್ರೆಯಲ್ಲಿಯೂ ಈ ಆಚರಣೆ ಇಲ್ಲ. ಈ ಪದ್ಧತಿಯಲ್ಲಿ ನವಣೆ ಕುಟ್ಟಲು ಬಳಸುವುದು ಮೂರು ತರಹದ ಒರಳುಗಳಿಂದ.

೧. ಕಲ್ಲು ಒರಳು

೨. ಮಣ್ಣು ಒರಳು

೩. ಕಟ್ಟಿಗೆ ಒರಳು.

೧. ಕಲ್ಲು ಒರಳು: ಇದು ಸಾಮಾನ್ಯವಾಗಿ ಎಲ್ಲರು ನೋಡಿರುವಂತಹದ್ದು ಮತ್ತು ಎಲ್ಲರು ಬಳಸುವಂತದ್ದು. ಇದನ್ನು ಮನೆಗಳಲ್ಲಿ ಮಾತ್ರವಲ್ಲದೆ ದೇವರ ಗುಡಿಯಲ್ಲಿ ಇವುಗಳ ಬಳಕೆ ಇದೆ. ಕಲ್ಲಿನ ಒರಳಿನ ಜಾತ್ರೆಯಲ್ಲಿ ಅದರ ಉಪಯೋಗವೆಂದರೆ ಬತ ಅಥವಾ ವ್ರತ ಹಿಡಿಯುವ ಸಂದರ್ಭದಲ್ಲಿ ಬಳಕೆಯಾಗುತ್ತದೆ. ಜಾತ್ರೆ ಪ್ರಾರಂಭವಾದ ಮೊದಲ ದಿನವೇ ಬತ ಪ್ರಾರಂಭವಾಗುತ್ತದೆ. ಊರಿನ ೧೦ ಜನ ಹೆಣ್ಣು ಮಕ್ಕಳು ಒನಕೆ ತೆಗೆದುಕೊಂಡು ಬಾಯಿಗೆ ಬಟ್ಟೆ ಕಟ್ಟಿಕೊಂಡು ನವಣೆ ಇಲ್ಲವೇ ಹುರುಳಿಯನ್ನು ಕುಟ್ಟಬೇಕಾಗುತ್ತದೆ.

೨. ಕಟ್ಟಿಗೆ ಒರಳು: ಇದು ಸಹ ಅಷ್ಟೇ ಪ್ರಮುಖವಾದುದು. ಇದನ್ನು ಬಳಸುವುದು ಪೂಜಾರಿಗಳು ಮಾತ್ರ, ಈ ಜಾತ್ರೆಯಲ್ಲಿ ಹದಿಮೂರು ಗುಡಿಕಟ್ಟಿನ ಪೂಜಾರಿಗಳು ಒಂದು ಕಡೆ ಸೇರುವುದರಿಂದ, ಅವರು ದೇವರಿಗೆ ಎಡೆ ಮಾಡಲು ಬೇಕಾಗಿರುವ ಹುರುಳಿ ನವಣೆಯನ್ನು ಅವರೆ ಕಟ್ಟಿಗೆ ಒರಳಿನಿಂದ ಕುಟ್ಟುತ್ತಾರೆ. ಇದನ್ನು ಹೆಣ್ಣು ಮಕ್ಕಳಿಂದ ಕುಟ್ಟಿಸುವುದಿಲ್ಲ. ಹಾಗಾಗಿ ಪೂಜಾರಿಗಳು ಮರದಿಂದ ಒರಳು ತಯಾರಿಸಿ ಅದರಲ್ಲಿ ನವಣೆ ಹಾಕಿ ಕುಟ್ಟುತ್ತಾರೆ. ಅದರಿಂದ ಬಂದ ಹಿಟ್ಟಿನಿಂದ ದೇವರಿಗೆ ಎಡೆ ಮಾಡುತ್ತಾರೆ. ಇದನ್ನು ಕುಟ್ಟುವಾಗ ಪೂಜಾರಿಗಳು ಬಹಳ ಕಟ್ಟಿನಿಟ್ಟಿನ ಬಾಯಿಬತವನ್ನು ಆಚರಿಸಬೇಕು. ರಾತ್ರಿ ನಿದ್ದೆಮಾಡದೆ ಗುಡಿಯಲ್ಲಿ ಹಚ್ಚಿರುವ ದೀಪ ನೋಡಿಕೊಂಡಿರಬೇಕು. ದೇವರ ಪೂಜೆಗೆ ಉಪಯೋಗಿಸುವ ಹೂವುಗಳು ಅಲ್ಲಿಯೇ ಸುತ್ತ ಮುತ್ತ ಸಿಗುವ ತಂಕಟೆ ಹೂವು. ಎಕ್ಕೆಯ ಹೂವು ಮುಡಿಸುತ್ತಾರೆ. ಅವರಿಗೆ ಸಂತೆಯಲ್ಲಿ ತರುವ ಹೂವಿಗಿಂತ ಅಡವಿಯ ಹೂವುಗಳು

ಬಹು ಮುಖ್ಯ. ಆಡಂಭರದ ಪೂಜೆಗೆ ಇಲ್ಲಿ ಎಡೆಯಿಲ್ಲ. ಆಧುನಿಕತೆ ಬಂದರೂ ಪೂಜೆಯಲ್ಲಿ ಪರಿವರ್ತನೆಯಾಗಿಲ್ಲ. ಶ್ಲೋಕಗಳ ಉಚ್ಚರಣೆ ಅವರಿಗೆ ಬರುವುದಿಲ್ಲ. ಅವರು ತಮ್ಮ ಹಿಂದಿನ ಸಂಪ್ರದಾಯಗಳನ್ನು ಬಿಟ್ಟು ಕೊಡಲು ಬಯಸುವುದಿಲ್ಲ.

೩.ಮಣ್ಣಿನ ಒರಳು: ಇದು ಕೇತೆ ದೇವರ ಜಾತ್ರೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮೊದಲ ಎರಡು ತರಹದ ಒರಳಿಗಿಂತ ಇದು ತುಂಬಾ ವಿಶೇಷವಾದುದು. ಈ ಮಣ್ಣಿನ ಒರಳು ಇಂದಿಗೂ ಪ್ರಸ್ತುತವಾದುದು. ಈಗಲೂ ಜಾತ್ರೆಯಲ್ಲಿ ಕುಟ್ಟುವಂತಹ ಪರಿಕಲ್ಪನೆ ಇದೆ. ಈ ಆಚರಣೆಯನ್ನು ಯಾವ ರೀತಿ ಮಾಡುತ್ತಾರೆಂದರೆ ನೆಲದಲ್ಲಿಯೇ ಒರಳಿನ ರೂಪ ಮಾಡಿ ಅದನ್ನು ಹಸುವಿನ ಸಗಣಿಯಿಂದ ಸಾರಿಸಿ, ಆ ನಂತರ ನವಣೆಯನ್ನು ಹಾಕಿ ಕುಟ್ಟುತ್ತಾರೆ. ಇದಕ್ಕೆ ೧೦ ಜನ ಸ್ತ್ರೀಯರು ಬೇಕಾಗುತ್ತಾರೆ. ಹಿಂದೆ ಏಳೆಂಟು ಚೀಲ ಕುಟ್ಟುತ್ತಿದ್ದರು ಈಗ ಎರಡು ಚೀಲಗಳಿಗೆ ಬಂದು ನಿಂತಿದೆ. ಅಂದರೆ ಆಧುನಿಕತೆಯಿಂದಾಗಿ ಕುಟ್ಟುವಂತ ತಾಳ್ಮೆಯನ್ನು ಜನರು ಕಳೆದುಕೊಂಡಿದ್ದಾರೆ. ನವಣೆಯನ್ನು ಕುಟ್ಟುವವರು ಮನೆಯಲ್ಲಿ ಹುಟ್ಟಿರುವ ಹೆಣ್ಣು ಮಕ್ಕಳಾಗಿರಬಾರದು ಸೊಸೆಯಂದಿರಾಗಬೇಕು ಯಾರು ಕೆಲಸ ಮಾಡಬೇಕು ಯಾರು ಕೆಲಸ ಮಾಡಬಾರದು ಎಂಬುದನ್ನು ಪದಗಳ ಮೂಲಕ ಹಾಡುತ್ತಾರೆ.

'ಕುಟ್ಟೋರು ಸೊಸೆಯರು ನೋಡರು ಹೆಣ್ಣು ಮಕ್ಕಳು
ದಾಯನಾಡೋರು ಅಳಿಯಂದಿರು ತಂದನ್ನ ತಾನೋ
ದಾಯಾನೆ ಆಡೋರು ಅಳಿಯಂದಿರು ಬಂದ್ಯೆದಾರೆ

ಸ್ವಾಮಿ ನಿಂಗಣ್ಣನ ಪರುಷೆಗೆ ತಂದನ್ನ ತಾನೊ' *(ವಿರುಪಾಕ್ಷಪ್ಪ ಜಿ. 'ಕ್ಯಾತಪ್ಪ ಜಾತ್ರೆಯ ಸಾಂಸ್ಕೃತಿಕ ಅಧ್ಯಯನ' ಕಿರುಪ್ರಬಂಧ ಪುಟ ೫೭, ೨೦೦೯)*

ತವರು ಮನೆಯಲ್ಲಿ ಹುಟ್ಟಿರುವ ಹೆಣ್ಣು ಮಕ್ಕಳ ಜಾತ್ರೆ ನೋಡುವುದು ಮಾತ್ರ, ಜಾತ್ರೆಗೆ ಬಂದ ಅಳಿಯಂದಿರು ಸೊಗಸಾದ ಊಟಮಾಡಿ ಪಗಡೆ ಆಡುತ್ತಾ ಕೂರುತ್ತಾರೆ. ಇವರು ಮನೆ ಮಕ್ಕಳಂತೆ ಯಾವುದೇ ಕೆಲಸ ಮಾಡುವುದಿಲ್ಲ. ಮನೆಯಲ್ಲಿ ಹುಟ್ಟಿರುವ ಹೆಣ್ಣು ಮಕ್ಕಳಿಗೆ ತೊಂದರೆ ಕೊಡದೆ ಮಗನಿಗೆ ಮತ್ತು ಸೊಸೆಗೆ ಕೆಲಸ ಕೊಡುತ್ತಾರೆ. ಇದು ಜನಪದ ಪರಂಪರೆಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ನಮ್ಮ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಕೆಲಸಮಾಡಿ ಬಳಲಿರುವ ಕಾರಣ ಅವರು ತವರು ಮನೆಯಲ್ಲಿ ಕೆಲಸ ಮಾಡಬಾರದು ಎಂಬುದು ಇವರ ಆಶೆ ಇಲ್ಲಿ ಸ್ತ್ರೀಯರೆ ಸ್ತ್ರೀಯರನ್ನು ಶೋಷಣೆ ಮಾಡುವುದನ್ನು ಗಮನಿಸಬಹುದು. ಮನೆಗೆ ಬಂದಿರುವ ಸೊಸೆಯರು ದೇವರ ಕೆಲಸ ಕಾರ್ಯಗಳಲ್ಲಿ ತೊಡಗುವುದು, ಮನೆಯಿಂದ ಹೊರಗೆ ಹೋದ ಹೆಣ್ಣು ಮಕ್ಕಳು ವಿಶ್ರಾಂತಿ ಪಡೆಯುವುದು ತಾರತಮ್ಯದ ವಿಷಯ. ಹೆಣ್ಣು ಎಂದರೆ ಎಲ್ಲರು ಒಂದೇ ಎನ್ನುವ ಭಾವನೆ ಅವರಲ್ಲಿ ಬರಬೇಕಾಗಿದೆ.

ಜಾತ್ರೆಗೆ ಬಂದಿರುವ ಹೆಣ್ಣು ಮಕ್ಕಳಿಗೆ ನೀರು ಕಾಯಿಸಿ ಹೊಯ್ಯುವುದು. ಅಡುಗೆ ಮಾಡುವುದು. ಅತ್ತೆ ಮಾವಂದಿರ, ಗಂಡನ ಸೇವೆ ಮಕ್ಕಳ ಸೇವೆ ಈ ರೀತಿ ಅನೇಕ ಕಷ್ಟಗಳನ್ನು ಸೊಸೆಯರು

ಎದುರಿಸಬೇಕಾಗುತ್ತದೆ. ಆದರೂ ಸ್ತ್ರೀಯರು ದೇವರ ಮೇಲಿನ ಭಯದಿಂದ ಪ್ರತಿರೋಧ ಒಡ್ಡದೆ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ಅಷ್ಟಲ್ಲದೆ ಕೇತೆ ದೇವರ ಜಾತ್ರೆಯಲ್ಲಿ ನವಣೆಯನ್ನು ಇಡೀ ರಾತ್ರಿ ಕುಟ್ಟುತ್ತಾರೆ. ಜಾತ್ರೆಯ ಒಂದು ಭಾಗವಾಗಿ ಒರಳುಗಳಿವೆ. ಯಾಂತ್ರಿಕತೆ ಮುಂದುವರಿದರೂ, ಅವರು ಯಂತ್ರಗಳಿಗೆ ಮೊರೆ ಹೋಗುವುದಿಲ್ಲ. ಇದು ಜನರಲ್ಲಿರುವ ಆಸಕ್ತಿಯನ್ನು ಕುರಿತು ಹೇಳುತ್ತದೆ. ಸಹ ಭಾಗಿತ್ವ ಮತ್ತು ಪರಸ್ಪರ ನೋವು ನಲಿವುಗಳನ್ನು ಹಂಚಿಕೊಳ್ಳಲು ಸಹಾಯಕವಾಗಿದೆ. ಕುಟ್ಟುವುದನ್ನೆ ಮರೆತಿರುವಂತಹ ಕಾಲದಲ್ಲಿ ಒರಳು ಒನಕೆಯ ಬಗ್ಗೆ ಏಕೆ ಒಂದು ಪದ್ಧತಿಯಾಗಿ ಆಚರಣೆ ಮಾಡುತ್ತಾರೆ. ಇಲ್ಲಿ ಜನಪದರಿಗೆ ಪರಂಪರೆಯನ್ನು ಉಳಿಸಿಕೊಳ್ಳಬೇಕೆಂಬ ತವಕವಿದೆ. ಅವರು ಮೂರು ರೀತಿಯ ಒರಳುಗಳನ್ನು ಉಳಿಸಿಕೊಂಡಿರುವುದು ಆಶ್ಚರ್ಯದ ವಿಷಯವಾಗಿರಬಹುದು ಆದರೆ ಅದರಲ್ಲಿ ಒಂದು ಸಮುದಾಯದ ಬದುಕಿನ ಮೌಲ್ಯಗಳಿವೆ.

ನಾನು ಗಮನಿಸಿದಂತೆ ಈ ಜಾತ್ರೆಯಲ್ಲಿ ಸ್ತ್ರೀಯರು ೨ ಚೀಲ ನವಣೆ ಕುಟ್ಟುತ್ತಾರೆ. ಕಲ್ಲಿನ ಒರಳಿನಲ್ಲಿ ಕುಟ್ಟದೆ ಮಣ್ಣಿನ ಒರಳಿನಲ್ಲಿ ಕುಟ್ಟುತ್ತಾರೆ. ಇದು ಆಶ್ಚರ್ಯವನ್ನುಂಟು ಮಾಡುತ್ತದೆ. ಇದನ್ನು ಯಾರು ನೋಡಿರದ ಕಾರಣ ಈ ಮಾತನ್ನು ಒಪ್ಪುವುದಿಲ್ಲ. ಆದರೆ ಕೇತಪ್ಪನ ಜಾತ್ರೆಯಲ್ಲಿ ಇತರೆ ಎರಡು ಒರಳುಗಳಿಗಿಂತ ಇದರ ಪ್ರಾಮುಖ್ಯತೆ ಜಾಸ್ತಿ ಎಂದು ಹೇಳಬಹುದು. ಸ್ತ್ರೀಯರು ಪದಗಳನ್ನು ಹೇಳುತ್ತಾರೆ. ಆ ಪದಗಳ ಲಯಕ್ಕೆ ತಕ್ಕಂತೆ ಒನಕೆಯಿಂದ ನವಣೆ ಕುಟ್ಟುತ್ತಾರೆ. ಮಣ್ಣಿನಲ್ಲಿ ಮಾಡಿರುವ ಒರಳನ್ನು ಮೊದಲೆ ಗಟ್ಟಿಮಾಡಿರುತ್ತಾರೆ. ಇದರ ಸ್ವರೂಪದ ಬಗ್ಗೆ ಹೇಳುವುದಾದರೆ ಇದು ಕಲ್ಲಿನ ಒರಳಿಗಿಂತ ಮುಂಚಿತವಾಗಿ ಅಸ್ತಿತ್ವದಲ್ಲಿರಬಹುದು. ಇದು ಕಾಡುಗೊಲ್ಲರು ಆದಿಮ ಸಮುದಾಯ ಎಂಬುದನ್ನು ತೋರಿಸುತ್ತದೆ. ಆದರೆ ಪ್ರಾರಂಭದಲ್ಲಿ ಮಣ್ಣಿನ ಒರಳಿನಲ್ಲಿ ಕುಟ್ಟಿದ್ದರಿಂದ ಆ ಸಂಪ್ರದಾಯವನ್ನು ಹಾಗೆ ಉಳಿಸಿಕೊಂಡು ಬಂದಿದ್ದಾರೆಂಬು ಇದರಿಂದ ತಿಳಿಯುತ್ತದೆ. ಮಣ್ಣಿನ ಒರಳಿನಲ್ಲಿ ನವಣೆ ಕುಟ್ಟಿದರೂ ನವಣೆ ಪ್ರಸಾದದಲ್ಲಿ ಕಲ್ಲಾಗಲಿ, ಮಣ್ಣಾಗಲಿ ಸಿಗುವುದಿಲ್ಲ ಅದೊಂದು ವಿಶೇಷ.

೪.೩.೨೨. ಕೇತಪ್ಪನಿಂದ ಶಾಪ ಪಡೆದ ಹೆಣ್ಣು

ನವಣೆ ಕುಟ್ಟುವ ಸಮಯದಲ್ಲಿ ಹುಟ್ಟಿಕೊಂಡಿರುವ ಕತೆ. ಇಂತಹ ಹಲವಾರು ಕತೆಗಳು ಜನಪದರಲ್ಲಿವೆ. ಅವರಿಗೆ ಆ ಸ್ತ್ರೀಯರ ನೋವು ನಲಿವುಗಳಿಗಿಂತ ದೇವರ ಪವಾಡವೇ ಮುಖ್ಯ. ಇಲ್ಲಿರುವ ಕಲ್ಲಿನ ಸ್ತ್ರೀ ವಿಗ್ರಹದ ಬಗ್ಗೆ ಹೇಳುವುದಾದರೆ, ಕೇತಪ್ಪನ ಜಾತ್ರೆ ನಡೆದ ಸಂದರ್ಭದಲ್ಲಿ ವಿವಿಧ ಹಟ್ಟಿಗಳಿಂದ ಮುದುಕರಿಂದ ಹಿಡಿದು ಎಲ್ಲವಯಸ್ಸಿನ ಸ್ತ್ರೀಯರ ಪುರುಷರು ಬಂದಿರುತ್ತಾರೆ. ಒಂದು ಹೆಣ್ಣು ಮಗಳು ಅತ್ತೆ ಮಾವಂದಿರ ಮನೆಯಲ್ಲಿ ಕುಟ್ಟಿ, ಬೀಸಿ ಸಾಕಾಗಿ ಜಾತ್ರೆಯಲ್ಲಾದರೂ ವಿಶ್ರಾಂತಿ ಪಡೆದರಾಯಿತೆಂದು ಬಂದರೆ, ಆಕೆಗೆ ನವಣೆ ಕುಟ್ಟಲು ಹೇಳಿದಾಗ, ಅವಳು ಇದರಿಂದ ತಪ್ಪಿಸಿಕೊಳ್ಳಲು ಮಾಸಿಕ ಋತು ಆಗಿರುವುದಾಗಿ ಸುಳ್ಳು ಹೇಳುತ್ತಾಳೆ. ಆ ಕಾರಣಕ್ಕೆ ಕೇತಪ್ಪ ಅವಳಿಗೆ ಕರಿ ಕಲ್ಲಾಗುವಂತೆ ಶಾಪಕೊಡುತ್ತಾನೆ. ಎಂದು ಕತೆ ಕಟ್ಟಿ ಹೇಳುವುದು ಕಂಡುಬರುತ್ತದೆ.

ಈ ಕತೆ ಕಟ್ಟು ಕತೆ ಎಂಬುವುದರಲ್ಲಿ ಯಾವ ಸಂದೇಹವೂ ಇಲ್ಲ. ದೇವರ ಬದಲಾಗಿ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಬಲಿಕೊಟ್ಟಿರುವ ಸಾಧ್ಯತೆ ಕಂಡುಬರುತ್ತದೆ. ಆಕೆ ನವಣೆ ಕುಟ್ಟುವಾಗ ಸತ್ತಿರಬಹುದು ಅಥವಾ ಅತ್ತೆ ಮಾವಂದಿರ ಚಿತ್ರ ಹಿಂಸೆ ತಾಳಲಾರದೆ ಜಾತ್ರೆಗೆ ಬಂದು ಸತ್ತಿರಬಹುದು.

ಯಾವುದೋ ಕಾರಣಕ್ಕೆ ಸತ್ತಿರುವ ಸ್ತ್ರೀಯನ್ನು ಅವರು ದೇವರ ಮೇಲೆ ಹಾಕಿ ತಾವು ಪವಿತ್ರರು ಎಂಬುದನ್ನು ಸಾಬಿತು ಪಡಿಸಲು ದೇವರ ಹೆಸರಿನಲ್ಲಿ ಒಂದು ಕತೆ ಕಟ್ಟಿ ಆಕೆಗೆ ಪೂಜ್ಯನೀಯ ಸ್ಥಾನ ಕೊಟ್ಟಿದ್ದಾರೆ. ಆ ವಿಗ್ರಹವಿರುವುದನ್ನು ಪೂಜಾರಿಯೇ ನೋಡಿಲ್ಲ. ಆತನು ಹಿಂದೆ ಹಿರಿಯರು ತೋರಿಸಿದ ಜಾಗದಲ್ಲಿ ಒಂದು ಕರಿಯ ಕಂಬಳಿ ಹಾಸಿ ತುಂಬಿದ ಗಡಿಗೆಯಲ್ಲಿಯ ನೀರು ಚಿಮುಕಿಸಿ ನಂತರ ಜುಟ್ಟು ಇಲ್ಲದ ತೆಂಗಿನ ಕಾಯಿ ಒಡೆಯುತ್ತಾರೆ ಮತ್ತು ಒಂದು ಬಾಳೆಹಣ್ಣು ಒಂದು ಎಲೆ, ಒಂದು ಅಡಿಕೆ, ಒಂದು ಊದಿನ ಕಡ್ಡಿ ಹಚ್ಚುತ್ತಾರೆ. ಆಕೆಯನ್ನು ಪೂಜೆಮಾಡುವಾಗ ಕೆಲವರಿಗೆ ಕಂಡರೆ ಕೆಲವರಿಗೆ ಕಾಣುವುದಿಲ್ಲ. ಆ ಜಾಗದಲ್ಲಿ ವಿಗ್ರಹ ಮಣ್ಣಿನಲ್ಲಿ ಹೂತ ಹೋಗಿದೆ ಎಂದು ಹೇಳುತ್ತಾರೆ.

೪.೩.೨೩. ನವಣೆ ಪ್ರಸಾದ

ಅಲ್ಲಿ ಕುಟ್ಟಿದ ನವಣೆಯ ಅಕ್ಕಿಯಿಂದ ಎಡೆ ಮಾಡಿ ದೇವರಿಗೆ ಅರ್ಪಿಸಿ ನಂತರ ಭಕ್ತರು ಹಂಚಿಕೊಂಡು ತಿನ್ನುತ್ತಾರೆ. ಆದರೆ ಅದರಲ್ಲಿ ಒಂದು ಕಲ್ಲಾಗಲಿ ಮಣ್ಣಾಗಲಿ ಬಾಯಿಗೆ ತಾಗುವುದಿಲ್ಲವೆಂದು ಪ್ರಸಾದ ತಿಂದ ಭಕ್ತರು ಹೇಳುತ್ತಾರೆ. ಇದು ಆ ದೇವರ ಪವಾಡ ಎಂದು ಹೇಳುವರು.. ಮಣ್ಣಿನಲ್ಲಿ ಒರಳು ಮಾಡಿ ಕುಟ್ಟಿದರೂ ಕಲ್ಲು ಮಣ್ಣು ಬಾಯಿಗೆ ಸಿಗುವುದಿಲ್ಲವೆಂದರೆ ಅದೊಂದು ಪವಾಡವೆ ಸರಿ. ಆದರೆ ಇದನ್ನು ಪವಾಡವೆನ್ನುವುದಕ್ಕಿಂತ ಮರಳಿನಲ್ಲಿ ಕುಟ್ಟಿ ಕುಟ್ಟಿ ಮರಳು ಸಹ ಹಿಟ್ಟಿನಂತೆ ನುಣ್ಣಗೆ ಆಗಿ ಅದನ್ನು ಭಕ್ತಾದಿಗಳು ಅಗಿಯದಂತೆ ಹಾಗೆ ನುಂಗಿರಬಹುದು ಎಂಬ ಸಂದೇಹಕ್ಕೆ ಎಡೆ ಮಾಡಿಕೊಟ್ಟಿದೆ. ನಾನು ಕೂಡ ನವಣೆ ಅನ್ನವನ್ನು ಊಟ ಮಾಡಿದ್ದೇನೆ. ಆದರೆ ಕಲ್ಲು ಇರುವುದು ಕಂಡು ಬಂದಿದೆ. ಕಲ್ಲಿನ, ಕಟ್ಟಿಗೆ, ಮತ್ತು ಮಣ್ಣಿನಿಂದ ಮಾಡಿದ ಒರಳು ಇವು ಹಿಂದಿನವರ ಸರಳವಾದ ಬದುಕನ್ನು ನಮಗೆ ತಿಳಿಸುತ್ತವೆ. ಆದರೆ ಜನಪದರು ಬದುಕಿನಲ್ಲಿ ಬರುವ ಕಷ್ಟ ಅಥವಾ ಸುಖ ಎರಡನ್ನು ಸಮನಾಗಿ ಕಂಡವರು. ಇಲ್ಲಿಯ ಸ್ತ್ರೀ ವಿಗ್ರಹದ ಬಗ್ಗೆ ಸುಳ್ಳಿನ ಕತೆ ಹೇಳಿ, ಅವಳು ಶಾಪಕ್ಕೆ ಗುರಿಯಾದವಳು ಎಂಬುದನ್ನು ಕೇಳಿದರೆ, ಅವರು ಕಾಯಕಕ್ಕೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದರು ಎಂಬುದು ತಿಳಿಯುತ್ತದೆ. ಮಾಸಿಕ ಋತುಸ್ರಾವ ಎಲ್ಲ ಸ್ತ್ರೀಯರಲ್ಲಿ ಕಂಡುಬರುವ ಸಹಜವಾದ ಪ್ರಕ್ರಿಯೆ. ಅದರಿಂದ ಸ್ತ್ರೀಯರನ್ನು ಶೋಷಣೆ ಮಾಡುವುದು ಸರಿಯಲ್ಲ. ಎಲ್ಲ ಸಮುದಾಯಕ್ಕಿಂತಲೂ ಗೊಲ್ಲರಲ್ಲಿ ಮಾಸಿಕ ಋತು ಸ್ರಾವವಾವ, ಹೆರಿಗೆ ಮತ್ತು ಋತುಮತಿಯಾದವರನ್ನು ಅತಿಯಾದ ಶೋಷಣೆಗೆ ಒಳಪಡಿಸಿದ್ದಾರೆ. ಅಂಥವರನ್ನು ಹಟ್ಟಿಯಿಂದ ಹೊರಹಾಕುತ್ತಾರೆ. ಅವರಿಗೆ ಊಟ ಹಾಕುವಾಗ ದೂರ ನಿಂತು ಎತ್ತಿ ಹಾಕುವುದನ್ನು ನಾವು ನೋಡುತ್ತೇವೆ. ಅವರ ನೆರಳನ್ನು ಸಹ ಸೋಕುವುದಕ್ಕೆ ಬಿಡುವುದಿಲ್ಲ. ಈಗ ಕೆಲವು ಹಳ್ಳಿಗಳಲ್ಲಿ ಮುಟ್ಟಾದವರಿಗೆ ಒಂದು ಮನೆ ಕಟ್ಟಿಸಿದ್ದಾರೆ. ಆದರೆ ಆ ಮನೆಗಳಲ್ಲಿ ನಾಯಿಗಳು ಕೂಡ ವಾಸ ಮಾಡಲು ಯೋಗ್ಯವಾಗಿಲ್ಲ.

ಆಧುನಿಕ ಕಾಲದಲ್ಲಿ ಅದರಲ್ಲೂ ಶಿಕ್ಷಣ ಪಡೆದ ಸ್ತ್ರೀಯರು ಸಹ ತಿಂಗಳು ಮುಟ್ಟಿನ ಸಂದರ್ಭದಲ್ಲಿ ಕಾಡುಗೊಲ್ಲರ ಹಟ್ಟಿಯಲ್ಲಿರುವ ಆಚರಣೆಯಂತೆ ಅವರೂ ಸಹ ಹೊರಗೆ ಇರುವುದನ್ನು ಗಮನಿಸಬಹುದು. ಇಂತಹ ಅನಿಷ್ಟ ಪದ್ಧತಿಯು ಹುಟ್ಟಿಕೊಳ್ಳಲು ಕಾರಣವೆಂದರೆ ಗೊಲ್ಲರ ಪ್ರಮುಖ ದೇವರಾದ ಜುಂಜಪ್ಪ. ಅವನು ತನ್ನ ತಾಯಿಯ ಬೆನ್ನಿನಲ್ಲಿ ಜನಿಸಿದ್ದರಿಂದ ಇದೊಂದು ಪದ್ಧತಿಯಾಗಿ ಹುಟ್ಟಿಕೊಂಡಿತೆಂದು ಹೇಳುತ್ತಾರೆ. ಇಂತಹ ಸಣ್ಣ ಕಾರಣಕ್ಕೆ ಕೇತಪ್ಪ ಅಷ್ಟು ದೊಡ್ಡ ಶಿಕ್ಷೆಯನ್ನು ಕೊಡಲು ಸಾಧ್ಯವಿಲ್ಲ. ಸತ್ಯಕ್ಕೆ ನಿಷ್ಠೆಗೆ ಹೆಸರಾಗಿದ್ದ ಗೊಲ್ಲರು ಕತೆಯಲ್ಲಿಯ ಸ್ತ್ರೀಯನ್ನು ನಾಶ ಮಾಡಿ ಹೆಣ್ಣು ಮಕ್ಕಳಿಗೆ ಭಯ ಹುಟ್ಟಿಸಲು ವಿಗ್ರಹ ನಿಲ್ಲಿಸಿದ್ದಾರೆ. ಮುಟ್ಟಿನ ಮತ್ತು ಮಡಿ ಮೈಲಿಗೆಯ ಪ್ರಸಂಗಗಳನ್ನು ಮುಂದಿಕೊಂಡು ಸ್ತ್ರೀಯರ ಶೋಷಣೆ ಮಾಡುವುದರ ಮೂಲಕ ಪುರಷ ಸಮಾಜವನ್ನು ಎತ್ತಿ ಹಿಡಿದು, ಸ್ತ್ರೀಯರು ದೇವಸ್ಥಾನಗಳನ್ನು ಪ್ರವೇಶಿಸಲು ಅನರ್ಹರೆಂದು ಹೇಳಿ ಅವರನ್ನು ಶೋಷಣೆ ಮಾಡುತ್ತಿರುವುದು ಕಂಡುಬರುತ್ತದೆ.

೪.೩.೨೪. ಜಾತ್ರೆಯ ದಿನದ ಆಚರಣೆಗಳು

ಜಾತ್ರೆಯ ಹಿಂದಿನ ದಿನ ಕೇತಪ್ಪನ ಒಕ್ಕಲುಗಳು, ಭಕ್ತರು ಜಾತ್ರೆಗೆ ಬರಲು ಬೇಕಾದ ಗಾಡಿಗಳನ್ನು ಸಿದ್ದ ಮಾಡಿಕೊಳ್ಳುತ್ತಾರೆ. ಎತ್ತುಗಳ ಮೈತೊಳೆದು ಕೊಂಬು ಹೆರೆದು, ಕೊಂಬಿಗೆ ಬಣ್ಣ ಬಳಿಯುತ್ತಾರೆ. ಕೊಂಬಿನ ಅಣಸು ಹಾಕಿ ಅವುಗಲಿಗೆ ಗಗ್ಗರ ಹಾಕಿ, ಜೂಲು ಹಾಕುತ್ತಾರೆ. ಕೊರಳಲ್ಲಿ ಗಂಟೆಸರಗಳನ್ನು ಕಟ್ಟುತ್ತಾರೆ. ಕೋಡು ಮತ್ತು ಕಾಲಿಗೆ ಗೆಜ್ಜೆ ಕಟ್ಟುತ್ತಾರೆ. ಜನಪದರು ಜಾತ್ರೆಗಳಿಗೆ ಎತ್ತಿನ ಗಾಡಿ (ಚಕ್ಕಡಿ) ಮೂಲಕ ಹೋಗುತ್ತಾರೆ. ಇದರಿಂದ ಜಾತ್ರೆಗೆ ಕಳೆ ಬರುತ್ತದೆ. ರಾತ್ರಿ ಹೆಣ್ಣು ಮಕ್ಕಳು ಕಡಲೆಕಾಯಿ ಚಟ್ನಿ ಮತ್ತು ಸಜ್ಜೆ ರೊಟ್ಟಿಯನ್ನು ಊಟಕ್ಕಾಗಿ ಸಿದ್ದಪಡಿಸುವರು. ಅದು ಜನಪದರ ಜಾತ್ರೆಯಾದುದರಿಂದ ಅಲ್ಲಿ ಯಾವುದೇ ತರದ ಹೋಟೆಲುಗಳು ಇರುವುದಿಲ್ಲ. ಏಕೆಂದರೆ ಅಲ್ಲಿ ತಿನ್ನುವವರು ಯಾರು ಇರುವುದಿಲ್ಲ. ಪ್ರತಿಯೊಬ್ಬರು ಮನೆಯಿಂದ ಸಜ್ಜೆ ರೊಟ್ಟಿ ಕಡ್ಲೆ ಚಟ್ನಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಬೇರೆಯವರಿಗೆ ನೀಡಿದರೂ ಸಹ ಉಳಿಯುವಷ್ಟು ರೊಟ್ಟಿ ಮಾಡಿಕೊಂಡು ಹೋಗಿರುತ್ತಾರೆ. ಜನಪದರು ಸ್ವಾವಲಂಬಿಗಳು. ಬೇರೆಯವರನ್ನು ಅವಲಂಬಿಸುವುದಿಲ್ಲ. ಈ ಜಾತ್ರೆ ಸೋಮವಾರ ಪ್ರಾರಂಭವಾಗುತ್ತದೆ. ಅದರ ಒಕ್ಕಲುಗಳು ರಾತ್ರಿಯಲ್ಲ ನಿದ್ದೆ ಮಾಡದೆ ತಿಂಡಿ ತಿನಿಸುಗಳನ್ನು ಸಿದ್ದ ಮಾಡುತ್ತಾರೆ. ರಾತ್ರಿ ನಾಲ್ಕು ಗಂಟೆಗೆ ಎದ್ದು ಚಕ್ಕಡಿ ಗಾಡಿಯಲ್ಲಿ ಹೊರಡಲು ಪ್ರಾರಂಭಿಸುತ್ತಾರೆ. ತಂಪಾದ ಹೊತ್ತಿನಲ್ಲಿ ಪ್ರಯಾಣ ಮಾಡಿದರೆ ಎತ್ತಗಳಿಗೆ ಮತ್ತು ಮನುಷ್ಯರಿಗೆ ಆಯಾಸವಾಗುವುದಿಲ್ಲ ಜಾತ್ರೆಗೆ ಹೊರಟವರು ನವಣೆ ಮತ್ತು ಹುರುಳಿ ಮುಟ್ಟದೆ ಹೊರಡಬೇಕಾಗುತ್ತದೆ.

ಜನಪದರದು ಎಲ್ಲಿಗೆ ಪ್ರಯಾಣ ಬೆಳೆಸಿದರೂ ರೊಟ್ಟಿ ಬುತ್ತಿ ಕಟ್ಟಿಕೊಂಡೆ ಹೊರಡುತ್ತಾರೆ. ಅದನ್ನು ಮೂರು ದಿವಸದ ವರೆಗೆ ಇಟ್ಟುಕೊಂಡರೂ ಅದು ಹಾಳಾಗುವುದಿಲ್ಲ. ಆ ರೀತಿ ಅವರು ಬುತ್ತಿ ಕಟ್ಟುವ ಕೌಶಲ್ಯ ಹೊಂದಿದವರಾಗಿರುತ್ತಾರೆ. ಎಂದು ಹೇಳಬಹುದು. ಬುತ್ತಿ ತಯಾರು ಮಾಡುವುದೇ ಅವರ ಒಂದು ವಿಶೇಷ.

ಸಜ್ಜೆ ಆಹಾರದ ಮುಖ್ಯ ಧಾನ್ಯವಾಗಿದ್ದ ಕಾಲದಲ್ಲಿಯೂ ಸಜ್ಜೆಯನ್ನು ಅಲ್ಪ ಸ್ವಲ್ಪ ಕುಟ್ಟಿ ಆ ಹಿಟ್ಟಿಗೆ ಮೆಣಸಿನಕಾಯಿ ಕೊತ್ತಂಬರಿ ಸೊಪ್ಪು ಕೆಲ ಸಾಂಬಾರ ಪದಾರ್ಥಗಳನ್ನು ಸೇರಿಸಿ ಅದರಿಂದ ರೊಟ್ಟಿ ತಟ್ಟುತ್ತಾರೆ. ಅದರ ಸುವಾಸನೆ ಹಟ್ಟಿಯ ತುಂಬ ಹರಡುತ್ತಿರುತ್ತದೆ. ಇದರ ಜೊತೆಗೆ ಶೇಂಗಾ ಚಟ್ನಿಯು ಸಹ ಗಮಗಮಿಸುತ್ತದೆ. ಅದರ ವಾಸನೆ ಸವಿದವನಿಗೆ ಆ ರೊಟ್ಟಿ ತಿನ್ನಬೇಕು ಎನಿಸುತ್ತದೆ. ಇಲ್ಲಿ ಜನಪದರ ಧಾರಾಳತನವೆಂದರೆ, ಅಪರಿಚಿತ ವ್ಯಕ್ತಿಗಳು ಚಕ್ಕಡಿಯ ಬಳಿ ಹೋದರೆ ಅವರ ಕುಲ ಕೇಳದೆ ಊಟಕ್ಕೆ ಹಾಕುತ್ತಾರೆ. ಆ ರೊಟ್ಟಿಯನ್ನು ಕಟಿ ಕಟಿ ಎನ್ನುವಂತೆ ಸುಡುತ್ತಾರೆ. ಆ ರೊಟ್ಟಿಯನ್ನು ತಿಂದವನಿಗೆ ಅದರ ರುಚಿ ಗೊತ್ತಾಗುತ್ತದೆ. ಇದು ಕೇತಪ್ಪನ ಜಾತ್ರೆಯ ವಿಶಿಷ್ಟವಾದ ಊಟವೆನಿಸಿದೆ. ಇದರ ಜೊತೆಗೆ ಮಜ್ಜಿಗೆ ತುಪ್ಪ, ಬೆಣ್ಣೆಯನ್ನು ಸಹ ತೆಗೆದುಕೊಂಡು ಹೋಗಿರುತ್ತಾರೆ. ಇದು ಅವರ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರುತ್ತದೆ.

ಒಂದು ಊರಿನ ಚಕ್ಕಡಿಳೆಲ್ಲವೂ ಒಂದೇ ಸಲ ಹೊರಡುತ್ತವೆ. ಪ್ರತ್ಯೇಕವಾಗಿ ಹೋದಾಗ ಏನಾದರೂ ಅಪಾಯಗಳು ಸಂಭವಿಸಬಹುದು ಎಂಬ ಕಾರಣಕ್ಕೆ ಸಾಮೂಹಿಕವಾಗಿ ಹೋದರೆ ಯಾವ ಅಪಾಯಗಳು ಸಂಭವಿಸುವುದಿಲ್ಲ ಎನ್ನವುದು ಅವರ ನಂಬಿಕೆ. ಕರಿಯ ಕಂಬಳಿ ಹೆಗಲಿಗೆ ಹಾಕಿಕೊಂಡರೆ, ಅವರು ನಿಲ್ಲವುದು ಜಾತ್ರೆಯಲ್ಲಿಯೇ. ಅವರದೇ ಆದ ಗುಂಪು ಇರುತ್ತದೆ. ಅವರು ಆ ಊರಿನ ಯಜಮಾರಾಗಿರುತ್ತಾನೆ. ಕಚ್ಚೆ ಪಂಚೆ ಉಟ್ಟುಕೊಂಡು ತಲೆಗೆ ಪೇಟ ಸುತ್ತಿಕೊಂಡು, ಕೈಯಲ್ಲಿ ಒಂದು ಕೋಲು, ಕರಿಯ ಕೋಟು ಧರಿಸುತ್ತಾರೆ. ದಾರಿಯಲ್ಲಿ ನಡೆಯುವಾಗ ತಮ್ಮ ಕಷ್ಟ ಸುಖಗಳನ್ನು ಮಾತಾಡಿಕೊಂಡು ನಡೆಯುತ್ತ ಜಾತ್ರೆಗೆ ಹೋಗುತ್ತಾರೆ.

ಜಾತ್ರೆ ತಲುಪಿದ ತಕ್ಷಣ ಮೊದಲು ಅಕ್ಕಮ್ಮಗಳ ಬಾವಿಯ ನೀರನ್ನು ತಲೆಗೆ ಹಾಕಿಕೊಂಡು ಗುಡಿಯ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ. ಪ್ರತಿಯೊಬ್ಬರೂ ಅಕ್ಕಮ್ಮಗಳ ಬಾವಿಯ ನೀರನ್ನು ಹಾಕಿಸಿಕೊಳ್ಳತ್ತಾರೆ.

೪.೩.೨೫. ಉರುಳು ಸೇವೆ

ಇದು ಪ್ರತಿಯೊಂದು ಜಾತ್ರೆಯಲ್ಲಿಯೂ ನಡೆಯುವಂತಹ ಆಚರಣೆಯಾಗಿದೆ. ಇಲ್ಲಿಗೆ ಬರುವ ಭಕ್ತ ಸಮುದಾಯದಲ್ಲಿ ಕೆಲವರು ದೇವರಿಗೆ ಹರಕೆ ಕಟ್ಟಿಕೊಂಡಿರುತ್ತಾರೆ. ಈ ಹರಕೆಯಲ್ಲಿ ದಿಂಡು ಉರುಳುವುದು ಒಂದು. ಹರಕೆ ಕಟ್ಟಿಕೊಂಡವರು ಪುರುಷ ಇಲ್ಲವೆ ಮಹಿಳೆ ಇರಬಹುದು. ಆ ದಿನ ಉಪವಾಸ ವ್ರತ ಆಚರಿಸಿ ಉರಳು ಸೇವೆ ಮಾಡುತ್ತಾರೆ. ಕೇತೆದೇವರ ಪೂಜಾರಿ ಗಂಗೆ ಪೂಜೆ ಮಾಡಿದ ನಂತರ ಉರುಳು ಸೇವೆ ಪ್ರಾರಂಭವಾಗುತ್ತದೆ. ಅಕ್ಕಮ್ಮ ಬಾವಿಯ ನೀರಿನಿಂದ ತಮ್ಮ ದೇಹವನ್ನು ತೋಯಿಸಿಕೊಂಡು, ನಂತರ ಕಳ್ಳಿಯಿಂದ ನಿರ್ಮಾಣ ಮಾಡಿರುವ ಗುಡಿಯನ್ನು ಮೂರು ಸುತ್ತು ಸುತ್ತುತ್ತಾರೆ. ಕೆಲವರು ಬರಿಮೈಯಲ್ಲಿ ನೆಲದ ಮೇಲೆ ಉರುಳುತ್ತಾರೆ. ಇದು ಉಗ್ರ ಭಕ್ತಿಯಾಗಿ ಕಂಡುಬರುತ್ತದೆ. ಉರುಳು ಸೇವೆಯನ್ನು ಭಕ್ತರು ಮತ್ತು ಮಕ್ಕಳು ಮಾಡುತ್ತಾರೆ. ಇದು ಅವರ ಮುಗ್ಧ ಭಕ್ತಿಯನ್ನು ಪ್ರದರ್ಶಿಸುತ್ತದೆ. ಇದು ಅವರು ದೇವರಿಗೆ ಸಲ್ಲಿಸುವ ಆರಾಧನೆಯ ಒಂದು

ಕ್ರಿಯೆ. ಎಷ್ಟೇ ಜನರಿದ್ದರೂ ಅವರು ನಾಚಿಕೆ ಪಟ್ಟುಕೊಳ್ಳುವುದಿಲ್ಲ. ತೊಟ್ಟಿರುವ ಬಟ್ಟೆಯನ್ನು ಕೂಡ ಗಮನಿಸದೆ ಮಣ್ಣಿನಲ್ಲಿ ಉರುಳುತ್ತಾರೆ. ಈ ರೀತಿ ಉರುಳುವುದರಿಂದ ತಮ್ಮ ಕಷ್ಟವೆಲ್ಲಾ ಪರಿಹಾರವಾಗುತ್ತವೆ ಎಂಬ ಭಾವನೆಯ ಅವರಲ್ಲಿದೆ. ಇದು ಮೂಢನಂಬಿಕೆ. ಇಲ್ಲಿ ಯಾವ ಕಷ್ಟವು ಪರಿಹಾರವಾಗುವುದಿಲ್ಲ. ಆ ಕಲುಸಿತ ವಾತಾವರಣದ ಧೂಳು ಕುಡಿದು ಕೆಲವು ಕಾಯಿಲೆಗಳು ಬಂದು ನೆಲ ಹಿಡಿಯುವುದುಂಟು. ಇದೊಂದು ರೀತಿ ಶೋಷಣೆಯ ಪ್ರತೀಕವಾಗಿ ಕಾಣುತ್ತದೆ. ಇಲ್ಲಿಯ ಭಕ್ತರಿಗೆ ದೇವರು ಮುಖ್ಯವಾಗುತ್ತದೆ. ವಿನಃ ತಾವು ಎಲ್ಲಿ ಉರುಳುತ್ತಿದ್ದೇವೆಂಬುದರ ಪರಿಜ್ಞಾನ ಇರುವುದಿಲ್ಲ.

೪.೩.೨೬. ಎತ್ತಿನ ಗಾಡಿಗಳ ಪ್ರದಕ್ಷಿಣೆ

ಜನಪದರ ಮುಗ್ಧ ಭಕ್ತಿಗೆ ಇದೊಂದು ಪ್ರತ್ಯಕ್ಷ ಸಾಕ್ಷಿಯಾಗಿದೆ. ಇಲ್ಲಿಯೂ ಅವರು ಮೂಢನಂಬಿಕೆಗೆ ಬಲಿಯಾಗಿದ್ದಾರೆ. ಅವರ ಪ್ರಕಾರ ಎತ್ತಿನ ಗಾಡಿಗಳನ್ನು ಕೇತಪ್ಪ ದೇವರ ಗುಡಿಯ ಸುತ್ತ ಮೂರು ಮೂರು ಪ್ರದಕ್ಷಣೆಯನ್ನು ಎತ್ತುಗಳಿಗೆ ಹಾಕಿಸಿದರೆ ಅವುಗಳಿಗೆ ಯಾವುದೇ ಕಾಯಿಲೆ ಬರುವುದಿಲ್ಲವೆಂದು ತಿಳಿದಿದ್ದಾರೆ. ಎತ್ತುಗಳಿಗೂ ಸಹ ಅಕ್ಕಮ್ಮಗಳ ಬಾವಿ ನೀರನ್ನು ಚಿಮುಕಿಸಿ ಅವುಗಳನ್ನು ಮೂರು ಸುತ್ತು ಉರಿಮೆ ವಾದ್ಯದೊಂದಿಗೆ ತಿರುಗುತ್ತಾರೆ. ಇದರಿಂದ ಎತ್ತುಗಳಿಗಿರುವ ಭಯ ಕಡಿಮೆ ಮಾಡುವುದಾಗಿದೆ. ಆಧುನಿಕ ಯುಗದಲ್ಲಿ ಬಸ್ಸು ಲಾರಿಗಳ ಶಬ್ದಕ್ಕೆ ಎತ್ತುಗಳು ಬೆದರುವುದುಂಟು. ಅಂತಹ ಸಮಯದಲ್ಲಿ ಅವು ನಿಯಂತ್ರಣಕ್ಕೆ ತರುವುದು ಬಹಳ ಕಷ್ಟ. ಆದುದರಿಂದ ಜನಪದರು ಈ ರೀತಿ ಎತ್ತಿನ ಮುಂದೆ ಉರುಮೆ ಬಡಿಸುವುದರಿಂದ ಅವುಗಳಲ್ಲಿರುವ ಭಯ ಕಡಿಮೆಯಾಗುತ್ತದೆಂದು ಭಾವಿಸಿರುವುದು ಕಂಡುಬರುತ್ತದೆ.

ಇಲ್ಲಿ ಉರಿಮೆ ಬಡಿಯುವವರಿಗೆ ಆರ್ಥಿಕ ಲಾಭವಾಗುತ್ತದೆ. ಪ್ರತಿಯೊಬ್ಬರ ಎತ್ತುಗಳಿಗೆ ಅವರು ಉರಿಮೆ ಬಡಿಯುವುದರಿಂದ ಒಂದೊಂದು ಜೊತೆ ಎತ್ತಗೆ ಹತ್ತು ರೂಪಾಯಿಯಂತೆ ಹಣ ತೆಗೆದುಕೊಳ್ಳುತ್ತಾರೆ. ಇದು ಕೇವಲ ಎತ್ತಗಳು ತಿರುಗಿಸುವುದರಿಂದ ಮಾತ್ರವಲ್ಲ ಉರುಳು ಸೇವೆ ಮಾಡುವ ಜನರಿಂದ, ವಾಹನಗಳಿಂದ ಹಣ ಪಡೆಯುತ್ತಾರೆ.

ಯಾಂತ್ರಿಕ ಯುಗದಲ್ಲಿಯೂ ದ್ವಿಚಕ್ರ, ತ್ರಿಚಕ್ರ ವಾಹನಗಳು ಸಹ ಗುಡಿಯ ಪ್ರದಕ್ಷಿಣೆ ಮಾಡುವುದನ್ನು ನೋಡಬಹುದು. ಅವರು ಪೂಜಾರಿಯಿಂದ ವಾಹನ ಪೂಜೆ ಮಾಡಿಸುತ್ತಾರೆ.

೪.೩.೨೭. ಜಾತ್ರೆಯಲ್ಲಿ ಜಾನಪದ ಕಲೆಗಳ ಪ್ರದರ್ಶನ

೪.೩.೨೭.೧. ಕೋಲಾಟ

ಕಾಡುಗೊಲ್ಲರು ಕೋಲಾಟ ಆಡುವುದರಲ್ಲಿ ನಿಸ್ಸೀಮರು. ಇವರ ಕೋಲಾಟಕ್ಕೆ ಇತರೆ ಯಾವ ಸಮುದಾಯದವರ ಕೋಲಾಟವು ಸಮಾನಾಗುವುದಿಲ್ಲ. ಕೋಲಾಟದ ಪ್ರಕಾರಗಳನ್ನು ಕಾಡುಗೊಲ್ಲರು ಕರಗತ ಮಾಡಿಕೊಂಡಿದ್ದಾರೆ. ಕೋಲಾಟ ಜನರನ್ನು ರಂಜಿಸುತ್ತದೆ. ಬೇಸರ ಕಳೆಯುತ್ತದೆ. ಕೋಲಾಟ

ಆಡುವವರದ್ದು ತಮ್ಮದೇ ಆದ ವೇಷ ಭೂಷಣಗಳನ್ನು ಧರಿಸುತ್ತಾರೆ. ಕೈಯಲ್ಲಿ ಎರಡು ಕೋಲು ತಲೆಗೆ ಪೇಟ ಸುತ್ತಿರುತ್ತಾರೆ. ನಂತರ ಒಲ್ಲೆಯನ್ನು ಸೊಂಟಕ್ಕೆ ಬಿಗಿದಿರುತ್ತಾರೆ. ಬಿಳಿ ಬನಿಯನ್ ಜೊತೆ ಚಡ್ಡಿ ತೊಟ್ಟಿರುತ್ತಾರೆ. ಕಾಲಿಗೆ ಗೆಜ್ಜೆ, ಹಣೆಗೆ ವಿಭೂತಿ ಇಲ್ಲವೆ ಕುಂಕುಮ ಧರಿಸುತ್ತಾರೆ. ಅವರು ಕೋಲು ಮತ್ತು ಹೆಜ್ಜೆ ಹಾಕುವ ರೀತಿ ತುಂಬಾ ಸೊಗಸಾಗಿರುತ್ತದೆ. ಆ ಮೂಲಕ ಅವರದೇ ಆದ ಧಾಟಿಯಲ್ಲಿ ಪದವನ್ನು ಹಾಡುತ್ತಾರೆ. ಎಂತಹ ವ್ಯಕ್ತಿಯಾದರೂ ಅದಕ್ಕೆ ಸೋಲಲೇಬೇಕಾಗುತ್ತದೆ. ಆ ರೀತಿಯ ಕುಣಿತ ಎಲ್ಲರಿಗೂ ಬರುವುದಿಲ್ಲ. ಅದನ್ನು ಬೇರೆಯವರು ತರಬೇತಿ ಕೊಡಬೇಕಾಗುತ್ತದೆ. ಜನಪದರು ಕೋಲು ಕೈಯಲ್ಲಿ ಹಿಡಿದ ತಕ್ಷಣ ಕಲಿಯು ಸಾಮರ್ಥ್ಯ ಪಡೆದುಕೊಂಡವರಾಗಿದ್ದಾರೆ. ಕಲೆ ಅವರ ರಕ್ತದಲ್ಲಿಯೇ ಇರುತ್ತದೆ.

ಅವರ ಹಾಡಿನ ಗೇಯತೆ ಮನಸ್ಸನ್ನು ಕಲುಕುತ್ತದೆ. ನೈತಿಕತೆ, ಧರ್ಮ ಬೋಧಿಸುವ ಹಾಡುಗಳಿವೆ. ಪಾತಿವ್ರತ್ಯದ ಮೌಲ್ಯ ಎತ್ತಿ ಹಿಡಿಯುವ, ಸಂಸ್ಕೃತಿಗಾಗಿ ಹೋರಾಡಿ ಮಡಿದ ಸಾಂಸ್ಕೃತಿಕ ವೀರರನ್ನು ಕುರಿತಾದ ಹಾಡುಗಳು, ಅನ್ಯಾಯಕ್ಕೆ ಒಳಗಾದ ಸ್ತ್ರೀ, ಪುರುಷರ ಲಾವಣಿಗಳನ್ನು ಹಾಡುವುದರಿಂದ ಜನರಿಗೆ ಮನರಂಜನೆಯ ಜೊತೆಗೆ ಅವರಲ್ಲಿರುವ ಹೀನ ಪ್ರವೃತ್ತಿ ಕಡಿಮೆ ಮಾಡಿ ಮನಸ್ಸನ್ನು ಪರಿಶುದ್ಧಗೊಳಿಸುತ್ತವೆ.

೪.೨.೨೭.೨. ಜಾನಪದ ಹಾಡು ಮತ್ತು ಕಾವ್ಯಗಳನ್ನು ಹೇಳುವುದು

ಇದು ಜನಪದ ಜಾತ್ರೆಯಾದುದರಿಂದ ಇಲ್ಲಿ ಜಾನಪದರ ಸಾಹಿತ್ಯವನ್ನು ಗುರುತಿಸುವುದು ಅನಿವಾರ್ಯವಾಗುತ್ತದೆ. ಜಾತ್ರೆಯಲ್ಲಿ ಹಲವಾರು ಹಳ್ಳಿಯ ಜನರು ಒಂದು ಕಡೆ ಸೇರುವುದರಿಂದ ಅಲ್ಲಿ ಒಂದು ರೀತಿ ಪಾಂಡಿತ್ಯ ಪರೀಕ್ಷೆಯಾಗುತ್ತದೆ. ಪ್ರತಿಯೊಬ್ಬರು ತಮಗೆ ತಿಳಿದಿರುವ ಪದಗಳನ್ನು ಹಾಡುತ್ತಾರೆ. ಆಗ ಅವರಲ್ಲಿ ಯಾರಾದರೊಬ್ಬರು ಪೂರ್ಣ ಪ್ರಮಾಣದ ಪದವನ್ನು ಕಲಿತವರಿರುತ್ತಾರೆ. ಇತರರು ಎಲ್ಲಿಯಾದರೂ ಸಂದು ತಪ್ಪಿದರೆ ಅವರಿಗೆ ಇಲ್ಲಿ ತಪ್ಪಿದ್ದೀರಿ ಎಂದು ಹೇಳುತ್ತಾರೆ. ಅವರು ಹಾಡುವ ದೇವರ ಹಾಡುಗಳ ಬಗೆಗೆ ಅಲ್ಲಿ ಚರ್ಚೆಯಾಗುತ್ತವೆ. ಅಲ್ಲಿ ಅವರಿಗೆ ಸಮಯ ಬಹಳಷ್ಟು ಇರಿವುದರಿಂದ ಹಾಡು ಕಲಿತವರು ಅಲ್ಲಿ ಪದಗಳನ್ನು ಹೇಳುವುದರ ಮೂಲಕ ಪ್ರಸಿದ್ಧಿಗೆ ಬರುತ್ತಾರೆ. ಇಂತಹ ಊರಿನಲ್ಲಿರುವವರು ಇಂತಹ ದೇವರ ಮೇಲೆ ಪದಗಳನ್ನು ಹೇಳುತ್ತಾರೆಂದು ಗುರುತಿಸಬಹುದು. ಸೋಬಾನೆಯ, ಹಸೆ ಹಚ್ಚುವ ಮತ್ತು ದೇವರ ಸ್ಥುತಿ ಪದ್ಯಗಳನ್ನು ಇಲ್ಲಿ ಹಾಡುವುದನ್ನು ಕಾಣಬಹುದು.

ಸ್ತ್ರೀ ದೇವತೆಯರನ್ನು ಕುರಿತಾದ ಹಲವಾರು ಪದಗಳನ್ನು ಹೇಳುತ್ತಾರೆ. ಇದರಿಂದ ಅಲ್ಲಿ ಪದಗಳನ್ನು ಕಲಿಯುವವರಿಗೆ ಉಪಯೋಗವಾಗುತ್ತವೆ. ಈ ಎಲ್ಲ ಪದಗಳು ಹೆಚ್ಚಿನ ಪ್ರಮಾಣದಲ್ಲಿ ಗೊಲ್ಲ ಸಂಸ್ಕೃತಿಯನ್ನು ಕುರಿತು ಹೇಳುವಂತವು. ಅವರಲ್ಲಿರುವ ಭಾಷೆಯ ಸಾಮರ್ಥ್ಯ, ಅವರ ನಂಬಿಕೆ. ಧರ್ಮ ನಿಷ್ಠೆ ಮತ್ತು ಭಕ್ತಿಯ ಪರಾಕಾಷ್ಠತೆಯನ್ನು ಸಾರುತ್ತವೆ. ನಂತರ ಅವರು ಸತ್ಯಕ್ಕೆ ನ್ಯಾಯಕ್ಕೆ ಎಷ್ಟು ನಿಷ್ಟುರವಾಗಿದ್ದರು ಎಂಬುದನ್ನು ತಿಳಿಸುವ ಪದಗಳು ನಿಜವಾಗಿಯೂ ಒಂದು ಸಂಸ್ಕೃತಿಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದೇ ಪರಿಭಾವಿಸಬೇಕಾಗುತ್ತದೆ.

೪.೩.೨೮. ಕಳಸ ಇಳಿಸುವುದು

ಕಳಶ ಇಳಿಸುವುದು ಕಾಡುಗೊಲ್ಲರ ಆಚರಣೆಯ ಅತೀ ಪ್ರಮುಖ ಭಾಗ. ಈ ಆಚರಣೆಯನ್ನು ಬಹುಶಃ ಯಾವ ಸಮುದಾಯದಲ್ಲಿಯೂ ಗುರುತಿಸಲು ಸಾಧ್ಯವಿಲ್ಲ. ಕೆಲವು ಸಮುದಾಯಗಳಲ್ಲಿ ಕೆಂಡ ತುಳಿಯುವುದುಂಟು. ಕಳ್ಳಿ ಮೇಲೆ ನಡೆಯುವುದುಂಟು ಇಲ್ಲವೇ ಬೀಳುವುದುಂಟು. ಆದರೆ ಕೇತಪ್ಪ ದೇವರ ಜಾತ್ರೆಯಲ್ಲಿ ವಿಶಿಷ್ಟವಾದ ಪದ್ಧತಿ ನಡೆಯುತ್ತದೆ. ಕಳಸ ಇಳಿಸುವವರನ್ನು ಈರಗಾರರೆಂದು ಅಥವಾ ವೀರಗಾರರೆಂದು ಕರೆಯುತ್ತಾರೆ. ಇವರು ಚೌಳೂರಿನವರಾಗಿದ್ದು ಕೋಣನಗೊಲ್ಲರು ಎಂಬ ಉಪಬೆಡಗಿನವರು. ಇವರು ಐದು ಜನರಿರುತ್ತಾರೆ. ಆ ದಿನ ಉಪವಾಸ ವ್ರತವನ್ನು ಕೈಗೊಂಡು ಹಿರಿಯರ ಸಲಹೆಯ ಮೇರೆಗೆ ಕಳಶ ಇಳಿಸಲು ಸಿದ್ಧವಾಗುತ್ತಾರೆ. ಕಳಸ ಇಳಿಸುವ ಸಮಯಕ್ಕೆ ಹದಿಮೂರು ಗುಡಿಕಟ್ಟಿನ ಜನರು ಸೇರಿರುತ್ತಾರೆ. ಕಳಶ ಇಳಿಸುವುದನ್ನು ನೋಡುವುದೇ ಸಂಭ್ರಮ. ಅಲ್ಲಿ ಅವರು ದೇವರ ಪವಾಡಗಳನ್ನು ಗುರುತಿಸುತ್ತಾರೆ. ಜಾತ್ರೆಯಲ್ಲಿ ಭಾಗವಹಿಸಿದವರೆಲ್ಲ ಕಳಸ ಇಳಿಸುವ ಕೆಲಸಕ್ಕೆ ಕೈ ಹಾಕುವಂತಿಲ್ಲ. ಕಳಸ ಇಳಿಸುವ ಸನ್ನಿವೇಶವು ಜನರಲ್ಲಿ ಕಾತರತೆಯನ್ನು ಕುತೂಹಲವನ್ನು ಮೂಡಿಸುತ್ತದೆ. ಅಂದರೆ ಕಳಸ ಇಳಿಸುವವರು ವೀರಗಾರರಾಗಿ ಕಂಡುಬರುತ್ತಾರೆ. ಅವರು ಸಾಕ್ಷತ್ ದೇವರ ಸ್ವರೂಪವೆಂದು ಜನಸಮುದಾಯ ತಿಳಿದಿರುತ್ತದೆ. ಅವರು ದೇವರು ಮೈ ಮೇಲೆ ಬಂದಂತೆ ಉಗ್ರವಾಗಿ ವರ್ತಿಸುತ್ತಾ ಐದು ಜನ ವೀರಗಾರರು ಪೈಪೋಟಿಯಿಂದ ಕಳಸ ಇಳಿಸಲು ಕಳ್ಳಿ ಗುಡಿಯನ್ನು ಹತ್ತುತ್ತಾರೆ. ಯಾರು ಮೊದಲು ಕೀಳುತ್ತಾರೂ ಅವರಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಅವರಲ್ಲಿರುವುದರಿಂದ ಉಮ್ಮಸ್ಸಿನಿಂದ ದೇವರ ಕಳ್ಳಿಯನ್ನು ಏರಿ ಕಳಸ ತೆಗೆದು ಅದರ ಮೇಲೆ ಕುಣಿಯುತ್ತಾರೆ. ಕಳಸ ಇಳಿಸುವುದಕ್ಕಿಂತ ಮೊದಲು ದೇವರುಗಳನ್ನು ಗುಡಿಯ ಹೊರಗೆ ಇಡುತ್ತಾರೆ. ಈರಗಾರರು ಚಡ್ಡಿಯನ್ನು ಮಾತ್ರ ಧರಿಸಿರುತ್ತಾರೆ. ಬರಿಕೈಯಲ್ಲಿ ಕಳ್ಳಿಯ ಗುಡಿಯನ್ನು ಹತ್ತಿ ಕಳಸಗಳನ್ನು ಒಂದಾದ ನಂತರ ಒಂದನ್ನು ಇಳಿಸುತ್ತಾರೆ. ಆ ಸಮಯದಲ್ಲಿ ಜಗಳಗಳು ಆಗದಂತೆ ತಡೆಯಲು ಪೋಲಿಸರ ವ್ಯವಸ್ಥೆ ಇರುತ್ತದೆ. ಕಳಸ ಇಳಿಸುವ ವೀರಗಾರರನ್ನು ಮೊದಲೆ ಆಯ್ಕೆ ಮಾಡಿರುತ್ತಾರೆ. ಅವರನ್ನು ಬಿಟ್ಟು ಬೇರೆಯವರು ಕಳಸ ಇಳಿಸಿದರೆ ಅವರಿಗೆ ಐದು ಸಾವಿರ ರೂಪಾಯಿ ದಂಡ ಹಾಕುತ್ತಾರೆ.

ಇವರು ಕಳ್ಳಿಯಲ್ಲಿ ಹುಟ್ಟಿ ಕಳ್ಳಿಯಲ್ಲೇ ಬೆಳೆದುದರಿಂದ ಇವರಿಗೆ ಕಳ್ಳಿಯು ಒಗ್ಗಿಕೊಂಡಿದೆಯಂದು ಹೇಳಿದರೆ ತಪ್ಪಾಗಲಾರದು. ಇವರು ತುಂಬಾ ಶಿಸ್ತಿನಿಂದ ಕಳ್ಳಿಯನ್ನು ಹತ್ತಬೇಕಾಗುತ್ತದೆ. ಗೌಡರು ಹೇಳಿದಂತೆ ಕೇಳಿ ಕಳಸವನ್ನು ತೆಗೆಯಬೇಕಾಗುತ್ತದೆ. ಇಲ್ಲಿ ಹಿರಿಯರ ಮಾತುಗಳಿಗೆ ತುಂಬ ಗೌರವವಿದೆ. ಇಲ್ಲದಿದ್ದರೆ ಯಾರೂ ಬೇಕಾದರೂ ಬಂದು ಕಳಸ ತೆಗೆಯುವ ಅವಕಾಶವಿತ್ತು. ಆದರೆ ಅಂತಹ ಅವಕಾಶಗಳಿಗೆ ಇವರು ದಾರಿ ಮಾಡಿಕೊಟ್ಟಿಲ್ಲ. ಕಳಸ ಇಳಿಸಿದ ನಂತರ ಅಲ್ಲಿಗೆ ಬಂದಿರುವ ದೇವರುಗಳು ತಮ್ಮ ತಮ್ಮ ಹಟ್ಟಿಯನ್ನು ಸೇರಿಕೊಳ್ಳುತ್ತವೆ. ಆ ನಂತರ ಅಲ್ಲಿರುವ ಕಳ್ಳಿಯನ್ನು ಹರಾಜು ಹಾಕುತ್ತಾರೆ. ಅದರಿಂದ ಬಂದ ಹಣವನ್ನು ದೇವರ ಕೆಲಸ ಕಾರ್ಯಗಳಿಗೆ ಬಳಸುತ್ತಾರೆ. ಇಲ್ಲಿ ಕಳ್ಳಿಯನ್ನು ದುಡ್ಡಿಗೆ ಮಾರುವುದರ ಮೂಲಕ ಆ ದೇವರ ಪ್ರಾಮುಖ್ಯತೆಯನ್ನು ಎತ್ತಿಹಿಡಿಯುತ್ತಾರೆ.

೪.೪. ಪಾತೇಲಿಂಗ

"ಹಿರಿಯೂರು ತಾಲ್ಲೂಕಿನ 'ಕೂಡ್ಲಹಳ್ಳಿ'ಯಲ್ಲಿ ಪಾತೇಲಿಂಗನ ಮೂಲನೆಲೆ ಇದೆ. ಇದನ್ನು ಪಾರ್ಥಲಿಂಗ (ಪಾರತಲಿಂಗ>ಪಾತಲಿಂಗ) ಎಂದು ಶಿಷ್ಟರು ಕರೆಯುವುದುಂಟು. ಇದು 'ಉಗ್ರಸ್ವರೂಪ'ದ ದೇವರಾಗಿರುವುದರಿಂದ, ಈ ದೇವರ ಗುಡಿಯ ಬಾಗಿಲನ್ನು ಅರ್ಧ ಮಾತ್ರ ತೆರೆಯುವ ಸಂಪ್ರದಾಯವಿದೆ. ಪೂರ್ತಿ ತೆರೆದರೆ ಉರಿಗಣ್ಣಿನಿಂದ ಸುಟ್ಟು ಬಿಟ್ಟಾನು ಎಂಬ ನಂಬಿಕೆ ಇದೆ. ಈ ದೇವರು ಹೊರ ಹೊರಟಾಗ ಹೆಂಗಸರು, ಗರ್ಭಿಣಿಯರು ಮಕ್ಕಳು ಬೀದಿಯಲ್ಲಿ ಇರುವಂತಿಲ್ಲ."
(ಶಿವಣ್ಣ ಮೀರಾಸಾಬಿಹಳ್ಳಿ ಕಾಡುಗೊಲ್ಲರ ಸಂಸ್ಕೃತಿ.ಪುಟ ೬, ೨೦೦೪)

೪.೪.೧.ಪಾತೇಲಿಂಗನ ಸೃಷ್ಟಿಪುರಾಣ

ಶಿವ ಪಾರ್ವತಿ ಲೋಕ ಸಂಚಾರಕ್ಕೆ ಬರುವಂತಹ ಸಮಯದಲ್ಲಿ ಭೂಲೋಕದಲ್ಲಿ ಧರ್ಮ ಕರ್ಮವನ್ನು ಪರೀಕ್ಷೆ ಮಾಡುವ ನೆಪದಲ್ಲಿ ಶಿವನು ಜೋಗಿಯ, ಪಾರ್ವತಿ ಜೋಗಿಣಿಯ ವೇಷಧರಿಸಿ ಭಿಕ್ಷೆ ಬೇಡುತ್ತಾ ಬಂದರು. ಆ ಊರಿನಲ್ಲಿ ದರೂಡಿ ದಾನಶಾಲಮ್ಮ ಎಂಬ ಹೆಣ್ಣುಮಗಳು ಮುತ್ತು ರತ್ನಗಳನ್ನು ದರೋಡೆ ಮಾಡಿ ಯಾರಿಗೂ ದಾನ ಕೊಡದಂತೆ ಸಂಗ್ರಹಿಸಿದ್ದಳು. ಅವಳಿಗೆ ಎಲ್ಲ ಸಕಲ ಸಂಪತ್ತು ಇತ್ತು. ಆದರೆ ಮಕ್ಕಳಿಲ್ಲ ಎಂಬ ಕೊರಗು ಕಾಡುತ್ತಿರುತ್ತದೆ. ಆ ಕಾರಣದಿಂದ ಅವಳ ಮನೆಗೆ ಶಿವನು ಭಿಕ್ಷೆಗೆ ಬಾರದೆ ತಪ್ಪಿಸಿಕೊಂಡು ಹೋಗುತ್ತಾನೆ. ಹೀಗೆ ಮಾಡಲು ಕಾರಣವೇನೆಂದು ಪಾರ್ವತಿಯು ಕೇಳಿದಾಗ, ಅವಳು ಹೆಸರಿಗೆ ಮಾತ್ರ ದಾನಶಾಲಮ್ಮ. ಯಾರಿಗೂ ಬಿಡಿಕಾಸು ದಾನ ಮಾಡುವುದಿಲ್ಲ. ಜೊತೆಗೆ ಆಕೆ ಕಷ್ಟಪಟ್ಟು ಮುತ್ತು ರತ್ನಗಳನ್ನು ಸಂಗ್ರಹಿಸಿಲ್ಲ. ಕಳ್ಳತನ ಮಾಡಿ ಹಲವಾರು ಜನರನ್ನು ಕೊಲೆ ಸುಲಿಗೆ ಮಾಡಿದ್ದರಿಂದ ಅದರ ಪಾಪ ಇವಳಿಗೆ ತಗುಲಿರುವ ಕಾರಣ ಮಕ್ಕಳಾಗಿಲ್ಲ. ಆ ಕಾರಣದಿಂದ ಮಕ್ಕಳಿಲ್ಲದವಳ ಕೈಯಲ್ಲಿ ಭಿಕ್ಷೆ ಬೇಡುವುದು ಕೂಡ ಧರ್ಮಕ್ಕೆ ವಿರುದ್ದವಾದುದು. ಇದರಿಂದಾಗಿ ನಾನು ಅವಳ ಮನೆಗೆ ಭಿಕ್ಷೆ ಬೇಡಲು ಹೋಗುವುದಿಲ್ಲ ಎಂದು ಹೇಳಿದನು.

ಪಾರ್ವತಿಯು ಮಾತ್ರ ತಮ್ಮ ಭಿಕ್ಷಾ ಕಾಯಕಕ್ಕೆ ಅನ್ಯಾಯ ಮಾಡಬಾರದೆಂದು ದಾನಶಾಲಮ್ಮನ ಮನೆಯ ಮುಂದೆ ಹೋಗಿ ಭವತಿ ಭಿಕ್ಷಾಂದೇಹಿ ಎಂದು ಭಿಕ್ಷೆ ಬೇಡಿದಾಗ, ಯಾರಿಗೂ ದಾನಕೊಡದ ಆಕೆ ಪಾರ್ವತಿಗೆ ಮುತ್ತು ರತ್ನಗಳನ್ನು ಕೊಟ್ಟು ತನಗೆ ಮಕ್ಕಳ ಭಾಗ್ಯ ಕೊಡುವಂತೆ ಕಾಲು ಹಿಡಿದು ಬೇಡಿಕೊಳ್ಳುತ್ತಾಳೆ. ಅವಳ ಮನದ ನೋವನ್ನು ಅರಿತ ಪಾರ್ವತಿ ಮಕ್ಕಳ ಭಾಗ್ಯ ಕರುಣಿಸುತ್ತೇನೆ. ಆದರೆ ನಿನ್ನ ಬಳಿ ಇರುವ ಸಂಪತ್ತನ್ನು ದಾನಮಾಡಬೇಕು ಎಂದು ಹೇಳಿ, ಕುಂಬಳ ಬೀಜವನ್ನು ಕೊಟ್ಟು ಬರುತ್ತಾಳೆ. ಆ ಕುಂಬಳ ಬೀಜವನ್ನು ಹೊಲದಲ್ಲಿ ಬಿತ್ತನೆ ಮಾಡಿ ಅದು ಕಾಯಿ ಬಿಟ್ಟ ನಂತರ ಅವುಗಳನ್ನು ದಾನಮಾಡಬೇಕು ಎಂದು ಹೇಳಿದಳು. ಪಾರ್ವತಿ ಹೇಳಿದಂತೆ ದಾನಶಾಲಮ್ಮ ಸೋಮವಾರ ತಣ್ಣೀರ ಸ್ನಾನ ಮಾಡಿ, ಒಂದು ಹೊತ್ತಿನ ಉಪವಾಸ ವ್ರತ ಕೈಗೊಂಡು ತನ್ನ ಮನೆಯ ಹಿತ್ತಲಿನಲ್ಲಿ ಕುಂಬಳಕಾಯಿಯ ಬೀಜಗಳನ್ನು ಬಿತ್ತನೆ ಮಾಡಿದಳು. ಅದು ಸಾಕಷ್ಟು

ಕುಂಬಳಕಾಯಿಗಳನ್ನು ಬಿಟ್ಟಿತು. ಎಲ್ಲವನ್ನು ದಾನಮಾಡಿ, ಒಂದೇ ಒಂದು ಕುಂಬಳಕಾಯಿಯನ್ನು ತಾನು ತಿನ್ನಬೇಕೆಂದು ಬಯಸಿ ಅದನ್ನು ನೂರೊಂದು ಭಾಗಗಳಾನ್ನಾಗಿ ಮಾಡಿ ನೀರನ್ನು ತರಲು ಹೋದ ಸಮಯದಲ್ಲಿ ಅವಳ ಎದೆಗಳು ಉಬ್ಬಿಕೊಂಡು ಹಾಲು ಬರಲು ಪ್ರಾರಂಭಿಸಿದವು. ಇದರಿಂದ ಅವಳಿಗೆ ಭಯವುಂಟಾಯಿತು. ಮಕ್ಕಳಿಲ್ಲದ ಭಂಜೆ ನಾನು, ನನ್ನ ಎದೆಯಲ್ಲಿ ಹಾಲು ಬರಲು ಕಾರಣವಾದರೂ ಏನಿರಬಹುದು ಎಂದು ಮನಸ್ಸಿನಲ್ಲಿ ಯೋಚಿಸಿ ಮನೆಗೆ ಬಂದು ನೋಡಿದರೆ ಮನೆಯಲ್ಲಿ ನೂರೊಂದು ಮಕ್ಕಳು ಅಳುತ್ತಿದ್ದವು. ಅವಳು ಕುಂಬಳಕಾಯಿಯನ್ನು ನೂರೊಂದು ಭಾಗಮಾಡಿ ಇಟ್ಟಿದ್ದರಿಂದ ನೂರೊಂದು ಮಕ್ಕಳಾಗಿದ್ದವು. ಅವುಗಳಲ್ಲಿ ನೂರಾ ಒಂದನೆಯವನೇ ಪಾತೇಲಿಂಗ. ಎಲ್ಲ ಮಕ್ಕಳಿಗಿಂತ ದಷ್ಟಪುಷ್ಟನಾಗಿ ಪುಂಡನಾಗಿದ್ದ, ನೂರು ಮಕ್ಕಳಿಗೆ ಒಂದು ಮೊಲೆಯ ಹಾಲು ಕೊಟ್ಟರೆ ಪಾತೇಲಿಂಗ ಒಬ್ಬನಿಗೆ ಒಂದು ಮೊಲೆಯ ಹಾಲು ಕೊಡುತ್ತಿದ್ದಳು. ಆದರೂ ಅವನಿಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ದಾನಶಾಲಮ್ಮನಿಗೆ ಪಾತೇಲಿಂಗ ದೊಡ್ಡ ತಲೆ ನೋವಾಗಿ ಪರಿಣಮಿಸಿದ್ದ. ಮೊದಲೆ ಪುಂಡನಾಗಿದ್ದ ಈತ ಉಳಿದ ನೂರು ಜನರಿಗೆ ಹಿಂಸೆ ಮಾಡುತ್ತಿದ್ದ. ಅಷ್ಟೆ ಅಲ್ಲ ಅವನು ಉಗ್ರಸ್ವಭಾವದವನಾಗಿದ್ದರಿಂದ ಅವನ ಕಾಟವನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ ದಾನಶಾಲಮ್ಮ ಶಿವಪಾರ್ವತಿಯರ ಮೊರೆ ಹೋಗಿ ಪಾತೇಲಿಂಗನ ಕಾಟದಿಂದ ಪಾರುಮಾಡುವಂತೆ ಕೇಳಿಕೊಂಡಳು. ಮಕ್ಕಳ ವರಕೊಟ್ಟ ತಪ್ಪಿಗಾಗಿ ಶಿವ ಪಾರ್ವತಿ ಪಾತೇಲಿಂಗನನ್ನು ಅನಿವಾರ್ಯವಾಗಿ ಕೈಲಾಸಕ್ಕೆ ಕರೆದುಕೊಂಡು ಹೋದರು.

ಪಾತೇಲಿಂಗ ಕೈಲಾಸದಲ್ಲಿರುವ ಸಾವಿರಾರು ಲಿಂಗಗಳಿಗೆ ಕಷ್ಟಕೊಡಲು ಆರಂಭಿಸಿದ. ಇವನಿಂದುಂಟಾದ ತೊಂದರೆಗಳನ್ನು ಸಹಿಸದ ಇನ್ನುಳಿದ ಲಿಂಗಗಳು ತಮ್ಮ ನೋವನ್ನು ಶಿವ ಪಾರ್ವತಿಯರಿಗೆ ಹೇಳಿದಾಗ, ಶಿವನು ಪಾರ್ವತಿಯನ್ನು ಬೈಯ್ಯುತ್ತಾನೆ. ಇದಕ್ಕೆ ಕಾರಣ ಪಾರ್ವತಿ ಶಿವನ ಮಾತನ್ನು ಮೀರಿ ವರಗಳನ್ನು ಕೊಟ್ಟಿರುತ್ತಾಳೆ. ಇದರಿಂದ ಪಾತೇಲಿಂಗನ ಮೇಲೆ ಕೋಪಗೊಂಡು ಅವನನ್ನು ಸೆರೆ ಹಾಕುತ್ತಾಳೆ. ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಬಂದು ಪಾರ್ವತಿಯ ಮುಂದೆ ಅಳುತ್ತಾ ನಿಲ್ಲುತ್ತಾನೆ. ನೀನು ನನ್ನನ್ನು ಹೆತ್ತ ತಾಯಿಯಾಗಿದ್ದರೆ ನನ್ನನ್ನು ಸೆರೆಮನೆಗೆ ಹಾಕುತ್ತಿರಲಿಲ್ಲ, ಇದಕ್ಕೆಲ್ಲ ಶಿವನೇ ಕಾರಣನೆಂದು ಮನಸ್ಸಿಗೆ ಬೇಜಾರ ಮಾಡಿಕೊಂಡು ಶಿವನ ಗೋವುಗಳನ್ನು ನಾಶ ಮಾಡುವುದಾಗಿ ಪ್ರತಿಜ್ಞೆ ಮಾಡುವನು.

೪.೪.೨. ಪಾತೇಲಿಂಗನ ಪವಾಡಗಳು

೪.೪.೨.೧. ಶಿವನ ದನಗಳನ್ನು ನಾಶಮಾಡಿದ್ದು

ಕೈಲಾಸದಿಂದ ಕೆಲವು ಕಾಲ ತಲೆಮರೆಸಿಕೊಂಡ ಪಾತೇಲಿಂಗ ಶಿವನ ಏಳು ಗೂಡಿನ ದನಗಳನ್ನು ಕಾಯುತ್ತಿದ್ದ ನಾಗಣ್ಣನ ಸ್ನೇಹ ಮಾಡಿದನು. ಪಾತೇಲಿಂಗನು ಮಾನವನ ರೂಪ ಧರಿಸಿ ನಾಗಣ್ಣನೊಂದಿಗೆ ದನಕಾಯುವ ಕೆಲಸ ಮಾಡಿದನು. ನಾಗಣ್ಣನಿಗೂ ಒಬ್ಬನೆ ದನಕಾಯುವುದು ಕಷ್ಟದ ಕೆಲಸವಾಗಿತ್ತು. ಹಾಗಾಗಿ ಪಾತೇಲಿಂಗನನ್ನು ತನ್ನೊಂದಿಗೆ ದನ ಕಾಯಲು ಸೇರಿಸಿಕೊಂಡನು. ಇದರ ಜೊತೆಗೆ ಪಾತೇಲಿಂಗನು ನಾಗಣ್ಣನಿಗೆ ಮೆಚ್ಚಿನ ಗೆಳೆಯನಾದನು.

ದನಗಳನ್ನು ಕಾಯ್ದುಕೊಂಡು ಇಬ್ಬರು ಅನ್ಯೋನ್ಯವಾಗಿ ಇರುವಂತಹ ಸಂದರ್ಭದಲ್ಲಿ ಒಂದು ದಿನ ನಾಗಣ್ಣ ಬುತ್ತಿ ತರಲು ಕೈಲಾಸಕ್ಕೆ ಹೋದಾಗ, ಪಾತೇಲಿಂಗ ಏಳು ಗೂಡಿನ ದನಗಳನ್ನು ಉಗ್ರರೂಪ ತಾಳಿ ಕೊಂದು ಹಾಕುತ್ತಾನೆ. ಇದನ್ನು ನೋಡಿದ ನಾಗಣ್ಣನ ಮನಸ್ಸಿಗೆ ತುಂಬ ನೋವಾಗುತ್ತದೆ. ಆ ನೋವನ್ನು ಸಹಿಸಿಕೊಳ್ಳದೆ ಗೋಳಾಡುತ್ತಿರುವಂತಹ ಸಂದರ್ಭದಲ್ಲಿ ಪಾತೇಲಿಂಗ ಅವನಿಗೆ ಸಮಾಧಾನ ಮಾಡಿ, ಈಶ್ವರನ ಬಳಿಗೆ ಕರೆದುಕೊಂಡು ಹೋಗುತ್ತಾನೆ. ಈಶ್ವರ ಏಳು ಗೂಡಿನ ದನಗಳು ಸಾಯಿಸಲು ಕಾರಣವೇನೆಂದು ಕೇಳಿದಾಗ, ಪಾತೇಲಿಂಗ ತಾನೆ ಕೊಂದಿರುವುದಾಗಿ ಒಪ್ಪಿಕೊಂಡನು. ಹಿಂದೆ ಮಾಡಿದ ಪ್ರತಿಜ್ಞೆಯನ್ನು ಶಿವನಿಗೆ ನೆನಪಿಸುವುದರ ಮೂಲಕ ನನ್ನ ಪ್ರತಿಜ್ಞೆ ನೆರವೇರಿತು ಎಂದು ಹೇಳಿದನು. ಇದರಿಂದ ಕೋಪಗೊಡು ಶಿವನು ಪಾತೇಲಿಂಗನ ಮೇಲೆ ಯುದ್ಧ ಮಾಡುತ್ತಾನೆ. ಯುದ್ದದಲ್ಲಿ ಪಾತೇಲಿಂಗ ಜಯಶಾಲಿಯಾಗುತ್ತಾನೆ.

೪.೪.೨.೨. ಆದಿಶಕ್ತಿಯನ್ನು ಸೋಲಿಸಿದ್ದು

ಪಾತೇಲಿಂಗನ ಕಾಟ ದಿನದಿಂದ ದಿನಕ್ಕೆ ಜಾಸ್ತಿ ಆಗುತ್ತಾ ಹೋಗುತ್ತದೆ. ಏನಾದರೂ ಮಾಡಿ ಪಾತೇಲಿಂಗನನ್ನು ಕೊಲ್ಲಿಸಬೇಕೆಂದು ಬಯಸಿ ಶಿವನು ಆದಿ ಶಕ್ತಿಯ ಮೊರೆ ಹೋಗುತ್ತಾನೆ. ತನ್ನ ಮಗನಿಗೆ ಕಷ್ಟ ಕೊಟ್ಟವನನ್ನು ಸುಮ್ಮನೆ ಬಿಡಬಾರದು ಕೊಂದು ಹಾಕಬೇಕೆಂದು ಆದಿಶಕ್ತಿ ಪಾತೇಲಿಂಗನ ಮೇಲೆ ಯುದ್ಧಕ್ಕೆ ಬರುತ್ತಾಳೆ. ಆದಿಶಕ್ತಿಯು ದೇವಾನು ದೇವತೆಗಳನ್ನು ಸೆರೆಯಲ್ಲಿಟ್ಟಿದ್ದಳು. ಪಾತೇಲಿಂಗನ ಮೇಲೆ ಯುದ್ದಕ್ಕೆ ಹೋದರೆ ಅವನು ಸುಲಭವಾಗಿ ಸಾಯುತ್ತಾನೆ ಎಂದು ತಿಳಿದು ಆದಿಶಕ್ತಿಯೊಂದಿಗೆ ಯುದ್ದಮಾಡಲು ಹೇಳಿದನು. ಜೊತೆಗೆ ಆದಿಶಕ್ತಿಯನ್ನು ಗೆದ್ದದ್ದೆ ಆದರೆ ತನ್ನ ಉರಿಗಣ್ಣು ಕೊಡುವುದಾಗಿ ಶಿವ ಮಾತುಕೊಟ್ಟನು. ಇದರಿಂದ ಸಂತೋಷಗೊಂಡ ಪಾತೇಲಿಂಗ ಕೈಲಾಸ ಬಿಟ್ಟು ಆದಿಶಕ್ತಿಯ ಮೇಲೆ ಯುದ್ಧಕ್ಕೆ ಹೊರಟ. ಆದಿಶಕ್ತಿಯು ವಾಸವಾಗಿರುವ ಪಟ್ಟಣ್ಣವನ್ನು ಏಳು ಹೆಡೆಯ ಸರ್ಪಗಳು ಕಾಯುತ್ತಿದ್ದವು. ಅವುಗಳಿಗೆ ಕಾಣದಂತೆ ಪಾತೇಲಿಂಗ ಒಂದು ಪವಾಡ ಮಾಡಬೇಕಾಯಿತು. ಸಣ್ಣ ನಾಗರ ಹಾವಿನ ರೂಪಧರಿಸಿ ಆದಿಶಕ್ತಿ ಮಲಗಿರುವ ಮಂಚ ತಲುಪಿದನು. ಅವಳ ಬಳಿ ಹೋಗಿ ಪಾತೇಲಿಂಗ ತನ್ನ ನಿಜರೂಪವನ್ನು ತಾಳಿದನು ಮತ್ತು ಆದಿಶಕ್ತಿಯನ್ನು ಎಚ್ಚರಿಸಿದನು. ಇದರಿಂದ ಆದಿಶಕ್ತಿಗೆ ಆಶ್ಚರ್ಯವಾಯಿತು. ಏಕೆಂದರೆ ಯಾರೂ ಮಾಡದ ಸಹಾಸವನ್ನು ಪಾತೇಲಿಂಗ ಮಾಡಿದ್ದ. ದೇವಾನು ದೇವತೆಗಳು ಆದಿಶಕ್ತಿಯನ್ನು ನೋಡಿ ನಡುಗುತ್ತಿದ್ದರು. ಆದರೆ ಪಾತೇಲಿಂಗ ಗಟ್ಟಿ ಗುಂಡಿಗೆಯವನು ಎಂದು ಅವನನ್ನು ಹೊಗಳುವ ನೆಪದಲ್ಲಿ ಕೊಲ್ಲಲು ಪ್ರಯತ್ನಿಸಿದಳು. ಸಮಯ ಸಾಧಕನಾದ ಪಾತೇಲಿಂಗ ಅವಳನ್ನು ಗುದ್ದಿ ಕೊಂದನು. ನಂತರ ದೇವಾನು ದೇವತೆಗಳನ್ನು ಬಿಡುಗಡೆಮಾಡಿದನು.

೪.೪.೨.೩.ಏಳು ಹೆಡೆಯ ಸರ್ಪಕ್ಕೆ ವರ ಕೊಟ್ಟದ್ದು

ಪಾತೇಲಿಂಗ ಆದಿಶಕ್ತಿಯನ್ನು ಕೊಂದು ಹಾಕಿದನೋ ಆಗ ಏಳು ಎಡೆಯ ಸರ್ಪಗಳಿಗೆ ಭೀತಿ ಶುರುವಾಯಿತು. ಅವು ಪಾತೇಲಿಂಗನ ಕಾಲುಗಳಿಗೆ ನಮಸ್ಕಾರ ಮಾಡಿ, ಗುಲಗಂಜಿಯಷ್ಟು ಗಾತ್ರದ

ವಿಷವನ್ನು ವರವಾಗಿ ಕೊಡುವಂತೆ ಕೇಳಿದವು. ಮೊದಲೆ ಜನಪರವಾದ ಕಾಳಜಿಯುಳ್ಳ ಪಾತೇಲಿಂಗ ಈ ಸರ್ಪಗಳಿಗೆ ಗುಲಗಂಜಿ ಗಾತ್ರದ ವಿಷ ಕೊಟ್ಟರೆ ಅವು ಸಾಮಾನ್ಯ ಜನರನ್ನು ಕಚ್ಚಿ ಸಾಯಿಸುತ್ತವೆ ಎಂದು ತಿಳಿದು ಕೊಡುವುದಿಲ್ಲ ಎಂದು ನಿರಾಕರಿಸುತ್ತಾನೆ. ಸರ್ಪವು ಯಾರನ್ನು ತಪ್ಪು ಮಾಡದೆ ಕಡಿಯುವುದಿಲ್ಲ ನನಗೆ ಯಾರಾದರೂ ತೊಂದರೆ ಕೊಟ್ಟರೆ ಮಾತ್ರ ಕಡಿಯುವುದಾಗಿ ಹೇಳಿತು. ಅದರಿಂದ ಭಾಷೆ ತೆಗೆದುಕೊಂಡು ವರ ಕೊಟ್ಟು ಭೂಲೊಕಕ್ಕೆ ಕಳುಹಿಸಿ, ಕೈಲಾಸಕ್ಕೆ ಶಿವನ ಬಳಿಗೆ ಹೋಗುವನು. ಅಲ್ಲಿ ಶಿವನು ಇವನ ಶಕ್ತಿ ಸಾಮರ್ಥ್ಯವ ಗಮನಿಸಿ ಉರಿಗಣ್ಣುಕೊಟ್ಟು ಭೂಲೋಕದಲ್ಲಿ ಜನಪರ ಕೆಲಸ ಕಾರ್ಯಗಳನ್ನು ಮಾಡಿ ಪುನಃ ಕೈಲಾಸಕ್ಕೆ ಬಂದುಬಿಡು ಎಂದು ಹೇಳಿ ಕಳುಹಿಸಿದನು.

೪.೪.೨.೪. ಹೇಮರೆಡ್ಡಿ ಮತ್ತು ಭೀಮರೆಡ್ಡಿ ಮನೆ ಹಾಳು ಮಾಡಿದ್ದು

ಪಾತೇಲಿಂಗ ಕೈಲಾಸದಿಂದ ಬಂದು ನೇರವಾಗಿ ರೆಡ್ಡಿಗಳ ಮನೆಯಲ್ಲಿ ಉಳಿದುಕೊಂಡನು. ಆಗ ಹೇಮರೆಡ್ಡಿ ಮತ್ತು ಭೀಮರೆಡ್ಡಿಗಳು ಕಡು ಬಡತನ ಅನುಭವಿಸುತ್ತಿದ್ದರು. ಯಾವಾಗ ಪಾತೇಲಿಂಗ ಅವರ ಮನೆದೇವರಾಗಿ ಅವರಿಗೆ ಒಲಿದುಕೊಂಡನೋ, ಅಂದಿನಿಂದ ಅವರಿಗೆ ಬಂದಿರುವ ಬಡತನ ಬಯಲಾಗಿ ಹೋಯಿತು. ಎಲ್ಲಿ ನೋಡಿದರಲ್ಲಿ ಮುತ್ತು ರತ್ನದ ರಾಶಿಗಳು ಸೃಷ್ಟಿಯಾದವು, ರಾಮ ಲಕ್ಷ್ಮಣರೆಂಬ ಹೊನ್ನಿನ ಕಣಜಗಳು ಭರ್ತಿಯಾದವು.

ರೆಡ್ಡಿಗಳಿಗೆ ಯಾವಾಗ ಶ್ರೀಮಂತಕೆ ಬಂದಿತೋ ಆಗ ಅದರ ಜೊತೆಗೆ ಅಹಂಕಾರವೂ ಬಂದಿತು. ಪ್ರಾರಂಭದಲ್ಲಿ ಮನೆದೇವರಾಗಿ ಸ್ವೀಕರಿಸಿದ್ದ ಪಾತೇಲಿಂಗನನ್ನು ಹುರುಳಿ–ನವಣೆ ಚೀಲದಲ್ಲಿ ಹಾಕಿ ಪೂಜೆ ಮಾಡದೆ ನಿರ್ಲಕ್ಷ ಮಾಡಿದರು. ಇದರಿಂದ ಪಾತೇಲಿಂಗನಿಗೆ ಕೋಪ ಬಂದು ಉರಿಗಣ್ಣು ಬಿಟ್ಟನು. ಅವರ ಸಂಪತ್ತೆಲ್ಲ ಸುಟ್ಟು ನಾಶವಾಯಿತು.

೪.೪.೨.೫. ಮೂಲೆಮನೆ ತಿಮ್ಮಜ್ಜಿಯ ಸತ್ವ ಪರೀಕ್ಷೆ

ತಮ್ಮಜ್ಜಿ ವಿಧವೆ ವಯಸ್ಸಾದ ಮುದುಕಿ, ರೆಡ್ಡಿಗಳನ್ನು ಹಾಳು ಮಾಡಿದ ಪಾತೇಲಿಂಗ ತಿಮ್ಮಜ್ಜಿಯ ಮನೆಗೆ ಜಂಗಮನ ವೇಷಧರಿಸಿ ಬಂದು, ಹಸಿವನ್ನು ನೀಗಿಸಿಕೊಳ್ಳುವ ಸಲುವಾಗಿ ಅನ್ನವನ್ನು ಕೇಳುತ್ತಾನೆ. ಆಗಲೆ ಊಟ ಮಾಡಿ ಪಾತ್ರೆ ತೊಳೆದಿಟ್ಟಿದ್ದ ತಿಮ್ಮಜ್ಜಿ ಮೂರು ಕಂಡುಗ ಜೋಳ ಕಾಯುವಂತೆ ಹೇಳಿ, ಅಡುಗೆ ಮಾಡಿಕೊಂಡು ಬರಲು ಒಳಗೆ ಹೋದಾಗ ಪಾತ್ರೆಯಲ್ಲಿರುವ ಹೊತ್ತಿದ ಅನ್ನದ ಗಂಟು ಕಟ್ಟಿ ತಂದು ಕೊಟ್ಟಾಗ, ಅದರಿಂದ ಪಾತೇಲಿಂಗನ ಹೊಟ್ಟೆ ತುಂಬುವುದಿಲ್ಲ. ಇನ್ನೂ ಬೇಕು ಎಂದು ಕೇಳಿದಾಗ ತಿಮ್ಮಜ್ಜಿಗೆ ಬೇಸರವಾಗುತ್ತದೆ. ಆಗ ಸರಿಯಪ್ಪ ಹಂದಿ ಕಾದುಕೊಂಡು ಬಾ, ನೀನು ಬರುವುದರೊಳಗಾಗಿ ಅಡುಗೆ ತಯಾರು ಮಾಡಿರುತ್ತೇನೆ ಎಂದು ಹೇಳಿ ಹಂದಿ ಕಾಯಲು ಕಳುಹಿಸಿದಳು. ಹಂದಿ ಕಾಯಲು ಹೋದವನು ಹಸಿವಿನ ಬಾದೆಯನ್ನು ಸಹಿಸಿಕೊಳ್ಳದೆ ಮುನ್ನೂರು ಹಂದಿಗಳನ್ನು ಕೊಂದು ಊಟಕ್ಕೆ ಬಂದನು. ಆದರೂ ತಿಮ್ಮಜ್ಜಿ ಅವನನ್ನು ಕ್ಷಮಿಸಿ ಕೋಳಿ ಕಾಯಲು ಕಳುಹಿಸಿದಳು. ಮುನ್ನೂರು ಕೋಳಿಗಳನ್ನು ಕೊಂದು ತಿಂದನು. ಆದರೂ ಹೊಟ್ಟೆ ತುಂಬುವುದಿಲ್ಲ. ಮನೆಗೆ ಬಂದು ಮೂರು ಕಂಡುಗ ಜೋಳ ತಿಂದನು. ಇದನ್ನೆಲ್ಲ ಗಮನಿಸಿದ ತಿಮ್ಮಜ್ಜಿ ಇವನು

ಸಾಮಾನ್ಯನಲ್ಲ. ನನ್ನ ಸತ್ಯ ಪರೀಕ್ಷೆ ಮಾಡಲು ಬಂದಿರುವ ದೇವರು ಎಂದು ಅರಿವಾಗಿ, ಮಾಡಿದ ತಪ್ಪಿಗೆ ಕ್ಷಮೆ ಕೇಳಿದಾಗ, ಅವಳ ಭಕ್ತಿಗೆ ಮೆಚ್ಚಿ, ಅವಳಿಗೆ ಮುನ್ನೂರು ಹಂದಿ, ಕೋಳಿಗಳನ್ನು ಮತ್ತು ಮೂರು ಖಂಡುಗ ಜೋಳ ವಾಪಸ್ಸು ಕೊಟ್ಟು ಆಕೆಯನ್ನು ತನ್ನ ಭಕ್ತಳನ್ನಾಗಿ ಮಾಡಿಕೊಂಡನು.

ಇಲ್ಲಿ ಗಮನಿಸಬಹುದಾದ ಅಂಶವೆಂದರೆ ತಿಮ್ಮಜ್ಜಿ ಅಷ್ಟೆಲ್ಲಾ ದವಸ ಧಾನ್ಯಗಳಿದ್ದರೂ ಪಾತೇಲಿಂಗನನ್ನು ಹಂದಿ ಮತ್ತು ಕೋಳಿಕಾಯಲು ಕಳಿಸಿರುವುದು ಅವಳ ಕಾಯಕ ನಿಷ್ಠೆಯನ್ನು ಹೇಳುತ್ತದೆ.

೪.೪.೨.೬. ಕಾಳೆದುರ್ಗಿಯ ಸಂಹಾರ

ತಂದೆಯ ಆಜ್ಞೆಯಂತೆ ಪಾತೇಲಿಂಗನು ತಾಳೆದುರ್ಗಿಯ ತೋಟಕ್ಕೆ ಹೋಗುತ್ತಾನೆ. ಈ ತಾಳೆದುರ್ಗಿಯ ಪ್ರಸಂಗ ಜುಂಜಪ್ಪನ ಕಾವ್ಯದಲ್ಲಿಯೂ ಬರುತ್ತದೆ. ಪಾತೇದೇವರ ಕಾವ್ಯದಲ್ಲಿ ಬರುವ ತಾಳೆ ದುರ್ಗಿ ಸಾಮಾನ್ಯ ಜನರನ್ನು ಹಿಂಸೆ ಮಾಡಿ ಆ ಮೂಲಕ ಸಂತೋಷ ಅನುಭವಿಸುತ್ತಿರುತ್ತಾಳೆ. ಈ ತಾಳೆ ದುರ್ಗಿಯನ್ನು ಚಿತ್ತಯ್ಯ, ಕಾಟಯ್ಯರಿಂದಲೂ ಸಂಹಾರ ಮಾಡಲು ಆಗಿರಲಿಲ್ಲ. ಆದರೆ ಪಾತೇಲಿಂಗ ಅವಳೊಂದಿಗೆ ಯುದ್ಧ ಮಾಡಿ ಅವಳು ನುಂಗಲು ಪ್ರಯತ್ನಿಸಿದಾಗ, ಅವಳ ಗಂಟಲಿನ ಒಳಗೆ ತೂರಿ, ಅವಳ ಕಟುಬಾಯಿಯನ್ನು ಹಿಡಿದು ಅವಳ ದೇವನ್ನು ಎರಡು ಭಾಗ ಮಾಡಿದ. ಅವಳು ಸತ್ತು ಬಿದ್ದಳು. ಇದನ್ನು ನೋಡಿದ ಕಾಟಯ್ಯ, ಚಿತ್ತಯ್ಯ ಇಬ್ಬರೂ ಪಾತೇಲಿಂಗನ ಪೌರುಷವನ್ನು ಕೊಂಡಾಡಿದರು. ಚಿತ್ತಯ್ಯನನ್ನು ಚಿತ್ರಹಳ್ಳಿಯಲ್ಲಿ, ಕಾಟುಮ ದೇವರನ್ನು ಇಕ್ಕನೂರಿನಲ್ಲಿ ನೆಲೆಗೊಳಿಸಿ ಮುಂದಕ್ಕೆ ಹೋಗುತ್ತಾನೆ.

೪.೪.೨.೭. ಉಪ್ಪಾರ ಚಿಕ್ಕಣ್ಣನಿಗೆ ಒಲಿದದ್ದು

ಈತನು ಉಪ್ಪು ಮಾರುವ ಕಾಯಕ ಮಾಡುತ್ತಿದ್ದ. ಅವನಿಗೆ ಬಹಳ ಬಡತನವಿತ್ತು! ಅನ್ನಕ್ಕೆ ಬಡತನ, ಬಟ್ಟೆಗೆ ಬಡತನ ಮಕ್ಕಳು ಕೂಡ ಇರಲಿಲ್ಲ. ಹಾಗಾಗಿ ಅವನನ್ನು ಹುಡುಕಿಕೊಂಡು ಪಾತೇಲಿಂಗ ಬಂದನು. ಪಾತೆಲಿಂಗ ಅವನ ಮನೆಗೆ ಭಿಕ್ಷುಕನಾಗಿ ಬಂದು. ಚಿಕ್ಕಣ್ಣನ ಮುಗ್ಧ ಭಕ್ತಿಗೆ ಒಲಿದು ಅಷ್ಟ ಐಶ್ವರ್ಯವನ್ನು ದಯಾಪಾಲಿಸಿದನು. "ಪಾತೇಲಿಂಗನ ಕೃಪೆಯಿಂದಾಗಿ ಉಪ್ಪಾರರ ಚಿಕ್ಕಣ್ಣನ ಮನೆಯಲ್ಲಿ ಉಪ್ಪುಕೆರೆಯುವ ಚಿಪ್ಪು, ತಟ್ಟೆ ಸಲಿಕೆ ಮನೆಯ ತೊಲೆ ತೂಗುಮಂಚ ಮೊದಲಾದ ಎಲ್ಲಾವಸ್ತುಗಳು ಚಿನ್ನದವೇ ಆದವು" *(ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಪುಟ ೧೬೯, ೨೦೧೭)*

ಸಕಲ ಸಂಪತ್ತು ಕೊಟ್ಟ ದೇವರನ್ನು ಚಿಕ್ಕಣ್ಣ ಬಹಳ ನಿಷ್ಠೆ, ಭಕ್ತಿಯಿಂದ ಪೂಜಿಸುತ್ತಿದ್ದ. ಮಕ್ಕಳಿಲ್ಲದ ಚಿಕ್ಕಣ್ಣನಿಗೆ ಮಕ್ಕಳಾದವು. ಯಾವುದಕ್ಕೂ ಕೊರತೆ ಇಲ್ಲದಂತೆ ಚಿಕ್ಕಣ್ಣ ಆಗರ್ಭ ಶ್ರೀಮಂತನಾದ. ಇದರಿಂದಾಗಿ ಚಿಕ್ಕಣ್ಣನ ಹೆಂಡತಿಗೆ ಅಹಂಕಾರ ಬಂದಿತು. ಕೇಡುಗಾಲಕ್ಕೆ ದುರ್ಬುದ್ಧಿ ಎಂಬಂತೆ ಚಿಕ್ಕಣ್ಣನ ಹೆಂಡತಿ ಬಂಗಾರದ ತಟ್ಟೆಯಲ್ಲಿ ಹಾಲು ಅನ್ನ ಸಕ್ಕರೆ ಸೇರಿಸಿ ಹಂದಿ,ಕೋಳಿಗಳನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು, ಅವುಗಳಿಗೆ ಊಟ ಮಾಡಿಸುತ್ತಿದ್ದಳು. ಮೊದಲೇ ಹಂದಿ,

ಕೋಳಿಗಳನ್ನು ಕಂಡರೆ ಆಗದ ಪಾತೇಲಿಂಗ ಅವುಗಳನ್ನು ಸಾಕದಂತೆ ಎಚ್ಚರಿಸಿದ್ದ. ಆದರೂ ಆಕೆ ಹಂದಿ ಕೋಳಿಗಳನ್ನು ಸಾಕಿದಳು. ಆಗ ಪಾತೇಲಿಂಗ ಅವಳ ಹಂದಿ, ಕೋಳಿಗಳನ್ನು ನಾಶಮಾಡಿದನು. ಕೊಟ್ಟಿರುವ ಎಲ್ಲ ಐಶ್ವರ್ಯ ಕಿತ್ತುಕೊಂಡನು. ಆಗ ಚಿಕ್ಕಣ್ಣನ ಹೆಂಡತಿ ಮಾಡಿದ ತಪ್ಪಿಗಾಗಿ ಕ್ಷಮೆ ಯಾಚಿಸಿದನು. ಅವನ ಭಕ್ತಗೆ ಮೆಚ್ಚಿ ನಾಶ ಮಾಡಿದ್ದ ಸಕಲ ಸಂಪತ್ತನ್ನು ಮತ್ತೆ ಕೊಟ್ಟನು. ಹಂದಿ ಕೋಳಿಗಳನ್ನು ಕಾಡಿಗೆ ಓಡಿಸಿದನು. ಆನಂತರ ಪಾತೇದೇವರ ಮಹಿಮೆಯನ್ನು ಕಂಡು ಭಯ ಭಕ್ತಿಯಿಂದ ನಮಸ್ಕರಿಸಿ ಆ ದೇವರ ಪೆಟ್ಟಿಗೆಯನ್ನು ಕರಿಯ ಕಂಬಳಿಯ ಗದ್ದಿಗೆ ಮೇಲಿಟ್ಟು ಪೂಜೆ ಮಾಡಿದನು.

೪.೪.೨.೮ ಕರಡಿಬುಳ್ಳಪ್ಪನಿಗೆ ಒಲಿದದ್ದು

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಕರಡಿಬುಳ್ಳಪ್ಪ ಕರಿಓಬವ್ವನಹಳ್ಳಿಯ ಹತ್ತಿರ ಕುರಿರೊಪ್ಪ ದಲ್ಲಿ ದನಗಳರೊಪ್ಪ ಹಾಕಿಕೊಂಡಿದ್ದ. ಪಾತೇದೇವರು ಅವನ ಬಳಿ ತನ್ನನ್ನು ಬಿಡುವಂತೆ ಚಿಕ್ಕಣ್ಣನನ್ನು ಕೇಳಿಕೊಂಡಿತು. ಆಗ ಚಿಕ್ಕಣ್ಣ ಪಾತೇದೇವರನ್ನು ಕರಡಿಬುಳ್ಳಪ್ಪನಿಗೆ ಕೊಟ್ಟು ಅಲ್ಲಿಂದ ಆಂಧ್ರದ ಸೆಟ್ಟೂರು ಸಿರಿವಾಳದ ಹತ್ತಿರ ಇರುವ ಬಾದೆಹಳ್ಳಿಗೆ ಹೋಗಿ ನೆಲೆಸಿದನು. ಈತ ಮಾಡಿದ ತಪ್ಪೆಂದರೆ ಪೆಟ್ಟಿಗೆಯಲ್ಲಿಟ್ಟಿದ್ದ ಪಾತೇಲಿಂಗನನ್ನು ಹೊರತೆಗೆಯ ಬೇಕಾದರೆ ಬೀಗದ ಕೈ ಬೇಕಾಗಿತ್ತು. ಅದನ್ನು ತೆಗೆದುಕೊಂಡು ಚಿಕ್ಕಣ್ಣ ಹೋಗಿದ್ದನು. ಇಂದು ಅಲ್ಲಿ ವಾಸಿಸುತ್ತಿರುವ ಕಾಡುಗೊಲ್ಲರು ಬೀಗದ ಕೈಯನ್ನು ದೇವರೆಂದು ಪೂಜಿಸುತ್ತಾ ಬಂದಿದ್ದಾರೆ.

ಕರಡಿಬುಳ್ಳಪ್ಪ ತನ್ನ ಏಳು ಜನ ಮಕ್ಕಳು ಮತ್ತು ಸೊಸೆಯರೊಂದಿಗೆ ವಾಸವಾಗಿದ್ದ. ಅವನ ಬಳಿ ಏಳು ಗೂಡಿನ ದನಗಳು, ಕುರಿಗಳು ಇದ್ದವು. ಮೇಕೆ, ಕುರಿ ಕಾಯ್ದುಕೊಂಡಿದ್ದ. ಕರಡಿಬುಳ್ಳಪ್ಪ ಎರಡು ತಿಂಗಳಾದರೂ ಪಾತೇಲಿಂಗನ ಕಡೆ ಗಮನವನ್ನೇ ಹರಿಸಲಿಲ್ಲ. ಅಲೆಮಾರಿಗಳಾಗಿದ್ದ ಕಾಡುಗೊಲ್ಲರು ತಮ್ಮ ಕುರಿ ಮೇಕೆ ದನಗಳನ್ನು ಹೊಡೆದುಕೊಂಡು ವೆಣಕಲ್ಲುಗುಡ್ಡಕ್ಕೆ ಹೋದನು. ಅವರ ಜೊತೆಗೆ ಕರಡಿಬುಳ್ಳಪ್ಪನು ಹೋದನು. ಇದರಿಂದಾಗಿ ಕರಡಿಬುಳ್ಳಪ್ಪನಿಗೆ ತಮ್ಮ ಹೆಣ್ಣು ಮಕ್ಕಳು ಬುತ್ತಿ ಹೊತ್ತುಕೊಂಡು ಹೋಗಿ ಕೊಟ್ಟು ಬರುವುದು ಕಷ್ಟವಾಯಿತು. ಆದರೆ ಕರಡಿಬುಳ್ಳಪ್ಪನು ಮಾಡಿದ ತಪ್ಪೆಂದರೆ ಪಾತೇಲಿಂಗನನ್ನು ತೆಗೆದುಕೊಂಡು ಹೋಗದೇ ಬಿಟ್ಟು ಹೋದುದ್ದು. ಇದರಿಂದಾಗಿ ಕೋಪಗೊಂಡ ಪಾತೇಲಿಂಗ ಕರಡಿಬುಳ್ಳಪ್ಪನ ಕುರಿಗಳು ಮೂರ್ಚೆ ಹೋಗುವಂತೆ ಶಾಪಕೊಟ್ಟನು. ಇದರಿಂದಾಗಿ ಕರಡಿಬುಳ್ಳಪ್ಪನಿಗೆ ಬಹಳ ದುಃಖವುಂಟಾಗುತ್ತದೆ.

೪.೪.೨.೯. ಗೊಲ್ಲಳಮ್ಮ ಕೊರವಂಜಿ ವೇಷಧರಿಸಿದ್ದು

ಕರಡಿಬುಳ್ಳಪ್ಪ ಪೆಟ್ಟಿಗೆಯಲ್ಲಿರುವ ಪಾತೇಲಿಂಗನನ್ನು ಮರೆತೆ ಬಿಡುತ್ತಾನೆ. ಹಾಗಾಗಿ ಪಾತೇಲಿಂಗನಿಗೆ ಕೋಪ ಬಂದು ಕರಡಿ ಬುಳ್ಳಪ್ಪನ ಕುರಿಗಳಿಗೆ ತೊಂದರೆ ಕೊಡುತ್ತಾನೆ. ಅಲ್ಲಿಗೂ ಅವನ ಅರಿವಿಗೆ ಬರುವುದಿಲ್ಲ. ಆಗ ಪಾತೇಲಿಂಗ ಗೊಲ್ಲಳಮ್ಮನಿಗೆ ಕೊರವಂಜಿಯ ವೇಷಧರಿಸಿ ಬಂದು ನೆನಪು ಮಾಡುವಂತೆ ಮಾಡುತ್ತಾನೆ. ಆಗ ಕೊರವಂಜಿ ಕಣಿ ಹೇಳುವ ನೆಪದಲ್ಲಿ ಕರಡಿಬುಳ್ಳಪ್ಪನ

ಬಳಿಗೆ ಬರುತ್ತಾಳೆ. ಕರಡಿಬುಳ್ಳಪ್ಪ ಆಕೆಗೆ ಹೊನ್ನು ವರಹಗಳನ್ನು ರಾಶಿ ಹೊಯ್ದು ಕಣಿ ಕೇಳುತ್ತಾನೆ. ಪಾತೇದೇವರನ್ನು ಅಲಕ್ಷ್ಯ ಮಾಡಿರುವುದರಿಂದ ನಿನ್ನ ಕುರಿಗಳಿಗೆ ಮೂರ್ಚೆರೋಗ ಬಂದಿದೆ. ಹಾಗಾಗಿ ನಾನು ಮಾಡಿದ್ದು ತಪ್ಪು ಎಂದು ಅಡ್ಡ ಬಿದ್ದು ಒಂದು ದುಡ್ಡು ಮುಡುಪು ಕಟ್ಟಿಕೊ, ಪಾತೇಲಿಂಗ ನಿನಗೆ ಒಳ್ಳೆಯದನ್ನು ಮಾಡುತ್ತಾನೆ ಎಂದು ಹೇಳುತ್ತಾಳೆ. ಆಗ ಕರಡಿಬುಳ್ಳಪ್ಪನಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ಮತ್ತೆ ಹಳೆರೊಪ್ಪದ ಬಳಿಗೆ ಹೋಗಿ ಅಲ್ಲಿದ್ದ ಪಾತೇದೇವರನ್ನು ತಂದು ಕುಂದಲೂರಿನಲ್ಲಿ ಇಡುತ್ತಾನೆ. ಅಲ್ಲಿ ವಿಶೇಷವಾದ ಪೂಜೆಯನ್ನು ಮಾಡಿ ದೇವರನ್ನು ಒಲಿಸಿಕೊಳ್ಳುವನು.

೪.೪.೨.೧೦. ಕರಡಿಬುಳ್ಳಪ್ಪನ ಮಕ್ಕಳಿಗೆ ಕಣ್ಣು ಕಾಣದಂತೆ ಮಾಡಿದ್ದು

ಕರಡಿಬುಳ್ಳಪ್ಪನ ಏಳು ಜನ ಹೆಣ್ಣು ಮಕ್ಕಳು ಪಾತೇದೇವರನ್ನು ಏಳು ಕಂಬಿಗಳಾಗಿ ಹಂಚಿಕೊಂಡು ಹೋಗುವಂತಹ ಸಂದರ್ಭದಲ್ಲಿ ಅವರಿಗೆ ಗೊಲ್ಲಳಮ್ಮನ ತೋಪಿನಲ್ಲಿ ಕಣ್ಣುಗಳು ಕಾಣದಂತಾದವು. ಈ ವಿಷಯ ಕರಡಿಬುಳ್ಳಪ್ಪನಿಗೆ ತಿಳಿಯದಂತಾಯಿತು.

೪.೪.೨.೧೧. ಜೆನ್ನಿಗೆ ಹಳ್ಳದ ಸೃಷ್ಟಿ

ಚಂದಮುತ್ತಿಯ ಮಗಳು ಸಣ್ಣ ಕಾಟಮ್ಮ ಎಂಬುವವಳು ತಮ್ಮ ಮನೆದೇವರಾದ ಹಾಲುಗುಡದಪ್ಪನ ಹಾಲು ಕಂಬಿಯಲ್ಲಿ ಹಾಲನ್ನು ತುಂಬಿಕೊಂಡು ಉಪವಾಸವಿದ್ದು ತಲೆಯ ಮೇಲಿಟ್ಟುಕೊಂಡು ಹಾಲದೇವರ ಗುಡ್ಡಕ್ಕೆ ಹೋಗುತ್ತಿದ್ದಳು. ಮಾರ್ಗಮಧ್ಯದಲ್ಲಿ ಒಂದು ಕರಿಯ ಕಲ್ಲು ಎಡವಿ ನೆಲಕ್ಕೆ ಬಿದ್ದಳು. ಇದರಿಂದಾಗಿ ಅವಳ ಕಂಬಿಯಲ್ಲಿರುವ ಹಾಲು ನೆಲದಲ್ಲಿ ಹರಿದು ಸೀಳು ಹಳ್ಳವಾಯಿತು. ಆ ಹಳ್ಳವನ್ನೇ ಜೆನ್ನಗೆಹಳ್ಳ ಎಂದು ಭಾವಿಸಲಾಗುತ್ತದೆ.

೪.೪.೨.೧೨. ಪೋಲಮುತ್ತಿ ಕುಲ ಪಡೆದದ್ದು

ಚಂದಮುತ್ತಿಯು ತನ್ನ ಏಳು ಜನ ಗಂಡು ಮಕ್ಕಳನ್ನು ಕರೆದುಕೊಂಡು ಹಾಲದೇವರ ಗುಡ್ಡಕ್ಕೆ ಹೋಗುತ್ತಿದ್ದಾಗ, ಮಾರ್ಗ ಮಧ್ಯದಲ್ಲಿ ಸೀಳುಹಳ್ಳ ಸಿಗುತ್ತದೆ. ಆ ಹಳ್ಳ ದಾಟುವಾಗ ಆರು ಜನ ಮಕ್ಕಳು ದಾಟುತ್ತಾರೆ. ಕೊನೆಯವ ಗದ್ದದ ಬೊಮ್ಮರಾಯ ನೀರಿನಲ್ಲಿ ಸಿಕ್ಕು ನೀರಿನಲ್ಲಿ ಕೊಚ್ಚಿ ಹೋಗುತ್ತಾನೆ. ಅವನನ್ನು ನೋಡಿದ ಕರಡಿಬುಳ್ಳಪ್ಪನ ತಂದೆ ಮೇಕೆಮಾರಗೊಂಡನು ಹಳ್ಳದಿಂದ ಅವನನ್ನು ಕಾಪಾಡಿ. ತನ್ನ ಮಗನಾದ ಕರಡಿಬುಳ್ಳಪ್ಪನ ಹತ್ತಿರ ಕರೆದುಕೊಂಡು ಬರುತ್ತಾನೆ. ಅವನು ನೀರಿನಲ್ಲಿ ತೇಲಿ ಹೋಗುತ್ತಿದ್ದರಿಂದ ಇವನಿಗೆ ಪೊಲುಮುತ್ತಿ ಎಂದು ನಾಮಕರಣ ಮಾಡಿದ. ಜೊತೆಗೆ ಚಂದಮುತ್ತಿಯ ಕೊನೆ ಮಗನಾದುದರಿಂದ ಇವನನ್ನು ಸೋದರಳಿಯನನ್ನಾಗಿ ಮಾಡಿಕೊಂಡನು.

೪.೪.೨.೧೩. ಪೋಲುಮುತ್ತಿಯನ್ನು ಭಕ್ತನನ್ನಾಗಿ ಮಾಡಿಕೊಂಡದ್ದು

ಪೋಲುಮುತ್ತಿ ದನಕಾಯುವ ಕೆಲಸವನ್ನು ಬಹಳ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡುತ್ತಿದ್ದ. ಇದರಿಂದಾಗಿ ಪಾತೇದೇವರಿಗೆ ಪೋಲುಮುತ್ತಿಯ ಮೇಲೆ ಮನಸ್ಸಾಯಿತು. ಅವನ ಕನಸ್ಸಿನಲ್ಲಿ ಹೋಗಿ

ನೀನು ನನಗೆ ಭಕ್ತನಾಗು ಸಕಲ ಸಂಪತ್ತನ್ನು ಕೊಡುವುದಾಗಿ ಹೇಳಿದನು. ಆದರೂ ಪೋಲುಮುತ್ತಿಗೆ ಭಯವಾಗಿ ತನ್ನನ್ನು ನಮ್ಮ ಮಾವನಿಂದ ದೂರ ಮಾಡಲು ಹೂಡಿದ ಕುತಂತ್ರವೆಂದು ತಿಳಿದು ಪಾತೇದೇವರ ಮಾತಿಗೆ ಒಪ್ಪುವುದಿಲ್ಲ. ಆಗ ಪಾತೇದೇವರು ಕರಡಿಬುಳ್ಳಪ್ಪನಿಗೆ ಹೇಳಿ ಪೋಲುಮುತ್ತಿಯನ್ನು ತನ್ನ ಭಕ್ತನನ್ನಾಗಿ ಮಾಡಿಕೊಂಡಿತು. ಆಗ ಪೋಲುಮುತ್ತಿ ಪಾತೇದೇವರ ಬಯಕೆಯಂತೆ ತಣ್ಣೀರ ಸ್ನಾನ ಮಾಡಿ, ಹಾವು ಕಚ್ಚಿ, ಬೇವುಕಚ್ಚಿ, ಗೋಮೂತ್ರ ಕುಡಿದು. ಕರಡಿಬುಳ್ಳಪ್ಪನ ಕುರಿರೊಪ್ಪದಲ್ಲಿ ಜೆನಿಗೆ ಕುರಿಯಿಂದ ಹಾಲನ್ನು ಕರೆದು, ಅದನ್ನು ಒಂದು ಕಂಬಿಯಲ್ಲಿ ತುಂಬಿಕೊಂಡು, ಕರಿಯ ಕಂಬಳಿಯನ್ನು ಕೊಪ್ಪೆ ಮಾಡಿಕೊಂಡು, ತೋಪಿನ ಗೊಲ್ಲಹಳ್ಳಿಯ ಮಾರ್ಗವಾಗಿ ಬರುವಾಗ ಕರಡಿಬುಳ್ಳಪ್ಪನ ಹೆಣ್ಣುಮಕ್ಕಳು ಕಣ್ಣಿಗೆ ಬೀಳುತ್ತಾಳೆ. ಅವರಿಗೆ ಕಣ್ಣು ಮತ್ತು ಕಿವಿ ಕೇಳುವಂತೆ ಮಾಡುತ್ತಾನೆ.

೪.೪.೨.೧೪. ಗುಡ್ಡದ ಮಲ್ಲನ ಅಹಂಕಾರ ಕಡಿಮೆ ಮಾಡಿದ್ದು.

ಕುಂದಲೂರಿನಲ್ಲಿದ್ದ ಪಾತೇದೇವರ ಪೆಟ್ಟಿಗೆಯ ಸುತ್ತ ದೊಡ್ಡ ಹುತ್ತ ಬೆಳೆದಿರುತ್ತದೆ. ಆ ದೇವರಿಗೆ ಗಂಗೆಸ್ನಾನ ಮಾಡಿಸಬೇಕೆಂದು ಛಲವಾದಿ ಗುಡ್ಡದ ಮಲ್ಲನನ್ನು ಉರಿಮೆ ಬಡಿಯಲು ಕರೆಯಲು ಹೋದಾಗ, ಅವನು ಅಹಂಕಾರದಿಂದ ನಿರಾಕರಿಸುತ್ತಾನೆ. ಅಷ್ಟೆ ಅಲ್ಲ ಬಾಯಿಗೆ ಬಂದಂತೆ ಬಯ್ಯುತ್ತಾನೆ. ಇದನ್ನು ಗಮನಿಸಿದ ಪಾತೇಲಿಂಗ ಉರಿಗಣ್ಣು ಬಿಟ್ಟನು. ಆಗ ಗುಡ್ಡದ ಮಲ್ಲನಿಗೆ ತನ್ನ ತಪ್ಪಿನ ಅರಿವಾಗಿ ಹನ್ನೆರಡು ಉರಿಮೆಯನ್ನು ಒಂದೇ ಬಾರಿಗೆ ಬಡಿದು ಪಾತೇಲಿಂಗನನ್ನು ಮೆಚ್ಚಿಸಿದನು.

೪.೪.೨.೧೫. ಹುತ್ತದ ಪೂಜೆ

ಕಾಡುಗೊಲ್ಲರಲ್ಲಿ ಇದೊಂದು ವಿಶೇಷವಾದ ಆಚರಣೆ, ಕಾಡುಗೊಲ್ಲರ ಸಾಕಷ್ಟು ದೇವರುಗಳು ಹುತ್ತದಲ್ಲಿವೆ ಎಂಬ ನಂಬಿಕೆಯಿಂದ ಅವರು ಹುತ್ತದ ಸುತ್ತಲು ನೂರೊಂದು ದೀಪ ಹಚ್ಚಿ, ನೂರೊಂದು ಎಡೆಹಾಕಿ, ತಂದಿರುವ ಮೀಸಲು ಹಾಲನ್ನು ಹುತ್ತಕ್ಕೆ ಹಾಕುತ್ತಾರೆ. ಈ ಆಚರಣೆಯನ್ನು ಪಾತೇಲಿಂಗ ಮಾಡಿ, ಹುತ್ತವನ್ನು ಎರಡು ಭಾಗ ಮಾಡಿ ಹೊರಬರುತ್ತಾನೆ. ಆಗ ಪೋಲುಮುತ್ತಿ ಪಾತೇದೇವರನ್ನು ತಲೆಯಮೇಲೆ ಹೊತ್ತುಕೊಂಡು ವೇಣಕಲ್ ಗುಡ್ಡಕ್ಕೆ ಹೋಗುವನು.

೪.೪.೨.೧೬. ಕದರನ ಹೆಂಡತಿಗೆ ಮಕ್ಕಳ ಭಾಗ್ಯ ನೀಡಿದ್ದು

ಕದರ ಮಾದಿಗರ ಕುಲದವನು. ಈತನ ಹೆಂಡತಿ ಮೂರು ತಿಂಗಳಿಂದ ಹೆರಿಗೆ ಆಗದೆ ನೋವು ತಿನ್ನುದ್ದಳು. ಯಾರು ಏನೇ ಪ್ರಯತ್ನ ಪಟ್ಟರೂ ಹೆರಿಗೆ ಮಾಡಿಸುವುದು ಯಾರಿಂದಲೂ ಆಗಿರಲಿಲ್ಲ. ಆಗ ಆ ಮಾರ್ಗದ ಮೂಲಕ ಪಾತೇದೇವರು ಬಂದಾಗ, ಕದರ ಪಾತೇದೇವರ ಕಾಲುಗಳಿಗೆ ನಮಸ್ಕಾರ ಮಾಡಿದ. ಮೂರು ತಿಂಗಳಿನಿಂದ ಹೆರಿಗೆ ನೋವು ಅನುಭವಿಸುತ್ತಿದ್ದ ಕದರನ ಹೆಂಡತಿ ಗಂಡು ಮಗುವಿಗೆ ಜನ್ಮ ನೀಡಿದಳು. ಆ ದಿನದಿಂದ ಮಾದಿಗರ ಕದರನು ಪಾತೇದೇವರ ಒಕ್ಕಲಾದನು. ಅಷ್ಟೆ ಅಲ್ಲದೆ ತನಗೆ ಹುಟ್ಟಿರುವ ಮಕ್ಕಳಿಗೆ ದೊಡ್ಡಪಾತ, ಸಣ್ಣಪಾತ, ಮತ್ತು ದೊಡ್ಡಪಾತಿ, ಸಣ್ಣಪಾತಿ, ಎಂದು ನಾಮಕರಣ ಮಾಡಿದನು.

೪.೪.೨.೧೭. ಛಲವಾದಿ ಬಸಮ್ಮನನ್ನು ಭಕ್ತಳಾಗಿ ಮಾಡಿಕೊಂಡಿದ್ದು

ಪೋಲುಮುತ್ತಿಯು ಪಾತೇದೇವರನ್ನು ವೇಣಕಲ್ ಗುಡ್ಡದಿಂದ ಹೊತ್ತುಕೊಂಡು ಬಂದು ಹೂವಿನ ಹೊಳೆಯಲ್ಲಿ ಸ್ನಾನ ಮಾಡಿಸಿ, ದೇವರಿಗೆ ಹೂವು ಮುಡಿಸಲು ಹೂವು ಬೇಕೆಂದು ಹತ್ತಿರದಲ್ಲಿಯೇ ಇದ್ದ ಛಲವಾದಿ ಬಸಮ್ಮನ ತೋಟಕ್ಕೆ ಹೋಗಿ ಅಲ್ಲಿರುವ ಹೂವುಗಳನ್ನು ಕಿತ್ತುಕೊಂಡು ಬಂದನು. ಇದನ್ನು ನೋಡಿದ ಬಸಮ್ಮ ಬಾಯಿಗೆ ಬಂದಂತೆ ಬಯ್ದಳು. ಇದರಿಂದ ಕೋಪಗೊಂಡ ಪಾತೇದೇವರು ತನ್ನ ಉರಿಗಣ್ಣಿನ ಮೂಲಕ ಹೂವಿನ ತೋಟ ಸುಟ್ಟು ಹಾಕಿದನು. ಆಗ ಬಸಮ್ಮ ತಾನು ಮಾಡಿದ್ದು ತಪ್ಪಾಯಿತೆಂದು ಪಾತೇದೇವರ ಕಾಲು ಹಿಡಿದು ಬೇಡಿಕೊಂಡಳು. ಅಷ್ಟೇ ಅಲ್ಲದೇ ತನ್ನ ಹಿರಿಯ ಮಗ ಮತ್ತು ಸೊಸೆಯನ್ನು ಪಾತೇದೇವರ ಒಕ್ಕಲಾಗಿ ಮಾಡಿದಳು. ಇದರಿಂದ ಪಾತೇದೇವರು ಪ್ರಸನ್ನನಾಗಿ ಅವಳ ತೋಟವನ್ನು ಮೊದಲಿನಂತೆ ಮಾಡಿದನು. ಈ ರೀತಿ ಮತಾಂತರವಾದವರನ್ನು ಶೀಲವಾಡಿಗೊಲ್ಲರೆಂದು ಕರೆದರು.

೪.೪.೩. ಅಮವಾಸ್ಯೆ ದೇವರಿಗೆ ಸೇರಿದ ಗುಡಿಕಟ್ಟೆಗಳು

೧. ಕೂಡ್ಲಹಳ್ಳಿ ಪಾತೇದೇವರು ಮೂಲ ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೨. ಜವಗೊಂಡನಹಳ್ಳಿ ಪಾತೇದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೩. ಕಾಟನಾಯಕನಹಳ್ಳಿ ಪಾತೇದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೪. ರಂಗೇನಹಳ್ಳಿ ಪಾತೇದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೫. ತೆಕುಲವಟ್ಟಿ ಪಾತೇದೇವರು ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೬.ಹರ್ತಿಕೋಟೆ ಪಾತೇದೇವರು ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೭.ಬೀರೇನಹಳ್ಳಿ ಪಾತೇದೇವರು ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ

೮.ಟಗರನಹಟ್ಟಿ ಪಾತೇದೇವರು ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೧. ರಂಗೇನಹಳ್ಳಿ ಮತ್ತು ಹರ್ತಿಕೋಟೆ ಗುಡಿಕಟ್ಟುಗಳಲ್ಲಿ ಕೋರೆದ ಈರಣ್ಣ ಈರಗಾರನಾಗಿದ್ದು ಶೀಲವಾಡಿಗೊಲ್ಲರು ವಾಸವಾಗಿದ್ದಾರೆ. ಈ ಗುಡಿಕಟ್ಟೆಗೆ ಬೀರೇನಹಳ್ಳಿ ಗೂಲೆಹಾಳು ಹೂವಿನಹೊಳೆ ಹಟ್ಟಿಗಳು ಸೇರಿಕೊಂಡಿವೆ.

೨. ಜವಗೊಂಡನಹಳ್ಳಿ ಇಲ್ಲಿ ಪೋಲುನಗೊಲ್ಲರು ವಾಸಗಿರುವವರು ಕಾಳಹಬ್ಬದಲ್ಲಿ ಹರಿಸೇವೆ ಮಾಡಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ.

೩. ಕಾಟನಾಯಕನಹಳ್ಳಿ ಚೌತಿಹಬ್ಬ (ನಾಗಾರಾಧನೆ (ಹುತ್ತದ ಪೂಜೆ) ಮಾಡುವವರು)

೪. ಟಗರನಹಟ್ಟಿ ಇವರನ್ನು ಅಡ್ಡೆಗೊಲ್ಲರು ಎಂದು ಕರೆಯುತ್ತಾರೆ. ಶಿವರಾತ್ರಿ ಹಬ್ಬದಲ್ಲಿ ಹರಿಸೇವೆ ಕಾಳಹಬ್ಬ ಮಾಡುತ್ತಾರೆ.

೪.೪.೪ ಮೀಸಲು ಪದ್ಧತಿ

ಶಿಲವಾಡಿಗೊಲ್ಲರು, ಪೋಲನಗೊಲ್ಲರು ಹಾಲು ಮೀಸಲು ಕಲೆಯುವುದಿಲ್ಲ. ಪೂಜಾರಿ ಮನೆತನದವರು ಮತ್ತು ಶೀಲವಾಡಿಗೊಲ್ಲರ ಹಾಲು ಮೀಸಲು ಕಲೆಯುವುದಿಲ್ಲ. ಏಕೆಂದರೆ ಪಾತೇದೇವರು ಲಿಂಗಾಯಿತರನ್ನು ಗೊಲ್ಲರಾಗಿ ಮಾಡಿಕೊಂಡ ಪರಿಣಾಮ, ಶೀಲವಾಡಿಗೊಲ್ಲರು ಪೂಜಾರಿ ವಂಶಸ್ಥರು ಒಂದೇ ಆಗಿರುವ ಕಾರಣ, ಹಾಲು ಮೀಸಲು ಕಲೆಯುತ್ತವೆ. ಜೊತೆಗೆ ಇವರಲ್ಲಿ ಪವಿತ್ರ ಅಪವಿತ್ರದ ಕಲ್ಪನೆಯಿದೆ. ಪೋಲುಮುತ್ತಿ ವಂಶಸ್ಥರಲ್ಲಿ ನಾವು ಪೂರ್ವದಿಂದ ಬಂದಿರುವ ಕಾರಣ ನಾವು ಪವಿತ್ರರು ಎಂಬ ಭಾವನೆ ಅವರಲ್ಲಿದೆ.

೪.೪.೫. ಪೋತರಾಜ

ಬಸವನ ಪೂಜಾರಿ ಒಕ್ಕಲುಗಳ ಮನೆಗೆ ಬರುವ ಬಸವ ಮತ್ತು ಪೆಟ್ಟಿಗೆ ದೇವರನ್ನು ಕೊಂಡೊಯ್ದು ಮನೆದುಂಬಿಸಿ ಪೂಜೆಗೈಯುವುದು, ಪ್ರತಿದಿನ ದೇವರಿಗೆ ಹೂವು. ಮೀಸಲು ನೀರು ತರುವ ಕಾರ್ಯದ ಜೊತೆಗೆ ಬ್ರಹ್ಮಚಾರಾಯಾಗಿರಬೇಕು. ಈತನ ಕೆಲಸ ದೇವರ ಬಗ್ಗೆ ಪರಾಕು ಹೇಳುವುದು, ಹರಕೆ ಸೇವೆ ಅಂದರೆ ಭಕ್ತರು ಬಾಳೆ ಫಲಗಳ ಸೇವೆಯ ಹರಕೆ ಮಾಡಿ ಕೊಂಡಿರುತ್ತಾರೆ. ಈ ಹರಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆ. ಸಂತಾನದ ಶುಭ ಸೂಚನೆ ಕೊಡುತ್ತಾನೆ. ಅಕ್ಕಿಶಾಸ್ತ್ರ, ಹೂವು ಕೇಳುವ ಪದ್ಧತಿಯಲ್ಲಿ ಭಕ್ತರಿಗೆ ನೆರವಾಗುತ್ತಾನೆ.

೪.೪.೫.೧. ವೇಷಭೂಷಣ

ಪೋತರಾಜ ಅರೆನಗ್ನ ವಸ್ತ್ರಧಾರಿಯಾಗಿದ್ದು, ಕಚ್ಚೆ ಉಡುಪನ್ನು ಧರಿಸಿರುತ್ತಾನೆ. ನೀಳವಾದ ಕೂದಲುಳ್ಳವನಾಗಿದ್ದು, ಕೆಂಪಾದ ರಂಗುರಂಗಿನ ಓಕುಳಿಯನ್ನು ಮೈ ತುಂಬ ಮೆತ್ತಿಕೊಂಡಿರುತ್ತಾನೆ. ಕೈಯಲ್ಲಿ ಕತ್ತಿ, ಬಾಕು ಹಿಡಿದಿರುತ್ತಾನೆ. ಹಟ್ಟಿಯ ಉದಿ ಬಾಗಿಲಿಗೆ ಆಡು ಮರಿಯನ್ನು ಗಾವು ಸಿಗಿಯುವುದು. ಬುಡ್ಡೆಕಲ್ಲು ಪೂಜೆಮಾಡುವುದು, ಇದರೊಂದಿಗೆ ರೌದ್ರ ವೇಷರೂಪ ಧರಿಸಿ ಮಾರಿಮಸಣಿಗಳನ್ನು, ಪೀಡೆ ಪಿಶಾಚಿಗಳನ್ನು ಹಟ್ಟಿಯಿಂದ ಹೊರಗೆ ಓಡಿಸುವನು.

೪.೫. ರಾಮಲಿಂಗ

ತಿಳುವಳಿಕೆದಾರರು ಹೇಳುವ ಪ್ರಕಾರ ಒಬ್ಬ ಬ್ರಾಹ್ಮಣ ಶಿವಲಿಂಗವನ್ನು ಪೂಜೆ ಮಾಡುತ್ತಿರುತ್ತಾನೆ. ಶಿವಲಿಂಗದ ಪೂಜೆಗೆ ಹೂವು ಕೊಯ್ದುಕೊಂಡು ಬಂದು ಗುಡಿಯ ಮುಂದೆ ಇಟ್ಟು ಪೂಜೆಗೆ ತಯಾರು ಮಾಡಿಕೊಳ್ಳುತ್ತಿರುತ್ತಾನೆ. ಅದೇ ಸಮಯಕ್ಕೆ ಸರಿಯಾಗಿ ಎಲ್ಲಿಂದಲೋ ಬಂದ ಒಂದು ಹಸು ಪೂಜಾರಿ ಕೊಯ್ದಿಟ್ಟಿದ್ದ ಹೂವುಗಳನ್ನು ತಿನ್ನುತಿತ್ತು. ಆಗ ಪೂಜಾರಿಯು ಒಂದು ಸಣ್ಣ ಕಲ್ಲು ತೆಗೆದುಕೊಂಡು ಹಸುವಿಗೆ ಹೊಡೆದನು. ಇದರಿಂದಾಗಿ ಆ ಹಸು ಎರಡು ಭಾಗವಾಗಿ ಬಿದ್ದು ಸತ್ತು ಹೋಯಿತು. ಇದನ್ನು ನೋಡಿದ ಬ್ರಾಹ್ಮಣ ಭಯ ಭೀತನಾಗಿ ಗೋವು ಹತ್ಯಯ ಪಾಪ ನನ್ನನ್ನು ಬಿಡುವುದಿಲ್ಲ ಎಂದು ತಿಳಿದು ಊರಿಗೆ ಹೋಗಿ ಕೆಲವು ಜನರನ್ನು ಕರೆದುಕೊಂಡು ಬಂದು, ಮಣ್ಣು

ಮಾಡಲು ಪ್ರಯತ್ನಿಸಿದನು. ಅವನು ಊರಿನಿಂದ ಜನರನ್ನು ಕರೆದುಕೊಂಡು ಬರುವುದರೊಳಗಾಗಿ ಹಸು ಮಾಯವಾಗಿ ಆ ಜಾಗದಲ್ಲಿ ಮಾಂಸದ ಎರಡು ಮುದ್ದೆಗಳು ಮಾತ್ರ ಉಳಿದುಕೊಂಡವು. ಅವುಗಳು ನೋಡು ನೋಡುತಿದ್ದಂತೆ ಎರಡು ಗಂಡು ಮಕ್ಕಳ ರೂಪವನ್ನು ಪಡೆದುಕೊಂಡವು. ಆಗ ಅವುಗಳಿಗೆ ಹಲವುರಾಯ ಮಲವುರಾಯ ಎಂದು ನಾಮಕರಣ ಮಾಡಿದ ಬ್ರಾಹ್ಮಣ. ಹಲವುರಾಯ ಮತ್ತು ಮಲವುರಾಯನಿಗೆ ಗೋಪಾಲರಾಯನೆಂಬ ಮಗ ಹುಟ್ಟಿದ. ಈ ಗೋಪಾಲಮುತ್ತಿ ಚಿತ್ತಮುತ್ತಿ ಸನ್ನಮುತ್ತಿ ಬಾಲಮುತ್ತಿ ಇವರ ಜೊತೆಗೂಡಿ ದೆಹಲಿಯ ಸುಲ್ತಾನನೊಂದಿಗೆ ಜಗಳವಾಡಿ ತುಂಗಭದ್ರ ನದಿದಂಡೆಯ ಮೇಲೆ ವಾಸಮಾಡ ತೊಡಗಿದರು. ಆದರೆ ವಿಜಯನಗರದ ಅರಸ ಕಾಡುಗೊಲ್ಲರಾದ ಇವರಿಗೆ ತೆರಿಗೆ ಕೊಡುವಂತೆ ಕೇಳಿದರು. ನಾವು ಪಶುಪಾಲಕರು ಈ ಪಶುಗಳಿಗಾಗಿಯೆ ಹುಲ್ಲು ನೀರಿರುವುದು ಎಂದು ತಿಳಿದು ರಾಯ ಕಳುಹಿಸಿರುವ ಪತ್ರವನ್ನು ಬೆಂಕಿಗೆ ಹಾಕಿ ಸುಟ್ಟು ಪತ್ರ ಬಂದಿಲ್ಲ ಎಂಬಂತೆ ಸುಮ್ಮನಿದ್ದರು. ಆಗ ಅರಸ ತನ್ನ ಸೈನಿಕರನ್ನು ಕಳುಹಿಸಿ ಚಿತ್ತಮುತ್ತಿ ಸನ್ನಮುತ್ತಿ ಬಾಲಮುತ್ತಿ ಮತ್ತು ಗೋಪಾಲಮುತ್ತಿಯರನ್ನು ಸೆರೆಯಿಡಿದು ತರುವಂತೆ ತನ್ನ ಆಳುಗಳನ್ನು ಕಳುಹಿಸಿದಾಗ, ಮೂರು ಜನ ಸೆರೆ ಸಿಗುತ್ತಾರೆ. ಕೊನೆಯವನಾದ ಗೋಪಾಲಮುತ್ತಿ ಅಲ್ಲಿಂದ ತಪ್ಪಿಸಿಕೊಂಡು ದೇಶಾಂತರ ಹೋಗುತ್ತಾನೆ. ದೇಶಾಂತರ ಹೋದವನು ಯಾವ ಸಮುದಾಯದಲ್ಲಿ ಮದುವೆಯಾದನೋ ಗೊತ್ತಿಲ್ಲ. ಆದರೆ ಅವನಿಗೆ ಎರಡು ಮಕ್ಕಳಾಗಿದ್ದವು. ಅವರ ಹೆಸರು ಗಾಳಿ ಮತ್ತು ದೂಳಿ ಎಂದು. ಅವರು ತಂದೆಯಿಂದ ಬಳುವಳಿಯಾಗಿ ಬಂದಿರುವ ಟಗರುಗಳಿಗೆ ವಿದ್ಯಾಬುದ್ಧಿಯನ್ನು ಕಲಿಸಿಕೊಂಡು ಹಿಂಗಾಣಿ ಮುಂಗಾಣಿಯನ್ನು ಕಲಿಸಿ ಊರಿನ ತುಂಬ ಓಡಾಡಿಕೊಂಡು ಇರುತ್ತಿದ್ದರು. ಇವರ ಟಗರುಗಳ ಜಾದುಗಾರಿಕೆಯನ್ನು ಕಂಡ ಸೈನಿಕರು ಈ ವಿಷಯವನ್ನು ದೊರೆಯ ಮುಂದೆ ಹೇಳಿದಾಗ ದೊರೆ ಅವರಿಬ್ಬರನ್ನು ಕರೆಸಿ ಟಗರುಗಳ ಬುದ್ಧಿವಂತಕೆಯನ್ನು ಮೆಚ್ಚಿಕೊಂಡು ಆ ಟಗರುಗಳು ರಾಜರ ಆಸ್ಥಾನಕ್ಕೆ ಉಚಿತವಾದವುಗಳು. ನೀವು ಏನು ಕೇಳಿದರೂ ಕೊಡುತ್ತೇವೆ ಕೇಳಿರಿ ಎಂದು ಹೇಳಿದಾಗ ಅವರು ನಮಗೆ ತಂದೆ ತಾಯಿ ಯಾರೂ ಇಲ್ಲ. ನಮಗೆ ಯಾರು ಈ ಹೆಸರು ಇಟ್ಟಿರುವರೋ ಗೊತ್ತಿಲ್ಲ. ಗಾಳಿ ಮತ್ತು ಧೂಳಿ ಎಂಬ ಹೆಸರಿನಿಂದ ಬೆಳೆದಿದ್ದೇವೆ. ಎಂದು ಹೇಳಿದಾಗ, ವಿಜಯನಗರದ ಅರಸ ಅವರುಗಳಿಗೆ ಹರೆರಾಮ ಮತ್ತು ಮೆರೆರಾಮ ಎಂದು ಮರು ನಾಮಕರಣ ಮಾಡಿ ತನ್ನಆಸ್ಥಾನದಲ್ಲಿ ಕೆಲಸಕ್ಕೆ ಸೇರಿಸಿಕೊಂಡನು. ನಂತರ ಇವರಿಗೆ ಮಕ್ಕಳಾದರು. ಅವರೇ ಹರೇರಾಮಗೊಂಡ ಮೆರೆರಾಮಗೊಂಡ.

ಒಂದು ದಿನ ರಾಯನು ತನ್ನ ಸೈನ್ಯವನ್ನೆಲ್ಲ ಕರೆದುಕೊಂಡು ವಿಹಾರಕ್ಕೆಂದು ಹೊರಟಾಗ ಅರಮನೆಯಲ್ಲಿದ್ದ ರಾಣಿಯ ತೊಡೆಯ ಮೇಲೆ ಹರೆರಾಯಗೊಂಡ ಕುಳಿತುಕೊಂಡು ಕುಚೇಷ್ಟೆ ಮಾಡುತ್ತಿದ್ದ ವಿಷಯವನ್ನು ಅರಮನೆಯಲ್ಲಿದ್ದ ಯಾರೋ ಒಬ್ಬ ವ್ಯಕ್ತಿ ಬಂದು ಈ ವಿಷಯವನ್ನು ಹರೆರಾಯನಿಗೆ ಹೇಳಿದಾಗ, ತನ್ನ ಮಗ ಉಂಡ ಮನೆಗೆ ಎರಡು ಬಗೆದನು ಎಂದು ತಿಳಿದು ಅವನ ತಲೆಯನ್ನು ಕತ್ತರಿಸಿದನು. ನಂತರ ಮೆರೆರಾಯನ ಮಗನನ್ನು ಕರೆದು ಹರಿವಾಣ ತರಿಸಿ ಕತ್ತರಿಸಿದ ತಲೆಯನ್ನು ಅದರಲ್ಲಿ ಇಟ್ಟು ಮೆರವಣಿಗೆ ಮಾಡಿಸಿದನು.

ಈ ಮೆರವಣಿಗೆ ಮಾಡುವಂತಹ ಸಮಯದಲ್ಲಿ ರಾಜನು ನೋಡಿ ಅದಕ್ಕೆ ಕಾರಣವೇನೆಂದು ಹರೆರಾಯನನ್ನು ಕೇಳಿದಾಗ, ಈತ ರಾಣಿಯ ತೊಡೆ ಮೇಲೆ ಕುಳಿತಿದ್ದ ಕಾರಣದಿಂದ ಇವನ ತಲೆಯನ್ನು ಕತ್ತರಿಸಿರುವುದಾಗಿ ಹೇಳಿದಾಗ, ದೊರೆಯು ಅವನನ್ನು ಬದುಕಿಸುವಂತೆ ಬೇಡಿಕೊಳ್ಳುತ್ತಾನೆ. ನಂತರ ಹರೆರಾಮಗೊಂಡ ಬದುಕುತ್ತಾನೆ. ಇವರು ಕೂಡ ರಾಜನ ಮನೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅಂತಹ ಸಮಯದಲ್ಲಿ ಸೆರೆಯಲ್ಲಿದ್ದ ಚಿತ್ತಮುತ್ತಿ, ಸನ್ನಮುತ್ತಿ. ಮತ್ತು ಬಾಲಮುತ್ತಿ ಇವರ ಮಕ್ಕಳು ಪ್ರತಿದಿನ ತಮ್ಮ ತಂದೆಗಳಿಗೆ ಬುತ್ತಿ ತರುತ್ತಿದ್ದರು. ಇದರಿಂದಾಗಿ ಅವರ ತಲೆಯ ಮೇಲಿನ ಕೂದಲು ಉದುರಿ ಹೋಗಿದ್ದವು. ಇದರಿಂದ ಬೇಸತ್ತ ಅವರು ತಮ್ಮ ತಂದೆಗಳು ಊಟ ಮಾಡಿದ ತಟ್ಟೆ ತೊಳೆಯುತ್ತ ಈ ರೀತಿ ಮಾತನಾಡುತ್ತಾರೆ. ಯಾರು ನಮ್ಮಪ್ಪಗಳ ಸೆರೆ ಬಂಧನ ಬಿಡಿಸುತ್ತಾರೋ ಅವರನ್ನು ಮದುವೆ ಆಗುವುದಾಗಿ ಮಾತನಾಡುತ್ತಾರೆ. ಈ ವಿಷಯ ಕೇಳಿಸಿಕೊಂಡ ಹರೆರಾಮಗೊಂಡ ಮತ್ತು ಮೆರೆರಾಮಗೊಂಡ ರಾತ್ರೋ ರಾತ್ರಿ ಹೋಗಿ ಅರಸನ ಒಂದು ಮುಖದ ಕ್ಷೌರ ಮಾಡಿ ಬರುತ್ತಾರೆ. ಬೆಳಿಗ್ಗೆ ಎದ್ದು ನಿಲುವು ಗಣ್ಣಡಿಯಲ್ಲಿ ತನ್ನ ಮುಖ ನೋಡಿಕೊಂಡ ರಾಜನಿಗೆ ಆಶ್ಚರ್ಯ ವಾಗುತ್ತದೆ. ಇದು ವರೆಗೆ ಯಾರೂ ಮಾಡದ ಕೆಲಸವನ್ನು ಇವರಿಬ್ಬರೂ ಮಾಡಿಬಂದಿದ್ದರು. ಕೊನೆಗೆ ಊರಿನ ತುಂಬ ಢಂಗೂರ ಸಾರಿಸಿ ಒಂದು ಕೆನ್ನಯ ಕ್ಷೌರಮಾಡಿದವರು ಇನ್ನೊಂದು ಕೆನ್ನಯ ಕ್ಷೌರ ಮಾಡಿದ್ದೇ ಆದರೆ ಅವರು ಕೇಳಿದ ಸಂಪತ್ತು ಕೊಡುವುದಾಗಿ ಢಂಗೂರ ಹೊಡೆಸಿದನು. ಇದರಿಂದ ಮಾರನೆಯ ದಿನವೂ ರಾತ್ರಿ ಬಂದು ಇನ್ನೊಂದು ಮುಖದ ಕ್ಷೌರ ಮಾಡಿದರು. ನಂತರ ಬೆಳಿಗ್ಗೆ ಎದ್ದು ಎಲ್ಲರನ್ನು ಕರೆಸಿ ಜೊತೆಗೆ ಕ್ಷೌರ ಮಾಡಿದ ಹರೆರಾಮಗೊಂಡ ಮೆರೆರಾಮಗೊಂಡರನ್ನು ಕರೆಸಿ ನೀವು ನಿಜವಾಗಲೂ ಸತ್ಯವಂತರು ನಿಮ್ಮ ನಿಷ್ಠೆಗೆ ಮೆಚ್ಚಿಕೊಂಡೆ ನೀವು ಏನು ಕೇಳಿದರೂ ಕೊಡುವುದಾಗಿ ಅರಸ ಹೇಳಿದಾಗ, ಅವರು ಬಹಳ ದಿನಗಳಿಂದ ಸೆರೆಗೆ ಹಾಕಿರುವ ಚಿತ್ತಮುತ್ತಿ, ಸನ್ನಮುತ್ತಿ ಮತ್ತು ಬಾಲಮುತ್ತಿ ಈ ಮೂರು ಜನರನ್ನು ಬಿಡುಗಡೆ ಮಾಡಿದರೆ ಅಷ್ಟೆ ಸಾಕು ಎಂದು ಕೇಳಿದಾಗ, ಅರಸನು ಅವರನ್ನು ಬಿಡುಗಡೆ ಮಾಡಿದನು. ಕೊಟ್ಟ ಮಾತಿನಂತೆ ಹೆಣ್ಣು ಮಕ್ಕಳನ್ನು ಮದುವೆ ಆಗಲು ಕೇಳಿದಾಗ ಅವರು ಒಪ್ಪಿಕೊಂಡರು. ಆದರೆ ಅವರ ತಂದೆಗಳು ಒಪ್ಪಿಕೊಳ್ಳಲಿಲ್ಲ ಕಾರಣ ಕ್ಷೌರಿಕರಿಗೆ ಹೆಣ್ಣು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆಗ ದೊರೆಯು ಅವರನು ಸಮಾಧಾನಮಾಡಿ ನೀವು ಯಾವುದೇ ಪರೀಕ್ಷೆಯನ್ನು ಬೇಕಾದರೂ ಮಾಡಿ ಆದರೆ ಅವರು ಪವಿತ್ರರು. ಹಸುವಿನ ಹೊಟ್ಟೆಯಲ್ಲ ಹುಟ್ಟಿದವರು ಎಂದು ಹೇಳಿದಾಗ, ಒಂಬತ್ತು ವರ್ಷಗಳ ಕಾಲ ಬುವ್ವದ ಮುದ್ದೆಯನ್ನು ತಿಪ್ಪೆಯಲ್ಲಿ ಹೂತಿಟ್ಟಿದ್ದೇವು. ಅದನ್ನು ತಿಂದರೆ ಇವರನ್ನು ಪವಿತ್ರರು ಎಂದು ಒಪ್ಪಿಕೊಂಡು ತಮ್ಮ ಮಕ್ಕಳನ್ನು ಕೊಟ್ಟು ಮದುವೆ ಮಾಡುವುದಾಗಿ ಹೇಳಿದರು. ಆಗ ಹರೆರಾಮಗೊಂಡ ಮತ್ತು ಮೆರೆರಾಮಗೊಂಡ ಒಂಬತ್ತು ವರ್ಷಗಳ ಕಾಲ ತಿಪ್ಪೆಯಲ್ಲಿ ಹೂತಿಟ್ಟಿದ್ದ ಬುವ್ವದ ಮುದ್ದೆಯನ್ನು ಊಟ ಮಾಡಿದರು. ಇದು ಬೇರೆಯವರಿಗೆ ಹುಳುಗಳಂತೆ ಕಂಡರೆ ಇವರಿಗೆ ಮಾತ್ರ ಮೃಷ್ಟಾನ್ನವಾಗಿ ಕಂಡಿತು. ಇದನ್ನು ನೋಡಿದ ಎಲ್ಲ ಜನರು ಇವರು ಸತ್ಯವಂತರು ಎಂದು ಒಪ್ಪಿಕೊಂಡರು. ಜೊತೆಗೆ ಮದುವೆ ಮಾಡಿದರು. ಸಂದಮುತ್ತಿ ಕುಲದವರು ತಮ್ಮ ಮನೆದೇವರಾದ ಕಾಟಮ ದೇವರನ್ನು ಮತ್ತು ಶಾಸ್ತ್ರವನ್ನು ಕೊಟ್ಟರು. ಯಾವ ಬೆಡಗಿವರ ಮದುವೆಯಾದರೂ ಬೂವದ ಮುದ್ದೆಯನ್ನು ಅವರೇ ಮಾಡಿಕೊಡಬೇಕು. ಅವರು ಬಾಳಲು ಎಲ್ಲ ಬಿರುದಾವಳಿಗಳನ್ನು

ಕೊಟ್ಟರು. ಇವರುಗಳಿಗೆ ಏಳು ಜನಮಕ್ಕಳು ಎಲ್ಲ ಗುಡಿಕಟ್ಟೆಗಳಲ್ಲಿ ರಾಮಲಿಂಗನ ಹೊರತಾಗಿ ಕಾಟಮಲಿಂಗ ನಲೆಗೊಂಡಿರುವುದನ್ನು ಕಾಣಬಹುದು ಅವರ ಅಮವಾಸ್ಯೆಯ ದೇವರು ರಾಮಲಿಂಗ. ಅದು ರಾಮೇನಹಳ್ಳಿಯಲ್ಲಿ ನೆಲೆಗೊಂಡಿತ್ತು ಎಂದು ಗೊಲ್ಲನಕಟ್ಟೆಯ ತಿಳುವಳಿಕೆದಾರರು ಹೇಳುತ್ತಾರೆ. ಈಗ ನೋಡಿದರೆ ಅಲ್ಲಿ ಒಂದು ವೀರಗಲ್ಲು ಮತ್ತು ಆಂಜನೇಯನ ಗುಡಿ ಇರುವುದನ್ನು ಕಾಣಬಹುದು. ಹಿಂದೆ ರಾಮಲಿಂಗವನ್ನು ಕಲ್ಯಾಣಿ ಎಂಬ ಬಾವಿಯಲ್ಲಿ ಹಾಕಿದರು ಎಂದು ಹೇಳುತ್ತಾರೆ. ಆದರೆ ಕಲ್ಯಾಣಿ ಕಲ್ಲುಗಳಿಂದ ಮುಚ್ಚಲ್ಪಟ್ಟಿದೆ. ಈ ಕಟ್ಟೆಮನೆಗೆ ಗುಡಿಕಟ್ಟುಗಳೆಂದರೆ

೧. ಮರಡಿಹಳ್ಳಿ ಕಾಟಮದೇವರು (ರಾಮಲಿಂಗ ಇರಬೇಕಿತ್ತು) ಹಿರಿಯೂರು ತಾಲ್ಲೂಕಿನ ಚಿತ್ರದುರ್ಗ ಜಿಲ್ಲೆ

೨. ಇಕ್ಕನೂರು ಕಾಟಮದೇವರು(ರಾಮಲಿಂಗ ಇರಬೇಕಿತ್ತು) ಹಿರಿಯೂರು ತಾಲ್ಲೂಕಿನ ಚಿತ್ರದುರ್ಗ ಜಿಲ್ಲೆ

೩. ಪರಶುರಾಮಪುರ ಕಾಟಮದೇವರು (ರಾಮಲಿಂಗ ಇರಬೇಕಿತ್ತು) ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೪. ಹುಲಿತೊಟ್ಲು ಕಾಟಮದೇವರು (ರಾಮಲಿಂಗ ಇರಬೇಕಿತ್ತು) ಹಿರಿಯೂರು ತಾಲ್ಲೂಕಿನ ಚಿತ್ರದುರ್ಗ ಜಿಲ್ಲೆ

೫. ರಾಮಗಿರಿ ಕಾಟಮದೇವರು (ರಾಮಲಿಂಗ ಇರಬೇಕಿತ್ತು)ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ

೬. ತೇಕುಲವಟ್ಟಿ ಕಾಟಮದೇವರು (ರಾಮಲಿಂಗ ಇರಬೇಕಿತ್ತು)ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗಜಿಲ್ಲೆ

೭. ಹೇಮಾವತಿ ಕಾಟಮದೇವರು.(ರಾಮಲಿಂಗ ಇರಬೇಕಿತ್ತು) ಮಡ್ಕಶಿರಾ ತಾಲ್ಲೂಕು ಅನಂತಪುರ ಜಿಲ್ಲೆ ಆಂಧ್ರಪ್ರದೇಶ ಏಳು ಜನ ಅಣ್ಣ ತಮ್ಮಂದಿರು.

೧. ಹರೇರಾಯ ಹರೇನಗೊಲ್ಲರು

೨. ಮೆರೆರಾಯ ಮೆರೆನಗೊಲ್ಲರು

೩. ಕಂಬಿರಾಯ ಕಂಬೇರಗೊಲ್ಲರು

೪. ಕಹಳೆರಾಯ ಕಹಳೆಗೊಲ್ಲರು

೫. ಒನಕೆರಾಯ ಒನಕೆಗೊಲ್ಲರು

೬. ಜಡೆರಾಯ ಜಡೆಗೊಲ್ಲರು

೭. ಒಡೆರಾಯ ಒಡೆಗೊಲ್ಲರು

ಎಂದು ಏಳು ಬೆಡಗುಗಳು ಸೃಷ್ಟಿಯಾಗಿದ್ದು ಈ ಬೆಡಗಿನ ಜನರು ರಾಮಲಿಂಗವನ್ನು ಪೂಜೆಮಾಡುತ್ತಾರೆ.

ಅಧ್ಯಾಯ : ಐದು

ಕಾಡುಗೊಲ್ಲರ ಮಾತೃ ದೈವಗಳು

೫.೧. ಗೌರಸಮುದ್ರದ ಮಾರಮ್ಮ

೫.೨. ಕಾವಲಮ್ಮ

೫.೩. ದ್ಯಾಮವ್ವ ಅಥವಾ ಗೊಲ್ಲಳಮ್ಮ

ಅಧ್ಯಾಯ: ಐದು

ಕಾಡುಗೊಲ್ಲರ ಮಾತೃ ದೇವತೆಗಳು

೫. ಕಾಡುಗೊಲ್ಲರ ಮಾತೃ ದೇವತೆಗಳು

೫.೧. ಗೌರಸಮುದ್ರದ ಮಾರಮ್ಮನ ಸೃಷ್ಟಿ ಪುರಾಣ

ಗೌರಸಮುದ್ರದ ಮಾರಮ್ಮನ ಸೃಷ್ಟಿ ಪುರಾಣವೂ ಅಸ್ಪಷ್ಟವಾಗಿರುವುದನ್ನು ಗಮನಿಸಬಹುದು. ಯಾಕೆಂದರೆ ಕಾಡುಗೊಲ್ಲರಿಗೂ ಮ್ಯಾಸಬೇಡರಿಗೂ ಅವಿನಾಭಾವ ಸಂಬಂಧವಿರುವ ಕಾರಣ ಕಾಡುಗೊಲ್ಲರು ಮಾರಮ್ಮನನ್ನು ಆರಾಧನೆ ಮಾಡುತ್ತಾರೆ. ಇದು ಎಲ್ಲೋ ಒಂದು ಕಡೆ ಕಾಡುಗೊಲ್ಲರು ಮತ್ತು ಮ್ಯಾಸಬೇಡರು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರಿರಬೇಕು ಎಂಬುದನ್ನು ಸೂಚಿಸುತ್ತದೆ. ಈ ಎರಡು ಬುಡಕಟ್ಟುಗಳ ಜೀವನ ವಿಧಾನವನ್ನು ಗಮನಿಸಿದರೆ ಒಂದೇ ರೀತಿಯಾಗಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ಮಂದರಗಿರಿ ಎಂಬ ಪರ್ವತವಿರುತ್ತದೆ. ಅಲ್ಲಿ ಅನೇಕ ಜಾತಿಯ ಮರಗಿಡಗಳು ದಟ್ಟವಾಗಿ ಬೆಳೆದಿರುತ್ತವೆ. ಈ ಅರಣ್ಯದಲ್ಲಿ ಮ್ಯಾಸಬೇಡರ ಸೃಷ್ಟಿಯಾಗುತ್ತದೆ ಎಂದು ಗೌರಸಮುದ್ರದ ತಿಳುವಳಿಕೆದಾದರು ಹೇಳುತ್ತಾರೆ. ಆ ಅರಣ್ಯದಲ್ಲಿ ಬೇಟೆಗಾರರಾದ ಸಂಚು ಮ್ಯಾಸಬೇಡರು ವಾಸವಾಗಿದ್ದರು. ಇವರ ಕಾಯಕ ಕಾಡಿನಲ್ಲಿ ಗೆಡ್ಡೆಗೆಣಸು ಹುಡುಕಿಕೊಂಡು ತಿನ್ನುವುದು, ಇಲ್ಲವೇ ಕಾಡಿನಲ್ಲಿ ದೊರೆಯಬಹುದಾದ ಬಿದಿರಕ್ಕಿ, ತರಗೆಲೆ, ಹಣ್ಣು ಹಂಪಲುಗಳನ್ನು ತಿಂದು ಬದುಕು ಸಾಗಿಸುತ್ತಿದ್ದರು. ಈ ಪಾಳೆ ಪಟುಗಳಿಗೆ ನಾಯಕನೆಂದರೆ ಸಂಚು ಶಿಕನಾಯಕ ಇವನ ಆಜ್ಞೆಯಂತೆ ಎಲ್ಲರೂ ನಡೆದುಕೊಳ್ಳುತ್ತಿದ್ದರು. ಆದರೆ ಇವನಿಗೆ ಬಹಳ ವರ್ಷಗಳ ಕಾಲ ಮದುವೆ ಆಗಿರಲಿಲ್ಲ. ಯಾವ ಕನ್ಯೆಯನ್ನು ತೋರಿಸಿದರೂ ಮದುವೆಗೆ ಒಪ್ಪಿಕೊಂಡಿರಲಿಲ್ಲ. ಆ ಗುಂಪಿಗೆ ಇವನ ಮದುವೆ ಮಾಡುವುದೇ ದೊಡ್ಡ ಸವಾಲಿನ ಪ್ರಶ್ನೆಯಾಗಿತ್ತು. ಆಗ ಮಂದರಗಿರಿ ಪಟ್ಟಣದಲ್ಲಿ ಮ್ಯಾಸನಾಯಕರ ಮನೆಯಲ್ಲಿ ರೂಪವತಿಯಾದ ದಾನಶೂಲಮ್ಮ ಎಂಬ ಕನ್ಯಾಮಣಿ ಇರುವುದು ತಿಳಿದು ಬರುತ್ತದೆ. ಈಕೆಗೆ ಇಪ್ಪತ್ನಾಲ್ಕು ವರ್ಷ ವಯಸ್ಸಾಗಿತ್ತು. ಆದರೂ ಮದುವೆ ಆಗಿರಲಿಲ್ಲ. ಇಂತಹ ಸಮಯದಲ್ಲಿ ಇವರಿಬ್ಬರನ್ನು ಭೇಟಿಮಾಡಿಸಿದ ತಕ್ಷಣ ಪರಸ್ಪರ ಆಕರ್ಷಿತರಾದರು. ಎಲ್ಲಾ ಸೃಷ್ಟಿ ಪುರಾಣಗಳ ಹಿಂದೆ ಒಂದು ಆಶ್ಚರ್ಯಕರವಾದ ಸನ್ನಿವೇಶವಿರುವಂತೆ ಇದರಲ್ಲಿಯೂ ಮಾರಕ್ಕನ ತಂದೆ ಮತ್ತು ತಾಯಿಗಳಿಗೆ ಬಹಳ ವರ್ಷಗಳ ತನಕ ಮದುವೆ ಆಗಿರುವುದಿಲ್ಲ.

ಆಗ ಗುರು ಹಿರಿಯರು ಒಪ್ಪಿ ಮ್ಯಾಸಬೇಡರ ಸಂಪ್ರದಾಯದ ಪ್ರಕಾರ ಮದುವೆ ಮಾಡುವರು. ಎಷ್ಟು ವರ್ಷಗಳಾದರೂ ಇವರಿಗೆ ಮಕ್ಕಳಾಗದ ಕಾರಣ ಇವರ ಬಗ್ಗೆ ಜನರು ಬಾಯಿಗೆ ಬಂದಂತೆ ಮಾತನಾಡಿಕೊಳ್ಳುತ್ತಿದ್ದರು. ಆ ಮಾತುಗಳನ್ನು ಕೇಳಿ ಸಹಿಸಿಕೊಳ್ಳದೆ ಅಲ್ಲಿಂದ ಬೇರೆಕಡೆ ಹೋಗಿ ಭೂಮಿಯ ಮೇಲಿರುವ ಎಲ್ಲ ದೇವಾನು ದೇವತೆಗಳನ್ನು ಪೂಜಿಸಿ ಹರಕೆಗಳನ್ನು ಹೊತ್ತರು. ಆದರೆ ಯಾವ ದೇವರು ಮಕ್ಕಳ ಫಲ ಕರುಣಿಸಲಿಲ್ಲ, ಕೊನೆಗೆ ತಮಗೆ ಮಕ್ಕಳಾಗುವುದಿಲ್ಲ ಎಂದು ತಿಳಿದು, ಸಂಚುಶಿಕನಾಯಕ ತನ್ನ ಹೆಂಡತಿಯೊಂದಿಗೆ ಅರಣ್ಯ ಸೇರಿಕೊಂಡನು. ಜನಪದರ ಮದುವೆಯಾದ ದಂಪತಿಗಳಿಗೆ ಬೇಗ ಮಕ್ಕಳಾಗಬೇಕು ಎಂದು ಬಯಸುತ್ತಾರೆ. ಬಂಜೆತನವನ್ನು ಸಹಿಸಿಕೊಳ್ಳುವುದಿಲ್ಲ. ಎರಡು ಜೀವಿಗಳು ಕೂಡಿ ಇನ್ನೊಂದು ಜೀವಿಗೆ ಜನ್ಮ ನೀಡಿದಾಗ ಮಾತ್ರ ಅವರ ಜೀವನ ಸಾರ್ಥಕವೆಂದು ನಂಬಿಕೊಂಡಿದೆ. ಇಂದು ಕೂಡ ನಂಬಿಯನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ.

ದಾನಸೂಲಮ್ಮ ಗರ್ಭಧರಿಸಿದಳು, ಕೊನೆಗೂ ನಂಬಿದ ದೇವರು ಕೈಬಿಡಲಿಲ್ಲ ಎಂದು ತಿಳಿದು ಸಂತೋಷಪಟ್ಟರು. ಒಂಬತ್ತು ತಿಂಗಳು ತುಂಬಿ ಸೂರ್ಯ ಹುಟ್ಟುವ ಸಮಯದಲ್ಲಿ ದಾನಸೂಲಮ್ಮ ಒಂದು ಸುಂದರ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಆ ಹೆಣ್ಣು ಮಗುವಿಗೆ ಸಂಚುಲಕ್ಷ್ಮಿ ಎಂದು ಹೆಸರಿಸಿದರು. ಆ ಮಗು ದಿನದಿಂದ ದಿನಕ್ಕೆ ಯಾವ ತೊಂದರೆ ಅಡ್ಡಿ ಆತಂಕಗಳಿಲ್ಲದೆ ಬೆಳೆಯತೊಡಗಿತು. ಮೊದಲೆ ಬೇಟೆಗಾರರಾದ ಮ್ಯಾಸಬೇಡರ ಕುಲದಲ್ಲಿ ಹುಟ್ಟಿದ ಸಂಚುಲಕ್ಷ್ಮಿಗೆ ಬೇಟೆ ಆಡುವ ಆಸೆಯಾಯಿತು. ತಂದೆಯಿಂದ ಬಿಲ್ಲು ಬಾಣಗಳನ್ನು ಪಡೆದು ಬೇಟೆಯನ್ನು ಅರಸುತ್ತಾ ಹೋದಳು. ಕಾಡಿನಲ್ಲಿ ಬಹಳ ದೂರ ಹೋದಳು. ಆದರೆ ತಿರುಗಿ ಬರಲು ದಾರಿಕಾಣದೆ ಅಲ್ಲಿಯೇ ಸಮೀಪದಲ್ಲಿ ಇರುವ ಗುಹೆಯನ್ನು ಪ್ರವೇಶಮಾಡಿದಳು. ತಂದೆ ತಾಯಿಯನ್ನು ಮರೆತಳು. ಅವಳು ಪ್ರವೇಶಿಸಿದ ಗುಹೆಗೆ ಕೃಷ್ಣ ಬಂದನು. ಅವನು ಸಂಚುಲಕ್ಷ್ಮಿಯ ಸೌಂದರ್ಯಕ್ಕೆ ಮಾರುಹೋದನು. ಅವಳನ್ನು ಬಲವಂತದಿಂದ ಒಲಿಸಿಕೊಂಡನು. ಇತ್ತ ಸಂಚುಶಿಕನಾಯಕ ಮಗಳು ಎಷ್ಟು ಹೊತ್ತಾದರೂ ಬಾರದಿರುವುದನ್ನು ಗಮನಿಸಿ ಕಾಡಿನಲ್ಲಿ ಹುಡುಕುತ್ತಾ ಹೊರಟನು. ಸಂಚುಲಕ್ಷ್ಮಿ ಇರುವ ಗುಹೆಯನ್ನು ಪ್ರವೇಶಿಸಿ ಅಲ್ಲಿ ತನ್ನ ಮಗಳು ಪರಪುರುಷನೊಂದಿಗೆ ಇರುವುದನ್ನು ನೋಡಿ ಸಹಿಸಿಕೊಳ್ಳಲಾಗಲಿಲ್ಲ. ಆಗ ತನ್ನ ಸೋದರನಾದ ಕಾಮಗೇತಿ ಭೂಪಾಲನಿಗೆ ಹೇಳಿ ಕೃಷ್ಣನಿಗೆ ಕೊಲ್ಲುವಂತೆ ಆಜ್ಞೆಮಾಡಿದನು. ಇವನು ಕೊಲ್ಲುವುದಕ್ಕೆ ಪ್ರಯತ್ನಿಸಿದಾಗ, ಕೃಷ್ಣ ಅವನ ಪರಿವಾರ ಎಲ್ಲವನ್ನು ಕರುಗಲ್ಲು ಮಾಡಿದನು. ಇದನ್ನು ಗಮನಿಸಿದ ಸಂಚುಶಿಕನಾಯಕ ಕೃಷ್ಣನನ್ನು ಏಕೆ ನನ್ನ ಮಗಳ ಹಿಂದೆ ಬಿದ್ದಿರುವೆ ಎಂದು ಕೇಳಿದಾಗ ಕೃಷ್ಣ ಈ ರೀತಿ ಹೇಳುತ್ತಾನೆ. ನೀನು ಮಕ್ಕಳಿಲ್ಲವೆಂದು ದೇವಾನು ದೇವತೆಗಳಿಗೆ ಹರಕೆ ಹೊತ್ತಾಗ ನಿನ್ನ ಕೊರಗಿಗೆ ಮಾರು ಹೋದ ಲಕ್ಷ್ಮಿಯು ಸಂಚುಲಕ್ಷ್ಮಿಯಾಗಿ ಹುಟ್ಟುವುದಾಗಿ ನನ್ನಿಂದ ವರಪಡೆದು ನಿನ್ನ ಹೆಂಡತಿ ಹೊಟ್ಟೆಯಲ್ಲಿ ಹುಟ್ಟಿದಳು. ಅವಳಿಗೆ ಹದಿನಾರು ವರ್ಷಮಾತ್ರ ನಿಮ್ಮ ಜೊತೆಗೆ ಇರುವಂತೆ ಆಜ್ಞೆಮಾಡಿ ಕಳಿಸಿದೆ. ಈಗ ಆಕೆಗೆ ಹದಿನಾರು ವರ್ಷತುಂಬಿದೆ. ಆ ಕಾರಣದಿಂದ ಅವಳನ್ನು ಭೂಲೋಕದಿಂದ ಕರೆದುಕೊಂಡು ಹೋಗಲು ಬಂದಿರುವೆನೆಂದು ಹೇಳಿದಾಗ. ಸಂಚುಶಿಕನಾಯಕನಿಗೆ ತುಂಬಾ ನೋವಾಗುತ್ತದೆ. ಆದರೆ ವಿಧಿಯಿಲ್ಲ ದೇವರೊಂದಿಗೆ ಸರಸವಾಡುವುದು

ಸರಿಯಲ್ಲ ಎಂದು ಕರುಗಲ್ಲಾಗಿರುವವರನ್ನು ಪುನಃ ಮನುಷ್ಯರಾಗಿ ಮಾಡುವಂತೆ ಕೃಷ್ಣನನ್ನು ಕೇಳಿದಾಗ, ಸಂಚುಲಕ್ಷ್ಮಿಯು ಈ ರೀತಿ ಹೇಳುತ್ತಾಳೆ. 'ಸೂರ್ಯ ಚಂದ್ರರು ಇರುವವರೆಗೆ ಪ್ರಾಯದ ಕೋಣವನ್ನು ತಂದು ಅದರ ಜೀವಂತ ಚರ್ಮತೆಗೆದು, ನೂರೊಂದು ಹಗ್ಗ ಕಟ್ಟಿ, ಬಿಳಿ ಆಕಳು ಹಾಲು ಕರೆದು ಕಾಯಿಸಿ ಹೆಪ್ಪುಹಾಕಿ ಮೊಸರು ಮಾಡಿ ಮಜ್ಜಿಗೆಮಾಡಿ ಬೆಣ್ಣೆತೆಗೆದು ತುಪ್ಪಕಾಯಿಸಿ ಆ ತುಪ್ಪದಿಂದ ನೂರೊಂದು ದೀಪಗಳನ್ನು ಹಚ್ಚಿರಿ ಹಾಗೂ ಮುನ್ನೂರು ಮ್ಯಾಸಮಂಡಲ ಕುಲವೆಲ್ಲ ನಿತ್ಯ ಹೋಮ ಮಾಡುತ್ತೇವೆಂದು ಹರಕೆ ಮಾಡಿಕೊಂಡರೆ ಆತನು ದಯಾವಂತನಾಗಿ ಎಲ್ಲರಿಗೂ ಜೀವದಾನ ಮಾಡುವನು ಎಂದು ಹೇಳಿದಾಗ, ಆ ಮಾತಿಗೆ ಸಂಚುಶಿಕನಾಯಕ ಒಪ್ಪಿಕೊಂಡನು. ಆಗ ಎಲ್ಲರು ಜೀವದಾನ ಪಡೆದರು. ಅದೇ ರೀತಿಯಾಗಿ ಸಂಚುಶಿಕನಾಯಕ ಹರಕೆಯನ್ನು ಮಾಡಿಕೊಂಡನು. ಆಗ ಆತನ ಭಕ್ತಿಗೆ ನರಸಿಂಹ ಪ್ರಸನ್ನನಾಗುತ್ತಾನೆ. ಮತ್ತೆ ಅವರಿಗೆ ಬಲಮುರಿಶಂಖ, ನಾಗಮುರಿಬೆತ್ತ, ರತ್ನಗಿರಿಕಂಬಳಿ, ನಾಮತೀರ್ಥ, ಮುತ್ತಿನಪೆಂಡೆ, ಬವನಾಶಿ(ಬೌನಾಸಿ) ಕೊಳಲು ಚಿಪ್ಪಿಗೊಡಲಿ, ಊರಿಪೋದಿನೇಮ ಮಾಡಲು ಬಿರುದಾಂಕಿತಗಳನ್ನು ಕೊಟ್ಟನು. ಇಲ್ಲಿ ಒಂದು ವಿಷಯವನ್ನು ಗಮನದಲ್ಲಿಡಬೇಕು. ವೈಷ್ಣವ ಪರಂಪರೆಯ ಯಾರೋ ಒಬ್ಬನ ಜೊತೆಗೆ ಸಂಚುಲಕ್ಷ್ಮಿ ಓಡಿಹೋಗಿರುವ ಸಾಧ್ಯತೆ ಇದೆ. ಆದರೆ ಬುಡಕಟ್ಟು ಧರ್ಮವನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಆಕೆಯನ್ನು ವಿಷ್ಣು ವರಿಸಿದನೆಂದು ಹೇಳುವುದನ್ನು ಕಾಣಬಹುದು. ಒಂದು ವೇಳೆ ಸಂಚುಲಕ್ಷ್ಮಿಯನ್ನು ಸಮುದಾಯವೇ ಒಪ್ಪಿಕೊಟ್ಟು ಮದುವೆ ಮಾಡಿದ್ದರೆ ಸಮುದಾಯದಿಂದ ಹೊರಗೆ ಇಡುತ್ತಿರಲಿಲ್ಲ. ವೈಷ್ಣವೀಕರಣವನ್ನು ಒಪ್ಪಿಕೊಳ್ಳದ ಸಮುದಾಯ ಆಕೆಯ ಪಾಡಿಗೆ ಆಕೆಯನ್ನು ಕುಲದಿಂದ ಹೊರಗೆ ಹಾಕಿ ಗೌರಸಮುದ್ರದ ಮಾರಮ್ಮನ ಹುಟ್ಟುವಿಕೆಗಾಗಿ ಕಾದಿರುವುದು ಕಂಡುಬರುತ್ತದೆ.

ಬಿರುದಾಂಕಿತಗಳನ್ನು ಕೊಟ್ಟು ಸಂಚುಲಕ್ಷ್ಮಿಯೊಂದಿಗೆ ಕೃಷ್ಣ ಮಾಯವಾದನು. ಹೀಗೆ ಚಂದ್ರಗಿರಿ ಅರಣ್ಯದಲ್ಲಿ ಸಂಚುಶಿಕನಾಯಕ ಮತ್ತು ದಾನಸೂಲಮ್ಮ ಕಾಲಕಳೆಯುವಂತ ಸಮಯದಲ್ಲಿ ಚಂದ್ರಗಿರಿ ಅರಣ್ಯದಲ್ಲಿ ಒಂದು ದಿನ ರಾತ್ರಿ ವಿಪರೀತವಾದ ಮಳೆ ಬಂದಿತು. ಆಗ ಬುಡಕಟ್ಟು ಸಮುದಾಯಗಳು ಸುಮ್ಮನೆ ಕೂರುವುದಿಲ್ಲ. ಆ ಕಾರಣದಿಂದ ಅವರು ತಮ್ಮ ತಮ್ಮ ಹೊಲಗಳಲ್ಲಿ ಬೀಜ ಬಿತ್ತಲು ಪ್ರಾರಂಭ ಮಾಡಿದರು. ಇದು ಬುಡಕಟ್ಟುಗಳು ಬೇಟೆಯಿಂದ ಕೃಷಿಗೆ ಮುಖಮಾಡಿರುವುದನ್ನು ಸೂಚಿಸುತ್ತದೆ. ಅಷ್ಟೆ ಅಲ್ಲದೆ ಕೃಷಿಯು ಪ್ರಾರಂಭವಾಗಿರುವುದೇ ಹೆಣ್ಣಿನಿಂದ ಎಂಬುದು ಗೊತ್ತಾಗುತ್ತದೆ. ಎಲ್ಲರೂ ಉಳಿಮೆ ಮಾಡುವುದನ್ನು ನೋಡಿದ ದಾನಸೂಲಮ್ಮಳಿಗೆ ಸುಮ್ಮನೆ ಕೂಳಿತುಕೊಳ್ಳಲು ಆಗಲಿಲ್ಲ. ಆಕೆಗೂ ಕೂಡ ತಾನು ಬೀಜ ಬಿತ್ತಬೇಕೆಂಬ ಬಯಕೆ ಕಾಡಿತು. ಆದರೆ ಆಕೆಯ ಬಳಿ ಬೀಜಗಳಿರಲಿಲ್ಲ. ಆಗ ತನ್ನ ಗಂಡನನ್ನು ಕರೆದು ಸ್ವಾಮಿ ರೈತರೆಲ್ಲರು ಕುಂಬಳ ಕಾಯಿ ಬೀಜವನ್ನು ಹಾಕುತ್ತಿದ್ದಾರೆ. ನಾವೂ ಕೂಡ ಬೀಜವನ್ನು ಬಿತ್ತನೆ ಮಾಡಿದರೆ ಒಳ್ಳೆಯ ಬೆಳೆಯನ್ನು ಬೆಳೆಬಹುದೆಂದು ಹೇಳಿದಾಗ ಬೀಜಗಳು ನಮ್ಮ ಬಳಿ ಇಲ್ಲ ಹೇಗೆ ಬಿತ್ತನೆಯನ್ನು ಮಾಡಲು ಸಾಧ್ಯ ದೇವಿ ಎಂದು ಕೇಳುತ್ತಾನೆ. ಆಗ ಆಕೆಯು ತನ್ನ ತಮ್ಮನಾದ ಕಾಮಗೇತಿನಾಯಕ ವಾಸವಿರುವ ಮಂದರಗಿರಿ ಪರ್ವತಕ್ಕೆ ಹೋಗಿ ಬೀಜಗಳನ್ನು ತೆಗೆದುಕೊಂಡು ಬರುವಂತೆ ಹೇಳಿದಾಗ ಹೆಂಡತಿಯ ಮಾತಿನಂತೆ ಸಂಚುಸಿಕನಾಯಕ ಒಪ್ಪಿ ಕುಂಬಳ ಬೀಜಗಳನ್ನು ತರಲು ಹೊರಟನು. ದಾರಿ ಮಧ್ಯದಲ್ಲಿ ಅರಣ್ಯ

ಸಿಗುತ್ತದೆ. ಆ ಅರಣ್ಯದಲ್ಲಿ ದಾರಿ ತಪ್ಪಬಾರದೆಂಬ ಕಾರಣಕ್ಕೆ ಕಲ್ಲಿನ ರಾಶಿಗಳನ್ನು ಮಾಡುತ್ತಾ ಹೋಗುತ್ತಾನೆ. ಅಲ್ಲಿ ಶಿವನು ಪ್ರತ್ಯಕ್ಷನಾಗಿ ಸಂಚುಶಿಕನಾಯಕನನ್ನು ತಡೆದು ಈ ರೀತಿ ಕಲ್ಲು ರಾಶಿಹಾಕಲು ಕಾರಣವೇನೆಂದು ಕೇಳಲು, ಅವನು ದಾರಿ ತಪ್ಪದಿರಲಿ ಎಂದು ಹೇಳಿದಾಗ, ಶಿವನು ನೀನು ಕೊನೆಯ ಕಲ್ಲಿನ ರಾಶಿ ಮಾಡುವಾಗ ಕೆಳಕಲ್ಲಿನ ಅಡಿ ಕುಂಬಳ ಬೀಜಗಳಿರುತ್ತವೆ. ಅವುಗಳನ್ನು ತೆಗೆದುಕೊಂಡು ಹೋಗು ಎಂದು ಹೇಳಿದಾಗ, ಏಳನೆಯ ಕುಪ್ಪೆಯ ಕೆಳಗೆ ಏಳು ಕುಂಬಳ ಬೀಜ ದೊರೆಯುತ್ತವೆ. ಅವುಗಳನ್ನು ತೆಗೆದುಕೊಂಡು ಹೋಗಿ ನಿನ್ನ ಪತ್ನಿಯಾದ ದಾನಸೂಲಮ್ಮನ ಕೈಗೆಕೊಟ್ಟಾಗ, ಆಕೆ ಅವುಗಳನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಸ್ನಾನಮಾಡಿ ಸೂರ್ಯನನ್ನು ಪ್ರಾರ್ಥಿಸಿ ನಂತರ ಬಂದು ಕುಂಬಳ ಬೀಜಗಳನ್ನು ಹೂತಳು. ಕುಂಬಳ ಬಳ್ಳಿ ಹುಲುಸಾಗಿ ಬೆಳೆಯುತ್ತದೆ. ಇಡೀ ಕಾಡಿನ ತುಂಬ ಹರಡಿಕೊಳ್ಳುತ್ತದೆ. ಇದರಿಂದಾಗಿ ಅದರಲ್ಲಿ ಕಾಡುಮೃಗಗಳು ವಾಸಮಾಡಿಕೊಂಡಿರುವುದು, ಅವುಗಳು ಜನರಿಗೆ ತೊಂದರೆ ಕೊಡುವುದು. ಆಗ ಆ ಊರಿನ ದೊರೆಯಾದ ಕಾಮಗೇತಿ ಭೂಪಾಲನಿಗೆ ದೂರು ಹೇಳಲು ರಾಜನು ಆ ಬಳ್ಳಿಯನ್ನು ಬೇರು ಸಹಿತ ಕಿತ್ತು ಹಾಕುವಂತೆ ಆಜ್ಞೆ ಮಾಡಿದನು. ಕೀಳದಿದ್ದರೆ ತಲೆ ತೆಗೆಯುವುದಾಗಿ ಬೆದರಿಕೆ ಹಾಕಿದನು. ಈ ಮಾತನ್ನು ಕೇಳಿ ದಾನಸೂಲಮ್ಮ ಕುಂಬಳಕಾಯಿ ಗಿಡವನ್ನು ಬೇರು ಸಹಿತ ಕೀಳಲು ಪ್ರಯತ್ನಿಸಿದಾಗ ಅದರ ಬಡ್ಡಿಯಲ್ಲಿ ಒಂದು ದೊಡ್ಡ ಕುಂಬಳ ಕಾಯಿ ಉಳಿದುಕೊಂಡಿರುತ್ತದೆ.

ಪುನಃ ಸಂಚುಶಿಕನಾಯಕನು ತನ್ನ ಪತ್ನಿಗೆ ನದಿಯಲ್ಲಿ ಸ್ನಾನ ಮಾಡುವಂತೆ ಹೇಳಿ ಅವಳು ಸ್ನಾನಮಾಡಿ ಬಂದ ಮೇಲೆ ಕುಂಬಳಕಾಯಿಯನ್ನು ಹೊಡೆದು ಸತಿ ಪತಿಗಳಿಬ್ಬರು ಊಟಮಾಡಿದರು. ಕೆಲವು ಕಾಲದ ನಂತರ ದಾನಸೂಲಮ್ಮ ಮತ್ತೆ ಗರ್ಭವತಿಯಾದಳು. ಒಂಬತ್ತು ತಿಂಗಳು ತುಂಬಿದ ನಂತರ ಅವಳು ಮಕ್ಕಳಿಗೆ ತಾಯಿಯಾದಳು. ಆ ಮಕ್ಕಳು ಸುಖವಾಗಿ ಬೆಳೆಯುತ್ತಿರುವಂತಹ ಕಾಲದಲ್ಲಿ ಒಟ್ಟು ಎಂಟು ಮಕ್ಕಳ ತಂದೆ ತಾಯಿಗಳಾದರು. ಅವುಗಳಲ್ಲಿ ಮೊದಲನೆ ಮಗುವೆ ಹೆಣ್ಣು, ಇನ್ನುಳಿದವು ಏಳು ಗಂಡು ಮಕ್ಕಳಿಗೆ ನಾಮಕರಣ ಮಾಡಿದರು. ಹೆಣ್ಣು ಮಗುವಿಗೆ ಮಾರಮ್ಮ ಎಂದು ಎರಡನೆಯ ಮಗು ಬಾನುಕೋವಿರಾಜ, ಸೂರಪ್ಪರಾಜ ಚೆಟ್ಟುಪುಟ್ಟರಾಜ, ಕೋರಿಮಲ್ಲಿರಾಜ ಕಾಕುಮಂಚಿರಾಜ, ಪಾಪನ್ನರಾಜ ಬೊಮ್ಮರಾಜ ಎಂಬ ಹೆಸರುಗಳನ್ನಿಟ್ಟರು ಏಳು ಜನ ತಮ್ಮಂದಿರನ್ನು ಮಾರಮ್ಮ ಏಳು ಜೋಲಿಕಟ್ಟಿ ತೂಗುತ್ತಿದ್ದಳು.

ಮಾರಮ್ಮನ ನಡವಳಿಕೆ ತುಂಬಾ ವಿಚಿತ್ರವಾಗಿತ್ತು. ಎಲ್ಲರೂ ಹಸಿವಿಗೆ ಅನ್ನ ತಿಂದರೆ ಈಕೆ ಬೇವಿನಸೊಪ್ಪು ತಿನ್ನುತ್ತಿದ್ದಳು. ಮತ್ತು ತಮ್ಮಂದಿರಿಗೆ ತಿನಿಸುತ್ತಿದ್ದಳು. ಒಂದು ದಿನ ದಾನಸೂಲಮ್ಮ ಸತ್ತು ಹೋದಳು. ಆಗ ತಮ್ಮಂದಿರನ್ನು ಸಾಕುವ ಜವಾಬ್ದಾರಿಯು ಮಾರಮ್ಮನ ಮೇಲೆ ಬಿದ್ದಿತು. ಅವಳು ತಮ್ಮಂದಿರನ್ನು ಸಾಕಲು ಗೆಡ್ಡೆ-ಗೆಣಸು, ಹಣ್ಣು ಹಂಪಲು ತಂದು ಕೊಡುತ್ತಿದ್ದಳು. ಹೀಗೆ ಕಾಲ ಕಳೆಯುತ್ತಿರಲು ಸೋದರರೆಲ್ಲ ದೊಡ್ಡವರಾದರು. ಅವರು ಕೈಯಲ್ಲಿ ಕೆಲಸವಿಲ್ಲದೆ. ಅಲೆಯುತ್ತಿರುವಾಗ ಇವರಿಗೆ ಯಾವುದಾದರೂ ಕೆಲಸವನ್ನು ಹುಡುಕಿಕೊಡಬೇಕೆಂದು ನಿಶ್ಚಯಿಸಿ ಸೋದರ ಮಾವನಾದ ಕಾಮಗೇತಿ ಭೂಪಾಲನ ಮಕ್ಕಳಾದ ಗುಪ್ತಬೊಮ್ಮತ್ತಿರಾಜ, ಯರ್‍ರಿಬೊಮ್ಮತ್ತಿರಾಜ ಕರಿಬೊಮ್ಮತ್ತಿರಾಜ ಇವರ ಹತ್ತಿರಕ್ಕೆ ಹೋಗಿ ತನ್ನ ತಮ್ಮಂದಿರುಗಳಿಗೆ ಕೆಲಸ ಹುಡುಕಿಕೊಡುವಂತೆ ಕೇಳಿದಾಗ, ಅವರು

ವ್ಯವಸಾಯ ಮಾಡಲು ನಾಲ್ಕು ಎತ್ತುಗಳನ್ನು ಮತ್ತು ವ್ಯವಸಾಯದ ಸಲಕರಣೆಗಳನ್ನು ಕೊಟ್ಟು, ಅಷ್ಟೆ ಅಲ್ಲದೆ ಅಳಿಯಂದಿರಿಗೆ ವ್ಯವಸಾಯ ಕಲಿಸಲು ಕರಿಬೊಮ್ಮತ್ತಿರಾಜನನ್ನು ಸಹಾಯಕ್ಕೆ ಕಳುಹಿಸಿದರು.

ಮಾರಮ್ಮ ತನ್ನ ಸೋದರ ಮಾವನೊಂದಿಗೆ ಎತ್ತುಗಳನ್ನು ಹೊಡೆದುಕೊಂಡು ಬಂದು ಅರಣ್ಯದಲ್ಲಿ ಮರಗಳನ್ನು ಕಡಿದು ಫಲವತ್ತಾದ ಭೂಮಿಯನ್ನಾಗಿ ಮಾಡಿದಳು. ಆಗ ಇವರ ಬದುಕು ಸುಧಾರಿಸುತ್ತಾ ಬಂದಿತು. ಇದು ಆದಿಮಾನವನ ಕಾಲದ ಮನುಷ್ಯನು ಆಹಾರ ಸಂಗ್ರಹಣೆಯಿಂದ ಕೃಷಿಯ ಕಡೆಗೆ ವಾಲುತ್ತಿರುವುದನ್ನು ಕಾಣಬಹುದು.

ಹೀಗೆ ಕಾಲ ಕಳೆಯುತ್ತಿರಲು ತಮ್ಮಂದಿರೆಲ್ಲ ಕೂಡಿ ಮಾರಮ್ಮನನ್ನು ತಮ್ಮ ವಂಶದ ಬಗ್ಗೆ ವಿಚಾರಿಸಿದಾಗ, ಮಾರಮ್ಮ ನಮ್ಮದು ಸೂರ್ಯವಂಶ. ಶುಕ್ಲಮಲ್ಲಿರಾಜು ಗೋತ್ರ ಎಂದು ಹೇಳಿದಳು. ಸರಿ ನಾವು ಸೂರ್ಯನ ವಂಶಸ್ಥರಾದರೆ ಸೂರ್ಯನಿಂದ ವರಗಳನ್ನು ಪಡೆದುಕೊಳ್ಳೋಣವೆಂದು ಸೂರ್ಯನನ್ನು ಮೆಚ್ಚಿಸಲು ಘೋರ ತಪಸ್ಸಿಗೆ ಕುಳಿತುಕೊಂಡರು. ಹೀಗೆ ತಪಸ್ಸಿಗೆ ಹೋದ ಸೋದರರು ಎಷ್ಟು ದಿನವಾದರೂ ಬಾರದಿರುವುದನ್ನು ನೋಡಿ ಸೋದರಮಾವನಾದ ಕರಿಬೊಮ್ಮತ್ತಿರಾಜನನ್ನು ಕುರಿತು ಮಾವ ನಿನ್ನ ಅಳಿಯಂದಿರು ಇದುವರೆಗೂ ಬರಲಿಲ್ಲ. ಹಾಗಾಗಿ ನೀವು ಅವರು ಮಾಡುವ ತಪಸ್ಸು ಯಾವುದೇ ಅಡ್ಡಿ ಆತಂಕಗಳಿಲ್ಲದೆ ನೆರವೇರುವಂತೆ ಒಂದು ಪ್ರಾಣಿಯನ್ನು ಹಿಡಿದುಕೊಂಡು ಅದರ ಡೊಕ್ಕೆಯನ್ನು ಬಗೆದು ನೆಣವನ್ನು ತೆಗೆದುಕೊಂಡು, ನಿನ್ನ ತಲೆಯ ಮೇಲೆ ಇಟ್ಟುಕೊಂಡು ಧ್ಯಾನಮಾಡು, ಎಂದು ಹೇಳಿದಳು. ಅವಳು ಹೇಳಿದಂತೆ ಕರಿಬೊಮ್ಮತ್ತಿರಾಜ ಹಾಗೆಯೆ ಮಾಡಲು ಮಾರಮ್ಮನ ತಮ್ಮಂದಿರು ಸೂರ್ಯ ದೇವರಿಂದ ಬಿರುದುಗಳನ್ನು ಪಡೆದುಕೊಂಡು ಬಂದರು. ಆ ಬಿರುದುಗಳೆಂದರೆ ಭೂಚಕ್ರದಗೊಡಗು, ಕೋರಿ ನಿಶಾನಿ, ದೊಡ್ಡಗಂಟಿ ಧರ್ಮಗಿರಿ ಗದ್ದುಗೆ, ಕೋಟಿಲಿಂಗಗಳ ಮೂಲ ಸ್ಥಾನದವರು ಮುಂತಾದ ಬಿರುದು ಬಾವಲಿಗಳನ್ನು ಪಡೆದರು. ಸಂತೋಷದಲ್ಲಿ ಏಳು ಜನರು ಏಳು ಬಾವಿಗಳನ್ನು ತೋಡಿಸಿದರು. ಜೊತೆಗೆ ಕೋಟಿಲಿಂಗಗಳನ್ನು ಸ್ಥಾಪನೆ ಮಾಡಿದರು. ಶಿವ ಗಂಗೆ ಮಾರಮ್ಮನಿಗೆ ಅಂಬವಾಸಿ ಕೊಯ್ದು ಎದುರು ನಿಯಮಗಳನ್ನು ತೀರಿಸಿಕೊಂಡ ಅಲ್ಲಿಂದ ಹೊರಟು. ಪದ್ದಕ್ಕೇರಲು ದೇವಿಯ ಹತ್ತಿರ ಬಂದು ಮಾರಮ್ಮನಿಗೆ ಶರಣು ಮಾಡಿದರು. ಮಾರಮ್ಮ ತಮ್ಮಗಳಿಗೆಗಾಗಿ ಒಂದು ಊರನ್ನು ನಿರ್ಮಾಣ ಮಾಡಿದಳು. ಆ ಊರಿಗೆ ವಜ್ರ ವೈಢೂರ್ಯಗಳಿಂದ ತುಂಬಿದ ಗೋಪುರಗಳನ್ನು ನಿರ್ಮಿಸಿ ಅದಕ್ಕೆ ಸುತ್ತಲು ಕೋಟೆ ನಿರ್ಮಾಣ ಮಾಡಿ ಸುಖವಾಗಿ ಬಾಳುವಂತೆ ಮಾಡಿದಳು.

ಗೌರಸಮುದ್ರದ ಮಾರಮ್ಮನ ಹಿರಿಯ ತಮ್ಮನಾದ ಬಾನಕೋಟಿ ರಾಜನಿಗೆ ದೊರೆಯನ್ನಾಗಿ ಮಾಡಿದಳು. ಈತನ ಮಗನೆ ಯರಮಂಚನಾಯಕ. ಯರಮಂಚನಾಯಕನು ಮಾರಮ್ಮನನ್ನು ತನ್ನ ಚಿಕ್ಕಪ್ಪನನ್ನು ಕರೆದುಕೊಂಡು ತನ್ನ ಸಮುದಾಯದವರನ್ನು ಪ್ರಗತಿಪಡಿಸುವ ಸಲುವಾಗಿ ಇಡಿ ದೇಶವನ್ನು ಸುತ್ತುತ್ತಾ ರಂಗ ಸಮುದ್ರದ ಮಾರ್ಗವಾಗಿ ನಿಡುಗಲ್ಲನ್ನು ತಲುಪಿದನು. ನಿಡುಗಲ್ಲಿನ ಅರಣ್ಯದಲ್ಲಿ ದನಗಳನ್ನು ಕಾಯುತ್ತಾ ಕೆಲವು ದಿನಗಳ ಕಾಲ ಅಲ್ಲಿಯೇ ವಾಸವಾಗಿದ್ದರು. ಯರಮಂಚನು ತಾನು ತನ್ನ ಪರಿವಾರ ಪ್ರತಿನಿತ್ಯ ಸ್ನಾನ ಮಾಡದೆ ಊಟ ಮಾಡುತ್ತಿರಲಿಲ್ಲ. ಇದನ್ನು ನೋಡಿದ ಹೊಟ್ಟಾಳನಾಯಕನು. ಇವನ ವ್ರತವನ್ನು ಕೆಡಿಸಬೇಕೆಂದು ಉಪಾಯಮಾಡಿ ಒಂದು ದಿನ ಯರಮಂಚನು

ಅದಕ್ಕೆ ಒಪ್ಪದಿರಲು ಆಗ ಲಂಕಿಯ ಹತ್ತಿರ ಊಟ ತರುವುದಾಗಿ ಹೇಳಿದಾಗ ಯರಮಂಚನಾಯಕ ಒಪ್ಪಿದನು. ಆಗ ಹೊಟ್ಟಾಳನಾಯಕ ಕೋಳಿಯ ಮಾಂಸದ ಅಡುಗೆಮಾಡಿ ಕಿಲಾರಿಯ ಅದನ್ನು ಯರಮಂಚನ ಹತ್ತಿರ ತಂದನು. ಇದರಿಂದ ಯರಮಂಚನಾಯಕ ನಮಗೆ ನಮ್ಮ ವ್ರತ ಮುಖ್ಯ. ವಿಶ್ವಾಸದ ಹೆಸರು ಹೇಳಿ ನಮ್ಮ ವ್ರತ ಕೆಡಿಸಲು ಪ್ರಯತ್ನಿಸಿದ ಹೊಟ್ಟಾಳ ನಾಯಕನನ್ನು ಸುಮ್ಮನೆ ಬಿಡಬಾರದು ಎಂದು ಅವನನ್ನು ಸೆರೆಹಿಡಿದರು. ಆತನನ್ನು ಮಾರಮ್ಮನಿಗೆ ಒಪ್ಪಿಸಿದರು. ಮಾಂಸದ ಆಹಾರ ನೋಡಿ ಕಣ್ಣು ಕಳೆದುಕೊಂಡಿದ್ದ ಕಿಲಾರಿಯ ಕಣ್ಣುಗಳಿಗೆ ಮಲ್ಲಿಗೆ ಹೂವುಗಳನ್ನು ಇಡುವುದರ ಮೂಲಕ ಅವನಿಗೆ ಪುನಃ ಕಣ್ಣು ಬರುವಂತೆ ಮಾಡಿದಳು. ನಂತರ ನಿಡುಗಲ್ಲಿಗೆ ಹೋಗಿ ಹೊಟ್ಟಾಳ ನಾಯಕನ ಎಮ್ಮೆಗಳನ್ನು ಹೊಡೆದುಕೊಂಡು ಬಂದು ದೊಡ್ಡಿಗೆ ಕೂಡಿ ಹಾಕಿದರು. ಅದಕ್ಕೆ 'ಎನುಮುಲು' ದೊಡ್ಡಿ ಎಂದು ಕರೆದು ಅವುಗಳಲ್ಲಿಯ ಒಂದು ಒಳ್ಳೆಯ ಎಮ್ಮೆಯನ್ನು ಹಿಡಿದು ತಂದು ಕೊಯ್ದನು. ಆಗ ಹೊಟ್ಟಾಳನಾಯಕ ಈ ರೀತಿ ಎಮ್ಮೆಯನ್ನು ಕೊಯ್ಯಬಹುದೆ ಎಂದು ಕೇಳಿದಾಗ ನಾವು ಎಮ್ಮೆಯನ್ನು ಬೇಯಿಸುವುದಿಲ್ಲ. ಕುಂಬಳಕಾಯಿಯನ್ನು ಬೇಯಿಸುತ್ತಿದ್ದೇವೆ ಎಂದು ಹೇಳಿದನು. ಅದಕ್ಕೆ ಹೊಟ್ಟಾಳನಾಯಕನನ್ನು ಕರೆದುಕೊಂಡು ಹೋಗಿ ತೋರಿಸಲು ಮಾರಮ್ಮನ ಪ್ರಭಾವದಿಂದ ಮಾಂಸವೆಲ್ಲ ಕುಂಬಳಕಾಯಿಗಳ ಹೋಳುಗಳಾಗಿ ಕಂಡು ಬಂದವು. ಈ ಪವಾಡವನ್ನು ಗಮನಿಸಿದ ಹೊಟ್ಟಾಳನಾಯಕ ಮಾರಮ್ಮನಿಗೆ ಕಾಲುಹಿಡಿದುಕೊಂಡು ಮಾಡಿದ ತಪ್ಪಿಗೆ ಕ್ಷಮೆಯನ್ನು ಕೇಳಿದನು. ಜೀವ ಇರುವ ವರೆಗೂ ಎಮ್ಮೆ ಹಾಲು ಮೀಸಲು ತಂದೊಪ್ಪಿಸುತ್ತೇನೆ. ಅದರಂತೆ ಪ್ರತಿವರ್ಷ ಒಂದು ಕೋಣವನ್ನು ಬಲಿಕೊಡುವುದಾಗಿ ಮಾತುಕೊಟ್ಟನು. ಈ ಮಾತಿಗೆ ತಪ್ಪುವುದಿಲ್ಲ ಎಂದು ಭಾಷೆ ಪ್ರಮಾಣಗಳನ್ನು ಮಾಡಿ ಎಮ್ಮೆ ಮತ್ತು ದನಕರುಗಳನ್ನು ಬಿಡಿಸಿಕೊಂಡು ಹೋದನು.

೫.೧.೧. ಮಲ್ಲಸಮುದ್ರದಲ್ಲಿ ಮಾರಮ್ಮನ ಪವಾಡಗಳು

ಹೊಟ್ಟಾಳನಾಯಕನಿಂದ ಮಾತು ತೆಗೆದುಕೊಂಡ ಮಾರಮ್ಮ ತನ್ನ ಪರಿವಾರದೊಂದಿಗೆ ಮಲ್ಲಸಮುದ್ರಕ್ಕೆ ಬಂದಳು. ಮಲ್ಲಸಮುದ್ರವು ಅನೇಕ ದಟ್ಟವಾದ ಮರಗಿಡಗಳಿಂದ ಆವೃತವಾಗಿರುವ ಪ್ರದೇಶ. ಅಲ್ಲಿ ಅನೇಕ ದುಷ್ಟಮೃಗಗಳು ವಾಸವಾಗಿದ್ದವು. ಅವುಗಳ ಬಾಧೆಯಿಂದ ತಮ್ಮ ದನಗಳನ್ನು ರಕ್ಷಿಸುವುದು ಕಷ್ಟದ ಕೆಲಸವಾಗಿತ್ತು ಆದರೂ ಧೈರ್ಯಗುಂದದೆ ದನಗಳನ್ನು ಕಾಯುತ್ತ ಗೆಡ್ಡೆಗೆಣಸು ತಿನ್ನುತ್ತ ಕಾಲ ಕಳೆಯುತ್ತಿದ್ದರು. ಅದೇ ಊರಿನ ಉಪ್ಪಿನ ಹೊಳೆಯಲ್ಲಿ ಉಪ್ಪಾರರು ಉಪ್ಪಿನ ಕಾಯಕ ಮಾಡುತ್ತಾ ವಾಸವಾಗಿದ್ದರು. ಅವರ ಬಳಿಗೆ ಮಾರಮ್ಮ ಹಣ್ಣು ಹಣ್ಣಾದ ಮುದುಕಿಯ ರೂಪತಾಳಿ ವಿಕಾರವಾಗಿ ಕಾಣಿಸಿಕೊಂಡಳು. ಉಪ್ಪಾರರ ಹಿರಿಯ ಮುಖಂಡನಾದ ಗಿರಿ ತಮ್ಮಪ್ಪ ಎಂಬುವವನು ತನ್ನ ಪವಾಡ ತೋರಿಸಲು ಇದೆ ಸರಿಯಾದ ಸಮಯವೆಂದು ತಿಳಿದು ಅಲ್ಲಿಯೇ ವಾಸಿಸಲು ತೀರ್ಮಾನಿಸಿದಳು. ಇವಳ ಪವಾಡದಿಂದ ಉಪ್ಪಿನ ಗದ್ದೆಯಲ್ಲಿ ಗೆದ್ದಲು ಕಾಣಿಸಿಕೊಂಡಿತು. ಅದಕ್ಕೆ ಎಷ್ಟು ತೇಪೆ ಹಾಕಿದರೂ ಅದು ದೊಡ್ಡದಾಗುತ್ತಾ ಹೋಯಿತು. ಇದು ಹೀಗೆ ದಿನದಿಂದ ದಿನಕ್ಕೆ ಮುಂದುವರಿಯುತ್ತಿತ್ತು. ಏನು ಮಾಡಬೇಕೆಂದು ತೋಚದೆ ಅಸಹಾಯಕರಾದ ಸಂದರ್ಭದಲ್ಲಿ ಗೌರಸಮುದ್ರದ ಮಾರಮ್ಮ ಕೊರವಂಜಿಯ ವೇಷಧರಿಸಿ ಬಂದು ಅವರಿಗೆ ಶಾಸ್ತ್ರ ಹೇಳುತ್ತಾಳೆ. ನಿಮಗೆ ಹೆಣ್ಣು ದೇವತೆ ಒಲಿದುಕೊಂಡಿದ್ದಾಳೆ. ಅವಳ ಹೆಸರು ಮಾರಮ್ಮನೆಂದು, ಆ ಹುತ್ತಕ್ಕೆ ನೀವು

ಪೂಜೆ ಮಾಡಬೇಕು. ಇದರಿಂದ ನಿಮ್ಮ ಕಷ್ಟಗಳೆಲ್ಲ ಪರಿಹಾರವಾಗುತ್ತವೆ, ಎಂದು ಹೇಳಿದಾಗ ಅದಕ್ಕೆ ಒಪ್ಪಿಕೊಂಡು ಅವರು, ಮನೆಯ ದಾರಿ ಹಿಡಿದರು. ಇದರಿಂದ ಮಾರಕ್ಕ ಅವರು ಹೋಗುವ ದಾರಿಯಲ್ಲಿ ಮುದುಕಿಯ ರೂಪದಲ್ಲಿ ಕಾಣಿಸಿಕೊಂಡು ಮಾರಮ್ಮನಿಗೆ ಪೂಜೆಮಾಡುವಂತೆ ಹೇಳಿ ಮಾಯವಾದಳು.

೫.೧.೨. ಉಪ್ಪಾರ ಕೆಂಚಮ್ಮನ ನಿಷ್ಠೆ

ಗಿರಿತಿಮ್ಮಪ್ಪನ ಕೊನೆಯ ಮಗಳಾದ ಕೆಂಚಮ್ಮ ಎಳೆಯ ಬಾಲಕಿ. ಆಕೆಯನ್ನು ಮಾರಮ್ಮನ ಪೂಜೆಮಾಡಲು ನೇಮಿಸಿದ್ದರು. ಇದರಿಂದಾಗಿ ಆಕೆಯು ತನ್ನ ಮುಗ್ಧಭಕ್ತಿಯಿಂದ ಪೂಜೆ ಮಾಡಿ ಮಾರಮ್ಮನನ್ನು ಒಲಿಸಿಕೊಂಡಳು. ಪ್ರತಿ ಮಂಗಳವಾರ ಬೇವಿನ ಸೊಪ್ಪು ಮತ್ತು ಭಂಡಾರದಿಂದ ಅನೇಕ ಜನರ ಕಾಯಿಲೆಗಳನ್ನು ವಾಸಿ ಮಾಡುತ್ತಿದ್ದಳು. ಮಾರಮ್ಮನ ಸಹೋದರರು ಅಕ್ಕ ಬಹಳ ದಿನಗಳಾದರೂ ಕಾಣದಿದ್ದನ್ನು ಗಮನಿಸಿ ಹುಡುಕಲು ಪ್ರಾರಂಭಿಸಿದರು. ಆಗ ಮಾರಕ್ಕ ಕಾಣಿಸಿಕೊಂಡು ಇಂದಿನಿಂದ ನಿಮ್ಮ ಜೊತೆಯಲ್ಲಿರಲಾರೆ. ನಾನು ಕೆಂಚಮ್ಮನ ಬಳಿಯಲ್ಲಿ ಇರುತ್ತೇನೆ ಎಂದು ಹೇಳಿ ಮಾಯವಾದಳು.

ಕೆಂಚಮ್ಮನಿಗೆ ಪ್ರಾಯ ಬಂದು ಆಕೆಯ ಸೋದರ ಮಾವನಾದ ಉಪ್ಪಾರ ನಿಂಗಣ್ಣನಿಗೆ ಮದುವೆಮಾಡಿಕೊಟ್ಟಾಗ ಕೆಂಚಮ್ಮನಿಗೆ ಮಾರಮ್ಮನನ್ನು ಬಿಟ್ಟು ಹೋಗಲು ಇಷ್ಟವಿರಲಿಲ್ಲ. ಹಾಗಾಗಿ ದುಃಖಿಸುತ್ತಾಳೆ. ಇದರಿಂದ ಮಾರಮ್ಮ ಆಕೆಯ ಕನಸ್ಸಿನಲ್ಲಿ ಕಾಣಿಸಿಕೊಂಡು ನೀನು ದುಃಖ ಪಡುವ ಅಗತ್ಯವಿಲ್ಲ. ಏಕೆಂದರೆ ಹೆಣ್ಣಾಗಿ ಹುಟ್ಟಿದ ಮೇಲೆ ಪರರ ಮನೆ ಸೇರುವುದು ಹೆಣ್ಣಿನ ಕರ್ತವ್ಯ. ಹಾಗಾಗಿ ನೀನು ಹೋಗುವ ಪಟ್ಟಿಗೆಯಲ್ಲಿ ಸ್ವಲ್ಪ ಹುತ್ತದ ಮಣ್ಣು, ಸ್ವಲ್ಪ ಸಾಲಿಗ್ರಾಮ ಮತ್ತು ಚಲಕೆ ಒಂದು ಗುದ್ದಲಿ ಇಟ್ಟು ಪೆಟ್ಟಿಗೆಯನ್ನು ತೆಗೆದುಕೊಂಡು ಅದರಲ್ಲಿ ಇಟ್ಟು ಪೂಜೆಮಾಡು. ಆದರೆ ಸಾಲಿಗ್ರಾಮ ತೊಳೆಯ ಬೇಕಾದರೆ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಅಭಿಷೇಕ ಮಾಡು ಎಂದು ಹೇಳಿದಂತಾಯಿತು. ಬೆಳಿಗ್ಗೆ ಮಾರಮ್ಮ ಹೇಳಿದ ಮಾತುಗಳನ್ನು ನೆನೆಸಿಕೊಳ್ಳುತ್ತಾ ಹುತ್ತದ ಬಳಿಗೆ ಹೋದಾಗ ಅಲ್ಲಿ ಮಾರಮ್ಮ ಸಾಲಿಗ್ರಾಮದ ರೂಪದಲ್ಲಿದ್ದಳು. ಅವಳು ಹೇಳಿದ್ದು ನಿಜವಾಯಿತು. ಆಗ ಪೆಟ್ಟಿಗೆಯಲ್ಲಿ ಸಾಲಿಗ್ರಾಮ ಹುತ್ತದ ಮಣ್ಣು, ಚಲಿಕೆಯ ತುಂಡು ಇವುಗಳನ್ನು ಪೆಟ್ಟಿಗೆಯಲ್ಲಿ ಇಟ್ಟುಕೊಂಡು ಗಂಡನ ಮನೆಯ ದಾರಿ ಹಿಡಿದಳು. ಕೆಂಚಮ್ಮ ಮಾರಮ್ಮ ತಾಯಿ ಮಕ್ಕಳಂತೆ ಇದ್ದರು. ಮಾರಮ್ಮನ ತಲೆಯಲ್ಲಿ ಕೆಂಚಮ್ಮ ಹೇನು ನೋಡಿದರೆ ಕೆಂಚಮ್ಮನ ತಲೆಯಲ್ಲಿ ಮಾರಮ್ಮ ಹೇನು ನೋಡುತ್ತಿದ್ದಳು. ಇವರು ಈ ರೀತಿ ಮಾಡುತ್ತಿರುವುದು ಬೇರೆಯವರಿಗೆ ಕಾಣುತ್ತಿರಲಿಲ್ಲ. ಹೀಗೆ ಕೆಂಚಮ್ಮ ಮಾರಮ್ಮಳಿಗೆ ಪ್ರೀತಿಯ ಭಕ್ತೆಯಾಗಿದ್ದಳು. ಪ್ರತಿದಿನ ಮನೆಯಲ್ಲಿ ಕೆಲಸ ಮುಗಿಸಿಕೊಂಡು ಕೆಂಚಮ್ಮ ಹುಲ್ಲುತರಲು ಹೋಗುತ್ತಿದ್ದಳು. ಇವಳು ಬರುವುದರೊಳಗಾಗಿ ಮಾರಮ್ಮ ಹುಲ್ಲುಕಿತ್ತು ಹೊರೆಕಟ್ಟಿ ಇಡುತ್ತಿದ್ದಳು. ಇದರಿಂದಾಗಿ ಕೆಂಚಮ್ಮನ ಗಂಡನಿಗೆ ಅನುಮಾನ ಬಂದು ಅವಳನ್ನು ಹಿಂಬಾಳಿಸಿದಾಗ ಇದು ಮಾರಮ್ಮನಿಗೆ ಗೊತ್ತಾಗಿ ಗಂಡ ಹಿಂದೆ ಬಂದಿರುವ ವಿಷಯವನ್ನು ಕೆಂಚಮ್ಮನಗೆ ಹೇಳಿದಳು. ಆಗ ಕೆಂಚಮ್ಮ ಗಂಡನನ್ನು ವಿಚಾರಿಸಿದಾಗ, ನಿನ್ನ ಜೊತೆ ಮಾತನಾಡಿದವರು ಯಾರು ಹೇಳು ಮೊದಲು ಎಂದು ಕೇಳಿದನು. ಆಕೆ ಮರವನ್ನು ತೋರಿಸಿ ಊರಿನ ಕಡೆ ಮುಖ ಮಾಡಿದಳು.

ಆಗ ಅವನು ಮರದ ಮೇಲೆ ನೋಡಿದಾಗ, ಮಾರಮ್ಮ ಮುದುಕಿಯ ವೇಷದಲ್ಲಿ ಅವನನ್ನು ಹೆದರಿಸಿದಳು. ಇದನ್ನು ನೋಡಿದ ಅವನು ಭಯಪಟ್ಟು ಊರಿನಕಡೆ ಬಂದನು. ಅಂದಿನಿಂದ ಕೆಂಚಮ್ಮನ ಭಕ್ತಿಯನ್ನು ಒಪ್ಪಿಕೊಂಡು ಅವಳ ಮೇಲೆ ಅನುಮಾನ ಪಡದಂತೆ ಇದ್ದನು.

೫.೧.೩. ಸಿರಿಗಪ್ಪನ ಸತ್ವ ಪರೀಕ್ಷೆ

ಕೆಂಚಮ್ಮ ದೊಡ್ಡರುದ್ರಪ್ಪನನ್ನು ದತ್ತು ತೆಗೆದುಕೊಂಡು, ಅವನ ಮರಣ ನಂತರ ಅವನ ಮಗ ಸಿರಿಗಪ್ಪನನ್ನು ಮಾರಮ್ಮನ ಪೂಜಾರಿಯಾಗಿ ಮಾಡಿದಳು. ಸಿರಿಗಪ್ಪ ಬಹಳ ನಿಷ್ಠೆಯುಳ್ಳವನಾಗಿ ಭಕ್ತನಾಗಿದ್ದನು. ಇವನ ಭಕ್ತಿಗೆ ಮೆಚ್ಚಿ ಮಾರಮ್ಮ ಒಲಿದುಕೊಂಡಳು. ಇದು ಗ್ರಾಮದ ಜನರಿಗೆ ಹೊಟ್ಟೆ ಉರಿಯಾಯಿತು. ಅವರು ತಾಲೂಕಿನ ತಹಶೀಲ್ದಾರ್ ಅರವರಿಗೆ ಅರ್ಜಿ ಕೊಟ್ಟು ದೇವರ ಪೂಜಾರಿಕೆ ಹಕ್ಕು ಬಿಡಿಸಬೇಕು ಎಂದು ಕೇಳಿಕೊಂಡಾಗ, ತಹಶೀಲ್ದಾರವರು ಬುಕ್ಕಂ ಬೂದಿಗೆ ಮೊಕ್ಕಮೆ ಮಾಡಿ ಸಿರಿಗೆಪ್ಪನನ್ನು ಕರೆಸಿ ನೀನ್ನ ಪೂಜಾರಿಕೆ ಹಕ್ಕು ಬಿಟ್ಟುಕೊಡಬೇಕು ಎಂದು ಒತ್ತಾಯ ಮಾಡಿದರು. ಆಗ ಸಿರಿಗಪ್ಪನು ನಾವು ವಂಶ ಪಾರಂಪರ್ಯವಾಗಿ ಈ ದೇವತೆಯನ್ನು ಮನೆದೇವತೆಯಾಗಿ ಪೂಜಿಸುತ್ತಿದ್ದೇವೆ. ಹಾಗಾಗಿ ಪೂಜೆಮಾಡುವ ಹಕ್ಕು ನಮ್ಮದೇ ಎಂದು ಹೇಳಿದಾಗ, ತಹಶೀಲ್ದಾರರು ಕೋಪಗೊಂಡು ಸಿರಿಗಪ್ಪನನ್ನು ಶಿಕ್ಷಿಸಲು ಆಜ್ಞೆ ಮಾಡಿದಾಗ ಊರಿನ ಗ್ರಾಮಸ್ಥರೆಲ್ಲ ಸೇರಿ ಸಿರಿಗಪ್ಪನನ್ನು ಹೊಡೆದು ಒಂಟಿಕಾಲಿನ ಮೇಲೆ ಉರಿ ಬಿಸಿಲಿನಲ್ಲಿ ನಿಲ್ಲಿಸಿದರು. ಆಗ ತಹಶೀಲ್ದಾರರು ಕುಳಿತುಕೊಂಡಿದ್ದ ಚಾವಡಿಯಲ್ಲಿ ಹಾವು ಕಂಡು ಬಂದಿತು. ಅಲ್ಲಿಂದ ಜನರೆಲ್ಲ ಹಾವು ಹಾವು ಎಂದು ಕೂಗಿಕೊಂಡರು. ಅದು ಅಲ್ಲಿಂದ ಹೊರಟು ಹೋಯಿತು. ಹಾವು ಹೋದ ನಂತರ ತಹಶೀಲ್ದಾರರಿಗೆ ತನ್ನ ತಪ್ಪಿನ ಮನವರಿಕೆಯಾಯಿತು. ಇದರಿಂದಾಗಿ ಸಿರಿಗಪ್ಪನನ್ನು ಕರೆದು ಮಾರಮ್ಮನ ಪೂಜೆಯ ಹಕ್ಕು ನಿಮ್ಮದೇ ಎಂದು ತೀರ್ಮಾನ ಮಾಡಿ ಕಳುಹಿಸಿದರು.

ಈ ರೀತಿಯಾಗಿ ಕೆಂಚಮ್ಮ ಮಾರಮ್ಮನ ಮಹಿಮೆಯನ್ನು ಜನರಿಗೆ ಸಾರುತ್ತ ಜನಗಳ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ಭಾದ್ರಪದ ಶುದ್ದ ಮೊದಲನೆ ಮಂಗಳವಾರ ಹುತ್ತವಿರುವ ಸ್ಥಳಕ್ಕೆ ಮಾರಮ್ಮನ ಪೆಟ್ಟಿಗೆಯನ್ನು ಹೊರಡಿಸುತ್ತಾರೆ. ಅಂದಿನಿಂದಲೂ ಹುತ್ತವಿರುವ ಸ್ಥಳಕ್ಕೆ ತುಮ್ಮಲು ಎಂದು ಕರೆಯುತ್ತಾರೆ. ಇಂದಿಗೂ ಸಾವಿರಾರು ಜನರು ಹರಕೆಗಳನ್ನು ಒಪ್ಪಿಸಿ ಸಾಯಂಕಾಲ ಆ ಸ್ಥಳದಲ್ಲಿ ಒಬ್ಬರು ಇರದಂತೆ ಸೂರ್ಯ ಮುಳುಗುವ ಮೊದಲು ಹೊರಟು ಹೋಗುವುದು ಕಂಡು ಬರುತ್ತದೆ.

೫.೧.೪. ಬಳೆಗಾರನ ಬಗ್ಗೆ ಇರುವ ಐತಿಹ್ಯ

ಒಂದು ಬಾರಿ ಗೌರಸಮುದ್ರದ ಮಾರಮ್ಮನ ಜಾತ್ರೆ ನಡೆಯುವಾಗ ಆ ಜಾತ್ರೆಗೆ ಬಳೆಗಾರ ಬಂದಿದ್ದ. ಎಲ್ಲ ಭಕ್ತಾದಿಗಳು ತಮ್ಮ ಹರಕೆಗಳನ್ನು ತೀರಿಸಿಕೊಂಡು ಹೊತ್ತು ಮುಳುಗುವುದರೊಳಗೆ ಅಲ್ಲಿಂದ ಹೊರಟು ಹೋದರು. ಆದರೆ ಬಳೆಗಾರ ಮಾತ್ರ ಹೊತ್ತು ಮುಳುಗಿದರೂ ಹೋಗಲಿಲ್ಲ. ಇದನ್ನು ಗಮನಿಸಿದ ಮಾರಮ್ಮ ಸುಂದರ ರೂಪವನ್ನು ತಾಳಿ ಬಳೆಗಾರನನ್ನು ಕೂಗಿ ತನಗೆ ಬಳೆತೊಡಿಸುವಂತೆ ಕೇಳುತ್ತಾಳೆ. ಬಳೆತೊಟ್ಟುಕೊಂಡು ಹೊನ್ನಿನ ಗಂಟುಕೊಟ್ಟು ಅಯ್ಯಾ ನೀನು

ನಾನು ಕೊಟ್ಟಿರುವ ಹೊನ್ನಿನ ಗಂಟನ್ನು ಬಿಚ್ಚಿನೋಡದೆ ಹಿಂದಕ್ಕೆ ತಿರುಗದಂತೆ ಹೋಗಿ ಬಿಡು ಎಂದು ಹೇಳಿದಳು. ತಿರುಗಿ ನೋಡಿದ್ದೇ ಆದರೆ ನಿನಗೆ ತೊಂದರೆಯಾಗುತ್ತದೆ. ಎಂದಳು. ಅವಳು ಹೇಳಿದಂತೆ ಬಳೆಗಾರ ಬೇಗ ಬೇಗ ನಡೆಯುತ್ತಾ ಬಂದು ಇನ್ನೇನು ಊರು ಬಂತು ಅನ್ನುವುದರೊಳಗೆ ಮಾರಮ್ಮ ಕೊಟ್ಟಿರುವ ಗಂಟನ್ನು ಬಿಚ್ಚಿ ನೋಡಿದನು. ಅದರಲ್ಲಿ ಅನೇಕ ವಜ್ರ ವೈಢೂರ್ಯಗಳು ತುಂಬಿದ್ದವು. ಅವುಗಳನ್ನು ನೋಡಿ ಸಂತೋಷದಿಂದ ಅವನಿಗೆ ದುರಾಸೆ ಹೆಚ್ಚಾಗಿ ಮಾರಮ್ಮನಿಂದ ಇನ್ನೆಷ್ಟು ಹೊನ್ನುಗಳನ್ನು ಪಡೆಯಬಹುದಿತ್ತು ಎಂದು ಹಿಂತಿರುಗಿ ನೋಡಿದನು. ಇದರಿಂದಾಗಿ ಮಾರಮ್ಮನ ಉಗ್ರ ರೂಪವನ್ನು ಕಂಡು ತಡೆದುಕೊಳ್ಳಲಾರದೆ ನಾಲಿಗೆ ಕಡಿದುಕೊಂಡು ಮರಣ ಹೊಂದಿದನು. ಮಾರನೆಯ ದಿನ ದನಕಾಯಲು ಬಂದ ಹುಡುಗರು ಬಳೆಗಾರನ ಸುದ್ದಿಯನ್ನು ಕೆಂಚಮ್ಮನಿಗೆ ಹೇಳಿದಾಗ ಕೆಂಚಮ್ಮ ಬಳೆಗಾರನನ್ನು ಅಲ್ಲಿಯೇ ಸಮಾಧಿ ಮಾಡುವಂತೆ ಹೇಳಿದಳು. ಆತನಿಗೆ ಜುಟ್ಟು ಇಲ್ಲದ ತೆಂಗಿನ ಕಾಯಿಯನ್ನು ಒಡೆದು ಇಂದಿಗೂ ಪೂಜೆ ಮಾಡುತ್ತಾರೆ.

೫.೧.೫. ಗೊಲ್ಲರ ತಿಮ್ಮಪ್ಪನಿಗೆ ಮಾರಮ್ಮ ಒಲಿದದ್ದು

ಬೊಮ್ಮಗಟ್ಟೆ ಗೌರಸಮುದ್ರದಿಂದ ಸುಮಾರು ನಲವತ್ತು ಮೈಲಿಗಳ ದೂರದಲ್ಲದೆ. ಅಲ್ಲಿ ಊರುಗೊಲ್ಲರ ತಿಮ್ಮಪ್ಪ ಎಂಬುವ ವ್ಯಕ್ತಿ ತನ್ನ ಸಂಸಾರದೊಂದಿಗೆ ವಾಸವಾಗಿದ್ದನು. ಈತ ರೈತನಾಗಿದ್ದು ಅಣ್ಣ– ತಂಗಿಯರೊಂದಿಗೆ ಸುಖವಾಗಿ ಬಾಳುತ್ತಿದ್ದ. ಕುರಿ ಕಾಯುವ ಕೆಲಸ ಮಾಡುತ್ತಿದ್ದ. ಈತನ ಕೊನೆಯ ತಂಗಿಯಾದ ನಾಗಮ್ಮ ಎಂಬ ಹುಡುಗಿಯು ಪ್ರತಿದಿನ ಕುರಿಹಟ್ಟಿಗೆ ಹೋಗಿ ಕುರಿಯ ಹಾಲು ಕರೆದುಕೊಂಡು ಬರುತ್ತಿದ್ದಳು. ಆಕೆ ಬರುವ ದಾರಿಯಲ್ಲಿ ಒಂದು ಹುತ್ತವಿತ್ತು ಆ ಹುತ್ತದಲ್ಲಿ ಗೌರಸಮುದ್ರದ ಮಾರಮ್ಮ ವಾಸವಾಗಿದ್ದಳು. ಆಗ ನಾಗಮ್ಮ ಪ್ರತಿದಿನ ಕುರಿಯ ಹಾಲು ತಂದು ಹುತ್ತಕ್ಕೆ ಸುರಿದು ಹೋಗುತ್ತಿದ್ದಳು. ಹಾಗಾಗಿ ಜನ ಹೇಳುವ ಮಾತನ್ನು ಆಕೆಯ ಅಣ್ಣ ತಿಮ್ಮಪ್ಪ ನಂಬುತ್ತಿರಲಿಲ್ಲ.

ಒಂದು ದಿನ ತಿಮ್ಮಪ್ಪನು ಉಪಾಯ ಮಾಡಿ ನಾಗಮ್ಮನಿಗೆ ಗೊತ್ತಿಲ್ಲದಂತೆ ಆಕೆಯನ್ನು ಪರೀಕ್ಷೆ ಮಾಡುವ ಸಲುವಾಗಿ ಹುತ್ತದ ಹತ್ತಿರ ಆಕೆಗೆ ಕಾಣದಂತೆ ಬಚ್ಚಿಟ್ಟುಕೊಂಡಿದ್ದನು. ಪ್ರತಿನಿತ್ಯದಂತೆ ನಾಗಮ್ಮ ತಿಮ್ಮಪ್ಪನಿಗೆ ಶರೀರವೆಲ್ಲ ಕಣ್ಣುಗಳಾಗಿ ಕಾಣಿಸಿಕೊಂಡಳು. ನಂತರ ನೀನು ನನ್ನನು ಪರೀಕ್ಷೆ ಮಾಡಲು ಬಂದಿರುವ ಕಾರಣದಿಂದ ಇನ್ನು ಮುಂದೆ ನಿಮ್ಮ ಮನೆಯಲ್ಲಿ ಇರುವುದಿಲ್ಲ ಎಂದು ಹೇಳಿ ತುಮ್ಮಲದಲ್ಲಿ ಬಂದು ನೆಲಸಿದಳು.

೫.೧.೬. ಗೌರಸಮುದ್ರ ಮಾರಮ್ಮನ ಜಾತ್ರೆಯಲ್ಲಿ ನಡೆಯುವ ಆಚರಣೆಗಳು

೫.೧.೬.೧ ಜಾತ್ರೆಯ ಪ್ರಚಾರ

ಈ ಜಾತ್ರೆಯು ಮಾದಿಗರ ತಮಟೆಯ ಬಡಿತದೊಂದಿಗೆ ಚಾಲನೆ ಪಡೆಯುತ್ತದೆ. ಜಾತ್ರೆ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಆ ಊರಿನ ಮಾದಿಗ ಸಮುದಾಯದವರಿಂದ ತಮಟೆಯನ್ನು ಬಡಿಸಿ ಊರಿಗೆಲ್ಲ ಸಾರುತ್ತಾರೆ. ಜಾತ್ರೆ ಯಾವ ರೀತಿ ನಡೆಯಬೇಕು ಎಂಬುದನ್ನು ಕುರಿತು ಪೂರ್ವಭಾವಿ ಸಭೆಯಲ್ಲಿ ದೇವಸ್ಥಾನದ ಕಮಿಟಿ ಮತ್ತು ಆ ಊರಿನ ಮುಖಂಡರಿಲ್ಲ ಒಂದು ಕಡೆ ಸೇರಿ ಪ್ರತಿಯೊಂದು

ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಒಂದೊಂದು ಸಮುದಾಯಕ್ಕೆ ಒಂದೊಂದು ಜವಾಬ್ದಾರಿಯನ್ನು ಹೊರಿಸುತ್ತಾರೆ. ಹನ್ನೆರಡು ಕೈವಾಡದವರು. ಈ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ಈ ಜಾತ್ರೆ ಮುಜರಾಯಿ ಇಲಾಖೆ ತಾಲ್ಲೂಕು ದಂಡಾಧಿಕಾರಿಗಳು ಮತ್ತು ಪೊಲೀಸ್ ವ್ಯವಸ್ಥೆ ಸಹಾಯ ಪಡೆಯಬೇಕಾಗುತ್ತದೆ.

ಡಂಗೂರ ಸಾರುವಿಕೆಯ ಉದ್ದೇಶವೆಂದರೆ ಜಾತ್ರೆಯು ಪ್ರಾರಂಭವಾಗಿ ಅದು ಮುಗಿಯುವವರೆಗೆ ಕೆಲವು ವಿಧಿನಿಷೇಧಗಳನ್ನು ಭಕ್ತರು ಪಾಲಿಸಬೇಕಾಗುತ್ತದೆ. ಅಂತಹ ಕೆಲವು ಅಂಶಗಳೆಂದರೆ

೧. ಒಲೆಯ ಮೇಲೆ ಹೆಂಚು ಇಟ್ಟು ಏನನ್ನು ಹುರಿಯುವಂತಿಲ್ಲ.

೨. ಸ್ನಾನ ಮಾಡುವಂತಿಲ್ಲ

೩. ಶೇವಿಂಗ್ ಮಾಡುವಂತಿಲ್ಲ

೪. ಬೇರೆಯವರ ಊರಿಗೆ ಹೋಗುವಂತಿಲ್ಲ

೫. ನಾಗಪ್ಪನ ಹಬ್ಬವನ್ನು ಮಾಡಿಕೊಂಡೆ ಜಾತ್ರೆಗೆ ಹೋಗುವುದು.

೫.೧.೬.೨ ಹೊಳೆಗೆ ಹೋಗುವುದು

ಬುಡಕಟ್ಟು ಸಮುದಾಯಗಳು ತಮ್ಮ ದೇವರನ್ನು ವರ್ಷಕ್ಕೆ ಒಂದು ಬಾರಿಯಾದರೂ ಯಾವುದಾದರೂ ನದಿ, ಹಳ್ಳಗಳಿಗೆ ತೆಗೆದುಕೊಂಡು ಹೋಗಿ ಎಲ್ಲಾ ವಸ್ತಗಳನ್ನು ತೊಳೆದುಕೊಂಡು ಬರುವ ಪದ್ಧತಿ ರೂಢಿಯಲ್ಲಿದೆ. ಆದರೆ ಸ್ಥಾಪಿತ ದೇವರುಗಳಾದ ಮಂಜುನಾಥ, ತಿರುಪತಿ ತಿಮ್ಮಪ್ಪ ಮತ್ತು ಕೆಳಸಮುದಾಯದಿಂದ ಮೇಲ್ವರ್ಗದ ಸಮುದಾಯಕ್ಕೆ ಸ್ಥಿತ್ಯಂತರ ಹೊಂದಿರುವ ದೇವರುಗಳಿಗೆ ಅವು ಇರುವಲ್ಲಿಗೆ ನೀರನ್ನು ತೆಗೆದುಕೊಂಡು ಹೋಗಿ ಸ್ನಾನ ಮಾಡಿಸಲಾಗುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬಹುದಾದ ಅಂಶವೆಂದರೆ ಸ್ಥಿತ್ಯಂತರ ಹೊಂದಿದ ದೇವರುಗಳು ಹಾಲಿನ ತುಪ್ಪದ ಮತ್ತು ಮೊಸರಿನ ಅಭಿಷೇಕ ಮುಂತಾದವುಗಳನ್ನು ಮಾಡುತ್ತಾರೆ. ಆದರೆ ಬುಡಕಟ್ಟು ದೇವರುಗಳು ಗಂಗೆಯಿಂದ ಮಾತ್ರ ಪಾವಿತ್ರತೆ ಪಡೆಯುತ್ತವೆ. ಅದೇ ರೀತಿಯಾಗಿ ಗೌರಸಮುದ್ರದ ಮಾರಮ್ಮನ ಜಾತ್ರೆಯಲ್ಲಿ ನೀರು ದೊರೆಯುವ ಜಾಗಕ್ಕೆ ಹೋಗಿ ಚಿಲುಮೆಯನ್ನು ತೆಗೆಯುತ್ತಾರೆ. ನೀರು ದೊರೆತ ತಕ್ಷಣ ಆ ನೀರು ಶಾಶ್ವತವಾಗಿ ಇರಲಿ ಎಂಬ ಕಾರಣದಿಂದ ಒಂದು ಗಡಿಗೆಯಲ್ಲಿ ನೀರು ತುಂಬಿಟ್ಟು ಅದಕ್ಕೆ ಅರಿಶಿಣದ ದಾರ ಕಟ್ಟಿ ಮೂರುಕಲ್ಲಿನ ಬೆನವಗಳನ್ನು ಇಟ್ಟು, ಮೂರು ಎಲೆ, ಮೂರು ಅಡಿಕೆ, ಎರಡು ಬಾಳೆ ಹಣ್ಣು, ಒಂದು ತೆಂಗಿನಕಾಯಿ ಒಡೆಯುತ್ತಾರೆ. ಇದು ಪ್ರಾರಂಭದ ಪೂಜೆಯಾಗಿರುತ್ತದೆ. ಆ ನಂತರ ದೇವರಿಗೆ ಅಲಂಕಾರ ಮಾಡುತ್ತಾರೆ. ಗೌರಸಮುದ್ರದ ಮಾರಮ್ಮನಿಗೆ ಹಸಿರು ಸೀರೆಯೆಂದರೆ ಇಷ್ಟ ಎಂದು ಹಸಿರು ಸೀರೆ ಉಡಿಸುತ್ತಾರೆ. ಬಂಗಾರದ ಮುಖಪದ್ಮ ಇಡುತ್ತಾರೆ. ಹೂವು, ಹೊಂಬಾಳೆ ಮುಡಿಸುತ್ತಾರೆ. ಉರುಮೆ ಬಡಿಸುವುದರೊಂದಿಗೆ ಗಂಗಮ್ಮನಿಗೆ ಮುಖ್ಯವಾದ ಪೂಜೆಯನ್ನು ಮಾಡಿ ನಂತರ ದೇವರನ್ನು ಪೂಜಿಸುತ್ತಾರೆ. ಹಿಂದೆ ಮಾರಮ್ಮನ ಪೂಜೆಯನ್ನು ಬ್ರಾಹ್ಮಣರು ಮಾಡುತ್ತಿರಲಿಲ್ಲ. ಆದರೆ ಈಗ ಬ್ರಾಹ್ಮಣರು ಪಾಲ್ಗೊಳ್ಳುವ

ವಿಶೇಷವಿದೆ. ಏಕೆಂದರೆ ಗೌರಸಮುದ್ರದ ಮಾರಮ್ಮ ಮುಜರಾಯಿ ಇಲಾಖೆಗೆ ಸೇರುವುದರಿಂದ ಸರ್ಕಾರ ಪೂಜೆ ಮಾಡಲು ಬ್ರಾಹ್ಮಣರನ್ನು ನೇಮಕ ಮಾಡಿದೆ. ಆದರೆ ಎಲ್ಲಾ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿಲ್ಲ.

೫.೧.೬.೩. ಮಾರಮ್ಮ ಮೂಲನೆಲೆಗೆ (ತುಮಲು) ಬರುವುದು

ಬುಡಕಟ್ಟು ಸಮುದಾಯಗಳು ಇದೊಂದು ವಿಶೇಷ. ಸ್ತ್ರೀ ದೇವತೆಯನ್ನು ಎರಡು ಬಗೆಯಲ್ಲಿ ಗುರುತಿಸುತ್ತಾರೆ. ಒಂದು ಉದ್ಭವ ಮೂರ್ತಿ ಇನ್ನೊಂದು ಉತ್ಸವ ಮೂರ್ತಿ. ಗೌರಸಮುದ್ರದ ಮಾರಮ್ಮನ ಉದ್ಭವ ಮೂರ್ತಿಯು ತುಮಲಿನಲ್ಲಿದೆ. ಉತ್ಸವ ಮೂರ್ತಿಯನ್ನು ಊರಿನಲ್ಲಿದೆ. ಮಾರಮ್ಮನ ಉತ್ಸವ ಮೂರ್ತಿಯು ಪಲ್ಲಕ್ಕಿಯಲ್ಲಿ ಇಟ್ಟುಕೊಂಡು ತುಮಲಿಗೆ ಬರುತ್ತಾರೆ. ಬರುವಾಗ ಛತ್ರಚಾಮರ, ಉರಿಮೆ ವಾದ್ಯದೊಂದಿಗೆ ಜನಪದ ಕಲಾಮೇಳಗಳು ಊರಿನ ಅಗಸರು ಹಾಸುವ ಮಡಿಬಟ್ಟೆಯ ಮೇಲೆ ನೆಡೆಯುತ್ತ ಮುಡಿಯ ಮೇಲೆ ಕರೆದುಕೊಂಡು ಬರುತ್ತಾರೆ. ಈಕೆಯ ಜೊತೆಗೆ ಬೊಮ್ಮದೇವರು ಹರಿಜನರ ಮಾತಂಗಮ್ಮ ಐಯ್ಯಣ್ಣಗೌಡರ ಮನೆಯಿಂದ ಮತ್ತು ನಿಡುಗಲ್ಲು ದೊರೆಯಿಂದ ಮೀಸಲು ಹಾಲು ಇವೆಲ್ಲವುಗಳನ್ನು ತಲೆಯ ಮೇಲೆ ಹೊತ್ತುಕೊಂಡು ತುಮ್ಮಲಿಗೆ ಬರುತ್ತಾರೆ.

ತುಮ್ಮಲಿಗೆ ಮಾರಮ್ಮ ಬರುವಾಗ, ಗೊರವರು ಮೈಲಾರಲಿಂಗನ ಕಾವ್ಯವನ್ನು ಹಾಡಿದರೆ ಎಲ್ಲಮ್ಮನ ಭಕ್ತರು ಎಲ್ಲಮ್ಮನ ಕಾವ್ಯವನ್ನು ಹಾಡುತ್ತಾರೆ. ಅನೇಕ ಜನಪದ ಕಲಾವಿದರು ಅಲ್ಲಿ ಸೇರಿರುತ್ತಾರೆ. ಹರಿಜನರು ತಮಟೆಯನ್ನು ಬಡಿದರೆ ಛಲವಾದಗಳು ಉರಿಮೆಯನ್ನು ಬಡಿಯುತ್ತಾರೆ. ಗೌರಸಮುದ್ರದ ಮಾರಮ್ಮನಿಗೆ ಉರಿಮೆ ವಿಶೇಷವಾದ ವಾದ್ಯವಾಗಿದೆ. ಬೆಳಕಿಗಾಗಿ ಗ್ಯಾಸ್ ಲೈಟುಗಳನ್ನು ಬಳಸುತ್ತಾರೆ. ಪಂಜುಗಳು ಇರುತ್ತವೆ. ಜಾತ್ರೆಯಲ್ಲಿ ಅನೇಕ ಜನರು ಭಾಗವಹಿಸುವ ಕಾರಣ ಅವರನ್ನು ನಿಯಂತ್ರಣದಲ್ಲಿಡಲು ಪೋಲೀಸ್ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುತ್ತದೆ.

೫.೧.೬.೪ ದೀಪಸ್ತಂಭದ ಆಚರಣೆ

ಪ್ರತಿಯೊಂದು ದೇವಾಲಯದ ಮುಂದೆಯು ದೀಪ ಸ್ತಂಭವಿರುವುದನ್ನು ಗಮನಿಸಬಹುದು. ಗೌರಸಮುದ್ರದ ಮಾರಮ್ಮನ ಜಾತ್ರೆಯಲ್ಲಿ ಯಾಕೆ ದೀಪಸ್ತಂಭದ ಆಚರಣೆ ಮಾಡುತ್ತಾರೆಂದರೆ ಯರಮಂಚನಾಯಕನ ನೆನಪಿಗಾಗಿ "ವಿಭೂತಿ ಪುರುಷನಾದ ಯರಮಂಚನಾಯಕ ಒಂದೇ ಜ್ಯೋತಿಗೆ ಕುಲಗೋತ್ರ ಭೇದವಿಲ್ಲದೆ ಎಲ್ಲರೂ ಒಂದೆ ಮುಕ್ಕು (ನಮಸ್ಕಾರ) ಮುಗಿಸ್ತೀನಿ" ಎಂದು ಪ್ರತಿಜ್ಞೆ ಮಾಡಿದ ಕಾರಣದಿಂದ ಮಾರಮ್ಮನ ಜಾತ್ರೆ ನಡೆಯುವ ಸಂದರ್ಭದಲ್ಲಿ ಊರೊಳಗೆ ಏಳು ದೀಪದ ಕಂಬಗಳನ್ನು ನೆಡಿಸಿ, ಅದರ ಮೇಲೆ ದೀಪ ಇಡುತ್ತಾರೆ. ಇದು ಕುರಿ ಕೊಯ್ಯುವ ಪದ್ಧತಿಯನ್ನು ನೆನಪಿಸುತ್ತದೆ. ಈ ಕಾರ್ಯಕ್ರಮವನ್ನು ನಡೆಸಿಕೊಡುವವರು ಬೊಮ್ಮದೇವರ ಒಕ್ಕಲುಗಳು ಮತ್ತು ಈ ಕಂಬಕ್ಕೆ ಹಿರೇಹಳ್ಳಿ ಮತ್ತು ಬುಕ್ಕಂಬೂದಿಯವರು ತಂದ ಮೀಸಲು ತುಪ್ಪದಿಂದ ಎಣ್ಣೆಯಿಂದ ದೀಪ ಹಚ್ಚುತ್ತಾರೆ. ಇದರಲ್ಲಿ ಹದಿನಾಲ್ಕು ಬೆಡಗಿನ ಅಣ್ಣ ತಮ್ಮಂದಿರು ಭಾಗವಹಿಸುತ್ತಾರೆ.

೫.೧.೬.೫. ಹುತ್ತದ ಪೂಜೆ

ಇದು ಮಾರಮ್ಮನ ಜಾತ್ರೆಯಲ್ಲಿ ತುಂಬಾ ವಿಶೇಷವಾದುದು. ಏಕೆಂದರೆ ಮಾರಮ್ಮ ಉಪ್ಪಾರ ಕೆಂಚಮ್ಮನಿಗೆ ಒಲಿದುಕೊಂಡ ಕಾರಣ ಆ ಸಮುದಾಯದ ನೆನಪಿಗಾಗಿ ಮಾಡುವಂತಹ

ಆಚರಣೆಯಾಗಿದೆ. ಅಂದರೆ ಉಪ್ಪನ್ನು ತಯಾರಿಸಲು ಬಳಸುತ್ತಿದ್ದ ಸಲಿಕೆ ಗುದ್ದಲಿ ಸಲಿಕೆ ತೆಗೆದುಕೊಂಡು ಮಣ್ಣನ್ನು ಕಲಸಿ ತುಮಲಿನ ಕಟ್ಟೆಯ ಹತ್ತಿರ ತಂದು ತುಮಲಿನ ಪೂಜೆ ಮಾಡಿದ ನಂತರ ಹಣ್ಣು ಕಾಯಿ ಪೂಜೆಗಳು ಪ್ರಾರಂಭಗೊಳ್ಳುತ್ತವೆ. ಜನಪದ ಬಾಯಿಯಲ್ಲಿ ಹುತ್ತದ ಮಣ್ಣನ್ನು ಹುತ್ತದ ಬಂಗಾರ ಎಂದು ಸಂಬೋಧಿಸುತ್ತಾರೆ. ಈ ಪೂಜೆಯೇ ಮಾರಮ್ಮನ ಎಲ್ಲಾ ಕಾರ್ಯಕಲಾಪಗಳಿಗೆ ದಾರಿ ದೀಪವಾಗಿತ್ತದೆ.

೫.೧.೬.೬. ಬಲಿ ಕೊಡುವ ಪದ್ಧತಿ

ಒಂದು ಕಾಲದಲ್ಲಿ ಬಲಿಕೊಡುವುದು ನಿಷೇಧದ ಪ್ರಕ್ರಿಯೆಯಾಗಿರಲಿಲ್ಲ. ಯಜಮಾನಿ ವ್ಯವಸ್ಥೆಯು ತಳ ಸಮುದಾಯದ ಮೇಲೆ ಹುಟ್ಟು ಹಾಕಿದ ಹುನ್ನಾರವಿದು. ಹಾಗೆ ನೋಡಿದರೆ ಇಡೀ ಭಾರತದಲ್ಲಿಯೇ ಮಾಂಸಾಹಾರವನ್ನು ನಿಷೇಧಮಾಡಬೇಕು. ಅದರ ಬಗ್ಗೆ ಗಮನ ಹರಿಸದೆ ನಮ್ಮ ಸರ್ಕಾರ ಯಾವುದೋ ಜಡವಾದ ಕಾರಣವನ್ನಿಟ್ಟುಕೊಂಡು ದೇಶದ ಬಹು ಸಂಖ್ಯಾತರು ಬಳಸುತ್ತಿದ್ದ ಆಹಾರದ ಮೇಲೆ ನಿಯಂತ್ರಣ ಹೇರಿರುವುದು ಎಷ್ಟರ ಮಟ್ಟಿಗೆ ಸರಿ. ತಳಸಮುದಾಯಗಳು ಪ್ರತಿವರ್ಷ ಬಲಿಕೊಡುವ ಪದ್ಧತಿಯನ್ನು ಬಹು ಹಿಂದಿನಿಂದಲೂ ನಡೆಸಿಕೊಂಡು ಬಂದಿವೆ. ಇತ್ತೀಚೆಗೆ ಇದು ಕಣ್ಮರೆಯಾಗುತ್ತಿರುವ ಪ್ರಕ್ರಿಯೆಯಾಗಿದೆ. ಇದೇ ರೀತಿ ಎಲ್ಲವನ್ನು ಸರ್ಕಾರ ನಿಷೇಧಿಸುತ್ತಾ ಹೋದಂತೆ ಅವುಗಳ ಹಿಂದೆ ಇರುವ ಜ್ಞಾನ ಮರೆಯಾಗುತ್ತದೆ. ತಮಿಳುನಾಡಿನಲ್ಲಿ ಜಲ್ಲಿಕಟ್ಟು ಕ್ರೀಡೆಯನ್ನು ನಿಷೇಧಿಸುವತ್ತಾ ಸರ್ಕಾರ ಯಾವ ಆಚರಣೆಯನ್ನು ಉಳಿಸಿಕೊಳ್ಳುತ್ತದೆ. ಅದೇ ರೀತಿ ಮಡೆಸ್ನಾನವನ್ನು ನಿಷೇಧಿಸಬೇಕಾದ ಸರ್ಕಾರ ಮೌನವಾಗಿದೆ.

೫.೧.೬.೬.೧. ಕೋಣದ ಬಲಿ

ಮಾರಮ್ಮ ತುಮಲಿಗೆ ಹೋಗುವ ಮುನ್ನ ಅಂದರೆ ರಾತ್ರಿ ಸಮಯದಲ್ಲಿ ಈ ಪ್ರಕ್ರಿಯೆ ನಡೆಯುತ್ತಿತ್ತು ಈಗ ಸರ್ಕಾರದ ಕಣ್ಣು ತಪ್ಪಿಸಿ ಬೆಳಿಗಿನ ಸಮಯ ಮೂರು ಇಲ್ಲವೆ ನಾಲ್ಕುಗಂಟೆಯ ಸಮಯದಲ್ಲಿ ಕೋಣ ಬಲಿಕೊಡುವ ಪದ್ಧತಿ ನಡೆಯತ್ತದೆ.

೫.೧.೬.೬.೨. ಕುರಿ ಕೋಳಿಗಳ ಬಲಿ

ಈ ಜಾತ್ರೆಗೆ ಹಲವಾರು ಸಮುದಾಯಗಳು ಸೇರುವ ಕಾರಣ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಬಲಿಕೊಡುವ ಪದ್ಧತಿ ಜಾರಿಯಲ್ಲಿದೆ. ಅಂದರೆ ಪ್ರಾಣಿ ಬಲಿಯನ್ನು ನಿಷೇಧಿಸಿದ ಸರ್ಕಾರ ಅದು ಬೇರೊಂದು ರೀತಿಯಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದು. ಸರ್ಕಾರ ನಿಷೇಧಿಸಿರುವ ಜಾಗವನ್ನು ಹೊರತು ಪಡಿಸಿ ಬೇರೆ ಜಾಗದಲ್ಲಿ ಬಲಿಕೊಡುವ ಪದ್ಧತಿ ನಡೆಯುತ್ತದೆ.

೫.೧.೬.೭. ಸಿಡಿ ಆಚರಣೆ

ಗೌಂಸಮುದ್ರದ ಮಾರಮ್ಮ ಜಾತ್ರೆಯಲ್ಲಿ ಸಿಡಿ ಆಡುವ ಪದ್ಧತಿಯು ಜಾರಿಯಲ್ಲಿದೆ. ಇದರಲ್ಲಿ ಹಲವಾರು ವಿಧಗಳಿವೆ

೧.ತೊಟ್ಟಿಲು ಸಿಡಿ

೨.ಬೆನ್ನು ಸಿಡಿ

೩.ಗೊಂಬೆಸಿಡಿ

ಸಿಡಿ ಆಡುವುದಕ್ಕೆ ಮುಖ್ಯವಾದ ಕಾರಣಗಳನ್ನು ಮಾಹಿತಿದಾರರು ಈ ರೀತಿ ಕೊಡುತ್ತಾರೆ. ಕಾಯಿಲೆ ವಾಸಿಯಾದಾಗ ಮತ್ತು ಮಕ್ಕಳಾಗದಿದ್ದಾಗ ಹೀಗೆ ನಾನಾ ಕಾರಣಗಳಿಂದ ಕಷ್ಟ ಪರಿಹಾರಕ್ಕಾಗಿ ಸಿಡಿ ಆಡುತ್ತೇವೆಂದು ಮಾಹಿತಿದಾರರು ಹೇಳುತ್ತಾರೆ.

ಈ ಸಿಡಿಯನ್ನು ಯಾರೆಂದರೆ ಅವರು ಆಡುವಂತಿಲ್ಲ ಅದಕ್ಕಾಗಿ ಕೆಲವು ಮನೆತನಗಳು ಸೀಮಿತವಾಗಿವೆ. ಇದು ವಂಶ ಪಾರಂಪರ್ಯವಾಗಿ ಬಂದಿರುತ್ತದೆ. ಈ ಸಿಡಿ ಆಚರಣೆ ಗೌರಸಮುದ್ರದ ಮಾರಮ್ಮನ ಜಾತ್ರೆ ಮುಗಿದ ಮಾರನೆಯ ದಿನ ಅಂದರೆ ಬುಧವಾರ ಪ್ರಾರಂಭವಾಗುತ್ತದೆ. ಕೋನಸಾಗರದ ಕೊಡಗಿನವರು ಎಂದು ಕರೆಯಿಸಿಕೊಳ್ಳುವ ವಂಶಸ್ಥರಲ್ಲಿ ಕೋರಿ ಅಂದರೆ ಮದುವೆಯ ವಯಸ್ಸಿಗೆ ಬಂದಿರುವ ಹುಡುಗರು ಒಂದು ವರ್ಷದಲ್ಲಿ ಒಬ್ಬರಂತೆ ಒಪ್ಪಂದ ಮಾಡಿಕೊಂಡು ಸಿಡಿ ಆಡುವರು. ಈ ಸಿಡಿ ಆಡಲು ಏಳು ದಿನಗಳ ಕಾಲ ಉಪವಾಸ ವ್ರತ ಕೈಗೊಂಡು ಬುಧವಾರದ ದಿನ ಗಂಗೆ ಸ್ನಾನ ಮಾಡಿಕೊಂಡು ಊರಿನಲ್ಲಿ ಮೆರವಣಿಗೆ ಮಾಡಿಸಿಕೊಂಡು ದೇವರ ಗುಡಿಯನ್ನು ಮೂರುಸುತ್ತು ಪ್ರದಕ್ಷಿಣೆ ಹಾಕಿ ನಂತರ ಕುಳಿತುಕೊಳ್ಳುತ್ತಾರೆ. ಸಿಡಿ ಕಂಬವು ೬೨ ಅಡಿ ಉದ್ದವಿದ್ದು ಈ ಸಿಡಿ ಕಂಬವನ್ನು ಗೌಡರ ರುದ್ರಪ್ಪ ತನ್ನ ಮನೆಯಿಂದ ಎಡೆಯನ್ನು ನಡೆಮುಡಿಯ ಮೂಲಕ ಬಂದು ನಾಲ್ಕು ದಿಕ್ಕುಗಳಿಗೆ ಎಡೆಗೆ ಪೂಜೆ ಸಲ್ಲಿಸಿದ ನಂತರ ಭಕ್ತರನ್ನು ಕರೆದುಕೊಂಡು ಬಂದು ಸಿಡಿ ಕಂಬಕ್ಕೆ ಕಟ್ಟಿ ಮೂರು ಸಲ ಸುತ್ತುವರಿಯುತ್ತಾರೆ. ಈ ಮೂರು ಸಲ ತಿರುಗುವಾಗ ಮೊದಲನೆ ಸಲ ಭಂಡಾರವನ್ನು, ಎರಡನೆಯ ಸಲ ಬೇವಿನಸೊಪ್ಪನ್ನು, ಮೂರನೆಯ ಸಲ ತುರಾಯಿಯನ್ನು ಎರಚುತ್ತಾರೆ. ಸಿಡಿ ಕಂಬಕ್ಕೆ ಕಟ್ಟಿದ ಭಕ್ತರನ್ನು ಉರುಮೆವಾದ್ಯಗಳಿಂದ ಉರಿದುಂಬಿಸುತ್ತಾರೆ. ಹಿಂದೆ ಸಿಡಿ ಆಡುವ ಆಚರಣೆ ಉಗ್ರ ಸ್ವರೂಪದಲ್ಲಿತ್ತು ದೇಹದ ಬೆನ್ನಿನ ಚರ್ಮಕ್ಕೆ ಉಕ್ಕಿನ ಕೊಕ್ಕೆ ಹಾಕಿಕೊಂಡು ತಿರುಗುತ್ತಿದ್ದರು. ಆದರೆ ಇಂದು ಸಿಡಿಯಾಡುವ ಭಕ್ತನ ಸೊಂಟದಲ್ಲಿ ಪಟ್ಟಿಕಟ್ಟಿ ತಿರುಗುವುದನ್ನು ನೋಡಬಹುದು.

೫.೧.೬.೮.ಓಕುಳಿ ಆಡುವುದು

ಜಾತ್ರೆಯ ಮೂರನೆಯ ದಿನ ಗುರುವಾರ ಸಂಜೆ ಒಕಳಿ ನಡೆಯುತ್ತದೆ. ಈ ಓಕುಳಿ ಆಡುವ ಉದ್ದೇಶ ಜಾತ್ರೆಯಲ್ಲಿ ಹಲವಾರು ಸಮುದಾಯಗಳು ಒಂದು ಕಡೆ ಸೇರಿರುವುದರಿಂದ ಅವರ ಕಣ್ಣು ಮಾರಮ್ಮನ ಮೇಲೆ ಬೀಳುವುದರಿಂದ ಆಕೆಗೆ ದೃಷ್ಟಿ ತಗುಲುತ್ತದೆ ಎಂಬ ನಂಬಿಕೆಯಿಂದ ಈ ಆಚರಣೆ ಮಾಡುತ್ತಾರೆ. ಈ ಆಚರಣೆಯಲ್ಲಿ ಮಾರಮ್ಮ ಮತ್ತು ಬೊಮ್ಮದೇವರು ಮೆರವಣಿಗೆಯಲ್ಲಿ ಭಾಗಿಯಾಗುತ್ತಾರೆ. ಗೌರಸಮುದ್ರದಲ್ಲಿ ಕಾಂತಯಾನ ಕಟ್ಟೆ ಇದೆ ಅಲ್ಲಿ ಈ ಎರಡು ದೇವರುಗಳನ್ನು ಗದ್ದಿಗೆ ಮಾಡಿಸುತ್ತಾರೆ. ಕಾಂತ್ರಾಯನ ಕಟ್ಟೆಯ ಮುಂಭಾಗದಲ್ಲಿ ಓಕುಳಿ ಕುಣಿ ಇರುವುದು. ಒಂಬತ್ತು ಜನ ಆಯಗಾರರು ಕುಣಿಯಲ್ಲಿ ಓಕುಳಿಯನ್ನು ಕಲಸಿ ಪೂಜೆ ಮಾಡಿ ನಂತರ ದೇವಿಗೆ ನಮಿಸುವರು. ಆ ನಂತರ ಅಲ್ಲಿ ಸೇರಿರುವ ಎಲ್ಲಾ ಭಕ್ತಾಧಿಗಳಿಗೆ ಎರಚುವುದು. ಹೀಗೆ ಓಕುಳಿಯನ್ನು ಒಬ್ಬರಿಂದ ಮತ್ತೊಬ್ಬರಿಗೆ ಎರಚುವುದರ ಮೂಲಕ ತಮ್ಮ ಸೌಹಾರ್ದತೆ ಬಾಂಧವ್ಯಗಳನ್ನು ಹಂಚಿಕೊಳ್ಳುವರು.

೫.೧.೬.೯. ಹರಕೆಗಳು

೫.೧.೬.೯.೧. ಬೇವಿನಸೀರೆ ಆಚರಣೆ

ಬೇವಿನ ಸೀರೆ ಆಚರಣೆ ಮಾಡುವುದು ಶೋಷಣೆಯ ಸಂಕೇತವಾಗಿರುವ ಕಾರಣ ಇದನ್ನು ಆಚರಣೆ ಮಾಡುವುದು ಅಪರಾಧವಾಗುತ್ತದೆ. ಈ ಆಚರಣೆ ಪ್ರಾಚೀನ ಕಾಲದಿಂದಲೂ ಮುಂದುವರಿಸಿಕೊಂಡು ಬಂದಿರುವಂತಹದ್ದು. ಈ ಸೀರೆ ಉಡಲು ಕಾರಣ ದಡಾರ, ಅಮ್ಮ, ಸಿಡುಬು ಮುಂತಾದ ಅಂಟುರೋಗಗಳು ಬರದಂತೆ ಮಾರಮ್ಮ ಕಾಪಾಡುತ್ತಾಳೆಂಬ ನಂಬಿಕೆಯಿಂದ ಈ ಆಚರಣೆ ಮಾಡುತ್ತಾರೆ. ಬೇವಿನ ಸೊಪ್ಪನ್ನು ಸೀರೆಯ ರೀತಿಯಲ್ಲಿ ಹೆಣೆದು ಪುರುಷ ಅಥವಾ ಮಹಿಳೆ ಇರಬಹುದು. ಮೈ ಮೇಲೆ ಒಂದು ಬಟ್ಟೆ ಇರದಂತೆ ತೆಗೆದು ಬೇವಿನ ಸೊಪ್ಪನ್ನು ದೇಹದ ಯಾವ ಭಾಗವು ಕಾಣದಂತೆ ಮುಚ್ಚುತ್ತಾರೆ. ಇವರು ತಮ್ಮ ರಕ್ಷಣೆಗಾಗಿ ಸಂಬಂಧಿಕರಲ್ಲಿ ಇಬ್ಬರನ್ನು ಇಟ್ಟುಕೊಂಡಿರುತ್ತಾರೆ. ಚಿಕ್ಕ ಮಕ್ಕಳಾದರೆ ಅವರಿಗೆ ಪೂರ್ತಿ ದೇಹ ಮುಚ್ಚುವಂತೆ ಬೇವಿನಸೊಪ್ಪು ಹೆಣೆಯುವುದಿಲ್ಲ. ಬೇವಿನ ಸೀರೆಯನ್ನು ಉಡುವುದರ ಜೊತೆಯಲ್ಲಿ ಬೇವಿನ ಸೊಪ್ಪನ್ನು ಬಾಯಲ್ಲಿ ಕಚ್ಚಿಕೊಳ್ಳುತ್ತಾರೆ. ಇದು ಇತ್ತೀಚೆಗೆ ನಿಷೇಧಕ್ಕೆ ಒಳಗಾಗಿರುವುದರಿಂದ ಶಾಸ್ತ್ರಕ್ಕೆ ಮಾತ್ರ ಬೇವಿನ ಸೀರೆ ಉಡುವ ಪದ್ಧತಿ ಮುಂದುವರಿದಿದೆ.

೫.೧.೬.೯.೨. ಬಾಯಿಬೀಗದ ಆಚರಣೆ

ಇದೊಂದು ಹಿಂಸಾತ್ಮಕವಾದ ಆಚರಣೆ. ಇದರಲ್ಲಿ ಭಕ್ತಿಯ ಪರಾಕಾಷ್ಠತೆಯನ್ನು ತಲುಪಿದ ಭಕ್ತವರ್ಗವು ದಬ್ಬಣವನ್ನು ಒಂದು ದವಡೆಯಿಂದ ಏರಿಸಿ ಮತ್ತೊಂದು ದವಡೆಯಲ್ಲಿ ಕಾಣುವಂತೆ ಮಾಡಿಕೊಳ್ಳುತ್ತಾರೆ. ಇದರ ಉದ್ದೇಶ ಮೌನ ವ್ರತವನ್ನು ಆಚರಿಸುವುದಾಗಿದೆ. ಇಂತ ಆಚರಣೆ ಮಾನಸಿಕ ಹಿಂಸೆಯಾದುದರಿಂದ ಅದನ್ನು ಸರ್ಕಾರ ನಿಷೇಧಿದೆ. ಇಂದು ಶಾಸ್ತ್ರಕ್ಕಾಗಿ ತನ್ನ ಕೆನ್ನೆಯ ಮೇಲೆ ತಂತಿಯನ್ನು ಇಟ್ಟುಕೊಂಡಿರುತ್ತಾರೆ.

೫.೧.೬.೯.೩. ಉರುಳುಸೇವೆ

ಈ ಉರುಳು ಸೇವೆಯನ್ನು ಮಾಡುವರು ಬಹುತೇಕರು ತಳ ಸಮುದಾಯದವರು. ಅಂದರೆ ದೇಹದ ಮೇಲೆ ನೀರನ್ನು ಹಾಕಿಕೊಂಡು ಮೂರು ಸುತ್ತು ಮಾರಮ್ಮನ ಗುಡಿಯ ಸುತ್ತ ಉರುಳುತ್ತಾರೆ. ಇದೊಂದು ಅವೈಜ್ಞಾನಿಕ ಆಚರಣೆಯಾಗಿರುವುದರಿಂದ ಸರ್ಕಾರ ಇದನ್ನು ಕೂಡ ನಿಷೇಧಿಸಿದೆ. ಉರುಳು ಸೇವೆಯನ್ನು ಉಪವಾಸ ವ್ರತ ಕೈಗೊಂಡು ಮಾಡುತ್ತಾರೆ.

೫.೧.೬.೯.೪. ಕೋಳಿ ಮರಿಗಗಳನ್ನು ತೂರುವುದು

ಈ ಪದ್ದತಿಯು ಪ್ರತಿಯೊಂದು ಮಾರಿ ದೇವತೆಗಳ ಜಾತ್ರೆಗಳಲ್ಲಿ ಕಂಡು ಬರುತ್ತದೆ. ಈ ಜಾತ್ರೆಗೆ ಬರುವ ಭಕ್ತರು ತಮ್ಮ ಹರಕೆಯನ್ನು ನಂಬಿಕೆಗಳಿಗೆ ಅನುಗುಣವಾಗಿ ಮಾಡಿಕೊಂಡಿರುತ್ತಾರೆ. ತಾವಂದುಕೊಂಡಿದ್ದ ಕೆಲಸ ಕಾರ್ಯಗಳು ಕೈಗೂಡಿದಾಗ, ತಮ್ಮ ಹರಕೆಗಳನ್ನು ಪ್ರಾಣಿ ಬಲಿಕೊಡುವುದರ

ಮೂಲಕ ನೆರವೇರಿಸುತ್ತಾರೆ. ಇದರ ಜೊತೆಗೆ ಮಕ್ಕಳ ಕೂದಲು ತೆಗೆಸುವಾಗ ಕುರಿ ಕೋಳಿಗಳನ್ನು ಬಲಿಕೊಡುತ್ತಾರೆ ಕುರಿ ಕೋಳಿಗಳಿಗೆ ಯಾವುದೇ ಕಾಯಿಲೆಗಳು ಬರ ಬಾರದೆಂದು ಬಲಿಕೊಡುತ್ತಾರೆ. ಇದರ ಜೊತೆಗೆ ತಾವು ಬೆಳೆದ ದವಸ ಧಾನ್ಯಗಳನ್ನು ದೇವರ ಮೇಲೆ ತೂರುವ ಪದ್ಧತಿ ಕೂಡ ಜಾರಿಯಲ್ಲಿದೆ. ಉದಾ: ಶೇಂಗಾ, ಈರುಳ್ಳಿ, ಮೆಣಸಿನಕಾಯಿ, ಕೋಳಿಮರಿ, ತೆಂಗಿನಕಾಯಿ, ಬಾಳೆಹಣ್ಣು, ಮಂಡಕ್ಕಿ ತೂರುವುದು ವಾಡಿಕೆ

೫.೧.೬.೧೦.ನಿಷೇಧಗಳು:

ಗೌರಸಮುದ್ರದ ಮಾರಮ್ಮ ಹಾಗೂ ಬೊಮ್ಮಲಿಂಗ ದೇವರಿಗೆ ನವಣೆ ಧಾನ್ಯಗಳ ನಿಷೇಧ ಹೇರಲಾಗಿದೆ. ಬುಡಕಟ್ಟುಗಳ ಅನೇಕ ದೇವರುಗಳಿಗೆ ಕೆಲವು ಧಾನ್ಯಗಳ ನಿಷೇಧವಿದೆ. ಕೆಲ ದೇವರುಗಳಿಗೆ ಹುರುಳಿ, ನವಣೆ ಆಗಿಬರುವುದಿಲ್ಲ. ಇನ್ನೂ ಕೆಲ ದೇವರುಗಳಿಗೆ ತೊಗರಿ ಆಗಿ ಬರುವುದಿಲ್ಲ ಹಾಗಾಗಿ ಇದೇ ರೀತಿಯ ವ್ಯವಸ್ಥೆ ಗೌರ ಸಮುದ್ರದ ಮಾರಮ್ಮನಿಗೆ ಇರುವುದನ್ನು ಕಾಣಬಹುದು. ಭಾದ್ರಪದ ಮಾಸದ ಮೊದಲನೆ ಮಂಗಳವಾರ ಅಮಾವಾಸ್ಯೆ ಬಂದರೆ ಜಾತ್ರೆಯು ನಿಷಿದ್ಧ ಈ ಪದ್ಧತಿಯನ್ನು ಪೂರ್ವದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಮಾಸಿಕ ಋತುಸ್ರಾವವಾದ ಹೆಣ್ಣು ಮಕ್ಕಳು ಮಾರಮ್ಮನ ದೇವಸ್ಥಾನದ ಹತ್ತಿರ ಸುಳಿಯುವಂತಿಲ್ಲ.

೫.೧.೭. ಮಾರಮ್ಮಗೂ ಕಾಡುಗೊಲ್ಲರಿಗೂ ಇರುವ ಸಂಬಂಧ

ಕಾಡುಗೊಲ್ಲರು ಗೌರಸಮುದ್ರದ ಮಾರಮ್ಮನನ್ನು ಶಿವನ ಮಗಳು ಎಂದು ಪರಿಗಣಿಸುವುದರಿಂದ , ಕಾಡುಗೊಲ್ಲರಿಗೂ ಮಾರಮ್ಮನಿಗೂ ಅವಿನಾಭಾವ ಸಂಬಂಧ ಇರುವುದು ಕಂಡುಬರುತ್ತದೆ. ಅಷ್ಟೆ ಅಲ್ಲ ಪ್ರತಿಯೊಂದು ಗೊಲ್ಲರ ಹಟ್ಟಿಯ ಹತ್ತಿರ ಮಾರಮ್ಮನ ಗುಡಿ ಇರುವುದು ಕಂಡುಬರುತ್ತದೆ. ಗೌರಸಮುದ್ರದ ಮಾರಮ್ಮನ ಜಾತ್ರೆ ಮುಗಿದ ನಂತರ ಪ್ರತಿಯೊಂದು ಹಟ್ಟಿಯಲ್ಲಿಯೂ ಎರಡನೆಯವಾರ ಮೂರನೆಯವಾರ ಮಾರಮ್ಮನ ಹಬ್ಬ ಆಚರಿಸುತ್ತಾರೆ. ನನಗೆ ತಿಳಿದ ಮಟ್ಟಿಗೆ ಮಾರಮ್ಮನ ಹಬ್ಬವನ್ನು ಗೊಲ್ಲರು ಮಾಡಿದಂತೆ ಬೇರೆ ಯಾವ ಸಮುದಾಯವು ಮಾಡುವುದಿಲ್ಲ. ಏಕೆಂದರೆ ಕಾಡುಗೊಲ್ಲರು ಪಶುಪಾಲಕರಾಗಿರುವ ಹಿನ್ನೆಲೆಯಲ್ಲಿ ಹೇಳುವುದಾದರೆ, ಕುರಿಗಳು ಯಾವುದೇ ಕಾಯಿಲೆಗೆ ಬಲಿಯಾಗದಿರಲಿ ಎಂದು ಹರಕೆಗಳನ್ನು ಕಟ್ಟಿಕೊಂಡು ಮಾರಮ್ಮನ ಹೆಸರು ಹೇಳಿ ಕುರಿ ಮೇಕೆಯನ್ನು ಮಾತ್ರ ಆಹಾರಕ್ಕೆ ಬಳಸುವುದರಿಂದ ಹಸು, ಕೋಣ ಅವುಗಳನ್ನು ಮಾರಿ ಹಣ ತೆಗೆದುಕೊಂಡು ದೇವರಿಗೆ ಯಾವುದಾದರೂ ಒಂದು ವಸ್ತುವನ್ನು ಕೊಂಡು ಕೊಡುತ್ತಾರೆ. ಮನೆಗೆ ಒಂದರಂತೆ ಬೇಟೆ ಕೊಯ್ದು ಮನೆಗೆ ಬಂದಿರುವ ನೆಂಟರುಗಳಿಗೆ ಮಾಂಸದ ಅಡುಗೆಯನ್ನು ಹಾಕುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಹಿಂದೆ ಬಲಿ ಕೊಡುವುದು ಹೆಚ್ಚಾಗಿತ್ತು. ಇಂದು ಇವುಗಳ ಬಲಿಕೊಡುವ ಸಂಖ್ಯೆ ಕಡಿಮೆಯಾಗಿದೆ. ಬಲಿಗೆ ಸಂಬಂಧಿಸಿದ ಸಾಕಷ್ಟು ಮಾಹಿತಿ ಕಾವ್ಯಗಳಲ್ಲಿ ಗೌರಸಮುದ್ರದ ಮಾರಮ್ಮನ ಪ್ರಸ್ತಾಪ ಬರುತ್ತದೆ.

೫.೧.೭..೧ ಎತ್ತಯ್ಯನ ಕಾವ್ಯದಲ್ಲಿ ಮಾರಮ್ಮನ ಉಲ್ಲೇಖ

ಎತ್ತಯ್ಯನ ಸೃಷ್ಟಿ ಪುರಾಣದಲ್ಲಿ ಎತ್ತಪ್ಪನನ್ನು ಕೈಲಾಸದಿಂದ ಭೂಲೋಕಕ್ಕೆ ಕರೆದುಕೊಂಡು ಬರುವುದು ಗೌರಸಮುದ್ರದ ಮಾರಮ್ಮ. ಅಂಬೇರಾಯ ಮತ್ತು ತುಂಬೇರಾಯರು ದನಕಾಯುವ

ಹುಡುಗನಿಗಾಗಿ ಹುಡುಕುತ್ತಿರುವಾಗ, ಗೌರಸಮುದ್ರದ ಮಾರಮ್ಮನ ಸಹಾಯ ಬೇಡುತ್ತಾರೆ. ಆಗ ಅವರಿಗೆ ಭಾಷೆ ಕೊಟ್ಟು ಕೈಲಾಸಕ್ಕೆ ಹೋಗಿ ಆಕರ್ಷಕವಾದ ರಂಗೋಲಿ ಬಿಡಿಸುವುದರ ಮೂಲಕ ಶಿವ ಪಾರ್ವತಿಯರ ಮನಸ್ಸು ಗೆದ್ದು ಎತ್ತಪ್ಪನನ್ನು ಕರೆದುಕೊಂಡು ಬರುವುದು ಒಂದು ಸನ್ನಿವೇಶವಾದರೆ, ಮತ್ತೊಂದು ಅಭಿಪ್ರಾಯದ ಪ್ರಕಾರ ಎತ್ತಪ್ಪ ಹುಟ್ಟಿರುವ ವಿಷಯವನ್ನು ಕರಿಓಬೇನಹಳ್ಳಿ ಮಾರಕ್ಕನಿಂದ ಪಡೆಯುತ್ತಾರೆ. ಈ ಮಾತನ್ನು ಪ್ರಸ್ತಾಪ ಮಾಡಿರುವುದು ಮೀರಾಸಾಬಿಹಳ್ಳಿ ಶಿವಣ್ಣ. ಕರಿಓಬೇನಹಳ್ಳಿ ಮಾರಕ್ಕ ಒಂದು ಹೂವಿನ ತೋಟವನ್ನು ಮಾಡಿರುತ್ತಾಳೆ. ಆ ತೋಟದಲ್ಲಿ ಹುಲ್ಲು ಮೇಯಲು ಕೈಲಾಸದಿಂದ ಶಿವನ ಹಸು ಪಂಚಕಲ್ಯಾಣಿ ಎಂಬುದು ಬಂದು ತೋಟದಲ್ಲಿ ಹುಲ್ಲು ತಿಂದು ಅಲ್ಲಿರುವ ಮಡಕೆಗೆ ಹಾಲು ಕರೆದು ಹೋಗುತ್ತದೆ. ಇದನ್ನು ಗಮನಿಸಿದ ಕರಿಓಬೇನಹಳ್ಳಿ ಮಾರಮ್ಮ ಹೊಸ ಮಡಿಕೆಯನ್ನು ತಂದು ಇಡುತ್ತಾಳೆ. ಇದು ಪಂಚಕಲ್ಯಾಣಿ ಹಸುವಿಗೆ ಗೊತ್ತಾಗುವುದಿಲ್ಲ. ಅದು ಪ್ರತಿ ನಿತ್ಯದಂತೆ ಮಡಕೆ ತುಂಬ ಹಾಲು ಕರೆದು ಕೈಲಾಸ ಸೇರಿಕೊಳ್ಳುತ್ತದೆ. ನಂತರ ಕರಿಓಬೇನಹಳ್ಳಿ ಮಾರಕ್ಕ ಆ ಹಾಲನ್ನು ಚೆನ್ನಾಗಿ ಕಾಯಿಸಿ ಹೆಪ್ಪು ಹಾಕಿ ಮೊಸರು ಮಾಡುತ್ತಾಳೆ. ಬೆಳಿಗ್ಗೆ ಮಜ್ಜಿಗೆ ಕಡೆಯುತ್ತಾಳೆ. ಇದರಿಂದ ಬಂದ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡಿ ನೆಲುವಿನ ಮೇಲಿಟ್ಟಳು. ಇದನ್ನು ಗಮನಿಸಿದ ಶಿವನು ಅದರಲ್ಲಿ ಒಂದು ಗಂಡು ಮಗುವನ್ನು ಸೃಷ್ಟಿಮಾಡಿದನು.

ಒಂದು ದಿನ ಶಿವ ಪಾರ್ವತಿ ಲೋಕ ಸಂಚರಣೆಗೆ ಬರುವಂತಹ ಸಮಯದಲ್ಲಿ ಕರಿಓಬೇನಹಳ್ಳಿ ಮಾರಕ್ಕ ಶಿವಪಾರ್ವತಿಯರನ್ನು ಊಟಕ್ಕೆ ಕರೆಯುತ್ತಾಳೆ ಅವರಿಗಾಗಿ ಭಕ್ಷ್ಯ ಭೋಜನಗಳನ್ನು ಮಾಡಿರುತ್ತಾಳೆ. ಊಟಕ್ಕೆ ಹಾಕುವಾಗ ತುಪ್ಪ ಹಾಕುವುದನ್ನು ಮರೆಯುತ್ತಾಳೆ. ಆಗ ಶಿವ ನೆಲುವಿನ ಮೇಲೆ ಕುಡಿಕೆಯಲ್ಲಿರುವುದು ಏನು ಎಂದು ಕೇಳಿದಾಗ ಅದರಲ್ಲಿ ಇರುವ ತುಪ್ಪವನ್ನು ಊಟಕ್ಕೆ ಬಡಿಸಲು ಹೋದಾಗ ಅದರಲ್ಲಿ ಗಂಡು ಮಗುವಿರುತ್ತದೆ. ಆ ಮಗು ತುಪ್ಪದಲ್ಲಿ ಹುಟ್ಟಿದ ಕಾರಣದಿಂದ ಎತ್ತಯ್ಯ ಎಂದು ನಾಮಕರಣ ಮಾಡಿ ತಮ್ಮ ಜೊತೆಯಲ್ಲಿಯೇ ಕರೆದುಕೊಂಡು ಹೋಗುತ್ತಾರೆ. ಆ ಮಗುವನ್ನು ಪುನಃ ಭೂಲೋಕಕ್ಕೆ ಕರೆದುಕೊಂಡು ಬರಲು ಮಾರಕ್ಕ ಕೈಲಾಸಕ್ಕೆ ಹೋಗುತ್ತಾಳೆ. ಇದರಿಂದಾಗಿ ಎತ್ತಪ್ಪನಿಗೆ ಗೌರಸಮುದ್ರದ ಮಾರಮ್ಮ ಎತ್ತಪ್ಪನಿಗೆ ಅಕ್ಕನಾಗಬೇಕು

೫.೧.೭.೧.೧. ಹುಲಿಕುಂಟೆ ಕೆರೆಗೆ ಮಾಟ ಮಾಡಿಸಿದ್ದನ್ನು ಮಾರಕ್ಕ ನಿವಾರಣೆ ಮಾಡಿದ್ದು

ಹುಲಿಕುಂಟೆ ತಮ್ಮಣ್ಣ ಮತ್ತು ಸಾಣಿಕೆರೆ ಪುಟ್ಟಣ್ಣ, ಅಜ್ಜೇರಬಾಲ ಈ ಮೂರು ಜನ ಸೇರಿಕೊಂಡು ಎತ್ತಪ್ಪನ ಮೇಲಿನ ಅಸೂಯೆಯಿಂದ ಎತ್ತಪ್ಪನ ದನಗಳು ನಾಶವಾಗಲಿ ಎಂದು ಮಾಟ ಮಾಡುತ್ತಾರೆ. ಆಗ ಎತ್ತಪ್ಪ ಅಕ್ಕನಾದ ಗೌರಸಮುದ್ರದ ಮಾರಮ್ಮನನ್ನು ಕೇಳಿಕೊಂಡಾಗ ಮಾರಮ್ಮ ಪ್ರತ್ಯಕ್ಷಳಾಗಿ ಏಳು ಜನ ತನ್ನ ಸಹೋದರಿಯರನ್ನು ಕರೆದುಕೊಂಡು ಬಂದು ಹುಲಿಕುಂಟೆ ಕೆರೆಯ ನೀರನ್ನು ಕಡೆಗೋಲಿನಿಂದ ಮಜ್ಜಿಗೆ ಕಡೆದಂತೆ ಕಡೆದು, ವಿಷವನ್ನು ಹೊರತೆಗೆಯುತ್ತಾರೆ. ಇದರಿಂದಾಗಿ ವಿಷ ಒಂದು ಕಡೆ ಬಂದು, ನೀರು ಒಂದು ಕಡೆ ಸೇರುತ್ತದೆ ಆಗ ಎತ್ತಪ್ಪನ ದನಗಳಿಗೆ ಯಾವ ತೊಂದರೆಯು ಆಗುವುದಿಲ್ಲ.

೫.೧.೭.೧.೨.ಹುಲಿಕುಂಟೆ ತಮ್ಮಣ್ಣನಿಗೆ ಎತ್ತಪ್ಪನಿಂದ ಸೋಲುವಂತೆ ಮಾಡಿದ್ದು

ಎತ್ತಪ್ಪ ಸುತ್ತ ಮುತ್ತಲ ಹಳ್ಳಿಗಳಿಗೆಲ್ಲ ಪಂಚಾಯಿತಿ ಮಾಡುವುದರಲ್ಲಿ ಹೆಸರುವಾಸಿಯಾಗಿದ್ದನು. ಇದನ್ನು ಗಮನಿಸಿದ ಹುಲಿಕುಂಟೆ ತಮ್ಮಣ್ಣ ಅಜ್ಜೇರ ಬಾಲನ ಮಾತು ಕೇಳಿಕೊಂಡು ಎತ್ತಪ್ಪನನ್ನು ಪಗಡೆ ಆಡಲು ಕರೆಯುತ್ತಾನೆ. ಇದರಿಂದ ಕೋಪಗೊಂಡ ಎತ್ತಪ್ಪ ಪಗಡೆ ಆಡಲು ಕೂರುತ್ತಾನೆ. ಆದರೆ ಜಯ ಬೇಗ ಲಭಿಸುವುದಿಲ್ಲ. ಎಷ್ಟು ಹೊತ್ತಾದರು ಎತ್ತಪ್ಪನಿಗೆ ಆಟ ಯಾವ ರೀತಿ ಮುಗಿಸಬೇಕು ಎಂಬುದ ಗೊತ್ತಾಗುವುದಿಲ್ಲ. ಆಗ ಗೌರಸಮುದ್ರದ ಮಾರಮ್ಮ ಅವನ ಬಲಭಾಗ ಹೆಗಲ ಮೇಲೆ ಬಂದು ಕೂರುತ್ತಾಳೆ. ಇದರಿಂದಾಗಿ ಎತ್ತಪ್ಪನಿಗೆ ಜಯವಾಗುತ್ತದೆ. ಅಂದರೆ ಪ್ರತಿಯೊಬ್ಬ ಪುರಷನ ಯಶಸ್ಸಿನ ಹಿಂದೆ ಮಹಿಳೆಯ ಕೈವಾಡ ಇದ್ದೆ ಇರುತ್ತದೆ ಎಂಬುದು ಇದರಿಂದ ತಿಳಿದು ಬರುತ್ತದೆ.

೫.೧.೭.೧.೩. ವಲಿಗಾನಿಗೆ ಶಾಸ್ತ್ರ ಹೇಳುವುದು

ಎತ್ತಪ್ಪನ ಅಳಿಯ ವಲಗಾನಿ ಎಂಬುವನು ದನಗಳ ಗೋಳು ಕೇಳಲಾರದೆ ಮೇವು ನೀರು ಹುಡುಕಿಕೊಂಡು ಕಾಡಿನಲ್ಲಿ ತಿರುಗುತ್ತಿರುತ್ತಾನೆ. ಇಲ್ಲಿ ನೋಡಿದರೆ ದನಗಳು ಮೇವಿಲ್ಲದೆ ಸೆಪ್ಪೆ ಜ್ವರದಿಂದ ನೆಲ ಹಿಡಿದು ಮಲಗುತ್ತವೆ. ಅವುಗಳ ಮಗ್ಗುಲುಗಳಿಗೆ ಗೆದ್ದಲು ಹುಳುಗಳು ಹತ್ತಿರುತ್ತವೆ. ಇದನ್ನು ಗಮನಿಸಿದ ವಲಗಾನಿ ಮಾರಮುತ್ತಪ್ಪನಿಗೆ ಕಾಗೆಗಳು ದನಗಳನ್ನು ಕುಕ್ಕದಂತೆ ನೋಡಿಕೊಳ್ಳಲು ಹೇಳಿ ಹುಲ್ಲು ನೀರು ಹುಡುಕಿಕೊಂಡು ಹೊರಟನು. ಎಷ್ಟು ಹುಡುಕಿದರೂ ಮೇವು ನೀರು ಇರುವ ಸ್ಥಳ ತಿಳಿಯುವುದಿಲ್ಲ. ಆಗ ಅದೇ ಸಮಯಕ್ಕೆ ಸರಿಯಾಗಿ ಗೌರಸಮುದ್ರದ ಮಾರಮ್ಮ ಕೊರವಂಜಿ ವೇಷದಲ್ಲಿ ಬರುತ್ತಾಳೆ. ಅವಳನ್ನು ತಡೆದು ಕಣಿ ಕೇಳಿದಾಗ ಉತ್ತರ ದಿಕ್ಕನ್ನು ತೋರಿಸಿ ಕಳುಹಿಸುತ್ತಾಳೆ. ಅಲ್ಲಿ ಒಂದು ಜಿಂಕೆ ಹೊಟ್ಟೆಯ ತುಂಬ ಹುಲ್ಲು ತಿಂದು ಮರಿಗಳಿಗಾಗಿ ಬಾಯಲ್ಲಿ ಒಂದು ಹಿಡಿ ಹುಲ್ಲನ್ನು ಕಚ್ಚಿಕೊಂಡು ಬರುತ್ತಿರುತ್ತದೆ. ಅದನ್ನು ನೋಡಿದ ವಲಗಾನಿ ಅದನ್ನು ತಡೆದು ಕೇಳಿದಾಗ ಸೊಂಡೂರ ಕಾವಲಿನಲ್ಲಿ ಹುಲ್ಲು ನೀರು ಇರುವುದನ್ನು ಹೇಳುತ್ತದೆ.

೫.೧.೭.೧.೪.ಸೊಂಡೂರ ಬಮ್ಮನಿಗೆ ಕಣಿ ಹೇಳುವುದು

ಸೊಂಡೂರ ಬಮ್ಮ ಎತ್ತಪ್ಪನನ್ನು ಸೆರೆಹಿಡಿದು ಜೈಲಿನಲ್ಲಿ ಇಟ್ಟಿರುತ್ತಾನೆ. ಈ ವಿಷಯ ಮಾರಮ್ಮನಿಗೆ ತಿಳಿದು ಆಕೆಯು ಎತ್ತಪ್ಪನ ಬಳಿಗೆ ಬಂದು ಒಂದು ಗಂಟೆ ಸಮಯಕೊಟ್ಟರೆ ಇಡೀ ಸೊಂಡೂರನ್ನು ಹಾಳು ಮಾಡುವುದಾಗಿ ಕೇಳಿದಾಗ ಎತ್ತಪ್ಪನಿಗೆ ಸೊಂಡೂರು ಹಾಳಾಗುವುದು ಇಷ್ಟವಿರಲಿಲ್ಲ. ಆ ಕಾರಣದಿಂದ ಅರ್ಧ ಗಂಟೆ ಸಮಯವನ್ನು ಕೊಡುತ್ತಾನೆ. ಈ ಅವಕಾಶಕ್ಕಾಗಿ ಕಾಯುತ್ತಿದ್ದ ಗೌರ ಸಮುದ್ರದ ಮಾರಮ್ಮ ತನ್ನ ಸೊದರಿಯರಾದ ಏಳು ಜನ ಮಾರಿಯರನ್ನು ಕರೆದು ಸೊಂಡೂರಿನಲ್ಲಿ ವಾಂತಿ ಭೇದಿ ಹರಡುವಂತೆ ಮಾಡಿದಳು. ಇದರಿಂದಾಗಿ ಇಡೀ ಸೊಂಡೂರಿನ ಜನಗಳು ಸಾವು ನೋವಿನ ಮಧ್ಯೆ ನರಳಾಡುವಾಗ, ಸೊಂಡೂರ ಬಮ್ಮನಿಗೆ ಏನು ಮಾಡಬೇಕೆಂಬುದು ತೋಚದೆ ಅಸಹಾಯನಾಗಿ ಇರುವಂತಹ ಸಮಯದಲ್ಲಿ, ಗೌರಸಮುದ್ರದ ಮಾರಮ್ಮ ಕೊರವಂಜಿಯ ವೇಷಧರಿಸಿಕೊಂಡು ಕಣಿ ಹೇಳುವವಳಾಗಿ ಬರುತ್ತಾಳೆ. ಇವಳನ್ನು ನೋಡಿದ ಸೊಂಡೂರ ಬಮ್ಮ ಅವಳನ್ನು ಕರೆಸಿ ಅವಳು ಕೇಳಿದಷ್ಟು ಮುತ್ತು ರತ್ನಗಳನ್ನು ರಾಶಿ ಹೊಯ್ದು ಕಣಿ ಕೇಳುತ್ತಾನೆ. ಈ

ರೀತಿಯ ಪರಿಸ್ಥಿತಿಗೆ ಕಾರಣ ಎತ್ತಪ್ಪನನ್ನು ಸೆರೆಯಲ್ಲಟ್ಟಿರುವುದು ಎಂದು ಹೇಳಿ ಎತ್ತಪ್ಪನನ್ನು ಅಲ್ಲಿಂದ ಬಿಡುಗಡೆ ಮಾಡಿಸುತ್ತಾಳೆ. ಅಷ್ಟೆ ಅಲ್ಲ ಸೊಂಡೂರ ಬಮ್ಮನಿಂದ ಎತ್ತಪ್ಪನ ಕಾಲುಗಳಿಗೆ ನಮಸ್ಕಾರ ಮಾಡಿಸುತ್ತಾಳೆ.

೫.೧.೭.೨. ಜುಂಜಪ್ಪನ ಕಾವ್ಯದಲ್ಲಿ ಮಾರಮ್ಮನ ಪಾತ್ರ

ಜುಂಜಪ್ಪನ ಕಾವ್ಯವು ಮೂರು ತಲೆಮಾರುಗಳ ಕಾವ್ಯವಾಗಿರುವುದರಿಂದ ಮೂರು ತಲೆಮಾರುಗಳಲ್ಲಿ ಗೌರ ಸಮುದ್ರದ ಮಾರಕ್ಕನ ಪಾತ್ರವಿದೆ. ಮುಖ್ಯವಾಗಿ ದೇವರ ದಯಾಮಾರನ ತಲೆಮಾರಿನಲ್ಲಿ ಗೌರಸಮುದ್ರದ ಮಾರಮ್ಮನ ಪಾತ್ರ ಬಹಳ ಮುಖ್ಯವಾದುದು. ದೇವರದಯಾಮಾರ ಕಂಬಕ್ಕನನ್ನು ಮದುವೆ ಆಗದೆ ತಾನು ತಂದಿರುವ ಚೂರಿ ಬಿಟ್ಟು ಹೋಗಿರುತ್ತಾನೆ. ಆ ಚೂರಿಗೆ ಧಾರೆ ಎರೆಯುತ್ತಾರೆ. ಇದರಿಂದಾಗಿ ಆಕೆಯು ಚೂರಿಯನ್ನೇ ದೇವರ ಚೂರಿಯೆಂದು ದೇವರ ದಯಾಮಾರ ಎಂದುಕೊಂಡು ಮದುವೆ ಆಗುತ್ತಾಳೆ. ಅವಳು ಗಂಡನ ಮನೆಗೆ ಬಂದ ನಂತರ ವಾರಗಿತ್ತಿಯರು ಕೊಡಬಾರದ ಕಷ್ಟ ಕೊಡುತ್ತಾರೆ. ಇದನ್ನು ಸಹಿಸದ ಕಂಬಕ್ಕ ಗಂಡನನ್ನು ಹುಡುಕಿಕೊಂಡು ಹೋಗುವಂತಹ ಸಮಯದಲ್ಲಿ ಗೌರಸಮುದ್ರದ ಮಾರಮ್ಮ ಕಣಿ ಹೇಳುವವಳಾಗಿ ಬಂದು ದಾರಿ ತೋರಿಸುತ್ತಾಳೆ.

೫.೧.೭.೨.೧. ಕೆಂಗುರಿ ಮಲೆಗೌಡನನ್ನು ಹುಡುಕಿ ಕೊಡುವುದು

ದೇವರದಯಾಮಾರ ಮತ್ತು ಕಂಬಕ್ಕನಿಗೆ ಒಂದು ಗಂಡು ಮಗು ಜನಿಸುತ್ತದೆ. ಆಗ ಇವರು ಆಹಾರ ಹುಡುಕುತ್ತಾ ಹೋಗಿ ದಾರಿ ಕಾಣದ ಸಾವಿಗೀಡಾಗುತ್ತಾರೆ. ಲೋಕ ಸಂಚಾರಕ್ಕಾಗಿ ಬಂದಂತಹ ಶಿವ ಪಾರ್ವತಿಯರಿಗೆ ಕಾಡಿನಲ್ಲಿ ಮಗು ಅಳುವ ಧ್ವನಿ ಕೇಳಿಸುತ್ತದೆ. ಆಗ ಆ ಮಗುವನ್ನು ತೆಗೆದುಕೊಂಡು ಕೆಂಗುರಿ ಮಲೆಗೌಡ ಎಂದು ನಾಮಕರಣ ಮಾಡುತ್ತಾರೆ. ಆಲದ ಮರಕ್ಕೆ ಜೋಲಿ ಹಾಕಿ ಒಂದು ಸರ್ಪವನ್ನು ಕಾವಲಿಟ್ಟು ಹೋಗುತ್ತಾರೆ. ಇತ್ತ ಹಿರೇಹಟ್ಟಿಯಲ್ಲಿ ದೇವರ ದಯಾಮಾರನ ಸೋದರರಿಗೆ ಗೌರಸಮುದ್ರದ ಮಾರಮ್ಮ ಕೊರವಂಜಿಯ ವೇಷಧರಿಸಿ ಬಂದು ಕಣಿ ಹೇಳಿ ನಿಮ್ಮ ವಂಶದ ಕುಡಿ ಕೆಂಗುರಿಮಲೆಗೌಡ ಕಾಡಿನಲ್ಲಿದ್ದಾನೆ. ಅವನನ್ನು ಕರೆದುಕೊಂಡು ಬಂದು ಸಾಕುವಂತೆ ಹೇಳಿದಳು. ಆಗ ಆರು ಜನ ಅಣ್ಣತಮ್ಮಂದಿರು ಬುತ್ತಿರೊಟ್ಟಿ ಕಟ್ಟಿಕೊಂಡು ಮಲೆಗೌಡನನ್ನು ಹುಡುಕುತ್ತಾ ಹೋದರು. ಎಲ್ಲಿ ಹುಡುಕಿದರೂ ಸಿಗುವುದಿಲ್ಲ . ಇದರಿಂದ ಬೇಸತ್ತ ಅವರು ಕೊರವಂಜಿಯ ವೇಷಧರಿಸಿ ಬರುವ ಮಾರಮ್ಮನನ್ನು ಕಣಿ ಹೇಳುವಂತೆ ಕೇಳುತ್ತಾರೆ. ಆಕೆ ಕಣಿ ಹೇಳಿ ಕೆಂಗುರಿಮಲೆಗೌಡ ಇರುವ ಸ್ಥಳವನ್ನು ತೋರಿಸುತ್ತಾಳೆ.

೫.೧.೭.೨.೨. ಹಾಲೇಗೌಡನ ಮಕ್ಕಳಿಗೆ ಕೆಂಗುರಿ ಮಲೆಗೌಡನ ಗುರುತು ಹೇಳುವುದು

ದೊಡ್ಡಾಲ ಮತ್ತು ಸಣ್ಣಾಲ ಇವರು ಹೊನ್ನಟ್ಟಿ ಹಾಲೇಗೌಡನ ಮಕ್ಕಳು. ಇವರು ಮದುವೆ ವಯಸ್ಸಿಗೆ ಬಂದರೂ ಮದುವೆ ಮಾಡದಂತೆ ಇರುತ್ತಾನೆ ಹೊನ್ನಟ್ಟಿ ಹಾಲೇಗೌಡ. ಊರಿನವರೆಲ್ಲ ಹೇಳಿದರೂ ಮಕ್ಕಳಿಗೆ ಮದುವೆ ಮಾಡುವುದಿಲ್ಲ. ಕಾರಣ ಅವನು ಸಾಕು ಮಗನಾದ ಕೆಂಗುರಿ ಮಲೆಗೌಡ ದನ ಹೊಡೆದುಕೊಂಡು ಹೋಗಿ ಇಪ್ಪತ್ನಾಲ್ಕು ವರ್ಷವಾದರೂ ಊರ ಕಡೆ ಮುಖ

ಮಾಡಿರುವುದಿಲ್ಲ. ಆ ಕಾರಣದಿಂದ ಅವನಿಗೆ ಮದುವೆ ಮಾಡದ ಹೊರತು ತನ್ನ ಮಕ್ಕಳಿಗೆ ಮದುವೆ ಮಾಡುವುದು ಸಾಧ್ಯವಿಲ್ಲ ಎಂದು ಹೇಳಿದಾಗ. ಅವನನ್ನು ಹುಡುಕಲು ಹೋಗುತ್ತಾರೆ. ಎಲ್ಲಿ ಹುಡುಕಿದರೂ ಕೆಂಗುರಿ ಮಲೆಗೌಡನ ನೆಲೆ ಸಿಗುವುದಿಲ್ಲ. ಆಗ ಗೌರಸಮುದ್ರದ ಮಾರಮ್ಮ ಎದುರಿಗೆ ಬರುತ್ತಾಳೆ ಮತ್ತು ಕೆಂಗುರಿ ಮಲೆಗೌಡ ಇರುವ ಜಾಗವನ್ನು ಕಣಿ ಹೇಳುವ ಮೂಲಕ ತೋರಿಸುತ್ತಾಳೆ.

೫.೧.೭.೨.೩. ಕೆಂಗುರಿ ಮಲೆಗೌಡನಿಗೆ ಕಣಿ ಹೇಳುವುದು

ಕೆಂಗುರಿ ಮಲೆಗೌಡನಿಗೆ ಎಲ್ಲಿ ಹೆಣ್ಣು ಹುಡುಕಿದರೂ ಶಕುನಗಳು ಸರಿ ಕಾಣುತ್ತಿರಲಿಲ್ಲ. ಆಗ ಹೊನ್ನಟ್ಟಿ ಹಾಲೆಗೌಡ ಗೌರಸಮುದ್ರದ ಮಾರಮ್ಮನನ್ನು ಕರೆದು ಮುತ್ತು ರತ್ನದ ರಾಶಿಯನ್ನು ಅವಳ ಕೊರವಂಜಿ ಪುಟ್ಟಿಗೆ ಹೊಯ್ದು ಕಣಿ ಕೇಳಿದಾಗ ಕಂಬೇರಹಟ್ಟಿ ಕಾನಿಹಟ್ಟಿಯಲ್ಲಿ ಶುಕ್ರವಾರ ಹುಟ್ಟಿದ ದೆಸೆವಂತಿ ಚಿನ್ನಮ್ಮ ಎಂಬುಳು ಹುಟ್ಟಿ ಹನ್ನೆರಡು ವರ್ಷ ಋತುಮತಿಯಾಗಿ ಹನ್ನೆರಡು ವರ್ಷ ಅವಳು ಹುಟ್ಟಿದ ಗಳಿಗೆಯಿಂದ ಕಂಬೇರಗೊಲ್ಲರ ಮನೆಯಲ್ಲಿ ರಾಮ ಲಕ್ಷ್ಮಣರೆಂಬ ಹೊನ್ನಿನ ಕಣಜಗಳು ಇವತ್ತಿನ ವರೆಗೂ ಖಾಲಿ ಆಗಿಲ್ಲ ಎಂದು ಹೇಳಿದಾಗ ಹೊನ್ನಟ್ಟಿ ಹಾಲೇಗೌಡ ಕಂಬೇರಹಟ್ಟಿಗೆ ಹೋಗಿ ಚಿನ್ನಮ್ಮನನ್ನು ಕೆಂಗುರಿ ಮಲೆಗೌಡನಿಗೆ ಗೊತ್ತುಮಾಡಿಕೊಂಡು ಬರುತ್ತಾನೆ.

೫.೧.೭.೨.೪. ಶಿವನಿಂದ ಮಕ್ಕಳ ವರ ಬೇಡಿ ತಂದದ್ದು

ಕಂಬೇರ ಚಿನ್ನಮ್ಮನಿಗೆ ಎಷ್ಟು ವರ್ಷಗಳಾದರೂ ಮಕ್ಕಳಾಗುವುದಿಲ್ಲ. ಹಾಗಾಗಿ ಅವಳಿಗೆ ವಯಸ್ಸಾಗಿ ನೆರೆಕೂದಲು ಬಂದಿರುತ್ತವೆ. ಅವಳ ಮನೆಗೆ ಭಿಕ್ಷೆಗೆ ಬಂದ ಜಂಗಮಯ್ಯ, ದಾಸಯ್ಯಗಳು ಇವಳು ಗೊಡ್ಡಿ ಬಂಜೆ ಎಂದು ಜರೆದು ಭಿಕ್ಷೆ ತೆಗೆದುಕೊಳ್ಳದೆ ವಾಪಸ್ಸು ಹೋಗುತ್ತಾರೆ. ಇದರಿಂದ ಚಿನ್ನಮ್ಮನಿಗೆ ಏನು ಮಾಡಬೇಕೆಂದು ತಿಳಿಯದಂತಾಗುತ್ತದೆ. ಅದೇ ಸಮಯಕ್ಕೆ ಸರಿಯಾಗಿ ಗೌರಸಮುದ್ರದ ಮಾರಮ್ಮ ಭಿಕ್ಷೆಗೆ ಬರುತ್ತಾಳೆ. ಆಗ ಗೌರಸಮುದ್ರದ ಮಾರಮ್ಮನನ್ನು ಕರೆದು ಕಣಿ ಹೇಳುವಂತೆ ಕೇಳುತ್ತಾಳೆ ಜೊತೆಗೆ ಮಕ್ಕಳ ಭಾಗ್ಯ ಕರುಣಿಸುವಂತೆ ಬೇಡಿಕೊಳ್ಳುತ್ತಾಳೆ. ಮಕ್ಕಳಾಗುವುದರಿಂದ ಬಡತನ ಬರುತ್ತದೆ. ನಿನ್ನ ಗಂಡನಿಗೆ ಸಾವು ಬರುತ್ತದೆ ಎಂದು ಹೇಳಿದರೂ ಕೇಳದಂತೆ ಮಕ್ಕಳು ಬೇಕು ಎಂದು ಅಂಗಲಾಚಿದಾಗ, ಶಿವನ ಮನೆಗೆ ಹೋಗಿ ನಾಲ್ಕು ಜನ ಮಕ್ಕಳ ವರಗಳನ್ನು ಪಡೆದುಕೊಂಡು ಚಿನ್ನಮ್ಮನಿಗೆ ಕೊಡುತ್ತಾಳೆ.

೫.೧.೭.೨.೫. ಹಿರಿಹಟ್ಟಿ ಗೌಡರಿಗೆ ಕಣಿ ಹೇಳುವುದು

ಜುಂಜಪ್ಪ ಮತ್ತು ಮಾರಣ್ಣ ಮೈಲಣ್ಣ ಹುಟ್ಟಿದಂತಹ ಸಮಯದಲ್ಲಿ ಅವರಿಗೆ ಜೆನಿಗೆ ಹೊಯ್ಯಲು ನಿರಾಕರಿಸಿ ಮೂರು ತಿಂಗಳು ಹಟ್ಟಿಯ ಹೊರಗೆ ಇಟ್ಟಿರುತ್ತಾರೆ.. ಸೋನೆ ಮಳೆ ಹಿಡಿದಿರುತ್ತದೆ. ಇದನ್ನು ಗಮನಿಸಿದ ಜುಂಜಪ್ಪ ಏಳು ಜನ ಮಾರಿಯರನ್ನು ಕರೆದು ಹಟ್ಟಿಯ ತುಂಬ ವಾಂತಿ ಭೇದಿ ಹರಡುವಂತೆ ಮಾಡಿದನು. ಇದರಿಂದ ಭಯಗೊಂಡ ಹಿರಿಹಟ್ಟಿ ಗೌಡರು ಮನೆ ದೇವರಾದ ಚಿತ್ರದೇವರನ್ನು ಹೂವಿನ ಭವಿಷ್ಯ ಕೇಳಿದಾಗ ಚಿತ್ರದೇವರು ಗೌರಸಮುದ್ರದ ಮಾರಮ್ಮನ ಮೇಲೆ

ಹೇಳಿದಾಗ ಗೌರಸಮುದ್ರದ ಮಾರಮ್ಮ ಬಂದು ಕಣಿ ಹೇಳಿ ಜುಂಜಪ್ಪನಿಗೆ ಜೆನಿಗೆ ಹೊಯ್ದರೆ ಮಾತ್ರ ಹಟ್ಟಿ ಉಳಿಯುತ್ತದೆ. ಇಲ್ಲದಿದ್ದರೆ ಹಾಳಾಗಿ ಹೋಗುತ್ತದೆ ಎಂದು ಹೇಳಿದಾಗ, ಜುಂಜಪ್ಪನಿಗೆ ಜೆನಿಗೆ ಹೊಯ್ದು ಕಳಿಸುತ್ತಾರೆ.

೫.೧.೭.೨.೬. ಪುರಪ್ಪನ ಕೆರೆಗಾದ ಮಾಟ ನಿವಾರಣೆ ಮಾಡಿದ್ದು

ಕಂಬೇರಗೊಲ್ಲರು ಜುಂಜಪ್ಪನ ಪ್ರಗತಿಯನ್ನು ನೋಡಿ ಸಹಿಸಿಕೊಳ್ಳಲಾರದೆ ಅವನ ಏಳು ಗೂಡಿನ ದನಗಳನ್ನು ನಾಶಮಾಡಲು ಪುರಪ್ಪನ ಕೆರೆಗೆ ಮಾಟ ಮಾಡಿಸುತ್ತಾರೆ. ಈ ಮಾಟವನ್ನು ಸಾಣಿಕೆರೆ ಪುಟ್ಟಣ್ಣ ಮಾಡಿದನು. ಇದರಿಂದ ದನಗಳು ನೀರು ಕುಡಿಯದಂತೆ ಚಿಕ್ಕರೆಂಬ ತಡೆಯುತ್ತದೆ. ಜುಂಜಪ್ಪನಿಗೆ ವಿಷಯ ಅರ್ಥವಾಗಿ ಗೌರಸಮುದ್ರದ ಮಾರಮ್ಮನನ್ನು ಕರೆಯುತ್ತಾನೆ. ಆಗ ಮಾರಕ್ಕ ತನ್ನ ಬಳಗವನ್ನೆಲ್ಲಾ ಕರೆದುಕೊಂಡು ಬಂದು ಪುರುಷಪ್ಪನ ಕೆರೆಯ ನೀರನ್ನು ಕಡೆಗೋಲಿನಿಂದ ಕಡೆಯುವಂತೆ ಮಾಡುತ್ತಾಳೆ. ಇದರಿಂದಾಗಿ ವಿಷ ಒಂದು ಕಡೆ ಬಂದು ಸೇರುತ್ತದೆ. ನೀರು ಶುದ್ಧಿಯಾಗುತ್ತದೆ. ದನಗಳು ಬಂದು ನೀರನ್ನು ಕುಡಿಯುತ್ತವೆ.

೫.೧.೭.೨.೭. ಮೈಲಣ್ಣನಿಗೆ ಕಣಿ ಹೇಳಿದ್ದು

ಮರಡಿರಂಗಪ್ಪ ಕಂಬೇರಗೊಲ್ಲರ ಮಾತು ಕೇಳಿ ಮೂರು ರೀತಿಯ ಬರಗಳನ್ನು ನಿರ್ಮಾಣ ಮಾಡುತ್ತಾನೆ ನಾಲ್ಕು ದಿಕ್ಕು ಸೋಸಿ ನೋಡಿದರೂ ಮೇವು ನೀರು ದೊರೆಯದಂತಹ ಪರಿಸ್ಥಿತಿ ಏರ್ಪಡುತ್ತದೆ. ಆಗ ಜುಂಜಪ್ಪ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ ದನಗಳ ಗೋಳು ನೋಡಲಾರದೆ ಮಾರಣ್ಣನಿಗೆ ಹೇಳಿ ಮೈಲಣ್ಣ ದನಗಳಿಗೆ ಮೇವು ನೀರು ಹುಡುಕಿಕೊಂಡು ಹೋಗುತ್ತಾನೆ. ಎಷ್ಟು ಹುಡುಕಿದರೂ ಮೇವು ನೀರು ಇರುವ ಸ್ಥಳ ಗೊತ್ತಾಗುವುದಿಲ್ಲ. ಗೌರಸಮುದ್ರದ ಮಾರಮ್ಮ ಅಡ್ಡ ಬಂದು ಕಣಿ ಹೇಳಿ ಮೇವು ನೀರು ಇರುವ ಜಾಗವನ್ನು ತೋರಿಸುತ್ತಾಳೆ.

೫.೧.೭.೩.ಕೇತಲಿಂಗನನ್ನು ಸೆರೆಯಿಂದ ಬಿಡಿಸಿದ್ದು

ಸೋಮನಗೊಲ್ಲರ ಬೆಡಗಿಗೆ ಸೇರಿದ ಕೇತಪ್ಪನನ್ನು ಚಿತ್ರದುರ್ಗದ ನಾಯಕ ಭರಮಪ್ಪ ಎಂಬುವವನು ಚಿತ್ರದುರ್ಗದಲ್ಲಿ ಸೆರೆಹಾಕುತ್ತಾನೆ. ಇದರಿಂದ ಕೇತಪ್ಪ ಅಲ್ಲಿಂದ ಹೊರಬರಲು ದಾರಿ ಕಾಣದೆ ಗೌರ ಸಮುದ್ರದ ಮಾರಮ್ಮನ ಮೇಲೆ ಉರಿಗಣ್ಣು ಬಿಟ್ಟಾಗ ಮಾರಮ್ಮನಿಗೆ ಕೇತಪ್ಪನ ಪರಿಸ್ಥಿತಿ ಅರ್ಥವಾಗುತ್ತದೆ. ಆಗ ಅವಳು ತನ್ನ ಸುತ್ತಲಿನ ತಂಗಿಯರನ್ನು ಕರೆದುಕೊಂಡು ಇಡೀ ಚಿತ್ರದುರ್ಗದ ಜನರು ಪ್ಲೇಗಿನಿಂದ ಸಾಯುವಂತೆ ಮಾಡುತ್ತಾಳೆ. ಭರಮಪ್ಪನ ಹೆಂಡತಿ ಮಕ್ಕಳು ಕೂಡ ಸಾವಿಗೆ ಬಲಿಯಾಗುತ್ತಾರೆ. ಇದರಿಂದ ಭಯ ಭೀತನಾದ ಭರಮಪ್ಪ ಗೌರಸಮುದ್ರದ ಮಾರಮ್ಮನನ್ನು ಕಣಿ ಕೇಳಿದಾಗ, ಗೊಲ್ಲರ ದೇವರನ್ನು ಸೆರೆ ಹಾಕಿರುವುದರಿಂದ ನಿನ್ನ ರಾಜ್ಯದಲ್ಲಿ ಜನರು ಸಾಯುತ್ತಿದ್ದ. ದಯಾಮಾಡಿ ಗೊಲ್ಲರ ದೈವವನ್ನು ನೆಡೆಮುಡಿಯ ಮೇಲೆ ಅವರ ಹಟ್ಟಿಗೆ ತಲುಪಿಸಿದ್ದೆ ಆದರೆ ನಿನ್ನ ಮಡದಿ ಮಕ್ಕಳ ಪ್ರಾಣವಾದರೂ ಉಳಿದೀತು ಎಂದು ಹೇಳಿದಾಗ ಗೌರಸಮುದ್ರದ ಮಾರಮ್ಮನ ಮಾತಿನಂತೆ ಭರಮಪ್ಪ ನಡೆಮುಡಿಯ ಮೇಲೆ ಚೆನ್ನಮ್ಮ ನಾಗತಿಹಳ್ಳಿಗೆ ಒಪ್ಪಿಸಿದನು. ಹೀಗೆ ಕಾಡುಗೊಲ್ಲರ ಸಾಂಸ್ಕೃತಿಕ

ನಾಯಕರಾದ ವೀರಯರ್‍ರಣ್ಣ ವೀರಜಂಪಣ್ಣ ವೀರಮಿಂಚಣ್ಣ ವೀರಕೆಂಪಣ್ಣ ಮುಂತಾದ ದೇವರುಗಳು ಜೊತೆಯಲ್ಲಿ ಗೌರ ಸಮುದ್ರದ ಮಾರಮ್ಮನ ಸಂಬಂಧವಿದೆ.

೫.೨. ಕಾವಲಮ್ಮನ ಸೃಷ್ಟಿ ಪುರಾಣ

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಮದುಡಿ ಗೊಲ್ಲರಹಟ್ಟಿಯಲ್ಲಿ ಕಾವಲಮ್ಮ ಎಂಬ ಸ್ತ್ರೀ ದೇವತೆಯನ್ನು ಕಾಡುಗೊಲ್ಲರು ಆರಾಧಿಸುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬಹುದಾದ ವಿಚಾರವೆಂದರೆ, ಆಂಧ್ರಪ್ರದೇಶದ ಕಾಡುಗೊಲ್ಲರು ಪ್ರಾಚೀನ ಪರಂಪರೆಯನ್ನು ಹಾಗೆ ಮುಂದುವರಿಸಿಕೊಂಡು ಬಂದಿದ್ದಾರೆ. ಅವರು ಮಾತೃದೇವತೆಯ ಆರಾಧಕರು. ಕಲ್ಯಾಣದುರ್ಗ ತಾಲ್ಲೂಕಿನಲ್ಲಿ ಎಲ್ಲಮ್ಮನನ್ನು ಆರಾಧನೆ ಮಾಡಿದರೆ, ಮಡಕಶಿರಾ ತಾಲ್ಲೂಕಿನಲ್ಲಿ ಕಾವಲಮ್ಮನನ್ನು ಆರಾಧನೆ ಮಾಡುವ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕರ್ನಾಟಕದಲ್ಲಾದರೆ ಕಾಡುಗೊಲ್ಲರು ಮಾರಮ್ಮ, ಕುಕ್ಕಡದಮ್ಮ, ದ್ಯಾಮವ್ವ, ಕರಿಯಮ್ಮ ಮುಂತಾದವರನ್ನು ಆರಾಧನೆ ಮಾಡುತ್ತಾರೆ. ಈ ದೇವತೆಗಳು ಕಾಡುಗೊಲ್ಲರಿಗೆ ಮಾತ್ರ ಸೀಮಿತವಾಗಿಲ್ಲ ಎಲ್ಲ ಸಮುದಾಯದವರು ಆರಾಧನೆ ಮಾಡುತ್ತಾರೆ. ಈ ದೇವಸ್ಥಾನಗಳ ಹಟ್ಟಿಯಲ್ಲಿರದೆ ಊರಿನಲ್ಲಿರುತ್ತವೆ. ಅದರೆ ಆಂಧ್ರದಲ್ಲಿ ಹಾಗಲ್ಲ ಪ್ರತಿಯೊಂದು ಚಿತ್ರದೇವರು ಇರುವ ಗುಡಿಕಟ್ಟಿನಲ್ಲಿ ಯಲ್ಲಮ್ಮ ಅಥವಾ ಕಾವಲಮ್ಮ ಇರುವುದು ಕಂಡುಬರುತ್ತದೆ. ಇವುಗಳ ಪಂಜೆಯನ್ನು ಸಹ ಕಾಡುಗೊಲ್ಲರೆ ಮಾಡುತ್ತಾರೆ.

ಕಾವಲಮ್ಮನ ಸೃಷ್ಟಿ ಪುರಾಣವು ಶಿವನಿಂದ ಪ್ರಾರಂಭವಾಗುತ್ತದೆ. ಒಂದು ದಿನ ಲೋಕಸಂಚಾರ ಮಾಡಿ ಕೈಲಾಸ ಸೇರಿಕೊಂಡಂತಹ ಶಿವಪಾರ್ವತಿಯರು ರತಿಕ್ರೀಡೆಯಾಡುವಂತಹ ಸಮುಯದಲ್ಲಿ ಅವರ ವೀರ್ಯವು ಆಗಲೇ ಸೃಷ್ಟಿ ಮಾಡಿರುವಂತಹ ಏಳು ಗೊಂಬೆಗಳ ಮೇಲೆ ಬೀಳುತ್ತದೆ. ಆ ಏಳು ಗೊಂಬೆಗಳು ಹೆಣ್ಣು ಮಕ್ಕಳ ರೂಪಧರಿಸಿ ಶಿವಪಾರ್ವತಿಯರ ಎದುರು ನಿಲ್ಲುವರು. ಆಗ ಶಿವನಿಗೆ ಏನು ಮಾಡಬೇಕೆಂಬುದು ತೋಚುತ್ತದೆ. ಅದಕ್ಕೆ ಸುಮ್ಮನಿದ್ದ ಆ ಸಮಯದಲ್ಲಿ ಪಾರ್ವತಿಯು ಇವರು ನಮ್ಮ ಬೆವರಿನಿಂದ ಹುಟ್ಟಿದ ಕಾರಣ ಇವರು ಶಿವಶರಣೆಯರು. ಹಾಗಾಗಿ ಇವರನ್ನು ಭೂಲೋಕಕ್ಕೆ ಕಳುಹಿಸಿದ್ದಾರೆ. ಏಳು ವರ್ಷಗಳ ಕಾಲ ಭೂಲೋಕದಲ್ಲಿದ್ದು ಭೂಲೋಕದ ಜನರಿಗೆ ದೇವತೆಗಳಾಗಿ, ಸತ್ಯ, ನ್ಯಾಯ, ನಿಷ್ಠೆ ಮುಂತಾದವುಗಳನ್ನು ಲೋಕಕ್ಕೆ ಸಾರುವಂತಾಗಲಿ ಎಂದು ಆಶೀರ್ವಾದ ಮಾಡಿ ಕಳುಹಿಸಬೇಕೆಂದು ಶಿವನಿಗೆ ಹೇಳಿದಾಗ ಒಬ್ಬರಿಗೆ ಒಂದೊಂದು ರೀತಿಯ ವರಗಳನ್ನು ಕೊಟ್ಟು ಲೋಕ ಕಲ್ಯಾಣಕ್ಕಾಗಿ ಭೂಲೋಕಕ್ಕೆ ಕಳಹಿಸುತ್ತಾನೆ.

ಕೈಲಾಸದಿಂದ ಬಂದ ಕಾವಲಮ್ಮ ತನ್ನ ಅಕ್ಕಂದಿರೊಂದಿಗೆ ಬೆಟ್ಟದಲ್ಲಿ ವಾಸವಾಗಿರುತ್ತಾಳೆ. ಅವಳಿಗೆ ಅಲ್ಲಿ ಇರುವುದಕ್ಕೆ ಇಷ್ಟವಾಗದ ಕಾರಣ ತಂದೆ ತಾಯಿಯರ ಆಜ್ಞೆ ಮೀರದಂತೆ ಭೂಲೋಕಕ್ಕೆ ಪತ್ರ ಬರೆಯುತ್ತಾಳೆ.

'ಮೇಗಳಾಮವಾಸೆ ಮೂಡಿದೇಳ ದಿನಕೆ

ಜೋಡಿ ನಾಗರ ಒಡಗೊಂಡು ಕಾವಲಮ್ಮ

ಮೊಗದಿಂದ ವಾಲೆ ಬಳುದಾಳು' *(ಯಶೋಧಮ್ಮ ಮತ್ತು ಸಂಗಡಿಗರು ಹಾಡಿರುವ ಕಾವಲಮ್ಮನ ಕಾವ್ಯ)*

ತಾನು ಭೂಲೋಕಕ್ಕೆ ಬರುವ ಸುದ್ದಿಯನ್ನು ಪತ್ರದ ಮೂಲಕ ತಿಳಿಸುತ್ತಾಳೆ. ಆಕೆಯ ಜೊತೆಗೆ ಜೋಡಿ ನಾಗರ ಹಾವುಗಳನ್ನು ಕರೆದುಕೊಂಡು ಬರುತ್ತಾಳೆ. ಈಕೆ ಬಂದಂತಹ ಸಮಯದಲ್ಲಿ ಎಲ್ಲಿ ನೋಡಿದರಲ್ಲಿ ಬರಗಾಲ ಬಂದಿರುತ್ತದೆ. ಕಾಗೆ, ಗೂಗೆ ಪಶು, ಪ್ರಾಣಿಗಳು ತತ್ತರಿಸಿ ಹೋಗಿರುತ್ತವೆ. ಜೊತೆಗೆ ಅವಳು ಸ್ನಾನ ಮಾಡಿ ಪೂಜೆ ಮಾಡುವ ಅವಶ್ಯಕತೆ ಇರುತ್ತದೆ. ಇಂಥ ಪರಿಸ್ಥಿತಿಯಲ್ಲಿ ತನ್ನ ತಂದೆಯಾದ ಶಿವನಿಗೆ ಪತ್ರ ಬರೆದು ಮಳೆ ತರಿಸುವಂತೆ ಕೇಳುತ್ತಾಳೆ. ಮಗಳ ಮಾತನ್ನು ಮೀರದ ಶಿವ ಗಂಗೆಯಿಂದ ಭೂಮಂಡಲದ ತುಂಬ ನೀರು ಸೃಷ್ಟಿ ಮಾಡುತ್ತಾನೆ.

'ಕಾಗೆ ಗೊಗೆಗಳ ಬೇಗ ನೀರುಣ್ಣೀರಿ

ನಾರಿ ಕಾಮವ್ವ ಜಲದಾಡಿ ಬರುತ್ತಾಳೆ

ಬಲನೆತ್ತಿ ದೂರ ಮರು ನೀರು'*(ಯಶೋಧಮ್ಮ ಮತ್ತು ಸಂಗಡಿಗರು ಹಾಡಿರುವ ಕಾವಲಮ್ಮನ ಕಾವ್ಯ)*

ಮೊದಲು ಪಕ್ಷಿಗಳ ದಾಹ ನೀಗಿಸಿ ಆ ನಂತರ ಸ್ನಾನ ಮಾಡುತ್ತೇನೆಂದು ಕಾವಲಮ್ಮ ಹಕ್ಕಿ ಪಕ್ಷಿಗಳಿಗೆ ನೀರು ಕುಡಿಯಲು ಹೇಳುತ್ತಾಳೆ. ಪಕ್ಷಿಗಳು ನೀರು ಕುಡಿದ ನಂತರ ಏಳು ಜನ ಅಕ್ಕ ತಂಗಿಯರು ಜಲಕ್ರೀಡೆಗೆ ತೊಡಗುತ್ತಾರೆ. ಅವರ ಹೆಸರುಗಳು ಈ ಕೆಳಗಿನಂತಿವೆ.

೧. ದೊಡ್ಡಮ್ಮ --- ರಾವುಡಿಬಂಡೆ

೨. ಚಿಕ್ಕಮ್ಮ -------ಬುಕ್ಕಂಬೂದಿ

೩. ಅಕ್ಕಮ್ಮ ------ ಅಕ್ಕಮ್ಮನ ಬೆಟ್ಟ ನಿಡಗಲ್

೪. ನಿಗ್ಲದಮ್ಮ ----- ಅಕ್ಕ ತಂಗಿಯರ ಬೆಟ್ಟ

೫. ಬುಕ್ಕಪಟ್ಲಮ್ಮ ----- ಬುಕ್ಕಪಟ್ಲ

೬. ಕಾವಲಮ್ಮ ------ ಮುದುಡಿ ಗೊಲ್ಲರಹಟ್ಟಿ

'ಸೀರೆಯ ಬಿಟ್ಟಾರು ಕಲ್ಲಿನ ಮೇಲಿಟ್ಟರು

ಬಾವಿಗೆ ತಾವು ಇಳಿದಾರು॥ ತಾನ ಮಾಡಿ

ಮೇಲಕ್ಕೆ ಬಂದಳು ಕಾವಲಮ್ಮ

ಬಾರಮ್ಮ ಮಜ್ಜಣಕ್ಕೆ ಹೋಗುವಾನ

ಗಂಗೆ ಹೊಳೆಯಲ್ಲಿ ತಾನವ ಮಾಡುವನ' *(ಯಶೋದಮ್ಮ ಮತ್ತು ಸಂಗಡಿಗರು ಹಾಡಿರುವ ಕಾವಲಮ್ಮನ ಕಾವ್ಯ)*

ತಮ್ಮ ಬಟ್ಟೆಗಳನ್ನು ಬೆಚ್ಚಿ ಕಲ್ಲಿನ ಮೇಲಿಟ್ಟು ಸ್ನಾನ ಮಾಡುವಂತಹ ಸಮಯದಲ್ಲಿ ಶ್ರೀಕೃಷ್ಣ ಬಂದು ಎಲ್ಲರ ಸೀರೆಗಳನ್ನು ಕದ್ದುಕೊಂಡು ಹೋಗುತ್ತಾನೆ. ಆಗ ಕಾವಲಮ್ಮ ಕೊಳದಿಂದ ಮೇಲೆ

ಬಂದು ಬಟ್ಟೆ ನೋಡುತ್ತಾಳೆ ಬಟ್ಟೆ ಇರುವುದಿಲ್ಲ. ಆಗ ಹಿರಿಯಕ್ಕನನ್ನು ಕರೆದು "ನಮ್ಮಾವ ಹೇಳಿದ ಮಾತು ನಾವು ಕೇಳಿದ್ದರೆ ಬಟ್ಟೆಗಳೆ ಕಳೆದು ಹೋಗುತ್ತಿರಲಿಲ್ಲ" ಎಂದು ನೊಂದುಕೊಂಡು ಬಾಳೆಯವನಗಳೆಂದು ತಮ್ಮ ಮಾನ ಮುಚ್ಚಿಕೊಂಡು ಬರುವಂತಹ ಸಮಯದಲ್ಲಿ ಹಕ್ಕಿ ಪಕ್ಷಿಗಳು ಶ್ರೀಕೃಷ್ಣ ಬಟ್ಟೆ ಕದ್ದುಕೊಂಡು ಹೋದ ಬಗೆಯನ್ನು ಈ ರೀತಿ ವಿವರಿಸುತ್ತದೆ.

'ಆಕೈಲಿ ಭೂಸಕ್ರ ಈಕೈಲಿ ಬಿಲ್ಲುಬಾಣ

ಬಾಳೆ ವನದ ನೆರಳಾಗೆ॥ ಕೂತಿರುವ

ಬಾಲಯ್ಯ ಕೊಂಡೋದ ನಿಮ್ಮ ಸೀರೆ'*(ಯಶೋಧಮ್ಮ ಮತ್ತು ಸಂಗಡಿಗರು ಹಾಡಿರುವ ಕಾವಲಮ್ಮನ ಕಾವ್ಯ)*

ಶ್ರೀಕೃಷ್ಣ ವರ್ಣನೆ ಕೈಯಲ್ಲಿ ಶಂಖಚಕ್ರ, ಬಿಲ್ಲುಬಾಣ, ನಾಗರ ಹಾವಿನ ಸಿಂಹಾಸನ ಇವುಗಳಿಂದ ಅಲಂಕೃತನಾದ ಬಾಲಕೃಷ್ಣ ನಿಮ್ಮ ಬಟ್ಟೆಗಳನ್ನು ಕೊಂಡೋದ ಎಂದು ಹಕ್ಕಿ ಪಕ್ಷಿಗಳು ಹೇಳಿದಾಗ, ಕಾಮವ್ವ ತ್ಯಾಗದ ಎಲೆಯನ್ನು ದೇಹಕ್ಕೆ ಸುತ್ತಿಕೊಂಡು, ಬಾಲರಂಗಯ್ಯನ ಹತ್ತಿರ ಹೋಗಿ ಕೇಳಿದಾಗ ಅವನು ಬೆತ್ತಲೆಯಾಗಿ ಕೈಮುಗಿದರೆ ಕೊಡುವುದಾಗಿ ಹೇಳುತ್ತಾನೆ. ಇದರಿಂದ ಸ್ವಾಭಿಮಾನಿಯಾದ ಕಾವಲಮ್ಮ ಅವನ ಮಾತಿಗೆ ಬಗ್ಗುವುದಿಲ್ಲ. ಉಳಿದ ಆರು ಜನ ಅಕ್ಕಂದಿರು ಅವನು ಹೇಳಿದಂತೆ ಕೇಳುತ್ತಾರೆ. ಆದರೆ ಕಾವಲಮ್ಮ ಮಾತ್ರ ಅವನ ಮಾತನ್ನು ನಿರಾಕರಿಸುತ್ತಾಳೆ ಕಾವಲಮ್ಮನನ್ನು ಅಡಿ ಆಳಾಗುವಂತೆ ಕೇಳಿದಾಗ. ನಾನು ಶಿವನ ಮಗಳು ಯಾರಿಗೂ ಅಂಜೋಳಲ್ಲ, ಬೇಕಾದರೆ ನೀನೆ, ಆಳಾಗು ಕಾಡುಗೊಲ್ಲರಿಗೆ ಮರುಪ್ರಶ್ನೆ ಹಾಕುತ್ತಾಳೆ. ಅವನು ಏನೆ ಮಾಯ ಮಂತ್ರ ಮಾಡಿದರೂ ಕಾವಲಮ್ಮ ಅವನ ಪ್ರೀತಿಯನ್ನು ಸ್ವೀಕರಿಸುವುದಿಲ್ಲ. ಇಲ್ಲಿ ಬಲವಂತದಿಂದ ಕಾಡುಗೊಲ್ಲರನ್ನು ವೈಷ್ಣವೀಕರಿಸಿರುವುದು ಕಂಡುಬರುತ್ತದೆ. ನೀನು ಸೀರೆ ಕೊಡದಿದ್ದರು ಚಿಂತೆ ಇಲ್ಲ ಬಾಳೆಯ ಎಲೆ, ಉಗಣೆ, ಬಳ್ಳಿಯನ್ನು ಕಟ್ಟಿಕೊಂಡು ಮನೆಗೆ ಹೋಗುವುದಾಗಿ ಹೇಳುತ್ತಾಳೆ.

'ಬಾಳೆ ತಾಡಲು ಬಳ್ಳಿಯ ಹುಳಿಸಪ್ಪು

ಕಾಡುಗೊಲ್ಲರಿಗೆ ಅಡಿಗಾಗು॥ ಗೋಪಾಲಕ್ರಿಷ್ಣ' *(ಯಶೋಧಮ್ಮ ಮತ್ತು ಸಂಗಡಿಗರು ಹಾಡಿರುವ ಕಾವಲಮ್ಮನ ಕಾವ್ಯ)*

ಏಳು ಸಿರಿಧರಿ ಧರಿಸೆಳು ಕಾವಲವ ಎಂದು ಹೋಗುತ್ತಾಳೆ. ಅಲ್ಲಿಗೂ ಸುಮ್ಮನಿರದೆ ಶ್ರೀಕೃಷ್ಣ ಪೆಟ್ಟಿಗೆಯಲ್ಲಿ ಪಟ್ಟೆಯ ಸೀರೆಗಳಿವೆ, ಹಣೆಗೆ ಕುಂಕುಮ ಇಟ್ಟುಕೊಂಡು ಹೋಗು ಎಂದು ಹೇಳುತ್ತಾನೆ. ಹಣೆಯ ಮೇಲೆ ತಿಲಕ ಮತ್ತು ಪಟ್ಟೆ ಸೀರೆ ಹುಟ್ಟುಕೊಂಡು ಹೋಗುವುದಕ್ಕೆ ನಾನು ಮುಕ್ಕಣ್ಣೇಶ್ವರನ ಮಗಳು ಹಾಗಾಗಿ ಅದು ಸಾಧ್ಯವಿಲ್ಲ ಎಂದು ಹೇಳುತ್ತಾಳೆ. ಅಂದರೆ ಇಡೀ ವೈಷ್ಣವ ಪರಂಪರೆಯನ್ನು ಕಾವಲಮ್ಮ ನಿರಾಕರಿಸುತ್ತಾಳೆ.

೫.೨.೧. ಕಾವಲಮ್ಮನ ಪವಾಡಗಳು

ಕಾಡುಗೊಲ್ಲರು ಪ್ರತಿವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ. ನಾನು ಬೇಟಿಮಾಡಿದ್ದು ಅಕ್ಟೋಬರ್ ತಿಂಗಳಲ್ಲಿ. ಕಾವಲಮ್ಮನವಾರ ಶನಿವಾರ. ಈ ಜಾತ್ರೆಗೆ ಅನೇಕ ಊರುಗಳ ನೆಂಟರುಗಳು ಬಂದು

ಭಾಗವಹಿಸುತ್ತಾರೆ. ಅಲ್ಲಿ ನಡೆಯುವ ಆಚರಣೆಗಳು ಸಂಪ್ರದಾಯಗಳು ಇನ್ನೂ ಹಾಗೆಯೇ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಒಂದು ಕಡೆ ಆಧುನಿಕತೆಯಿಂದ ಜನರೆಲ್ಲ ಬದಲಾಗಿದ್ದರೂ ಅವರ ಆಚಾರ ವಿಚಾರಗಳಲ್ಲಿ ಹೇಳಿಕೊಳ್ಳುವಂತಹ ಬದಲಾವಣೆಯನ್ನು ಗುರುತಿಸಲು ಸಾಧ್ಯವಾಗಿಲ್ಲ ಎಂದೇ ಹೇಳಬೇಕಾಗುತ್ತದೆ.

ಕಾವಲಮ್ಮ ಪ್ರಮುಖವಾಗಿ ಕರಡಿಗೊಲ್ಲರ ದೇವತೆ. ಹಾಗಂದ ಮಾತ್ರಕ್ಕೆ ಅದು ಕೇವಲ ಕರಡಿಗೊಲ್ಲರಿಗೆ ಮಾತ್ರ ಸೀಮಿತವಾಗಿಲ್ಲ. ಆ ಹಟ್ಟಿಯಲ್ಲಿ ವಾಸವಾಗಿರುವ ಎಲ್ಲಾ ಬೆಡಗಿನವರು ಆ ದೇವತೆಗೆ ನಡೆದುಕೊಳ್ಳುತ್ತಾರೆ. ಅಲ್ಲಿ ಪ್ರಮುಖವಾಗಿ ಸನ್ನೆಗೊಲ್ಲರು, ಕರಡಿಗೊಲ್ಲರು, ಮೆರನಗೊಲ್ಲರು ಸೋಮನಗೊಲ್ಲರು, ಅಬ್ಬಗೊಲ್ಲರು, ಮಾರನಗೊಲ್ಲರು ಮುಂತಾದ ಬೆಡಗಿನವರು ವಾಸವಾಗಿದ್ದಾರೆ.

ಅಪರೂಪಕ್ಕೆಂಬಂತೆ ಆ ಹಟ್ಟಿಯಲ್ಲಿ ಒಂದೆರಡು ಕುರುಬರ ಮನೆಗಳಿರುವುದು ಕಂಡುಬಂದಿದೆ. ಆದರೆ ಅವುಗಳನ್ನು ನೋಡಿದರೆ ಕುರಬರ ಮನೆ ಎಂದು ಹೇಳಲಾಗುವುದಿಲ್ಲ. ಕುರುಬರ ಯಾವ ಆಚರಣೆಯನ್ನು ಸಂಪ್ರದಾಯಗಳನ್ನು ಅನುಸರಿಸದೆ ಸಂಪೂರ್ಣವಾಗಿ ಕಾಡುಗೊಲ್ಲರ ಸಂಸ್ಕೃತಿಯನ್ನು ಅನುಸರಿಸುತ್ತಿರುವುದು ಕಂಡುಬಂದಿದೆ. ಅದು ಗೊತ್ತಾದದ್ದು ಹೇಗೆಂದರೆ, ನಾನು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಕಾವಲಮ್ಮನ ಮೇಲೆ ಪದಗಳನ್ನು ಸಂಗ್ರಹ ಮಾಡಲು ಪದಗಾರ್ತಿಯಾದ ರಂಗಮ್ಮನನ್ನು ಹೇಳುವುದಕ್ಕೆ ಕರೆದುಕೊಂಡು ಬರಲು ಹೋದಾಗ ಅವರು ಮನೆಯಲ್ಲಿರಲಿಲ್ಲ. ತಮ್ಮ ಹೊಟ್ಟೆ ಪಾಡಿಗಾಗಿ ಕೂಲಿ ಹೋಗಿದ್ದುದರಿಂದ ಅಲ್ಲಿಯೇ ಪಕ್ಕದಲ್ಲಿದ್ದ ಮನೆಯಯವರನ್ನು ನೀವು ಯಾವ ಗೊಲ್ಲರು ಎಂದು ಕೇಳಿದಾಗ ಅವರು ನಾವು ಗೊಲ್ಲರಲ್ಲ ಕುರುಬರು ಎಂದು ಹೇಳಿದರು. ನನಗೆ ಆಶ್ಚರ್ಯವಾಯಿತು. ಏಕೆಂದರೆ ಗೊಲ್ಲರಹಟ್ಟಿಯ ಒಳಗೆ ಕುರುಬರ ಮನೆ ಇರುವುದು ಅಪರೂಪ. ಅಷ್ಟೆ ಅಲ್ಲ ಮದುವೆಯೊಂದನ್ನು ಬಿಟ್ಟು ಉಳಿದ ಎಲ್ಲಾ ಸಂಪ್ರದಾಯಗಳು ಕಾಡುಗೊಲ್ಲರ ರೀತಿಯೇ ನಡೆಯುತ್ತಿರುವುದು ವಿಶೇಷ. ಅಂದರೆ ಮದುವೆಯ ಶಾಸ್ತ್ರಗಳು ಗೊಲ್ಲರಂತೆ ಮಾಡುತ್ತೇವೆ ಎಂದು ಹೇಳುತ್ತಾರೆ. ಹೆಣ್ಣುಕೊಡುವುದು ತರುವುದು ಮಾತ್ರ ನಡೆಸಿಲ್ಲ ಎಂದು ಹೇಳುತ್ತಾರೆ. ಇದರ ಜೊತೆಗೆ ಗೊಲ್ಲರು ಯಾವ ರೀತಿಯ ಸೂತಕವನ್ನು ಆಚರಿಸುತ್ತಾರೋ ಹಾಗೆಯೇ ನಾವು ಋತುಮತಿಯಾದಾಗ ಮತ್ತು ಸಾವಿನ ಸಂದರ್ಭದಲ್ಲಿ ಹಟ್ಟಿಯಿಂದ ಹೊರಗೆ ಇರುತ್ತೇವೆ. ಕಾವಲಮ್ಮನನ್ನು ಆರಾಧ್ಯ ದೇವತೆಯಾಗಿ ಪೂಜಿಸುತ್ತೇವೆ ಎಂದು ಹೇಳುತ್ತಾರೆ. ಕಾಡುಗೊಲ್ಲರು ಯಾವುದೇ ತೊಂದರೆಯನ್ನು ನಮಗೆ ಕೊಡುವುದಿಲ್ಲ ಎಂದು ಹೇಳಿದರು. ಈ ಮೇಲಿನ ಅಭಿಪ್ರಾಯವನ್ನು ಗಮನಿಸಿದಾಗ ಹಿಂದೆ ಕಾಡುಗೊಲ್ಲರು ಮ್ಯಾಸಬೇಡರು, ಕುರುಬರು, ಒಕ್ಕಲಿಗರು ಒಂದು ಕಡೆ ನೆಲಸಿದ್ದರು ಎಂಬುದು ತಿಳಿಯುತ್ತದೆ. ಕಾಡುಗೊಲ್ಲರು ಮತ್ತು ಕುರುಬರು ಸಂಬಂಧಗಳು ಎಷ್ಟು ಗಟ್ಟಿಯಾಗಿವೆ ಎಂಬುದಕ್ಕೆ ಕಣ್ಣಾರೆ ಕಂಡ ಒಂದು ದೃಶ್ಯವನ್ನು ಹೇಳುವುದಾರೆ ನಾನು ಕ್ಷೇತ್ರಕಾರ್ಯಕ್ಕೆ ಹೋದಂತಹ ಸಮಯದಲ್ಲಿ ಕುರುಬರ ಮನೆಯಲ್ಲಿ ಒಂದು ಮದುವೆ ನಡೆಯಿತು. ಆ ಮದುವೆಯಲ್ಲಿ ಗಂಡಿನ ಮನೆಯ ಎಲ್ಲಾ ಕೆಲಸಗಳನ್ನು ಕಾಡುಗೊಲ್ಲರು ಮಾಡುವುದನ್ನು ನೋಡಿದ್ದೇನೆ. ಮದುವೆ ಚಪ್ಪರದಿಂದ ಹಿಡಿದು ಪ್ರತಿಯೊಂದು

ಕೆಲಸವನ್ನು ತಮ್ಮ ಮನೆಯ ಕೆಲಸವೆಂದು ಮಾಡುವುದನ್ನು ನೋಡಿದ್ದೇನೆ. ಮಾಹಿತಿದಾರರಾದ ಯಶೋಧಮ್ಮ ಹೇಳುವ ಪ್ರಕಾರ ಕಾವಲಮ್ಮ ಕಾಟಯ್ಯ ಚಿತ್ತಯ್ಯ ಮತ್ತು ಓಬಳಪತಿಯ ತಂಗಿಯಾಗಿದ್ದಾರೆ ಈ ನಾಲ್ವರು ಬೆಸ್ತರಹಳ್ಳಿ ಕಾವಲಿನಲ್ಲಿ ಹುಟ್ಟುತ್ತಾರೆ. ಈಕೆಯೆ ಗಂಗೆಮಾಳಮ್ಮನನ್ನು ಚಿತ್ರಯ್ಯಗೆ ಮದುವೆ ಮಾಡುತ್ತಾಳೆ ಎಂದು ಹೇಳುತ್ತಾರೆ.

೫.೨.೧.೧. ಕೊರವಂಜಿಯ ವೇಷದಲ್ಲಿ ಕಾವಲಮ್ಮ

ಚಿತ್ತಯ್ಯ ಬ್ರಾಹ್ಮಣರ ಕನ್ಯೆಯಾದ ಗಂಗೆ ಮಾಳಮ್ಮನನ್ನು ಇಷ್ಟಪಟ್ಟಾಗ ಆಕೆಯ ತಂದೆ ಬೊಮ್ಮಯ್ಯ ಕಾಡುಗೊಲ್ಲರಿಗೆ ಹೆಣ್ಣುಕೊಡಲು ಒಪ್ಪುವುದಿಲ್ಲ. ಆಗ ಕಾವಲಮ್ಮ ಕೊರವಂಜಿಯ ವೇಷ ಧರಿಸಿ ಬೊಮ್ಮಯ್ಯನಿಗೆ ಕಣಿ ಹೇಳುತ್ತಾಳೆ. ಅಂದರೆ ಕಾಡುಗೊಲ್ಲರು ಪವಿತ್ರರು ಹಾಗಾಗಿ ಗಂಗೆಮಾಳಮ್ಮಗೂ ಆತನಿಗೂ ಕಂಕಣ ಭಾಗ್ಯ ಕೂಡಿ ಬಂದಿದೆ. ಒಂದು ವೇಳೆ ಮದುವೆ ಮಾಡದಿದ್ದರೆ. ಇಡೀ ಬೆಸ್ತರಹಳ್ಳಿ ಪ್ಲೇಗು ಕಾಯಿಲೆ ಬಂದು ಸಾಯುತ್ತದೆ. ನಿನ್ನ ಹೆಂಡತಿ ಮಕ್ಕಳನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ. ಎಂದು ಕಣಿ ಹೇಳಿದಾಗ ಬೊಮ್ಮಯ್ಯ ಚಿತ್ತಯ್ಯನಿಗೆ ಮಗಳನ್ನು ಕೊಟ್ಟು ಮದುವೆ ಮಾಡುತ್ತಾನೆ. ಈ ಅಂಶವನ್ನು ಗಮನಿಸಿದರೆ ಕಾವಲಮ್ಮ ಗೌರಸಮುದ್ರದ ಮಾರಮ್ಮನ ಅವತಾರವಿರಬೇಕು. ಏಕೆಂದರೆ ಕಾಡುಗೊಲ್ಲರ ಎಲ್ಲಾ ಕಾವ್ಯಗಳಲ್ಲಿ ಗೌರಸಮುದ್ರದ ಮಾರಮ್ಮ ಮಾತ್ರ ಬರುತ್ತಾಳೆ. ಆದರೆ ಚಿತ್ರದೇವರ ಸೃಷ್ಟಿಪುರಾಣದಲ್ಲಿ ಮಾತ್ರ ಬರುವುದಿಲ್ಲ ಹಾಗಾಗಿ ಮಾಹಿತಿದಾರರು ಗೌರಸಮುದ್ರದ ಮಾರಮ್ಮನ ಜಾಗದಲ್ಲಿ ಕಾವಲಮ್ಮನ್ನ ತಂದಿದ್ದಾರೆನೊ ಎಂಬ ಭಾವನೆ ಉಂಟಾಗುತ್ತದೆ.

೫.೨.೧.೨. ಮಿಡಿಗೇಶಿ ಊರು ನಾಶಮಾಡಿದ್ದು

ಮಿಡಿಗೇಶಿ ಎಂಬುದು ಲಿಂಗಾಯಿತರ ಊರು. ಆ ಊರಿಗೆ ಕಾವಲಮ್ಮ ಕೊರವಂಜಿಯಾಗಿ ಭಿಕ್ಷೆಬೇಡಲು ಹೋದಾಗ ಆ ಊರಿನ ಕಲ್ ಕಟ್ಟಿದ ಲಿಂಗಾಯಿತರು ಈಕೆಗೆ ಭಿಕ್ಷೆ ನೀಡದೆ ಚಿತ್ರ ಹಿಂಸೆ ಕೊಟ್ಟು ಕಳುಹಿಸುತ್ತಾರೆ. ಆಗ ಕೋಪಗೊಂಡ ಕಾವಲಮ್ಮ ಆ ಊರಿನಲ್ಲಿ "ಹೆಣ್ಣು ಹುಟ್ಟ ಬಾರದು ಗಂಡುಬೆಳಿಬಾರದು" ಎಂದು ಶಾಪ ಕೊಡುತ್ತಾಳೆ. ಅಷ್ಟೇ ಅಲ್ಲ ಆ ಊರು ಹಾಳಾಗಿ ಹೋಗಲಿ ಎಂದು ಶಾಪಹಾಕಿ ಊರಿನ ಹೆಬ್ಬಾಗಿಲಿಗೆ ಕಳ್ಳಿ ಬಡಿಯುತ್ತಾಳೆ. ಈಗಲೂ ಸಹ ಆ ಊರು ಹಾಳು ಬಿದ್ದಿರುವುದನ್ನು ನೋಡಬಹುದು.

೫.೨.೧.೩. ಢಮರುಗ ಕದಿಯುವುದು

ಕಾವಲಮ್ಮ ತನ್ನ ತಂದೆಯಾದ ಶಿವನನ್ನು ನೋಡಲೆಂದು ಸಿದ್ದರ ಬೆಟ್ಟಕ್ಕೆ ಹೋಗಿರುತ್ತಾಳೆ. ಆ ಸಮಯದಲ್ಲಿ ಶಿವನು ಸುದೀರ್ಘವಾದ ತಪಸ್ಸಿಗೆ ಕುಳಿತಿರುತ್ತಾನೆ. ಆಗ ಅವನನ್ನು ಮಾತನಾಡಿಸಲು ಆಗುವುದಿಲ್ಲ. ಆ ಕಾರಣದಿಂದ ಅವನ ಬಳಿ ಇರುವ ಡಮರುಗವನ್ನು ಕದ್ದು ತರುತ್ತಾಳೆ. ತಪಸ್ಸಿನಿಂದ ಎಚ್ಚರಗೊಂಡು ಶಿವ ಡಮರುಗವನ್ನು ಹುಡುಕುತ್ತಾನೆ. ಅದು ಸಿಗುವುದಿಲ್ಲ. ಆಗ ಮೂರನೆ ಕಣ್ಣು ತೆರೆಯುತ್ತಾಳೆ. ಬೆಂಕಿ ಕಿಡಿಗಳು ಹೊರಬರುತ್ತವೆ. ಅವನ ಉಗ್ರರೂಪವನ್ನು ನೋಡಿ ಅವನ

ಢಮರುಗವನ್ನು ಅವನಿಗೆ ಕೊಟ್ಟು ಇನ್ನು ಮುಂದೆ ಸಿದ್ದರ ಬೆಟ್ಟಕ್ಕೆ ಬರುವುದಿಲ್ಲ ಎಂದು ಮಾತುಕೊಟ್ಟು ಬರುತ್ತಾಳೆ. ಅಂದಿನಿಂದ ಇಂದಿನವರೆಗೆ ಆಕೆಯ ಭಕ್ತರು ಅಂದರೆ ಕರಡಿಗೊಲ್ಲರು ಸಿದ್ದರ ಬೆಟ್ಟಕ್ಕೆ ಕಾವಲಮ್ಮನನ್ನು ತೆಗೆದುಕೊಂಡು ಹೋಗುವುದಿಲ್ಲ. ಇದರಿಂದಾಗಿ ಕಾವಲಮ್ಮನಿಗೂ ಶಿವನಿಗೂ ಜಗಳವಾದ ಕಾರಣದಿಂದ ಅಲ್ಲಿ ವಾಸವಾಗಿರುವ ಜನರು ಈ ದೇವತೆ ಭಕ್ತರನ್ನು ಕಳ್ಳರಂತೆ ಕಾಣುತ್ತಾರೆ.

೫.೨.೧.೪.ಸಿರಾದ ತುರುಕರನ್ನು ನಾಶಮಾಡಿದ್ದು

ಕಾವಲಮ್ಮ ಅನೇಕ ಪವಾಡಗಳಲ್ಲಿ ಇದೂ ಒಂದು. ಕಾಡುಗೊಲ್ಲರು ಪಶುಪಾಲಕರಾಗಿರುವ ಕಾರಣದಿಂದ ತಮ್ಮ ದನಗಳಿಗೆ ನೀರು ಕುಡಿಸಲೆಂದು ಸಿರಾದ ಕೆರೆಗೆ ಹೋದಾಗ, ತುರುಕರ ಕಣ್ಣು ಇವರ ದನಗಳ ಮೇಲೆ ಬೀಳುತ್ತದೆ. ಇದರಿಂದ ಭಯ ಭೀತರಾದ ಕಾಡುಗೊಲ್ಲರು ತಮ್ಮ ಆರಾಧ್ಯ ದೇವತೆಯಾದ ಕಾವಲಮ್ಮನ ಮೊರೆ ಹೋಗುತ್ತಾರೆ. ಆಗ ಕಾವಲಮ್ಮ ಅವರಿಗೆ ದನಗಳನ್ನು ಕಾಪಾಡುವುದಾಗಿ ಮಾತುಕೊಡುತ್ತಾಳೆ. ತುರುಕರು ದನಗಳ ಮೇಲಿನ ಆಸೆಯಿಂದ ಹಟ್ಟಿಗೆ ನುಗ್ಗಿ ದನಗಳನ್ನು ಮತ್ತು ಹಟ್ಟಿಯ ಒಳಗೆ ಇರುವ ಗುಡಿಯನ್ನು ನೋಡಿ ಬಂಗಾರದ ಒಡವೆ ಇರಬಹುದೆಂದು ಆಸೆ ಪಟ್ಟು ಗುಡಿಯ ಬಾಗಿಲನ್ನು ತೆರೆದು ನೋಡಿದಾಗ ತುರುಕರಿಗೆ ಕಣ್ಣು ಕಾಣದಂತಾಗಿ ರಕ್ತಕಾರಿಕೊಂಡು ಸತ್ತು ಹೋದರು. ಹಾಗಾಗಿ ತುರುಕರ ಹೆಂಡತಿಯರು ತಮ್ಮ ಕೈ ಬಳೆ ಒಡೆದುಕೊಂಡು ವಿಧವೆಯರಾದರು. ಈಗಲು ಸಹ ಕೆಲವು ಮುಸ್ಲಿಮರು ಈ ದೇವರಿಗೆ ಮೀಸಲು ಕಟ್ಟಿಕೊಳ್ಳುವುದನ್ನು ನೋಡಬಹುದು.

೫.೨.೨. ಕಾವಲಮ್ಮನ ಜಾತ್ರೆಯ ಆಚರಣೆಗಳು ಮತ್ತು ಸಂಪ್ರದಾಯಗಳು

೫.೨.೨.೧. ಬಿಳಿಸೀರೆ ಉಡುವುದು

ಇದೊಂದು ವಿಶೇಷವಾದ ಸಂಪ್ರದಾಯ. ಕೆಲ ಸಮುದಾಯಗಳಲ್ಲಿ ವಿಧವೆಯರು ಬಿಳಿ ಸೀರೆ ಉಡುವುದನ್ನು ಗಮನಿಸಿದ್ದೇನೆ, ಆದರೆ ಕಾಡುಗೊಲ್ಲರಲ್ಲಿ ಮೊದಲಿನಿಂದಲೂ ವಿಧವೆ ಆಚರಣೆ ಜಾರಿಯಲ್ಲಿಲ್ಲ ಕಾವಲಮ್ಮನ ಜಾತ್ರೆಯಲ್ಲಿ ಕರಡಿಗೊಲ್ಲರ ಮನೆಗೆ ತರುವ ಹೆಣ್ಣು ಮಕ್ಕಳು ಗಂಡನಿದ್ದರೂ ಬಿಳಿ ಸೀರೆ ಉಡುತ್ತಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ "ಸೊಸ್ತೆರು ಜಾತ್ರೆ ದಿನ ಯಾವುದೇ ಕಾರಣಕ್ಕೂ ಬಿಳಿಯ ಸೀರೆಯನ್ನು ಹೊರತು ಪಡಿಸಿ ಬೇರೆ ಬಣ್ಣದ ಸೀರೆಯನ್ನು ಉಡುವಂತಿಲ್ಲ" ಏಕೆ ಈ ರೀತಿಯ ಸಂಪ್ರದಾಯ ಆಚರಣೆಯಲ್ಲಿದೆ ಎಂದು ಕೇಳಿದಾಗ ಅದಕ್ಕೆ ಅವರಲ್ಲಿ ಉತ್ತರವಿಲ್ಲ. ಹಿಂದೆ ಮದುವೆಯಾದಾಗಿನಿಂದ ಸಾಯುವವರೆಗೆ ಬಿಳಿ ಸೀರೆಯನ್ನು ಉಡುತ್ತಿದ್ದರು. ಆದರೆ ಇತ್ತೀಚಿಗೆ ನಾಜೂಕಿನ ಕಾಲ ಬಂದು ವರ್ಷದಲ್ಲಿ ಅಥವಾ ವಾರದಲ್ಲಿ ಒಂದು ದಿನ ಅದರಲ್ಲೂ ಶನಿವಾರದ ದಿನವಾದರೂ ಬಿಳಿ ಸೀರೆ ಉಡಬೇಕೆಂದು ಹೇಳುತ್ತಾರೆ. ಇದರ ಜೊತೆಗೆ ಹಿಂದೆ ನಡೆದ ಪವಾಡಗಳನ್ನು ಬಣ್ಣಿಸುತ್ತಾರೆ. ಯಾರಾದರೂ ಬಣ್ಣದ ಸೀರೆ ಉಟ್ಟುಕೊಂಡರೆ ಜಾತ್ರೆ ಮುಗಿಯುವುದರೊಳಗಾಗಿ ಸೀರೆಗೆ ಬೆಂಕಿಬಿದ್ದು ಸುಟ್ಟು ಹೋಗುತ್ತದೆ ಎಂಬ ಮೂಢನಂಬಿಕೆ ಅವರಲ್ಲಿದೆ.

೫.೨.೨.೨. ಹೂವು ಮುಡಿಯುವದು ನಿಷೇಧ

ಕಾವಲಮ್ಮನಿಗೆ ಸೊಸೆಯರಾಗುವವರು ಯಾವುದೇ ಕಾರಣಕ್ಕೂ ತಲೆಗೆ ಹೂವು ಮುಡಿಯುವಂತಿಲ್ಲ ನನಗೆ ಇಲ್ಲದ ಹೂವು ನಿನಗೆ ಏಕೆ? ಎಂದು ಕಾವಲಮ್ಮ ಪ್ರಶ್ನೆ ಮಾಡುತ್ತಾಳೆ ಒಂದು ವೇಳೆ ತಾಯಿ ಕಾವಲಮ್ಮನ ಮಾತು ಮೀರಿ ತಲೆಗೆ ಹೂವು ಮುಡಿದದ್ದೇ ಆದರೆ ಕಾವಲಮ್ಮ ಅವರ ಜಡೆಯನ್ನು ಕತ್ತರಿಸುತ್ತಾಳೆ ಎಂಬ ಮೂಢನಂಬಿಕೆ ಅವರಲ್ಲಿದೆ. ಆ ಕಾರಣದಿಂದ ಇಂದೂ ಕೂಡ ಕಾವಲಮ್ಮನಿಗೆ ಸೊಸೆಯಾಗುವ ಹೆಣ್ಣು ಮಕ್ಕಳು ಯಾರು ತಲೆಗೆ ಹೂವು ಮುಡಿಯುವುದಿಲ್ಲ.

ಈ ಎರಡು ಆಚರಣೆಯನ್ನು ಗಮನಿಸಿದರೆ ಇದು ಪುರುಷ ಪ್ರಧಾನ ವ್ಯವಸ್ಥೆಯು ಹುಟ್ಟು ಹಾಕಿರುವ ಪದ್ಧತಿಯಾಗಿದೆ. ತಮ್ಮ ಹೆಂಡತಿಯರು ಬಣ್ಣದ ಸೀರೆಯುಟ್ಟು ತಲೆ ತುಂಬ ಹೂವು ಮುಡಿದರೆ ಸುಂದರವಾಗಿ ಕಾಣುತ್ತಾರೆ ಹಾಗಾಗಿ ಅವರ ಮೇಲೆ ಪರ ಪುರುಷರ ಕಣ್ಣು ಬೀಳುತ್ತದೆ. ಇದನ್ನು ತಡೆಯಲು ಈ ರೀತಿಯ ಆಚರಣೆಯನ್ನು ಬೆಳಕಿಗೆ ಬಂದಿರುವಂತಿದೆ.

೫.೨.೨.೩. ತುಪ್ಪದ ಆರತಿ ಬೆಳಗುವುದು

ಕಾವಲಮ್ಮ ಜಲಧಿಗೆ ಹೋಗಿ ಬರುವುದರೊಳಗಾಗಿ ಪ್ರತಿಯೊಂದು ಮನೆಯಲ್ಲಿಯೂ ತುಪ್ಪದ ಆರತಿ ತಯಾರು ಮಾಡಿಕೊಂಡಿರಬೇಕು. ದೇವರು ಉದಿ ಬಾಗಿಲಿಗೆ ಬಂದ ನಂತರ ಎಲ್ಲರೂ ತುಪ್ಪದ ಆರತಿಯನ್ನು ಬೆಳಗುವುದರ ಮೂಲಕ ಹಟ್ಟಿಯ ಒಳಗೆ ಕರೆದುಕೊಂಡು ಹೋಗಬೇಕು. ಕಾಡುಗೊಲ್ಲರ ಪ್ರತಿಯೊಂದು ದೇವರಿಗೂ ದೃಷ್ಟಿ ತೆಗೆಯುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು. ಕೆಲವು ದೇವರುಗಳಿಗೆ ಹಿಟ್ಟಿನ ಆರತಿಯನ್ನು ಬೆಳಗುತ್ತಾರೆ.

೫.೨.೨.೪.ಉರುಳು ಸೇವೆ

ಇದು ಸಾಮಾನ್ಯವಾಗಿ ಬುಡಕಟ್ಟು ಆಚರಣೆಯಲ್ಲ. ಇದು ಶಿಷ್ಟ ಸಮುದಾಯದಿಂದ ಬಂದು ಸೇರಿಕೊಂಡಿರಬಹುದು. ತಮಗೆ ಬಂದಿರುವ ಕಷ್ಟಗಳು ಪರಿಹಾರವಾದರೆ ಉರುಳು ಸೇವೆ ಮಾಡುತ್ತೇವೆಂದು ಹರಕೆ ಹೊತ್ತುಕೊಂಡಿರುತ್ತಾರೆ. ಈ ಹರಕೆಯನ್ನು ನೆರವೇರಿಸಲು ಬೆಳಿಗ್ಗೆಯಿಂದ ಉಪವಾಸ ವ್ರತವನ್ನು ಕೈಗೊಂಡು ಮೈತುಂಬ ನೀರು ಸುರಿದುಕೊಂಡು ದೇವಸ್ಥಾನದ ಬಯಲಿನಲ್ಲಿ ಉರುಳುತ್ತಾರೆ.

೫.೨.೨.೫. ಜವುಳ ತೆಗೆಸುವುದು

ಕಾವಲಮ್ಮ ಶಕ್ತಿ ದೇವತೆಯಾದುದರಿಂದ ಆ ಭಾಗದ ಜನರು ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಮಕ್ಕಳ ಕೂದಲನ್ನು ಈ ದೇವತೆಯ ಹೆಸರು ಹೇಳಿ ಬಿಡುತ್ತಾರೆ. ಜಾತ್ರೆಯ ಸಮಯದಲ್ಲಿ ಪೂಜಾರಿಯ ಸಮ್ಮುಖದಲ್ಲಿ ಸೋದರ ಮಾವನು ಪೂಜಾರಿ ವೀಳ್ಯದೆಲೆಯಲ್ಲಿ ಮಡಚಿಕೊಟ್ಟಿರುವ ಕೂದಲನ್ನು ಕತ್ತರಿಯಿಂದ ಕತ್ತರಿಸುತ್ತಾರೆ. ಕೂದಲು ತೆಗೆಸುವವರು ಪೂಜಾರಿಗೆ ಒಂದು ಸೇರು ಬೇಳೆ ಒಂದು ಅಚ್ಚುಬೆಲ್ಲ ಎಲೆ, ಅಡಿಕೆ ಕೊಡತಕ್ಕದ್ದು. ಇದರ ಜೊತೆಗೆ ಪೂಜಾರಿಗೆ ಒಂದು ಜೊತೆ ಹೊಸ ಬಟ್ಟೆಯನ್ನು ಕೊಡಬೇಕಾಗುತ್ತದೆ.

೫.೨.೨.೬. ಹರಕೆ ತೀರಿಸುವುದು

ಗಂಡು ಮಗುವಾದರೆ ಮಗುವಿನ ತೂಕದ ಬೆಲ್ಲ ಇಲ್ಲವೆ ಹೂವು ಕೊಡುತ್ತೇವೆಂದು ಬೇಡಿಕೊಂಡಿರುತ್ತಾರೆ. ಈ ಹರಕೆಯನ್ನು ಜಾತ್ರೆಯ ಸಮಯದಲ್ಲಿ ನೆರವೇರಿಸುತ್ತಾರೆ. ಮಕ್ಕಳಿಗೆ ಕಾಯಿಲೆ ಬಂದಂತಹ ಸಮಯದಲ್ಲಿ ಬೆಲ್ಲ, ಇಲ್ಲವೆ ಹಣ್ಣು ಹೂವು ತೆಂಗಿನ ಕಾಯಿ ರೂಪದಲ್ಲಿ ತೂಕವನ್ನು ಹಾಕಿಸುತ್ತಾರೆ.

೫.೨.೨.೭. ಮಡಿಲು ತುಂಬುವ ಶಾಸ್ತ್ರ

ಜಾತ್ರೆಗೆಂದು ಬಂದ ಮನೆಯ ಹೆಣ್ಣು ಮಕ್ಕಳು ತವರು ಮನೆಯಿಂದ ಬರಿಕೈಲಿ ಹೋಗುವಂತಿಲ್ಲ. ತವರು ಮನೆಯವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹೊಸ ಸೀರೆ ತಂದು ಮಗಳಿಗೆ ಉಡುಸುವರು. ಮನೆಯ ಮನೆಯ ತೊಲೆಯ ಕೆಳಗೆ ಕೂರಿಸದೆ ಕರಿಯ ಕಂಬಳಿಯನ್ನು ಹಾಸಿ ಅದರ ಮೇಲೆ ಪೂರ್ವ ದಿಕ್ಕಿಗೆ ಮುಖಮಾಡಿ ಕುಳ್ಳರಿಸುವರು. ನಂತರ ಮೂರು ಎಲೆ ಮೂರು ಅಡಿಕೆ ಇಟ್ಟು ಮತ್ತು ಅವರ ಹಣೆಗೆ ಕುಂಕುಮವಿಟ್ಟು ಮಡಿಲಕ್ಕಿ ತುಂಬುತ್ತಾರೆ ಮತ್ತೆ ಮೂರು ಹಿಡಿ ಅಕ್ಕಿಯನ್ನು ಹಾಕಿ ಹಿಂದಕ್ಕೆ ತೆಗೆದುಕೊಳ್ಳುತ್ತಾರೆ. ಮಡಿಲು ತುಂಬಿಸಿಕೊಂಡ ಆ ಹೆಣ್ಣು ತಂದೆ ತಾಯಿಯ ಕಾಲಿಗೆ ನಮಸ್ಕರಿಸಿ ನಂತರ ಮನೆಯ ದೇವರಿಗೆ ಪೂಜೆ ಮಾಡುತ್ತಾಳೆ.

ಈ ದೇವರ ಜಾತ್ರೆಗೆ ತಮ್ಮ ಊರಿನ ಸುತ್ತ ಮುತ್ತಲಿನ ಊರುಗಳಾದ ಈರ್ಗಾನಹಳ್ಳಿ ಮದುಡಿ, ರೊಳ್ಳೆ ದಾಸರಹಳ್ಳಿ ಇವುಗಳ ಜೊತೆಗೆ ಯಾವ ಊರಿಗೆ ಅಥವಾ ಊರಿನಿಂದ ಸಂಬಂಧ ಬೆಳೆಸುತ್ತಾರೋ ಆಯಾ ಊರುಗಳಿಂದ ಬಂಧು ಬಳಗದವರು ಬಂದಿರುತ್ತಾರೆ. ಅನೇಕ ಅಂಗಡಿಗಳು ಇಲ್ಲಿರುತ್ತವೆ, ಅಲ್ಲಿ ನೆರೆದಿರುತ್ತವೆ. ರಾತ್ರಿ ಎಂಟುಗಂಟೆ ಸುಮಾರಿಗೆ ದಾಸೋಹ ನಡೆಯುತ್ತದೆ.

೫.೨.೨.೮. ದಾಸೋಹ

ಈ ಪರಿಕಲ್ಪನೆಯು ಶೈವ ಧರ್ಮದ ಕುರುಹು. ಕಾಡುಗೊಲ್ಲರು ವೈಷ್ಣವೀಕರಣಗೊಂಡ ಕಾರಣದಿಂದ ಹರಿಸೇವೆ ಅವರ ಆಚರಣೆಯಲ್ಲಿ ಬಂದಿದೆ. ಹಿಂದೆ ಹರಿಸೇವೆಗೆ ಬದಲಾಗಿ ಪರವು ಎಂಬ ಪರಿಕಲ್ಪನೆ ಜಾರಿಯಲ್ಲಿತ್ತು. ಪರುವು ಎಂದರೆ ದೇವರ ಗುಡಿಯಲ್ಲಿ ಪಾಯಸ, ಅನ್ನ, ಸಾರು ಮಾಡಿ ಬಂದಿರುವ ಎಲ್ಲಾ ಕಾಡುಗೊಲ್ಲರಿಗೂ ಊಟಕ್ಕೆ ಬಡಿಸುತ್ತಿದ್ದರು. ಇದರ ಉದ್ದೇಶ ಇಷ್ಟೆ ದೂರದಿಂದ ಬಂದ ಭಕ್ತರು ಊಟಕ್ಕಾಗಿ ಮನೆ ಮನೆಗೆ ಅಲೆಯುವುದು ಬೇಡ ಎಂಬ ಕಾರಣಕ್ಕಾಗಿ ಹುಟ್ಟಿಕೊಂಡ ಈ ಪರಿಕಲ್ಪನೆ ಹನ್ನೆರಡನೆಯ ಶತಮಾನದಲ್ಲಿ ಪ್ರಸಾದದ ರೂಪ ಪಡೆಯಿತು. ಕಾಡುಗೊಲ್ಲರು ಪ್ರತಿಯೊಂದು ದೇವರ ಹೆಸರಿನಲ್ಲೂ ಪ್ರಸಾದ ಮಾಡುತ್ತಾರೆ.

೫.೨.೨.೯. ದೇವರಕುಣಿತ

ಕಾಡುಗೊಲ್ಲರು ಕುಣಿಯುವ ರೀತಿಯಲ್ಲಿ ಬೇರೆ ಯಾವ ಸಮುದಾಯವು ಕುಣಿಯುವುದಿಲ್ಲ. ಇವರಿಗೆ ದೇವರೆಂದರೆ ಎಲ್ಲಿಲ್ಲದ ಖುಷಿ. ಕೆಲವು ಊರುಗಳಲ್ಲಿ ರಾತ್ರಿ ೧೦ ಗಂಟೆಗೆ ಕುಣಿಯುವುದಕ್ಕೆ ಪ್ರಾರಂಭಿಸಿ ಸೂರ್ಯ ಮೂಡುವ ವರೆಗೆ ಕುಣಿಯುತ್ತಾರೆ. ಕುಣಿತಕ್ಕೆ ಅವರದ್ದೆ ಆದ ಲಯವಿರುತ್ತದೆ.

ಆದರೆ ಈ ಊರಿನಲ್ಲಿ ದೇವರನ್ನು ಹೊತ್ತುಕೊಂಡು ಕುಣಿಯುವವರು ಕಡಿಮೆ ಇರುವುದರಿಂದ ಮಧ್ಯರಾತ್ರಿ ಕುಣಿತ ಪ್ರಾರಂಭವಾಗಿ ಬೆಳಿಗ್ಗೆ ಸೂರ್ಯ ಮೂಡುವುದರೊಳಗಾಗಿ ದೇವರನ್ನು ಗುಡಿ ತುಂಬಿಸುತ್ತಾರೆ.

ಕಾವಲಮ್ಮನ ಮೇಲೆ ಕಾಡುಗೊಲ್ಲರಿಗೆ ಯಾಕಷ್ಟು ಭಕ್ತಿ ಎಂದರೆ, ಕಾವಲಮ್ಮನಿಗೆ ಸರಿಯಾಗಿ ನಡೆದುಕೊಂಡರೆ ಕೇಳಿದ್ದನ್ನು ಕೊಡುವ ಕಾಮಧೇನು ಇದ್ದಂತೆ. ತನ್ನ ಭಕ್ತರಿಗೆ ಯಾವುದೇ ಕಷ್ಟ ಬಂದರೂ ಪರಿಹರಿಸುತ್ತಾಳೆ ಎಂಬ ನಂಬಿಕೆ ಇದೆ. ಕಾಲಕ್ಕೆ ಸರಿಯಾಗಿ ಮಳೆ ಬೆಳೆ ಆಗುವಂತೆ. ಮಾಡುತ್ತಾಳೆ. ಅಷ್ಟೆ ಅಲ್ಲ ಮಾಟ ಮಂತ್ರ ಮಾಡುವುದನ್ನು ನೋಡಿ ಸಹಿಸಿಕೊಳ್ಳುವುದಿಲ್ಲ.

"ಕಾವಲಮ್ಮನ ಸ್ಥಳ ಗುಡಿಶಿಲ್ಪದ ಹತ್ತಿರ ಬೆಟ್ಟದಲ್ಲಿ ಸಿದ್ದಯ್ಯನ ಗುಡಿ ಇದೆ. ಅದರೊಳಗೆ ಮತ್ತೊಂದು ಕೋಣೆಯಲ್ಲಿ ಸ್ತ್ರೀ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ವಿಗ್ರಹವು ಕಪ್ಪು ಕಲ್ಲಿನಿಂದ ಆಗಿದೆ ಕೈಮುಗಿದು ನಿಂತಿರುವ ಈಕೆ ಕಾವಲಮ್ಮ ಎಂದು ಹೇಳುತ್ತಾರೆ." *(ರಂಗಲಕ್ಷ್ಮಿ.ಪಿ.ವಿ. 'ಪಾವಗಡ ತಾಲೂಕಿನ ಜಾನಪದ ವೀರ ನಾಯಕರು', ಪುಟ ೭೯, ೨೦೦೫)*

"ಸಿದ್ದಯ್ಯನ ತಂಗಿಯಂತಿರುವ ಈಕೆಯು ಹುತ್ತದಲ್ಲಿ ಹುಟ್ಟಿ ಕಾಡಲ್ಲಿ ಬೆಳೆದು ದೇವತೆಯಾಗಿ ಅಲೆದಳು. ಕೊನೆಗೆ ತನ್ನಣ್ಣ ಸಿದ್ದಯ್ಯನ ನೆರಳಲ್ಲಿ ತಾನು ಈಗ ಸುಖವಾಗಿರುವಳು. ಈಕೆಯು ಮೊದಲ ಪೂಜೆಯನ್ನು ಪಡೆದುಕೊಳ್ಳುತ್ತಿದ್ದಾಳೆ. ಎಂದು ಪೂಜಾರಿ ಜ್ವಾಗಪ್ಪ ಹೇಳುತ್ತಾರೆ. ಈಕೆಗೆ ಕಾಡುಗೊಲ್ಲ ಜನಾಂಗದ ಜನಾಂಗದ ಎಲ್ಲಾ ಹೆಣ್ಣು ಮಕ್ಕಳು ಪೂಜೆಮಾಡುತ್ತಾರೆ. ಈಕೆಯ ಹೆಸರನ್ನು ತಮ್ಮ ಮಕ್ಕಳಿಗೆ ಇಡುತ್ತಾರೆ." *(ರಂಗಲಕ್ಷ್ಮಿ.ಪಿ.ವಿ. 'ಪಾವಗಡ ತಾಲೂಕಿನ ಜಾನಪದ ವೀರ ನಾಯಕರು', ಪುಟ ೭೯, ೨೦೦೫)*

ಸಿದ್ದಯ್ಯನಿಗೆ ಪೂಜೆ ನಡೆಯುವ ಎಲ್ಲಾ ದಿನಗಳಲ್ಲಿಯೂ ಈಕೆಗೆ ಪೂಜೆ ನಡೆಯುವುದು. ಹೆಣ್ಣು ಮಕ್ಕಳು ಸೀರೆ ಕುಪ್ಪಸವನ್ನು ಉಡಿಸಿ ಪೂಜಿಸುವರು. ಈಕೆಯನ್ನು ಪೂಜಿಸದಿದ್ದರೆ ತಮಗೆ ಸಂತಾನ ಭಾಗ್ಯ ವಿರುವುದಿಲ್ಲ ಎಂಬ ನಂಬಿಕೆ ಇರುವುದನ್ನು ಕಾಣಬಹುದು. *(ರಂಗಲಕ್ಷ್ಮಿ, ಪಿ.ವಿ. 'ಪಾವಗಡ ತಾಲೂಕಿನ ಜಾನಪದ ವೀರ ನಾಯಕರು', ಪುಟ ೭೯-೮೦, ೨೦೦೫)*

ಒಟ್ಟಾರೆಯಾಗಿ ಹೇಳುವುದಾದರೆ ಜನಪದರ ಬದುಕು ಯಾವತ್ತು ಜನಪರವಾಗಿರುತ್ತದೆ. ಮತ್ತು ಸಮಷ್ಠಿಯಿಂದ ಕೂಡಿರುತ್ತದೆ. ಕಾವಲಮ್ಮನ ಕಾವ್ಯವನ್ನು ಗಮನಿಸಿದರೆ ಆಕೆ ಹೇಳುವ ಮೌಲ್ಯಗಳೂ ಜನಪರವಾದ ಕಾಳಜಿಯನ್ನು ಹೊಂದಿರುವುದರ ಜೊತೆಗೆ, ಇಂದಿನ ನಮ್ಮ ಬದುಕಿಗೆ ಪೂರಕವಾದದ್ದಾಗಿದೆ. ಯಾರಿಗೂ ತೊಂದರೆ ಕೊಡದೆ ಬದುಕಿದರೆ ಅದಕ್ಕಿಂತ ಮುಖ್ಯವಾದುದು ಯಾವುದು ಇಲ್ಲ. ಎಂಬುದನ್ನು ಈ ಕಾವ್ಯ ನಿರೂಪಿಸುತ್ತದೆ. ಒಂದು ದುರಂತವೆಂದರೆ ಈ ಕಾವ್ಯ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿದೆ. ಅದನ್ನು ಎಲ್ಲಾ ಸಮುದಾಯಗಳಿಗೂ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇಂತಹ ಸಮಸ್ಯೆಯನ್ನು ನಮ್ಮ ಬುಡಕಟ್ಟು ಕಾವ್ಯಗಳು ಎದುರಿಸುತ್ತಿವೆ.

೫.೩. ಗೊಲ್ಲಳಮ್ಮ ಅಥವಾ ದ್ಯಾಮವ್ವನ ಸೃಷ್ಟಿ ಪುರಾಣ

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಚಿತ್ತಮುತ್ತಿ ಸನ್ನಮುತ್ತಿ, ಬಾಲಮುತ್ತಿ ಮತ್ತು ಗೋಪಾಲಮುತ್ತಿ ಇವರ ಜೊತೆಗೆ ಹನ್ನೆರಡು ಕುಲಕಸಬಿನ ಜನರು ತುಂಗಭದ್ರ ನದಿಯನ್ನು ದಾಟಿ

ಬರುವ ಸಮಯದಲ್ಲಿ ಬಹುಮನಿ ಸುಲ್ತಾನರ ಸೇನೆ ಹತ್ತಿರಕ್ಕೆ ಬರುತ್ತದೆ. ಆಗ ಒಕ್ಕಲಿಗರ ಸಾಂಸ್ಕೃತಿಕ ನಾಯಕನಾದ ಜಲದಿಬಪ್ಪರಾಯ ಗಂಗಮ್ಮ ದಾರಿ ಬಿಟ್ಟರೆ ತಲೆಕೊಡುವುದಾಗಿ ಪ್ರಾರ್ಥಿಸುತ್ತಾನೆ. ಆಗ ತುಂಗಭದ್ರ ನದಿ ದಾರಿ ಮಾಡಿಕೊಡುತ್ತದೆ. ಎಲ್ಲರೂ ಬಂದ ತಕ್ಷಣ ಗಂಗಮ್ಮ ಮೊದಲಿನ ರೀತಿಯಲ್ಲಿಯೇ ಕೂಡಿಕೊಳ್ಳುತ್ತಾಳೆ. ಮುಸ್ಲಿಮರ ಸೈನ್ಯಕ್ಕೆ ಕಾಡುಗೊಲ್ಲರ ಹೆಣ್ಣು ಶಿಸು ದೊರೆಯುತ್ತದೆ. ಆ ಹೆಣ್ಣು ಶಿಶುವನ್ನು ಖಡ್ಗಕ್ಕೆ ಬಲಿಕೊಡಬೇಕು ಎನ್ನುವ ಸಮಯದಲ್ಲಿ ಆ ಶಿಶು ಆಕಾಶ ಮಾರ್ಗದಲ್ಲಿ ಗಾಳಿಯಲ್ಲಿ ಹಾರಿ ಬಂದು ತನ್ನ ಬಂಧುಗಳನ್ನು ಸೇರಿಕೊಳ್ಳುತ್ತದೆ. ಆ ಶಿಶುವೇ ಗೊಲ್ಲಳ್ಳಮ್ಮ ಅಥವಾ ದ್ಯಾಮವ್ವ ಈ ದೇವತೆಯನ್ನು ಆರಾಧನೆಯನ್ನು ಮಾಡುವವರನ್ನು ದೇವತೆಯ ಗೊಲ್ಲರೆಂದು ಕರೆಯುತ್ತಾರೆ. ಇದು ಚಿತ್ತಮುತ್ತಿ ಬೆಡಗಿನಲ್ಲಿ ಉಪ ಬೆಡಗು ಇವರು ಕೂಡ ತಾಳಿಕಟ್ಟದ ಸಂಪ್ರದಾಯಕ್ಕೆ ಸೇರುತ್ತಾರೆ.

೫.೩.೧. ದ್ಯಾಮವ್ವನ ಪೌರಾಣಿಕ ಹಿನ್ನೆಲೆ:

"ದ್ಯಾಮಲಾಂಬೆಯು ಐತಿಹಾಸಿಕ ಮಹಿಳೆ. ಒಂದಾನೊಂದು ಕಾಲದಲ್ಲಿ ಈ ಜನರೆಲ್ಲಾ ಕೃಷ್ಣನದಿಯಿಂದ ಆಚೆಯ ಪ್ರಾಂತ್ಯದಲ್ಲಿದ್ದವರು. ತಾಮ್ರ ಪತ್ರಗಳಲ್ಲಿ ಈ ಜನ ಡೆಲ್ಲಿ ಕಡೆಯಿಂದ ಬಂದವರೆಂದು ಸೂಚಿಸಲಾಗಿದೆ. ಇವರ ಚರಿತ್ರೆಯಲ್ಲಿ ಕೃಷ್ಣನದಿ ದಾಟಿದ ಪ್ರಸಂಗ ಬರುತ್ತದೆ. ಇದನ್ನು ಗಮನಿಸಿದಲ್ಲಿ ಬಿಜಾಪುರದ ಆದಿಲ್‌ಷಾಹಿ ಕಾಲವೆಂದು ಊಹಿಸಬಹುದು ವಿಜಯನಗರದ ಸೋಲಿನ ಪರಿಣಾಮವಾಗಿ ಬಿಜಾಪುರದ ಮುಸ್ಲಿಂ ದೊರೆಗಳ ಭೀತಿಗೊಳಗಾದ ಈ ಜನ ಅಲ್ಲಿಂದ ಗಂಟುಮೂಟೆ ಕಟ್ಟಿಕೊಂಡು ಹೊರಡುತ್ತಾರೆ. ಆಗ ಮಧ್ಯೆ ಕೃಷ್ಣ ನದಿಯನ್ನು ದಾಟುವ ಪ್ರಸಂಗ ಬರುತ್ತದೆ. ಹಿಂದೆ ಮುಸ್ಲಿಂ ಸೈನ್ಯ ಬೆನ್ನು ಹತ್ತಿ ಬರುತ್ತದೆ. ಆಗ ದ್ಯಾಮಲಾಂಬೆಯು ಒಬ್ಬ ಕನ್ಯೆ ಇರಬಹುದು. ಕೃಷ್ಣ ನದಿಯನ್ನು ದಾಟಲು ಈಕೆ ಪವಾಡ ಮಾಡಿದಳೆಂದು ಹೇಳುತ್ತಾರೆ. ಕೃಷ್ಣೆಯಲ್ಲಿ ಮಿಂದು ಪೂಜಿಸಿ ನನ್ನ ಜನರನ್ನು ಕಾಪಾಡು ಎಂದು ಬೇಡಿಕೊಳ್ಳುತ್ತಾಳೆ. ಆಗ ನದಿಯು ಬಯಲಾಗುತ್ತದೆ. ಆ ಜನರೆಲ್ಲ ದಾಟುತ್ತಾರೆ. ಮತ್ತೆ ನದಿ ತುಂಬಿ ಹರಿಯುತ್ತದೆ. ಸೈನಿಕರು ಇವರನ್ನು ಹಿಡಿಲಾಗುವುದಿಲ್ಲ. ಈ ದ್ಯಾಮಲಾಂಬೆಯು ಹಿರೇಗುಂಟನೂರಿಗೆ ಬಂದು ಐಕ್ಯವಾಗುತ್ತಾಳೆ. ವೀರಭದ್ರಸ್ವಾಮಿ ಇವಳಿಗೆ ತನ್ನ ಸ್ಥಾನ ಬಿಟ್ಟುಕೊಟ್ಟು ಪಕ್ಕದಲ್ಲಿ ನೆಲೆಸುತ್ತಾನೆ ಎಂಬ ಜಾನಪದ ಕಥೆಯೂ ಇದೆ. ದ್ಯಾಮಲಾಬೆಯು ಐಕ್ಯವಾದ ಸ್ಥಳವೇ ಹಿರೇಗುಂಟನೂರು. ಈಕೆಯ ಬೆಡಗು ಶಾವಂತ್ಲೆಯರು. ಅಂದಿನಿಂದ ಸಮಾಜವು (ಮನೆತನದವರು) ಮದುವೆ ಮುಂತಾದ ಶುಭಕಾರ್ಯಗಳಲ್ಲಿ ಈ ಮನೆತನದವರನ್ನು ಆಪತ್ತಿನಿಂದ ಪಾರು ಮಾಡಿದ ಸಂಕೇತವಾಗಿ ಹಿರೇವಿಳ್ಯೆ (ಅಗ್ರ ತಾಂಬೂಲ)ದ ಮರ್ಯಾದೆ ಮಾಡುತ್ತಾರೆ." *(ಪವನ್ ಜಿ.ಎಂ. 'ಶ್ರೀ ದ್ಯಾಮಲಾಂಬ ದರ್ಶನ, ಪುಟ ೩.)*

ದ್ಯಾಮವ್ವನ ಪೌರಾಣಿಕ ಹಿನ್ನೆಲೆ ಗಮನಿಸಿದರೆ ಇದು ಕಾಡುಗೊಲ್ಲರ ದೇವತೆಯಾಗಿರುವುದು ಕಂಡುಬರುತ್ತದೆ. ಏಕೆಂದರೆ ಕೃಷ್ಣಾ ನದಿಯನ್ನು ದಾಟಿದವರು ಕಾಡುಗೊಲ್ಲರು. ನದಿಗೆ ದಾರಿಯನ್ನು ಕೇಳಿದವಳು ದ್ಯಾಮವ್ವ ಅಲ್ಲ ಜಲದಿಬಪ್ಪಲರಾಯ. ಈತ ಒಕ್ಕಲಿಗರವ. ಕಾಡುಗೊಲ್ಲರು ಮಾಹಿತಿಯ

ಪ್ರಕಾರ ದ್ಯಾಮವ್ವ ಒಬ್ಬ ಈರಗಾರ್ತಿ ಹಾಗಾಗಿ ಈಕೆ ಕಾಡುಗೊಲ್ಲರು ಡೆಲ್ಲಿ ಬಿಟ್ಟು ಬರುವಾಗ ಮೂರುವರ್ಷದ ಮಗು ಆಗಿರುತ್ತಾಳೆ.

೫.೩.೨.ಆಸ್ತಿಯ ಒಡೆತನದ ಹೋರಾಟ:

'ಮೊದಲನೆ ನೆನೆದೇವು ಮದನಾರಿ ಕಾಮವ್ವನ

ಮದಗದ ಗುಡ್ಡದ ಗರತಿಯ

ಕಾಲಿಗೆ ಗೆಜ್ಜೆಕಾಣೋ ದ್ಯಾಮವ್ವ

ಕಾಣಸಿ ಗೆದ್ದಳಲ್ಲೋ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿಸ ದ್ಯಾಮವ್ವನ ಕಾವ್ಯ)*

ಕಾಮವ್ವನ ನೆನೆಯುವ ಪದಗಳಲ್ಲಿ ಅವಳು ಅಂಚಿನ ಸೀರೆಯವಳು, ಹುಲ್ಲಿನ ಮನೆಯನ್ನು ಹೊಂದಿರುವವಳು ಮುತ್ತು ರತ್ನಗಳಿಂದ ಕೂಡಿದವಳು. ಅವಳನ್ನು ನೆನೆಸಿದರೆ ಬಂದಿರುವ ಬಡತನ ಬಯಲಾಗುತ್ತದೆ ಎಂಬ ಕಲ್ಪನೆ ಅವರಲ್ಲಿದೆ. ದ್ಯಾಮವ್ವ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಕರಿಯಣ್ಣನನ್ನು ಭಕ್ತನನ್ನಾಗಿ ಮಾಡಿಕೊಳ್ಳುತ್ತಾಳೆ. ಅಷ್ಟೆ ಅಲ್ಲ ಅವನು ದ್ಯಾಮವ್ವನ ಅಣ್ಣನೆಂದು ಕೆಲವು ಮಾಹಿತಿದಾರರು ಹೇಳುತ್ತಾರೆ. ಅಣ್ಣ ಕರಿಯಣ್ಣ ದ್ಯಾಮವ್ವನನ್ನು ಘುಡುಕಿಕೊಂಡು ಅವಳ ಅರಮನೆಗೆ ಹೋದಾಗ ಅಲ್ಲಿ ಕಾಮವ್ವ ಇರುವುದಿಲ್ಲ. ಆಗ ನಾಲ್ಕು ದಿಕ್ಕಿಗೂ ನಾಲ್ಕು ನೂರು ಜನರನ್ನು ಕಳುಹಿಸಿ ಹುಡುಕುತ್ತಾನೆ. ಇದೇ ಸಮಯದಲ್ಲಿ ದ್ಯಾಮವ್ವ ಉಗ್ರರೂಪ ತಾಳಿ ಗೂಳ್ಯದ ದೊರೆಯಾದ ಹನುಮನೊಂದಿಗೆ ಯುದ್ದ ಮಾಡುತ್ತಾಳೆ. ಆದರೆ ಗೂಳ್ಯದ ಹನುಮನಿಗೆ ಗೊತ್ತಿಲ್ಲ. ತಾನು ಕಾಡುಗೊಲ್ಲರೊಂದಿಗೆ ಯುದ್ದ ಮಾಡುತ್ತಿರುವುದು. ಹೀಗಾಗಿ ಅವನ ಅವನತಿಯನ್ನು ಅವನೆ ತಂದುಕೊಂಡನು ಎಂದು ಮಾಹಿತಿದಾರರು ಹೇಳುತ್ತಾರೆ.

ಇಡೀ ಕಾಡುಗೊಲ್ಲರ ಸಮುದಾಯವನ್ನು ಒಂದು ಕಡೆ ಸೇರಿಸಿ ಬುತ್ತಿರೊಟ್ಟಿಯನ್ನು ಕಟ್ಟಿಕೊಂಡು ಯುದ್ದಕ್ಕೆ ತಯಾರು ಮಾಡುತ್ತಾಳೆ. ಇದು ಒಂದು ಸಮುದಾಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಯುದ್ದವನ್ನು ಆರಂಭಿಸಿದ ಬಗೆಯನ್ನು ಜೊತೆಗೆ ತಾಯಿಯಾದವಳು ತನ್ನ ಮಕ್ಕಳ ಅಸ್ತಿತ್ವಕ್ಕಾಗಿ ದುಡಿಯುವಂತೆ ಗೊಲ್ಲಳಮ್ಮ ತನ್ನ ಸಮುದಾಯದವರಾಗಿ ಯುದ್ದಮಾಡುತ್ತಿದ್ದಾಳೆ. ಅಷ್ಟೇ ಅಲ್ಲ ಈಕೆಯ ಮೂಲಕ ಕಾಡುಗೊಲ್ಲರು ಬಹಳ ಹಿಂದೆ ಮಾತೃದೇವತೆಯ ಆರಾಧಕರಾಗಿದ್ದರು ಎಂಬುದಕ್ಕೆ ನಿದರ್ಶನ ಒದಗಿಸುತ್ತದೆ.

ಗೂಳ್ಯದ ಹನುಮನ ಮೇಲೆ ಯುದ್ದಕ್ಕಾಗಿ ಬುದ್ಧಿವಂತರನ್ನು ಮುಖ್ಯವಾಗಿ ಮಹಿಳೆಯರನ್ನು ಸಂಘಟಿಸಿ ಯುದ್ದಕ್ಕೆ ತಯಾರು ಮಾಡುತ್ತಾರೆ. ಅಂದರೆ ಭೂಮಿಯ ಒಡೆತನದ ಪ್ರಶ್ನೆ ಸಾಮಾನ್ಯವಾಗಿ ಹೆಣ್ಣಿನಿಂದಲೆ ಪ್ರಾರಂಭವಾಗಿರಬಹುದು. ಕಾಡುಗೊಲ್ಲರು ಹರಿದು ಹಂಚಿ ಹೋಗಿರುವ ಸಮುದಾಯವಾಗಿರುವ ಕಾರಣ ಅವರನ್ನೆಲ್ಲ ಒಂದು ಕಡೆ ನೆಲೆ ನಿಲ್ಲುವಂತೆ ಮಾಡಿದವಳು ಗೊಲ್ಲಳಮ್ಮ

ಗೂಳ್ಯದ ಹನುಮ ಯುದ್ದಕ್ಕೆ ಹೋದವರನ್ನು ಸೆರೆ ಹಿಡಿದು ಸೆರೆಮನೆಗೆ ತಳ್ಳುತ್ತಾನೆ. ಆದರೆ ದ್ಯಾಮವ್ವನ ಪವಾಡದಿಂದ ಹಾಕಿರುವ ಬಾಗಿಲುಗಳು ಹಾಕಿದಂಗಿದ್ದರೂ ದ್ಯಾಮವ್ವ ಮಾತ್ರ ಹೊರಗೆ

ಬರುತ್ತಿದ್ದಳು. ಅಂದರೆ ಕಲ್ಲು ನೀರು ಕರಗುವ ಹೊತ್ತಿನಲ್ಲಿ ಆಕಾಶಕ್ಕೆ ಬಾಣ ಹೂಡೆದು ತನ್ನ ಸಮುದಾಯವನ್ನು ರಕ್ಷಿಸಿದವಳು. ದ್ಯಾಮವ್ವ ಬಲಭಾಗಕ್ಕೆ ಕರಿಯಣ್ಣನನ್ನು ಎಡಭಾಗಕ್ಕೆ ಗಿರಿಯಣ್ಣನನ್ನು ಕರೆದುಕೊಂಡು ಗೂಳ್ಯದ ವಲಮಾರಿಗೆ ಹೋಗುತ್ತಾಳೆ. ದ್ಯಾಮವ್ವ ಜೋಡಿ ಹುಣಸೆ ಮರಕ್ಕೆ ಜೋಲಿಕಟ್ಟಿ ಅದರಲ್ಲಿ ಗಿರಿಯಣ್ಣನನ್ನು ಮಲಗಿಸಿ ಗೂಳ್ಯದ ಹನುಮನ ಮೇಲೆ ದಾಳಿ ಮಾಡುತ್ತಾಳೆ. ಎಳ್ಳಿನ ಹೊಲದಾಕೆ ಹೋಗಿ ನಿಂತು ಎಳ್ಳನ್ನು ನಾಶ ಮಾಡಿದಳು ಬತ್ತದ ಗದ್ದೆಗೆ ನುಗ್ಗಿ ನಾಶ ಮಾಡಿದಳು ಮೆಂತೆ ಹೊಲವನ್ನು ನಾಶಮಾಡಿದಳು ಹೂವಿನ ತೋಟಕ್ಕೆ ಹೋಗಿ ಹೂವಿನ ತೋಟವನ್ನು ನಾಶಮಾಡಿದಳು. ಹುಳ್ಳಿಯ ಹೊಲಕ್ಕೆ ಹೋಗಿ ಹುಳ್ಳಿಯ ಹೊಲವನ್ನು ಹಾಳುಮಾಡಿದಳು. ಬೀಜ ಬಿತ್ತಿದ ಹೊಲವನ್ನು ಅಳಿಸಿ ಹಾಕಿದಳು. ಇದರ ಉದ್ದೇಶ ಇಷ್ಟೆ. ಈ ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೆ ಭೂಮಿ ಸಮಾನವಾಗಿ ಹಂಚಿಕೆಯಾಗಬೇಕು. ಎಂಬುದು ಗೊಲ್ಲಳಮ್ಮನ ನಿಲುವು. ಜಾನಪದ ಕಾವ್ಯಗಳಲ್ಲಿ ಮಾರ್ಕ್ಸ್‌ವಾದವನ್ನು ಹುಡುಕುವುದಕ್ಕೆ ಅವಕಾಶವಿದೆ. "ಸಂಪತ್ತಿನಿಂದ ವಂಚಿತವಾದ ಸಮುದಾಯವು ಸಂಪತ್ತನ್ನು ಪಡೆಯುವ ಸಲುವಾಗಿ ನಮಗೆ ಇಲ್ಲದ ಎಳ್ಳು ನಿಮಗೆ ಯಾಕೆ? ನಮಗೆ ಇಲ್ಲದ ಮೆಂತೆ ನಿಮಗೆ ಯಾಕೆ? ನಮಗಿಲ್ಲದ ಹುರುಳಿ ನಿಮಗ್ಯಾಕೆ? ನಮಗೆ ಬಿತ್ತುವುದಕ್ಕೆ ಇಲ್ಲದ ಜಮೀನು ನಿಮಗೆ ಯಾಕೆ? ಎಂದು ಬಿತ್ತಿದ ಹೊಲವನ್ನು ಅಳಿಸಿ ಹಾಕುತ್ತಾಳೆ" ಹಸಿವು ಎಲ್ಲರಿಗೂ ಹೇಗೆ ಸಾಮಾನ್ಯವೋ ಹಾಗೆಯೇ ಸಂಪತ್ತು ಕೂಡ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಸಿದ್ಧಾಂತವನ್ನು ದ್ಯಾಮವ್ವ ಸಾರಿದ್ದಾಳೆ. ಅನ್ನಕ್ಕಾಗಿ ಹೋರಾಟ ಅಸ್ತಿತ್ವಕ್ಕಾಗಿ ಹೋರಾಟ ತನ್ನ ಅನನ್ಯತೆಗಾಗಿ ಹೋರಾಟ ಮಾಡಿರುವ ಪರಿಯನ್ನು ಗಮನಿಸಿದರೆ ಜನಪದರ ಬದುಕಿನಲ್ಲಿ ಎಲ್ಲ ಸಿದ್ಧಾಂತಗಳು ನೆಲೆಗೊಂಡಿರುತ್ತವೆ.

ಆಸ್ತಿಯ ಹಕ್ಕು ಪಡೆಯುವ ಸಲುವಾಗಿ ದ್ಯಾಮವ್ವ ತನ್ನ ಸುತ್ತ ಮುತ್ತ ಇರುವಂತಹ ಹಳ್ಳಿಹಳ್ಳಿಗಳಿಗೂ ಪತ್ರ ಬರೆದು ತನ್ನ ಸಮುದಾಯಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಂಡಿರುತ್ತಾಳೆ. ಅವರ ಸಮ್ಮುಖದಲ್ಲಿಯೇ ಆಸ್ತಿಯ ಹಂಚಿಕೆಯಾಗಿ ಶಾಸನ ಬರೆಸಬೇಕೆಂಬ ಇಚ್ಛೆಯನ್ನು ಇರಾದೆಯನ್ನು ಕೂಡ ಇಟ್ಟು ಕೊಂಡಿದ್ದಳು ಆಸ್ತಿ ಹಂಚಿಕೆಯಾದ ಮೇಳೆ ಹೊಲೆ ಮಾರುಕಲ್ಲು ಉಣಬೇಖು ಎಂದು ಹೇಳುತ್ತಾಳೆ.

'ಹಟ್ಟಿಯ ಗೌಡರು ಮುಟ್ಟಿರೊಂದೆಳ್ಳೆವ
ಬಟ್ಟನ್ನ ಕಲ್ಲೆ ಬರಬೇಕು॥ ಗೂಳ್ಯದ
ದಿಕ್ಕಿನ ಕಲ್ಲೆ ನಿಲಬೇಕು.
ಊರಗೌಡರು ಕೊಳ್ಳಿರೊಂದೆಳ್ಳೇವ
ತೆಳ್ಳನ್ನ ಕಲ್ಲೆ ನಿಲಬೇಕು॥ ಗೂಳ್ಯದ
ವಲದಿನ ಕಲ್ಲೆ ನಿಲಬೇಕು' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಯಾವಾಗ ಈ ರೀತಿಯ ಕಾನೂನುಗಳನ್ನು ಹಕ್ಕುಗಳನ್ನು ಪ್ರಶ್ನೆ ಮಾಡಿದವಳು ದ್ಯಾಮವ್ವ ಇದನ್ನು ಸಹಿಸಿಕೊಳ್ಳುವುದು ಗೂಳ್ಯದ ಹಟ್ಟಿಕಾರರಿಗೆ ಮತ್ತು ಹಳ್ಳಿಕಾರರಿಗೆ ಸಹಿಸಿಕೊಳ್ಳಲು ಆಗಲಿಲ್ಲ. ಏಕೆಂದರೆ ಅದುವರೆಗೆ ಯಾರೂ ಎತ್ತದ ಪ್ರಶ್ನೆಯನ್ನು ದ್ಯಾಮವ್ವ ಎತ್ತಿದ್ದಾಳೆ. ಆ ಕಾರಣದಿಂದ ಆಕೆಯ ಮೇಲೆ ಹಲ್ಲೆ ಮಾಡಿದರು. ಮೂಗು ಬಾಯಿಯಲ್ಲಿ ರಕ್ತ ಬರುವಂತೆ ಹೊಡೆದರು. ಅಷ್ಟೆ ಅಲ್ಲ ಆಸ್ತಿಯ ಹಕ್ಕು ಪತ್ರಗಳನ್ನು ನೆಲಮಾಳಿಗೆಯಲ್ಲಿಟ್ಟು ಹಕ್ಕು ಪತ್ರಗಳು ಇಲ್ಲವೆಂದು ಸುಳ್ಳು ಹೇಳಿದರು. ಆದರೂ ಬಿಡದೆ ದ್ಯಾಮವ್ವ ತನ್ನ ಸಮುದಾಯವನ್ನು ಕರೆದುಕೊಂಡು ಅವರ ಮೇಲೆ ಜಗಳಕ್ಕೆ ನಿಂತಳು.

'ಸಿಕ್ಕ ಗೂಳ್ಯದ ಸಿತ್ತಾರದ ಕೆರಿಯಾಗೆ

ಹತ್ತಿದ ನ್ಯಾಯ ಹರಿಯಾವು॥ ಸಂಗಪ್ಪ

ಗಕ್ಕಾನೆ ನೀನು ಬರಬೇಕು

೨ಸಿಕ್ಕ ಗೂಳ್ಯದ ರೂಪ್ವಾರದ ಕೆರಿಯಗೆ

ಹೂಡಿದ ನ್ಯಾಯ ಹರಿಯಾವು॥ ಸಂಗಪ್ಪ

ಬೇಗಾನೆ ನೀನು ಬರಬೆಕು' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಗೂಳ್ಯದ ಹಳ್ಳಿಕಾರರಿಗೂ ಮತ್ತು ಕಾಡುಗೊಲ್ಲರಿಗೂ ಬಿದ್ದಿರುವ ಜಗಳ ಆರು ವರ್ಷಗಳು ಕಳೆದರೂ ಬಗೆ ಹರಿಯುವುದಿಲ್ಲ ತನ್ನ ತಮ್ಮನಾದ ಸಂಗಪ್ಪನನ್ನು ಕರೆಸಿಕೊಳ್ಳುತ್ತಾಳೆ.

'ರಾಯ ಬೇವಿನಹಳ್ಳಿ ಗಾರೆ ಬಾವಿ ಒಳಗೆ

ಜೋಡಿ ವಸ್ತ್ರವ ಹೊಗೆಯೋನು॥ ಸಂಗಪ್ಪ ಬೇಗಾನೆ ನೀನು ಬರಬೇಕು' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಈ ಪದ್ಯವನ್ನು ಗಮನಿಸಿದರೆ, ಕಾಡುಗೊಲ್ಲರ ಸಾಂಸ್ಕೃತಿಕ ಕೇಂದ್ರದ ಬೇವಿನಹಳ್ಳಿಗೂ ಹಾಗೂ ಗೂಳ್ಯದ ಮಧ್ಯೆ ನಡೆದಿರುವ ಹೋರಾಟ ಆಗಿರಬಹುದು. ಸಂಗಪ್ಪ ಅಕ್ಕನ ಪತ್ರವನ್ನು ಓದಿದವನೆ ತನ್ನ ತಾಯಿಗೆ ಹೇಳಿ ಕೆಂಬಕ್ಕಿ ಅನ್ನ, ಕೆನೆ ಮೊಸರು ಸೇರಿಸಿ ಬುತ್ತಿಕಟ್ಟುವಂತೆ ಹೇಳುತ್ತಾನೆ. ಬುತ್ತಿ ತೆಗೆದುಕೊಂಡು ಕುದುರೆ ಏರಿಕೊಂಡು ಗೂಳ್ಯದ ಕಡೆಗೆ ಹೋಗುವನು. ಅವನು ಹೊರಟ ಸಮಯದಲ್ಲಿ ಅವನ ಅಕ್ಕ ಮತ್ತು ತಾಯಿಯರು ಕಣ್ಣೀರು ಹಾಕುತ್ತಾರೆ. ಆಗ ಅವರಿಗೆ ಊರಿನ ಜನರು ಸಮಾಧಾನ ಮಾಡುತ್ತಾರೆ.

'ಅಕ್ಕ ಅಳದೀರೆ ಅಕ್ಕಯ್ಯ ಅಳದೀರೆ

ಅಕ್ಕ ಸಂಗಮ್ಮ ಅಳದೀರೆ॥ ಸಂಗಪ್ಪ

ಪಟ್ಟಣವ ಗೆದ್ದು ಬರುತಾನೆ.

ತಾಯಿ ಅಳದೀರೆ ತಾಯವ್ವ ಅಳದೀರೆ

ತಾಯಿ ಗೌರಮ್ಮ ಅಳದೀರೆ॥ ಸಂಗಪ್ಪ

ಕಾಣಾಸಿ ಗೆದ್ದೆ ಬರುತಾನೆ.' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಆಸ್ತಿಯ ಒಡೆತನಕ್ಕಾಗಿ ದೊಡ್ಡ ಹೋರಾಟವೇ ನಡೆದಿರುವುದು ಕಂಡುಬರುತ್ತದೆ. ಅಂತಹ ಸಮಯದಲ್ಲಿ ತನ್ನ ಅಣ್ಣ ಹೋರಾಟ ಮಾಡಿ ಮಡಿಯಬಹುದು ಎಂಬ ಕಾರಣಕ್ಕಾಗಿ ಅವಳ ಅಕ್ಕ ಸಂಗಮ್ಮ ದುಃಖ ಪಡುತ್ತಾಳೆ. ಆಗ ಗೊಲ್ಲಳಮ್ಮ ಅವಳನ್ನು ಸಮಾಧಾನ ಮಾಡುವ ರೀತಿ ಮೇಲಿನ ಕಾವ್ಯದಲ್ಲಿ ಉಲ್ಲೇಖವಾಗಿದೆ. ಅದೇ ರೀತಿ ತಾಯಿಯ ದುಃಖವನ್ನು ಶಮನ ಮಾಡುತ್ತಾಳೆ.

ತಾಯಿ ಮತ್ತು ಅಕ್ಕ ಮಾಡಿದ ಅಡುಗೆಯನ್ನು ತುಂಬಿಕೊಂಡು ಸಂಗಪ್ಪ ಸುರನಾರಿ ಬಿಲ್ಲು ಕೈಯಲ್ಲಿ ಹಿಡಿದುಕೊಂಡು ತುರುಕರ ಮತ್ತು ಹಳ್ಳಿಕಾರರ ಮೇಲೆ ಯುದ್ಧ ಮಾಡುತ್ತಾನೆ. ಇವನ ತಮ್ಮನಾದ ಗಿರಿಯಣ್ಣ ಇವನು ಮೂಗ ಆದರೂ ತನ್ನ ಹಕ್ಕಿನ ಬಗ್ಗೆ ಸನ್ನೆಗಳ ಮೂಲಕ ಪ್ರತಿಕ್ರಿಯಿಸುತ್ತಾನೆ. ಅಷ್ಟೇ ಅಲ್ಲ ನಾವು ಪಶು ಪಾಲನೆಯಿಂದ ಸಂಪಾದಿಸಿದ ಹೊನ್ನೆಲ್ಲಾ ಹೋದರೂ ಚಿಂತೆಯಿಲ್ಲ. ಆದರೆ ಆಸ್ತಿಯ ಹೋರಾಟ ಮಾತ್ರ ನಿಲ್ಲಿಸುವುದಿಲ್ಲ ಎಂದು ಹಠ ಹಿಡಿಯುತ್ತಾಳೆ. ನಮ್ಮ ಜೊತೆ ಕೈಜೋಡಿಸುವಂತೆ ಅನೇಕ ಭೂ ವಂಚಿತ ಸಮುದಾಯಗಳಿಗೆ ಮುತ್ತು ರತ್ನಗಳನ್ನು ದಾನ ಮಾಡುತ್ತಾನೆ. ಹೀಗೆ ಮಾಡಿದ್ದರ ಫಲವಾಗಿ ಸೂಳ್ಯವನ್ನು ಗೆದ್ದುಕೊಂಡಳು ದ್ಯಾಮವ್ವ

'ಸಿಕ್ಕ ಗೂಳ್ಯದ ಚಿತ್ತಾರದ ಕೆರಿಯಾಗೆ

ಕಪ್ಪೆ ನುಂಗ್ಯಾವೆ ಮೊಸಳೆಯ॥ ಅಕ್ಕ

ದ್ಯಾಮವ್ವ ತಾನೆ ನುಂಗ್ಯಾಳೆ ಹಗೆಯರನ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಸೂಳ್ಯದ ಕೆರೆಯಲ್ಲಿ ಮೊಸಳೆಯು ಕಪ್ಪೆಗಳನ್ನು ನುಂಗುವಂತೆ ದ್ಯಾಮವ್ವ ಶತ್ರುಗಳನ್ನು ನುಂಗಿದ್ದಾಳೆಂದು ಹೇಳುತ್ತಾರೆ. ಯಾವಾಗ ಗೂಳ್ಯವನ್ನು ಗೆದ್ದಳೋ ದ್ಯಾಮವ್ವ ತನ್ನ, ಹೊಲೆ ಮಾರಿನ ವ್ಯಾಪ್ತಿಯನ್ನು ರಾಯದುರ್ಗದ ವರೆಗೆ ವಿಸ್ತರಿಸಿದಳು. ಇದೇ ರೀತಿಯಾಗಿ ಚಿತ್ರದುರ್ಗ, ಹಿರಿಯೂರು, ಹರಿಯಬ್ಬೆ, ಗೊಲ್ಲಹಳ್ಳಿ ಮುಂತಾದ ಊರುಗಳನ್ನು ಗೆದ್ದುಕೊಳ್ಳುತ್ತ ಹೋದರು. ಒಂದು ಕಡೆ ಗೊಲ್ಲಳಮ್ಮ ಮತ್ತೊಂದು ಕಡೆ ಸಂಗಪ್ಪ ಮಗದೊಂದು ಕಡೆ ಕರಿಯಣ್ಣ, ಇನ್ನೊಂದು ಕಡೆ ಗಿರಿಯಣ್ಣ ಹೀಗೆ ಇವರೆಲ್ಲರೂ ಸೇರಿ ಕಾಡುಗೊಲ್ಲರ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಬಂದರು. "ಆಕಾಶ ಎಷ್ಟು ಎತ್ತರವೋ, ಭೂಮಿ ಎಷ್ಟು ಉದ್ದವೋ ಅಷ್ಟು ಭೂಮಿ ತಮ್ಮದೆಂದು ಹೊಲೆಮಾರು ಹಾಕಿಕೊಂಡರು. ಇವರು ಭೂಮಿಯನ್ನು ಗೆದ್ದ ತಕ್ಷಣ ಇವರ ಸಾಮರ್ಥ್ಯವನ್ನು ಈ ರೀತಿ ಹೊಗಳುತ್ತಾರೆ.

'ನೆಲ್ಲಕ್ಕಿ ಕೊಡುತೀವಿ ಉಲ್ಲಕ್ಕಿ ಕೊಡಿರಮ್ಮ

ನೆಲ್ಲಕ್ಕಿ ಹುಲ್ಲಕ್ಕಿಗೆ ಕಡವೇನೆ॥ ಕರಡೋರ

ನೆಲ್ಲಕ್ಕಿ ಉಂಬೋರ ಮಗ ಬಂದ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಇದು ಸಾಂಸ್ಕೃತಿಕ ವೀರರಾದ ಸಂಗಣ್ಣ, ಗಿರಿಯಣ್ಣ ಕರಿಯಣ್ಣನನ್ನು ಕುರಿತು ಜನಪದರು ಕಟ್ಟಿರುವ ಪದ್ಯವಿದು. ಇವರು ಸಮರ್ಥರಾದ ಕಾರಣ ಭೂಮಿಯ ಒಡೆತನವನ್ನು ಪಡೆದರು. ನೆಲ್ಲಕ್ಕಿಯ ಸಂಕೇತ ಮನುಷ್ಯರು ಊಟ ಮಾಡುವಂತಹದ್ದು. ಹುಲ್ಲಕ್ಕಿಯನ್ನು ದನಗಳು ತನ್ನುವಂತಹದ್ದು. ಹಾಗಾಗಿ ಮನುಷ್ಯರು ಮನುಷ್ಯರೆ ಇವರಿಗೆ ಸಾಟಿ ಪ್ರಾಣಿಗಳಲ್ಲ ಅಥವಾ ಹಗೆಯವರನ್ನು ಹುಲ್ಲಕ್ಕಿಗೆ ಹೋಲಿಸಿರುವುದು ಕಂಡು ಬರುತ್ತದೆ. ನೆಲಮಾಳಿಗೆಯಲ್ಲಿ ಬಚ್ಚಿಟ್ಟಿದ್ದ ಎಲ್ಲಾ ಕಡತಗಳನ್ನು ತೆಗೆದುಕೊಂಡು ಕಾಡುಗೊಲ್ಲರು ಆಸ್ತಿಯ ಒಡೆಯರಾದರು. ಎಂಬುದು ದ್ಯಾಮವ್ವನ ಕಾವ್ಯದಲ್ಲಿ ಉಲ್ಲೇಖವಾಗಿದೆ.

೫.೩.೩. ದ್ಯಾಮವ್ವನ ಪವಾಡಗಳು

ಕೊರವಂಜಿಯ ವೇಷದಲ್ಲಿ ಬರುವ ದ್ಯಾಮವ್ವ ಕೊರವಂಜಿಗೆ ಬೇಕಾಗಿರುವ ಸಾಮಾನುಗಳನ್ನು ತಾನೇ ಸೃಷ್ಟಿ ಮಾಡಿಕೊಳ್ಳುತ್ತಾಳೆ. ಆಕೆ ವಸ್ತುಗಳನ್ನು ಸೃಷ್ಟಿ ಮಾಡುವ ರೀತಿಯನ್ನು ಇಲ್ಲಿ ಗಮನಿಸಬಹುದು. ಹಾಲಿನ ಹಳ್ಳಕ್ಕೆ ಹೋಗಿ ಜೋತುಬಿದ್ದಿರು. ಬಿದಿರುಗಳನ್ನು ಕಡಿದುಕೊಂಡು ಬಂದು ಆ ಬಿದಿರಿನಿಂದ ಗೂಡೆ ಹೆಣೆಯುತ್ತಾಳೆ. ಹಸಲು ಹಳ್ಳಕ್ಕೋಗಿ ಎಸಲು ಬಿದಿರು ಕಡಿದುಕೊಂಡು ಬಂದು ಗೂಡೆ ಹೆಣೆಯುತ್ತಾಳೆ. ಕೊರಮರ ಕೇರಿಗೆ ಹೋಗಿ ಅವರಿಂದ ನೆಲುವುಗಳನ್ನು ಎಣೆಸಿಕೊಂಡು ನೆಲುವು ಮಾರುವವಳಾಗಿ ಶೆಟ್ಟರ ಕೇರಿಗೆ ಹೋಗಿ ಸೆಟ್ಟರ ಹೆಂಡತಿಯರ ತಲೆಯ ಮೇಲೆ ಹೊರಿಸಿಕೊಂಡು ಮಾರುತ್ತಾ ಬರುತ್ತಾಳೆ. ಅವಳು ಮಾರುವ ನೆಲುವುಗಳೆಂದರೆ, ಮೂರು ಕಾಲೀನ ನೆಲುವು, ನಾಲ್ಕು ಕಾಲೀನ ನೆಲುವು, ಆರು ಕಾಲೀನ ನೆಲುವುಗಳನ್ನು ಸೆಟ್ಟರ ಹೆಂಡತಿಯರ ತಲೆಯ ಮೇಲೆ ಹೊರಿಸಿಕೊಂಡು ಬರುತ್ತಾಳೆ. ಇವರಲ್ಲದೆ ರಾಜರ ಮತ್ತು ಲಿಂಗಾಯಿತರ ಹೆಂಡತಿಯರು ಮುಂತಾದ ಉನ್ನತ ವರ್ಗದ ಸ್ತ್ರೀಯರ ತಲೆಯ ಮೇಲೆ ಹೊರಿಸಿಕೊಂಡು ಬರುತ್ತಾಳೆ. ಸಮಾಜದಲ್ಲಿ ಶ್ರೀಮಂತರು ಎಂದು ಗುರುತಿಸಲ್ಪಟ್ಟ ಸೆಟ್ಟರು, ಲಿಂಗಾಯಿತರು, ರಾಜರ ಹೆಂಡತಿಯರ ತಲೆಯ ಮೇಲೆ ನೆಲುವುಗಳ ಹೊರಿಸಿಕೊಂಡು ಮಾರಲು ಬರುತ್ತಾಳೆ. ಅಂದರೆ ತಳಸಮುದಾಯದ ಸ್ತ್ರೀಯರು ಹೊತ್ತು ಮಾರುವ ಕೆಲಸವನ್ನು ದ್ಯಾಮವ್ವ ಉನ್ನತ ಕುಟುಂಬದಲ್ಲಿ ಹುಟ್ಟಿದ ಮಹಿಳೆಯರಿಂದ ಮಾಡಿಸಿದ ಉದ್ದೇಶವೆಂದರೆ ತಳಸಮುದಾಯದ ಮಹಿಳೆಯರ ನೋವು ನಲಿವುಗಳು ಶ್ರೀಮಂತರಿಗೂ ಅರ್ಥವಾಗಲಿ ಎಂಬ ಉದ್ದೇಶವಿರಬಹುದು.

ಹಸಿರು ಅಂಚಿನ ಸೀರೆಯನ್ನು ಹುಟ್ಟುಕೊಂಡು ಗೂಡೆಯನ್ನು ತಲೆಯ ಮೇಲೆ ಹೊತ್ತುಕೊಂಡು ಚಿನ್ನದ ಮೂಗುತಿಯನ್ನು ಇಟ್ಟುಕೊಂಡು, ಮದುಮಗಳಂತೆ ಕಂಗೊಳಿಸುತ್ತಾಳೆ. ದ್ಯಾಮವ್ವ ತೋಳ ತೆಕ್ಕೆಯಲಿ ಮಗುವನ್ನು ತಬ್ಬಿಕೊಂಡು ದುರ್ಗದ ರಾಯಣ್ಣನ ಅರಮನೆಗೆ ಹೋಗಿ ಹೂವು ಕೇಳಿದಾಗ ರಾಯಣ್ಣ ಈ ರೀತಿ ಹೇಳುತ್ತಾನೆ.

'ಮೆಂತೆಕೊಟ್ಟೆನು ಸೀರೆಗಳ ಕೊಟ್ಟೇನು
ಅಗಸರಿಗೆ ಹೂವ ಕೊಡಲಾರೆ

ಮುತ್ತುಗಳ ಕೊಟ್ಟೇನು ಕುಪ್ಪಸವ ಕೊಟ್ಟೇನು

ಸಿಕ್ಕ ದುರುಗಾದ ಹೂವ ಕೊಡಲಾರೆ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಎಂದು ದ್ಯಾಮವ್ವಗೆ ಹೇಳಿದಾಗ ಹೂವು ಕೊಡುವವರೆಗೆ ಜಾಗ ಬಿಟ್ಟು ಕದಲುವುದಿಲ್ಲ ಎಂದು ಹಠ ಹಿಡಿಯುತ್ತಾಳೆ. ಎಷ್ಟು ಸಾರಿ ಕೇಳಿದರೂ ಕೊಡದಂತಹ ಸಮಯದಲ್ಲಿ ದ್ಯಾಮವ್ವ ಹೂವಿನ ತೋಟಕ್ಕೆ ಶಾಪ ಕೊಡುತ್ತಾಳೆ "ಅರಳಿದ ಹೂವುಗಳಿಗೆ ಸೀಡೆ ಬೀಳಲಿ" ಎಂದು ಶಾಪಕೊಟ್ಟು ಬರುತ್ತಾಳೆ. ಆಗ ರಾಯಣ್ಣನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಮುತ್ತು ರತ್ನ, ಹೂವು, ಆನೆ ಮೇಲೆ ಹೇರಿಕೊಂಡು ಬಂದು ತಾನು ಮಾಡಿದ್ದು ತಪ್ಪಾಯಿತೆಂದು ದ್ಯಾಮವ್ವನ ಪಾದಗಳನ್ನು ಹಿಡಿದುಕೊಳ್ಳುತ್ತಾನೆ. ಹೂವಿನ ತೋಟಕ್ಕೆ ಬಿದ್ದಿರುವ ಸೀಡೆಯನ್ನು ಕಳೆದದ್ದೇ ಆದರೆ ಪ್ರತಿವರ್ಷ ನಡೆಯುವ ಜಾತ್ರೆಯಲ್ಲಿ ನಮ್ಮ ಮನೆತನದವರೆ ಹೂವಿನ ಪಲ್ಲಕ್ಕಿಯನ್ನು ಮಾಡಿಸುವುದಾಗಿ ಕೈ ಮುಗಿದುಕೊಳ್ಳುತ್ತಾನೆ. ಆಗ ಅವನ ತಪ್ಪುಗಳನ್ನು ಮನ್ನಿಸಿದ ದ್ಯಾಮವ್ವ ರಾಯಣ್ಣ ಹೂವಿನ ತೋಟಕ್ಕೆ ಬಿದ್ದಿರುವ ಸೀಡೆಯನ್ನು ಕಳೆದಳು. ಈಗಲೂ ಸಹ ದ್ಯಾಮವ್ವಗೆ ಹೂವಿನ ಪಲ್ಲಕ್ಕಿ ಎಂದರೆ ಎಲ್ಲಿಲ್ಲದ ಆಸೆ.

ದುರ್ಗವನ್ನು ಪ್ರವೇಶ ಮಾಡುವುದನ್ನು ದ್ವಾರಪಾಲಕ ತಡೆಯೊಡ್ಡಿದಾಗ ನಾವು ಬಹಳ ದೂರದ ಊರಿನಿಂದ ಬಂದಿರುವುದಾಗಿ ಜೊತೆಗೆ ಮುತ್ತು ರತ್ನಗಳನ್ನು ಎತ್ತಿನ ಮೇಲೆ ಹೇರಿಕೊಂಡು ಬಂದಿದ್ದೇವೆ. ರಾತ್ರಿಯಾದದ್ದರಿಂದ ಎಲ್ಲಿ ಉಳಿಯ ಬೇಕು ಎಂಬುದು ತಿಳಿಯಲಿಲ್ಲ. ಆ ಕಾರಣದಿಂದ ಈ ಊರಿಗೆ ಬಂದೆವು ಎಂದು ಹೇಳುತ್ತಾಳೆ. ಅಲ್ಲಿಗೂ ಅವನು ಒಪ್ಪದಿದ್ದಾಗ ಆರು ಸಾವಿರ ಹೊನ್ನು ಎತ್ತಿನ ಮೇಲೆ ಹೇರಿಕೊಡು ಬಂದಿರುವುದಾಗಿ ಇವತ್ತು ಒಂದು ದಿನ ಮಾತ್ರ ಇಲ್ಲಿ ಉಳಿದು ನಾಳೆ ಮುಂದಕ್ಕೆ ಹೋಗುವುದಾಗಿ ಹೇಳಿದಾಗ ಅವನು ನಮ್ಮ ದೊರೆಗೆ ಗೊತ್ತಾದರೆ ಸುಮ್ಮನಿರುವುದಿಲ್ಲ. ನಾಳೆ ಬಾ ಎಂದು ಹೇಳುತ್ತಾನೆ. ಅವನಿಗೆ ಮುತ್ತು ರತ್ನಗಳನ್ನು ಕೊಟ್ಟು ಊರಿನ ಒಳಗೆ ಹೋಗುತ್ತಾಳೆ. ಅವಳು ಒಳಗೆ ಹೋಗುವ ವಿಧಾನವನ್ನು ಜನಪದರು ಈ ರೀತಿ ಬಣ್ಣಿಸಿದ್ದಾರೆ.

'ಅಂಗೈಗೂ ಮುಂಗೈಗೂ ರಂಗೂ ನೀಲದು ಬಾಳೆ

ತುಂಬಾನೆ ಎಂಬ ಹಸ್ತ ಕಡಗ॥ ಮುಂದಾಕೆ

ಹೊಂದಿಸಿ ಕಟ್ಯವಳೆ ಕೈಯ್ಯ ಕಟ್ಟು ಕೊರಮೂತಿ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಈ ರೀತಿ ವೇಷಧರಿಸಿ ಊರಿನ ಒಳಗೆ ಹೋದ ಕೊರವಂಜಿಯನ್ನು ಆ ಊರಿನ ಹೆಣ್ಣುಮಕ್ಕಳು, ಗಂಡನನ್ನು ಕಳೆದುಕೊಂಡವರು ಹುಡಿಕಿಕೊಡುವಂತೆ ಕಣಿಕೇಳಲು ಪ್ರಾರಂಭಿಸಿದರು. ಅವರಲ್ಲಿ ಒಬ್ಬನಾದ ಮುದ್ದೆ ಸೂಗೂರು ಗೌಡನು ಅವನು ಆರಾಳಿನ ಕೆಲಸವನ್ನು ಮಾಡಿಸಿಕೊಂಡು ಮೂರಾಳಿನ ಕೂಲಿಯನ್ನು ಕೊಡುತ್ತಿದ್ದ. ಆಗ ದ್ಯಾಮವ್ವ ಅವನು ಮಾಡಿರುವಂತಹ ಮೊಸವನ್ನು 'ಜನಗಳಿಗೆ ಹೇಳಿದಾಗ

ಜನಗಳು ಎಲ್ಲಿಂದ ಬಂದಳಪ್ಪ ಗೊಲ್ಲಾಳಿ ಕೊರಮೂತಿ, ನೆಲ್ಲಕ್ಕಿಯಂತ ಮನಸ್ಸಿನವಳು, ಹಾಲಿನಂತ ಕುಲದವಳು, ನಿಜ ಗೆಂಪು ಬಣ್ಣದವಳು, ಕತ್ತಲಲ್ಲಿರುವ ನಮ್ಮನ್ನು ಬೆಳಕಿನ ಕಡೆಗೆ ಕರೆದುಕೊಂಡು ಬಂದವಳು ಹೆಣ್ಣು ಮಕ್ಕಳಿಗೂ ದುಡಿಯುವ ಮಾರ್ಗ ತೋರಿಸಿದವಳು. ಅಂದರೆ ನೆಲವುಗಳನ್ನು ಮಾರುವುದರ ಮೂಲಕ ಸ್ತ್ರೀಯರು ಕೂಡ ಸ್ವತಂತ್ರವಾಗಿ ಬದುಕಬಹುದು. ಎಂಬುದನ್ನು ತೋರಿಸದವಳು. ಹೆಣ್ಣು ಮಕ್ಕಳಿಗೆ ದಾರಿದೀಪವಾಗಿ ಅವರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನು ಮಾಡಿಸಿದವಳು.

'ಊರಾದರೂ ಹಾಡೇನು ಪಟ್ಟಣವ ಹಾಡೇನು

ಹತ್ತು ಕಾಲಿನ ನಿಲುವುಗಳ ಮಾರೇನು' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಆದರೆ ಪುರುಷರಿಗೆ ಮಾತ್ರ ಅಧೀನವಾಗಿ ಬಾಳಲಾರೆ ಎಂಬುದು ಅವಳ ತತ್ವ ಊರು ಆದರೇನು, ಕೇರಿ ಆದರೇನು, ಪಟ್ಟಣವಾದರೇನು, ಆರು ಕಾಲಿನ ನೆಲುವುಗಳನ್ನು ಮಾರಿ ಜೀವನ ನಡೆಸೇನು ಎಂದು ಹೇಳುತ್ತಾ ಬರುತ್ತಾಳೆ

ಅಕ್ಕ ದ್ಯಾಮವ್ವ ಊರು ಸೇರುವಾಗ ಬಾಳೆ ಗಿಡ, ತೆಂಗಿನ ಮರಗಳು, ಭಾಗಿ ನಮಸ್ಕಾರ ಮಾಡುತ್ತವೆ. ಒಕ್ಕಲಿಗರ ಕೇರಿಯಲ್ಲಿ ಹೋಗಿ ತುಪ್ಪ ಇಡಲು ಬಳಸುವ ನೆಲವುಗಳು, ಮಕ್ಕಳು ಆಟ ಆಡಲು ಬಳಸುವ ಗಿಲಗಿಂಚಿಗಳನ್ನು, ತಂದೀನಿ ತೆಗೆದುಕೊಳ್ಳಿರಿ ಎಂದು ಹೇಳುವಳು. ಬ್ರಾಹ್ಮಣರ ಕೇರಿಯಲ್ಲಿ ನಿಮ್ಮ ಹಾಲು ಇಡಲು ನೆಲುವುಗಳನ್ನು ತಂದೀನಿ, ಬಾಲಮ್ಮಗಳಾಡಲು ಗಿಲಕಿ ತಂದೀನಿ ಅಷ್ಟೆ. ನಿಮ್ಮ ಸಮಸ್ಯೆಗಳೇನೆ ಇದ್ದರೂ ನನ್ನ ಬಳಿ ಹೇಳಿರಿ, ನಾನು ಕಣಿ ಹೇಳಿ ನಿಮಗೆ ಬಂದಿರುವ ಕಷ್ಟಗಳಿಗೆ ಪರಿಹಾರ ಹೇಳುವೆನು ಎಂದು ಹೇಳುವುದರ ಮೂಲಕ ಬಾಳೆ ಕಾಯೋ ಲಿಂಗವನ್ನು ಬೆರಳಿಗೆ ಕಟ್ಟಿಕೊಂಡು ಬ್ರಾಹ್ಮಣರ ವ್ರತ ಮತ್ತು ಜಂಗಮರ ವ್ರತ ಕೆಡಿಸಿದಳು. ಇದರಿಂದಾಗಿ ಬ್ರಾಹ್ಮಣರು ಮತ್ತು ಜಂಗಮರ ವ್ರತವನ್ನು ಕೆಡಿಸಿದ್ದರ ಪರಿಣಾಮವಾಗಿ ಅವರೆಲ್ಲರು ಸೇರಿ ಕೊರವಂಜಿಯನ್ನು ಊರು ಬಿಟ್ಟು ಹೊರಗೆ ತಳ್ಳಿದರು. ಈ ಕಡೆ ಕೇರಿಯಲ್ಲಿ ಹೊರಗಡೆ ತಳ್ಳಿದರೆ ಆ ಕಡೆ ಕೇರಿಯಲ್ಲಿ ಒಳಗಿರುವಳು ಇವಳ ಮರ್ಮ ಜನರಿಗೆ ತಿಳಿಯದಂತಾಗುತ್ತದೆ.

೫.೩.೩.೧. ರಾಯಣ್ಣನನ್ನು ಭಕ್ತನಾಗಿ ಮಾಡಿಕೊಂಡದ್ದು

'ಏರಿ ಮ್ಯಾಲೋಗೋ ದೊರೆಕಾಣೋ ರಾಯಣ್ಣ

ಕಣಿಯ ಕೇಳಣ್ಣ ನಿಮದೊಂದೆ

ನಿಮ್ಮ ತೋಟಕ್ಕೆ ಕೆಟ್ಟ ಸೀಡೆಗಳೆ ಬಡಿದಾವು' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಎಂದು ರಾಯಣ್ಣನನ್ನು ಕೇಳಿದಾಗ ಅವನು ಅಹಂಕಾರದಿಂದ ಬಾಯಿಗೆ ಬಂದಂತೆ ಹೊಲಸು ಮಾತು ಆಡುತ್ತಾನೆ. ಆಗ ದ್ಯಾಮವ್ವ ಅವನ ಹೂವಿನ ತೋಟಕ್ಕೆ ಸೀಡೆ ಬೀಳುವಂತೆ ಮಾಡುತ್ತಾಳೆ. ಅದೇ ರೀತಿಯಾಗಿ ಅವನ ಮನೆಯ ಮುಂದಿರುವ ಕುದುರೆಗಳಿಗೆ ರೋಗ ಬರುವಂತೆ ಮಾಡುತ್ತಾಳೆ.

ಇದರಿಂದ ಅವನ ಮಕ್ಕಳು ಕಾಯಿಲೆಗೆ ಬಲಿಯಾಗುದ. ಆಗ ರಾಯಣ್ಣ ಇದೆಲ್ಲ ಕೊರವಂಜಿಯ ಕಾಟವೆಂದು ತಿಳಿದು ಅವಳ ಕಾಲುಹಿಡಿದು ಬೇಡಿಕೊಂಡು, ತನ್ನ ಮನೆಗೆ ಕರೆದುಕೊಂಡು ಹೋಗಿ ಹೆಂಡತಿ ಮಕ್ಕಳನ್ನು ಮತ್ತು ಜಾನುವಾರುಗಳನ್ನು ಬದುಕಿಸಿ ಕೊಡುವಂತೆ ಕೇಳಿದನು. ಯಾವ ಯಾವ ಕುಲದವರು ಕೊರವಂಜಿಯನ್ನು ಊರು ಮತ್ತು ಪಟ್ಟಣವನ್ನು ಬಿಡಿಸಿ ಕಳುಹಿಸಿದ್ದರೋ ಅವರೇ ಮತ್ತೇ ಕೊರವಂಜಿಯನ್ನು ಕರೆದುಕೊಂಡು ಹೋಗಿ, ಅವಳಿಗೆ ಪೂಜೆ ಮಾಡಿ ಅವಳಿಂದ ಕಣಿ ಕೇಳಿ ಅವಳಲ್ಲಿರುವ ನೆಲುವು ಮತ್ತು ಗಿಲಗಿಂಚಿಗಳನ್ನು ಕೊಂಡುಕೊಂಡರು. ದ್ಯಾಮವ್ವನ ಪವಾಡದಿಂದ ತಾಯಿಯ ಮೊಲೆಹಾಲು ಬಿಟ್ಟ ಕಂದಮ್ಮಗಳು ಪುನಃ ಹಾಲು ಕುಡಿಯುವಂತೆ ಮಾಡಿದಳು.

೫.೩.೩.೨.ರಾಯಣ್ಣನೊಂದಿಗೆ ಹೋರಾಟ

ಶಿವನ ಮಗಳಾದಂತಹ ದ್ಯಾಮವ್ವ ರಾಯಣ್ಣನೊಂದಿಗೆ ಸ್ಪರ್ಧೆಗೆ ನಿಲ್ಲುತ್ತಾಳೆ. ಅಂದರೆ ಪಗಡೆ ಆಡಲು ನಿಲ್ಲುವಳು, ಅಷ್ಟೆ ಅಲ್ಲದೇ ಅವಳು ಏಳು ಊರಿನ ಗೌಡರನ್ನು ಕರೆಸಿ ಸ್ಪರ್ಧೆಗೆ ನಿಲ್ಲುವಳು, ರಾತ್ರಿ ಹಗಲು ಊಟ ನಿದ್ರೆ ಬಿಟ್ಟು, ಪಗಡೆ ಆಡಿದರೂ ಗೆಲ್ಲಲೂ ಆಗುತ್ತಿಲ್ಲ. ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುತ್ತಿದ್ದರೂ ರಾಯಣ್ಣಗೆ ನಿದ್ರೆ ಬರುತ್ತಿಲ್ಲ, ಊಟ ಸೇರುತ್ತಿಲ್ಲ. ಆದರೆ ರಾಯಣ್ಣಗೆ ನಾನು ಸ್ಪರ್ಧೆ ಮಾಡುತ್ತಿರುವುದು ಯಾರೊಂದಿಗೆ ಎಂಬುದು ಅವನಿಗೆ ಗೊತ್ತಿಲ್ಲ. ಹಾಗಾಗಿ ಅವನು ಮಲಗಿದಾಗ 'ಅವನಿಗೆ ಕೆಟ್ಟ ಕನಸು ಬೀಳುತ್ತದೆ.

ಕೆಟ್ಟೆ ಕೆಟ್ಟೆ ಶಿವನೆ ಕೆಟ್ಟ ಸ್ವಪ್ನವ ಕಂಡೆ
ಹತ್ತಿದ ಮಂಚ ತಳ ತಳಕು
ಏರಿದ ಮಂಚ ತಳ ತಳಕು ಆದರೆ
ಸತ್ಯವ್ವ ನೀನ್ಯಾರೆ ನೆಲೆ ಹೇಳೆ' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಆಕೆ ಕೊಡುವ ಉತ್ತರ ರೂಪಕದ ರೂಪದಲ್ಲಿದೆ. ನೆಲೆಹೇಳು ಎಂದರೆ ನಾನು ಹೇಗೆ ಹೇಳಲಿ ಗೊಲ್ಲಳ್ಳಿಯ ಸತ್ಯವ್ವ ನಾನು ಎಂದು ಹೇಳುತ್ತಾಳೆ. ಅವನಿಗೆ ಅದು ಅರ್ಥವಾಗದು. ಕೊನೆಗೆ ಉಪ್ಪರಿಗೆ ಮೇಲಿರುವ ನೀರು ತನ್ನಷ್ಟಕ್ಕೆ ತಾವೆ ಕಾಯುವಂತೆ ಪವಾಡ ಮಾಡುತ್ತಾಳೆ. ಆಗ ದ್ಯಾಮವ್ವನ ಪವಾಡ ಗೊತ್ತಾಗಿ ರಾಯಣ್ಣ ಆ ನೀರಿನಲ್ಲಿ ಸ್ನಾನ ಮಾಡು. ಉಟ್ಟುಕೊಳ್ಳುವುದಕ್ಕೆ ಹೊಸ ಸೀರೆ ತಂದೀನಿ ಎಂದು ಹೇಳುತ್ತಾನೆ. ಹಸಿರು ಬಳೆ ತೊಟ್ಟುಕೊ ಕೊರವಂಜಿಯ ತುಂಬ ಹೊನ್ನು ಹೊಯ್ಯುತ್ತೀನಿ ಎಂದು ಹೇಳುತ್ತಾನೆ. ಬಳೆಗಾರನನ್ನು ಕರೆಸಿ ಬಳೆ ತೊಡಿಸುತ್ತಾನೆ. ಕೆಂಚುಗಾರನನ್ನು ಕರೆಸಿ ಗೊಲ್ಲ ಕಡಗವನ್ನು ತೊಡಿಸಿದನು. ಕರಿಯ ಕಂಬಳಿಯ ಗದ್ದಿಗೆ ಮಾಡಿ ಪೂರ್ವ ದಿಕ್ಕಿಗೆ ದ್ಯಾಮವ್ವನನ್ನು ಕುಳ್ಳರಿಸಿ ಅವಳಿಗೆ ಈ ರೀತಿ ಕೇಳುತ್ತಾನೆ.

'ಸಂಪನ್ನರ ಕೂಡೆ ಸರಸ ಮಾಡಿದಂಗೆ
ಸರಸವೇನಮ್ಮ ನನ್ನ ಕೂಡೆ॥ ಅಕ್ಕ ದ್ಯಾಮವ್ವ
ವಾಲೆ ಬಂಗಾರ ಇಡುಬಾರೆ.' *(ಲಕ್ಷ್ಮಜ್ಜಿ ಮತ್ತು ಸಂಗಡಿಗರು ಹಾಡಿದ ದ್ಯಾಮವ್ವನ ಕಾವ್ಯ)*

ಆಗ ದ್ಯಾಮವ್ವ ಅವನ ಇಡಿ ಶ್ರೀಮಂತಿಕೆಗೆ ಹೀಗೆ ಉತ್ತರ ಕೊಡುತ್ತಾಳೆ. 'ವಾಲೆ ನನಗ್ಯಾಕೆ ಬೀದಿ ಬೀದಿ ತಿರುಗುವ ಗೊಲ್ಲತಿಗೆ, ಆರು ತಿಂಗಳ ಕಾಲ ಸೆರೆ ಹಾಕಿದ ರಾಯಣ್ಣ ನಿನ್ನ ಸಂಪತ್ತು ಉರಿದು ಹೋಗಲಿ ಎಂದು ಶಾಪಕೊಡುತ್ತಾಳೆ ಸರ್ಪನ ಕೂಡೆ ಸರಸ ಹಾಡಿದೆನಮ್ಮ ನಿನ್ನ ಕೂಡ ಸರಸ ಯಾಕಮ್ಮ ಎಂದು ಬಂಗಾರ ಹಾಕಿಕೊ ಎಂದು ಹೇಳುತ್ತಾನೆ.' ಅದನ್ನು ಕೂಡ ತಿರಸ್ಕರಿಸುತ್ತಾಳೆ.

೫.೩.೩.೩.ದ್ಯಾಮವ್ವ ಸೆರೆಮನೆಯಿಂದ ಬಿಡುಗಡೆಗೊಂಡಿದ್ದು:

ರಾಯಣ್ಣ ದ್ಯಾಮವ್ವನ ಮಹತ್ವವನ್ನು ಬಹಳ ಕಾಲದ ನಂತರ ತಿಳಿದುಕೊಂಡು ಅವಳನ್ನು ಬಿಡುಗಡೆಮಾಡಿ ವಜ್ರ ವೈಢೂರ್ಯಗಳನ್ನು ಕೊಡಲು ಬಂದಾಗ ಅವನ್ನೆಲ್ಲ ತಿರಸ್ಕರಿಸಿ, ಅವನ ಅಹಂಕಾರವನ್ನು ಕಡಿಮೆ ಮಾಡಿ, ಅವನ ಸಂಪತ್ತು ನಾಶಮಾಡಿ ಅಲ್ಲಿಂದ ಹೊರಬರುತ್ತಾಳೆ. ಆಗ ರಾಯಣ್ಣ ಆಕೆಯನ್ನು ನಿಲ್ಲುವಂತೆ ಕೇಳುತ್ತಾನೆ. ಅವಳು ಬೇಡವೆಂದರೂ ಹೂವಿನ ಪಲ್ಲಕ್ಕಿಯನ್ನು ಮಾಡಿಸಿ ಉರಿಮೆಯವರನ್ನು ಕರೆಸಿ ಜೋಡುರುಮೆ ಬಡಿಸಿಕೊಂಡು, ಸಕಲ ಮರ್ಯಾದೆಯೊಂದಿಗೆ ಓಕುಳಿ ಆಡುತ್ತಾ ಛತ್ರಿ ಛಾಮರ ಬೀಸುತ್ತಾ ಪಂಜು ಬೆಳಗುತ್ತಾ ಕಳಿಸಿಕೊಡುತ್ತಾರೆ. ಅದರಲ್ಲೂ ಇಪ್ಪತೊಂದು ಪಂಜು ಆಗಬೇಕು ನಲವತ್ತು ಪಂಜು ತರಿಸುವಂತೆ ಹೇಳುತ್ತಾಳೆ.

"ಸಾಮಾನ್ಯವಾಗಿ ಜನಪದರು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಹೇಳುವುದು ವಾಡಿಕೆ. ಅದರಂತೆ ಸ್ತ್ರೀದೇವತೆಯ ಅನುಗ್ರಹದಿಂದ ಅವಳನ್ನು ಪೂಜಿಸುವುದರಿಂದ ಹರಕೆ ತೀರಿಸುವುದರಿಂದ ತಮಗೆ ಬಂದಂತಹ ಗಂಡಾಂತರಗಳು ನೋವು ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂದು ನಂಬಿ ದಲಿತರು ಸ್ತ್ರೀ ದೇವತೆಗಳನ್ನು ಆರಾಧಿಸುತ್ತಾ ಸತ್ಯ ಅಂತ ನಂಬುತ್ತಾ ಇಂದಿಗೂ ಬದುಕುತಿದ್ದಾರೆ." *(ನಾಗೇಶ್ ಹೆಬ್ಬಾಲೆ ದಲಿತ ಸ್ತ್ರೀ ದೇವತೆಗಳು ಪುಟ ೧೬, ೨೦೧೧)*

ಈ ಅಭಿಪ್ರಾಯಕ್ಕೆ ಪೂರಕವಾಗಿ ಹೇಳುವುದಾದರೆ ದ್ಯಾಮವ್ವ ಕೂಡ ದಲಿತರ ದೇವತೆ ಆ ಕಾರಣದಿಂದ ಅವಳಿಗೆ ಅಗಸ ಬಟ್ಟೆ ಒಗೆದು ಕೊಡಲಿಲ್ಲ, ಕುಂಬಾರ ಕುಡಿಕೆ ಕೊಡಲಿಲ್ಲ, ಲಿಂಗಾಯಿತರು ಮತ್ತು ಬ್ರಾಹ್ಮಣರು ಅವಳನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ ಅಷ್ಟೆ ಅಲ್ಲ, ದಲಿತರ ಮಾತಂಗಿ ಜೊತೆಗೆ ದ್ಯಾಮವ್ವ ಒಡನಾಟ ಇಟ್ಟುಕೊಳ್ಳುತ್ತಾಳೆ ಆ ಕಾರಣದಿಂದ ಅವಳನ್ನು ದಲಿತರಂತೆ ಕಾಣುತ್ತಾರೆ.

೫.೩.೪.ದ್ಯಾಮವ್ವನ ಆಚರಣೆ ಮತ್ತು ಸಂಪ್ರದಾಯಗಳು

ಗೊಲ್ಲಳಮ್ಮನ ಬಗ್ಗೆ ಮಾಹಿತಿಕೊಟ್ಟವರು ತೋಪಿನ ಗೊಲ್ಲಳ್ಳಿವಾಸಿ ಪಾಂಡ್ಯಪ್ಪ ಈತ ದೇವತೆಗೊಲ್ಲರ ಬೆಡಗಿಗೆ ಸೇರಿದವರು.

೫.೩.೪.೧. ಬನ್ನಿ ಮುಡಿಯುವುದು

ಈ ಕಾರ್ಯಕ್ರಮವನ್ನು ದಸರಾ ಹಬ್ಬದಲ್ಲಿ ಮಾಡುತ್ತಾರೆ. ೯ ದಿನಗಳ ಕಾಲ ಪೂಜೆಗೆ ಪ್ರತಿಷ್ಠಾಪಿಸಿ ಪ್ರತಿದಿನ ಭಜನೆ ಮಾಡುತ್ತಾರೆ. ೯ ನೇ ದಿನ ಶುಕ್ರವಾರವಾಗಿರುತ್ತದೆ. ಮೈಸೂರಿನಲ್ಲಿ ದಸರ ಪ್ರಾರಂಭವಾದ

ದಿನ ಆನೆಯ ಮೇಲೆ ಅಂಭಾರಿಯನ್ನು ತಯಾರಿಸಿ ಅದರಲ್ಲಿ ಉತ್ಸವ ಮೂರ್ತಿಯನ್ನಿಟ್ಟು ಬೆಳಿಗ್ಗೆ ೧೦ ಗಂಟೆಯಿಂದ ಮದ್ಯಾಹ್ನ ಒಂದು ಗಂಟೆಯ ವರೆಗೆ ಮೆರವಣಿಗೆ ಮಾಡುತ್ತಾರೆ.

೫.೩.೪.೨. ದೇವರ ಕಾಲಿಗೆ ನೀರು ಹಾಕುವುದು

ಈ ಆಚರಣೆಯಂತೆ ಆರಂಭವಾದರೆ ಮೊದಲು ಹಟ್ಟಿಗಳು ಸ್ವಚ್ಛತೆಯಿಂದ, ಸೀಮೆಂಟ್ ರಸ್ತೆಗಳಿಂದ ಕೂಡಿರದ ಸಂದರ್ಭದಲ್ಲಿ ಜೊತೆಗೆ ಕಡುಬಿಸಿಲಿನಲ್ಲಿ ಬರಿಕಾಲಿನಲ್ಲಿ ದೇವರನ್ನು ಹೊತ್ತುಕೊಂಡು ಹೋಗಬೇಕಿತ್ತು ಅಂತಹ ಸಮಯದಲ್ಲಿ ಅವರಿಗೆ ಕಾಲು ಸುಡುತ್ತಿದ್ದವು ಆಗ ಹುಟ್ಟಿಕೊಂಡ ಸಂಪ್ರದಾಯ ಇಂದಿಗೂ ಕೂಡ ಮುಂದುವರೆದುಕೊಂಡು ಬಂದಿದೆ.

೫.೩.೪.೩.ಉದ್ಭವ ಲಿಂಗದ ಪೂಜೆ

ಕಾಡುಗೊಲ್ಲರ ಯಾವ ದೇವರಿಗೂ ಆಕಾರವಿಲ್ಲ. ಅವರ ಗಂಡು ದೇವರು ಮತ್ತು ಹೆಣ್ಣು ದೇವರುಗಳು ನೆಲೆಗೊಂಡಿರುವುದು ಕರಿಯ ಕಲ್ಲಿನಲ್ಲಿ. ಗೊಲ್ಲಹಳ್ಳಿಯಿಂದ ಒಂದು ಕಿಲೋಮೀಟರ್ ದೂರದಲ್ಲಿ ದ್ಯಾಮವ್ವನ ಉದ್ಭವಲಿಂಗವಿದೆ, ಅದಕ್ಕೆ ಸ್ತ್ರೀ ದೇವತೆಯ ಆಕಾರವಿಲ್ಲ. ನಾನು ಹಲವಾರು ಕಡೆ ಉದ್ಭವ ಲಿಂಗಗಳನ್ನು ಗಮನಿಸಿದಾಗ ಅವು ಒಂದೇ ರೀತಿ ಇರುವುದು ಕಂಡುಬರುತ್ತದೆ. ಚಿತ್ರಹಳ್ಳಿಯಲ್ಲಿ ಉದ್ಭವವಾಗಿರುವ ಚಿತ್ರಲಿಂಗ, ನಂದಿಹಳ್ಳಿಯಲ್ಲಿ ಉದ್ಭವವಾಗಿರುವ ಚಿತ್ರಲಿಂಗ ಕೂಡಲಹಳ್ಳಿಯಲ್ಲಿ ಉದ್ಭವವಾಗಿರುವ ಕಾಟಮಲಿಂಗ, ಬೇವಿನಹಳ್ಳಿಯಲ್ಲಿ ಉದ್ಭವವಾಗಿರುವ ಕರಿಯಮ್ಮ, ಕರಿಓಬವ್ವನಹಳ್ಳಿಯಲ್ಲಿ ಉದ್ಭವವಾಗಿರುವ ಮಾರಮ್ಮ, ತಾಳವಟ್ಟಿ ಕರಿಯಮ್ಮ ಇವೆಲ್ಲವೂ ಕಲ್ಲಿನ ರೂಪದಲ್ಲಿವೆ.

ಊರಿನಲ್ಲಿರುವ ಗೊಲ್ಲಳಮ್ಮನ ಮೂರ್ತಿಯನ್ನು ಉತ್ಸವ ಮೂರ್ತಿ ಎಂದು ಕರೆಯುತ್ತಾರೆ. ಅದಕ್ಕೆ ಅಲಂಕಾರ ಮಾಡಿಕೊಂಡು ಆನೆಯ ಮೇಲೆ ಅಂಬಾರಿಯನ್ನು ಇಟ್ಟು ಅದರಲ್ಲಿ ದ್ಯಾಮವ್ವನನ್ನು ಇಟ್ಟು ಮೆರವಣಿಗೆ ಮಾಡುತ್ತಾರೆ. ಬಂದು ತೋಪಿನಲ್ಲಿರುವ ಉದ್ಭವಲಿಂಗ ಇರುವ ಜಾಗದಲ್ಲಿ ಕರಿಯ ಕಂಬಳಿಯನ್ನು ಹಾಸಿ ಗದ್ದಿಗೆ ಮಾಡಿ ನಂತರ ಮಂಗಳಾರತಿ ಮಾಡಿ ಬನ್ನಿಯ ಮರದ ಬಳಿಗೆ ಹೋಗಿ ಮತ್ತೆ ಕಂಬಳಿ ಹಾಸಿ ಗದ್ದಿಗೆ ಮಾಡುತ್ತಾರೆ. ನಂತರ ಪೂಜೆಯನ್ನು ಮಾಡಿ ಬನ್ನಿಯ ಮರಕ್ಕೆ ಬಿಲ್ಲಿನಿಂದ ಬಾಣ ಹೊಡೆಯುತ್ತಾನೆ. ಈ ಕೆಲಸವನ್ನು ಮಾಡುವುದು ದ್ಯಾಮವ್ವ ದೇವರ ಪೂಜಾರಿ. ಉದ್ಭವ ಮೂರ್ತಿಯನ್ನು ಶಿಲಾಮೂರ್ತಿ ಎಂದು ಉತ್ಸವ ಮೂರ್ತಿಯನ್ನು ಮೇರುಮೂರ್ತಿ ಎಂದು ಕರೆಯುತ್ತಾರೆ.

೫.೩.೫. ದ್ಯಾಮವ್ವನ ಜಾತ್ರೆ

ದ್ಯಾಮವ್ವನ ಜಾತ್ರೆ ಪ್ರಾರಂಭವಾಗುವುದೇ ಕಂಕಣ ಕಟ್ಟುವುದರ ಮೂಲಕ. ಅಂದರೆ ದ್ಯಾಮವ್ವನನ್ನ ಮದುವಣಗಿತ್ತಿಯಾಗಿ ತಯಾರು ಮಾಡುವ ಶಾಸ್ತ್ರವೇ ಕಂಕಣ ಕಟ್ಟುವುದು. ಹಟ್ಟಿಯಗೌಡರು ಈ ಕೆಲಸವನ್ನು ನೆರವೇರಿಸುತ್ತಾರೆ. ದ್ಯಾಮವ್ವನಿಗೆ ಹೊಸ ಸೀರೆ ಉಡಿಸಿ ಹೂವಿನಿಂದ ಅಲಂಕಾರ

ಮಾಡುತ್ತಾರೆ. ಅದರಲ್ಲೂ ಹಸಿರು ಸೀರೆಯನ್ನು ಉಡಿಸಿ ಮಡಿಲಕ್ಕಿ ತುಂಬುತ್ತಾರೆ. ಕೈಗಳಿಗೆ ಹಸಿರು ಬಳೆಗಳನ್ನು ತೊಡಿಸುತ್ತಾರೆ. ಹಸಿರು ಎನ್ನುವುದು ಫಲವಂತಿಕೆಯ ಸಂಕೇತ, ಇಷ್ಟೆಲ್ಲಾ ಮಾಡಿದ ನಂತರ ಅಡ್ಡ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆಯನ್ನು ಮಾಡುತ್ತಾರೆ.

ದ್ಯಾಮವ್ವ ಹಲವಾರು ಕಡೆ ನೆಲೆಗೊಂಡಿರುವುದರಿಂದ ಹಲವಾರು ರೀತಿಯ ಸಂಪ್ರದಾಯ ಆಚರಣೆಗಳು ಹುಟ್ಟಿಕೊಂಡಿವೆ ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲುಕು ಹಿರೇಗುಂಟನೂರಿನಲ್ಲಿ ದ್ಯಾಮವ್ವನ ಜಾತ್ರೆ ನಡೆಯುತ್ತದೆ. ಆದರೆ ಒಂದು ಕಾಲದಲ್ಲಿ ಕಾಡುಗೊಲ್ಲರ ದೇವತೆಯಾದ ದ್ಯಾಮವ್ವ ಈಗ ಒಕ್ಕಲಿಗರು, ಲಿಂಗಾಯಿತರು ಒಂದೇ ಮಾತಿನಲ್ಲಿ ಹೇಳುವುದಾದರೆ ಮೇಲ್ವರ್ಗದವರು ಆರಾಧನೆ ಮಾಡುವುದರಿಂದ ವೈದಿಕರನ್ನು ಪೂಜಾರಿಯನ್ನಾಗಿ ಮಾಡಿದ್ದಾರೆ. ಬುಡಕಟ್ಟಿನಿಂದ ಸ್ಥಿತ್ಯಂತರ ಹೊಂದಿರುವುದು ಕಂಡುಬರುತ್ತದೆ. ಎಲ್ಲ ಸ್ಥಳಗಳಿಗಿಂತಲೂ ತೋಪಿನಗೊಲ್ಲಹಳ್ಳಿಯೇ ಮೂಲ ಎಂದು ಮಾಹಿತಿದಾರರು ಹೇಳುತ್ತಾರೆ.

ಮಾಹಿತಿದಾರರು ಹೇಳುವ ಪ್ರಕಾರ ದ್ಯಾಮವ್ವನ ಜಾತ್ರೆಯು ಶಿವರಾತ್ರಿ ತಿಂಗಳಿನಲ್ಲಿ ನಡೆಯುತ್ತದೆ. ಸುಮಾರು ಐದು ದಿನಗಳ ಕಾಲ ಕಾಡುಗೊಲ್ಲರ ಅನೇಕ ಆಚರಣೆಗಳು ಸಂಪ್ರದಾಯಗಳೊಂದಿಗೆ ನಡೆಯುತ್ತವೆ.

೫.೩.೫.೧. ಹೊಳೆಗೆ ಹೋಗುವುದು

ಸಾಮನ್ಯವಾಗಿ ಕಾಡುಗೊಲ್ಲರ ಎಲ್ಲ ದೇವರುಗಳು ಜಲಧಿಗೆ ಹೋಗುತ್ತವೆ. ಜಲಧಿಯ ಬಗ್ಗೆ ಹಿಂದೆ ವಿವರಿಸಿದ ಕಾರಣ ಇಲ್ಲಿ ವಿವರಿಸುವ ಅಗತ್ಯವಿಲ್ಲ ಆದರೂ ಸಂಕ್ಷಿಪ್ತವಾಗಿ ಹೇಳಿ ಮುಂದಕ್ಕೆ ಸಾಗುತ್ತೇನೆ. ಜಲಧಿಗೆ ಹೋಗುವುದು ಜಾತ್ರೆ ಪ್ರಾರಂಭವಾದ ಮೊದಲನೆಯ ದಿನ. ಇವರು ಮದ್ಯಾಹ್ನದ ಹೊತ್ತಿಗೆ ಜಲಧಿಗೆ ಹೋಗಿ ದೇವರ ಎಲ್ಲಾ ವಸ್ತುಗಳನ್ನು ತೊಳೆದುಕೊಂಡು ಸಂಜೆಯ ಹೊತ್ತಿಗೆ ಹಟ್ಟಿಯನ್ನು ಸೇರುತ್ತಾರೆ. ಹಟ್ಟಿಯನ್ನು ಪ್ರವೇಶಿಸುವುದಕ್ಕಿಂತ ಮುಂಚಿತವಾಗಿ ದ್ಯಾಮವ್ವ ನೆಲೆಗೊಂಡಿರುವ ತೋಪಿಗೆ ಮೆರವಣಿಗೆ ಮಾಡಿಕೊಂಡು ಹಟ್ಟಿಗೆ ಬರುತ್ತಾರೆ. ತೋಪಿನಲ್ಲಿ ಸ್ವಲ್ಪ ಕಾಲ ಗದ್ದಿಗೆ ಮಾಡಿ ಮಂಗಳಾರತಿ ಮಾಡಿಸಿಕೊಂಡು ಬರುತ್ತಾರೆ. ಹಟ್ಟಿಯ ಹುದಿ ಬಾಗಿಲಲ್ಲಿ ದೇವತೆ ಬಂದು ನಿಂತ ತಕ್ಷಣ ಆಕೆಗೆ ಅಕ್ಕಿ ಹಿಟ್ಟಿನಿಂದ ಮಾಡಿದ ಆರತಿಯನ್ನು ಮೂರು ಜನ ಮುತ್ತೈದೆಯರು ಬೆಳಗುತ್ತಾರೆ. ಆ ನಂತರ ಗುಡಿದುಂಬಿಸುತ್ತಾರೆ.

೫.೩.೫.೨. ಸೇಂದಿ ಸೇವನೆ

ಇದು ಬಹಳ ವಿಶಿಷ್ಟವಾದ ಆಚರಣೆಯಾಗಿದೆ. ಕಾಡುಗೊಲ್ಲರ ಪುರುಷ ದೈವಗಳಿಗೆ ಸೇಂದಿ, ಕೋಳಿ, ಹಂದಿ ಕೆಲವು ಧ್ಯಾನಗಳು ನಿಷೇಧವಾಗಿರುವುದು ಕ್ಷೇತ್ರಕಾರ್ಯದ ಮಾಹಿತಿಯಿಂದ ತಿಳಿದು ಬಂದಿದೆ. ಆದರೆ ಮಾತೃದೇವತೆಗಳಾದ ಕರಿಯಮ್ಮ, ಮಾರಮ್ಮ, ಯಲ್ಲಮ್ಮ ಗೊಲ್ಲಳಮ್ಮ ಮುಂತಾದ ದೇವತೆಗಳಿಗೆ ಕೋಳಿ ಹಂದಿ ಮತ್ತು ಸೇಂದಿ ನಿಷೇಧವಾಗಿಲ್ಲ. ಕಾರಣ ಇವು ಹಟ್ಟಿಯ ಒಳಗೆ

ನೆಲೆಗೊಂಡಿಲ್ಲ. ಹಾಗಾಗಿ ಇವು ಗ್ರಾಮದೇವತೆಗಳಾದ ಕಾರಣದಿಂದ ಬೇರೆ ಸಮುದಾಯದವರು ಇವರ ಭಕ್ತರಾದ ಕಾರಣ ಭಕ್ತರು ಯಾವ ರೀತಿಯ ಹರಕೆಯನ್ನಾದರೂ ಒಪ್ಪಿಸಬಹುದು. ಆದರೂ ಕೆಲ ಗೊಲ್ಲರು ಕೋಳಿ ಮತ್ತು ಹಂದಿಯನ್ನು ನಿಷೇಧಿಸಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಹೆಂಡದ ಮೊರೆ ಹೋಗಿರುವುದು ಕಂಡು ಬರುತ್ತದೆ. ಆದರೆ ದ್ಯಾಮವ್ವಗೆ ಸೇಂದಿ ಎಂದರೆ ಪಂಚ ಪ್ರಾಣ. ಯಾಕೆಂದರೆ ಮೊದಲೇ ಹೇಳಿದ ಹಾಗೆ ಈಕೆ ದಲಿತ ದೇವತೆ. ಹಾಗಾಗಿ ದಲಿತರು ಭಕ್ತರಾದರು. ಜೊತೆಗೆ ಮಾತಂಗಮ್ಮ ಗೆಳತಿಯಾದ ಕಾರಣ ಮಾತಂಗಮ್ಮನ ಆರಾಧಕರಾದ ಮಣೆಗಾರರು ಆಂಧ್ರಕ್ಕೆ ಹೋಗಿ ಉಪವಾಸ ವ್ರತದ ಆಚರಣೆ ಮಾಡಿ ಬರಿಗಾಲಲ್ಲಿ ನಡೆದುಕೊಂಡುಹೋಗಿ ಕುಂಬಾರರ ಮನೆಯಿಂದ ತಂದಿರುವ ಹೊಸ ಮಡಿಕೆಯಲ್ಲಿ ಸೇಂದಿ ತುಂಬಿಕೊಂಡು ಬರುತ್ತಾರೆ. ದಲಿತರು ಸಾರಾಯಿ ಕುಡಿಯುವುದು ಆರೋಗ್ಯ ಕೆಡಿಸಿಕೊಳ್ಳಲಿಕ್ಕಲ್ಲ. ತನ್ನ ಅಸಹಾಯಕ ಸ್ಥಿತಿಯನ್ನು ಹೆಂಡಕುಡಿದ ನಂತರ ಹೊರ ಹಾಕಿ ಮನಸ್ಸು ಹಗುರ ಮಾಡಿಕೊಳ್ಳುತ್ತಾರೆ. ಕೇವಲ ದಲಿತರೊಬ್ಬರೆ ಹೆಂಡದ ದಾಸರಾಗಿಲಿಲ್ಲ ಎಂಬುದನ್ನು ಮರೆಯಬಾರದು. ಉನ್ನತ ವರ್ಗದವರೂ ಆಗಿದ್ದಾರೆ. ಅವರು ಮಾರ್ಯಾದೆಗೋಸ್ಕರ ಉಂಡು ಮಲಗುತ್ತಿದ್ದರು. ಆದರೆ ಇವರು ಇಡೀ ದಿನದ ನೋವು ಶೋಷಣೆಯನ್ನು ಹೆಂಡ ಕುಡಿದಾದ ನಂತರ ಹೊರ ಹಾಕುತ್ತಿದ್ದರು.

೫.೩.೫.೩. ಮೀಸಲು ತೀರಿಸುವುದು

ಹಿರೇಗುಂಟನೂರಿನಲ್ಲಿ ನಡೆಯುವ ಜಾತ್ರೆಯು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದ ಕಾರಣ, ಬಹಳ ಪ್ರಾಚೀನ ಕಾಲದಿಂದಲೂ ಯಾವ ಯಾವ ಸಮುದಾಯದವರು ಏನೇನು ಮೀಸಲು ಅರ್ಪಿಸಬೇಕು ಎಂಬುದು ರೂಢಿಗೆ ಬಂದಿದೆ.

ಹಿಂದೆ ಐದು ಇದ್ದ ಒಕ್ಕಲಿಗರು ಮನೆಗಳು ಇವತ್ತು ಜಾಸ್ತಿಯಾಗಿವೆ. ಆ ಮನೆತನದವರೆ ದ್ಯಾಮವ್ವನನ್ನು ಮದುಮಗಳಾಗಿ ಮಾಡುತ್ತಾರೆ. ಮಕ್ಕಳಿಗೆ ಹೆಸರಿಡುವುದು, ಗೃಹ ಪ್ರವೇಶಕ್ಕೆ ಹಾಗೂ ಶುಭ ಸಂದರ್ಭಗಳಿಗೆ ಈ ಐದು ಮನೆತನದವರನ್ನು ಬಳಸಿಕೊಳ್ಳಬೇಕು. ಇವರನ್ನು ಚೌಡಿಕೆ ಜೋಗಿಗಳೆಂದು ಕರೆಯುತ್ತಾರೆ. ಇವರು ಬಂದು ಮನೆಯಲ್ಲಿ ಗೋವಿಂದನ ದಾಸೋಹ ಮಾಡಿದ ಮೇಲೆ ತೋಡದ ಹಬ್ಬ ಮಾಡುತ್ತಾರೆ.

ತೋಟದಹಬ್ಬ ಎಂದರೆ ತೋಟವನ್ನು ಹೊಂದಿರುವ ಯಾವುದೇ ಸಮುದಾಯವಿರಬಹುದು. ತಮ್ಮ ತೆಂಗಿನ ಮರಗಳಿಗೆ ಯಾವುದೇ ರೀತಿಯ ರೋಗ ಬಾರದಿರಲಿ ಎಂದು ಕುರಿಯನ್ನು ದ್ಯಾಮವ್ವಗೆ ತೋಟದಲ್ಲಿಯೇ ಬಲಿಕೊಡುತ್ತಾರೆ. ಬಲಿಕೊಟ್ಟಂತಹ ಸಮಯದಲ್ಲಿ ಕುರಿಯ ರಕ್ತವನ್ನು ಹಿಡಿದುಕೊಂಡು ತನ್ನ ತೋಟದ ಸುತ್ತ ಚೆಲ್ಲುತ್ತಾ ಬರುತ್ತಾರೆ. ಆ ನಂತರ ಕುರಿಯ ಚರ್ಮ ತೆಗೆದು ತಲೆಯನ್ನು ಚೌಡಿಕೆ ಜೋಗಪ್ಪನಿಗೆ ಕೊಡುತ್ತಾರೆ. ನಂತರ ಮಾಂಸದ ಅಡುಗೆಯನ್ನು ಮಾಡಿ ಯಾರು ಊಟಕ್ಕೆ ಬಂದರೂ ಇಲ್ಲವೆನ್ನದಂತೆ ಊಟಕ್ಕೆ ಬಡಿಸುತ್ತಾರೆ. ಇದನ್ನೆ ಅವರು ತೋಟದ ಹಬ್ಬ ಎಂದು ಕರೆಯುತ್ತಾರೆ.

ಚರಗಾ ಹಾಕುವುದರ ಬಗ್ಗೆ ನಮ್ಮ ಜನಪದರಲ್ಲಿ ತಮ್ಮದೇ ಆದ ನಂಬಿಕೆ ಇದೆ. ಪ್ರಸ್ತುತ ದಿನಗಳಲ್ಲಿಯೂ ಪ್ರತಿಯೊಂದು ಸಮುದಾಯದವರು ಇಂತಹ ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. ಆದರೆ ಅವರು ನಂಬಿರುವ ಪ್ರಕಾರ ಯಾವ ದೇವರ ಹೆಸರು ಹೇಳಿ ಚರಗವನ್ನು ಹಾಕುತ್ತಾರೊ ಆ ದೇವರು ಬೆಳೆಯನ್ನು ಕಾಪಾಡುತ್ತಾನೆಂಬ ನಂಬಿಕೆ ಅವರಲ್ಲಿದೆ. ಇದು ರಕ್ತವೇ ಆಗಿರಬೇಕಿಲ್ಲ, ಅನ್ನವನ್ನು ನೀರಿನಲ್ಲಿ ಸೇರಿಸಿ ಹೊಲದ ಸುತ್ತಲು ಹಾಕುತ್ತಾರೆ. ರಾಗಿ ಮುದ್ದೆಯನ್ನು ನೀರಿನಲ್ಲಿ ಸೇರಿಸಿ ಹಾಕುತ್ತಾರೆ. ಆದರೆ ಅದೇ ರೀತಿ ರಕ್ತವನ್ನು ಸಹ ಹೊಲಕ್ಕೆ ಔಷಧಿಯೋಪಾದಿಯಲ್ಲಿ ಹಾಕುತ್ತಾರೆ. ಆದರೆ ಇದರ ಹಿಂದೆ ಇರುವ ವೈಜ್ಞಾನಿಕತೆ ಎಂದರೆ ಪ್ರತಿಯೊಂದು ಕ್ರಿಮಿ ಕೀಟಗಳಿಗೂ ಒಂದು ಅವಧಿ ಇರುತ್ತದೆ ಆ ಅವಧಿ ಮುಗಿದ ಮೇಲೆ ಆ ಕೀಟಗಳು ಪೈರಿಗೆ ತೊಂದರೆ ಕೊಡದೆ ಸಾಯುತ್ತವೆ. ಹಾಗಾಗಿ ಇಲ್ಲಿ ಮುಖ್ಯವಾಗಿ ಗಮನಿಸಬಹುದಾದ ಅಂಶವೆಂದರೆ ರಕ್ತವನ್ನೋ ಅಥವಾ ಅನ್ನ ತೀರ್ಥ ಮುಂತಾದವುಗಳನ್ನು ಹೊಲಕ್ಕೆ ಹಾಕುವುದರಿಂದ ಕ್ರಿಮಿ ಕೀಟಗಳಿಗೆ ಇದು ಆಹಾರವಾಗುತ್ತದೆ. ಹೀಗಾಗಿ ಅವು ಪೈರಿನ ತಂಟೆಗೆ ಹೋಗುವುದಿಲ್ಲ ಇವುಗಳು ರಕ್ತ ಅಥವಾ ಅನ್ನವನ್ನು ತಿನ್ನವುದೊಳಗಾಗಿ ಪೈರು ಬೆಳೆಯುತ್ತದೆ. ಇದರಿಂದಾಗಿ ಪೈರಿಗೆ ರೋಗ ತಪ್ಪುತ್ತದೆ. ಇದು ಪೈರಿನ ವಿಷಯವಾದರೆ ಇದು ಮನುಷ್ಯರಿಗೂ ಅನ್ವಯವಾಗುತ್ತದೆ. ಪ್ಲೇಗು ಮಲೇರಿಯಾ, ದಡಾರ ಮುಂತಾದ ಕಾಯಿಲೆಗಳಿಂದ ಮನಷ್ಯರನ್ನು ಕಾಪಾಡುವ ಸಲುವಾಗಿ ಹೋಳಿಗೆಮ್ಮ ದಢಾರಮ್ಮ, ಕಾಲರಮ್ಮ, ಪ್ಲೇಗಮ್ಮ ಮುಂತಾದವು ಹಟ್ಟಿಯ ಒಳಗೆ ಪ್ರವೇಶಿವೆ. ಆ ಕಾರಣದಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ಹಟ್ಟಿಯ ಅಥವಾ ಊರಿನ ಹಿರಿಯರೆಲ್ಲ ಒಂದು ಕಡೆ ಸೇರಿ ಮಾತನಾಡಿ ಅವುಗಳಿಗೆ ಕುರಿ ಇಲ್ಲವೇ ಕೋಳಿ ಬಲಿಕೊಡಬೇಕೆಂದು ತೀರ್ಮಾನಿಸಿ, ಮನೆಗೆ ಇಷ್ಟು ಎಂದು ದುಡ್ಡು ವಸೂಲಿ ಮಾಡಿ, ಬಂದಿರುವ ದುಡ್ಡಿನಿಂದ ಕುರಿಯನ್ನು ತಂದು ಕೊಯ್ದು ಅದರ ರಕ್ತವನ್ನು ಹಟ್ಟಿಯ ಅಥವಾ ಊರಿನ ಸುತ್ತಲೂ ಚೆಲ್ಲುತ್ತಾರೆ. ಅದನ್ನು ಆಡು ಭಾಷೆಯಲ್ಲಿ 'ಸರಗು' ಹಾಕುವುದು ಎಂದು ಕರೆಯುತ್ತಾರೆ.

೫.೩.೫.೪. ಮೀಸಲು ಕಟ್ಟುವುದು

ಕಾಡುಗೊಲ್ಲರಲ್ಲಿ ಇಂತಹ ಮನೆತನದವರೆ ಮೀಸಲು ಕಟ್ಟಿಕೊಳ್ಳಬೇಕೆಂಬ ನಿಯಮವೇನು ಇಲ್ಲ ಮತ್ತು ಇವರು ಮೀಸಲು ಕಟ್ಟಿಕೊಳ್ಳಲು ಬಳಸುವ ವಸ್ತುಗಳೆಂದರೆ ತಾವು ಬೆಳೆಯುವ ಧಾನ್ಯಗಳಾದ ಶೇಂಗಾ, ತೊಗರಿ, ಅವರೆ, ಹುರುಳಿ, ಹಾಲು, ಮೊಸರು, ತುಪ್ಪ, ಗಿಣ್ಣದಹಾಲು ಜೊತೆಗೆ ದುಡ್ಡು ಮೀಸಲು ಕಟ್ಟಿಕೊಳ್ಳುತ್ತಾರೆ. ಇವೆಲ್ಲವೂ ಪಶುಪಾಲನೆಯ ಸಂಕೇತಗಳಾಗುವುದರ ಜೊತೆಗೆ ತಾವು ಆರಾಧನೆ ಮಾಡವ ದೇವರು ಕೂಡ ತಾವು ಬಳಸುವ ವಸ್ತುಗಳನ್ನೇ ಮೀಸಲು ಕಟ್ಟಿಕೊಳ್ಳುತ್ತಾರೆ. ಅಕ್ಕಿ, ಬೇಳೆ, ಬೆಲ್ಲ, ಅಡಿಕೆ, ಎಲೆ ಮುಂತಾದವುಗಳನ್ನು ಉನ್ನತ ವರ್ಗದವರು ಮೀಸಲು ಕಟ್ಟಿಕೊಳ್ಳುತ್ತಾರೆ.

೫.೩.೫.೫. ಗಬ್ಬಿದ ಕುರಿ ಬಲಿಕೊಡುವುದು

ಕಾಡುಗೊಲ್ಲರು ಕುರಿಗಳನ್ನು ಗುರುತಿಸುವ ಚಾಕ ಚಕ್ಯತೆಯನ್ನು ಕಲಿತುಕೊಂಡಿದ್ದಾರೆ. ಹೊಳಿಗೆ ಹೋಗಿ ಬಂದ ದ್ಯಾಮವ್ವಳಿಗೆ ಒಂದು ಭಾನುಗುರಿ ಮತ್ತು ಗಬ್ಬದ ಕುರಿಯನ್ನು ಬಲಿಕೊಡುತ್ತಾರೆ.

ಅಂದರೆ ಹೊಳೆಗೆ ಹೋದಾಗ ಸಾಕಷ್ಟು ಜನರು ನೋಡಿ ಆಕೆಗೆ ದೃಷ್ಟಿಯು ತೀರುತ್ತದೆ ಎಂಬುದು ಅವರ ಅಭಿಪ್ರಾಯ. ಭಾನುಕುರಿ ಎಂದರೆ ಕುರಿಯ ಕೂದಲು ಕಪ್ಪು ಬಿಳುಪು ಮಿಶ್ರಿತವಾಗಿರಬೇಕು. ಹೊಟ್ಟೆಯ ಕೆಳಗೆ ಬಿಳಿಯಬಣ್ಣವನ್ನು ಹೊಂದಿರಬೇಕು. ಅಂತಹ ಕುರಿಯನ್ನು ಭಾನು ಕುರಿ ಎಂದು ಕರೆಯುತ್ತಾರೆ. ಎಂದು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿವಾಸಿ ರಾಮಲಿಂಗಪ್ಪ ಹೇಳುತ್ತಾರೆ. ಅದೇ ರೀತಿ ಈ ಕುರಿ ಗೊಡ್ಡು ಬಿದ್ದಿರುತ್ತದೆ. ಇದರ ಜೊತೆಗೆ ಒಂದು ಗರ್ಭಧರಿಸಿದ ಕುರಿಯನ್ನು ಸಹ ಬಲಿಕೊಡುತ್ತಾರೆ.

೫.೩.೫.೬. ಬಲಿಕೊಡುವ ಪದ್ಧತಿ

ದ್ಯಾಮವ್ವನ ಜಾತ್ರೆಯಲ್ಲಿ ಹಲವು ಸಮುದಾಯಗಳು ಒಂದು ಕಡೆ ಸೇರುವುದರಿಂದ ಯಾವ ಯಾವ ಪ್ರಾಣಿಯನ್ನು ತಿನ್ನುತ್ತಾರೋ ಆ ರೀತಿಯ ಪ್ರಾಣಿ ಪಕ್ಷಿಗಳನ್ನು ಬಲಿಕೊಡುತ್ತಾರೆ. ಕಾಡುಗೊಲ್ಲರು ಮೇಕೆ ಕುರಿಗಳನ್ನು ಹೊರತುಪಡಿಸಿ ಬೇರೆ ಯಾವ ಪ್ರಾಣಿಯನ್ನು ಬಲಿಕೊಡುವುದಿಲ್ಲ. ಉಳಿದ ಸಮುದಾಯಗಳು ತಮಗೆ ಅನುಕೂಲವಾದ ರೀತಿಯಲ್ಲಿ ಕೋಳಿ ಇಲ್ಲವೇ ಕೋಣ ಮುಂತಾದವುಗಳನ್ನು ಬಲಿಕೊಡುತ್ತಾರೆ. ಇತ್ತೀಚೆಗೆ ಸರ್ಕಾರ ಬಲಿಕೊಡುವುದನ್ನು ನಿಷೇಧಿಸಿದ್ದರೂ ಸರ್ಕಾರದ ಕಣ್ಣು ತಪ್ಪಿಸಿ ಬಲಿಕೊಡುವ ಪದ್ದತಿ ಮುಂದುವರಿಯುತ್ತಲೇ ಇದೆ. ಜಾತ್ರೆ ಮಂಗಳವಾರ ಪ್ರಾರಂಭವಾದರೆ ಬುಧವಾರ ಬಲಿಕೊಡುವ ಆಚರಣೆ ನಡೆಯುತ್ತದೆ.

೫.೩.೫.೭. ಉರುಳು ಸೇವೆ

ಕಾಡುಗೊಲ್ಲರ ಪ್ರವೃತ್ತಿಯಲ್ಲದ ಆಚರಣೆಯೊಂದು ಅವರಿಗೆ ಅರಿವಿಲ್ಲದೆ ಬಂದು ಸೇರಿಕೊಂಡಿದೆ. ಇದು ನಾಗರಿಕ ಸಮಾಜದ ಪ್ರಭಾವದಿಂದ ಆಗಿರುವ ಸಾಧ್ಯತೆ ಇದೆ. ಕಷ್ಟ ಕಾಲದಲ್ಲಿ ಕೈಮುಗಿದುಕೊಂಡು ಜನರು ಉಪವಾಸ ವ್ರತವನ್ನು ಆಚರಿಸುವುದರ ಜೊತೆಗೆ ಅಕ್ಕಿ ಹಿಟ್ಟಿನಿಂದ ತಯಾರು ಮಾಡಿರುವ ಆರತಿಯನ್ನು ತಲೆಯ ಮೇಲೆ ಹೊತ್ತು ಕೊಂಡು ದೇವಸ್ಥಾನಕ್ಕೆ ಬಂದು ಮೈ ತುಂಬ ನೀರು ಹಾಕಿಕೊಂಡು ದೇವಾಲಯದ ಹೊರಾಂಗಣದಲ್ಲಿ ಉರುಳುತ್ತಾರೆ. ಇದನ್ನು ಉರುಳು ಸೇವೆ ಎಂದು ಕರೆಯುತ್ತಾರೆ.

೫.೩.೫.೮.ಬೇವಿನ ಸೀರೆ ಉಡುವುದು

ಅಮ್ಮ ದಡಾರ, ಪ್ಲೇಗು ಮುಂತಾದ ಕಾಯಿಲೆಗಳು ಬಂದಾಗ ಅವುಗಳು ಬೇಗ ವಾಸಿಯಾದರೆ ಬೇವಿನ ಸೀರೆ ಉಡುವುದಾಗಿ ಕೈ ಮುಗಿದುಕೊಳ್ಳುತ್ತಾರೆ. ಅದೇ ರೀತಿ ಕೊಟ್ಟ ಮಾತಿನಂತೆ ಜಾತ್ರೆ ಶುರುವಾದ ನಂತರ ಗುರುವಾರ ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಎಲ್ಲರೂ ಉಪವಾಸ ವ್ರತ ಕೈಗೊಂಡು ಸ್ನಾನ ಮಾಡಿ ದೇಹದ ಮೇಲಿನ ಬಟ್ಟೆಯನ್ನು ತೆಗೆದು ಬೇವಿನ ಸೊಪ್ಪಿನಿಂದ ತಮ್ಮ ದೇಹವನ್ನು ಮುಚ್ಚಿಕೊಳ್ಳುತ್ತಾರೆ. ಇದು ಒಂದು ರೀತಿಯಲ್ಲಿ ಬುಡಕಟ್ಟುಗಳ ಆದಿಮ ಬದುಕನ್ನು ತೋರಿಸಿದರೂ ಸಹ ಮನುಷ್ಯರು ಶೋಷಣೆ ಮಾಡುವ ಆಚರಣೆಯಾಗಿದೆ. ಇದನ್ನು ಸರ್ಕಾರ ನಿಷೇಧಿಸಿರುವ ಕಾರಣ ಇತ್ತೀಚೆಗೆ ಶಾಸ್ತ್ರಕ್ಕಾಗಿ ಆದರೂ ಈ ಆಚರಣೆ ಮುಂದುವರಿದಿದೆ.

೫.೩.೫.೯. ಹೆಜ್ಜೆ ಸೇವೆ

ಉರುಳಿ ಸೇವೆಯಂತೆ ಹೆಜ್ಜೆ ಸೇವೆಯು ಒಂದು ಆಚರಣೆಯಾಗಿ ರೂಢಿಗತವಾಗಿ ಮುಂದುವರಿದುಕೊಂಡು ಬರುತ್ತಿದೆ. ಹೆಜ್ಜೆ ಸೇವೆಯೆಂದರೆ ಪುರುಷ ಇಲ್ಲವೇ ಮಹಿಳೆ ಇರಬಹುದು. ಬಾಯಲ್ಲಿ ಬೇವಿನ ಸೊಪ್ಪು ಹಿಡಿದುಕೊಂಡು, ತಲೆಯ ಮೇಲೆ ಆರತಿ ಹೊತ್ತುಕೊಂಡು ಒಂದೊಂದು ಹೆಜ್ಜೆಯನ್ನು ನಿಧಾನಕ್ಕೆ ಇಟ್ಟು ನಡೆದುಕೊಂಡು ಬರುವ ವಿಧಾನವೇ ಹೆಜ್ಜೆ ಸೇವೆ ದ್ಯಾಮವ್ವನ ಜಾತ್ರೆಯಲ್ಲಿ ಹೆಜ್ಜೆಯ ಸೇವೆಯನ್ನು ಕೂಡ ಮಾಡುತ್ತಾರೆ.

೫.೩.೫.೧೦. ಜವುಳ ತೆಗೆಸುವುದು

ದ್ಯಾಮವ್ವ ಬಹಳ ಶಕ್ತಿದೇವತೆ ಆದ ಕಾರಣ ಆಕೆಯ ಹೆಸರಿನಲ್ಲಿ ಮಕ್ಕಳ ತಲೆ ಕೂದಲನ್ನು ಬಿಡುತ್ತಾರೆ. ಹನ್ನೆರಡು ವೃತ್ತಿಯವರು ಕೂಡ ತಮ್ಮ ಮಕ್ಕಳ ತಲೆಕೂದಲನ್ನು ಈ ದೇವತೆಗೆ ಬಿಡುತ್ತಾರೆ. ಅಂದರೆ ದೇವಾಲಯದ ಹೊರಗಡೆ ಕರಿಯಕಂಬಳಿಯನ್ನು ಪೂರ್ವಾಭಿಮುಖವಾಗಿ ಹಾಸುತ್ತಾರೆ. ಆ ಕಂಬಳಿಗೆ ಶುದ್ಧ ನೀರನ್ನು ಚಿಮುಕಿಸಿ ಅದರ ಮೇಲೆ ಅಕ್ಕಿಕಾಳು ಹಾಕಿ ಪೂಜೆಯ ಎಲ್ಲ ಸಾಮಾನುಗಳನ್ನು ಅದರ ಮೇಲಿಟ್ಟು, ತಾಯಿ ಮತ್ತು ಮಗುವನ್ನು ಕಂಬಳಿಯ ಮೇಲೆ ಕೂರಿಸಿ ಅವರಿಗೆ ಪೂಜೆ ಮಾಡುತ್ತಾರೆ. ಆ ನಂತರ ಪೂಜಾರಪ್ಪ ಜೋಡಿಸಿದ ರೀತಿಯಲ್ಲಿ ಅಂದರೆ ವೀಳ್ಯದ ಎಲೆ ಮತ್ತು ಕೂದಲನ್ನು ಜೋಡಿಸಿ ಮಗುವಿನ ಸೋದರ ಮಾವ ಕತ್ತರಿಯಿಂದ ಮೂರು ಬಾರಿ ಕೂದಲನ್ನು ಕತ್ತರಿಸುತ್ತಾನೆ. ಆ ನಂತರ ಕ್ಷೌರಿಕ ಉಳಿದ ಕೂದಲನ್ನು ಕತ್ತರಿಸುತ್ತಾನೆ ಪೂಜೆಗೆ ಇಟ್ಟಿರುವ ೧೦೧ ರೂಪಾಯಿ ದುಡ್ಡನ್ನು ದೇವರ ಪೂಜಾರಿ ತೆಗೆದುಕೊಳ್ಳುತ್ತಾನೆ. ತಲೆ ಕೂದಲು ತೆಗಿಸಲು ಎರಡು ತೆಂಗಿನ ಕಾಯಿ, ಹನ್ನೆರಡು ಎಲೆ, ೩ ಸೇರು ಅಕ್ಕಿ, ೯ ಉತ್ತತ್ತಿ ಕೊಡಬೇಕು.

೫.೩.೫.೧೧. ಧೂಳು ಮರಿಯ ಬಲಿ

ಹನ್ನೆರಡು ಜನ ವೃತ್ತಿಯವರು ಸೇರಿ ದ್ಯಾಮವ್ವನ ಜಾತ್ರೆಗೆಂದು ಒಂದು ಸಣ್ಣ ಮರಿಯನ್ನು ಕೊಟ್ಟಿರುತ್ತಾರೆ. ಆ ಮರಿಯನ್ನು ಶುಕ್ರವಾರ ಬೆಳಗಿನ ಸಮಯ ನಾಲ್ಕು ಗಂಟೆಗೆ ಬಲಿ ಕೊಡುತ್ತಾರೆ. ಬಲಿಕೊಟ್ಟ ಧೂಳು ಮರಿಯ ಮಾಂಸವನ್ನು ಹನ್ನೆರಡು ವೃತ್ತಿಯವರು ಹಂಚಿಕೊಂಡು ತಿನ್ನುತ್ತಾರೆ.

೫.೩.೫.೧೨. ಮಾತಂಗಮ್ಮನಿಗೆ ಎಡೆ ಹಾಕುವುದು

ಧೂಳು ಮರಿಯನ್ನು ಬಲಿಕೊಟ್ಟು ಅದರ ಮಾಂಸವನ್ನು ಅಡುಗೆ ಮಾಡಿ ಅದರ ಜೊತೆಗೆ ರಾಗಿ ಮುದ್ದೆಯನ್ನು ಮಾಡಿ ಮಾತಂಗಮ್ಮನಿಗೆ ಎಡೆ ಹಾಕುವ ಪದ್ಧತಿ ಜಾರಿಯಲ್ಲಿದೆ. ಮಾತಂಗಮ್ಮ ದಲಿತರ ದೇವತೆಯಾದ ಕಾರಣ ಅವಳಿಗೆ ಹೆಂಡ ಮಾಂಸದ ಅಡುಗೆ ರಾಗಿಮುದ್ದೆಯನ್ನು ಎಡೆ ಹಾಕುತ್ತಾರೆ.

೫.೩.೫.೧೩. ಆನೆಯ ಮೇಲೆ ಮೆರವಣಿಗೆ

ಹಟ್ಟಿಯಲ್ಲಿರುವ ದ್ಯಾಮವ್ವನ್ನು ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡುತ್ತಾರೆ. ಅಂದರೆ ದಸರಾ ಹಬ್ಬದಲ್ಲಿ ಮೈಸೂರಿನಲ್ಲಿ ಚಾಮುಂಡಿಯನ್ನು ನಿಜವಾದ ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿದರೆ ಇವರು ಕೃತಕ ಆನೆಗಳ ಮೇಲೆ ಮೆರವಣಿಗೆಯನ್ನು ಮಾಡುತ್ತಾರೆ.

೫.೩.೫.೧೪. ಬಾಳೆಹಣ್ಣಿನ ಸೇವೆ

ಯಾರಿಗಾದರೂ ಗಂಡು ಮಕ್ಕಳಾದರೆ ಆ ಸಂದರ್ಭದಲ್ಲಿ ದ್ಯಾಮವ್ವನ ಕೃಪೆಯಿಂದ ಗಂಡುಮಗು ಆಗಿದೆ ಎಂದು ತಿಳಿದು ಬಾಳೆಹಣ್ಣು ಮತ್ತು ಸಕ್ಕರೆಯನ್ನು ದಾನವಾಗಿ ಕೊಡುವುದಕ್ಕೆ ಬೇಡಿಕೊಂಡಿರುತ್ತಾರೆ. ಒಂದು ಸಾವಿರದಿಂದ ಐದುನೂರು ರೂಪಾಯಿವರೆಗೆ ಪ್ರಸಾದಕ್ಕಾಗಿ ಬಾಳೆಹಣ್ಣನ್ನು ಕೊಡುತ್ತಾರೆ.

೫.೩.೫.೧೫. ಅಡ್ಡ ಪಲ್ಲಕ್ಕಿ ಉತ್ಸವ

ಶುಕ್ರವಾರ ಸಂಜೆ ಪಲ್ಲಕ್ಕಿ ಕಟ್ಟುತ್ತಾರೆ. ಅದರಲ್ಲಿ ದ್ಯಾಮವ್ವನನ್ನು ಕೂರಿಸಿ ಸಾಕಷ್ಟು ಶೃಂಗಾರ ಮಾಡಿ ಹಟ್ಟಿಯ ತುಂಬ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆ ಮಾಡಿದ ನಂತರ ತೋಪಿನಲ್ಲಿರುವ ದೇವಾಲಯಕ್ಕೆ ಹೋಗಿ ಮಂಗಳಾರತಿ ಮಾಡಿಸಿಕೊಂಡು ಬಂದು ಗುಡಿಯಲ್ಲಿ ಅಮ್ಮನನ್ನು ಕೂರಿಸುತ್ತಾರೆ.

ಅನ್ನ ದಾಸೋಹ: ದಾನಗಳಲ್ಲಿಯೇ ಶ್ರೇಷ್ಠವಾದುದು ಅನ್ನ ದಾಸೋಹ. ಈ ಕಾರ್ಯಕ್ರಮವನ್ನು ಶುಕ್ರವಾರ ರಾತ್ರಿ ಏರ್ಪಡಿಸುತ್ತಾರೆ. ಅಲ್ಲಿ ಸೇರಿರುವ ಎಲ್ಲ ಭಕ್ತಾದಿಗಳು ದಾಸೋಹಕ್ಕೆ ಬೇಕಾದ ಅಕ್ಕಿ, ಬೇಳೆ, ಬೆಲ್ಲ ಮುಂತಾದ ಪದಾರ್ಥಗಳನ್ನು ಉದಾರವಾಗಿ ನೀಡುತ್ತಾರೆ. ಅನ್ನದಾಸೋಹ ಯಾವುದೇ ಅಡ್ಡಿ ಆತಂಕಗಳಿಲ್ಲದೆ ನಡೆಯುತ್ತದೆ. ಪ್ರತಿಯೊಬ್ಬ ಭಕ್ತನು ಪ್ರಸಾದವನ್ನು ಸ್ವೀಕರಿಸುತ್ತಾನೆ.

೫.೩.೫.೧೬.ಜಾಡಿಪೂಜೆ

ಜಾಡಿ ಪೂಜೆಯ ಮೂಲಕ ಜಾತ್ರೆಯನ್ನು ಸಮಾಪ್ತಿ ಮಾಡುತ್ತಾರೆ. ಗೌಡರು ಪೂಜಾರಿಗಳು ಹಟ್ಟಿಯ ಜಗಲಿ ಮೇಲೆ ಕುಳಿತು ಖರ್ಚುವೆಚ್ಚ ವಸೂಲಿ ಮಾಡುತ್ತಾರೆ. ಒಂದು ಮನೆಗೆ ೨೫೦ ರಿಂದ ೩೦೦ ರವರೆಗೆ ಖರ್ಚು ವೆಚ್ಚ ಹಾಕುತ್ತಾರೆ. ಅಂದರೆ ಇಡೀ ಜಾತ್ರೆಯಲ್ಲಿ ದ್ಯಾಮವ್ವನಿಗಾಗಿ ಖರ್ಚು ಮಾಡಿದ ಹಣವನ್ನು ಗೌಡರು ಒಟ್ಟು ಆ ದೇವರಿಗೆ ಇರುವ ಒಕ್ಕಲುಗಳಿಗೆ ಹಾಕುತ್ತಾರೆ.

೫.೩.೫.೧೭. ದ್ಯಾಮವ್ವನ ಗುಡಿಕಟ್ಟುಗಳು

೧. ಹೇಮದಳ ಬಾಲೇನಹಳ್ಳಿ

೨. ಕಸ್ತೂರಿ ರಂಗಪ್ಪನಹಳ್ಳಿ

೩. ಮುಂಗಸವಳ್ಳಿ

೪. ಕತ್ತರಕಟ್ಟೆ

೫. ಎಮ್ ದೊರೆ

ಅಧ್ಯಾಯ : ಆರು

ಕಾಡುಗೊಲ್ಲರ ಕಟ್ಟೆಮನೆಗಳು ಮತ್ತು ಗುಡಿಕಟ್ಟುಗಳು

ಅಧ್ಯಾಯ: ಆರು

ಕಾಡುಗೊಲ್ಲರ ಕಟ್ಟೆಮನೆಗಳು ಮತ್ತು ಗುಡಿಕಟ್ಟುಗಳು

ಕಾಡುಗೊಲ್ಲರ ಮೂಲದ ಬಗ್ಗೆ ಹೇಳುವುದಾದರೆ ಇವರ ಮೂಲ ಅಸ್ಪಷ್ಟವಾಗಿದೆ. ಅವರ ಮೌಖಿಕ ಪರಂಪರೆಯ ಮೂಲಗಳು ದೆಹಲಿಯಿಂದ ಬಂದವರೆಂದು ಹೇಳಿದರೆ, ಇನ್ನೂ ಕೆಲವು ಮೂಲಗಳು ಆಂಧ್ರದಿಂದ ಬಂದವರೆಂದು ಹೇಳುತ್ತವೆ. ಕೃಷ್ಣಮೂರ್ತಿ ಹನೂರರು ಕಾಡುಗೊಲ್ಲರು ಕರ್ನಾಟಕದ ಮೂಲದವರು ಎಂಬ ಅನಂತ ಕೃಷ್ಣಯ್ಯನವರ ಮಾತನ್ನು ಸಮರ್ಥಿಸುವುದನ್ನು ಗಮನಿಸಿದರೆ, ಕಾಡುಗೊಲ್ಲರು ಮೂಲತಃ ಕರ್ನಾಟಕದವರೆಂದು ಹೇಳಬಹುದು. ಏಕೆಂದರೆ ದೆಹಲಿಯಿಂದ ಬಂದವರು ಎಂದು ಹೇಳುವುದಕ್ಕೆ ಯಾವುದೆ ಆಧಾರಗಳು ದೊರೆಯುವುದಿಲ್ಲ. ಆಂಧ್ರದಿಂದ ಬಂದವರು ಎಂದು ಹೇಳುವುದಕ್ಕೆ ಕಾಡುಗೊಲ್ಲರ ಸಾಂಸ್ಕೃತಿಕ ಕೇಂದ್ರಗಳಾದ ಕಟ್ಟೆಮನೆಗಳು ಆಂಧ್ರ ಮತ್ತು ಕರ್ನಾಟಕದ ಗಡಿಭಾಗಗಳಲ್ಲಿ ಕಂಡುಬರುವುದೇ ಪ್ರಮುಖ ಕುರುಹುಗಳಾಗಿವೆ. ಇದರ ಜೊತೆಗೆ ಕ್ಷೇತ್ರಕಾರ್ಯದ ಮಾಹಿತಿಯಿಂದ ಆಂಧ್ರದಲ್ಲಿ ವಾಸವಾಗಿರುವ ಕಾಡುಗೊಲ್ಲರು ತಮ್ಮ ಸಾಂಸ್ಕೃತಿಕ ಕೇಂದ್ರಗಳಾದ ಕಟ್ಟೆಮನೆಗಳು ಕರ್ನಾಟಕದಲ್ಲಿರುವುದನ್ನು ಹೇಳುತ್ತಾರೆ. ಹಾಗಾಗಿ ಮೂಲತಃ ಕಾಡುಗೊಲ್ಲರು ಎಲ್ಲಿಯವರು ಯಾವ ಕಡೆಯಿಂದ ಬಂದವರು ಎಂದು ಹೇಳುವುದು ಕಷ್ಟವಾದರೂ ಆಂಧ್ರದ ಕಾಡುಗೊಲ್ಲರನ್ನು ಮತ್ತು ಕರ್ನಾಟಕದ ಕಾಡುಗೊಲ್ಲರನ್ನು ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಆಂಧ್ರದ ಕಾಡುಗೊಲ್ಲರು ಬಹುತೇಕ ಕರ್ನಾಟಕದ ಕಾಡುಗೊಲ್ಲರ ಸಂಸ್ಕೃತಿಯನ್ನು ಅನುಸರಿಸುತ್ತಿರುವುದು ಕಂಡುಬಂದಿದೆ. ಅದೇನೆ ಭಿನ್ನಾಭಿಪ್ರಾಯಗಳಿದ್ದರೂ ಕಾಡುಗೊಲ್ಲರಲ್ಲಿ ಮುಖ್ಯವಾಗಿ ಮೂರು ಕಟ್ಟೆಮನೆಗಳಿರುವುದು ತಿಳಿದುಬಂದಿದೆ. ಇಂದೂ ಕೂಡ ಕಾಡುಗೊಲ್ಲರ ಅನನ್ಯತೆ ಉಳಿದಿರುವುದು ಈ ಕಟ್ಟೆಮನೆಗಳಿಂದ ಎಂದು ಹೇಳಬಹುದು. ಕಟ್ಟೆಮನೆಗಳ ಅವಶ್ಯಕತೆ ಮತ್ತು ಅನಿವಾರ್ಯತೆ ಏನಿತ್ತು, ಎಂಬ ಪ್ರಶ್ನೆ ಏಳಬಹುದು. ಆದರೆ ಕಾಡುಗೊಲ್ಲರು ಪ್ರಾರಂಭದ ಕಾಲಘಟ್ಟದಲ್ಲಿ ಪಶುಪಾಲನೆಯನ್ನು ಮೂಲ ವೃತ್ತಿಯನ್ನಾಗಿ ಮಾಡಿಕೊಂಡವರು, ಹೀಗಾಗಿ ಅವರು ಯಾವ ಪ್ರದೇಶದಲ್ಲಿ ವಾಸವಾಗಿದ್ದರೂ, ವರ್ಷಕ್ಕೆ ಒಂದು ಸಲ ಕಟ್ಟೆಮನೆಗೆ ಬಂದು ಹೋಗುವುದು ರೂಢಿಯಲ್ಲಿತ್ತು. ಇದರ ಜೊತೆಗೆ ತಮ್ಮ ನ್ಯಾಯ ತೀರ್ಮಾನಗಳನ್ನು ಬಗೆಹರಿಸಿಕೊಳ್ಳಲು ಅವರಿಗೆ ಕಟ್ಟೆಮನೆಯ ಅವಶ್ಯಕತೆ ಇತ್ತು. ಏಕೆಂದರೆ ಇವರು ಮೊದಲೇ ಊರಿನಿಂದ ದೂರ ಉಳಿದವರು. ಅನಕ್ಷರಸ್ಥರು ಅಲೆಮಾರಿಗಳು ಆಗಿರುವುದರಿಂದ ಕೋರ್ಟು ಕಛೇರಿ ಎಂದರೆ ಎಲ್ಲಿಲ್ಲದ

ಭಯ. ಜೊತೆಗೆ ಮಡಿಮೈಲಿಗೆ ಎಂಬ ಬದ್ಧತೆಗೆ ಒಳಗಾದವರು. ನಗರ ಪ್ರವೇಶಿಸಿದರೆ ತಮಗೆ ಮೈಲಿಗೆಯಾಗುತ್ತದೆ. ಇತರೆ ಸಮುದಾಯಗಳ ಮನೆಗಳಲ್ಲಿ ಊಟ ಮಾಡುತ್ತಿರಲಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಬ್ರಾಹ್ಮಣರನ್ನು ಮೀರಿಸುವಂತಹ ಸಂಪ್ರದಾಯದವರೆಂದು ಹೇಳಬಹುದು.

"ಕಾಡುಗೊಲ್ಲರಲ್ಲಿರುವ ನ್ಯಾಯ ಪಂಚಾಯಿತಿಯ ಸ್ವರೂಪ ಬೇರೆ ಯಾವ ಸಮುದಾಯದಲ್ಲಿಯೂ ಇಲ್ಲ ಎಂದರೆ ತಪ್ಪಾಗಲಾರದು. ಈ ಸಮುದಾಯದ ಪಂಚಾಯಿತಿಯ ರಚನೆ, ತೀರ್ಮಾನಗಳು, ಜಗಳ, ವ್ಯಾಜ್ಯಗಳು ಇತ್ಯಾದಿಗಳು ಬುಡಕಟ್ಟು ಅಥವಾ ಕಟ್ಟೆ ಮನೆಯ ವಿಷಯಗಳಿಗೆ ಸಂಬಂಧಿದವುಗಳಾಗಿರುತ್ತವೆ." *(ಗುರುಲಿಂಗಯ್ಯ ಎಂ. ನಾಗಪ್ಪ ವಿ., 'ಕಾಡುಗೊಲ್ಲ' ಪುಟ-೯೭, ೨೦೦೮)*

ಕಾಡುಗೊಲ್ಲರಲ್ಲಿ ಮೊದಲು ಎರಡು ಬೆಡಗುಗಳಿರುವುದು ಕಂಡುಬಂದಿದೆ. ಮೊದಲನೆಯದು ಚಿತ್ತಮುತ್ತಿ (ಸೂರ್ಯವಂಶ) ಎರಡನೆಯದು ಚಂದಮುತ್ತಿ (ಚಂದ್ರವಂಶ). ಈ ಕಾರಣಕ್ಕಾಗಿ ಇವರು ಕಟ್ಟೆಮನೆಗಳು ಕೂಡ ಎರಡು ಇರುವುದು ತಿಳಿದುಬಂದಿದೆ. ಚಿತ್ತಮುತ್ತಿ ವಂಶದವರು ಮೊದಲು ಆಂಧ್ರದ ಗಡಿಭಾಗದಲ್ಲಿ ಕಂಡುಬರುವ 'ರೇಪಲ್ಲಿ' ಎಂಬ ಊರನ್ನು ಕಟ್ಟೆಮನೆಯಾನ್ನಾಗಿ ಮಾಡಿಕೊಂಡಿದ್ದರು. ಚಂದಮುತ್ತಿ ವಂಶದವರು 'ಮಾಪಲ್ಲಿ' ಎಂಬುದನ್ನು ಕಟ್ಟೆಮನೆಯಾನ್ನಾಗಿ ಮಾಡಿಕೊಂಡಿದ್ದರು.

ಇವರ ಅಲೆಮಾರಿತನ ಮುಂದುವರಿದ ಕಾರಣ ಕಾಲನಂತರ ರೇಪಲ್ಲಿ ಮತ್ತು ಮಾಪಲ್ಲಿಗಳನ್ನು ಬಿಟ್ಟು ಹಾಲೇನಹಳ್ಳಿ ಮತ್ತು ಪಾಲೇನಹಳ್ಳಿಗಳು ಕಟ್ಟೆಮನೆಗಳಾಗಿ ಬದಲಾಗಿರುವುದು ಕಂಡುಬರುತ್ತದೆ. ಈ ಎರಡು ಕಟ್ಟೆಮನೆಗಳು ಕರ್ನಾಟಕದಲ್ಲಿ ಇರುವುದನ್ನು ಗಮನಿಸಬಹುದು. ಇದರಿಂದಾಗಿ ಕೆಲವು ವಿದ್ವಾಂಸರು ಕಾಡುಗೊಲ್ಲರು ಮೂಲತಃ ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದು ಇಲ್ಲಿಯೇ ನೆಲಸಿದ್ದಾರೆಂದು ಹೇಳುತ್ತಾರೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಈ ಎರಡು ರಾಜ್ಯಗಳು ವಿಭಾಗವಾಗಿದ್ದ ಸಂದರ್ಭದಲ್ಲಿ ಬಯಲು ಅಥವಾ ಹುಲ್ಲುಗಾವಲು ಪ್ರದೇಶದಲ್ಲಿ ಕಾಡುಗೊಲ್ಲರು ವಾಸವಾಗಿದ್ದರು. ಅಷ್ಟೆ ಅಲ್ಲದೆ ಅವರು ವಾಸಿಸುವ ಪ್ರದೇಶ, ಕನ್ನಡ ಮಾತನಾಡುವ ಪ್ರದೇಶವಾಗಿತ್ತು. ಇಂದಿಗೂ ಆಂಧ್ರದ ಮತ್ತು ಕರ್ನಾಟಕದ ಕಾಡುಗೊಲ್ಲರಿಗೂ ವೈವಾಹಿಕ ಸಂಬಂಧಗಳು ಮುಂದುವರೆದಿರುವುದನ್ನು ಕಾಣುತ್ತೇವೆ. ಜನಸಂಖ್ಯೆಯ ದೃಷ್ಟಿಯಿಂದ ಆಂಧ್ರದಕ್ಕೆ ಹೋಲಿಸಿದರೆ ಕರ್ನಾಟಕದಲ್ಲೇ ಕಾಡುಗೊಲ್ಲರ ಸಂಖ್ಯೆ ಹೆಚ್ಚಾಗಿದೆ. ಆಂಧ್ರದಲ್ಲಿ ವಾಸವಾಗಿರುವ ಕಾಡುಗೊಲ್ಲರು ಕರ್ನಾಟಕದಲ್ಲಿರುವ ತಮ್ಮ ದೇವರುಗಳಿಗೆ ಪ್ರತಿವರ್ಷ ಬಂದು ಹೋಗುವುದನ್ನು ಗಮನಿಸಬಹುದು.

೬.೧ ಕರ್ನಾಟಕದಲ್ಲಿ ಕಾಡುಗೊಲ್ಲರ ಕಟ್ಟೆಮನೆಗಳು

ಆರಂಭದಲ್ಲಿ ಎರಡು ಇದ್ದ ಕಟ್ಟೆಮನೆಗಳು ಕಾಲನಂತರ ಮೂರು ಆಗಿರುವುದನ್ನು ಗಮನಿಸಬಹುದು. ಆದರೆ ಮೂರನೆಯ ಕಟ್ಟೆಮನೆ ಯಾವಾಗ ಸೇರಿಕೊಂಡಿತು ಎಂಬುದು ತಿಳಿದು ಬಂದಿಲ್ಲ. ಆಂಧ್ರದ ಗಡಿಭಾಗಗಳಲ್ಲಿ ಇವರ ಕಟ್ಟೆಮನೆಗಳು ಎರಡು ಕಂಡುಬಂದರೆ ಕರ್ನಾಟಕದಲ್ಲಿ ಮೂರು ಕಟ್ಟೆಮನೆಗಳು ಕಂಡುಬರುವುದು ಒಂದು ವಿಶೇಷವಾಗಿದೆ. ಇಲ್ಲಿ ಇನ್ನೊಂದು ಹೊಸ ಕುಲ ಸೇರ್ಪಡೆಯಾಗುತ್ತದೆ. ಇದು ತನ್ನದೇ ಕುಲದಿಂದ ಹಬ್ಬಿರುವಂತಹದಲ್ಲ. ಬೇರೊಂದು ಕುಲ

ಕಾಡುಗೊಲ್ಲರಾಗಿ ಪರಿವರ್ತನೆಯಾದುದರ ಬಗ್ಗೆ ಒಂದು ದೊಡ್ಡ ಇತಿಹಾಸವೇ ಇರುವುದನ್ನು ಕಾಣಬಹುದು. ಕಾಡುಗೊಲ್ಲರು ಯಾವುದೇ ಕಾರ್ಯ ಮಾಡಿದರೂ ಕರಾರುವಕ್ಕಾಗಿ ಮಾಡುತ್ತಿದ್ದರು.

ಕಾಡುಗೊಲ್ಲರಲ್ಲಿ ಹಿಂದೆ ಎರಡು ಕುಲಗಳಿರುವುದು ಮತ್ತು ಎರಡು ಕಟ್ಟೆಮನೆಗಳಿರುವುದು ತಿಳಿದುಬಂದಿದೆ. ಆದರೆ ಇಲ್ಲಿ ಇನ್ನೊಂದು ಹೊಸ ಕುಲ ಸೇರ್ಪಡೆಯಾಗುವುದರ ಜೊತೆಗೆ ಹೊಸದೊಂದು ಕಟ್ಟೆಮನೆ ಸೃಷ್ಟಿಯಾಗಿದೆ. ಆ ಕುಲಕ್ಕೆ ರಾಮಮುತ್ತಿ. ಇವರ ಕಟ್ಟೆಮನೆ ರಾಮೇನಹಳ್ಳಿಯಲ್ಲಿದೆ. ಪ್ರಸ್ತುತ ಕಾಡುಗೊಲ್ಲರ ಕಟ್ಟೆಮನೆಗಳು ಮೂರು ಇರುವುದನ್ನು ಗಮನಿಸಬಹುದು

೧. ಚಿತ್ತಮುತ್ತಿ (ಸೂರ್ಯವಂಶ) ಕರಿಓಬೇನಹಳ್ಳಿ ಕಟ್ಟೆಮನೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿದೆ.

೨. ಚಂದಮುತ್ತಿ (ಚಂದ್ರವಂಶ) ತಾಳವಟ್ಟಿ ಕಟ್ಟೆಮನೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿದೆ.

೩. ರಾಮಮುತ್ತಿ (ರಾಮವಂಶ) ರಾಮೇನಹಳ್ಳಿ ಕಟ್ಟೆಮನೆ ಚಿತ್ರದುರ್ಗಜಿಲ್ಲೆಯ ಹಿರಿಯೂರು ತಾಲೂಕಿನಲ್ಲಿದೆ.

ಇನ್ನೊಂದು ವಿಶೇಷವೆಂದರೆ ಈ ಮೂರು ಕಟ್ಟೆಮನೆಗಳು ಕಂಡುಬರುವುದು ಚಿತ್ರದುರ್ಗ ಜಿಲ್ಲೆಯಲ್ಲಿ. ಹಾಗಾಗಿ ಚಿತ್ರದುರ್ಗ ಜಿಲ್ಲೆಯನ್ನು ಕಾಡುಗೊಲ್ಲರ ತವರೂರು ಎಂದು ಕರೆದರೆ ತಪ್ಪಾಗಲಾರದು. ಕರ್ನಾಟಕ ಮತ್ತು ಆಂಧ್ರದ ಯಾವ ಮೂಲೆಯಲ್ಲಿ ಕಾಡುಗೊಲ್ಲರು ವಾಸವಾಗಿದ್ದರೂ ಅವರು ಈ ಮೂರು ಕಟ್ಟೆಮನೆಗಳಿಗೆ ಸೇರಿದವರಾಗಿರುತ್ತಾರೆ. ಹಾಗಾಗಿ ಕಾಡುಗೊಲ್ಲರಲ್ಲಿ ಮೂರು ಪ್ರಮುಖ ಕುಲಗಳು ಕಂಡುಬರುತ್ತೇವೆ.

೬.೨. ಚಿತ್ತಮುತ್ತಿ ಕುಲದ ಬೆಡಗುಗಳು

೬.೨.೧. ಕರಡಿಗೊಲ್ಲರು

ಇವರು ಕರಿಓಬೇನಹಳ್ಳಿ ಕಟ್ಟೆಮನೆಗೆ ಸೇರಿದವರು. ಕರಡಿಗೊಲ್ಲರ ಉಪಬೆಡಗುಗಳು ಕೂಡ ಈ ಕಟ್ಟೆಮನೆಗೆ ಸೇರುತ್ತಾರೆ.

೬.೨.೨. ಸನ್ನೆಯಗೊಲ್ಲರು

ಇವರ ಕಟ್ಟೆಮನೆ ತಾಳವಟ್ಟಿ. ಪ್ರಸ್ತುತ ಈ ಕಟ್ಟೆಮನೆಯೂ ನಶಿಸಿಹೋಗಿ ಇವರ ಕಟ್ಟೆಮನೆಯನ್ನು ಯರಬಳ್ಳಿಗೊಲ್ಲರಹಟ್ಟಿಗೆ ಬದಲಾಯಿಸಿಕೊಂಡಿದ್ದಾರೆ. ಇದರ ಉಪ ಬೆಡಗುಗಳು ಕೂಡ ಈ ಕಟ್ಟೆಮನೆಗೆ ಸೇರುತ್ತದೆ.

೬.೨.೩. ಹರಿನ ಮತ್ತು ಮೆರನ ಗೊಲ್ಲರು

ಇವರು ರಾಮೇನಹಳ್ಳಿ ಕಟ್ಟೆಮನೆಗೆ ಸೇರಿದವರು. ಪ್ರಸ್ತುತ ಈ ಹಳ್ಳಿ ಕೂಡ ನಾಶ ಹೊಂದಿ ಕಟ್ಟೆಮನೆಯನ್ನು ಮರಡಿಹಳ್ಳಿ ಗೊಲ್ಲರಹಟ್ಟಿಗೆ ಬದಲಾಯಿಸಿಕೊಂಡಿದ್ದಾರೆ.

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ಕರಿಓಬೇನಹಳ್ಳಿ ಕಟ್ಟೆಮನೆಗೆ ಸೇರಿದವರೊಂದಿಗೆ ತಾಳವಟ್ಟಿ ಕಟ್ಟೆಮನೆಯವರು ಮತ್ತು ರಾಮೇನಹಳ್ಳಿ ಕಟ್ಟೆಮನೆಯವರು ವೈವಾಹಿಕ ಸಂಬಂಧವನ್ನು ನಡೆಸಬಹುದು. ಆದರೆ ತಾಳವಟ್ಟಿ ಕಟ್ಟೆಮನೆಯವರು ರಾಮೇನಹಳ್ಳಿ ಕಟ್ಟೆಮನೆಯೊಂದಿಗೆ ವೈವಾಹಿಕ ಸಂಬಂಧ ನಿಷೇಧವಾಗಿದೆ. ಕಾರಣ ಸನ್ನೆಯಗೊಲ್ಲರು ತಮ್ಮ ಪ್ರಮುಖ ಆರಾಧ್ಯ ದೈವವಾದ

ಕಾಟಮಲಿಂಗವನ್ನು ಹರಿನ ಮತ್ತು ಮೇರನ ಗೊಲ್ಲರಿಗೆ ಬಿಟ್ಟುಕೊಟ್ಟದ್ದಾರೆ. ಹಾಗಾಗಿ ಇವರ ದೇವರು ಒಂದೆಯಾಗಿವುದರಿಂದ ವೈವಾಹಿಕ ಸಂಬಂಧ ಏರ್ಪಡುವುದಿಲ್ಲ.

ಕಾಡುಗೊಲ್ಲರಲ್ಲಿ ಕಟ್ಟೆಮನೆಯ ವ್ಯವಸ್ಥೆಯನ್ನು ಜಾರಿಗೆ ತಂದವ ಎತ್ತಪ್ಪನೆಂದು ಹೇಳಬಹುದು. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಕಾರಣ ಕಾಡುಗೊಲ್ಲರು ಯಾವ ರೀತಿ ಜೀವನ ನಡೆಸಬೇಕು ಎಂಬುದನ್ನು ಕುರಿತು ಕಾನೂನು ಮಾಡಿ ವ್ಯವಸ್ಥಿತವಾದ ಜೀವನ ಕ್ರಮಕ್ಕೆ ಕಾರಣಿಕರ್ತನಾಗಿದ್ದಾನೆ. ಇವನಲ್ಲಿ ನ್ಯಾಯ ತೀರ್ಮಾನ ಮಾಡುವ ಮತ್ತು ಶಿಕ್ಷೆ ವಿಧಿಸುವ ಸಾಮರ್ಥ್ಯಗಳಿದ್ದವು. ಅವನು ಹೇಳಿರುವ ನಿಯಮಗಳನ್ನು ಕಾಳೇಗೌಡ ನಾಗವಾರ ಈ ರೀತಿ ಉಲ್ಲೇಖಿಸಿದ್ದಾರೆ. "ನಿಯಮಗಳನ್ನು ಮೀರಿ ಇತರ ಜಾತಿಗಳೊಡನೆ ಬೆರೆಯುವುದು, ಅಶುದ್ಧವೆಂದು ಪರಿಗಣಿಸಲಾಗಿರುವ ಕೆಲಸ ಕಾರ್ಯಗಳಲ್ಲಿ ತೊಡಗುವುದು, ಗಂಡ ಹೆಂಡಿರು ದುಡುಕಿ ಬೇರಾಗುವುದು, ಹಾದರ, ಕಳ್ಳತನ ಮುಂತಾದ ಹಲವು ಬಗೆಯ ತಪ್ಪುಗಳಿಗೆ ಎತ್ತಪ್ಪ ಆಯಾ ಅಪರಾಧದ ಪ್ರಮಾಣವನ್ನು ಅನುಸರಿಸಿ ಅನೇಕ ರೀತಿಯ ದಂಡ ಮತ್ತು ಶಿಕ್ಷೆಯ ವಿಧಾನಗಳನ್ನು ಸೂಚಿಸಿದ್ದಾನೆ.

೬.೩ಕಟ್ಟೆಮನೆಗಳ ಪ್ರಾಮುಖ್ಯತೆ

ಕಟ್ಟೆಮನೆಗಳು ಕಾಡುಗೊಲ್ಲರಲ್ಲಿ ಮತ್ತು ಮ್ಯಾಸಬೇಡರಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ ಎಂದು ಹೇಳಬಹುದು. ಏಕೆಂದರೆ ಹಿಂದೆ ಕಟ್ಟೆಮನೆಗಳ ತೀರ್ಪು ಸುಪ್ರೀಂ ಕೋರ್ಟಿನ ತೀರ್ಪಿಗೆ ಸಮನಾಗಿತ್ತು. ಈ ಕಟ್ಟೆಮನೆಗಳಿಂದಾಗಿ ಕಾಡುಗೊಲ್ಲರು ತಮ್ಮ ಪರಂಪರೆಯನ್ನು ಉಳಿಸಿಕೊಂಡು ಬರುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವೆಂದು ಹೇಳಬಹುದು.

ಓದು ಬರಹ ಅರಿಯದ ಹೊತ್ತಿನಲ್ಲಿ ಮಾತಿಗೆ ಪ್ರಮುಖ ಸ್ಥಾನವನ್ನು ಕಾಡುಗೊಲ್ಲರು ಕೊಟ್ಟಿದ್ದರು. ಅಷ್ಟೇ ಅಲ್ಲ ಆಗ ಅಧಿಕಾರ ವಹಿಸಿಕೊಂಡಿದ್ದ ಗೌಡ, ಪೂಜಾರಿಗಳು ಯಾವುದೇ ಪಕ್ಷಪಾತವಿಲ್ಲದೆ ನ್ಯಾಯ ತಿರ್ಮಾನ ಮಾಡುತ್ತಿದ್ದರು ಎನ್ನವುದು ಕಂಡುಬರುತ್ತದೆ. ಏಳು ಹಳ್ಳಿಯ ಗೌಡರು ಒಂದು ಸ್ಥಳದಲ್ಲಿರುವ ಕಟ್ಟೆಮನೆಯಲ್ಲಿ ಸೇರುತ್ತಿದ್ದರು. ಕಟ್ಟೆಮನೆಯ ಗೌಡರು ಕೊಡುವ ತೀರ್ಪು ಅಂತಿಮವಾದ ತೀರ್ಪಾಗಿರುತಿತ್ತು.

"ಇಂದಿಗೂ ಕೂಡ ಬಹುತೇಕ ಕಾಡುಗೊಲ್ಲರು ಪೋಲಿಸ್ ಠಾಣೆ ಮತ್ತು ಕೋರ್ಟ್‌ಗಳನ್ನು ನೋಡಿಲ್ಲವೆಂದೇ ಹೇಳಬೇಕು. ಅಷ್ಟರ ಮಟ್ಟಿಗೆ ಈ ಸಮುದಾಯದ ಜನರು ಮುಗ್ಧರು, ಪರಸ್ಪರ ಪ್ರೀತಿಯುಳ್ಳವರು." (ಗುರುಲಿಂಗಯ್ಯ ಎಂ. ನಾಗಪ್ಪ ವಿ., 'ಕಾಡುಗೊಲ್ಲ' ಪುಟ-೯೭, ೨೦೦೮)

೬.೩.೧. ಕಟ್ಟೆಮನೆಯ ಪ್ರಮುಖ ಉದ್ದೇಶ

ತಾವು ಪರಂಪರೆಯಿಂದ ನಂಬಿಕೊಂಡು ಬಂದಿರುವ ದೇವರಿಗೆ ತಮಗೆ ಮೈಲಿಗೆ ತಗುಲಬಾರದು ಒಂದು ವೇಳೆ ಮೈಲಿಗೆಯಾದರೆ ಯಾವ ರೀತಿ ಶುದ್ದಿ ಕಾರ್ಯ ಕೈಗೊಳ್ಳಬೇಕು ಎಂಬುದನ್ನು ಕಟ್ಟೆಮನೆಯ ಗೌಡರು ನಿರ್ಧರಿಸುತ್ತಿದ್ದರು.

ಉದಾಹರಣೆಗೆ : ದಲಿತರು ಗೊಲ್ಲರ ಹಟ್ಟಿಯನ್ನು ನುಗ್ಗಿ ಮೈಲಿಗೆ ಮಾಡಿದರೆ ಅವರನ್ನು ಹಿಡಿದು ಅವರಿಗೆ ದಂಡ ಹಾಕಿ ಆನಂತರ ಇಡೀ ಹಟ್ಟಿಯನ್ನು ಶುದ್ಧಿ ಮಾಡುವಂತೆ ತೀರ್ಪು ನೀಡುತ್ತಿದ್ದರು.

"ಬುಡಕಟ್ಟು ಸಂಪ್ರದಾಯದಂತೆ ಕಾಡುಗೊಲ್ಲರ ನ್ಯಾಯ ಪಂಚಾಯಿತಿಗಳು ನ್ಯಾಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತವೆ. ನ್ಯಾಯ ನಿರ್ಣಯಗಳು ಹಟ್ಟಿಗಳ ವ್ಯವಹಾರ, ವ್ಯಾಜ್ಯ, ಮದುವೆ, ಹಬ್ಬ, ಜಾತ್ರೆ ಮುಂತಾದ ವಿಷಯಗಳಿಗೆ ಸಂಬಂಧಿಸಿದವುಗಳಾಗಿರುತ್ತದೆ" (ಗುರುಲಿಂಗಯ್ಯ ಎಂ. ನಾಗಪ್ಪ ವಿ., 'ಕಾಡುಗೊಲ್ಲ' ಪುಟ-೯೯, ೨೦೦೮)

ಕಾಡುಗೊಲ್ಲರು ಅನೈತಿಕ ಸಂಬಂಧವನ್ನು ಇಟ್ಟಿಕೊಂಡಿರುವುದು ಮತ್ತು ಹಿರಿಯರ ಮಾತನ್ನು ಮೀರಿದಂತಹ ಸಮಯದಲ್ಲಿ ಅವರನ್ನು ಊರಿನಿಂದ ಹೊರಗೆ ಹಾಕಲು ಕಟ್ಟೆಮನೆಗಳು ಆಜ್ಞೆ ಮಾಡುತ್ತಿದ್ದವು. ಕಾಡುಗೊಲ್ಲರಲ್ಲಿ ಚಪ್ಪಲಿಯಿಂದ ಹೊಡಿಸಿಕೊಳ್ಳವುದು ಮತ್ತು ಹೊಡೆಯುವುದು ಎರಡು ಕೂಡ ಅಪರಾಧವಾಗಿರುತ್ತದೆ. ಹಾಗಾಗಿ ಚಪ್ಪಲಿಯಿಂದ ಹೊಡೆದವನು ಕಟ್ಟೆಮನೆಗೆ ದಂಡವನ್ನು ಕಟ್ಟಿ ಇನ್ನು ಮುಂದೆ ಈ ರೀತಿ ಮಾಡುವುದಿಲ್ಲ ಎಂದು ದೇವರ ಮತ್ತು ಗೌಡರ ಮುಂದೆ ಪ್ರಮಾಣ ಮಾಡಬೇಕಿತ್ತು.

ಅಂತರ್ಜಾತಿಯ ವಿವಾಹವು ಕಾಡುಗೊಲ್ಲರಲ್ಲಿ ನಿಷಿದ್ಧ. ಅಂತರ್ಜಾತಿ ವಿವಾಹವಾದವರನ್ನು ಇಂದಿಗೂ ಕೂಡ ಹಟ್ಟಿಯ ಒಳಗಡೆ ಸೇರಿಸುವುದಿಲ್ಲ, ಅಣ್ಣ ತಂಮ್ಮದಿರ ಜಗಳ, ಗಂಡ ಹೆಂಡತಿಯರ ಜಗಳ, ಹೊಲ, ಮನೆ, ಮುಂತಾದ ಎಲ್ಲಾ ನ್ಯಾಯ ತೀರ್ಮಾನಗಳನ್ನು ಕಟ್ಟೆಮನೆಗಳೇ ಇತ್ಯಾರ್ಥ ಮಾಡುತ್ತಿದ್ದವು. ಈ ಕಾರಣಕಕ್ಕಾಗಿ ಗೊಲ್ಲ ಸಮುದಾಯದ ಮೇಲೆ ತಮ್ಮ ಹಿಡಿತವನ್ನು ಇಟ್ಟುಕೊಂಡಿದ್ದವು.

೬.೩.೨. ಪ್ರಸ್ತುತ ದಿನಗಳಲ್ಲಿ ಕಟ್ಟೆಮನೆಗಳ ಸ್ಥಿತಿಗತಿ

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ, ಆಧುನಕ ಶಿಕ್ಷಣ ಇವು ಅಭಿವೃದ್ಧಿ ಹೊಂದುತ್ತಿದ್ದಂತೆಯೇ ಕಟ್ಟೆಮನೆಗಳು ತಮ್ಮ ಪ್ರಾಮುಖ್ಯತೆ ಕಳೆದುಕೊಳ್ಳತೊಡಗಿದವು. ಇವತ್ತಿನ ಜಗತ್ತಿನಲ್ಲಿ ಬಾಯಿಮಾತಿಗಿಂತ ಬರಹಕ್ಕೆ ಹೆಚ್ಚು ಪ್ರಾಮುಖ್ಯತೆ ಸಿಕ್ಕಿರುವುದರಿಂದ ಕಟ್ಟೆಮನೆಗಳು ಹೆಸರಿಗೆ ಮಾತ್ರ ಕಟ್ಟೆಮನೆಗಳಾಗಿ ಉಳಿದಿವೆ. ಅವುಗಳ ಕೆಲಸಗಳಿಗೆ ಯಾರು ಪ್ರಾಮುಖ್ಯತೆ ಕೊಡುವುದಿಲ್ಲ. ಕಾರಣ ಕಾಡುಗೊಲ್ಲರ ಬದುಕು ಬದಲಾಗಿದೆ. ಮೂರು ಕುಲಗಳಲ್ಲಿ ೨೭ ಬೆಡಗುಗಳಾಗಿವೆ. ಹಿರಿಯರು ಹಿರಿತನವನ್ನು ಉಳಿಸಿಕೊಂಡಿಲ್ಲ. ಕಿರಿಯವರು ಹಿರಿಯರನ್ನು ಗೌರವಿಸುತ್ತಿಲ್ಲ. ಆ ಕಾರಣ ಸಂಸ್ಕೃತಿಯಲ್ಲಿ ಬದಲಾವಣೆಯಾಗಿದೆ. ಸಂಪ್ರದಾಯವನ್ನು ಮುರಿದು ಹೊಸದೊಂದು ಪರಂಪರೆಯನ್ನು ಕಟ್ಟುವ ತಾಕತ್ತು ಯುವಕರಿಗೆ ಇದೆ. ಹಾಗಾಗಿ ಕಟ್ಟೆಮನೆಯ ಮೊರೆ ಹೋಗದೆ. ಕೋರ್ಟು ಕಛೇರಿಗಳ ಮೂಲಕ ನ್ಯಾಯ ಇತ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಕಾಡುಗೊಲ್ಲರು ಕಾಡಿನಿಂದ ನಾಡಿನ ಕಡೆಗೆ ಮುಖ ಮಾಡಿರುವುದರಿಂದ ಜಗತ್ತಿನ ಮಾಹಿತಿಗಳು ಅವರಿಗೆ ತಿಳಿಯುತ್ತಿವೆ. ವಿದ್ಯಾವಂತರು ಹಟ್ಟಿಯ ವ್ಯವಸ್ಥೆಯನ್ನು ವಿರೋಧಿಸುವುದರಿಂದ ಹಟ್ಟಿಯ ಸ್ಥಿತಿಗಳು ಬದಲಾಗುತ್ತಿವೆ. ದೇವರ ಮತ್ತು ಧರ್ಮದ ಬಗ್ಗೆ ನಂಬಿಕೆ ಇಲ್ಲದಂತಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಸಮೂಹ ಮಾಧ್ಯಮಗಳ ಪ್ರಭಾವದಿಂದ ಕಾಡುಗೊಲ್ಲರು ತಮ್ಮ ಜೀವಂತಿಕೆಯನ್ನು ಕಳೆದುಕೊಳ್ಳುತ್ತಿದ್ದಾರೆಂದು ಹೇಳಬಹುದು. ಬಂಧುಗಳಿಂದ ದೂರ ಹೋಗಿ ತಾನೂ ಬದುಕಿದರಾಯಿತು ಎಂಬ ಸಂಕುಚಿತ ಭಾವನೆ ಕೆಲವರಲ್ಲಿ ಆವರಿಸಿರುವುದನ್ನು ಕಾಣಬಹುದು.

ಯುವಕರು ಕಾಡುಗೊಲ್ಲರ ಕಟ್ಟೆಮನೆಗಳ ನ್ಯಾಯ ತೀರ್ಮಾನಗಳನ್ನು ಪ್ರಶ್ನಿಸುವುದರ ಮೂಲಕ ಕೋರ್ಟು ಕಛೇರಿಗಳ ಮೂಲಕ ನ್ಯಾಯ ಪಡೆಯುತ್ತಿದ್ದಾರೆ.

ಆಧುನಿಕತೆಯ ಪ್ರಭಾವದಿಂದ ಕಾಡುಗೊಲ್ಲರು ಜೀವಂತಿಕೆಯನ್ನು ಕಳೆದುಕೊಂಡು, ಪರಂಪರೆಯಿಂದ ಕಲಿತುಕೊಂಡ ಆಚಾರ-ವಿಚಾರ, ನಂಬಿಕೆ, ಸಂಪ್ರದಾಯ ಮುಂತಾದವುಗಳನ್ನು ಮರೆತು ಮಾಧ್ಯಮಗಳ ದಾಸರಾಗಿದ್ದಾರೆ. ಬಂಧು-ಬಾಂಧವರ ಸಂಪರ್ಕದಿಂದ ದೂರವಿರಲು ಬಯಸುತ್ತಾರೆ. ವಿಶಾಲತೆಯಿಂದ ಸಂಕುಚಿತತೆಯತ್ತ ಸಾಗುತ್ತಿದ್ದಾರೆ. ಇದನ್ನು ಪ್ರಗತಿ ಎನ್ನಬೇಕೋ ವಿಗತಿ ಎನ್ನಬೇಕೋ ತಿಳಿಯದಂತಾಗಿದೆ.

೬.೪. ಕಾಡುಗೊಲ್ಲರ ಗುಡಿಕಟ್ಟುಗಳು

ಕಾಡುಗೊಲ್ಲರಲ್ಲಿ ಗುಡಿಕಟ್ಟು ಎಂಬ ಪದ ಬಳಕೆಯಲ್ಲಿದೆ. ಗುಡಿಕಟ್ಟು ಸಂಪ್ರದಾಯವನ್ನು ಬುಡಕಟ್ಟು ಸಮುದಾಯಗಳಲ್ಲಿ ಮಾತ್ರ ಗುರುತಿಸಲು ಸಾಧ್ಯವಾಗಿದೆ. ಗುಡಿಕಟ್ಟುಗಳು ಪ್ರಮುಖ ಕಾರಣವೆಂದರೆ ತನ್ನ ಅನನ್ಯತೆ ಮತ್ತು ಸಂಸ್ಕೃತಿ ಹೊಂದಾಣಿಕೆಯನ್ನು ನೆಲೆಗೊಳಿಸುವ ಕಾರಣಕ್ಕಾಗಿ ಗುಡಿಕಟ್ಟು ರೂಪಿತವಾಗಿರುವುದನ್ನು ಗಮನಿಸಬಹುದು. ಗುಡಿ+ಕಟ್ಟು ಎರಡು ಪದಗಳು ಸೇರಿ ಗುಡಿಕಟ್ಟು ಎನ್ನುವ ಪದ ಸೃಷ್ಟಿಯಾಗಿದೆ. ಗುಡಿ ಎಂದರೆ ದೇವಾಲಯ, ಕಟ್ಟು ಎಂದರೆ ಬಂಧನ ಎಂದು, ಆದರೆ ಈ ರೀತಿ ಒಡೆದು ಈ ಅರ್ಥ ತೇಲಿಕೆಯ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಆದರೆ ಕಾಡುಗೊಲ್ಲರ ಅಭಿಪ್ರಾಯದ ಪ್ರಕಾರ ಗುಡಿಕಟ್ಟೆ ಎಂದರೆ ಇಡೀ ಒಂದು ಸಮುದಾಯ ಒಂದು ಕಡೆ ತನ್ನ ಕಷ್ಟ ಸುಖ ಸಂಪ್ರದಾಯ ಸಂಸ್ಕೃತಿ ಆಚಾರ-ವಿಚಾರ ಮತ್ತು ಅವರ ಅನನ್ಯತೆಯನ್ನು ಸಾರುವಂತಹದ್ದು.

ಆಂಧ್ರದ ಗಡಿಭಾಗದವರು ಕೂಡ ಹಿಂದೆ ಕರ್ನಾಟಕದಲ್ಲಿರುವ ಕಟ್ಟೆಮನೆಗಳಿಗೆ ಬಂದು ಹೋಗುತ್ತಿದ್ದರು. ಆದರೆ ಯಾವುದೋ ಒಂದು ಸಮುದಾಯದಲ್ಲಿ ಬಹಳ ಹಿಂದೆ ನಡೆಯುವ ಪರಂಪರೆ ಜಾರಿಯಲ್ಲಿದ್ದ ಕಾಲದಲ್ಲಿ ನಡೆದುಕೊಂಡು ಕಟ್ಟೆಮನೆಗೆ ಬರುವಾಗ ವಿಪರೀತ ಮಳೆಯಾಗಿ ಆ ಕಡೆಯಿಂದ ಈ ಕಡೆಗೆ ಬರಲು ನದಿಯ ನೀರು ಅಡ್ಡವಾದ ಕಾರಣ ನಾವು ತಾತ್ಕಾಲಿಕವಾಗಿ ಮದ್ದನಕುಂಟೆಯನ್ನು ಕಟ್ಟೆಮನೆಯನ್ನಾಗಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಮೂರು ಕಟ್ಟೆಮನೆಗಳು ಅನೇಕ ಗುಡಿಕಟ್ಟುಗಳನ್ನು ಒಳಗೊಂಡಿವೆ. ಈ ಹಿಂದೆ ಒಂದೊಂದು ಕಟ್ಟೆಮನೆ ಏಳು ಗುಡಿಕಟ್ಟುಗಳನ್ನು ಹೊಂದಿದ್ದವು. ಆದರು ಇತ್ತೀಚೆಗೆ ಜನಸಂಖ್ಯೆ ಹೆಚ್ಚಾಗಿರುವುದರಿಂದ ಗುಡಿಕಟ್ಟೆಗಳ ಸಂಖ್ಯೆಯು ಅಧಿಕವಾಗಿವೆ. ಕಾಡುಗೊಲ್ಲರ ಬೆಡಗುಗಳಿಗೆ ಅನುಗುಣವಾಗಿ ಅವರ ಕಟ್ಟೆಮನೆಗಳು ಸೃಷ್ಟಿಯಾಗಿವೆ. ಇದರ ಜೊತೆಗೆ ಗುಡಿಕಟ್ಟುಗಳು ಸೃಷ್ಟಿಯಾಗಿವೆ.

೬.೪.೧. ಕರಿಓಬೇನಹಳ್ಳಿ ಕಟ್ಟೆಮನೆಗೆ ಸೇರಿದ ಗುಡಿಕಟ್ಟುಗಳು

೧. ಚಿತ್ತಮುತ್ತಿ ಬೆಡಗುಗಳು			
೧. ಚಿತ್ತಮುತ್ತಿ	೨. ಮಾರಮುತ್ತಿ	೩. ಬಾಲಮುತ್ತಿ	೪. ಅಬಾಲಮುತ್ತಿ

೧.೧ ಚಿತ್ತಮುತ್ತಿ (ಏಳು ಗುಡಿಕಟ್ಟುಗಳು) ಏಳು ಜನಮಕ್ಕಳು			
೧. ನಂದಿಹಳ್ಳಿ	೨. ಹಾಯ್ಕಲ್	೩. ರಂಗೇನಹಳ್ಳಿ	೪. ಮಸ್ಕಲ್
೫. ಚಿತ್ರಹಳ್ಳಿ	೬. ಈಚಲುಗೆರೆ	೭.ಬ್ಯಾಡರಹಳ್ಳಿ	೮. ಮುಂಗಸವಳ್ಳಿ

ಕನ್ನೆನಹಳ್ಳಿ ಚಿತ್ರ ದೇವರಿಗೆ ಸೇರಿದ ಅಂಬುಗಳು ಅಥವಾ ಬಲಗಡೆಭಾಗದ ಕರೆಸಿತ್ತುನ ಗೌಡನ ಭಾಗದ ಅಂಬುಗಳು

೧. ಪೋತುಗಾರನಹಳ್ಳಿ ಚಿತ್ರದೇವರು (ಯಜಮಾನ) ಗುಡಿಕಟ್ಟು

೨. ರಾಮಸಾಗರದ ಯಲ್ಲಮ್ಮದೇವರು (ಪೂಜಾರಿ)ಹುರುಕೊಂಡ ತಾಲೂಕು

೩. ಬಚ್ಚಿಹಳ್ಳಿ ಮೇಲುಕುಂಟೆ ರಂಗಸ್ವಾಮಿ ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲೂಕು

೪. ಸದ್ವಿ ಯಲ್ಲಮ್ಮದೇವರು (ಗೌಡ) ರಾಯದುರ್ಗ ತಾಲೂಕು

೫. ಗುದ್ದೂಳು ಯಲ್ಲಮ್ಮದೇವರು(ನಾಡಿನಗೌಡ)ಕಲ್ಯಾನದುರ್ಗ ತಾಲೂಕು

೬. ಹೊಸೂರು ಯಲ್ಲಮ್ಮದೇವರು

೭. ಭಾಗಲೆ ಯಲ್ಲಮ್ಮದೇವರು

೮. ಸಿನ್ನಮ್ಮನಹಳ್ಳಿ ಯಲ್ಲಮ್ಮದೇವರು

೯. ಸಾದ್ವಿ ಯಲ್ಲಮ್ಮದೇವರು (ಪಾರುಪತ್ತೆದಾರ) ರಾಯದುರ್ಗ ತಾಲೂಕು

ಎಡಗಡೆ ಭಾಗದ ಗೆಜ್ಜೆ ಕುದುರೆ ತೋಳಯ್ಯ ನಾಗನ ಭಾಗದ ಅಂಭುಗಳು

೧. ಎರಡಕೆರೆ ಯಲ್ಲಮ್ಮದೇವರು (ಯಜಮಾನ)ಕಲ್ಯಾಣದುರ್ಗ ತಾಲೂಕು

೨. ಮಾಮಡೂರು ಯಲ್ಲಮ್ಮದೇವರು (ಪೂಜಾರಿ) ಕಲ್ಯಾಣದುರ್ಗ ತಾಲೂಕು

೩. ಮಂಗಮ್ಮನಹಳ್ಳಿ ಯಾಟಕಲ್ಲ್ ಯಲ್ಲಮ್ಮದೇವರು (ದಳವಾಯಿ) ಕಲ್ಯಾಣದುರ್ಗ ತಾಲೂಕು

೪. ಮಲ್ಲಿಕಾರ್ಜುನಹಳ್ಳಿ ನರಸಾಪುರ ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲೂಕು

೫. ಕೊಂಡಾಪುರ ಯಲ್ಲಮ್ಮದೇವರು ರಾಯದುರ್ಗ ತಾಲೂಕು

೬. ಸಿಂತುರಲಳ್ಳಿ ಯಲ್ಲಮ್ಮದೇವರು ಕಲ್ಯಾಣದುರ್ಗ ತಾಲೂಕು

೭. ದಡಗಟ್ಟ ನರಸಿಂಹದೇವರು,ಯಲ್ಲಮ್ಮದೇವರು. ಕಲ್ಯಾಣದುರ್ಗ ತಾಲೂಕು

೮. ಭೂಸಂದ್ರದ ಯಲ್ಲಮ್ಮದೆವರು ರಾಯದುರ್ಗ ತಾಲೂಕು

ಮದ್ದನಕುಂಟೆ ಗುಡಿಕಟ್ಟೆಗೆ ಸೇರಿದ ಅಂಬುಗಳು

೧. ಹೊಸಕೋಟೆ ೨.ಕೊಳಪಾಳ ೩. ತಾಳೆಕೆರೆ ೪. ಮಂದಲಹಳ್ಳಿ ೫. ಕಂಗಲ್ ಕುಂಟೆ

೬. ಉಪ್ಪಾರಹಳ್ಳಿ ೭. ರೊಳ್ಳೆ ೮. ಕಣಿಮೆಹಟ್ಟಿ ೯. ಕರೆಂದೋವು ೧೦. ಮದುಡಿ

೧೧. ಕರಿದಾಸರಹಳ್ಳಿ ೧೨. ಇಟ್ಟಿಗೆಹಳ್ಳಿ ೧೩. ಬೆಟ್ಟದೂರು ೧೪. ಒಳಿಗೆರೆ ೧೫. ಚಿಕ್ಕಬಾಣಿಗೆರೆ

೧.೨. ಮಾರಮುತ್ತಿ(ಎಂಟುಗುಡಿಕಟ್ಟುಗಳು) ಎಂಟುಜನಮಕ್ಕಳು

೧. ಚಿಕ್ಕೆನಹಳ್ಳಿ ೨. ಸಾಣೀಕೆರೆ ೩. ರೆಡ್ಡಿಹಳ್ಳಿ ೪. ಏಣಕಲ್‌ಗುಡ್ಡ
೫. ಬೇವಿನಹಳ್ಳಿ ೬. ಅಮರಾಪು ೭. ಬೆಜ್ಜಿಹಳ್ಳಿ ೮.ನೇರ್ಲಿಗೆ

೧.೩. ಬಾಲಮುತ್ತಿ

೧.೪. ಅಬಾಲಮುತ್ತಿ

೬.೪೨. ತಾಳವಟ್ಟಿ ಕಟ್ಟೆಮನೆ ಸೇರಿದ ಗುಡಿಕಟ್ಟುಗಳು

ಚಂದಮುತ್ತಿ			
೧. ಸನ್ನಮುತ್ತಿ	೨. ಅಬ್ಬಮುತ್ತಿ	೩. ಯಗಡಮುತ್ತಿ	೪. ಸೋಮಮುತ್ತಿ

೨.೧. ಸನ್ನ ಮುತ್ತಿ ಏಳುಗುಡಿಕಟ್ಟುಗಳು			
೧. ಯರಬಳ್ಳಿ	೨. ಕರಿಯಟ್ಟಿ	೩. ಕಂಬದೇವರಹಟ್ಟಿ	೪.ಗುಂಟನೂರು
೫. ತುರುವೇಕೆರೆ	೬. ಹಾಯ್ಕಲ್	೭. ಕಾಟನಹಟ್ಟಿ	

೨.೨. ಅಬ್ಬಮುತ್ತಿ			
೧. ಪಗಲಬಂಡೆ	೨. ಪುಟ್ಲಾರಹಳ್ಳಿ	೩. ವಲಸೆ	೪. ಗುಂಡುಮಣುಗು
೫. ನುಂಕಾಪುರ	೬. ಕೊಳಪಾಳ	೭. ಬ್ಯಾಡನಾಡ್	

೨.೩. ಎಗಡಮುತ್ತಿಯ ಕಟ್ಟೆಮನೆ ಬೆಸ್ತರಹಳ್ಳಿ ಇದು ಏಳು ಗುಡಿಕಟ್ಟುಗಳನ್ನು ಹೊಂದಿದೆ.			
೧. ಮ್ಯಾಗಳಪಾಳ್ಯ	೨. ಕರಿಗೆನಹಳ್ಳಿ	೩. ಮೇಗಳಹಳ್ಳಿ	೪. ಯಲಪಾನಹಳ್ಳಿ
೫. ಮಲಮ್ಮನಹಳ್ಳಿ	೬. ಕಂಬಂತ್ತಹಳ್ಳಿ	೭. ಚಿನ್ನಮ್ಮನಹಳ್ಳಿ	

೨.೪. ಸೋಮಮುತ್ತಿ (ಹದಿಮೂರು ಗುಡಿಕಟ್ಟೆಗಳು)			
೧. ಚೆನ್ನಮ್ಮನಾಗತಿಹಳ್ಳಿ	೨. ಸೂರನಹಳ್ಳಿ	೩. ಗುಂಜಿಗನೂರು	೪. ರಂಗಸೇಡ್
೫. ಬಸಾಪುರ	೬. ಕ್ಯಾತಗನಹಳ್ಳಿ	೭. ಚಿಕ್ಕೇನಹಳ್ಳಿ	೮. ತಿಪ್ಪಯ್ಯನದುರ್ಗ
೯. ಬಂಜಿಗೆರೆ	೧೦. ಯಲಗಟ್ಟ	೧೧. ಬಿಲಗೂಡು	೧೨. ಐಗಾರ್ಲಹಳ್ಳಿ
೧೩. ಕೋಡಿಹಳ್ಳಿ			

೬.೪.೩. ರಾಮೇನಹಳ್ಳಿಕಟ್ಟೆಮನೆಗೆ ಸೇರಿದ ಗುಡಿಕಟ್ಟುಗಳು			
೧. ಮರಡಿಹಳ್ಳಿ	೨. ಇಕ್ಕನೂರು	೩. ಪರುಶುರಾಮಪುರ	೪. ಹುಲಿತೊಟ್ಲು
೫. ರಾಮಗಿರಿ	೬. ತೇಕುಲವಟ್ಟಿ	೭. ಹೇಮಾವತಿ	

ಕಾಡುಗೊಲ್ಲರ ಕುಲಬಳಿಗಳು

೧. ಚಿತ್ತಮುತ್ತಿ ವಂಶದಲ್ಲಿ ಬರುವ ಬೆಡಗುಗಳು

೧. ಕರಡಿಗೊಲ್ಲರು ೨. ಮಾರನಗೊಲ್ಲರು ೩. ಬಾಲ್ಯರಗೊಲ್ಲರು ೪. ಕೆಂಗುರಿಗೊಲ್ಲರು

೫. ಕಂಚಿಗೊಲ್ಲರು ೬. ಬಡಗೊಲ್ಲರು. ೭. ದೇವತೆಗೊಲ್ಲರು.

೨. ಚಂದಮುತ್ತಿ ವಂಶದಲ್ಲಿ ಬರುವ ಕುಲಗಳು

೧. ಸನ್ನೆಯಗೊಲ್ಲರು ೨. ಅಜ್ಜೆರಗೊಲ್ಲರು ೩. ಉಪಗಳಗೊಲ್ಲರು ೪. ಯಗಡೆಗೊಲ್ಲರು

೫. ಸೋಮನಗೊಲ್ಲರು ೬. ಕೋಣನಗೊಲ್ಲರು ೭. ಕಟ್ಟಿಗೆಗೊಲ್ಲರು ೮. ಕೊಡತೆಗೊಲ್ಲರು

೯. ಜವಾದಿಗೊಲ್ಲರು ೧೦. ಬೊಮ್ಮನಗೊಲ್ಲರು ೧೧. ಪೋಲ್ಯರಗೊಲ್ಲರು ೧೨. ಶೀಲವಾಡಿಗೊಲ್ಲರು
೧೩. ಅಬ್ಬಗೊಲ್ಲರು

೩. ರಾಮಮುತ್ತಿ ವಂಶದಲ್ಲಿ ಬರುವ ಬೆಡಗುಗಳು

೧. ಅರೇನಗೊಲ್ಲರು ೨. ಮೆರನಗೊಲ್ಲರು ೩. ಕಂಬಿಗೊಲ್ಲರು ೪. ಕಹಳೆಗೊಲ್ಲರು ೫. ಒನಕೆಗೊಲ್ಲರು

೬. ಜಡೆಗೊಲ್ಲರು ೭. ಒಡೆರಾಯ

ಅಧ್ಯಾಯ : ಏಳು

ಕಾಡುಗೊಲ್ಲರ ಹಬ್ಬಗಳು

೭.೧.೧. ಮಕರ ಸಂಕ್ರಮಣ

೭.೧.೨. ಕಾಳಹಬ್ಬ ಅಥವಾ ಗುಗ್ಗರಿ ಹಬ್ಬ

೭.೧.೩. ಯುಗಾದಿ

೭.೧.೪. ಕಾರ ಹುಣ್ಣಿಮೆ

೭.೧.೫. ಅಜ್ಜಿಯ ಹಬ್ಬ

೭.೧.೬. ಮಾರಮ್ಮನ ಹಬ್ಬ

೭.೧.೭. ದೀವಣಿಗೆ ಹಬ್ಬ

ಅಧ್ಯಾಯ: ಏಳು

ಕಾಡುಗೊಲ್ಲರ ಹಬ್ಬಗಳು

"ಸಂಪ್ರದಾಯಗಳು ಪುರಾಣಗಳಿಂದ ಮತ್ತು ಐತಿಹ್ಯಗಳಿಂದ ಪ್ರಭಾವಿತವಾಗಿರುತ್ತವೆ. ಈ ಕಾರಣದಿಂದಾಗಿ ಪುರಾಣಗಳು ಮತ್ತು ಐತಿಹ್ಯಗಳ ಹಿನ್ನೆಲೆಯಲ್ಲಿ ಸಂಪ್ರದಾಯಗಳನ್ನು ಅಭ್ಯಾಸ ಮಾಡುವುದು ಹೆಚ್ಚು ಉಪಯುಕ್ತವೆನಿಸುತ್ತದೆ" *(ಶಂಕರನಾರಾಯಣ ತೀ ನಂ, 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,' ಪುಟ ೧೨೭, ೧೯೮೨)* 'ಇತಿಹಾಸ ಸಂಶೋಧಕರಿಗೆ ಹಸ್ತಪ್ರತಿ, ಶಾಸನ, ಕಟ್ಟಿದ ಮತ್ತು ಸ್ಮಾರಕಗಳನ್ನು ಅವಲಂಬಿಸಿ ಹೇಳುವ ಅಥವಾ ಕಟ್ಟಿಕೊಡುವ ಚರಿತೆ, ಇತಿಹಾಸದ ಒಂದು ಭಾಗ, ಅದರ ಇನ್ನೊಂದು ಭಾಗ ಜನಪದರಲ್ಲಿದೆ ಅಥವಾ ಆಯಾ ಸಮುದಾಯಗಳ ಆಚರಣೆ ಸಂಪ್ರದಾಯ ಮೌಖಿಕ ಸಂಸ್ಕೃತಿಯಲ್ಲಿದೆ. ಡಾ ಪುರುಷೋತ್ತಮ ಬಿಳಿಮಲೆ ಅವರು ಹೇಳುವಂತೆ 'ಜನಪದರಲ್ಲಿ ಇತಿಹಾಸ ಅಥವಾ ಚರಿತ್ರೆ ಎಂಬುದಿಲ್ಲ. ಅವರಲ್ಲಿ ಪುರಾಣ, ಕಥೆ, ಕಾವ್ಯ ಐತಿಹ್ಯಗಳಿವೆ. ಇದನ್ನೆ ಅವರು ಇತಿಹಾಸ ಎಂದು ತಿಳಿದುಕೊಂಡಿದ್ದಾರೆ ಮತ್ತು ಅದನ್ನೇ ಅವರು ಪ್ರತಿಪಾದಿಸುತ್ತಾರೆ.' ಇತಿಹಾಸ ಸಂಶೋಧಕರಂತೆ ಜನಪದ ನಿರೂಪಕರಿಗೆ ದಾಖಲೆಗಳು ಬೇಕಾಗಿಲ್ಲ ಅದರ ಅವಶ್ಯಕತೆಯೂ ಅವರಿಗಿಲ್ಲ. ಅವರು ನಿರೂಪಿಸುವುದನ್ನೇ ಸತ್ಯ ಎಂದು ನಂಬಿದ್ದಾರೆ ಅದೇ ಸತ್ಯ ಎಂದು ಪ್ರತಿಪಾದಿಸಿದ್ದಾರೆ. ಕಾಡುಗೊಲ್ಲರಿಗೆ ಯಾವುದೇ ಲಿಖಿತ ದಾಖಲೆಗಳು ದೊರೆಯುವುದಿಲ್ಲ. ಕಾಡುಗೊಲ್ಲರ ಸಂಸ್ಕೃತಿ ನಿಂತಿರುವುದೇ ಸಂಪ್ರದಾಯ ಮತ್ತು ಪುರಾಣಗಳನ್ನು ನಂಬಿಕೊಂಡು ಎಂದು ಹೇಳಬಹುದು.

೭.೧.ಕಾಡುಗೊಲ್ಲರ ಹಬ್ಬಗಳು

'ಕಾಡುಗೊಲ್ಲರಿಗೆ ವಿಶಿಷ್ಟವಾಗಿರುವ ಯಾವ ಹಬ್ಬವೂ ಇಲ್ಲ. ಅವರು ಉಳಿದ ಜನರೆಲ್ಲರೂ ಆಚರಿಸುವಂತೆಯೇ ಯುಗಾದಿ ದೀಪಾವಳಿ ಬಸವನಹಬ್ಬ, ಶಿವರಾತ್ರಿಹಬ್ಬ ನಾಗರಹಬ್ಬಗಳನ್ನು ಆಚರಿಸುತ್ತಾರೆ'. *(ಶಂಕರನಾರಾಯಣ ತೀ ನಂ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪುಟ ೧೨೮, ೧೯೮೨.)*

ತೀನಂ ಶಂಕರನಾರಾಯಣರವರು ಹೇಳುವ ಮಾತು ನಿಜವೆನಿಸಿದರೂ ಅವುಗಳನ್ನು ಚರ್ಚೆಮಾಡುವ ಅವಶ್ಯಕತೆ ಇದೆ. ಕಾಡುಗೊಲ್ಲರಿಗೆ ಸೀಮಿತವಾಗಿ ಹಲವಾರು ಹಬ್ಬಗಳಿವೆ. ಉದಾ: ಹಾಲುಹಬ್ಬ, ಕಾರಬ್ಬ, ಹಿರೇರಹಬ್ಬ, ಕಾಳಹಬ್ಬ ಈಡಿನಹಬ್ಬ, ಜುಂಜಪ್ಪನಜಾತ್ರೆ, ಎತ್ತಯ್ಯನಹಬ್ಬ. ಇಲ್ಲಿ

ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಶ್ರೀ ನಂ ಶಂಕರನಾರಾಯಣರವರು ಗುರುತಿಸಿರುವಂತೆ ಯುಗಾದಿ, ದೀಪಾವಳಿ, ಬಸವನಹಬ್ಬ, ಶಿವರಾತ್ರಿ, ನಾಗರಪಂಚಮಿ ಇವುಗಳನ್ನು ಇತರೇ ಸಮುದಾಯದವರು ಆಚರಿಸುವುದಕ್ಕೂ ಕಾಡುಗೊಲ್ಲರು ಆಚರಿಸುವುದಕ್ಕೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಗುರುತಿಸಬಹುದು. ಕಾಡುಗೊಲ್ಲರು ಹಬ್ಬಗಳನ್ನು ಶಿಷ್ಟರಂತೆ ಆಚರಿಸುವುದಿಲ್ಲ. ಅಲ್ಲಿ ಅವರದೇ ಆಚರಣೆಗಳಿವೆ. ಸಂವೇಧನೆ ಮತ್ತು ನಂಬಿಕೆಗಳಿವೆ. ಇವುಗಳ ಹಿಂದೆ ಅವರ ಸಾಂಸ್ಕೃತಿಕ ನಾಯಕರ ಸಂಸ್ಕೃತಿ ಅಡಕವಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕಾಡುಗೊಲ್ಲರು ಯಾವ ಹಬ್ಬಗಳಲ್ಲಿ ಅವರ ಅನನ್ಯತೆ ಇದೆ ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

"ಆಚರಣೆಯ ಸಂದರ್ಭದಲ್ಲಿ ಕತ್ತಿ ಭಲ್ಲೆ ಬೆತ್ತ ತ್ರಿಶೂಲ ಮುಂತಾದ ಗೊತ್ತಾದ ವಸ್ತುಗಳು ಆಯುಧ ವಿಶೇಷಗಳೂ ಹೌದು. ಆಚರಣೆಯ ಸಾಧನೆಗಳು ಹೌದು. ಸಾಮಾನ್ಯವಾಗಿ ಆಚರಣೆಯಲ್ಲಿ ಮೂರು ಮಜಲುಗಳನ್ನು ಕಾಣಬಹುದು. ೧. ಪ್ರಾರ್ಥನೆ ೨.ಅರ್ಪಣೆ ಇದ್ಯೆಹಿಕ ಸಂಜ್ಞೆಗಳು ಮತ್ತು ಇತರ ಕ್ರಿಯೆಗಳು." (ಮಂಜುನಾಥ ಬೇವಿನಕಟ್ಟೆ 'ಪರಿಸೆ/ಮಾನ್ಯೇವು' ಪುಟ-೧೦೬, ೨೦೧೦)

೭.೧.೧. ಮಕರ ಸಂಕ್ರಮಣ:

ಮಕರ ಸಂಕ್ರಾಂತಿ ಕಾಡುಗೊಲ್ಲರಿಗೆ ಮಾತ್ರ ಸೀಮಿತವಲ್ಲದಿದ್ದರೂ ಕಾಡುಗೊಲ್ಲರು ಇದನ್ನು ಆಚರಿಸುವ ವಿಧಾನದಲ್ಲಿ ವಿಶೇಷತೆಯುಂಟು. ಇದು ಸಾರ್ವತ್ರಿಕ ಹಬ್ಬವಾದರೂ ಕಾಡುಗೊಲ್ಲರು ಈ ಹಬ್ಬವನ್ನು ಆಚರಿಸುವಾಗ ಅನೇಕ ರೀತಿಯ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಜನವರಿ ದಿನಾಂಕ ೧೪ ರಂದು ಪ್ರಾರಂಭವಾಗುವ ಈ ಹಬ್ಬವು ಆ ವರ್ಷದ ಮೊದಲ ಹಬ್ಬ. ಈ ಹಬ್ಬದಲ್ಲಿ ಪ್ರತಿಯೊಬ್ಬರೂ ಮನೆಯ ಮುಂದಿನ ಅಂಗಳವನ್ನು ಸಗಣಿಯಿಂದ ಸಾರಿಸಿ ಅದರ ಮೇಲೆ ತಂಕಟೆಹೂವು ಹರಡುತ್ತಾರೆ. ಅದು ನೋಡಲು ತುಂಬ ಸೊಗಸಾಗಿರುತ್ತದೆ. ಅನೇಕ ರೀತಿ ಬಣ್ಣಗಳಿಂದ ರಂಗೋಲಿ ಬಿಡಿಸುತ್ತಾರೆ. ಆ ದಿನ ಪ್ರತಿಯೊಬ್ಬರ ಮನೆಯಲ್ಲಿ ಕುಂಬಳಕಾಯಿ ಮತ್ತು ಸಜ್ಜೆರೊಟ್ಟಿಯ ಅಡುಗೆ ಮಾಡುತ್ತಾರೆ. ಈ ಹಬ್ಬದ ವಿಶೇಷತೆ ಕುಂಬಳಕಾಯಿ ಮತ್ತು ಸಜ್ಜೆರೊಟ್ಟಿ ಎಂದು ಹೇಳಬಹುದು. ಪ್ರತಿಯೊಬ್ಬರು ಒಂದು ತುಂಡು ಕುಂಬಳಕಾಯಿ ತಿನ್ನಲೇಬೇಕು. ಇಲ್ಲದಿದ್ದರೆ ಮಕರ ಸಂಕ್ರಮಣ ಬಂದು 'ಕುಂಡೆ ಬಗ್ಗಿ' ನೋಡುತ್ತದೆ. ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಹಿಂದೆ ಈ ಹಬ್ಬವನ್ನು ಮಾಡುತ್ತಿದರೋ ಇಲ್ಲವೋ ಗೊತ್ತಿಲ್ಲ. ಆದರೆ ಇಂದು ಈ ಹಬ್ಬವನ್ನು ವಿಶೇಷತೆಯಿಂದ ಕೂಡಿದೆ. ಕುಂಬಳಕಾಯಿಯನ್ನು ಚೆನ್ನಾಗಿ ಬೇಯಿಸಿ ಅದಕ್ಕೆ ಬೆಲ್ಲ ಸೇರಸಿ ರೊಟ್ಟಿಯ ಜೊತೆ ತಿಂದರೆ ತುಂಬಾ ರುಚಿಯಾಗಿರುತ್ತದೆ. ಪ್ರಸ್ತುತ ದಿನಗಳಲ್ಲಿ ಸಜ್ಜೆ ಬೆಳೆಯುವುದು ತುಂಬಾ ಕಡಿಮೆಯಾದ ಕಾರಣ ಸಜ್ಜೆಯ ಜಾಗವನ್ನು ಗೋಧಿ ಆವರಿಸಿಕೊಂಡಿದೆ. ಹಿಂದೆ ಕುಂಬಳಕಾಯಿಯನ್ನು ಇಚ್ಚೆ ಪಟ್ಟು ತಿನ್ನುತಿದ್ದರು. ಇಂದು ಅದರ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಬಹುದು.

೭.೧.೨. ಕಾಳಹಬ್ಬ ಅಥವಾ ಗುಗ್ಗರಿಹಬ್ಬ

ಇದು ಕಾಡುಗೊಲ್ಲರಿಗೆ ತುಂಬಾ ವಿಶೇಷವಾದ ಹಬ್ಬ. ಅಲೆಮಾರಿಗಳಾಗಿದ್ದ ಕಾಡುಗೊಲ್ಲರು ವರ್ಷಕ್ಕೆ ಒಂದು ಸಲವಾದರೂ ಒಂದು ಸ್ಥಳದಲ್ಲಿ ಸೇರಲಿ ಎಂಬ ಕಾರಣಕ್ಕಾಗಿ ಎಂದು ಹೇಳಿದರೆ

ತಪ್ಪಾಗಲಾರದು. ಇವರ ಗುಡಿಕಟ್ಟು ದೇವರುಗಳಾದ ಚಿತ್ರದೇವರು, ಕಾಟಮದೇವರು, ಕ್ಯಾತೆದೇವರು, ಪಾತೆದೇವರು ಮತ್ತು ರಾಮದೇವರು ಇವರ ಆರಾಧನೆಗಾಗಿ ಮಾಡುವ ಹಬ್ಬವಾಗಿದೆ. ಇದನ್ನು ಸುಗ್ಗಿಯ ಹಬ್ಬವೆಂದು ಕರೆಯುತ್ತಾರೆ. ಕಾಡುಗೊಲ್ಲರು ಬೆಳೆದ ಧಾನ್ಯಗಳನ್ನು ಮೊದಲು ತಮ್ಮ ಹಿರಿಯರಿಗೆ ಅರ್ಪಿಸಿ ಆನಂತರ ತಾವು ಉಪಯೋಗಿಸಬೇಕು ಎಂಬುದು. ಈ ಕಾಳಹಬ್ಬವನ್ನು ಶಿವರಾತ್ರಿಯ ತಿಂಗಳಲ್ಲಿ ಮಾಡುತ್ತಾರೆ. ಆದರೆ ಶಿಷ್ಟರಂತೆ ಜಾಗರಣೆಯ ಕಲ್ಪನೆ ಇವರಲ್ಲಿಲ್ಲ. ಶಿವರಾತ್ರಿಯ ತಿಂಗಳಿನಲ್ಲಿ ಯಾವುದಾದರೂ ಒಂದು ಸೋಮವಾರ ಇಲ್ಲವೆ ಶನಿವಾರದಂದು ಈ ಹಬ್ಬಕ್ಕೆ ಚಾಲನೆ ನೀಡುತ್ತಾರೆ. ಈ ಹಬ್ಬಕ್ಕೆ ಮೊದಲು ಹಟ್ಟಿಯಲ್ಲಿರುವ ಗೌಡ, ಪೂಜಾರಿಗಳು ಪಂಚಾಯಿತಿ ಕಟ್ಟೆಯ ಮುಂದೆ ಅಥವಾ ದೇವಸ್ಥಾನದ ಮುಂದೆ ಮನೆಗೊಬ್ಬರಂತೆ ಎಲ್ಲರೂ ಸೇರಿ ಮನೆಗೊಂದರಂತೆ ಇಂತಿಷ್ಟು ಹಣಕೊಡಬೇಕೆಂದು ಚರ್ಚೆ ಮಾಡುತ್ತಾರೆ. ಗೌಡ, ಪೂಜಾರಿಯ ಮಾತಿಗೆ ಎಲ್ಲರೂ ಸಮ್ಮತಿಸಿದಾಗ, ಗೌಡ ದೇವರ ಆರಾಧನೆ ಮಾಡುವ ವಿಧಾನವನ್ನು ಚರ್ಚೆ ಮಾಡಿ ಆ ಗುಡಿಕಟ್ಟಿಗೆ ಸೇರಿದ ಒಕ್ಕಲುಗಳಿಗೆ ದೇವರು ಮಾಡುವ ಮಾಹಿತಿಯನ್ನು ಹಿಂದೆ ಮೌಖಿಕವಾಗಿ ತಿಳಿಸುತ್ತಿದ್ದರು. ಈಗ ಆಹ್ವಾನ ಪತ್ರಿಕೆಯ ಮೂಲಕ ವಿಷಯ ಮುಟ್ಟಿಸುತ್ತಾರೆ. ಇಲ್ಲಿ ಒಂದು ನಿಯಮವಿರುತ್ತದೆ. ದೇವರ ಕೆಲಸಕ್ಕೆ ಪ್ರತಿಯೊಂದು ಮನೆಗೆ ಒಬ್ಬರಂತೆ ಬರಲೇ ಬೇಕಾಗುತ್ತದೆ. ದೇವರ ಕೆಲಸಕ್ಕೆ ಬರಲಿಕ್ಕೆ ಆಗದವರಿಗೆ ದೈವದವರು ಹೇಳಿದಷ್ಟು ಹೆಚ್ಚುವರಿಯಾಗಿ ಚಂದಾ ಹಣವನ್ನು ನೀಡಬೇಕಾಗುತ್ತದೆ.

೭.೧.೨.೧. ಮೀಸಲು ಹಾಲು ಕರೆಯುವುದು

ಕಾಳಹಬ್ಬ ಪ್ರಾರಂಭವಾಗುವುದಕ್ಕಿಂತ ಮೂರುದಿನ ಮುಂಚಿತವಾಗಿ ಮೀಸಲು ಹಾಲು ಕರೆಯುವ ಸಂಪ್ರದಾಯ ಕಾಡುಗೊಲ್ಲರಲ್ಲಿದೆ. ಮೀಸಲು ಹಾಲು ಕರೆಯುವ ಉದ್ದೇಶ, ದೇವರ ದೀಪಕ್ಕೆ ಬೇಕಾಗಿರುವ ತುಪ್ಪವನ್ನು ಮತ್ತು ದೇವರಿಗಾಗಿ ಬಂದಿರುವ ಭಕ್ತರಿಗೆ ಮೊಸರು ಮತ್ತು ಬಾಳೆಹಣ್ಣಿನ ಪ್ರಸಾದವನ್ನು ಕೊಡುವುದಕ್ಕಾಗಿ ಎಂದು ಹೇಳಬಹುದು. ಈ ಮೀಸಲು ಹಾಲಿಗಾಗಿ ಹಿಂದೆ ಹಸುಗಳನ್ನು ಮಾತ್ರ ಬಳಸುತ್ತಿದ್ದರು. ಆದರೆ ಇತ್ತೀಚೆಗೆ ಹಸುಗಳನ್ನು ಸಾಕುವ ಪ್ರಮಾಣ ಕಡಿಮೆಯಾದ ಕಾರಣ ಕುರಿ, ಮೇಕೆ, ಎಮ್ಮೆಗಳನ್ನು ಸಹ ದೇವರಿಗಾಗಿ ಮೀಸಲು ಬಿಟ್ಟಿರುವುದು ಕಂಡುಬರುತ್ತದೆ. ಇವುಗಳ ಮೀಸಲು ಹಾಲನ್ನು ಇತರರಿಗೆ ಕರೆಯಲು ಅವಕಾಶವಿರುವುದಿಲ್ಲ. ಪೂಜಾರಿ ಮನೆತನದವರಿಗೆ ಮಾತ್ರ ಅವಕಾಶವಿರುತ್ತದೆ. ಪೂಜಾರಿಯ ಮನೆತನದವರು ಯಾರಾದರೂ ಆಗಬಹುದು. ಅವರು ಮೀಸಲು ಹಾಲು ಕರೆಯಲು ತುಂಬಿದಗ ಗಡಿಗೆಯ(ಶುದ್ಧ ನೀರನ್ನು) ನೀರನ್ನು ಮಾತ್ರ ಬಳಸಬೇಕು. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತು ಕರೆದ ಹಾಲನ್ನು ಜನರು ನಡೆದಾಡುವ ದಾರಿಯಲ್ಲಿ ಹಾಗೂ ಸೂತಕದ ಮನೆಯ ದಾರಿಯಲ್ಲಿ ಹೋಗುವಂತಿಲ್ಲ. ಹಾಲು ಕರೆಯುವಾಗ ಯಾರೊಂದಿಗೂ ಮಾತನಾಡುವಂತಿಲ್ಲ. ಅವರು ಮಾತನಾಡಿದರೆ ಎಂಜಲು ಹಾಲಿನಲ್ಲಿ ಸೇರುತ್ತದೆ ಎನ್ನುವ ಭಯದಿಂದ ಬಾಯಿಗೆ ಬಟ್ಟೆ ಕಟ್ಟಿಕೊಂಡು ಹಾಲು ಕರೆಯುತ್ತಾರೆ. ಈ ಹಾಲನ್ನು ದೇವಸ್ಥಾನದಲ್ಲಿ ಚೆನ್ನಾಗಿ ಕಾಯಿಸಿ ಹೆಪ್ಪು ಹಾಕುತ್ತಾರೆ. ಸುಮಾರು ಐದಾರು ದಿನದ ಮೊಸರನ್ನು ಕೊನೆಯ ದಿನ ಮಜ್ಜಿಗೆ ಮಾಡಿ ಬಂದಿರುವ ಎಲ್ಲಾ ಭಕ್ತರಿಗೆ ಊಟಕ್ಕೆ ಬಡಿಸುತ್ತಾರೆ. ಈ ಮೀಸಲು ಹಾಲಿಗೆ ಸೂತಕ ತಗುಲದಂತೆ ಎಚ್ಚರಿಕೆ ವಹಿಸಬೇಕು.

೭.೧.೨.೨. ಎಡೆಗೆ ಮೀಸಲು ಅಕ್ಕಿಯನ್ನು ಬೀಸುವ ಕಲ್ಲಿನಲ್ಲಿ ಬೀಸುವುದು

ಗುಗ್ಗರಿ ಹಬ್ಬದಲ್ಲಿ ಸೇರಿರುವ ಜನಸಂಖ್ಯೆಗೆ ಅನುಗುಣವಾಗಿ ಅಕ್ಕಿಯನ್ನು ಬೀಸುವ ಕಲ್ಲಿನಲ್ಲಿ ಬೀಸುತ್ತಾರೆ. ಅಕ್ಕಿ ಬೀಸುವಾಗ ಬಾಯಿಗೆ ಬಟ್ಟೆ ಕಟ್ಟಿಕೊಂಡು ಯಾರೊಂದಿಗೂ ಮಾತನಾಡದಂತೆ ಸನ್ನೆಯ ಮೂಲಕ ವಿಷಯ ಹೇಳುತ್ತಾರೆ. ಮಾತನಾಡಿದರೆ ಎಂಜಲು ಹಿಟ್ಟಿನಲ್ಲಿ ಬೀಳುತ್ತದೆ. ಆ ಹಿಟ್ಟಿನಿಂದ ಮಾಡಿದ ಎಡೆಯನ್ನು ದೇವರಿಗೆ ಅರ್ಪಿಸುವಂತಿಲ್ಲ ಎನ್ನುವುದು ಒಂದು ಕಾರಣ. ಬಾಯಿಗೆ ಬಟ್ಟೆ ಕಟ್ಟಿಕೊಳ್ಳದಿದ್ದರೆ ಅವರನ್ನು ಮಾತನಾಡಿಸುವವರ ಸಂಖ್ಯೆ ಜಾಸ್ತಿಯಾಗುತ್ತದೆ. ಎಂಜಲು ಹಿಟ್ಟಿನಲ್ಲಿ ಸೇರುತ್ತದೆ. ಅದನ್ನು ಅಲ್ಲಿ ನೋಡುವವರು ಎಡೆಯನ್ನು ತಿನ್ನಲು ಅಸಹ್ಯ ಪಟ್ಟುಕೊಳ್ಳುತ್ತಾರೆ ಎನ್ನವುದು ಕೂಡ ಇರಬಹುದು. ಹಿರಿಯರು ಯಾವುದೇ ಆಚರಣೆಯನ್ನು ಕುರುಡಾಗಿ ರೂಢಿಸಿಕೊಂಡು ಬಂದಿಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಯಂತ್ರಜ್ಞಾನ ಯುಗದಲ್ಲಿ ಬೀಸುವ ಕಲ್ಲಿನ ಅವಶ್ಯಕತೆ ಇದೆಯೆ ಎಂದು ಕೇಳೀದರೆ ಅವರು ಕೊಡುವ ಉತ್ತರ ನಮ್ಮ ದೇವರು ಗಿರಣಿಯಲ್ಲಿ ಹಾಕಿಸಿಕೊಂಡು ಬಂದಿರುವ ಹಿಟ್ಟನ್ನು ಇಷ್ಟ ಪಡುವುದಿಲ್ಲ ಎಂದು ಹೇಳುತ್ತಾರೆ. ಜನಪದರು ಶ್ರಮ ಜೀವಿಗಳು ಅವರ ಆರಾಧ್ಯ ದೈವಕ್ಕೋಸ್ಕರ ಕಷ್ಟ ಪಟ್ಟರೆ ಆರೋಗ್ಯ ಚೆನ್ನಾಗಿರುತ್ತದೆ ಎಂಬ ನಂಬಿಕೆಯ ಜೊತೆಗೆ ಅವರ ಹೃದಯ ವೈಶಾಲ್ಯತೆಯನ್ನು ಅದು ಸೂಚಿಸುತ್ತದೆ. ದೇವರ ಕೆಲಸಗಳಲ್ಲಿಯೂ ಮನುಷ್ಯನಲ್ಲಿರುವ ಸಂಕುಚಿತ ಮನೋಭಾವವನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ಭಾವನೆ ಬೆಳೆಸುತ್ತದೆ. ದೇವರ ಕೆಲಸಕ್ಕೆ ವೈಯಕ್ತಿಕ ವೈರತ್ವವನ್ನು ಮರೆತು ಕೈ ಜೋಡಿಸುತ್ತಾರೆ. ಒಂದು ಕಡೆ ಆಧುನಿಕತೆಯನ್ನು ನಿರಾಕರಿಸುತ್ತಾ ಪರಂಪರೆಯನ್ನು ಮುಂದುವರಿಸಿಕೊಂಡು ಬರುವುದನ್ನು ಗಮನಿಸಬಹುದು.

೭.೧.೨.೩. ಹನ್ನೆರಡು ವೃತ್ತಿಯವರನ್ನು ದೇವರ ಕೆಲಸಕ್ಕೆ ಬಳಸಿಕೊಳ್ಳುವುದು.

ಕಾಡುಗೊಲ್ಲರ ಬದುಕಿನ ವಿಧಾನ ಈ ರೀತಿ ಇದೆ. ಅವರು ಹನ್ನೆರಡು ವೃತ್ತಿಯವರೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದ್ದಾರೆ. ಆಧುನಿಕತೆಯಿಂದಾಗಿ ಕೆಲವು ವೃತ್ತಿಯವರು ಅವರಿಂದ ದೂರವಾಗಿದ್ದಾರೆ. ಆಯಗಾರಿಕೆಯ ಸಂದರ್ಭದಲ್ಲಿ ಕಾಡುಗೊಲ್ಲರು ಪ್ರತಿಯೊಬ್ಬ ಆಯಾಗಾರರಿಗೆ ಕುರಿಮರಿ, ಹಸುವಿನ ಕರು ಅಥವಾ ಬೆಳೆದ ಬೆಳೆಗಳಲ್ಲಿ ನಿರ್ಧಿಷ್ಟವಾಗಿ ಧಾನ್ಯಗಳನ್ನು ಕೊಟ್ಟು ಸಂಬಂಧಗಳನ್ನು ಗಟ್ಟಿಗೊಳಿಸಿಕೊಂಡಿರುತ್ತಾರೆ. ಆಧುನಿಕತೆಯ ವಿಕಾರದಿಂದಾಗಿ ಕೆಲ ಆಯಗಾರರಲ್ಲಿ ತಮ್ಮ ವೃತ್ತಿಯ ಬಗ್ಗೆ ಕೀಳಿರಿಮೆ ಹುಟ್ಟಿ ಮೂಲವೃತ್ತಿ ಬಿಟ್ಟಿರುವ ಉದಾಹರಣೆಗಳಿವೆ. ಮಣೆಗಾರರಿಗೂ, ಸಮಗಾರರು, ಕಾಡುಗೊಲ್ಲರಿಗೂ ಕೂಡಿ ಬರುವುದಿಲ್ಲ. ಆದರೆ ಮಣೆಗಾರರು ಇಲ್ಲವೆಂದರೆ ಅವರ ಕಾಲಿಗೆ ಚಪ್ಪಲಿ ದೊರೆಯುವುದಿಲ್ಲ. ಇವರ ಸಂಬಂಧ ಇಂದು ನಿನ್ನೆಯದಲ್ಲ. ಬಹಳ ಪ್ರಾಚಿನವಾದುದು. ಕಾಡುಗೊಲ್ಲರ ಪಂಚಲಿಂಗಗಳಲ್ಲಿ ಒಂದಾದ ಕೇತೇಲಿಂಗನನ ದೇವರ ಪೂಜಾರಿಗೆ ಪ್ರತಿವರ್ಷ ಇಬ್ಬರು ಮಣೆಗಾರರು ಉಪವಾಸ ವ್ರತ ಕೈಗೊಂಡು ಒಂದೊಂದು ಕಾಲಿನ ಚಪ್ಪಲಿಯನ್ನು ಸಿದ್ಧಪಡಿಸಬೇಕಾಗುತ್ತದೆ. ಆದರೆ ಅವರಿಬ್ಬರಿಗೂ ಯಾರು ಯಾವ ಕಾಲಿನ ಪಾದರಕ್ಷೆ ಮಾಡಬೇಕು ಎಂಬ ಸೂಚನೆಯನ್ನು ಕೊಡದೆ ಬಂದಿರುತ್ತಾರೆ. ಆದರೆ ಇಬ್ಬರು ಸಮಗಾರರಲ್ಲಿ ಒಬ್ಬ ಎಡ, ಇನ್ನೊಬ್ಬ ಬಲಗಾಲಿನ ಪಾದರಕ್ಷೆ ಸಿದ್ಧಪಡಿಸಿರುತ್ತಾರೆ ಆ ಚಪ್ಪಲಿಯನ್ನು ಹಾಕಿಕೊಂಡು ಪೂಜಾರಪ್ಪ

ದೇವರನ್ನು ಹೊತ್ತುಕೊಳ್ಳುತ್ತಾನೆ. ಮಣೆಗಾರನಿಗೆ ಒಂದು ವರ್ಷಕ್ಕೆ ಇಷ್ಟು ದುಡ್ಡು ಎಂದು ಮಾತನಾಡಿರುತ್ತಾರೆ. ಅದೇ ರೀತಿ ಹೆಳವರು ಕೂಡ ಬಂದು ಭಾಗವಹಿಸುತ್ತಾರೆ. ಕುಂಬಾರರ ಮಡಿಕೆಯಲ್ಲಿ ಹಿಂದೆ ಅಡುಗೆ ಮಾಡುತ್ತಿದ್ದರು. ಈಗ ಸಿಲ್ವರ್ ಅಥವಾ ಸ್ಟೀಲ್ ಪಾತ್ರೆಗಳಲ್ಲಿ ಆಹಾರ ಸಿದ್ಧಪಡಿಸುತ್ತಿರುವುದರಿಂದ ಕುಂಬಾರರ ಮತ್ತು ಕಾಡುಗೊಲ್ಲರ ಸಂಬಧವನ್ನು ಸ್ಟೀಲ್ ಮತ್ತು ಸಿಲ್ವರ್ ಪಾತ್ರೆ ದೂರಮಾಡಿದೆ ಎಂದು ಹೇಳಬಹುದು.

೭.೧.೨.೪. ಉರಿಮೆ ಬಡಿಯುವ ಛಲವಾದಿ

ಆಧುನಿಕ ಕಾಲದಲ್ಲಿಯೂ ಛಲವಾದಿ ಸಮುದಾಯದವರು ಕಾಡುಗೊಲ್ಲರ ದೇವರುಗಳಿಗೆ ಬಾರದೇ ಇದ್ದರೆ ಅವರ ದೇವರು ಗುಡಿಯನ್ನು ಬಿಟ್ಟು ಹೊರಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಛಲವಾದಿ ಸಮುದಾಯದವರು ಎಷ್ಟೇ ಶ್ರೀಮಂತರಾಗಿದ್ದರೂ ವರ್ಷಕ್ಕೆ ಒಂದು ಸಲ ಅಂದರೆ ಕಾಳಹಬ್ಬದಲ್ಲಿ ಉರಿಮೆ ಬಡಿಯಲೇಬೇಕು. ಅವರು ಬಾರದಿದ್ದರೆ ದೇವರು ಕರೆಸಿಕೊಳ್ಳುತ್ತದೆ ಎಂಬ ನಂಬಿಕೆ ಕಾಡುಗೊಲ್ಲರಲ್ಲಿದೆ. ಛಲವಾದಿ ಸಮುದಾಯದಲ್ಲಿ ಈ ನಂಬಿಕೆಯನ್ನು ಒಪ್ಪಿಕೊಳ್ಳುವಂತೆ ಕಾಡುಗೊಲ್ಲರು ಮಾಡಿದ್ದಾರೆ. ಕಾಡುಗೊಲ್ಲರ ದೇವರುಗಳು ಇತರೆ ವಾದ್ಯಗಳಾದ ತಮಟೆ, ಢಮರುಗ, ಚಮಾರ್ಳ ಮುಂತಾದ ವಾದ್ಯಗಳನ್ನು ನಿಷೇಧಿಸಿವೆ. ಉರಿಮೆ ಒಂದು ವಾದ್ಯವನ್ನು ಬಿಟ್ಟು ಬೇರೆ ಯಾವುದೇ ವಾದ್ಯವನ್ನು ಇಷ್ಟ ಪಡುವುದಿಲ್ಲ. ಉರಿಮೆವಾದ್ಯದ ಲಯಕ್ಕೆ ಅನುಗುಣವಾಗಿ ಕಾಡುಗೊಲ್ಲರು ತಮ್ಮ ಕುಣಿತವನ್ನು ರೂಪಿಸಿಕೊಂಡಿದ್ದಾರೆ. ಚಲುವಾದಿ ಸಮುದಾಯದವರಿಗೆ ಒಂದು ವರ್ಷಕ್ಕೆ ಒಂದು ಮನೆಗೆ ೧೦ರಿಂದ ೧೫ ಸೇರು ಧಾನ್ಯಗಳನ್ನು ಕೊಡಬೇಕು ಎಂದು ಒಪ್ಪಂದ ಮಾಡಿಕೊಂಡಿರುತ್ತಿದ್ದರು. ಆಯಗಾರರಿಗೆ ಧಾನ್ಯಗಳನ್ನು ಕೊಡುವುದಕ್ಕಿಂತ ಮೊದಲು ಹಸುವಿನ ಕರು, ಎಮ್ಮೆ ಕರು, ಕುರಿ ಮರಿ, ಮೇಕೆ ಮರಿ ಮುಂತಾದವುಗಳನ್ನು ಕೊಡುತ್ತಿದ್ದರು. ಪಶುಪಾಲನೆ ಕಾಡುಗೊಲ್ಲರಿಂದ ದೂರ ಸರಿದು ಕೃಷಿಯನ್ನು ಪ್ರಾರಂಭಿಸಿದಾಗ ಧಾನ್ಯಗಳನ್ನು ಕೊಡಲು ಪ್ರಾರಂಬಿಸಿದರು. ಇಂದು ಧಾನ್ಯಗಳ ಸ್ಥಾನವನ್ನು ದುಡ್ಡು ಆವರಸಿಕೊಂಡಿದೆ ಇದು ನಾಗರಿಕತೆ ವಿಸ್ತಾರವಾದ ಬಗೆಯನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ವರ್ಷದಲ್ಲಿ ಮೂನ್ನೂರ ಅರವತ್ತೈದು ದಿನಗಳ ಕಾಲ ದೇವರ ಕೆಲಸ ಇಲ್ಲದ ಕಾರಣ ಛಲುವಾದಿಗಳಿಗೆ ಆ ವೃತ್ತಿಯಿಂದ ಜೀವನ ಸಾಗಿಸುವುದು ಕಷ್ಟವಾಗಿದೆ. ಹಿಂದೆ ಕಾಡುಗೊಲ್ಲರು ಗುಬ್ಬಗಳಲ್ಲಿ ವಾಸವಾಗಿದ್ದ ಕಾರಣ ಪಂಜು ಹಿಡಿಯುವ ಕಾಯಕ ಮಾಡುತ್ತಿದ್ದ ಮಾದಿಗರನ್ನು ಹಟ್ಟಿಯಿಂದ ಹೊರಗಿಟ್ಟಿದ್ದರು. ಹಾಗಾಗಿ ಅವರು ಮುಟ್ಟಿಸಿಕೊಳ್ಳಲು ಅನರ್ಹರಾದರು. ಇದಕ್ಕೆ ಕಾರಣ ಅವರು ಪಂಜು ಹಿಡಿದಿದ್ದು ಆಗಿದೆ. ಪಂಜಿನಿಂದ ಕಾಡುಗೊಲ್ಲರ ಗುಬ್ಬಗಳಿಗೆ ಬೆಂಕಿ ಬೀಳಬಹುದು ಎಂಬ ಕಾರಣವು ಬೇರೊಂದು ಸ್ವರೂಪವನ್ನು ಪಡೆದುಕೊಂಡು, ಮಾದಿಗರನ್ನು ಶೋಷಣೆ ಮಾಡುತ್ತಿದೆ. ಬಲಗೈಯವರು ಹಟ್ಟಿಯ ಒಳಗೆ ಬರಬಹುದು ಆದರೆ ಮನೆಯೊಳಗೆ ಬರುವಂತಿಲ್ಲ.

"ಹಬ್ಬಗಳು ಸಂತೋಷ ಸಡಗರ, ಶುಚಿತ್ವ ಮತ್ತು ದೈವಶ್ರದ್ಧೆಯ ಸಂಕೇತವಾಗಿ ಪ್ರಾದೇಶಿಕ ವೈವಿದ್ಯಗಳೊಡನೆ ಆಚರಿಸಲ್ಪಡುತ್ತವೆ. ಹಲವಾರು ದಿನಗಳ ಕಾರ್ಯಕ್ರಮಗಳ ನಡುವೆ ಸುತ್ತಮುತ್ತಲ

ಹಾಗೂ ದೂರದ ಜನರನ್ನು ಗೊತ್ತಾದ ದಿನದಂದು ದೊಡ್ಡ ಪ್ರಮಾಣದಲ್ಲಿ ಆಕರ್ಷಿಸುವ ಸಾಮೂಹಿಕವಾದ ಗುಣಲಕ್ಷಣಗಳುಳ್ಳದ್ದು ಜಾತ್ರೆ ಹಬ್ಬದೂಟ ಜಾತ್ರೆಯ ನೋಟ" ಜನ ಮರುಳೋ ಜಾತ್ರೆ ಮರುಳೋ" ಮುಂತಾದ ಗಾದೆಗಳು ಹಬ್ಬ ಮತ್ತು ಜಾತ್ರೆಯ ನಡುವಣ ವ್ಯತ್ಯಾಸವನ್ನು ವಿವರಿಸುತ್ತವೆ" (ಕಾಳೇಗೌಡ ನಾಗವಾರ, ಬೇವಿನಹಳ್ಳಿ ಕಾಡುಗೊಲ್ಲರ ಹಟ್ಟಿ ಪುಟ ೧೫೬ ೨೦೧೫) ಕಾಡುಗೊಲ್ಲರ, ಪ್ರಮುಖವಾಗಿ ಆಚರಿಸುವ ಜಾತ್ರೆಗಳೆಂದರೆ, ಜುಂಜಪ್ಪನ ಜಾತ್ರೆ, ಕೇತಪ್ಪನ ಜಾತ್ರೆ, ಗೌರ ಸಮುದ್ರದ ಮಾರಮ್ಮನ ಜಾತ್ರೆ, ಯರಬಳ್ಳಿ ಮಾರಮ್ಮನ ಜಾತ್ರೆ, ಕರಿಓಬವ್ವಹಳ್ಳಿ ಮಾರಮ್ಮನ ಜಾತ್ರೆ, ಬೇವಿನಹಳ್ಳಿ ಕರಿಯಮ್ಮನ ಜಾತ್ರೆ, ಪುರ್ಲಹಳ್ಳಿ ಬೂತಪ್ಪನ ಜಾತ್ರೆ, ಮಾರಿಕಣಿವೆ ರಂಗಪ್ಪನಜಾತ್ರೆ ಮುಂತಾದವು. ಆದರೆ ಕೆಲವು ವಿದ್ವಾಂಸರು ಗುರುತಿಸಿದ ಪ್ರಕಾರ ಕಾಟಮಲಿಂಗನ ಜಾತ್ರೆ, ಪಾತೇದೇವರ ಜಾತ್ರೆ ಮತ್ತು ರಾಮಲಿಂಗನ ಜಾತ್ರೆ ನಡೆಯುವುದಿಲ್ಲ. ಜಾತ್ರೆಗಳ ಬದಲಾಗಿ, ಗುಗ್ಗರಿಹಬ್ಬವನ್ನು ಆಚರಿಸಿಕೊಳ್ಳುತ್ತವೆ. ಗುಗ್ಗರಿಹಬ್ಬದ ವ್ಯಾಪ್ತಿ ಜಾತ್ರೆಯಷ್ಟು ವೈಶಾಲ್ಯತೆಯನ್ನು ಪಡೆದುಕೊಂಡಿಲ್ಲ. ಜಾತ್ರೆಯ ಪರಿಕಲ್ಪನೆ ಶಿಷ್ಟವರ್ಗದಿಂದ ಬಂದ ಕಾರಣ ಎಲ್ಲ ಬೆಡಗಿನವರು ಜಾತ್ರೆಯ ಪರಿಕಲ್ಪನೆಯನ್ನು ಅಳವಡಿಸಿಕೊಂಡಿಲ್ಲ ಎಂದು ವಿವರಿಸಿದ್ದಾರೆ.

"ದೇವರು ದಿಂಡ್ರು, ಧರ್ಮ, ಆಚರಣೆಗಳು ರಾಜ್ಯದ ಗೊಲ್ಲ ಜನಾಂಗದ ಜೀವನದಲ್ಲಿ ಹಾಸು ಹೋಕ್ಕಾಗಿವೆ. ಅಂದ ಮಾತ್ರಕ್ಕೆ ಇವರು ಯಾವುದೇ ಧರ್ಮದ ಅನುಯಾಯಿಗಳಾಗುವುದಿಲ್ಲ. ಇವರು ತಮ್ಮದೇ ಆದಂತಹ ಬುಡಕಟ್ಟು ಧರ್ಮವನ್ನು ಪಾಲಿಸುತ್ತಾರೆ. ಅಂದರೆ ಗಿಡ, ಮರ, ಕಲ್ಲು, ಬೆಟ್ಟ ಪ್ರಾಣಿ ಇತ್ಯಾದಿ ನಿಸರ್ಗದತ್ತವಾದ ಪ್ರಕೃತಿಯ ಆರಾಧಕರಾಗಿದ್ದಾರೆ. ಇವರು ನಾಗರಿಕ ಸಮಾಜದಿಂದ ಬಹುದೂರ ಕಾಡು- ಮೇಡುಗಳಲ್ಲಿ ನೆಲೆಸಿರುವುದರಿಂದ ಸಹಜವಾಗಿಯೇ ಪ್ರಕೃತಿಯ ಪೂಜಕರಾಗಿರುವುದು ಇದಕ್ಕೆ ಸಮರ್ಥನೆಯಾಗುತ್ತದೆ." *(ಗುರುಲಿಂಗಯ್ಯ ಎಂ ಕರ್ನಾಟಕದ ಗೊಲ್ಲಸಮುದಾಯ, ಪುಟ-೮೬, ೨೦೦೫)*

ಕಾಡುಗೊಲ್ಲರು ಮುಖ್ಯವಾಗಿ ಪ್ರಕೃತಿ ಆರಾಧಕರಾದ ಕಾರಣ ಅವರು ಅನಿವಾರ್ಯವಾಗಿ ಮರಗಿಡಗಳನ್ನು ಪೂಜಿಸಲು ಆರಂಭಿಸಿದರು. ಇವರ ಆಶ್ರಯ ತಾಣಗಳ ಹತ್ತಿರವಿರುವ ಮರಗಿಡಗಳ ಬಗ್ಗೆ ಅವರಲ್ಲಿ ದೈವತ್ವದ ಭಾವನೆ ಮೂಡಿದೆ. ಚಿತ್ತಯ್ಯನ ಕಾವ್ಯದಲ್ಲಿ ಆಲದಮರ, ಬೇವಿನಮರ, ಹೊಂಗೆಮರ, ಅರಳಿಮರ ಇವು. ಕಾಟಯ್ಯ, ಚಿತ್ತಯ್ಯ ಮತ್ತು ಓಬಳಪತಿಗೆ ಜೀವದಾನ ಮಾಡಿವೆ ಎಂದು ತಿಳಿದುಕೊಂಡಿದ್ದಾರೆ.

"ತಮ್ಮ ಬುಡಕಟ್ಟು ದೇವರುಗಳಿಗೆ ಇಡೀ ಜೀವನವನ್ನು ಧಾರೆಯೆರೆಯುತ್ತಿರುವುದನ್ನು ನೋಡಿದರೆ ಇವರ ನಿಸ್ವಾರ್ಥ ಮನೋಭಾವನೆ ಅರ್ಥವಾಗುತ್ತದೆ. ಇವರು ಒಂದೊತ್ತಿಗೆ ಊಟಕ್ಕೆ ಇಲ್ಲದಿದ್ದರೂ ದೇವರುಗಳಿಗೆ ಕಾಣಿಕೆ ಕೊಡುವುದನ್ನಾಗಲೀ ಜಾತ್ರೆಗಳನ್ನು ಸಂಘಟಿಸುವುದನ್ನಾಗಲೀ ಹಬ್ಬಗಳನ್ನ ಆಚರಿಸುವುದನ್ನಾಗಲೀ ಮರೆಯುವುದಿಲ್ಲ." *(ಗುರುಲಿಂಗಯ್ಯ ಎಂ ಕರ್ನಾಟಕದ ಕಾಡುಗೊಲ್ಲರು, ಪುಟ-೮೬ ೨೦೦೫)*

೭.೧.೨.೫. ಹೊಳೆಗೆ ಹೋಗುವುದು

ಕಾಡುಗೊಲ್ಲರ ಸಂಪ್ರದಾಯವೆಂದರೆ ಇವರ ಪ್ರತಿಯೊಂದು ದೇವರು ವರ್ಷಕ್ಕೆ ಒಂದು ಸಲವಾದರೂ ಗಂಗಾಸ್ನಾನಕ್ಕೆ ಹೋಗಲೇಬೇಕು. ಜಲದಿಗೆ ಹೋಗುವುದಕ್ಕಿಂತ ಮುಂಚಿತವಾಗಿ ಒಂದು ಗಂಟೆ ಮೊದಲು ಉರಿಮೆ ಬಡಿಯುವವರು ಬಂದಿರಬೇಕು. ಸಾಮಾನ್ಯವಾಗಿ ಜಲದಿಗೆ ಹೋಗುವುದು ಮದ್ಯಾಹ್ನ ಮೂರು ಗಂಟೆಯ ಅವಧಿಯಲ್ಲಿ. ದೇವಸ್ಥಾನದಲ್ಲಿರುವ ಎಲ್ಲ ವಸ್ತುಗಳನ್ನು ಬಿದಿರು ಬುಟ್ಟಿಯಲ್ಲಿ ತುಂಬಿಕೊಂಡು ದೇವರ ಅಲಗುಗಳನ್ನು ಕರಿಯ ಕಂಬಳಿಯಲ್ಲಿ ಸುತ್ತಿ, ಪೂಜಾರಿ ಆ ಪೆಟ್ಟಿಗೆಯನ್ನು ಹೊತ್ತುಕೊಂಡು, ಉಳಿದ ಜನರು ಛತ್ರ ಚಾಮರ, ಬೆಳಕಿನ ದೀಪಗಳನ್ನು ಹೊತ್ತುಕೊಂಡು, ಅಗಸರು ಹಾಸಿದ ಮಡಿ ಬಟ್ಟೆಯ ಮೇಲೆ, ಹಟ್ಟಿಯ ಒಳಗಿನಿಂದ ಹಟ್ಟಿಯ ಹೊರಗೆ ಬರುತ್ತಾರೆ. ಬಟ್ಟೆ ಹಾಸುವುದಕ್ಕಿಂತಲೂ ಮುಂಚಿತವಾಗಿ ರಸ್ತೆಗೆ ನೀರು ಹಾಕಿಸುತ್ತಾರೆ. ಸಾಮಾನ್ಯವಾಗಿ ಕಾಡುಗೊಲ್ಲರು ದೇವರ ಆರಾಧನೆ ಮಾಡುವ ಸಂದರ್ಭದಲ್ಲಿ ಬಿಳಿಯ ಅಂಗಿ ಮತ್ತು ಬಿಳಿಯ ಪಂಚೆಯನ್ನು ಉಟ್ಟುಕೊಂಡಿರುತ್ತಾರೆ. ಬೀದಿ ಧೂಳು ಜನರಿಗೆ ತಾಕಿದರೆ ಅವರ ಬಟ್ಟೆಗಳು ಕೊಳೆ ಆಗುತ್ತವೆ ಎಂಬ ಉದ್ದೇಶವಿರಬಹುದು. ಸೂರ್ಯನ ಬಿಸಿಲಿಗೆ ಭೂಮಿ ಬಿಸಿಯಾಗಿರುತ್ತದೆ. ಕಾಲು ಸುಡುತ್ತಿರುತ್ತವೆ. ಕಾಡುಗೊಲ್ಲರು ದೇವರನ್ನು ತಲೆಮೇಲೆ ಹೊತ್ತುಕೊಂಡಾಗ ಕಾಲಿಗೆ ಚಪ್ಪಲಿ ಧರಿಸುವಂತಿಲ್ಲ. ಆ ಕಾರಣಕ್ಕೆ ಬೀದಿಗೆ ನೀರು ಹಾಕಿಸುತ್ತಾರೆ (ಕೇತೇದೇವರ ಪೂಜಾರಿ ಮಾತ್ರ ಚಪ್ಪಲಿ ಹಾಕಿಕೊಂಡು ದೇವರನ್ನು ಹೊತ್ತುಕೊಳ್ಳುತ್ತಾನೆ. ಕಾರಣ ಆ ದೇವರ ಎಲ್ಲಾ ಕೆಲಸ ಕಾರ್ಯಗಳು ಪ್ರಾರಂಭವಾಗುವುದು ಕಳ್ಳಿಯಿಂದ) ಕಾಡುಗೊಲ್ಲರ ನಂಬಿಕೆಯ ಪ್ರಕಾರ ಈ ರೀತಿ ನೀರು ಹಾಕುವುದರಿಂದ ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತವೆ. ಮತ್ತು ಯಾವುದೇ ಕಾಯಿಲೆ ಇದ್ದರೂ ವಾಸಿಯಾಗುತ್ತವೆ ಎಂದು ನಂಬಿಸಿ ನೀರು ಹಾಕಿಸುತ್ತಾರೆ. ಉರಿಮೆ ಬಡಿಯುವ ವ್ಯಕ್ತಿಯು ಉರಿಮೆ ಬಡಿಯುತ್ತಾ ದೇವರನ್ನು ಕರೆದುಕೊಂಡು ಹೋಗುತ್ತಾನೆ. ಇದರ ಮಧ್ಯದಲ್ಲಿ ಹೆಣ್ಣು ಮಕ್ಕಳು ಬಂದು ದೇವರ ಕಾಲುಗಳಿಗೆ ನಮಸ್ಕಾರ ಮಾಡುತ್ತಾರೆ. ದೇವರನ್ನು ಗುಡಿಯಿಂದ ಹೊರಗೆ ತಂದ ನಂತರ ಪೂಜಾರಿಯ ಕಾಲುಗಳನ್ನು ಪೂಜಾರಿಯ ಹೆಂಡತಿ ಕಂಚಿನ ತಟ್ಟೆಯಲ್ಲಿ ತೊಳೆಯುತ್ತಾಳೆ. ತೊಳೆದ ನೀರನ್ನು ಚೆಲ್ಲದೇ ತಾನೆ ಕುಡಿಯುತ್ತಾಳೆ. ದೇವರ ಹೆಸರಿನಲ್ಲಿ ಕೊಳೆ ನೀರು ಕುಡಿಸುವುದರ ಮೂಲಕ ಹೆಣ್ಣಿನ ಶೋಷಣೆ ಮಾಡುವುದನ್ನು ಇಲ್ಲಿ ಕಾಣಬಹುದು.

ಹೊಳೆಗೆ ಹೋಗಿ ಅಲ್ಲಿ ಒಂದು ಪ್ರಶಸ್ತವಾದ ಸ್ಥಳ ನೋಡಿ ಕಂಬಳಿ ಗದ್ದುಗೆ ಮಾಡಿ ಆ ನಂತರ ಗೋಮೂತ್ರ ಚಿಮುಕಿಸಿ ಅದರ ಮೇಲೆ ದೇವರನ್ನು ಕುಳ್ಳರಿಸುತ್ತಾರೆ. ಅದರ ಸುತ್ತಲು ತಂಕಟೆ ಮತ್ತು ತುಗ್ಗಲಿ ಗಿಡದ ಸೊಪ್ಪಿನಿಂದ ಬೇರಗು ಹಾಕುತ್ತಾರೆ. ನಂತರ ಪೂಜಾರಿಯ ಮೈಮೇಲೆ ದೇವರು ಬಂದು ನೀರಿರುವ ಸ್ಥಳವನ್ನು ತೋರಿಸುತ್ತಾನೆ. ಪೂಜಾರಿ ತೋರಿಸಿದ ಸ್ಥಳದಲ್ಲಿ ಒರತೆ ತೆಗೆಯುತ್ತಾರೆ. ಅಲ್ಲಿ ನೀರು ಕಂಡ ತಕ್ಷಣ ಗಂಗಾಪೂಜೆ ಮಾಡುತ್ತಾರೆ. ಗಂಗಾಪೂಜೆ ಮಾಡುವ ವಿಧಾನ ಈ ರೀತಿ ಇರುತ್ತದೆ. ಮೂರು ಬೆನವಗಳನ್ನು ತೆಗೆದುಕೊಂಡು ಕಲ್ಲಿನ ಬೆನವಗಳು ೧ ಆ ಕಲ್ಲುಗಳೆ ಮೂರು ದೇವರುಗಳು. ಒಂದು ಭೂಮಿತಾಯಿ, ಎರಡು ಮಳೆರಾಯ, ಮೂರು ಬೆನವಣ್ಣ.

ಸೃಷ್ಟಿಸುವ, ಪೋಷಿಸುವ ಮತ್ತು ರಕ್ಷಿಸುವ ಸಂಕೇತಗಳಾದ ಆ ದೇವರುಗಳಿಗೆ ನನ್ನ ಅಪ್ಪನ ಪ್ರಕಾರ ರೂಪಗಳಿರಲಿಲ್ಲ. ಇದು ಬಯಲು ಸೀಮೆಯ ಕೆಲವು ಕೃಷಿಕರಲ್ಲಿ ಈಗಲೂ ಉಳಿದಿರುವ ಮೂಲದೈವ ಕಲ್ಪನೆಯ ಪಳೆಯುಳಿಕೆ." *(ಬೋರಲಿಂಗಯ್ಯ ಹೀ ಚಿ, ಬುಡಕಟ್ಟು ದೈವಾರಾಧನೆ ಪುಟ ೨ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೧೫)*

"ಮೂರು ಕಲ್ಲುಗಳನ್ನು ಇಟ್ಟು ಅವುಗಳಿಗೆ ಕುಂಕುಮ ಹಚ್ಚಿ ಹೂ ಇಟ್ಟು ಪೂಜಿಸುತ್ತಿದ್ದ ರೀತಿ ಮೂರು ಕಲ್ಲುಗಳಲ್ಲಿ ಒಂದು ಭೂಮಿತಾಯಿ, ಇನ್ನೊಂದು ಮಳೆರಾಯ, ಮತ್ತೊಂದು ಬೆನವಣ್ಣ. ಸೃಷ್ಟಿಸುವ ಪೊರೆಯುವ ಮತ್ತು ರಕ್ಷಿಸುವ ಸಂಕೇತಗಳು ಆ ಮೂರು ಕಲ್ಲುಗಳು" *(ಬೋರಲಿಂಗಯ್ಯ ಹೀ ಚಿ, ಬುಡಕಟ್ಟು ದೈವಾರಾಧನೆ ಪುಟ ೧೪, ೨೦೧೫)*

ಬೆನವಸಿಗಳಿಗೆ ವಿಭೂತಿ ಕುಂಕುಮ ಹಚ್ಚಿ, ಪೂಜೆ ಮಾಡಿ ಕೊಡದಲ್ಲಿ ನೀರು ತುಂಬಿಸಿ, ಅದರ ಮುಂದೆ ಮೂರು ಎಲೆ, ಮೂರು ಅಡಿಕೆ, ಎರಡು ಬಾಳೆಹಣ್ಣು, ಒಂದು ತೆಂಗಿನ ಕಾಯಿ, ಒಡೆದು ಪೂಜೆಮಾಡುತ್ತಾರೆ. ಆ ನಂತರ ಒರತೆಯಲ್ಲಿರುವ ನೀರನ್ನು ತೆಗೆದುಕೊಂಡು ದೇವರ ವಸ್ತುಗಳನ್ನು ಚೆನ್ನಾಗಿ ತೊಳೆಯುತ್ತಾರೆ. ನಂತರ ಪೆಟ್ಟಿಗೆಗೆ ರೇಷ್ಮೆ ಸೀರೆ ಸುತ್ತಿ ಅಲಂಕಾರ ಮಾಡುತ್ತಾರೆ. ಕುದುರೆಗೆ ಅಲಂಕಾರ ಮಾಡಿ ವೀರ ಅಲಗುಗಳಿಗೆ ಮುಖ ಪದ್ಮಗಳನ್ನು ಇಟ್ಟು ಅಲಂಕಾರ ಮಾಡಿ, ಎಂಟು ಗಂಟೆಯ ಹೊತ್ತಿಗೆ ಎಲ್ಲ ಅಲಂಕಾರ ಮುಗಿಯುತ್ತದೆ. ನಂತರ ಹೊಳೆಪೂಜೆ ಮಾಡುತ್ತಾರೆ. ದೇವರಿಗೆ ಧೂಪ ಹಾಕುತ್ತಾರೆ. ಹೊಳೆ ಪೂಜೆಯಲ್ಲಿ ಮುಖ್ಯ ಪಾತ್ರ ಗೌಡರದ್ದು. ಗೌಡ ಬಾಯಿಗೆ ಬಟ್ಟೆ ಕಟ್ಟಿಕೊಂಡು ಅಗಸರು ತಂದಿರುವ ಬೆಂಕಿಯ ಪಂಜುಗಳನ್ನು ಹಿಡಿದು ಮೂಡಲ ಮಣೆವು ಪೂಜೆ ಮಾಡುತ್ತಾನೆ.

೭.೧.೨.೬. ಮೂಡಲ ಮಣೆವು

ಹೊಳೆ ಪೂಜೆ ಮುಗಿಸಿ ಅಲ್ಲಿಂದ ಹೊಳೆಯನ್ನು ಬಿಡುವಾಗ ಪೂರ್ವ ದಿಕ್ಕಿಗೆ ಮುಖಮಾಡಿ ಮಣೇವು ಹಾಕುತ್ತಾರೆ. ಈ ಮಣೇವುನಲ್ಲಿನ ಹಲವು ವಿಧಗಳುಂಟು. ಅವುಗಳು ಈ ಕೆಳಗಿನಂತಿವೆ.

೧. ಮೂಡಲ ಮಣೇವು

೨. ಪಡುವಲ ಮಣೇವು

೩. ಕತ್ತರಿ ಮಣೇವು

೪. ಚೌಕಾಕಾರದ ಮಣೇವು

೫. ಸ್ವಸ್ತಿಕ್ ಆಕಾರದ ಮಣೇವು

ಈ ಮಣೆವು ವೈಷ್ಣವ ಪರಂಪರೆಯಿಂದ ಬಂದಿರುವಂತಹದ್ದು. ಆದರೆ ಇದರ ಆಟ ಆಡುವ ಬಗೆಯನ್ನು ಗಮನಿಸಿದರೆ ದೇಶಿಯ ಆಟ ಎನಿಸುತ್ತದೆ. ಇದನ್ನು ಆಡುವುದಕ್ಕೆ ಎರಡಕ್ಕಿಂತ ಹೆಚ್ಚು ಜನರಿರಬೇಕು. ಮಣೇವು ಹಾಕುವ ವಿಧಾನ ಕಂಬಳಿಯನ್ನು ನೆಲದ ಮೇಲೆ ಹಾಸಿ ಅದರ ಮೇಲೆ

ಒರತೆಯಿಂದ ತಂದಿರುವ ಶುದ್ಧ ನೀರನ್ನು ಚಿಮುಕಿಸಿ, ಆ ನಂತರ ಬಾಳೆಹಣ್ಣು, ಸಕ್ಕರೆ, ಬೆಲ್ಲ ಇಟ್ಟು ದೇವರ ಪೂಜಾರಿ ಪೂಜೆ ಮಾಡುತ್ತಾನೆ. ನಂತರ ದೇವರನ್ನು ಹೊತ್ತುಕೊಂಡಿರುವವರು ಐದರಿಂದ ಹತ್ತು ನಿಮಿಷಗಳ ಕಾಲ ಅದರ ಸುತ್ತಲು ಕುಣಿಯುತ್ತ ಮೂಲಕ ಸುತ್ತುವರಿಯುತ್ತಾರೆ. ಯಾವುದೇ ಕಾರಣಕ್ಕೂ ಅದನ್ನು ದಾಟುವಂತಿಲ್ಲ. ಕುಣಿತ ಮುಗಿದ ನಂತರ ಮಣೇವು ತಿನ್ನಲು ಮುಖ ಕೆಳಗೆ ಮಾಡಿ(ಡಬ್ಬ ಬೀಳುವುದು) ಬೀಳಬೇಕು, ಹಾಗೆ ಬಿದ್ದು ಬಾಯಿಂದ ತೆಗೆದುಕೊಂಡು ತಿನ್ನಬೇಕು ಈ ಕುಣಿತ ಕುಣಿಯಲು ಛಲವಾದಿಯವರು ಪ್ರತ್ಯೇಕವಾದ ಲಯದ ಮೂಲಕ ಉರುಮೆ ಬಡಿಯುತ್ತಾರೆ. ಕಾಡುಗೊಲ್ಲರು ಮಣೇವು ಆಡುವ ಪದ್ಧತಿಯನ್ನು ಇಂದು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರತಿಯೊಂದು ಹಟ್ಟಿಯಲ್ಲಿಯೂ ಮಣೇವು ಆಡುವ ಪದ್ಧತಿ ರೂಢಿಯಲ್ಲಿದೆ. ಈ ಮೂಡಲು ಮಣೇವು ಹಾಕಿದ ನಂತರ ದೇವರನ್ನು ಹೊತ್ತುಕೊಂಡುವರು ಅದನ್ನು ಸುತ್ತುವರೆದು ತಮ್ಮ ಹಟ್ಟಿಯ ಕಡೆ ಮುಖ ಮಾಡುತ್ತಾರೆ. ಅದೇ ಸಮಯದಲ್ಲಿ ಅಕ್ಕಿ ಹಿಟ್ಟಿನಿಂದ ಮಾಡಿದ ತಂಬಿಟ್ಟುವನ್ನು ಅಲ್ಲಿ ಭಕ್ತರಿಗೆ ಪ್ರಸಾದವಾಗಿ ಕೊಡುತ್ತಾರೆ.

ಹಟ್ಟಿಯ ಕಡೆ ಮುಖ ಮಾಡಿದ ತಕ್ಷಣ ದೇವರು ಹಟ್ಟಿಯ ಒಳಗೆ ಪ್ರವೇಶಿಸುವುದಿಲ್ಲ. ಈ ಹಿಂದೆ ದೇವರ ಪೂಜಾರಿಯಾಗಿ ಸಾವನ್ನಪ್ಪಿರುವ ವ್ಯಕ್ತಿಯ ಸಮಾಧಿಯ ಬಳಿಗೆ ಹೋಗಿ ಅಲ್ಲಿ ದೇವರಿಗೆ ಕರಿಯ ಕಂಬಳಿಯ ಮೇಲೆ ಗದ್ದಿಗೆ ಮಾಡಿ ಪೂಜೆ ಮಾಡಿ, ಹಟ್ಟಿಯ ಮುಖ್ಯಬಾಗಿಲಿಗೆ ಬಂದು ನಿಲ್ಲುತ್ತದೆ. ದೇವರು ಹಟ್ಟಿಯ ಹತ್ತಿರ ಬರುವ ವೇಳೆಗೆ ಪೂಜಾರಿ ಮನೆಯ ಹೆಣ್ಣು ಮಕ್ಕಳು ಆರತಿ ತಯಾರು ಮಾಡಿಕೊಂಡಿರುತ್ತಾರೆ. ಒಂದೊಂದು ದೇವರಿಗೆ ಒಂದೊಂದು ರೀತಿಯ ಆರತಿ ಬೆಳಗುತ್ತಾರೆ. ಮದನಕುಂಟೆಯಲ್ಲಿ ನೆಲೆಸಿರುವ ವೀರ ಯರ್ರಣ್ಣನಿಗೆ ರಾಗಿ ಹಿಟ್ಟಿನಿಂದ ತಯಾರಿಸಿದ ಆರತಿಯನ್ನು ಪ್ರತಿನಿತ್ಯ ಊಟಮಾಡುವ ಕಂಚಿನ ತಟ್ಟೆಯಲ್ಲಿಟ್ಟು ಬೆಳಗುತ್ತಾರೆ. ಈ ಆಚರಣೆಯಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಕಾಡುಗೊಲ್ಲರ ಇಷ್ಟವಾದ ಆಹಾರದ ಬೆಳೆ ರಾಗಿ. ಇದಕ್ಕೆ ಕಾರಣವೇನೆಂದು ಕೇಳಿದಾಗ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ವೀರ ಯರ್ರಣ್ಣನನ್ನು ದೊಡ್ಡೇರಿಯ ಮ್ಯಾಸಬೇಡರು ತಲೆಕಡಿದಾಗ ಆ ತಲೆಯು ಹರ್ತಿಕೋಟೆಯ ಕೆರೆಯಲ್ಲಿ ತೇಲುತ್ತದೆ. ಆ ಸಮಯದಲ್ಲಿ ಅವನ ತಾಯಿ ರಾಗಿ ಮುದ್ದೆಯನ್ನು ಊಟ ಮಾಡುತ್ತಿರುತ್ತಾಳೆ. ಆಕೆಯ ಹೆಸರು ಮುದ್ದಮ್ಮ ಎಂದು ಮಾಹಿತಿದಾರರು ಹೇಳುತ್ತಾರೆ. ಯರ್ರಣ್ಣ ಸಾಕಿದ ನಾಯಿ ಬಂದು ವೀರ ಯರ್ರಣ್ಣ ಮಡಿದ ಮಾಹಿತಿ ಹೇಳಿದಾಗ, ಆಕೆ ತಾನು ಊಟ ಮಾಡುತ್ತಿರುವ ತಟ್ಟೆಯನ್ನು ತೆಗೆದುಕೊಂಡು ಹೋಗಿ ಅದರಲ್ಲಿ ಆರತಿಯನ್ನು ಇಟ್ಟು ಬೆಳಗಿದ್ದರಿಂದ ಅದೇ ಪದ್ಧತಿ ಇಂದೂ ಕೂಡ ಮುಂದುವರಿಸಿಕೊಂಡು ಬಂದಿರುವುದಾಗಿ ಹೇಳುತ್ತಾರೆ. ಈ ಆಚರಣೆಯನ್ನು ಇಂದೂ ಕಾಣಬಹುದು.

ಕಾಡುಗೊಲ್ಲರು ಅವರ ದೇವರ ಸೌಂದರ್ಯವನ್ನು ಗುರುತಿಸುವುದು ಹಟ್ಟಿಯ ಮುಖ್ಯ ಬಾಗಿಲಲ್ಲಿ. ದೇವರು ಬಂದು ನಿಂತಾಗ ಪದ ಹೇಳುವವರು ಪದ ಹೇಳುತ್ತಾರೆ. ಉರಿಮೆ ಬಡಿಯುವ ವ್ಯಕ್ತಿಯು ದೇವರನ್ನು ಕೊಂಡಾಡುತ್ತಾನೆ. ಅದು ಸಂತೋಷದ ಕ್ಷಣವೆಂದು ನೋಡಿದವರಿಗೆ ಅನಿಸದಿರದು. ಏನೇ ಕೆಲಸವಿದ್ದರೂ ಅದನ್ನು ಬಿಟ್ಟು ದೇವರನ್ನು ನೋಡಲು ಬರುತ್ತಾರೆ. ಅಗಸರು ಹಾಸಿದ

ಮಡಿಬಟ್ಟೆಯ ಮೇಲೆ ಒಂದೊಂದೆ ಹೆಜ್ಜೆ ಇಡುತ್ತಾ ಬರುತ್ತಿದ್ದ ದೇವರನ್ನು ಹಟ್ಟಿಯ ಒಳಗೆ ಕರೆದುಕೊಂಡು ಹೋಗುತ್ತಾನೆ. ಆಗ ದೇವರು ಬಹಳ ಸಂತೋಷದಿಂದ ಕುಣಿಯುತ್ತದೆ. ದೇವರು ಬಹಳ ಸಮಯ ತೆಗೆದುಕೊಂಡು ಹಟ್ಟಿಯನ್ನು ಪ್ರವೇಶ ಮಾಡುತ್ತದೆ. ಆಗ ಗುಡಿಯ ಮುಂದೆ ಕರಿಯ ಕಂಬಳಿ ಹಾಸಿ ಗದ್ದಿಗೆ ಮಾಡುತ್ತಾರೆ. ನಂತರ ಎಲ್ಲರು ಅವರ ಅವರ ಭಕ್ತರು ಮನೆಗೆ ಹೋಗಿ ಊಟ ಮಾಡಿ ಬಂದು ಸ್ವಲ್ಪ ಸಮಯದ ತನಕ ಕುಣಿಯುತ್ತಾರೆ. ಅದೇ ಸಮಯದಲ್ಲಿ ಭಕ್ತರು ತಮ್ಮ ಕಷ್ಟ ಸುಖಗಳನ್ನು ದೇವರೊಂದಿಗೆ ನಿವೇಧಿಸಿಕೊಳ್ಳುತ್ತಾರೆ.

೭.೧.೨.೭. ಹರಿವಾಣದ ವಿಶೇಷತೆ

ಹರಿವಾಣವೆಂದರೆ ಅಗಲವಾದ ಕಂಚಿನ ತಟ್ಟೆ. ಅದನ್ನು ದೇವರು ಹೊಳೆಗೆ ಹೋದ ಸಂದರ್ಭದಲ್ಲಿ ಅದನ್ನು ಒರತೆ ನೀರಿನಿಂದ ತೊಳೆದು ಅದಕ್ಕೆ ಪ್ರತ್ಯೇಕವಾದ ಪೂಜೆ ಮಾಡುತ್ತಾರೆ. ಕಂಚಿನ ತಟ್ಟೆಯಲ್ಲಿ ಒಂದು ಕಂಚಿನ ಚೊಂಬಿನ ತುಂಬ ನೀರು ತುಂಬಿ ಅದರ ಮೇಲೆ ತೆಂಗಿನ ಕಾಯಿ ಬೊರಲು ಹಾಕಿ ತಂಬಿಗೆ ಮತ್ತು ತೆಂಗಿನ ಕಾಯಿಗೆ ಒಂದೊಂದು ಹಂಗುದಾರ ಕಟ್ಟುತ್ತಾರೆ. ಅದರ ಸುತ್ತ ವೀಳ್ಯೆದೆಲೆ ಇಟ್ಟು ಸುತ್ತ ಒಂದು ಕೆಂಪು ಬಟ್ಟೆ ಕಟ್ಟುತ್ತಾರೆ. ಪೂಜೆಯಾದ ನಂತರ ಅದನ್ನು ಒಬ್ಬ ವ್ಯಕ್ತಿಯ ತಲೆಯ ಮೇಲೆ ಹೊರಿಸುತ್ತಾರೆ. ಅದನ್ನು ಕಳಸ ಎಂದು ಕರೆಯಬಹುದು.

ಇದರ ಪ್ರಾಮುಖ್ಯತೆಯ ಬಗ್ಗೆ ಮಾಹಿತಿದಾರರನ್ನು ಕೇಳಿದರೆ ಹಲವಾರು ವರ್ಷಗಳಿಂದ ಮಕ್ಕಳಾಗದಿರುವ ಮುತ್ತೈದೆಯರು ಮಕ್ಕಳನ್ನು ಬಯಸಿ ದೇವರ ಕೆಳಗೆ ಕುಳಿತರೆ, ಮುಂದೆ ಮಕ್ಕಳಾಗುವ ಸಂಭವವಿದ್ದರೆ. ದೇವರು ಆ ಹರಿವಾಣದಲ್ಲಿರುವ ನೀರನ್ನು ಸುರಿಯುತ್ತವೆ. ಮಕ್ಕಳು ಆಗುವುದಿಲ್ಲ ಎಂದು ಗೊತ್ತಾದರೆ ಆ ನೀರು ಸುರಿಯುವುದಿಲ್ಲ. ಹಲವಾರು ಭಕ್ತರು ಈ ರೀತಿಯ ಆಚರಣೆಯಿಂದ ಮಕ್ಕಳನ್ನು ಪಡೆದಿರುವ ಬಗ್ಗೆ ಹೇಳುತ್ತಾರೆ. ಕೆಲವು ಕಾಯಿಲೆಗಳು, ಮನೋರೋಗಗಳು, ದೆವ್ವ ಹಿಡಿದವರು ಮುಂತಾದವರು ಸಹ ಈ ಪವಿತ್ರ ಹರಿವಾಣದ ನೀರಿನಿಂದ ವಾಸಿಯಾಗಿದ್ದಾರೆ. ಎಂಬ ಕಲ್ಪನೆ ಇಂದಿಗೂ ಜನರಲ್ಲಿರುವುದು ಕಂಡು ಬರುತ್ತದೆ. ಇದು ವಾಸ್ತವಕ್ಕೆ ತುಂಬ ದೂರದ ವಿಚಾರದರೂ ಅವರು ದೇವರು ನಮಗೆ ಮಕ್ಕಳನ್ನು ಕೊಡುತ್ತಾನೆಂಬ ಕಲ್ಪನೆಯು ವಿದ್ಯಾವಂತರಲ್ಲಿ ಮತ್ತು ಅವಿದ್ಯಾವಂತರಲ್ಲಿದೆ. ಆಧುನಿಕ ವೈಚಾರಿಕ ಯುಗದಲ್ಲಿ ಮಕ್ಕಳು ಆಗದಿದ್ದರೆ ಆಸ್ಪತ್ರೆಗೆ ತೋರಿಸುವುದಕ್ಕಿಂತ ಮೊದಲು ದೇವಾಲಯಗಳ ಪ್ರದಕ್ಷಿಣೆ ಹಾಕುವುದು, ಶಾಸ್ತ್ರ ಕೇಳುವುದು, ಮುಂತಾದ ಆಚರಣೆಗಳನ್ನು ಮಾಡುತ್ತಾರೆ. ಇದನ್ನು ಗಮನಿಸಿದರೆ ದೇವರು ಮಕ್ಕಳನ್ನು ಕೊಡುತ್ತಾನೆಂಬ ನಂಬಿಕೆ ಅವರಲ್ಲಿ ಗಾಢವಾಗಿದೆ. ಅದರಲ್ಲೂ ಕಟ್ಟಾ ಸಂಪ್ರದಾಯ ಕುಟುಂಬದವರು ದೇವಾಲಯ ಸುತ್ತುವುದನ್ನು ಬಿಟ್ಟರೆ ಯಾವ ಆಸ್ಪತ್ರೆಯಲ್ಲೂ ತೋರಿಸುವುದಿಲ್ಲ.

ಈ ಹರಿವಾಣದ ಪೂಜೆ ಒಂದು ಆಚರಣೆಯಾಗಿ ಮುಂದುವರಿಯುತ್ತಿದೆ. ಕೇತೆಲಿಂಗನ ಕಾವ್ಯದಲ್ಲಿ 'ತುರುಕರು ಹರಿವಾಣವನ್ನು ಮುಟ್ಟಲು ಅಂಜಿದರು' ಎಂದು ಹೇಳಲಾಗಿದೆ. ಕಾಡುಗೊಲ್ಲರ ದೇವರು ಹರಿವಾಣದಲ್ಲಿ ವಾಸವಾಗಿರುವನು ಎಂದೂ ಮತ್ತು ಅದು ಫಲವಂತಿಕೆಯ ಹಾಗೂ ಭೂಮಿಯ ಸಂಕೇತ ಎಂಬ ಕಲ್ಪನೆ ಅವರಲ್ಲಿದೆ.

೭.೧.೨.೮. ಅಮವಾಸ್ಯೆಯ ಕೂಳು

ಕಾಳಹಬ್ಬದ ಮತ್ತೊಂದು ವಿಶೇಷವೆಂದರೆ, ಅಮವಾಸ್ಯೆಯ ಕೂಳು ತಿನ್ನುವುದು. ದೇವರು ಜಲದಿಗೆ ಹೋಗಿ ಬಂದು ಗುಡಿಸೇರಿದ ನಂತರ ಆ ರಾತ್ರಿ ಅಮವಾಸ್ಯೆಯ ಕೂಳಿನ ಆಚರಣೆ ಮಾಡುತ್ತಾರೆ. ಇತರೇ ಯಾವ ಸಮುದಾಯದಲ್ಲಿಯೂ ಕಂಡು ಬರದ ಈ ಆಚರಣೆ ಕಾಡುಗೊಲ್ಲರಲ್ಲಿ ಮಾತ್ರ ಕಂಡುಬರುತ್ತದೆ. ಪ್ರತಿಯೊಂದು ಸಮುದ್ಾಯಕ್ಕೂ ಹಿರಿಯರಿಗೆ ಮೋಕ್ಷ ಕಲ್ಪಿಸಿಕೊಡದಿದ್ದರೆ ಅವರು ಅಂತರ ಪಿಶಾಚಿಯಾಗಿ ಕಾಡುತ್ತಾರೆಂಬ ನಂಬಿಕೆ ಇರುವಂತೆ ಕಾಡುಗೊಲ್ಲರಲ್ಲಿಯೂ ಇದೆ. ಕಾಡುಗೊಲ್ಲರು ಈ ಆಚರಣೆಯನ್ನು ಇನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಕಾಡುಗೊಲ್ಲರಲ್ಲಿ ಮುಖ್ಯವಾಗಿ ಮೂರು ಬಗೆಯ ಪೂಜಾರಿಗಳು ಕಂಡುಬರುತ್ತಾರೆ. ದೇವರ ಪೂಜಾರಿಯನ್ನು ಬಸವ ಎಂದು ಕರೆಯುತ್ತಾರೆ. ಈತ ದೇವರ ಪಟ್ಟದ ಪೂಜಾರಿ. ದೀಪದ ಕಂಬಹಿಡಿದು ಕೊಂಡು ಬೇಡಿಕೊಂಡು ಬರುವ ಪೂಜಾರಿಯನ್ನು ಕಂಬದ ಪೂಜಾರಿ ಎಂದು ಕರೆಯುತ್ತಾರೆ. ಸತ್ತವರಿಗೆ ಮುಕ್ತಿ ಒದಗಿಸುವ ಕಾರ್ಯಮಾಡುವ ಪೂಜಾರಿಯನ್ನು ಅಮವಾಸ್ಯೆಯ ಪೂಜಾರಿ ಎಂದು ಕರೆಯುವರು.ಈ ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ.

ಅಮವಾಸ್ಯೆಯ ಪೂಜಾರಿಯು ಮುಖ್ಯ ಕರ್ತವ್ಯವೆಂದರೆ ವರ್ಷಕ್ಕೆ ಒಂದು ಸಲ ಅವರು ಮಾಡುವ ಕಾಳಹಬ್ಬದಲ್ಲಿ ಸತ್ತ ವ್ಯಕ್ತಿಗಳಿಗೆ ಮೋಕ್ಷ ಕಲ್ಪಿಸಿಕೊಡುವುದು. ದೇವರು ಹೊಳೆಗೆ ಹೋದ ದಿನದ ರಾತ್ರಿ ಸುಮಾರು ಹನ್ನೆರಡು ಗಂಟೆಯ ಸಮಯಕ್ಕೆ ಬತ್ತಲೆಯಾಗಿ ತಣ್ಣೀರು ಸ್ನಾನ ಮಾಡಿ, ಕುಂಬಾರರ ಮನೆಯಿಂದ ತಂದಿರುವ ಹೊಸ ಮಡಿಕೆಯಲ್ಲಿ ಒಂದು ಸೇರು ಅಕ್ಕಿ ಒಂದು ತುಂಡು ಬೆಲ್ಲ, ಒಂದು ಹಿಡಿ ಬೇವಿನ ಸೊಪ್ಪು ಸೇರಿಸಿ ಬೇಯಿಸುತ್ತಾನೆ. ಆ ವರ್ಷದಲ್ಲಿ ಸತ್ತಿರುವ ಪ್ರತಿಯೊಬ್ಬ ವ್ಯಕ್ತಿಯ ರೂಪದಲ್ಲಿ ಒಂದೊಂದು ಕಲ್ಲನ್ನು ಇಟ್ಟು ಅವರಿಗೆ ಎಡೆ ಹಾಕಿ ಆ ನಂತರ ಶಾಸ್ತ್ರೋಕ್ತವಾಗಿ ಪೂಜೆಮಾಡಿ ಅವರು ದಿನ ನಿತ್ಯ ಬಳಸುತ್ತಿದ್ದ ವಸ್ತುಗಳಾದ ಎಲೆ, ಅಡಿಕೆ, ಹೊಗೆಸೊಪ್ಪು, ಬೀಡಿ, ಬೆಂಕಿಪಟ್ಟಣ, ಬಾಳೆಹಣ್ಣು, ತೆಂಗಿನಕಾಯಿ ಮೂರು ಉಂಡೆ ತಂಬಿಟ್ಟು ಇಟ್ಟು ಮಧ್ಯರಾತ್ರಿ ಪೂಜೆ ಮಾಡುತ್ತಾನೆ. ನಂತರ ಮಾಡಿರುವ ಅಡುಗೆಯನ್ನು ಅಷ್ಟ ದಿಕ್ಕುಗಳಿಗೂ ತೋರಿಸಿ ಊಟ ಮಾಡುತ್ತಾನೆ. ಆ ಊಟವನ್ನು ಅಮವಾಸ್ಯೆಯ ಕೂಳು ಎಂದು ಕರೆಯುತ್ತಾರೆ. ಈ ಕೂಳನ್ನು ತಿಂದು ಸಹಿಸಕೊಳ್ಳುವದು ಕಷ್ಟ ಎಂದು ಜನ್ನೇನಹಳ್ಳಿ ಗೊಲ್ಲರಹಟ್ಟಿಯ ವೀರ ಯರ‍್ರಣ್ಣ ದೇವರ ಅಮವಾಸ್ಯೆಯ ಪೂಜಾರಿಯಾದ ಲಟ್ಟೆ ಈರಯ್ಯನವರು ಹೇಳುತ್ತಾರೆ.

ಸ್ವರ್ಗ ಮತ್ತು ನರಕದ ಕಲ್ಪನೆ ಕಾಡುಗೊಲ್ಲರಲ್ಲಿಯೂ ಇರುವುದನ್ನು ಕಾಣಬಹುದು. ಪೂಜಾರಿಯನ್ನು ದೇವರ ಪ್ರತಿರೂಪ ಎಂದು ನಂಬಿರುವ ಕಾರಣ ಪೂಜಾರಿ ತೆಗೆದುಕೊಂಡ ನಿರ್ಣಯವೇ ಅಂತಿಮವಾಗಿರುತ್ತದೆ. ಹಾಗಾಗಿ ಪೂಜಾರಿ ತಪ್ಪು ಮಾಡುವುದಿಲ್ಲವೆಂದು ತಿಳಿದು ಅವನಿಗೆ ಗುರುವಿನ ಸ್ಥಾನ ಕೊಟ್ಟು ಗೌರವಿಸುವುದು ಇಂದಿಗೂ ಹಟ್ಟಿಗಳಲ್ಲಿ ನೋಡಬಹುದು.

೭.೧.೨.೯. ಗುಗ್ಗರಿ ಪ್ರಸಾದ

ಕಾಡುಗೊಲ್ಲರು ಮತ್ತು ಶಿಷ್ಯರು ಮಾಡುವ ಶಿವರಾತ್ರಿ ಹಬ್ಬಗಳಲ್ಲಿ ಅನೇಕ ವ್ಯತ್ಯಾಸವಿರುವುದನ್ನು ಕಾಣಬಹುದು. ಇವರು ಕಾಳ ಹಬ್ಬವನ್ನು ಗುಗ್ಗರಿಹಬ್ಬವೆಂದು ಕರೆಯುತ್ತಾರೆ. ಕಾಡುಗೊಲ್ಲರು ಇದನ್ನು ಶಿವರಾತ್ರಿಯ ತಿಂಗಳಲ್ಲಿ ಮಾಡುತ್ತಾರೆ. ಕಾಡುಗೊಲ್ಲರು ಬೆಳೆದಂತಹ ಧಾನ್ಯಗಳನ್ನು ಶಿವರಾತ್ರಿಯಲ್ಲಿ ಕಾಳಹಬ್ಬ ಮಾಡುವವರೆಗೂ ಉಪಯೋಗಿಸುವುದಿಲ್ಲ, ಸನ್ನೆಯ ಗೊಲ್ಲರು ಇವರು ವರ್ಷವಿಡಿ ಹುಳ್ಳಿ ನವಣೆ ವ್ರತವನ್ನು ಕೈಗೊಂಡಿರುತ್ತಾರೆ. ಅಂದರೆ ವರ್ಷದಲ್ಲಿ ಒಂದು ದಿನಮಾತ್ರ ಹುಳ್ಳಿ-ನವಣೆಯನ್ನು ಗುಗ್ಗರಿಯಾಗಿ ಬೇಯಿಸಿ ತಿಂದು ಆನಂತರ ಮತ್ತೆ ಕಾಳಹಬ್ಬ ಅಥವಾ ಗುಗ್ಗರಿಹಬ್ಬ ಬರುವವರೆಗೆ ಅವುಗಳನ್ನು ಮುಟ್ಟುವಂತಿಲ್ಲ, ಹಾಗೂ ಆಹಾರಕ್ಕಾಗಿ ಬಳಸುವಂತಿಲ್ಲ. ಆದರೆ ಸೋಮನಗೊಲ್ಲರು ಅರ್ಧಬತದವರು. ಇವರು ವರ್ಷದಲ್ಲಿ ಆರುತಿಂಗಳು ಮಾತ್ರ ಹುಳ್ಳಿ-ನವಣೆಯನ್ನು ಮುಟ್ಟುವಂತಿಲ್ಲ ಹಾಗೂ ಬಳಸುವಂತಿಲ್ಲ. ಇನ್ನುಳಿದ ಆರುತಿಂಗಳು ಅವುಗಳನ್ನು ಮುಟ್ಟಬಹುದು ಆಹಾರಕ್ಕಾಗಿ ಬಳಸಬಹುದು. ಆ ವರ್ಷದಲ್ಲಿ ಬೆಳೆದ ಧಾನ್ಯಗಳನ್ನು ಕಾಳಹಬ್ಬದಲ್ಲಿ ಹೊಸ ಮಡಿಕೆಯಲ್ಲಿ ಉಪ್ಪು ಹಾಕದೇ ಬೇಯಿಸುತ್ತಾರೆ. ಕಾಡುಗೊಲ್ಲರ ದೇವರ ವಿಶೇಷವೆಂದರೆ ಉಪ್ಪನ್ನು ನಿರಾಕರಣೆ ಮಾಡಿ ಬೆಲ್ಲವನ್ನು ಸ್ವೀಕರಿಸುವ ಮನೋಭಾವ ಹೊಂದಿರುವುದು. ಕಾಡುಗೊಲ್ಲರು ಹೇಳುವ ಪ್ರಕಾರ ಉಪ್ಪು ತಯಾರು ಮಾಡುವವರು ಕೆಳಸಮುದಾಯದವರು. ಹಾಗಾಗಿ ಆ ಉಪ್ಪು ಬಳಸಿದರೆ ದೇವರಿಗೆ ಮೈಲಿಗೆ ಆಗುತ್ತದೆ. ಆ ಕಾರಣದಿಂದ ನಾವು ಕಾಳುಗಳನ್ನು ಬೇಯಿಸಲು ಉಪ್ಪು ಹಾಕುವುದಿಲ್ಲ ಎಂದು ಹೇಳುತ್ತಾರೆ. ರಾತ್ರಿ ಇಡೀ ಬೇಯಿಸಿದ ಕಾಳುಗಳನ್ನು ಬೆಳಿಗ್ಗೆ ೮ ಗಂಟೆಯ ಸಮಯಕ್ಕೆ ದೇವರ ಗುಡಿಯ ಮುಂದೆ ರಾಶಿ ಹಾಕುತ್ತಾರೆ. ಇದರ ಜೊತೆಗೆ ಬೆಲ್ಲ ತೆಂಗಿನಕಾಯಿಯ ಸಣ್ಣ ತಂಡುಗಳನ್ನು ಸೇರಿಸಿರುತ್ತಾರೆ. ಉರಿಮೆ ವಾದ್ಯದೊಂದಿಗೆ ಕಾಳಿನ ರಾಶಿ ಪೂಜೆ ಮಾಡುತ್ತಾರೆ. ದೇವರಿಗೆ ನೈವೇಧ್ಯ ಮಾಡಿದ ನಂತರ ಹಟ್ಟಿಯಲ್ಲಿರುವ ಪ್ರತಿಯೊಂದು ಮನೆಗೂ ಕಾಳುಕೊಟ್ಟು ಕಳುಹಿಸುತ್ತಾರೆ. ನಂತರ ಎಲ್ಲರೂ ಆ ಕಾಳುಗಳನ್ನು ತಿನ್ನುತ್ತಾರೆ. ಆಗ ಈ ವ್ರತ ಮುಗಿಯುತ್ತದೆ. ಕಲೆಯದ ಬೆಡಗಿನವರಿಗೆ ಗುಗ್ಗರಿ ಕಾಳುಗಳನ್ನು ಕೊಡದೆ ಇರುವುದು ಇಲ್ಲಿಯ ವಿಶೇಷತೆ.

೭.೧.೨.೧೦. ಹರಿಸೇವೆ

ಕಾಡುಗೊಲ್ಲರು ಕಾಳಹಬ್ಬದ ಎರಡನೆಯ ದಿನ ಹರಿಸೇವೆ ಮಾಡುವ ಪ್ರವೃತ್ತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಈ ಹರಿ ಸೇವೆಯನ್ನು ಪರುವು ಎಂದು ಸಹ ಕರೆಯುತ್ತಾರೆ. ಇದನ್ನು ಮಾಡುವ ವಿಧಾನ ತುಂಬಾ ಸರಳವಾಗಿರುತ್ತದೆ. ಅಡುಗೆ ಮಾಡುವುದಕ್ಕಿಂತ ಮುಂಚಿತವಾಗಿ ನೆಲದಲ್ಲಿ ತಗ್ಗು ತೆಗೆದು ಮೂರು ಗುಂಡಿಗಳನ್ನು ಮಾಡುತ್ತಾರೆ. ಆ ಮೂರು ಗುಂಡಿಗಳ ಮೇಲೆ ಮೂರು ಮೂರು ಕಲ್ಲುಗಳನ್ನು ಇಡುತ್ತಾರೆ. ಅವೆ ಒಲೆ ಆಗುತ್ತವೆ. ಅವುಗಳಿಗೆ ಅರಿಸಿಣ ಕುಂಕುಮ ಹಚ್ಚಿ ಪೂಜೆ ಮಾಡುತ್ತಾರೆ. ಬೆಂಕಿಯನ್ನು ದೇವರು ಎಂದು ನಂಬಿಕೊಂಡಿದ್ದಾರೆ. ಇವರು ಅಡುಗೆ ಮಾಡಲು ಭಟ್ಟರನ್ನು ತರುವುದಿಲ್ಲ. ಸಮುದಾಯದ ಹಿರಿಯರೆ ಅದರ ಉಸ್ತುವಾರಿ ವಹಿಸಿಕೊಂಡು ಮಾಡುತ್ತಾರೆ. ಇವರೊಂದಿಗೆ ಹಟ್ಟಿಯ ಎಲ್ಲ ಹೆಣ್ಣು ಹಾಗೂ ಗಂಡು ಮಕ್ಕಳು ಕೈ ಜೋಡಿಸುತ್ತಾರೆ.

ಅಡುಗೆ ಮಾಡಲು ಸಿಲಿಂಡರ್ ಬಳಸುವುದಿಲ್ಲ. ಕಟ್ಟಿಗೆಯನ್ನೇ ಬಳಸುತ್ತಾರೆ. ಗೋಧಿ ಇಲ್ಲವೇ ರವೆ ಹುಗ್ಗಿ, ಪಲ್ಯ, ಅನ್ನ, ಸಾರು ಮಾಡುತ್ತಾರೆ. ಈ ಹರಿಸೇವೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ಎಲ್ಲ ಸಮುದಾಯದವರು ಊಟ ಮಾಡಬಹುದು. ಮಾದಿಗರು ಹಟ್ಟಿಯ ಹೊರಗೆ ಕುಳಿತು ಊಟಮಾಡುತ್ತಾರೆ. ಇಲ್ಲಿ ಕಲೆಯುವವರು ಕಲೆಯದವರು ಎಂಬ ಭೇದ ಮರೆತು ಸಹಪಂಕ್ತಿ ಊಟ ಮಾಡುತ್ತಾರೆ. ಎಲ್ಲೋ ಒಂದು ಕಡೆ ಕಾಡುಗೊಲ್ಲರು ಆಧುನಿಕತೆಯನ್ನು ವಿರೋಧಿಸುತ್ತಾರೆ ಎನಿಸುತ್ತದೆ. ಏಕೆಂದರೆ ಇಂದಿಗೂ ಅವರ ದೇವರು ಯಂತ್ರಗಳಿಂದ ತಯಾರಾಗುವ ಯಾವುದೇ ಆಹಾರ ಬಳಸುವುದಿಲ್ಲ.

೭.೧.೨.೧೧. ದೊಡ್ಡ ಎಡೆ

ಕಾಳಹಬ್ಬದಲ್ಲಿ ಈ ಆಚರಣೆ ಮಾಡುತ್ತಾರೆ. ಕಾಳಹಬ್ಬ ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಅವರ ಸಮುದಾಯದ ಪ್ರತಿ ಮನೆಯಲ್ಲಿ ಹಾಲು ಕರೆದುಕೊಂಡು, ಚೆನ್ನಾಗಿ ಕಾಯಿಸಿ, ಹೆಪ್ಪು ಹಾಕುತ್ತಾರೆ. ಕಾಳಹಬ್ಬದ ಮೂರನೆಯ ದಿನ ಅಕ್ಕಿಯ ಅನ್ನ ಮಾಡಿ, ಹೆಪ್ಪು ಹಾಕಿರುವ ಮೊಸರಿನಿಂದ ಮಜ್ಜಿಗೆ ಕಡೆದು ಅದರಿಂದ ಬಂದಿರುವ ಬೆಣ್ಣೆ ಕಾಯಿಸಿ ದೀಪಹಚ್ಚಲು ಆ ತುಪ್ಪ ಬಳಸುತ್ತಾರೆ. ಮಜ್ಜಿಗೆಯಲ್ಲಿ ಬಾಳೆಹಣ್ಣನ್ನು ಸೇರಿಸಿ ಅನ್ನವನ್ನು ನೂರಾ ಒಂದು ಉಂಡೆ ಮಾಡಿ ದೇವರಿಗೆ ಎಡೆ ಹಾಕುತ್ತಾರೆ. ಆನಂತರ ಸಮುದಾಯದವರೆಲ್ಲ ಸೇರಿ (ಅಂದರೆ ಸ್ತ್ರೀಯರನ್ನು ಹೊರತು ಪಡಿಸಿ) ಕಲೆಯದವರನ್ನು ಹೊರತು ಪಡಿಸಿ ಅವರ ಬೆಡಗಿನ ಪುರುಷರು ಮತ್ತು ಋತುಮತಿಯಾಗದ ಹೆಣ್ಣು ಮಕ್ಕಳು ಊಟಮಾಡುತ್ತಾರೆ.

೭.೧.೨.೧೨. ಖರ್ಚು-ವೆಚ್ಚ

ಗುಗ್ಗರಿ ಹಬ್ಬ ಮುಗಿದ ಕೊನೆಯ ದಿನ ಆ ದೇವರಿಗೆ ಸೇರಿದ ಎಲ್ಲ ಅಣ್ಣ-ತಮ್ಮಂದಿರು ಸೇರಿ ಗುಡಿಯ ಮುಂದೆ ಸೇರುತ್ತಾರೆ. ಮೊದಲೆ ತೀರ್ಮಾನ ಮಾಡಿದ ರೀತಿಯಲ್ಲಿ ಖರ್ಚು ವೆಚ್ಚದ ಲೆಕ್ಕ ಹಾಕುವರು. ದೇವರ ಹಬ್ಬ ಮಾಡಲು ತಗುಲಿದ ಖರ್ಚಿನ ಹಣವನ್ನು ಎಲ್ಲರಿಂದ ಸಂಗ್ರಹ ಮಾಡುತ್ತಾರೆ. ಇಷ್ಟವಿದ್ದರೆ ನೆಂಟರೂ ಹಣ ಕೊಡಬಹುದು. ಆದರೆ ಅಣ್ಣ- ತಮ್ಮಂದಿರು ಮಾತ್ರ ಕಡ್ಡಾಯವಾಗಿ ಕೊಡಲೇಬೇಕು. ಕೊಡದಿದ್ದರೆ ಅವನಿಗೆ ದೇವರ ಗುಡಿಯಲ್ಲಿ ಹಣ್ಣು ಕಾಯಿ ಒಡೆದು ಕೊಡುವುದಿಲ್ಲ. ದೇವರ ಕೆಲಸ ಕಾರ್ಯಗಳನ್ನು ಮಾಡಿಕೊಡುವುದಿಲ್ಲ. ಕಾಡುಗೊಲ್ಲರು ಎಷ್ಟು ಜಾಣರೆಂದರೆ ತಮ್ಮ ದೇವರನ್ನು ಅಭಿವೃದ್ಧಿ ಮಾಡಲು ತಾವೇ ಚೀಟಿ ಹಾಕಿಕೊಳ್ಳುತ್ತಾರೆ. ಒಂದು ಸಾವಿರಕ್ಕೆ ಒಂದು ಸಾವಿರ ಸೇರಿಸಿ ಮುಂದಿನ ಕಾಳ ಹಬ್ಬದಲ್ಲಿ ಕೊಡುವ ಪದ್ಧತಿ ಬೆಳೆಸಿ ಕೊಂಡಿದ್ದಾರೆ. ಹೀಗೆ ಬಂದಿರುವ ದುಡ್ಡಿನಿಂದ ದೇವಾಲಯ ಕಟ್ಟಿಸುವುದು, ದೇವರಿಗೆ ಬೇಕಾಗಿರುವ ವಸ್ತುಗಳ ಖರೀದಿ ಮಾಡಲು ಬಳಸುತ್ತಾರೆ.

೭.೧.೩. ಯುಗಾದಿ

ಈ ಹಬ್ಬವನ್ನು ಅವರದೇ ಆದ ಸಂಪ್ರದಾಯಗಳ ಮೂಲಕ ಆಚರಿಸುತ್ತಾರೆ. ಈ ಹಬ್ಬದಲ್ಲಿ ಸೂರ್ಯನ, ಹೊಸ್ತಿಲು, ಹಿರಿಯರ, ನೇಗಿಲು, ಜುಂಜಪ್ಪ, ಭವನಾಶಿ, ಕಡಗೋಲು, ದೇವರ ಪೂಜಾರಿಯ

ಸಮಾಧಿ, ಹಟ್ಟಿಮಾರಮ್ಮನ, ಊರಮಾರಮ್ಮ ಮತ್ತು ಚಂದ್ರನ ಪೂಜೆ ಮಾಡಿ, ಕೋಲಾಟ, ಓಕುಳಿ ಆಡುವರು.

೭.೧.೩.೧. ಸೂರ್ಯನ ಪೂಜೆ

ಕಾಡುಗೊಲ್ಲರು ಪಶುಪಾಲಕರಾದ ಕಾರಣ ಅವರಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧವಿದೆ. ಹಾಗಾಗಿ ಪ್ರಕೃತಿಯ ಪ್ರತಿಯೊಂದು ವಸ್ತುಗಳಲ್ಲಿಯೂ ದೈವತ್ವವನ್ನು ಕಾಣುತ್ತಾರೆ. ಆ ಕಾರಣದಿಂದ ಸೃಷ್ಟಿ ಕ್ರಿಯೆಗೆ ಕಾರಣಿಕರ್ತನಾದ ಸೂರ್ಯದೇವನಿಗೆ ಅಮವಾಸ್ಯೆಯ ಬೆಳಿಗ್ಗೆ ಐದು ಗಂಟೆಗೆ ಎದ್ದು ನೆಲ ಒಲೆ ಸಾರಿಸಿ ಸೂರ್ಯನ ಉದಯಕ್ಕಾಗಿ ಕಾಯುತ್ತಿರುತ್ತಾರೆ. ಈ ಆಚರಣೆ ಇವರಿಗೆ ಬಹಳ ಮಹತ್ವವಾದುದು. ಏಕೆಂದರೆ ಇವರ ತಮ್ಮ ಹಿರಿಯರನ್ನು ಅಮವಾಸ್ಯೆಯ ದೇವರಗಳಾಗಿ ಮಾಡಿಕೊಂಡಿದ್ದಾರೆ. ಅಮವಾಸ್ಯೆ ಎನ್ನುವುದು ಅವರಿಗೆ ಹಿರಿಯರ ನೆನಪನ್ನು ತರುತ್ತದೆ. ಹಾಗಾಗಿ ಹುಟ್ಟಿದ ತಕ್ಷಣ ಸೂರ್ಯನಿಗೆ ಪೂಜೆ ಮಾಡುತ್ತಾರೆ. ಕಾಡುಗೊಲ್ಲರ ಪೂರ್ವಾಭಿಮುಖವಾಗಿ ಇಂದಿಗೂ ಕೂಡ ಮುಖ ತೊಳೆದುಕೊಂಡು ಸೂರ್ಯ ನಮಸ್ಕಾರವನ್ನು ತಪ್ಪದೆ ಮಾಡುತ್ತಾರೆ.

೭.೧.೩.೨. ಹೊಸ್ತಿಲು ಪೂಜೆ

ಮನೆಯ ಹೊಸ್ತಿಲಿಗೆ ಕಾಡುಗೊಲ್ಲರು ಎಲ್ಲಿಲ್ಲದ ಪ್ರಾಮುಖ್ಯತೆ ಕೊಟ್ಟಿರುವುದು ಕಂಡುಬರುತ್ತದೆ. ಕಾಡುಗೊಲ್ಲರ ಮನೆಯ ಹೆಣ್ಣು ಮಕ್ಕಳು ಸೂರ್ಯ ಹುಟ್ಟುವುದಕ್ಕಿಂತ ಮುಂಚಿತವಾಗಿ ಎದ್ದು ಮುಖ ತೊಳೆದು ಹೊಸ್ತಿಲು ಪೂಜೆ ಮಾಡಿ ಆನಂತರ ಉಳಿದ ಕೆಲಸಗಳನ್ನು ಪ್ರಾರಂಭಮಾಡಬೇಕು ಎಂಬುದನ್ನು ಹಿರಿಯ ಹೆಣ್ಣುಮಕ್ಕಳು ಮೊದಲು ಕಲಿಸಿಕೊಡುವರು. ಅನೇಕ ಜಾನಪದ ಗೀತೆಗಳಲ್ಲಿ ಹೆಣ್ಣು ಕೇಳಲು ಹೋದಂತಹ ಸಮಯದಲ್ಲಿ, ನಮ್ಮ ಹೆಣ್ಣು ಸಣ್ಣದು ಎಂದು ಹೇಳುವುದಕ್ಕೆ ಬದಲಾಗಿ ನಮ್ಮ ಹೆಣ್ಣಿಗೆ ಬಾಗಿಲು ಬೆಳಗಾಲರಿಯದು, ಬಣ್ಣ ಉಡಲರಿಯದು, ಎಂದು ಹೇಳುವುದನ್ನು ಗಮನಿಸಬಹುದು. ಕಾಡುಗೊಲ್ಲರಿಗೆ ಯುಗಾದಿ ಹೊಸವರ್ಷವಾದ ಕಾರಣ ಸೂರ್ಯ ನಮಸ್ಕಾರ ಮಾಡಿದ ನಂತರ ಹೊಸ್ತಿಲನ್ನು ಚೆನ್ನಾಗಿ ತೊಳೆದು, ಕುಂಕುಮ ವಿಭೂತಿ ಹಚ್ಚಿ ಮೂರು ಎಲೆ, ಮೂರು ಅಡಿಕೆ, ಮಾವಿನ ಸೊಪ್ಪು, ಬೇವಿನ ಸೊಪ್ಪು ಮುಡಿಸಿ, ಒಂದು ತೆಂಗಿನಕಾಯಿ, ಎರಡು ಬಾಳೆಹಣ್ಣು ಇಟ್ಟು, ಪೂಜೆ ಮಾಡುತ್ತಾರೆ ಅಲ್ಲಿಗೆ ಮೊದಲನೆ ದಿನದ ಕಾರ್ಯ ಮುಗಿಯುತ್ತದೆ. ಪೂಜೆ ಒಳಗೊಂಡಂತೆ ಕಾಡುಗೊಲ್ಲರು ನಾಲ್ಕು ದಿನಗಳ ಕಾಲ ಯುಗಾದಿ ಆಚರಿಸುತ್ತಾರೆ. ಪ್ರತಿದಿನ ಹೊಸ್ತಿಲು ಪೂಜೆ ಮಾಡುವುದನ್ನು ಮರೆಯುವುದಿಲ್ಲ. ಮದುವೆಯಲ್ಲಿ ಋತುಮತಿಯಾದಾಗ, ಇತರೆ ಹಬ್ಬಗಳಲ್ಲಿ ಹೊಸ್ತಿಲು ಪೂಜೆಮಾಡದೇ ಯಾವ ಕೆಲಸವನ್ನು ಮಾಡುವುದಿಲ್ಲ.

೭.೧.೩.೩. ಹಿರಿಯರ ಪೂಜೆ

ಕಾಡುಗೊಲ್ಲರು ಹಿರಿಯರ ನೆನಪಿಗಾಗಿ ಯುಗದ ಆದಿಯಾದ ಯುಗಾದಿ ಹಬ್ಬದಲ್ಲಿ ಪೂಜೆ ಮಾಡುತ್ತಾರೆ ಇವರು ಹಿರಿಯರ ಪೂಜೆಯನ್ನು ಎರಡು ಸಂದರ್ಭದಲ್ಲಿ ಮಾಡುತ್ತಾರೆ. ಯುಗಾದಿ ಹಾಗೂ ದೀಪಾವಳಿಯಲ್ಲಿ ಹಿರಿಯರ ಪೂಜೆಯನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕಲ್ಲುಬಾಣದ

ಪೂಜೆ. ಕರುಉಂಡಹಬ್ಬ ಗುಡ್ಡೆಕಲ್ಲುಪೂಜೆ, ಇತ್ಯಾದಿ. ಕಾಡುಗೊಲ್ಲರು ಹಿರಿಯರ ಪೂಜೆ ಮುಗಿಯುವ ವರೆಗೂ ಒಂದು ಹನಿ ನೀರನ್ನು ಸೇವಿಸುವುದಿಲ್ಲ. ಅಷ್ಟೇ ಕಟ್ಟುನಿಟ್ಟಿನ ವ್ರತವನ್ನು ಕೈಗೊಂಡಿರುತ್ತಾರೆ. ಹಿರಿಯರ ಪೂಜೆ ಮಾಡುವುದಕ್ಕೆ ಮೊದಲು ಬೇವುಬೆಲ್ಲ ತಯಾರಿಸಲು ಹಟ್ಟಿಯ ದೇವರ ಗುಡಿಗೆ ಒಂದು ತೆಂಗಿನಕಾಯಿ, ಒಂದು ಅಚ್ಚು ಬೆಲ್ಲ, ಒಂದು ಹಿಡಿ ಕಡಲೆಬೇಳೆ ಕೊಟ್ಟು ಬರುತ್ತಾರೆ. ದೇವರ ಪೂಜಾರಿ ಎಲ್ಲ ಮನೆಗಳಿಂದ ಈ ವಸ್ತುಗಳು ಬಂದ ನಂತರ, ಕಡಲೆ ಬೇಳೆಯನ್ನು ನೀರಿನಲ್ಲಿ ನೆನೆ ಹಾಕಿ ಬೆಲ್ಲ ಪುಡಿ ಮಾಡಿ, ಬೇವಿನ ಹೂವು, ಕಡಲೆಬೇಳೆ, ಬೆಲ್ಲ ಮೂರನ್ನು ಸೇರಿಸಿ ಬೇವು ಬೆಲ್ಲ ತಯಾರಿಸುತ್ತಾನೆ. ಆನಂತರ ಅದನ್ನು ದೇವರಿಗೆ ಎಡೆಹಾಕಿ ಆ ಮೇಲೆ ಎಲ್ಲ ಮನೆಗಳಿಗೆ ಕೊಡುತ್ತಾನೆ. ಅದನ್ನು ತಮ್ಮ ಹಿರಿಯರನ ಪೂಜೆ ಮಾಡಿರುವ ಸ್ಥಳದಲ್ಲಿ ಇಟ್ಟು ಇದರ ಜೊತೆಗೆ ಹಿರಿಯರು ಬಳಸುತ್ತಿದ್ದ ಎಲೆ, ಅಡಿಕೆ, ಉಡುದಾರ, ಪಂಚೆ ಟವೆಲ್, ಬನಿಯನ್ ಸೀರೆ ಇವುಗಳ ಜೊತೆಗೆ ಮೂರು ತಂಬಿಟ್ಟು, ಎರಡು ತೆಂಗಿನ ಕಾಯಿ, ನಾಲ್ಕುಬಾಳೆ ಹಣ್ಣು, ಇಟ್ಟು ಪೂಜೆಮಾಡುತ್ತಾರೆ.

೭.೧.೩.೪. ನೇಗಿಲು ಪೂಜೆ

ಕಾಡುಗೊಲ್ಲರು ಪಶುಪಾಲನೆಯಿಂದ ಕೃಷಿಯ ಕಡೆ ಸ್ಥಿತ್ಯಂತರ ಹೊಂದಿದ ಬಗೆಯನ್ನು ಈ ಆಚರಣೆ ಹೇಳುತ್ತದೆ. ಪಶುಪಾಲಕರಾಗಿದ್ದ ಕಾಡುಗೊಲ್ಲರು ಪಶುಪಾಲನೆಯಿಂದ ಆರ್ಥಿಕವಾಗಿ ಹಿಂದುಳಿದ ಕಾರಣ ಅನಿವಾರ್ಯವಾಗಿ ಅವರ ಭೂಮಿಯನ್ನು ಹೊಂದುವುದು ಅನಿವಾರ್ಯವಾಗಿತ್ತು. ಅಷ್ಟೆ ಅಲ್ಲ ಆಧುನಿಕ ವ್ಯವಸ್ಥೆ ಕಾಡುಗೊಲ್ಲರನ್ನು ವ್ಯವಸಾಯಕ್ಕೆ ಹೊಂದಿಕೊಳ್ಳುವಂತೆ ಮಾಡಿದೆ. ಹಿರಿಯರ ಪೂಜೆ ನಂತರ ಎತ್ತುಗಳನ್ನು ಸಾಕಿರುವವರು ಎತ್ತು ಮತ್ತು ನೆಗಿಲನ್ನು ತೊಳೆದು ನೇಗಿಲನ್ನು ಎತ್ತುಗಳಿಗೆ ಹೇರಿ ತಮ್ಮ ಹೊಲದಲ್ಲಿ ಮೂರು ಸುತ್ತು ತಿರುಗಿಸಿ, ನಂತರ ಪೂರ್ವಾಭಿಮುಖವಾಗಿ ಎತ್ತುಗಳನ್ನು ನಿಲ್ಲಿಸಿ ತುಂಬಿದ ಗಡಿಗೆ ನೀರಿನಿಂದ ಅವುಗಳ ಮುಖ ತೊಳೆದು ಅವುಗಳ ಕೋಡುಗಳಿಗೆ ಅರಿಶಿಣ, ಕುಂಕುಮ, ಹಚ್ಚಿ, ಹಂಗುದಾರ ಕಟ್ಟಿ ಹಸುವಿನ ಸಗಣಿಯಲ್ಲಿ ಬೆನವನನ್ನು ಮಾಡಿ, ಅದಕ್ಕೆ ಮೂರು ಕರಿಕೆ ಏರಿಸಿ, ಅದಕ್ಕೆ ವಿಭೂತಿ ಹಚ್ಚಿ ಅದನ್ನು ನೇಗಿಲು ಹೊಡೆದ ಮಧ್ಯದ ಗೆರೆಯಲ್ಲಿ ಇಟ್ಟು, ಮೂರು ಎಲೆ ಅಡಿಕೆ, ಮೂರು ಉಂಡೆ ತಂಬಿಟ್ಟು ಮತ್ತು ಮೂರು ಕಲ್ಲಿನ ಬೆನವಗಳನ್ನು ಇಟ್ಟು ಪೂಜೆ ಮಾಡುತ್ತಾರೆ ಇದನ್ನು ಹೊಲಕ್ಕೆ ಮೊದಲು ಮಾಡುವುದು ಎನ್ನುತ್ತಾರೆ.

೭.೧.೩.೫.ಜುಂಜಪ್ಪನ ಪೂಜೆ:

ಕಾಡುಗೊಲ್ಲರ ಸಾಂಸ್ಕೃತಿಕ ನಾಯಕನಾದ ಜುಂಜಪ್ಪನಿಗೆ ಯುಗಾದಿ ಹಬ್ಬದಲ್ಲಿ ಪೂಜೆ ಸಲ್ಲಿಸುವುದು ಒಂದು ವಿಶೇಷ. ಈ ಪೂಜೆಯನ್ನು ಸರಳವಾಗಿ ಮಾಡುತ್ತಾರೆ. ಜುಂಜಪ್ಪನಿಗೆ ಎಡೆ ಹಾಕುವುದಿಲ್ಲ. ಬದಲಾಗಿ ಬೇವು ಬೆಲ್ಲ ಮತ್ತು ಹಣ್ಣು ಕಾಯಿ ಒಡೆದು ಪೂಜಿಸುತ್ತಾರೆ. ಕಾರಣ ಹಾವು ಚೇಳಿನ ಜುಂಜಪ್ಪ ಅವನು ಕೋಪಗೊಳ್ಳಬಾರದು ಎಂದು ಹೇಳುತ್ತಾರೆ.

೭.೧.೩.೬. ಭವನಾಶಿ ಪೂಜೆ

ಇದು ವೈಷ್ಣವ ಪರಂಪರೆಯನ್ನು ಹೇಳುವಂತಹದ್ದು. ಶ್ರೀಕೃಷ್ಣ ತಮ್ಮವನಲ್ಲದಿದ್ದರೂ ತಮ್ಮವನೆಂದು ಒಪ್ಪಿಕೊಳ್ಳುವಂತೆ ಮಾಡಿದೆ ಸನಾತನ ಧರ್ಮ. ಆ ಕಾರಣದಿಂದ ಕಾಡುಗೊಲ್ಲರು ತಾವು ಮಾಡಿದಂತಹ

ಅಡುಗೆಯನ್ನು ಭವನಾಶಿಗೆ ಎಡೆ ಹಾಕಿ ಭವನಾಸಿ ಪೂಜೆ ಮಾಡಿದ ಮೇಲೆ ನೀರು ಸೆಳೆ ಕೊಟ್ಟು ಊಟಮಾಡಲು ಸೂಚನೆ ಎಂಬಂತೆ ಗೋವಿಂದ ಎಂದು ಮೂರು ಸಲ ಕೂಗಿ, ಆ ನಂತರ ಭವನಾಸಿ ದೇವರ ಪೂಜಾರಿ ಊಟಮಾಡಿದ ನಂತರ ಉಳಿದವರು ಊಟಮಾಡುತ್ತಾರೆ.

ಕಾಡುಗೊಲ್ಲರು ಯುಗಾದಿಗೆ ಕರಿಗಡುಬು, ಕೋಸಂಬರಿ, ಹಪ್ಪಳ, ಸಂಡಿಗೆ, ಅನ್ನ, ಹೋಳಿಗೆ ಸಾರು ಮುಂತಾದವುಗಳನ್ನು ಸಿದ್ಧಪಡಿಸುವರು. ಈ ಹಬ್ಬದಲ್ಲಿ ಅವರು ಊಟಮಾಡುವ ವೇಳೆಗೆ ಎರಡು ಗಂಟೆಯಾಗಿರುತ್ತದೆ.

೭.೧.೩.೭. ಕಡಗೋಲು ಪೂಜೆ

ಕಾಡುಗೊಲ್ಲರು ಪಶುಪಾಲನೆಯ ಸಂಕೇತವಾಗಿ ಮಜ್ಜಿಗೆ ಕಡೆಯುವ ಕಡಗೋಲನ್ನು ಪೂಜೆ ಮಾಡುತ್ತಾರೆ. ಕಡಗೋಲು ಪೂಜೆಮಾಡಲು ಮೂರು ಎಕ್ಕೆ ಎಲೆ ಮೂರು ಅಡಿಕೆ ಒಂದು ಪಿಳ್ಳೆರಾಯ (ಸಗಣಿಯಿಂದ ಮಾಡಿದ ಬೆನವ) ಇವುಗಳ ಜೊತೆಗೆ ಕರಿ ಗಡುಬು,ಅನ್ನಸಾರು,ತುಪ್ಪ, ಮೊಸರು, ಹಾಲು, ಅಪ್ಪಳ, ಸಂಡಿಗೆ ಮುಂತಾದವುಗಳನ್ನು ಇಟ್ಟು ಕಡಗೋಲು ಪೂಜೆ ಮಾಡುತ್ತಾರೆ.

೭.೧.೩.೮. ದೇವರ ಪೂಜಾರಿ ಸಮಾಧಿ ಪೂಜೆ

ದೇವರ ಪೂಜಾರಿಯನ್ನು ದೇವರಂತೆ ಕಾಣುವ ಪ್ರವೃತ್ತಿ ಕಾಡುಗೊಲ್ಲರಲ್ಲಿದೆ. ಹಾಗಾಗಿ ಅವರು ದೇವರ ಪೂಜಾರಿಗೆ ಜೀವಂತ ಇದ್ದಾಗ ಕೊಡುತಿದ್ದ ಗೌರವ ಮರ್ಯಾದೆಯನ್ನು ಆತ ಸತ್ತ ನಂತರವೂ ಮುಂದುವರಿಸುತ್ತಾ ಬಂದಿದ್ದಾರಿ. ಪೂಜಾರಿಯು ಸತ್ತು ದೇವರಾಗಿರುವನೆಂಬ ಭಾವನೆ ಅವರಲ್ಲಿದೆ. ಆ ಕಾರಣಕ್ಕಾಗಿ ಕಾಡುಗೊಲ್ಲರ ಪ್ರತಿಯೊಂದು ಹಟ್ಟಿಯಲ್ಲಿಯೂ ಸತ್ತಿರುವ ಪೂಜಾರಿಯ ಸಮಾಧಿ ಪೂಜೆ ಮಾಡುವ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

೭.೧.೩.೯. ಹಟ್ಟಿ ಮಾರಮ್ಮನ ಪೂಜೆ

ಪ್ರತಿಯೊಂದು ಗೊಲ್ಲರಹಟ್ಟಿಯ ಬಳಿ ಮಾರಮ್ಮನ ಗುಡಿ ಇದ್ದೇ ಇರುತ್ತದೆ. ಮಾರಮ್ಮನ ಗುಡಿ ಇಲ್ಲದ ಹಟ್ಟಿಯೇ ಇಲ್ಲವೆಂದರೆ ತಪ್ಪಾಗಲಾರದೇನೋ ಅಷ್ಟರ ಮಟ್ಟಿಗೆ ಮಾರಮ್ಮನೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದ್ದಾರೆ. ಕಾಡುಗೊಲ್ಲರು ಆ ಕಾರಣದಿಂದ ಉಗಾದಿ ಹಬ್ಬದ ದಿನ ತಾವು ಮಾಡಿರುವ ಅಡುಗೆಯನ್ನು ಊಟಮಾಡುವುದಕ್ಕಿಂತ ಮುಂಚಿತವಾಗಿ ತೆಗೆದು ಇಟ್ಟಿರುತ್ತಾರೆ. ಅದನ್ನು ಮಾರಮ್ಮನ ಎಡೆ ಎಂದು ಕರೆಯುತ್ತಾರೆ. ಆ ದಿನ ಸಾಯಂಕಾಲ ಮಾರಮ್ಮನ ಗುಡಿಗೆ ಹೋಗಿ ಎಡೆ ಇಟ್ಟು ಪೂಜೆಸಲ್ಲಿಸಿ ಬರುತ್ತಾರೆ.

೭.೧.೩.೧೦. ಊರ ಮಾರಮ್ಮನ ಪೂಜೆ

ಪ್ರತಿಯೊಂದು ಹಟ್ಟಿಗೂ ಹಟ್ಟಿಮಾರಮ್ಮ ಇರುವಂತೆ ಪ್ರತಿಯೊಂದು ಊರಿಗೂ ಊರ ಮಾರಮ್ಮನ ಗುಡಿ ಇರುತ್ತದೆ. ಕಾಡುಗೊಲ್ಲರ ಪ್ರಕಾರ ಊರಮಾರಮ್ಮ ಹಟ್ಟಿಮಾರಮ್ಮನಿಗಿಂತ ಶ್ರೇಷ್ಠ ಎಂಬ ನಂಬಿಕೆ ಇದೆ. ಹಾಗಾಗಿ ಊರ ಮಾರಮ್ಮ ಅಸಮರ್ಥಳಲ್ಲದವಳು ಎಂದು ತಿಳಿದು ಆಕೆ ಕೋಪಿಸಿಕೊಂಡರೆ

ಕುರಿ ದನಗಳಿಗೆ ಮತ್ತು ಮನಷ್ಯರಿಗೂ ತೊಂದರೆ ಕೊಡುತ್ತಾಳೆ ಎಂಬ ಭಯದಿಂದ ಆಕೆಗೂ ಕೂಡ ಯುಗಾದಿ ಹಬ್ಬದಲ್ಲಿ ಎಡೆಹಾಕಿ ಪೂಜೆಸಲ್ಲಿಸಿ ಬರುತ್ತಾರೆ.

೭.೧.೩.೧೧. ಚಂದ್ರನ ಪೂಜೆ

ಕಾಡುಗೊಲ್ಲರಿಗೆ ಯುಗಾದಿ ಹಬ್ಬ ಯಾಕೆ ಶ್ರೇಷ್ಠವೆಂದರೆ ಕಾಡುಗೊಲ್ಲರು ತಮ್ಮ ಹಿರಿಯರನ್ನು ಸೂರ್ಯ,ಚಂದ್ರ ಮತ್ತು ನಕ್ಷತ್ರಗಳ ರೂಪದಲ್ಲಿ ಕಾಣಲು ಬಯಸುತ್ತಾರೆ. ಯುಗಾದಿ ಹಬ್ಬದ ಮೂರನೆ ದಿನ ಸಂಜೆ ಚಂದ್ರನನ್ನು ನೋಡುತ್ತಾರೆ. ಚಂದ್ರ ಕಾಣಿಸಿದ ನಂತರ ಅವನಿಗೆ ಪೂಜೆಮಾಡಿ ನಂತರ ಹಟ್ಟಿಯಲ್ಲಿರುವ ಎಲ್ಲಾ ಹಿರಿಯರಿಗೆ ನಮಸ್ಕಾರ ಮಾಡುತ್ತಾರೆ ಆ ನಂತರ ದೇವರಗುಡಿಗೆ ಹೋಗಿ ಪೂಜಾರಿಯ ಕಾಲಿಗೆ ನಮಸ್ಕಾರ ಮಾಡುತ್ತಾರೆ. ಅವರಿಂದ ಆಶ್ರೀರ್ವಾದ ಪಡೆದು ಆ ವರ್ಷದಲ್ಲಿ ಯಾವ ಯಾವ ಬೆಳೆಗಳು ಎಷ್ಟೆಷ್ಟು ಪ್ರಮಾಣದಲ್ಲವೆ ಎಂಬುದರ ಭವಿಷ್ಯ ತಿಳಿದುಕೊಳ್ಳುತ್ತಾರೆ. ಚಂದ್ರನನ್ನು ನೋಡಿದ ತಕ್ಷಣ ಆ ವರ್ಷದ ಭವಿಷ್ಯವನ್ನು ಹಿರಿಯರು ಹೇಳುಯುತ್ತಾರೆ.

೭.೧.೩.೧೨. ಕೋಲಾಟ

ಕಾಡುಗೊಲ್ಲರು ಕೋಲು ಆಡುವುದರಲ್ಲಿ ನಿಸ್ಸಿಮರು. ಆ ಕಾರಣದಿಂದ ಅವರು ಯುಗಾದಿ ಹಬ್ಬದ ಮೂರನೆಯ ದಿನ ಸಂಜೆ ಊಟಮಾಡಿದ ನಂತರ ಕೋಲು ಆಡುವುದನ್ನು ಪ್ರಾರಂಬಿಸುತ್ತಾರೆ. ಹಿರಿಯ ವ್ಯಕ್ತಿಯೊಬ್ಬರು ಪದಗಳನ್ನು ಹೇಳುತ್ತಾರೆ ಅದರಂತೆ ಉಳಿದವರು ಹೆಜ್ಜೆಹಾಕುತ್ತಾರೆ. ಹೆಣ್ಣು ಮಕ್ಕಳು ಕುಳಿತು ನೋಡುತ್ತಾರೆ. ಕೋಲಾಟದಲ್ಲಿ ಅನೇಕ ವಿಧಗಳುಂಟು. ತಿಪುರಿ, ಜಡೆಕೋಲು, ಸಾದಾಕೋಲು, ಪಸಿಗೆಕೋಲು ಮುಂತಾದವು.

೭.೧.೩.೧೩. ಓಕುಳಿ ಆಡುವುದು

ಯುಗಾದಿ ಹಬ್ಬದ ಕೊನೆಯ ದಿನ ನೆಂಟರು ಬಂಟರು ಸೇರಿ ನೀರು ಉಗ್ಗುವ ಆಟ ಆಡುತ್ತಾರೆ. ಇಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯವಿಲ್ಲದೆ ಹಿರಿಯರು, ಕಿರಿಯರು ಎಂಬ ಬೇಧ ಭಾವವಿಲ್ಲದೆ ಓಕುಳಿ ಆಡುವುದನ್ನು ಕಾಣಬಹುದು. ಓಕುಳಿಯಲ್ಲಿ ಬಳಸುವ ಬಣ್ಣಗಳೆಂದರೆ ಪಾತ್ರೆಯ ಮಸಿ, ಮನೆಯಲ್ಲಿ ಇರುವ ಕುಂಕುಮ ಅರಿಸಿಣ ಹಾಗೂ ಉರಿಮಂಜು ಬಳಸುತ್ತಾರೆ. ಹಬ್ಬದಲ್ಲಿ ಯಾರು ಜಗಳ ಮಾಡಬಾರದು ಎಂದು ಹಿರಿಯರು ಸಲಹೆ ಮಾಡುತ್ತಾರೆ.

ಹಬ್ಬದ ಕೊನೆಯಲ್ಲಿ ಮಾಂಸದ ಆಹಾರವನ್ನು ಮಾಡುವುದರ ಮೂಲಕ ಯುಗಾದಿ ಹಬ್ಬವನ್ನು ಮುಕ್ತಾಯ ಮಾಡುತ್ತಾರೆ. ಹಟ್ಟಿಯಲ್ಲಿ ಇರುವ ಮನೆಗಳನ್ನು ಲೆಕ್ಕಮಾಡಿಕೊಂಡು ಪ್ರತಿಯೊಂದು ಮನೆಯವರು ಕೇಳಿದಷ್ಟು ಬೇಟೆ ಕೊಯ್ದು ಮಾಂಸ ಕೊಡಬೇಕಾಗುತ್ತದೆ. ಕಾಡುಗೊಲ್ಲರು ಕುರಿ, ಮೇಕೆಯ ಮಾಂಸವನ್ನು ಮಾತ್ರ ತಿನ್ನುತ್ತಾರೆ. ಇತ್ತೀಚೆಗೆ ಕೆಲವು ಕಾಡುಗೊಲ್ಲರು ಕೋಳಿಯ ಮಾಂಸ ತಿನ್ನುವುದು ಕಂಡುಬರುತ್ತದೆ. ಇದು ಆಧುನಿಕತೆಯ ಪ್ರಭಾವ ಎಂದು ಹೇಳಬಹುದು.

೭.೧.೪. ಕಾರಹುಣ್ಣಿಮೆ

ಕಾಡುಗೊಲ್ಲರು ಹೇಳುವ ಪ್ರಕಾರ ಕಾರಹಬ್ಬ ಎಲ್ಲ ಹಬ್ಬಗಳನ್ನು ಕರೆದುಕೊಂಡು ಬರುತ್ತದೆಂದು ಹೇಳುತ್ತಾರೆ. ಇವರ ಪ್ರಕಾರ ಕಾರಹಬ್ಬವೆಂದರೆ ಎತ್ತಿನಹಬ್ಬ ಎಂದು ಕಾರಹುಣ್ಣಿವೆ ಯಾವ ವಾರ

ಬಂದರೂ ಇವರು ಮಾತ್ರ ಕಾರಹಬ್ಬ ಮಾಡುವುದು ಸೋಮವಾರ ಮಾತ್ರ. ಏಕೆಂದರೆ ಆ ದಿನ ಬಸವಣ್ಣ ಹುಟ್ಟಿದ ದಿನವೆಂದು ನಂಬಿದ್ದಾರೆ. ಕಾಡುಗೊಲ್ಲರು ಸೋಮವಾರದ ದಿನ ಬೇಸಾಯ ಮಾಡುವುದಿಲ್ಲ. ಇವರ ಪ್ರಕಾರ ಬಸವಣ್ಣ ಎಂದರೆ ಹನ್ನೆರಡನೆಯ ಶತಮಾನದ ಕ್ರಾಂತಿಕಾರ ಬಸವಣ್ಣ ಅಲ್ಲ. ನಂದಿ ಇದನ್ನು ಬಸವಣ್ಣ ಎಂದು ಕರೆಯುತ್ತಾರೆ. ಇವರು ಭೂಮಿಯನ್ನು ಊಳಿ ಅನ್ನಕೊಡುವ ಬಸವಣ್ಣನನ್ನು ನಂಬಿದ್ದಾರೆ. ಕಾರಹಬ್ಬದ ದಿನ ಎತ್ತುಗಳನ್ನು ಬಿಸಿ ನೀರಿನಿಂದ ಚೆನ್ನಾಗಿ ಸ್ನಾನ ಮಾಡಿಸಿ, ಕೋಡು ಹೆರೆದು ಕೋಡಿಗೆ ಕೊಂಬು ಹಣಸು ಹಾಕಿ ಕುಚ್ಚ ಕಟ್ಟುತ್ತಾರೆ. ಇದರ ಜೊತೆಗೆ ಕೊಂಬಿಗೆ ಬಣ್ಣ ಬಳಿಯುತ್ತಾರೆ. ಮೈಗೆ ಜೂಲು ಹೊದಿಸುತ್ತಾರೆ. ಕೊರಳಿಗೆ ಗಂಟೆಸರ ಹಾಕುತ್ತಾರೆ. ಕಾಲಿಗೆ ಗೆಜ್ಜೆಕಟ್ಟಿ ಕೊಂಬಿಗೆ ಬಣ್ಣ ಬಳಿಯುವಂತಹ ಸಂದರ್ಭದಲ್ಲಿ ಹಸಿ ಇರುವಾಗಲೆ ಸಿಗರೇಟು ಪ್ಯಾಕಿನ ಒಳಗೆ ಇರುವ ಮಿಂಚನ್ನು ಕತ್ತರಿಯಿಂದ ಕತ್ತರಿಸಿ ಕೊಂಬಿಗೆ ಅಂಟಿಸುತ್ತಾರೆ. ನಂತರ ಗ್ವಾದ್ನಿಗೆ ಸೂರ್ಯ-ಚಂದ್ರರ ಚಿತ್ರ ಬರೆಯುತ್ತಾರೆ. ಸಂಜೆಯ ವೇಳೆಗೆ ಮನೆಯಲ್ಲಿ ಸ್ತ್ರೀಯರು ಗೋಧಿ ಹುಗ್ಗಿ ಇಲ್ಲವೇ ಶಾವಿಗೆ ಪಾಯಸ ಮಾಡಿರುತ್ತಾರೆ. ಎತ್ತುಗಳನ್ನು ಗ್ವಾದ್ನಿಗೆಗೆ ಕಟ್ಟಿ ಪೂಜೆಮಾಡಿ ಎಡೆ ಇಡುತ್ತಾರೆ. ಇಟ್ಟ ಎಡೆಯನ್ನು ಪೂರ್ತಿ ತಿನ್ನಲು ಬಿಡುವುದಿಲ್ಲ. ಅರ್ಧಭಾಗ ಉಳಿಸಿಕೊಂಡು ಅವುಗಳ ಎಂಜಲನ್ನು ಅವರು ತಿನ್ನುತ್ತಾರೆ.

೭.೧.೫. ಅಜ್ಜಿಯ ಹಬ್ಬ

ಈ ಹಬ್ಬವನ್ನು ಆಷಾಢ ತಿಂಗಳಲ್ಲಿ ಮಾಡುತ್ತಾರೆ. ಈ ಹಬ್ಬವನ್ನು ಕೆಲವು ಭಾಗಗಳಲ್ಲಿ ಅಜ್ಜಿಯಹಬ್ಬವೆಂದು ಕರೆಯುತ್ತಾರೆ. ಈ ಹಬ್ಬವನ್ನು ಆಚರಿಸುವ ಸಂಪ್ರದಾಯ ಈ ರೀತಿ ಇದೆ. ಆಷಾಢ ತಿಂಗಳಿನಲ್ಲಿ ಯಾವುದಾದರೂ ಮಂಗಳವಾರ ಇಲ್ಲವೇ ಶುಕ್ರವಾರ ಈ ಹಬ್ಬ ಮಾಡುತ್ತಾರೆ. ಇಲ್ಲಿ ಹಟ್ಟಿಗೌಡನ ಪಾತ್ರ ಮುಖ್ಯವಾಗಿರುತ್ತದೆ. ಹಟ್ಟಿಯ ಗೌಡ ಹುತ್ತದ ಮಣ್ಣು ತಂದು ಅದರಿಂದ ಹೆಣ್ಣುದೇವತೆಯ ವಿಗ್ರಹ ಮಾಡಿ ಅದಕ್ಕೆ ಹುರಮಂಜು ಬಳಿದು, ಬೇವಿನಸೊಪ್ಪಿನ ಗುಡಿಸಲು ಹಾಕಿ, ಆ ಗುಡಿಸಲಿನಲ್ಲಿ ಕೂರಿಸುತ್ತಾನೆ. ಸಂಜೆ ಆರು ಗಂಟೆಯ ವೇಳೆಗೆ ಹಟ್ಟಿಯ ಪ್ರತಿಯೊಂದು ಮನೆಯವರು ತಾವು ಮಾಡಿರುವ ಒಟ್ಟು ಒಂಬತ್ತು ಕರಿಗಡುಬು, ಅನ್ನ ಸಾರು, ಒಂದು ತೆಂಗಿನ ಕಾಯಿ, ಎರಡು ಬಾಳೆಹಣ್ಣು, ಎಲೆ ಅಡಿಕೆ, ಜೊತೆಗೆ ಗೌಡ ನಿಗದಿಮಾಡಿರುವ ಹಣವನ್ನು ಹಳೆಯ ಮೊರದಲ್ಲಿ ಸಗಣಿಯಿಂದ ಒಂದು ಪಿಳ್ಳೆ ರಾಯನನ್ನು ಮಾಡಿ, ಅದಕ್ಕೆ ಮನೆಯಲ್ಲಿ ಶಾಸ್ತ್ರೋಕ್ತವಾಗಿ ಪೂಜೆಮಾಡಿ, ಆನಂತರ ಗೌಡನಿಗೆ ಕೊಡುತ್ತಾರೆ. ಹಟ್ಟಿಯಲ್ಲಿರುವ ಎಲ್ಲ ಮನೆಯ ಎಡೆ ಬಂದ ನಂತರ ಹಟ್ಟಿಯಲೊಮ್ಮೆ ಪೂಜೆಮಾಡಿ, ಹತ್ತರಿಂದ ಹದಿನೈದು ಹುಡಗರನ್ನು ಕರೆದುಕೊಂಡು ದೇವರ ಮುಂದಿರುವ ಎಲ್ಲ ಎಡೆಯನ್ನು ಬಿದಿರು ಬುಟ್ಟಿಯಲ್ಲಿ ತುಂಬಿಕೊಂಡು, ಹಟ್ಟಿಗೆ ಮೂರು ಬಾರಿ ಪ್ರದಕ್ಷಿಣೆ ಹಾಕಿ ಹೂಲಿಗ್ಯೋ ಹೂಲಿಗ್ಯೋ ಎಂದು ಹೇಳುತ್ತ ಮಸುರೆ ನೀರನ್ನು ಹಟ್ಟಿಯ ಸುತ್ತಲು ಚೆಲ್ಲಿ ಆ ನಂತರ ತನ್ನ ಹಟ್ಟಿಯ ಗಡಿ ಇರುವ ಜಾಗಕ್ಕೆ ಹೋಗಿ, ಅಲ್ಲಿ ಮತ್ತೊಮ್ಮೆ ಪೂಜೆಮಾಡಿ ಹೋಳಿಗೆ ತಿಂದು ಮನೆಗೆ ಬರುತ್ತಾರೆ. ಈ ಹಬ್ಬದ ಪ್ರಮುಖ ಆಚರಣೆಯಂದರೆ ಸಂಜೆ ಅಮ್ಮ ಮನೆ ಬಿಟ್ಟು ಹೋಗುವವರೆಗೆ ಯಾರು ಎಂಜಲು ಮಾಡುವಂತಿಲ್ಲ. ಈ ಹಬ್ಬದ ಉದ್ದೇಶ ಅಮ್ಮನನ್ನು ಗಡಿ ದಾಟಿಸುವುದು. ಈ ಅಮ್ಮನನ್ನು

ಗಡಿ ದಾಟಿಸಿದರೆ ನಮಗೆ ಯಾವ ಕಾಯಿಲೆಗಳು ಬರುವುದಿಲ್ಲ ಎಂಬ ನಂಬಿಕೆ ಅವರಲ್ಲಿದೆ. ಈ ಅಮ್ಮ ಸಸ್ಯಹಾರಿ ಇದಕ್ಕೆ ಮಾಂಸಾಹಾರ ಇಲ್ಲ. ಆಷಾಢ ತಿಂಗಳಿನಲ್ಲಿ ಈ ಹಬ್ಬವನ್ನು ಮಾಡುವುದರಿಂದ ಜನರಿಗೆ ತೊಂದರೆ ಕೊಡಬಹುದಾದ ಕ್ರಿಮಿ ಕೀಟಗಳು ಇವರು ಹಟ್ಟಿ ಸುತ್ತಲು ಹಾಕುವ ಮುಸರೆ ನೀರಿಗೆ ಅಂಟಿಕೊಂಡು ಜನರಿಗೆ ಅಂಟಿಕೊಳ್ಳುವುದಿಲ್ಲ.

೭.೧.೬. ಮಾರಮ್ಮನಹಬ್ಬ

ಕಾಡುಗೊಲ್ಲರು ಮಾರಮ್ಮನ ಹಬ್ಬವನ್ನು ವರ್ಷದಲ್ಲಿ ಒಂದು ಸಲ ಮಾಡುತ್ತಾರೆ. ಮಾರಮ್ಮನಹಬ್ಬ ಗೌರಸಮುದ್ರದ ಮಾರಮ್ಮನ ಜಾತ್ರೆ ಮುಗಿದ ನಂತರ ಒಂದು ತಿಂಗಳೊಳಗಾಗಿ ಮೊದಲನೆಯ ಮಂಗಳವಾರ ಕೆಲವು ಹಟ್ಟಿಗಳಲ್ಲಿ ಪ್ರಾರಂಭವಾದರೆ, ಕೆಲ ಹಟ್ಟಿಗಳಲ್ಲಿ ಎರಡನೆಯ, ಮೂರನೆಯ ಅಥವಾ ನಾಲ್ಕನೆಯ ಮಂಗಳವಾರ ಎಲ್ಲ ಗೊಲ್ಲರ ಹಟ್ಟಿಗಳಲ್ಲಿ ಮಾರಮ್ಮನ ಹಬ್ಬ ಮಾಡಿ ಮುಗಿಸುವರು. ಮಾರಮ್ಮನ ಹಬ್ಬದಲ್ಲಿ ಬೇವಿನ ಸೀರೆ ಉಡುವ ಹಾಗೂ ಬಾಯಿ ಬೀಗಹಾಕುವ ಸಂಪ್ರದಾಯ ಅವರಲ್ಲಿದೆ. ಕಾಡುಗೊಲ್ಲರು ಸಾಕಿದ ಕುರಿಗಳಿಗೆ ಯಾವುದಾದರೂ ಕಾಯಿಲೆ ಬಂದಾಗ ಈ ದೇವತೆಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಒಂದು ಕುರಿಯನ್ನು ದೇವಿಯ ಹೆಸರಿನಲ್ಲಿ ಮೀಸಲು ಬಿಡುತ್ತಾರೆ. ಆ ಕುರಿಯನ್ನು ಚೆನ್ನಾಗಿ ಮೇಯಿಸಿ ಮಾರಮ್ಮನ ಹಬ್ಬದ ದಿನ ಮಾರಮ್ಮನಿಗೆ ಬಲಿಕೊಡುತ್ತಾರೆ. ಅದರ ತಲೆಯನ್ನು ಮಾರಮ್ಮನ ಮುಂದೆ ಇಟ್ಟು ಕುರಿಯ ಬಲಗಾಲು ಕೊಯ್ದು ಅದರ ಬಾಯಿಗೆ ಇಟ್ಟು ನೀರು ಹಾಕುತ್ತಾರೆ. ನೀರು ಹಾಕಿದಾಗ ಉಸಿರು ಆಡುತ್ತಿದ್ದರೆ ಮಳೆ ಬರುತ್ತದೆ ಎಂದು ಅರ್ಥ ಇಲ್ಲದಿದ್ದರೆ ಮಳೆ ಬರುವುದಿಲ್ಲ ಎಂದು ತಿಳಿದುಕೊಳ್ಳುತ್ತಾರೆ.

೭.೧.೬.೧. ಆರತಿ ಬೆಳಗುವುದು

ಮಾರಮ್ಮನ ಹಬ್ಬದಲ್ಲಿ ಕಾಡುಗೊಲ್ಲರು ಅಕ್ಕಿ ಹಿಟ್ಟಿನ ಆರತಿ ಮಾಡಿ ಉಪವಾಸ ವ್ರತ ಕೈಗೊಂಡು ತಮ್ಮ ಹಟ್ಟಿಯಲ್ಲಿರುವ ಮನೆದೇವರಿಗೆ ಆರತಿ ಬೆಳಗುತ್ತಾರೆ. ಅವರ ಜೊತೆಗೆ ಬೇವಿನ ಸೀರೆ ಉಟ್ಟುಕೊಂಡಿರುವ ಹೆಣ್ಣು ಅಥವಾ ಗಂಡು ಆರತಿಯನ್ನು ತಲೆಯ ಮೇಲೆ ಹೊತ್ತುಕೊಂಡು, ಅವರ ಹಿಂದೆ ದನಗಳ ಮೆರವಣಿಗೆ ಮಾಡಿಕೊಂಡು ಬರುತ್ತಾರೆ. ಹಟ್ಟಿಯ ಮಾರಮ್ಮನಿಗೆ ಮಾತ್ರ ಕಾಡುಗೊಲ್ಲರು ಪೂಜಾರಿ ನೇಮಕ ಮಾಡಿಲ್ಲ. ಅಲ್ಲಿಗೆ ಬಂದಿರುವ ಹೆಣ್ಣು ಮಕ್ಕಳಲ್ಲಿ ಒಬ್ಬರು ಪೂಜೆ ಮಾಡುತ್ತಾರೆ. ಜೊತೆಗೆ ಮೆರವಣಿಗೆಯಲ್ಲಿ ಬಂದಿರುವ ದನಕರುಗಳನ್ನು ಗುಡಿಯ ಸುತ್ತಲು ಮೂರು ಸುತ್ತು ಪ್ರದಕ್ಷಣೆ ಹಾಕಿಸುತ್ತಾರೆ. ಇದರ ಉದ್ದೇಶ ಜಾನುವಾರುಗಳಿಗೆ ಯಾವುದೇ ಕಾಯಿಲೆ ಬರದಂತೆ ಕಾಪಾಡವ್ವ ಎಂದು ಬೇಡಿಕೊಳ್ಳುವುದಾಗಿದೆ.

೭.೧.೬.೨. ಬೇವಿನ ಸೀರೆ ಆಚರಣೆ

ಕಾಡುಗೊಲ್ಲರಲ್ಲಿ ಇಂದಿಗೂ ಬೇವಿನ ಸೀರೆ ಉಡುವ ಪದ್ಧತಿ ಮುಂದುವರಿದಿದೆ ಎಂದು ಹೇಳಬಹುದು. ಕಾಡುಗೊಲ್ಲರು ತಮ್ಮ ಮಕ್ಕಳಿಗೆ ಅಮ್ಮ, ದಡಾರ, ಮುಂತಾದ ಕಾಯಿಲೆಗಳು ಕಾಣಿಸಿಕೊಂಡಾಗ ಅವುಗಳು ವಾಸಿಯಾದರೆ ಬೇವಿನ ಸೀರೆ ಉಡುವುದಾಗಿ ಹರಕೆ ಕಟ್ಟಿಕೊಳ್ಳುತ್ತಿದ್ದರು

ಮಾರಮ್ಮನ ಹಬ್ಬದಲ್ಲಿ ಬೇವಿನ ಸೀರೆ ಉಟ್ಟುಕೊಂಡವರು ಆರತಿಯೊಂದಿಗೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ, ನಂತರ ಬೇವಿನ ಸೊಪ್ಪು ಬಿಚ್ಚಿ ಹೊಸಬಟ್ಟೆ ತೊಟ್ಟುಕೊಳ್ಳುತ್ತಾರೆ. ಬೇವಿನಸೊಪ್ಪು ಉಟ್ಟುಕೊಳ್ಳುವ ಮತ್ತು ಬಲಿಕೊಡುವ ಆಚರಣೆಯನ್ನು ಸರ್ಕಾರ ನಿಷೇಧಿಸಿದ್ದರೂ ಕಾಡುಗೊಲ್ಲರು ಮುಂದುವರಿಸಿಕೊಂಡು ಬಂದಿದ್ದಾರೆ.

ಸಮಾರಮ್ಮನ ಹಬ್ಬವನ್ನು ಮೂರು ದಿನಗಳ ಕಾಲ ಮಾಡುತ್ತಾರೆ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಕೆಲವೊಂದು ಹಟ್ಟಿಗಳಲ್ಲಿ ಮಾತ್ರ ಒಂದೊಂದು ವಾರ ನಡೆಯುವುದರಿಂದ ಬೇರೆಕಡೆಯ ನೆಂಟರು ಹಬ್ಬಕ್ಕೆ ಬರಲು ಅನುಕೂಲವಾಗುತ್ತದೆ. ಮೊದಲನೆಯ ದಿನದ ಹಬ್ಬದಲ್ಲಿ ಬೆಳಿಗ್ಗೆ ಪಾಯಸ ಮಾಡಿ ಊಟ ಮಾಡುತ್ತಾರೆ. ರಾತ್ರಿ ಊಟಕ್ಕೆ ಮಾಂಸದ ಅಡುಗೆ ಮಾಡುತ್ತಾರೆ. ಚಿತ್ರದುರ್ಗದ ಪಶ್ಚಿಮ ಭಾಗದಲ್ಲಿ ಅವರು ಮಂಳವಾರ ಸಂಜೆ ಬಲಿಕೊಟ್ಟು ಬುಧವಾರದ ಬೆಳಿಗ್ಗೆ ಊಟ ಮಾಡುತ್ತಾರೆ. ಆದರೆ ಚಳ್ಳಕೆರೆಯ ಸುತ್ತ ಮುತ್ತಲಿನ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನ ಬಲಿಕೊಟ್ಟು ಸಾಯಂಕಾಲ ಊಟ ಮಾಡುತ್ತಾರೆ. ಹಬ್ಬದ ಎರಡನೆಯ ದಿನ ತಾವು ಬಲಿಕೊಟ್ಟಿರುವ ಕುರಿ ಇಲ್ಲವೇ ಮೇಕೆಯ ಮಾಂಸವನ್ನು ಕೊಯ್ದು ಬಿಸಿಲಿನಲ್ಲಿ ಒಣಗಿಸುತ್ತಾರೆ. ಕಾರಣ ಹಬ್ಬದಲ್ಲಿ ಮನೆಯವರು ಚನ್ನಾಗಿ ಊಟ ಮಾಡಿರುವುದಿಲ್ಲ. ಎಲ್ಲಾ ನೆಂಟರೂ ತಮ್ಮ ತಮ್ಮ ಊರುಗಳಿಗೆ ಹೋದ ನಂತರ ಒಣ ಮಾಂಸವನ್ನು ನೀರಿನಲ್ಲಿ ನೆನೆಹಾಕಿ ಸಾರು ಮಾಡುತ್ತಾರೆ.

೭.೧.೭. ದೀವಣಿಗೆ ಹಬ್ಬ

ಕಾಡುಗೊಲ್ಲರು ದೀಪಾವಳಿಯನ್ನು ದೀವಣಿಗೆ ಎಂದು ಕರೆಯುತ್ತಾರೆ. ಕಾಡುಗೊಲ್ಲರು ಈ ಹಬ್ಬವನ್ನು ಅಕ್ಟೋಬರ್ ತಿಂಗಳಲ್ಲಿ ಮಾಡುತ್ತರೆ. ಈ ಹಬ್ಬದ ವಿಶೇಷತೆ ಎಂದರೆ ಕಾಡುಗೊಲ್ಲರು ೧೫ ದಿನ ಮುಂಚಿತವಾಗಿ ಕಾರೆ ಕಳ್ಳಿ, ಬಾರೆ ಕಳ್ಳಿ ಮತ್ತು ತುಗ್ಗಲಿ ಕಳ್ಳಿಯನ್ನು ಕಡಿದು, ೨೦ರಿಂದ ೨೫ ಅಡಿ ಎತ್ತರಕ್ಕೆ ರಾಶಿ ಹಾಕುತ್ತಾರೆ. ಅದು ಚೆನ್ನಾಗಿ ಒಣಗಿದ ನಂತರ ಸೋಮವಾರ ತಮ್ಮಲ್ಲಿರುವ ಎಲ್ಲ ಜಾನುವಾರುಗಳಿಗೆ ಸ್ನಾನ ಮಾಡಿಸಿ ಅಲಂಕಾರ ಮಾಡಿ, ಸಂಜೆ ೭ ಗಂಟೆಗೆ ಜಾನುವಾರುಗಳ ಮೆರವಣಿಗೆ ಮಾಡಿ ಕಳ್ಳಿರಾಶಿ ಹಾಕಿರುವ ಸ್ಥಳಕ್ಕೆ ಹೋಗುತ್ತಾರೆ. ಅಲ್ಲಿ ಶಾಸ್ತ್ರೋಕ್ತವಾಗಿ ಜಾನುವಾರುಗಳ ಪೂಜೆ ಮಾಡಿದ ನಂತರ ಗೂಡಿಗೆ ಬೆಂಕಿ ಹಚ್ಚಿ ಅದರ ಸುತ್ತಲು ಜಾನುವಾರುಗಳ ಪ್ರದಕ್ಷಣೆ ಹಾಕಿಸುವರು. ಈ ಪ್ರಕ್ರಿಯೆಯನ್ನು ಈಡು ಸುಡುವುದು ಎಂದು ಕರೆಯುತ್ತಾರೆ. ನಂತರ ಮನೆಗೆ ಬಂದು ಜಾನುವಾರುಗಳಿಗೆ ಎಡೆ ಹಾಕಿ, ಊಟ ಮಾಡಿ ತಮ್ಮ ಹಟ್ಟಿಯಲ್ಲಿರುವ ದೇವರನ್ನು ಹೊತ್ತುಕೊಂಡು ಬೆಳಕು ಹರಿಯುವವರೆಗೆ ಕುಣಿಯುತ್ತಾರೆ.

ಅಧ್ಯಯನದ ಫಲಿತಗಳು

ಅಧ್ಯಯನದ ಫಲಿತಗಳು

೧. ಕಾಡುಗೊಲ್ಲರು ಮೂಲತಃ ಬುಡಕಟ್ಟು ಸಮುದಾಯ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಭಾರತ ಸರಕಾರ ಅವರಿಗೆ ಪರಿಶಿಷ್ಟ ಪಂಗಡಕ್ಕೆ ಸೇರಿಸದೇ ಇರುವುದು ಕಂಡುಬರುತ್ತದೆ. ಆಧುನಿಕತೆಯ ಸಂದರ್ಭದಲ್ಲಿಯೂ ಕಾಡುಗೊಲ್ಲರು ಪರಂಪರಾನುಗತವಾಗಿ ಸಾಗಿ ಬಂದ ಆಚರಣೆ, ಸಂಪ್ರದಾಯಗಳನ್ನು ಇಲ್ಲಿಯವರೆಗೆ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

೨. ಮೂಲತಃ ಪಶುಪಾಕರಾಗಿರುವ ಇವರು ಪ್ರಸ್ತುತ ಕೃಷಿಯ ಕಡೆ ನಡೆದಿರುವುದು ಕಂಡು ಬರುತ್ತದೆ. ಅರೆಮಾರಿಗಳಾಗಿದ್ದ ಇವರು ಅರೆ ಅಲೆಮಾರಿಗಳಾಗಿ ರೂಪಾಂತರ ಹೊಂದಿದ್ದಾರೆ. ಇವರು ವಾಸಿಸುವ ಪ್ರದೇಶಗಳು ಬಯಲುಸೀಮೆ ಮತ್ತು ಬೆಟ್ಟಗುಡ್ಡಗಳಿಂದ ಕೂಡಿವೆ. ಆಧುನಿಕತೆಯ ಪ್ರಭಾವದಿಂದ ಕಾಡುಗೊಲ್ಲರ ಗುಬ್ಬಗಳು ಕಣ್ಮರೆಯಾಗಿ ಆ ಸ್ಥಳದಲ್ಲಿ ಈಗ ಮಾಳಿಗೆ, ಹೆಂಚು, ಮತ್ತು ಸಿಮೆಂಟ್ ಸೀಟಿನ ಮನೆಗಳು ನಿರ್ಮಾಣಗೊಂಡಿರುವುದನ್ನು ಗಮನಿಸಬಹುದು.

೩. ಕಾಡುಗೊಲ್ಲರು ಉತ್ತರ ಭಾರತದದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರ ಸಂಸ್ಕೃತಿ, ಭಾಷೆ, ವೇಷಭೂಷಣ, ಅವರ ಬೆಡಗುಗಳ ಹೆಸರುಗಳಲ್ಲಿ ಕನ್ನಡ ಮಣ್ಣಿನ ವಾಸನೆ ಇರುವುದು ಕಂಡುಬರುತ್ತದೆ. ಇವರು ಕನ್ನಡದ ಉಪಭಾಷೆಯನ್ನು ಮಾತೃ ಭಾಷೆಯಾಗಿ ಮಾಡಿಕೊಂಡಿದ್ದಾರೆ.

೪. ಕಾಡುಗೊಲ್ಲರು ದೇವರ ಆರಾಧನೆ ಮಾಡುವ ವಿಧಾನ ಭಿನ್ನವಾಗಿದೆ. ಇವರ ಹಿರಿಯರೆ ಇವರಿಗೆ ದೇವರು ಆ ಹಿರಿಯರು ರೂಪಿಸಿದ ಮೌಲ್ಯಗಳೆ ಇವರಿಗೆ ಆದರ್ಶಗಳು. ಸಾಮಾನ್ಯವಾಗಿ ಇವರು ಪ್ರಕೃತಿ ಆರಾಧಕರು.

೫. ಕಾಡುಗೊಲ್ಲರಲ್ಲಿ ೨೭ ಉಪಬೆಡಗುಗಳಾಗಿ ಸೃಷ್ಟಿಯಾಗಲು ಬ್ರಾಹ್ಮಣರು, ಅಗಸರು, ಉಪ್ಪಾರರು ಮ್ಯಾಸಬೇಡರು, ಲಿಂಗಾಯತರು, ಕ್ಷೌರಿಕರು, ಮಾದಿಗರು, ಕುರುಬರು, ಒಕ್ಕಲಿಗರು ಕಾರಣರಾಗಿದ್ದಾರೆ ಎಂಬುದು ಕುಲ ಬಳಿಗಳ ಅಧ್ಯಯನದಿಂದ ಕಂಡುಬರುತ್ತದೆ.

೬. ಕಾಡುಗೊಲ್ಲರು ಅವರ ಹೆಣ್ಣು ಮಕ್ಕಳನ್ನು ಶೋಷಣೆಗೆ ಗುರಿಪಡಿಸಿರುವುದು ಕಂಡುಬಂದಿದೆ. ಅವರು ಕೆಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ಮಾಡಿರುವುದು ಕಂಡುಬಂದಿದೆ. ಹೆಣ್ಣು ಮಕ್ಕಳಿಗೆ ದೇವಾಲಯದ ಒಳಗೆ ಪ್ರವೇಶ ನಿರಾಕರಿಸಲಾಗುತ್ತಿದೆ. ಹಾಗೆ ಸಹಜ ಕ್ರಿಯೆಯಾದ ಮಾಸಿಕ ಋತುಸ್ರಾವ, ಋತುಮತಿ, ಬಾಣಂತಿಯರನ್ನು ಹಟ್ಟಿಯಿಂದ ಹೊರಗಿಡುವ ಪದ್ಧತಿ ಇಂದಿಗೂ ಜೀವಂತವಾಗಿರುವುದು ಕಂಡುಬರುತ್ತದೆ.

೭. ಕಾಡುಗೊಲ್ಲರಲ್ಲಿ ಮೂಲದಲ್ಲಿ ಎರಡು ಬೆಡಗುಗಳಿದ್ದವು. ೧. ಚಿತ್ತಮುತ್ತಿ ಇದನ್ನು ಸೂರ್ಯನ ವಂಶವೆಂದು ಗುರುತಿಸಿದ್ದಾರೆ. ೨. ಸಣ್ಣಮುತ್ತಿ ಇದನ್ನು ಚಂದ್ರನ ವಂಶವೆಂದು ಹೇಳುತ್ತಾರೆ. ಚಿತ್ತಮುತ್ತಿ ಒಟ್ಟು ಏಳು ಉಪಬೆಡಗುಗಳು ಸಣ್ಣಮುತ್ತಿ ವಂಶದಲ್ಲಿ ೧೩ ಉಪ ಬೆಡಗುಗಳಿವೆ. ಆ ನಂತರ ಸೇರಿಕೊಂಡ ರಾಮಮುತ್ತಿ ವಂಶದಲ್ಲಿ ಒಟ್ಟು ಏಳು ಬೆಡಗುಗಳು ಕಾಡುಗೊಲ್ಲರಲ್ಲಿ ಒಟ್ಟು ೨೭ ಬೆಡಗುಗಳಿರುವುದು ಕಂಡು ಬಂದಿದ್ದು, ಮೂಲದಲ್ಲಿ ಕೇವಲ ಎರಡು ವಂಶಗಳಿದ್ದು ಮೂರು ವಂಶಗಳಾಗಿ ಮತ್ತು ಇಪ್ಪತ್ತೇಳು ಬೆಡಗುಗಳಾಗಲಿಕ್ಕೆ ಕಾರಣವೇನೆಂಬುದನ್ನು ಕಾಡುಗೊಲ್ಲರ ಕುಲಬಳಿಗಳು ಎಂಬ ಮೂರನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರು ಮತ್ತು ಈ ಸಮುದಾಯದ ಹೆಣ್ಣು ಮಕ್ಕಳು ಅಂತರ್ ಜಾತಿ ವಿವಾಹವಾದಾಗ ಅವರ ಸಂತತಿಯನ್ನು ಗುರುತಿಸುವುದಕ್ಕಾಗಿ ಅವರಿಗೆ ಒಂದು ಬೆಡಗು ನೀಡಿ ಒಳಗಿನವರನ್ನಾಗಿಯಿರಿಸಿ ಕೊಂಡಿರುವುದು ಕಂಡು ಬರುತ್ತದೆ. ಈ ರೀತಿ ವರ್ಣ ಸಂಕರ ನಡೆದಿದ್ದರಿಂದ ಕಾಡುಗೊಲ್ಲರ ಹಿರಿಯರು ಅವರಿಗೆ ಪ್ರತೇಕವಾದ ದೈವ ಮತ್ತು ಸಮುದಾಯದ ನಿರ್ಧಿಷ್ಟಪಡಿಸಿದ ಕೆಲಸಗಳನ್ನು ಹಂಚಿರುವುದು ಕಂಡುಬರುತ್ತದೆ.

೮. ಕಾಡುಗೊಲ್ಲರಲ್ಲಿ ಪಂಚಲಿಂಗಗಳ ಕಲ್ಪನೆ ಅಭಿವ್ಯಕ್ತಿಗೊಂಡಿರಲು ಕಾರಣ ಅವರಲ್ಲಿರುವ ಸೃಷ್ಟಿಪುರಾಣಗಳು ಎಂದು ಹೇಳಬೇಕಾಗುತ್ತದೆ. ಕಾಡುಗೊಲ್ಲರ ಪ್ರಮುಖವಾಗಿ ಐದು ಜನ ಸಾಂಸ್ಕೃತಿಕ ನಾಯಕರು ಕಾಟಯ್ಯ, ಚಿತ್ತಯ್ಯ, ಕೇತಪ್ಪ, ಪಾತಪ್ಪ, ರಾಮಗೊಂಡ ಇವರು ಶಿವನ ಕೃಪೆಯಿಂದ ಸೃಷ್ಟಿಯಾಗಿದ್ದಾರೆ. ಈ ಐವರು ಸಾಂಸ್ಕೃತಿಕ ನಾಯಕರು ಶಿವನ ಅವತಾರದವರೆಂದು ಕಲ್ಪಿಸಿಕೊಂಡು ಲಿಂಗದ ಪರಿಕಲ್ಪನೆಯಲ್ಲಿ ಪೂಜಿಸುತ್ತಿರುವುದು ಕಂಡು ಬರುತ್ತದೆ.

೯. ಕಾಡುಗೊಲ್ಲರಲ್ಲಿ ಪಂಚಲಿಂಗಗಳ ಆರಾಧನೆ ಕಂಡುಬರುತ್ತದೆ. ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ನಾಯಕ ಕಾಟಯ್ಯ ಇವನನ್ನು 'ಕಾಟಮಲಿಂಗ' ಎಂದು ಗುರುತಿಸಿ ಆರಾಧಿಸುತ್ತಿದ್ದಾರೆ. ಮೂಲದಲ್ಲಿ ಕಾಟಮಲಿಂಗ, ಕೇತೆಲಿಂಗ ಮತ್ತು ಪಾತೇಲಿಂಗ ಒಂದೇ ಆಗಿದ್ದು ಕಾಟಮಲಿಂಗನನ್ನೇ ಆರಾಧಿಸುತ್ತಿದ್ದರು. ಸನ್ನಮುತ್ತಿ, ಸೋಮಮುತ್ತಿ ಮತ್ತು ಪೋಲಮುತ್ತಿ ಈ ಮೂರು ಜನ ಅಣ್ಣ ತಮ್ಮಂದಿರು ಆರಾಧ್ಯ ದೈವವನ್ನು ಪಡೆಯುವುದಕ್ಕಾಗಿ ಕಚ್ಚಾಡಿದ ಹಿನ್ನೆಲೆಯಲ್ಲಿ, ಕಾಟಮಲಿಂಗನಲ್ಲಿ ಮೂರು ಭಾಗಗಳನ್ನಾಗಿಸಿದರ ಪರಿಣಾಮ ಕಾಟಮಲಿಂಗ, ಕೇತೆಲಿಂಗ ಮತ್ತು ಪಾತೇಲಿಂಗಗಳಾಗಿ ಪ್ರತ್ಯೇಕಗೊಂಡು ಪೂಜಿಸಲ್ಪಡುವುದನ್ನು ಕಾಣುತೇವೆ. ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಮೂರು ಲಿಂಗಗಳಿಗೆ ಸಂಬಂಧಿಸಿದ ಸೃಷ್ಟಿ ಪುರಾಣಗಳನ್ನು ಗಮನಿಸಿದಾಗ, ಮೂರು ಸೃಷ್ಟಿ ಪುರಾಣಗಳಲ್ಲಿ ಸಾಮ್ಯತೆ ಕಂಡು ಬಂದಿದ್ದು, ಅವು ಮೂಲದಲ್ಲಿ ಒಂದೇ ಆಗಿದ್ದು, ಅದನ್ನು ಕಾಟಮಲಿಂಗ ಎಂದೇ ಕರೆಯುತ್ತಿದ್ದರು. ಕಾಟಮಲಿಂಗನ ಮೂಲ ದೇವಸ್ಥಾನ ಹಿರಿಯೂರು ತಾಲ್ಲೂಕಿನ ಯರಬಳ್ಳಿ ಗೊಲ್ಲರಹಟ್ಟಿಯಲ್ಲಿದೆ. ಈ ದೈವಕ್ಕೆ ಸನ್ನೆರಗೊಲ್ಲರು ನಡೆದುಕೊಳ್ಳುತ್ತಾರೆ. ಕಾಟಮಲಿಂಗನ ಅಧಿಪತ್ಯದಲ್ಲಿರುವ ಕಟ್ಟೆಮನೆ ಹಿರಿಯೂರು ತಾಲ್ಲೂಕಿನ ತಾಳವಟ್ಟಿಯಲ್ಲಿದೆ. ಈ ಕಟ್ಟೆಮನೆಗೆ ಏಳು ಗುಡಿಕಟ್ಟುಗಳಿವೆ. ಸನ್ನಮುತ್ತಿ

ವಂಶಸ್ಥರಾದ ಸನ್ನೆರಗೊಲ್ಲರ ಬೆಡಗಿನವರು ಅಂತರ್ ಜಾತಿ ಸಂಬಂಧಗಳನ್ನು ಕಟ್ಟು ನಿಟ್ಟಾಗಿ ನಿಷೇಧಿಸಿದ್ದರಿಂದ ಇವರ ಜನ ಸಂಖ್ಯೆ ಕಡಿಮೆ ಇರುವುದು ಕಂಡುಬರುತ್ತದೆ.

೧೦. ಯಗಡಮುತ್ತಿ ವಂಶದ ಯಗಡೆಗೊಲ್ಲರಿಗೆ ಆಂಧ್ರದಲ್ಲಿ ಬೊಮ್ಮಲಿಂಗ ಆರಾಧ್ಯ ದೇವರಾಗಿದ್ದಾನೆ. ಈ ದೇವಸ್ಥಾನ ಆಂಧ್ರದ ಕಲ್ಯಾಣದುರ್ಗ ತಾಲ್ಲೂಕಿನ ಬೆಸ್ತರಹಳ್ಳಿಯಲ್ಲಿದೆ. ಅವರ ಕಟ್ಟೆಮನೆ ಸಹ ಬೆಸ್ತರಹಳ್ಳಿಯಲ್ಲಿದೆ. ಆದರೆ ಕರ್ನಾಟಕದಲ್ಲಿ ವಾಸವಾಗಿರುವ ಯಗಡೆಗೊಲ್ಲರು ಕಾಟಮಲಿಂಗನನ್ನು ಆರಾಧ್ಯ ದೈವಾಗಿಸಿಕೊಂಡಿರುವುದು ಕಂಡುಬರುತ್ತದೆ. ಕರ್ನಾಟಕದಲ್ಲಿ ಬೊಮ್ಮಲಿಂಗನ ದೇವಸ್ಥಾನವಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಕಾಡುಗೊಲ್ಲರ ದೃಷ್ಟಿಯಲ್ಲಿ ಪಂಚಲಿಂಗಗಳಲ್ಲಿ ಬೊಮ್ಮಲಿಂಗನಿಗೆ ಸ್ಥಾನ ನೀಡದೇ ಇರುವುದು ಕಂಡುಬಂದಿದೆ. ಕಾರಣ ಬೊಮ್ಮಲಿಂಗ ಮೂಲತಃ ಬ್ರಾಹ್ಮಣನಾಗಿದ್ದು ಕಾಡುಗೊಲ್ಲರ ಚಿತ್ತಯ್ಯನಿಗೆ ತನ್ನ ಮಗಳಾದ ಗಂಗೆಮಾಳಮ್ಮನನ್ನು ಮದುವೆ ಮಾಡಲು ಒಪ್ಪುವುದಿಲ್ಲ. ಕಾಟಯ್ಯ ಬೊಮ್ಮಯ್ಯನಿಗೆ ತಿಳಿಯದಂತೆ ಕೆಂದ ಕುರಿ ಮಾಂಸ ತಿನ್ನಿಸಿ ಅವನನ್ನು ಅಶುದ್ಧಿಗೊಳಿಸಿ ಗಂಗೆಮಾಳಮ್ಮನನ್ನು ಚಿತ್ತಯ್ಯನಿಗೆ ಮದುವೆ ಮಾಡುತ್ತಾನೆ. ಇದರಿಂದಾಗಿ ಬೊಮ್ಮಯ್ಯನನ್ನು ಬ್ರಾಹ್ಮಣ ಕುಲದಿಂದ ಹೊರಗೆ ಹಾಕಿದರು. ಆಗ ಬೊಮ್ಮಯ್ಯನಿಗೆ ಕಾಡುಗೊಲ್ಲರು ಒಂದು ಬೆಡಗು ಕೊಟ್ಟು ಒಳಗಿನವನನ್ನಾಗಿ ಮಾಡಿಕೊಂಡರು. ಯಗಡೆ ಗೊಲ್ಲರಿಗೆ ಬೊಮ್ಮಯ್ಯ ಅವರ ಮೂಲ ಪುರುಷನಾದದ್ದರಿಂದ ಅವನನ್ನು ಬೊಮ್ಮಲಿಂಗ ಎಂದು ಕರೆದು, ಅವನನ್ನು ಆರಾಧಿಸತೊಡಗಿದರು. ಕಾಡುಗೊಲ್ಲರು ಬ್ರಾಹ್ಮಣನಾದ ಬೊಮ್ಮಯ್ಯಲಿಂಗನ ಜೊತೆಗೆ ಅನುಸಂಧಾನ ಮಾಡಿಕೊಡಿದ್ದರು. ಅವನ ಹೆಸರಿನಲ್ಲಿ ಸ್ಥಾಪಿತವಾದ ಬೊಮ್ಮಲಿಂಗನನ್ನು ಕರ್ನಾಟಕದ ಕಾಡುಗೊಲ್ಲರು ಪಂಚಲಿಂಗಗಳಲ್ಲಿ ಸೇರಿಸಿಕೊಳ್ಳದೆ ಇರುವುದೇ ಇದಕ್ಕೆ ಮೂಲ ಕಾರಣವಾಗಿರಬಹುದು.

೧೧. ಕಾಡುಗೊಲ್ಲರ ಎರಡನೆಯ ಸಾಂಸ್ಕೃತಿಕ ನಾಯಕ ಚಿತ್ತಯ್ಯ. ಇವನ್ನು ಚಿತ್ರಲಿಂಗ ಎಂದು ಹೆಸರಿಸಿದ್ದಾರೆ. ಈ ದೇವಸ್ಥಾನ ಹಿರಿಯೂರು ತಾಲೂಕು ನಂದಿಹಳ್ಳಿಯಲ್ಲಿದೆ. ಇಲ್ಲಿ ಉಗ್ರನರಸಿಂಹನ ಅಥವಾ ರಂಗಪ್ಪನ ದೇವಸ್ಥಾನ ಪ್ರತಿಷ್ಠಾಪನೆಯಾದ ನಂತರ, ಚಿತ್ರಲಿಂಗ ಗೌಣವಾಗಿರುವುದು ಕಂಡುಬರುತ್ತದೆ. ಈ ಚಿತ್ರಲಿಂಗನಿಗೆ ಕರಡಿಗೊಲ್ಲರು, ಮಾರನಗೊಲ್ಲರು, ಬಾಲ್ಯರಗೊಲ್ಲರು, ಕೆಂಗುರಿಗೊಲ್ಲರು, ಕಂಚಿಗೊಲ್ಲರು, ಬಡಗೊಲ್ಲರು ಮತ್ತು ದೇವತೆಗೊಲ್ಲರು ಚಿತ್ರಲಿಂಗನನ್ನು ಆರಾಧಿಸುತ್ತಿದ್ದಾರೆ. ಚಿತ್ರಲಿಂಗನ ಅಧಿಪತ್ಯದಲ್ಲಿ ಕರಿಓಬ್ಬವ್ವನ ಹಳ್ಳಿಯಲ್ಲಿ ಕಟ್ಟೆಮನೆ ಇರುವುದು ಕಂಡು ಬರುತ್ತದೆ. ಈ ಕಟ್ಟೆಮನೆಗೆ ಒಟ್ಟು ೪೯ ಗುಡಿಕಟ್ಟೆಗಳಿರುವುದನ್ನು ಕಾಣಬಹುದು.

೧೨. ಕೇತೆಲಿಂಗ ಕಾಡುಗೊಲ್ಲರ ಮೂರನೆಯ ಲಿಂಗ. ಸಾಂಸ್ಕೃತಿಕ ನಾಯಕನಾದ ಕ್ಯಾತಪ್ಪನನ್ನು ಕೇತೆಲಿಂಗವೆಂದು ಗುರುತಿಸಿದ್ದಾರೆ. ಈ ದೇವಸ್ಥಾನ ಚಳ್ಳಕೆರೆ ತಾಲ್ಲೂಕಿನ ಚನ್ನಮ್ಮನಾಗತಿ ಹಳ್ಳಿಯಲ್ಲಿದೆ ಕೇತೆಲಿಂಗನನ್ನು ಸೋಮನಗೊಲ್ಲರು, ಕೋಣಗೊಲ್ಲರು, ಊಪಗಳಗೊಲ್ಲರು, ಕಟ್ಟಿಗೆಗೊಲ್ಲರು, ಜವಾದಿಗೊಲ್ಲರು ಮತ್ತು ಮೊಮ್ಮನಗೊಲ್ಲರು ಆರಾಧಿಸುವುದು ಕಂಡುಬರುತ್ತದೆ. ಕೇತೆಲಿಂಗನ ಅಧಿಪತ್ಯದಲ್ಲಿ ಮೊದಲು ೭ ಗುಡಿಕಟ್ಟೆಗಳಿದ್ದು, ಈಗ ಕಾಡುಗೊಲ್ಲರ ಜನಸಂಖ್ಯೆ ಹೆಚ್ಚಾಗಿದ್ದರಿಂದ ಈಗ ೧೩ ಗುಡಿಕಟ್ಟೆಗಳಿವೆ.

೧೩. ಪಾತೇಲಿಂಗ ಕಾಡುಗೊಲ್ಲರ ಪಂಚಲಿಂಗಗಳಲ್ಲಿ ನಾಲ್ಕನೆಯದು. ಕಾಡುಗೊಲ್ಲರ ಮತ್ತೊಬ್ಬ ಸಾಸ್ಕೃತಿಕ ನಾಯಕ ಕಾಟಯ್ಯಯನನ್ನೆ(ಪೋಲಿ ಮುತ್ತಿ) ಪೋಲೇರ ಗೊಲ್ಲರು ಮತ್ತು ಶೀಲವಾಡಿ ಗೊಲ್ಲರು ಪಾತಪ್ಪ ಎಂದು ಕರೆದು ಅವನನ್ನು ಆರಾಧಿಸುವ ಸಲುವಾಗಿ 'ಪಾತೇಲಿಂಗ ಎಂದು ಹೆಸರಿಸಿ ದೇವಸ್ಥಾನ ನಿರ್ಮಾಣಿಸಿ ಪೂಜಿಸತೊಡಗಿದರು. ಈ ದೇವಸ್ಥಾನವನ್ನು ಹಿರಿಯೂರು ತಾಲ್ಲೂಕಿನ ಕೂಡಲಹಳ್ಳಿಯಲ್ಲಿದೆ. ಲಿಂಗಾಯತ ಧರ್ಮದಿಂದ ಕಾಡುಗೊಲ್ಲರ ಧರ್ಮಕ್ಕೆ ಮತಾಂತರ ಹೊಂದಿದ ಶೀಲವಾಡಿಗೊಲ್ಲರು ಪಾತೇಲಿಂಗನನ್ನು ಆರಾಧನೆ ಮಾಡುತ್ತಾರೆ. ಪಾತೇಲಿಂಗನ ಅಧಿಪತ್ಯದಲ್ಲಿ ಇವರ ಕಟ್ಟೆಮನೆ ಹಿರಿಯೂರು ತಾಲ್ಲೂಕಿನ ತಾಳವಟ್ಟಿಯಲ್ಲಿದೆ. ಒಟ್ಟು ೭ ಗುಡಿಕಟ್ಟುಗಳಿವೆ.

೧೪. ಕಾಡುಗೊಲ್ಲರ ಪಂಚಲಿಂಗಗಳಲ್ಲಿ ಕೊನೆಯದು ರಾಮಲಿಂಗ. ಹರಿನಗೊಲ್ಲರ ಮತ್ತು ಮೆರನಗೊಲ್ಲರ ಬೆಡಗಿನ ಸಾಂಸ್ಕೃತಿಕ ನಾಯಕ ರಾಮಮುತ್ತಿ. ರಾಮಮುತ್ತಿಯನ್ನು ಆರಾಧಿಸುವುದಕ್ಕಾಗಿ 'ರಾಮಲಿಂಗ' ಈ ಹೆಸರಿನ ದೇವಸ್ಥಾನ ನಿಮಿಸಿ ಆರಾಧಿಸುತ್ತಾರೆ. ಈ ದೆವಸ್ಥಾನ ಚಿತ್ರದುರ್ಗ ತಾಲ್ಲೂಕಿನ ಗೊಲ್ಲನಕಟ್ಟೆ ಹತ್ತಿರವಿರುವ ರಾಮನಹಾಳ್‌ದಲ್ಲಿದೆ. ಈ ಗ್ರಾಮ ಈಗ ಹಾಳಾಗಿದೆ. ರಾಮಲಿಂಗನ ಅಧಿಪತ್ಯದಲ್ಲಿರುವ ಇವರ ಕಟ್ಟೆಮನೆ ರಾಮನಹಾಳ್ (ಪಾಳುಬಿದ್ದಿರುವ ಗ್ರಾಮ)ನಲ್ಲಿದೆ. ಇವರಿಗೆ ಒಟ್ಟು ೭ ಗುಡಿಕಟ್ಟುಗಳಿವೆ.

೧೫. ಕಾಡುಗೊಲ್ಲರು ಒಂದು ಕಾಲದಲ್ಲಿ ಪ್ರಕೃತಿ ಮತ್ತು ಮಾತೃದೇವತಾ ಆರಾಧಕರಾಗಿದ್ದರು ಎಂಬುದಕ್ಕೆ ಅವರು ಆರಾಧನೆ ಮಾಡುವ ದೇವತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಹೇಳಬಹುದು. ಗೌರಸಮುದ್ರದ ಮಾರಮ್ಮ, ಬೇವಿನಹಳ್ಳಿ ಕರಿಯಮ್ಮ, ಕುಕ್ಕಡದಮ್ಮ, ಬ್ಯಾಲದಮರದಮ್ಮ, ಕಟ್ಟೆಮಾರಮ್ಮ, ತುಗ್ಗಲಿ ಮರದಮ್ಮ, ಹೋಳಿಗೆಮ್ಮ, ಶೂನ್ಯದ ಮಾರಮ್ಮ, ಮುಂತಾದ ಮಾತೃದೇವತೆಗಳನ್ನು ಆರಾಧಿಸುತ್ತಾರೆ. ಕಾಡುಗೊಲರು ಮಾತೃ ಪ್ರದಾನ ಕುಟುಂಬ ವ್ಯವಸ್ಥೆಯಿಂದ ಪಿತೃ ಪ್ರದಾನ ಕುಟುಂಬ ವ್ಯವಸ್ಥೆಯ ಕಡೆಗೆ ಪರಿವರ್ತನೆ ಹೊಂದಿದಂತೆ ಮಾತೃ ಪ್ರದಾನ ದೇವತೆಗಳ ಸ್ಥಾನಗಳನ್ನು ಪಿತೃದೇವತೆಗಳು ಆವರಿಸಿಕೊಳ್ಳ ಹತ್ತಿದರು. ಆಗ ಕಾಡುಗೊಲ್ಲರು ಮಾತೃ ದೇವತೆಗಳಿಗೆ ಎರಡನೆಯ ಸ್ಥಾನ ನೀಡಿ, ಅವರನ್ನು ಹಟ್ಟಿಯ ಹೊರಗೆ ಪ್ರತಿಷ್ಠಾಪಿಸಿ ಆರಾಧನೆ ಮಾಡತೊಡಗಿದರು. ಮಾತೃದೇವತೆಗಳನ್ನು ಪೂರ್ಣವಾಗಿ ನಿರಾಕರಿಸಿದರೆ ಅವರು ನಮ್ಮ ಮೇಲೆ ಕೋಪಗೊಂಡು ಕಾಡುಗೊಲ್ಲರ ಕುಲವನ್ನು ನಾಶಮಾಡಬಹುದು ಎಂಬ ಅಂಜಿಕೆಯಿಂದ ಅವರನ್ನು ಹಟ್ಟಿಯ ಹೊರಗಿಟ್ಟು ಪೂಜಿಸುತ್ತಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಕಾಡುಗೊಲ್ಲರು ಮಾತೃ ದೈವಗಳನ್ನು ಹಟ್ಟಿಯ ಹೊರಗಿಟ್ಟು ಪೂಜೆ ಸಲ್ಲಿಸುತ್ತಿರುವುದನ್ನು ಗಮನಿಸಿದರೆ, ಈ ಮಾತೃ ದೈವಗಳು ಹಟ್ಟಿಯ ಹೊರಗೆ ಇದ್ದರೆ ದುಷ್ಟ ಶಕ್ತಿಗಳು ಹಟ್ಟಿಯ ಒಳಗೆ ಪ್ರವೇಶಿಸದಂತೆ ತಡೆದು ಹಟ್ಟಿ ಮತ್ತು ಹಟ್ಟಿಯ ಜನರನ್ನು ಕಾಪಾಡುತ್ತಾಳೆ ಎಂಬ ನಂಬಿಕೆ ಅವರದ್ದು. ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರ ಎಲ್ಲ ಕಥನಗಳಲ್ಲಿ ಆ ಸಾಂಸ್ಕೃತಿಕ ನಾಯಕರು ತೊಂದರೆಗೊಳಗಾದಾಗ ಅವರನ್ನು ರಕ್ಷಿಸುವ ಕೆಲಸವನ್ನು ಕಾಡುಗೊಲ್ಲರು ಆರಾದಿಸುವ ಮಾತೃದೇವತೆಗಳು ನಿರ್ವಹಿಸುತ್ತಾ ಬಂದಿರುವುದನ್ನು ಅವರ ಕಾವ್ಯಗಳಲ್ಲಿ ಕಾಣಬಹುದು.

೧೬. ಕಾಡುಗೊಲ್ಲರು ಇನ್ನೂ ಸಹ ಕಟ್ಟೆಮನೆಗಳ ಅಸ್ಥಿತ್ವವನ್ನು ಉಳಿಸಿಕೊಂಡಿರುವುದು ಅವರ ಅನನ್ಯತೆಯನ್ನು ತೋರಿಸುತ್ತದೆ. ಅವರ ಪಾರಂಪರಿಕ ನ್ಯಾಯ ಪದ್ಧತಿ ಹೀಗೆ ಮುಂದುವರಿದರೆ ನ್ಯಾಯಲಯಕ್ಕೆ ಕೊಡುವ ಖರ್ಚು ಉಳಿಸಬಹುದು ಎಂಬುದು ನನ್ನ ಅನಿಸಿಕೆ.

೧೭. ಚಿತ್ತಮುತ್ತಿ ಸಣ್ಣಮುತ್ತಿ ಮತ್ತು ರಾಮಮುತ್ತಿ: ಈ ಮೂರು ವಂಶಗಳಿಗೆ ಮೂರು ಕಟ್ಟೆಮನೆಗಳಿರುವುದು ಕಂಡುಬರುತ್ತದೆ. ಚಿತ್ತಮುತ್ತಿ ವಂಶಕ್ಕೆ ಸಂಬಂಧಿಸಿದ ಕಟ್ಟೆಮನೆ ಹಿರಿಯೂರು ತಾಲ್ಲೂಕಿನ ಕರಿಓಬ್ಬವ್ವನ ಹಳ್ಳಿಯಲ್ಲಿದೆ. ಮ್ಯಾಸಬೇಡರ ಮಹಿಳೆ ಕರಿಓಬ್ಬವ್ವನನ್ನು ಕರಡಿ ಬುಳ್ಳಪ್ಪ ಮದುವೆಯಾದ ಕಾರಣದಿಂದ ಆಕೆಯ ಹೆಸರಿನಲ್ಲಿಯೇ ಕಟ್ಟೆಮನೆಯನ್ನು ಕಟ್ಟಿಸಿರುವುದನ್ನು ಕಂಡುಬರುತ್ತದೆ. ಸಣ್ಣಮುತ್ತಿ ವಂಶಕ್ಕೆ ಸಂಬಂಧಿಸಿದ ಕಟ್ಟೆಮನೆ ಹಿರಿಯೂರು ತಾಲ್ಲೂಕಿನ ತಾಳವಟ್ಟಿಯಲ್ಲಿದೆ. ರಾಮಮುತ್ತಿ ವಂಶಕ್ಕೆ ಸೇರಿದ ಕಟ್ಟೆಮನೆ ಚಿತ್ರದುರ್ಗ ತಾಲ್ಲೂಕಿನ ಗೊಲ್ಲನಕಟ್ಟೆಬಳಿ ರಾಮನ ಹಾಳ್ ಎಂಬ ಹಾಳಾದ ಎಂಬ ಗ್ರಾಮದಲ್ಲಿದೆ.

೧೮. ಕಾಡುಗೊಲ್ಲರ ಸಮುದಾಯದ ಪ್ರಮುಖ ಹಬ್ಬವೆಂದರೆ ಅದು ಹಿರಿಯರ ಹಬ್ಬ ಕಾಡುಗೊಲ್ಲರಲ್ಲಿ ಕೆಲವರು ಹಿರಿಯರ ಹಬ್ಬವನ್ನು ದೀಪಾವಳಿಯಲ್ಲಿ ಮಾಡಿದರೆ ಮತ್ತೆ ಕೆಲವರು ಯುಗಾಧಿಯಲ್ಲಿ ಮಾಡುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಸಮುದಾಯದ ಮೂಲ ಪುರುಷನಿಂದ ಹಿಡಿದು ಆಯಾ ಕುಟುಂಬಗಳಲ್ಲಿ ತೀರಿ ಹೋದ ಎಲ್ಲ ಹಿರಿಯರ ಹೆಸರಿನಲ್ಲಿ ಪೂಜೆ ಸಲ್ಲಿಸುವುದು ಕಂಡು ಬರುತ್ತದೆ.

೧೯. ಪ್ರತಿ ವರ್ಷ ಭೂಮಿತಾಯಿಂದ ಪಡೆದ ಧಾನ್ಯಗಳನ್ನು ಭೂಮಿತಾಯಿಗೆ ಅರ್ಪಿಸಿ ಪೂಜೆ ಮಾಡುವ ಆಚರಣೆಯನ್ನು ಗುಗ್ಗರಿ ಹಬ್ಬ ಎಂದು ಕರೆಯುವರು. ಕಾಡುಗೊಲ್ಲರು ಆಯಾ ಗುಡಿಕಟ್ಟೆಯ ವ್ಯಾಪ್ತಿಯಲ್ಲಿ ಗುಗ್ಗರಿ ಹಬ್ಬಮಾಡುವುದು ಕಂಡು ಬರುತ್ತದೆ. ಆಯಾ ಗುಡಿಕಟ್ಟೆಗೆ ಸೇರಿದ ರಕ್ತ ಸಂಬಂಧಿಗಳ ಬೆಡಗಿನವರು ಬೆಳೆದ ಬೆಳೆಯ ಫಸಲನ್ನು ಮೀಸಲಿಟ್ಟು, ಆ ಧಾನ್ಯಗಳಿಂದ ಗುಗ್ಗರಿ ಹಬ್ಬ ಮಾಡುವರು. ಗುಗ್ಗರಿ ಹಬ್ಬ ನಿಗದಿ ಮಾಡಿದ ದಿನ ಸಂಗ್ರಹಿಸಿದ ಧಾನ್ಯಗಳನ್ನು ಬೇಯಿಸಿ, ರಾಶಿ ಹಾಕಿ, ಅದನ್ನು ದೈವದ ಹೆಸರಿನಲ್ಲಿ ಪೂಜಿಸಿ, ಎಲ್ಲರಿಗೂ ಪ್ರಸಾದವಾಗಿ ನೀಡುವ ಸಂಪ್ರದಾಯ ಕಾಡುಗೊಲ್ಲರಲ್ಲಿ ಪ್ರಾಮುಖವಾಗಿ ಕಂಡು ಬರುತ್ತದೆ. ಅದೇ ದಿನ ರಾತ್ರಿ ಆ ಗುಡಿ ಕಟ್ಟೆಗೆ ಸೇರಿದೆ ಅಮವಾಸ್ಯೆ ಪೂಜಾರಿ ರಕ್ತ ಸಂಬಂಧಿಕರ ಬೆಡಗಿನವರಿಗೆ ಹಣ ಸಂಗ್ರಹಿಸಿ ಆ ದಿನ ರಾತ್ರಿ ೧೨ ಗಂಟೆಗೆ ಯಾರಿಗೂ ಕಾಣದಂತೆ ಬೆತ್ತಲೆಯಾಗಿ ಸ್ನಾನಮಾಡಿ, ಆ ಕುಲದ ಸಮುದಾಯದ ಮೂಲ ಪುರುಷನ ಆತ್ಮ ಪೂಜೆ ಮಾಡಿ, ವಿಶೇಷವಾದ ಅಡುಗೆ ಮಾಡಿಕೊಂಡು ಊಟ ಮಾಡುವ ಆಚರಣೆ ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ.

ಪರಾಮಾರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, 'ಕಾಡುಗೊಲ್ಲರ ಜನಪದ ಗೀತೆಗಳು' ಮೈಸೂರು ವಿಶ್ವ ವಿದ್ಯಾನಿಲಯ, ೧೯೭೮.

೨. ಅಂಗಡಿ ಎಸ್.ಎಸ್. 'ಕರ್ನಾಟಕ ಬುಡಕಟ್ಟು ಭಾಷೆ', ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೮.

೩. ಆನಂದ ಮೂರ್ತಿ ಜಿ. ವಿ. 'ಕೃತಿ ಕನ್ನಡಿ' ಪಟೇಲ್ ಪಬ್ಲಿಕೇಷನ್ಸ್ ಬೆಂಗಳೂರು,೨೦೧೬.

೪. ಆನಂದ ಮೂರ್ತಿ ಜಿ. ವಿ. 'ನುಡಿ ಕನ್ನಡಿ' ಸಿವಿಜಿ ಪಬ್ಲಿಕೇಷನ್ಸ್ ಬೆಂಗಳೂರು, ೨೦೧೬.

೫. ಇಂದಿರಾ ಆರ್. 'ಸಾಮಾಜಿಕ ಸಂಶೋಧನಾ ವಿಧಾನಗಳು' ವಿದ್ಯಾಸಾಗರ ಮುದ್ರಣಾಲಯ ಮತ್ತು ಪ್ರಕಾಶನಾಲಯ ಮೈಸೂರು, ೨೦೦೧.

೬. ಓಬಳೇಶ್. ಕೆ. ವಿ. 'ಅಸ್ಮಿತೆ ಮತ್ತು ಆತ್ಮವಿಮರ್ಶೆ' ಅರುಣ್ ಪ್ರಕಾಶನ ಬೆಂಗಳೂರು, ೨೦೧೭.

೭. ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೮೫.

೮. ಕರೀಗೌಡ ಬೀಚನಹಳ್ಳಿ, 'ಎಚ್.ಎಲ್. ನಾಗೇಗೌಡ', ಸಾಹಿತ್ಯ ಅಕಾದೆಮಿ,ನವದೆಹಲಿ ಬೆಂಗಳೂರು, ೨೦೧೭.

೯. ಕಾಳೇಗೌಡ ನಾಗವಾರ. ಹುಚ್ಚಪ್ಪ ಮಾಸ್ತರ್ ಎನ್.,'ಗಿರಿಜನ ಸಂಸ್ಕೃತಿ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ೨೦೦೦.

೧೦. ಕಾಳೇಗೌಡ ನಾಗವಾರ, ಜಿ.ವಿ ಆನಂದಮೂರ್ತಿ, 'ಗರಿಗೆದರಿದ ನವಿಲು', ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಭವನ ಜೆ.ಸಿ. ರಸ್ತೆ ಬೆಂಗಳೂರು ೨೦೦೫.

೧೧. ಕಾಶೀನಾಥ ರೆಡ್ಡಿ ಎಚ್, 'ಆಚರಣೆಯ ಹಾಡುಗಳು' ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಭವನ ಜೆ.ಸಿ.ರಸ್ತೆ, ಬೆಂಗಳೂರು, ೨೦೦೯.

೧೨. ಕಾಳೇಗೌಡ ನಾಗವಾರ, 'ಬೇವಿನಹಳ್ಳಿ ಕಾಡುಗೊಲ್ಲರಹಟ್ಟಿ' ಸಿ.ವಿ.ಜಿ. ಇಂಡಿಯಾ ಕಸ್ತೂರಿ ಬಾ ಭವನ ಬೆಂಗಳೂರು, ೨೦೧೫.

೧೩. ಕೃಷ್ಣಮೂರ್ತಿ ಹನೂರು, 'ಸಾವಿರದ ಸಿರಿಬೆಡಗು', ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ,ಹಂಪಿ ೨೦೦೫.

೧೪. ಕೃಷ್ಣಮೂರ್ತಿ ಹನೂರು, 'ಜನಪದ ಮತ್ತು ಬುಡಕಟ್ಟು ಗೀತೆಗಳು', ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೮.

೧೫. ಕೃಷ್ಣಮೂರ್ತಿ ಹನೂರು, 'ಕತ್ತಲದಾರಿ ದೂರ', ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ– ಬೆಂಗಳೂರು, ೧೯೮೧.

೧೬. ಕೃಷ್ಣಮೂರ್ತಿ ಹನೂರು. 'ಜನಪದ ವೀರಗೀತೆಗಳು', ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ೧೯೮೭.

೧೭. ಗಂಗಾಧರ ದೈವಜ್ಞ 'ಮಾಳಿಂಗರಾಯನ ಕಾವ್ಯ', ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೧೯೯೯.

೧೮. ಗಂಗಾಧರ ದೈವಜ್ಞ 'ಬುಡಕಟ್ಟು ಹುಟ್ಟು– ಸಾವಿನ ನಡುವೆ', ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ ೨೦೧೫.

೧೯. ಗುರುಲಿಂಗಯ್ಯ ಎಂ. 'ಕರ್ನಾಟಕದ ಗೊಲ್ಲ ಸಮುದಾಯ' ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಬೆಂಗಳೂರು, ೨೦೦೫

೨೦. ಗುರುಲಿಂಗಯ್ಯ ಎಂ. ನಾಗಪ್ಪ ವಿ. 'ಕಾಡುಗೊಲ್ಲ', ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೮.

೨೧. ಗೋಪಾಲಕೃಷ್ಣಯ್ಯ ಕೆ. ಎಲ್., (ಅನು) 'ಭಾರತೀಯ ಇತಿಹಾಸ ವೈಲಕ್ಷಣಗಳು', ನವಕರ್ನಾಟಕ ಪ್ರಕಾಶನ ಬೆಂಗಳೂರು, ೨೦೧೬.

೨೨. ಚಲುವರಾಜು 'ಜುಂಜಪ್ಪ' ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ,ಹಂಪಿ, ವಿದ್ಯಾರಣ್ಯ ಕಮಲಾಪುರ, ೧೯೯೭.

೨೩. ಚಿಕ್ಕಣ್ಣ ಎಣ್ಣೆಕಟ್ಟೆ, 'ಹೊಳೆದಂಡೆ ಕರಿಕೆ' ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ ತುಮಕೂರು ಜಿಲ್ಲೆ, ೧೯೯೮

೨೪. ಚಿಕ್ಕಣ್ಣ ಎಣ್ಣೆಕಟ್ಟೆ, 'ತುಮಕೂರು ಜಿಲ್ಲಾ ಜಾತ್ರೆಗಳು' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು,೫೬೦೦೧೯ ೨೦೦೩

೨೫. ಚಿಕ್ಕಣ್ಣ ಎಣ್ಣೆಕಟ್ಟೆ, 'ವೀರ ಜುಂಜಪ್ಪ ಸಮಗ್ರ ಕಥಾವಳಿ' ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ತುಮಕೂರು ಜಿಲ್ಲೆ, ೨೦೧೧.

೨೬. ಚಿತ್ರಲಿಂಗಯ್ಯ.ಡಿ ಸಿ. 'ಈಳ್ಳೇವು' ಸಂವಹನ ಪ್ರಕಾಶನ ಮೈಸೂರು, ೨೦೧೭.

೨೭. ಚೇತನ ಎಚ್. ಆರ್. 'ಹೆಳವರು ಹೇಳುವ ಕರಿರಾಜನ ಕತೆ' ಸಿ.ವಿ.ಜಿ.ಬುಕ್ಸ್ ಬೆಂಗಳೂರು, ೨೦೦೧೬.

೨೮. ಜಯರಾಮ.ಕೆ. 'ಅಲೆಮಾರಿ ಕಾಡುಗೊಲ್ಲರ ಅಭಿವೃದ್ಧಿ ಅಧ್ಯಯನ'(ಅಪ್ರಕಟಿತ ಎಂಪಿಲ್.ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨೯. ತಿಮ್ಮಯ್ಯ. ಕೆ. 'ನೊಸರಿ' ತಳಗವಾದಿ ಪ್ರಕಾಶನ ಮೈಸೂರು ೨೦೦೪.

೩೦. ತಿಮ್ಮಯ್ಯ ಕೆ. ಚಿತ್ರಲಿಂಗಯ್ಯ. ಡಿ. ಸಿ. 'ಕಾಡುಗೊಲ್ಲರ ಕುಲಭೂಷಣ ಬಿ.ಚಿಕ್ಕಪ್ಪಯ್ಯ', ಜ್ಞಾನೋಧಯ ಅಕಾಡೆಮಿಕ್ ಪಬ್ಲಿಕೇಷನ್ ಮೈಸೂರು, ೨೦೧೭.

೩೧. ದೇವುಡು., 'ಕರ್ನಾಟಕದ ಸಂಸ್ಕೃತಿ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೫.

೩೨. ನರಸಿಂಹಮೂರ್ತಿ ಎಂ.ಎಲ್., 'ಮಧುಗಿರಿಯ ದಂಡಿನಮಾರಮ್ಮ', ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೫

೩೩. ನಾಗೇಶ್ ಎಚ್. ಕೆ. ಕಾಳಿಂಗರಾಯನ ಕಾವ್ಯ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೪. ನಾಗೇಶ್ ಹೆಬ್ಬಾಲೆ., ದಲಿತ ಸ್ತ್ರೀ ದೈವಗಳು, ಪ್ರಸಾರಾಂಗ ಕನ್ನಡ ವಿಶವವಿದ್ಯಾಲಯ, ಹಂಪಿ, ೨೦೧೧.

೩೫. ನಾಯಕ ಡಿ. ಬಿ. 'ಗಿರಿಜನ ಸಿರಿ' ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೩.

೩೬. ನಾಯಕ ಡಿ. ಬಿ. 'ಜಾನಪದ ಲೇಖನಗಳು' ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೩೭. ನಾಗರಾಜಪ್ಪ ಬಾಗೂರು., 'ಹೊಸದುರ್ಗ ಸೀಮೆ ಜಾನಪದ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೪.

೩೮. ಪರಮಶಿವಯ್ಯ ಜೀ. ಶಂ. 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಅಭಿನವ, ಬೆಂಗಳೂರು, ೨೦೧೫.

೩೮. ಪುರುಷೋತ್ತಮ ಬಳಿಮಲೆ., 'ಕೂಡು ಕಟ್ಟು' ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ೧೯೯೭.

೩೯. ಪವನ್ ಜಿ ಎಂ., 'ಶ್ರೀ ದ್ಯಾಮಲಾಂಬ ದರ್ಶನ' ದ್ಯಾಮಲಾಂಬ ಅಭಿವೃದ್ಧಿ ಸಮಿತಿ ಟ್ರಸ್ಟ್(ರಿ) ಚಿತ್ರದುರ್ಗ. ೨೦೧೧

೪೦. ಪ್ರಭಕರ ಎ. ಎಸ್., 'ಬುಡಕಟ್ಟು ಅಭಿವೃದ್ಧಿ ಮೀಮಾಂಸೆ', ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ,ಹಂಪಿ, ೨೦೦೪.

೪೧. ಪ್ರೇಮಾ ಜಿ.ಕೆ., 'ಜನ್ನಿಗೆ', ಶ್ರೀ ಅನ್ನಪೂರ್ಣ ಪ್ರಕಾಶನ ಬೆಂಗಳೂರು, ೨೦೧೩

೪೨. ಬಸವರಾಜ ಸಬರದ., ಜನಪದ ದೇವತೆಗಳು ಮತ್ತು ಶಿಷ್ಟದೇವತೆಗಳು' ಜಾನಪದ ಪ್ರಶಸ್ತಿ ಸಮಿತಿ ಕುಂದಾಪುರ, ೧೯೯೪.

೪೩. ಬಿ.ಎಸ್. ಸ್ವಾಮಿ., 'ಜಾನಪದ ಐಸಿರಿ' ದಾಮಿನಿ ಸಾಹಿತ್ಯ ಬೆಂಗಳೂರು, ೨೦೦೬

೪೩. ಬಿ.ಎಸ್. ಗದ್ದಿಗಿನಮಠ, 'ಕನ್ನಡ ಜಾನಪದ ಗೀತೆಗಳು' ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ, ೧೯೬೩

೪೪. ಬಿ. ಎಸ್. ತಲ್ವಾಡಿ, 'ಜಾನಪದ ಕಲರವ' ಶ್ರೀ ಅನ್ನಪೂರ್ಣ ಪ್ರಕಾಶನ ಬೆಂಗಳೂರು, ೨೦೧೦.

೪೫. ಬೋರಲಿಂಗಯ್ಯ ಹಿ. ಚಿ., 'ಗೊಂಡರಾಮಾಯಣ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,. ೨೦೦೯.

೪೬. ಬೋರಲಿಂಗಯ್ಯ ಹಿ. ಚಿ., 'ದಾಸಪ್ಪ ಜೋಗಪ್ಪ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೪.

೪೭. ಬೋರಲಿಂಗಯ್ಯ ಹಿ. ಚಿ., 'ಬುಡಕಟ್ಟು ದೈವಾರಾಧನೆ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ,.೨೦೧೫.

೪೮. ಮಲ್ಲಿಕಾರ್ಜುನ ಕಲಮರಹಳ್ಳಿ, 'ಈರಬಡಪ್ಪ(ಆತ್ಮಕಥನ) ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೭

೪೯. ಮಲ್ಲಿಕಾರ್ಜುನ ಕಲಮರಹಳ್ಳಿ, 'ಗೊಲ್ಲರ ಇತಿಹಾಸ ಕಥನ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೫೦. ಮಂಜುನಾಥ ಬೇವಿನಕಟ್ಟೆ 'ಪರಿಸೆ/ಮಾನ್ಯೇವು' ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೧೦.

೫೧. ಮಾಧವ.ಬಿ.(ಅನು) 'ಒಬ್ಬ ಭಾರತೀಯ ಕಮ್ಯೂನಿಸ್ಟನ ನೆನಪುಗಳು', ಕ್ರಿಯಾಪ್ರಕಾಶನ ಬೆಂಗಳೂರು, ೧೯೯೪.

೫೨. ಮಾಯಿಗೌಡ. ಕೆ.(ಅನು) 'ಪೆರಿಯಾರ್ ಕ್ರಾಂತಿ ಕಿಡಿ' ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೪.

೫೩. ಮಾಯಿಗೌಡ. ಕೆ. 'ಪೆರಿಯಾರ್ ಫಿಲಾಸಫಿ' ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೪.

೫೪. ಮೇತ್ರಿ ಕೆ.ಎಂ., 'ಕೃಷ್ಣಗೊಲ್ಲರ ಕಥನ ಕಾವ್ಯಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೫೫. ಮೇತ್ರಿ ಕೆ.ಎಂ., 'ಕುಮಾರ ರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಮಲಾಪುರ, ೧೯೯೭

೫೬. ಮೋಹನ್ ಕುಮಾರ್, ಎನ್., 'ಕಾಡುಗೊಲ್ಲರ ಕೋಲಾಟದ ಪದಗಳು' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ ಹಾವೇರಿ ೨೦೧೩.

೫೭. ರಂಗಲಕ್ಷ್ಮಿ.ಪಿ.ವಿ. 'ಪಾವಗಡ ತಾಲೂಕಿನ ಜಾನಪದ ವೀರ ನಾಯಕರು', ಸುಮುಖ ಬುಕ್ ಹೌಸ್ ಬೆಂಗಳೂರು ೫೬೦೦೨೫, ೨೦೦೫

೫೮. ರಹಮತ್ ತರಿಕೆರೆ., ಸಾಂಸ್ಕೃತಿಕ ಅಧ್ಯಯನ', ಅಭಿನವ ಪ್ರಕಾಶನ ಬೆಂಗಳೂರು, ೨೦೦೪.

೫೯. ರಹಮತ್ ತರೀಕೆರೆ., 'ಪ್ರತಿಸಂಸ್ಕೃತಿ' ಅಭಿನವ ಪ್ರಕಾಶನ ಬೆಂಗಳೂರು, ೨೦೧೩.

೬೦. ರಾಜಶೇಖರ ಪಿ. ಕೆ. 'ಜಾನಪದ ಸಂಭ್ರಮ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು,. ೨೦೦೩.

೬೧. ರಾಮಾನುಜನ್.ಎ.ಕೆ. (ಸಂ) 'ಭಾರತೀಯ ಜನಪದ ಕತೆಗಳು', ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ಹೊಸ ದೆಹಲಿ, ೨೦೦೦.

೬೨. ಲಕ್ಕಪ್ಪಗೌಡ.ಎಚ್.ಜೆ. (ಸಂ) 'ಜೀಶಂಪ ಸಂಸ್ಮರಣೆ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗೂರು, ೧೯೯೫.

೬೩. ಲೆನಿನ್. ಐ. ವಿ. (ಸಾಮ್ರಾಜ್ಯಶಾಹಿ ಬಂಡವಾಳಶಾಯಿ ಅತ್ಯುನ್ನತ ಘಟ್ಟ', ಕ್ರಿಯಾ ಪ್ರಕಾಶನ ಬೆಂಗಳೂರು, ೨೦೧೩.

೬೪. ವಸಂತರಾಜ ಎನ್. ಕೆ. 'ಡಿ.ಡಿ. ಕೊಸಾಂಬಿ ನಿಮಗೆ ತಿಳಿದಿರಲಿ' ಚಿಂತನ ಪುಸ್ತಕ ಪ್ರಕಾಶನ ಬೆಂಗಳೂರು, ೨೦೧೦.

೬೫. ವಿಮಲ ಅಮಲಪ್ಪ 'ಕಾಡುಗೊಲ್ಲರ ಆರ್ಥಿಕ ಸ್ಥಿತಿಗತಿಗಳು'(ಅಪ್ರಕಟಿತ ಪಿಎಚ್.ಡಿ ಪ್ರಬಂಧ)ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೬೬. ವಿರೂಪಾಕ್ಷಿ ಪೂಜಾರಹಳ್ಳಿ, 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೬೭. ವೀರಭದ್ರಪ್ಪ. ಬಿ. ವಿ. 'ಧರ್ಮ ಮತ್ತು ವೈಚಾರಿಕತೆ' ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ ಮಿಟೆಡ್, ೨೦೦೯.

೬೮. ವೀರಣ್ಣ ದಂಡೆ (ಸಂ) 'ಜಾನಪದ ೧೯೯೨' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು, ೧೯೯೫.

೬೯. ವೆಂಕಟೇಶ ಇಂದ್ವಾಡಿ., ಮಲೆಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೭೦. ವೇಣುಗೋಪಾಲ್ ಟಿ.ಎಸ್.,ಶೈಲಜಾ., (ಅನು) 'ಪ್ರಾಚಿನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ' ಚಿಂತನ ಪುಸ್ತಕ ಪ್ರಕಾಶನ ಬೆಂಗಳೂರು, ೨೦೧೧.

೭೧. ವೇದರಾಜ ಎನ್. ಕೆ. 'ಗೆಲ್ಲಲೊಂದು ಜಗತ್ತೇ ಇದೆ', ಕ್ರಿಯಾ ಪ್ರಕಾಶನ ಬೆಂಗಳೂರು, ೨೦೧೩.

೭೨. ಸಣ್ಣ ನಾಗಪ್ಪ, ;ವೀರ ಸೀಗಣ್ಣನ ಜನಪದ ಕಾವ್ಯ' ಗಣೇಪ್ರಕಾಶನ ಬೆಂಗಳೂರು, ೨೦೧೪

೭೩. ಸರ್ದೇ ಸಾಯಿ ಎಸ್. ಜಿ. (ಅನು)ಗೌರೀಶ ಕಾಯ್ಕಿಣಿ, 'ಭಾರತೀಯ ತತ್ವಜ್ಞಾನ ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ, ನವಕರ್ನಾಟಕ ಪ್ರಕಾಶನ ಬೆಂಗಳೂರು ೨೦೧೪.

೭೪. ಸಿದ್ದಗಂಗಯ್ಯ ಬಿ. 'ಜುಂಜಪ್ಪನ ಕಾವ್ಯ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೬.

೭೫. ಶಂಕರನಾರಾಯಣ ತೀ ನಂ ವೆಂಕಟೇಶ ಎಂ.ಎನ್., 'ಜನಪದ ಸಾಹಿತ್ಯ ಪ್ರಕಾರಗಳು' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಹಾವೇರಿ, ೨೦೦೪.

೭೬. ಶಂಕರನಾರಾಯಣ ತೀ ನಂ ವೆಂಕಟೇಶ ಎಂ.ಎನ್., 'ಜುಂಜಪ್ಪ ಮಹಾಕಾವ್ಯ' ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಹಾವೇರಿ, ೨೦೧೪.

೭೭. ಶಿವಣ್ಣ ಮೀರಾಸಾಬಿಹಳ್ಳಿ, 'ಗಣೆಯದನಿ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೦.

೭೮. ಶಿವಣ್ಣ ಮೀರಾಸಾಬಿಹಳ್ಳಿ, 'ಎತ್ತಪ್ಪ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೨.

೭೯. ಶಿವಣ್ಣ ಮೀರಾಸಾಬಿಹಳ್ಳಿ, 'ಮ್ಯಾಸಮಂಡಲ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೩.

೮೦. ಶಿವಣ್ಣ ಮೀರಾಸಾಬಿಹಳ್ಳಿ, 'ಕಾಡುಗೊಲ್ಲರ ಸಂಸ್ಕೃತಿ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೪.

೮೧. ಶಿವಣ್ಣ ಮೀರಾಸಾಬಿಹಳ್ಳಿ, 'ಕಾಡುಗೊಲ್ಲ ಬುಡಕಟ್ಟು ವೀರರು' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೦೫.

೮೨. ಶಿವಣ್ಣ ಮೀರಾಸಾಬಿಹಳ್ಳಿ, 'ಗಾದಿರಿ ಪಾಲನಾಯಕ' ಪಟೇಲ್ ಪಬ್ಲಿಕೇಷನ್ಸ್ ಬೆಂಗಳೂರು, ೨೦೧೪.

೮೩. ಶಿವಣ್ಣ ಮೀರಾಸಾಬಿಹಳ್ಳಿ, 'ಗೊಲ್ಲಕಡಗ' ಸಿ.ವಿ.ಜಿ. ಪಬ್ಲಿಕೇಷನ್ಸ್ ಬೆಂಗಳೂರು, ೨೦೧೫.

೮೪. ಹಸನ್ ನಯೀಂ ಸುರಕೋಡ.,(ಅನು)'ಡಾ. ರಾಮಮನೋಹರ ಲೋಹಿಯಾ, ಜಾತಿಪದ್ಧತಿ, ಲಂಕೇಶ್ ಪ್ರಕಾಶನ ಬೆಂಗಳೂರು, ೨೦೧೪

ನಿಯತ ಕಾಲಿಕೆಗಳು

೧. ಚಿಕ್ಕಪ್ಪಯ್ಯ ಐಪಿಎಸ್. (ಸಂ) 'ಯದು ಸಂಭಮ' ಶ್ರೀ ಯಾದವ ಎಜುಕೇಷಲ್ನ್ ಅಂಡ್ ಕಲ್ಚರಲ್ ಟ್ರಸ್ಟ್ ಅನಂತಪುರ ಜಿಲ್ಲೆ ಆಂಧ್ರಪ್ರದೇಶ. ೨೦೦೫.

೨. ಇಂದೂಧರ ಹೊನ್ನಾಪುರ,(ಸಂ) ಸಂವಾದ ಮಾಸಪತ್ರಿಕೆ ಸಂಪುಟ ೧೪,ಸಂಚಿಕೆ ೦೪ ಪೆಬ್ರವರಿ, ೨೦೧೬.

೩. ಇಂದೂಧರ ಹೊನ್ನಾಪುರ,(ಸಂ) ಸಂವಾದ ಮಾಸಪತ್ರಿಕೆ ಸಂಪುಟ ೧೪,ಸಂಚಿಕೆ ೦೫ ಮಾರ್ಚ್– ೨೦೧೬.

೪. ಜಯರಾಮ. ಕೆ. (ಸಂ) 'ಜೆನಿಗೆ' ತ್ರೈಮಾಸಿಕ ಪತ್ರಿಕೆ ಸಮುದಾಯಗಳಿಗೊಂದು ಆಕರ, ಸಂಚಿಕೆ–೧,ಸಂಪುಟ–೪ ಮೇ–ಆಗಸ್ಟ್, ೨೦೧೬.

೫. ಜಯರಾಮ. ಕೆ. (ಸಂ) 'ಜೆನಿಗೆ' ತ್ರೈಮಾಸಿಕ ಪತ್ರಿಕೆ ಸಮುದಾಯಗಳಿಗೊಂದು ಆಕರ, ಸಂಚಿಕೆ–೨,ಸಂಪುಟ–೬ ಮಾರ್ಚ್– ೨೦೧೭.

೬. ಇಂದೂಧರ ಹೊನ್ನಾಪುರ,(ಸಂ) ಸಂವಾದ ಮಾಸಪತ್ರಿಕೆ ಸಂಪುಟ ೧೬,ಸಂಚಿಕೆ ೦೧ ನವಂಬರ್, ೨೦೧೭.

ಅನುಬಂಧಗಳು

ತಿಳುವಳಿಕೆದಾರರ ಪಟ್ಟಿ

ಹೆಸರು	ವಯಸ್ಸು	ವೃತ್ತಿ	ಬೆಡಗು	ನೆಲೆಸಿರವ ಸ್ಥಳ
ಮೀಸೆ ತಿಮ್ಮಜ್ಜ	೭೦	ಇಲ್ಲ	ಕರಡಿಗೊಲ್ಲರು	ಜೋಡಿಚಿಕ್ಕೇನಹಳ್ಳಿ ಗೊಲ್ಲರಹಟ್ಟಿ
ದೊಡ್ಡ ತಿಮ್ಮಜ್ಜ	೭೫	ಇಲ್ಲ	ಕರಡಿಗೊಲ್ಲರು	ಜೋಡಿಚಿಕ್ಕೇನಹಳ್ಳಿ ಗೊಲ್ಲರಹಟ್ಟಿ
ಸಿದ್ದಗಂಗಮ್ಮ	೪೬	ಕೂಲಿ	ಸನ್ನೇರಗೊಲ್ಲರು	ಜೋಡಿಚಿಕ್ಕೇನಹಳ್ಳಿ ಗೊಲ್ಲರಹಟ್ಟಿ
ಗುರುಸ್ವಾಮಿ	೨೮	ಕೂಲಿ	ಸನ್ನೇರಗೊಲ್ಲರು	ಜೋಡಿಚಿಕ್ಕೇನಹಳ್ಳಿ ಗೊಲ್ಲರಹಟಿ
ಪೂಜಾರಿ ಈರಣ್ಣ	೫೦	ವ್ಯವಸಾಯ	ಕರಡಿಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ದಾಸಯ್ಯ	೬೦	ಕಂಬದಪೂಜಾರಿ	ಕರಡಿಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ಸಂದಜ್ಜ	೭೦	ಇಲ್ಲ	ಸನ್ನೇರಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ಬಾಲೇನಹಳ್ಳಿ ತಿಮ್ಮಕ್ಕ	೫೦	ಕೂಲಿ	ಸನ್ನೇರಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ಯಳಿಯಜ್ಜ ಈರಣ್ಣ	೫೦	ವ್ಯವಸಾಯ	ಸನ್ನೇರಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ತಿಮ್ಮಕ್ಕ	೪೫	ಮನೆಕೆಲಸ	ಸನ್ನೇರಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ಲಕ್ಷ್ಮೀದೇವಿ	೫೨	ಕೂಲಿ	ಸನ್ನೇರಗೊಲ್ಲರು	ಹಾಯ್ಕಲ್ ಗೊಲ್ಲರಹಟ್ಟಿ ಚಿತ್ರದುರ್ಗ ಜಿಲ್ಲೆ
ಪೂಜಾರಿ ಚಂದ್ರಣ್ಣ	೫೦	ಪೂಜಾರಿ	ಸೋಮನಗೊಲ್ಲರು	ಚನ್ನಮ್ಮನಾಗತಿಹಳ್ಳಿ ಚಳ್ಳಕೆರೆ ತಾಲ್ಲೂಕು
ಗೌಡಪ್ಪ ಇ	೩೫	ಉಪನ್ಯಾಸಕರು	ಸೋಮನಗೊಲ್ಲರು	ಚನ್ನಮ್ಮನಾಗತಿಹಳ್ಳಿ ಚಳ್ಳಕೆರೆ ತಾಲ್ಲೂಕು
ಜಗಪ್ಪ	೩೫	ಕುರಿಗಾರರು	ಮಾರನಗೊಲ್ಲರು	ಚನ್ನಮ್ಮನಾಗತಿಹಳ್ಳಿ ಚಳ್ಳಕೆರೆ ತಾಲ್ಲೂಕು
ಪೂಜಾರಿ ತಿಪ್ಪೇಸ್ವಾಮಿ	೪೫	ಪೂಜಾರಿ	ಸೋಮನಗೊಲ್ಲರು	ಕ್ಯಾತಗನಹಳ್ಳಿ ಚಳ್ಳಕೆರೆ ತಾಲ್ಲುಕು ಚಿತ್ರದುರ್ಗ ಜಿಲ್ಲೆ
ಪರಂಗಿ ಚಿಕ್ಕಣ್ಣ	೬೦	ವ್ಯವಸಾಯ	ಸೋಮನಗೊಲ್ಲರು	ಚಿಕ್ಕೇನಹಳ್ಳಿ ಗೊಲ್ಲರಹಟ್ಟಿ ಚಳ್ಳಕೆರೆ ತಾಲ್ಲುಕು

ಕ್ಯಾತಜ್ಜ	೮೦	ಇಲ್ಲ	ಸೋಮನಗೊಲ್ಲರು	ದೇವರಮರಿಕುಂಟೆ ಚಳ್ಳಕೆರೆ ತಾ.
ಬೋರಪ್ಪ	೬೫	ಪೂಜಾರಿ	ಹಬ್ಬಗೊಲ್ಲರು	ಚಿಕ್ಕೆರೆಹಳ್ಳಿ ಕೂಡ್ಲಿಗಿ ತಾ. ಬಳ್ಳಾರಿ ಜಿ.
ಸಣ್ಣೀರಣ್ಣ	೫೦	ಕುರಿಗಾರರು	ಸನ್ನೇರಗೊಲ್ಲರು	ಕೆಂಗಲಹಟ್ಟಿ ಕೂಡ್ಲಿಗಿ ತಾ ಬಳ್ಳಾರಿ ಜಿ.
ದೊಡ್ಡಜ್ಜ	೭೦	ಇಲ್ಲ	ಸನ್ನೇರಗೊಲ್ಲರು	ಮಾಳನಾಯಕನಹಳ್ಳಿ ಕೂಡ್ಲಿಗಿ ತಾ ಬಳ್ಳಾರಿ ಜಿ.
ಪೂಜಾರಿ ದೊಡ್ಡಣ್ಣ	೪೫	ಪೂಜಾರಿಕೆ	ಸನ್ನೇರಗೊಲ್ಲರು	ಮಾಳನಾಯಕನಹಳ್ಳಿ ಕೂಡ್ಲಿಗಿ ತಾ ಬಳ್ಳಾರಿ ಜಿ.
ಸಣ್ಣೀರಜ್ಜ	೯೨	ಇಲ್ಲ	ಕರಡಿಗೊಲ್ಲರು	ರೊಳ್ಳೆಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ಬಾಲಕೃಷ್ಣಪ್ಪ	೫೦	ವ್ಯವಸಾಯ	ಸೋಮನಗೊಲ್ಲರು	ಈರ್ಗಾನಹಳ್ಳಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ಯಶೋಧಮ್ಮ.	೪೫	ಕೂಲಿ	ಸೋಮನಗೊಲ್ಲರು	ಈರ್ಗಾನಹಳ್ಳಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ತಿಪ್ಪಮ್ಮ	೪೫	ಮನೆಕೆಲಸ	ಸೋಮನಗೊಲ್ಲರು	ಈರ್ಗಾನಹಳ್ಳಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ತಿಮ್ಮಕ್ಕ	೪೫	ಮನೆಕೆಲಸ	ಕರಡಿಗೊಲ್ಲರು	ಮದುಡಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ರಂಗಮ್ಮ	೫೦	ಕೂಲಿ	ಹಬ್ಬಗೊಲ್ಲರು	ಮದುಡಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ಈರಮ್ಮ	೫೦	ಕೂಲಿ	ಕರಡಿಗೊಲ್ಲರು	ಮದುಡಿ ಗೊಲ್ಲರಹಟ್ಟಿ ಮಡಕಶಿರಾ ತಾ ಅನಂತಪುರ ಜಿ.
ಪೂಜಾರಿ ಈರಣ್ಣ	೯೦	ಪೂಜಾರಿ	ಮೆರನಗೊಲ್ಲರು	ದಾಸರಹಳ್ಳಿ ಗೊಲ್ಲರಹಟ್ಟಿ ಸಿರಾ ತಾ. ತುಮಕೂರು ಜಿ
ಗೌಡಬಡಯ್ಯ	೬೫	ಗೌಡ	ಮಾರನಗೊಲ್ಲರು	ದಾಸರಹಳ್ಳಿ ಗೊಲ್ಲರಹಟ್ಟಿ ಸಿರಾ ತಾ. ತುಮಕೂರು ಜಿ
ಪೂಜಾರಿ ತಿಪ್ಪೇಸ್ವಾಮಿ,	೭೫	ಪೂಜಾರಿ	ಹಬ್ಬಗೊಲ್ಲರು	ಪಗಲಬಂಡೆ ಗೊಲ್ಲರಹಟ್ಟಿ ಚಳ್ಳಕೆರೆ ತಾ ಚಿತ್ರದುರ್ಗ ಜಿ
ಗೌಡರಕಾಟಪ್ಪ	೭೪	ಗೌಡ	ಮೆರನಗೊಲ್ಲರು	ಮರಡಿಹಳ್ಳಿಗೊಲ್ಲರಹಟ್ಟಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಪೂಜಾರಿ ಕರಿಯಣ್ಣ	೨೫	ಪೂಜಾರಿ	ಮೆರನಗೊಲ್ಲರು	ಹಿಕ್ಕನೂರು ಗೊಲ್ಲರಹಟ್ಟಿ ಹಿರಿಯೂರು ತಾ ಚಿತ್ರದುರ್ಗ ಜಿ.
ಕಾಟಪ್ಪ	೫೦	ವ್ಯವಸಾಯ	ಮೆರನಗೊಲ್ಲರು	ಹಿಕ್ಕನೂರು ಗೊಲ್ಲರಹಟ್ಟಿ ಹಿರಿಯೂರು ತಾ ಚಿತ್ರದುರ್ಗ ಜಿ.
ಲಕ್ಷೀದೇವಿ	೪೮	ಹೊಲದ ಕೆಲಸ	ಕರಡಿಗೊಲ್ಲರು	ಹಿಕ್ಕನೂರು ಗೊಲ್ಲರಹಟ್ಟಿ ಹಿರಿಯೂರು ತಾ ಚಿತ್ರದುರ್ಗ ಜಿ.

ಪಿಳ್ಳಯ್ಯ(ಗೌಡ)	೫೮	ಗೌಡ	ಸನ್ನೇರಗೊಲ್ಲರು	ಯರಬಳ್ಳಿಗೊಲ್ಲರಹಟ್ಟಿ ಹಿರಿಯೂರು ತಾಲ್ಲುಕು
ಬೆಣ್ಣೆನಿಂಗಣ್ಣ	೫೦	ವ್ಯವಸಾಯ	ಸನ್ನೇರಗೊಲ್ಲರು	ಯರಬಳ್ಳಿಗೊಲ್ಲರಹಟ್ಟಿ ಹಿರಿಯೂರು ತಾಲ್ಲುಕು
ಕುರಿನಾಗರ ಈರಜ್ಜ	೭೦	ಇಲ್ಲ	ಸನ್ನೇರಗೊಲ್ಲರು	ಯರಬಳ್ಳಿಗೊಲ್ಲರಹಟ್ಟಿ ಹಿರಿಯೂರು ತಾಲ್ಲುಕು
ಉಪ್ಪಿಟ್ಟು ಸಾಂತವ್ವ	೫೫	ಅಂಗನವಾಡಿ ಕಾರ್ಯಕರ್ತೆ	ಸನ್ನೇರಗೊಲ್ಲರು	ಯರಬಳ್ಳಿಗೊಲ್ಲರಹಟ್ಟಿ ಹಿರಿಯೂರು ತಾಲ್ಲುಕು
ಸಾಕಮ್ಮ	೪೫	ಮನೆಕೆಲಸ	ಸನ್ನೇರಗೊಲ್ಲರು	ಯರಬಳ್ಳಿಗೊಲ್ಲರಹಟ್ಟಿ ಹಿರಿಯೂರು ತಾಲ್ಲುಕು
ದಾಸಜ್ಜ	೬೫	ಇಲ್ಲ	ಮೆರನಗೊಲ್ಲರು	ಸಿರಾ ತಾಲ್ಲೂಕು ದಾಸರಹಳ್ಳಿ
ಯಳಿಯಪ್ಪ	೪೫	ವ್ಯವಸಾಯ	ಮೆರನಗೊಲ್ಲರು	ಸಿರಾ ತಾಲ್ಲೂಕು ದಾಸರಹಳ್ಳಿ
ಕೆಂಚಮ್ಮ	೫೦	ಮನೆಕೆಲಸ	ಕರಡಿಗೊಲ್ಲರು	ಪಾವಗಡ ತಾಲ್ಲೂಕು ಹೊಟ್ಟೆ ಬಟ್ಟೆ
ಬಡಯ್ಯ	೫೦	ವ್ಯವಸಾಯ	ಮೆರನಗೊಲ್ಲರು	ಸಿರಾ ತಾಲ್ಲೂಕು ದಾಸರಹಳ್ಳಿ
ಚಿಕ್ಕಣ್ಣ	೫೫	ಕುರಿಗಾರರು	ಕರಡಿಗೊಲ್ಲರು	ಸಿರಾ ತಾಲ್ಲೂಕು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ
ರಾಮಲಿಂಗಪ್ಪ	೬೦	ಇಲ್ಲ	ಮೆರನಗೊಲ್ಲರು	ಸಿರಾ ತಾಲ್ಲೂಕು ಲಕ್ಕವ್ವನಹಳ್ಳಿ ಗೊಲ್ಲರಹಟ್ಟಿ
ಪೂಜಾರಿ ರಾಜಣ್ಣ	೩೦	ಪೂಜಾರಿ	ಮೆರನಗೊಲ್ಲರು	ಹಿರಿಯೂರು ತಾಲ್ಲೂಕಿನ ಇಕ್ಕನೂರು
ಮಾಲಿಂಗಪ್ಪ	೫೦	ವ್ಯವಸಾಯ	ಮೆರನಗೊಲ್ಲರು	ಹಿರಿಯೂರು ತಾಲ್ಲೂಕಿನ ಇಕ್ಕನೂರು
ಯಜಮಾನಬೊಮ್ಮಣ್ಣ	೫೦	ಗೌಡ	ಎಗಡೆಗೊಲ್ಲರು	ಬೆಸ್ತರಹಳ್ಳಿ ಕಲ್ಯಾಣದುರ್ಗ ತಾ ಅನಂತಪುರ ಜಿ.
ಪೂಜಾರಿ ಬೊಮ್ಮಯ್ಯ	೫೨	ಪೂಜಾರಿ	ಎಗಡೆಗೊಲ್ಲರು	ಬೆಸ್ತರಹಳ್ಳಿ ಕಲ್ಯಾಣದುರ್ಗ ತಾ ಅನಂತಪುರ ಜಿ.
ಮಾಸಯ್ಯ	೪೫	ವ್ಯವಸಾಯ	ಎಗಡೆಗೊಲ್ಲರು	ಬೆಸ್ತರಹಳ್ಳಿ ಕಲ್ಯಾಣದುರ್ಗ ತಾ ಅನಂತಪುರ ಜಿ.
ವೀರಯ್ಯ	೪೨	ವ್ಯವಸಾಯ	ಎಗಡೆಗೊಲ್ಲರು	ಬೆಸ್ತರಹಳ್ಳಿ ಕಲ್ಯಾಣದುರ್ಗ ತಾ ಅನಂತಪುರ ಜಿ.
ಗಂಗಮ್ಮ	೬೦	ತರಕಾರಿ ಮಾರಾಟ	ಕರಡಿಗೊಲ್ಲರು	ಬೆಚ್ಚಿಹಳ್ಳಿ ಕಲ್ಯಾಣದುರ್ಗ ತಾ ಅನಂತಪುರ ಜಿ.
ವರಲಕ್ಷ್ಮೀ	೪೫	ಮನೆಕೆಲಸ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.

ರಂಗದ್ಯಾಮವ್ವ	೪೦	ಕೂಲಿ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ನಾಗರಾಜ	೪೫	ವ್ಯವಸಾಯ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಚಿತ್ತಪ್ಪ	೫೦	ಕಾರ್ಮಿಕ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಚಿತ್ತಯ್ಯ	೪೦	ಶಿಕ್ಷಕರು	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಪಾಂಡ್ಯಪ್ಪ	೬೦	ವ್ಯವಸಾಯ	ದೇವತೆಗೊಲ್ಲರು	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಶಾಂತಮ್ಮ	೫೦	ಕೂಲಿ	ದೇವತೆಗೊಲ್ಲರು	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ದ್ಯಾಮವ್ವ	೫೦	ಕೂಲಿ	ದಲಿತ	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಮಾರಕ್ಕ	೪೫	ಕೂಲಿ	ದಲಿತ	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಲಕ್ಷ್ಮಜ್ಜಿ	೬೫	ಕೂಲಿ	ದಲಿತ	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಪೋತಮ್ಮ	೪೦	ಕೂಲಿ	ದಲಿತ	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಶಾಂತಮ್ಮ	೪೫	ಮನೆಕೆಲಸ	ಕರಡಿಗೊಲ್ಲರು	ತೋಪಿನಗೊಲ್ಲಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ.
ಮಹಾಲಿಂಗಪ್ಪ	೫೦	ವ್ಯವಸಾಯ	ಸನ್ನೇರಗೊಲ್ಲರು	ಮುಂಗಸವಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ
ತಿಮ್ಮಜ್ಜಿ	೯೦	ಇಲ್ಲ	ಕರಡಿಗೊಲ್ಲರು	ಮುಂಗಸವಳ್ಳಿ ಹಿರಿಯೂರು ತಾ. ಚಿತ್ರದುರ್ಗ ಜಿ
ಕೆಂಗಮ್ಮ	೯೦	ಇಲ್ಲ	ಮೆರನಗೊಲ್ಲರು	ಕರಿಕೆಂಪ್ಪಯ್ಯನಹಟ್ಟಿ ಸಿರಾ ತಾ ತುಮಕೂರು ಜಿ.
ನಾಗಣ್ಣ	೫೦	ವ್ಯವಸಾಯ	ಹರಿನಗೊಲ್ಲರು	ಇಕ್ಕನೂರು ಹಿರಿಯೂರು ತಾ ಚಿತ್ರದುರ್ಗ ಜಿ.
ರಾಜಮ್ಮ	೫೦	ಅಂಗನವಾಡಿ ಕಾರ್ಯಕರ್ತೆ	ಹರಿನಗೊಲ್ಲರು	ಇಕ್ಕನೂರು ಹಿರಿಯೂರು ತಾ ಚಿತ್ರದುರ್ಗ ಜಿ.
ತಿಮ್ಮಕ್ಕ	೭೦	ಇಲ್ಲ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ತಿಮ್ಮಕ್ಕ	೫೦	ಹೊಲದ ಕೆಲಸ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಸತ್ಯಮ್ಮ	೩೫	ಕೂಲಿ	ಮೆರನಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.

ಸರೋಜಮ್ಮ	೫೦	ಕೂಲಿ	ಮೇರನಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಗೋವಿಂದಮ್ಮ	೫೦	ಕೂಲಿ	ಮೇರನಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಯಶೋದಮ್ಮ	೫೦	ಮನೆಕೆಲಸ	ಮೇರನಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಕಾಂತಮ್ಮ	೩೦	ಕೂಲಿ	ಸನ್ನೆಗೊಲ್ಲರು	ತಿಮ್ಮನಹಳ್ಳಿ ರಾಯದುರ್ಗ ತಾಲ್ಲುಕು
ತಿಮ್ಮಕ್ಕ	೪೦	ಕೂಲಿ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಶಾಕುಂತಲಮ್ಮ	೩೫	ಕೂಲಿ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಪೂಜಾರಿ ತಿಮ್ಮಕ್ಕ	೬೦	ಇಲ್ಲ	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ವೆಂಕಟೇಶ	೪೦	ವ್ಯವಸಾಯ	ಮೇರನಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ತಾತ್ಯಪ್ಪ	೭೦	ಇಲ್ಲ	ಮೇರನಗೊಲ್ಲಕರು	ಮುಲ್ಕಪುರ ರಾಯದುರ್ಗ ತಾ.
ಗಂಗಮ್ಮ	೬೫	ಇಲ್ಲ	ಮೇರನಗೊಲ್ಲಕರು	ಮುಲ್ಕಪುರ ರಾಯದುರ್ಗ ತಾ.
ಬಜ್ಜಪ್ಪ	೭೦	ನಿವೃತ್ತ ಶಿಕ್ಷಕರು	ಕರಡಿಗೊಲ್ಲರು	ನರಸಾಪುರ ಕಲ್ಯಾಣದುರ್ಗ ತಾ ಅನಂತಪುರ ಜಿ.
ಚಂದ್ರಮೋಹನ	೩೮	ಶಿಕ್ಷಕರು	ಕರಡಿಗೊಲ್ಲರು	ದೊಡ್ಡಗಟ್ಟ ಕಲ್ಯಾಣದುರ್ಗ ತಾ ಅನಂತಪುರ ಜಿ.
ಸಕ್ರಪ್ಪ	೬೫	ಇಲ್ಲ	ಕರಡಿಗೊಲ್ಲರು	ದೊಡ್ಡಗಟ್ಟ ಕಲ್ಯಾಣದುರ್ಗ ತಾ ಅನಂತಪುರ ಜಿ.
ಯರ್ರಮ್ಮ	೬೦	ಮನೆಕೆಲಸ	ಕರಡಿಗೊಲ್ಲರು	ದೊಡ್ಡಗಟ್ಟ ಕಲ್ಯಾಣದುರ್ಗ ತಾ ಅನಂತಪುರ ಜಿ.
ಬಡಪ್ಪ	೫೭	ಕುರಿಗಾರಿಕೆ	ಕರಡಿಗೊಲ್ಲರು	ದೊಡ್ಡಗಟ್ಟ ಕಲ್ಯಾಣದುರ್ಗ ತಾ ಅನಂತಪುರ ಜಿ.
ಅಕ್ಕಮ್ಮ	೫೦	ವ್ಯವಸಾಯ	ಕರಡಿಗೊಲ್ಲರು	ದೊಡ್ಡಗಟ್ಟ ಕಲ್ಯಾಣದುರ್ಗ ತಾ ಅನಂತಪುರ ಜಿ.
ಜಾನಕಿ	೪೫	ಕೂಲಿ	ಕರಡಿಗೊಲ್ಲರು	ಕದಿರಮ್ಮನಹಳ್ಳಿ ರಾಯದುರ್ಗ ತಾ
ಪದಗಾರ ತಿಮ್ಮಣ್ಣ	೫೦	ಕೂಲಿ	ಮೇರನಗೊಲ್ಲರು	ಬೇವಿನಹಳ್ಳಿ ಸಿರಾ ತಾ.
ಚಿತ್ತಯ್ಯ	೪೫	ಕುರಿಗಾರರು	ಕರಡಿಗೊಲ್ಲರು	ಬೇವಿನಹಳ್ಳಿ ಸಿರಾ ತಾ.

ಛಾಯಚಿತ್ರಗಳು



ಕಾಟಮಲಿಂಗ (ಸ್ಥಳ: ಕೃಷ್ಣಗಿರಿ)



ಚಿತ್ರಲಿಂಗ (ಸ್ಥಳ: ನಂದಿಹಳ್ಳಿ)



ಕೇತಲಿಂಗ (ಸ್ಥಳ: ಚನ್ನಮ್ಮ ನಾಗತಿಹಳ್ಳಿ)



ಪಾತಲಿಂಗ (ಸ್ಥಳ: ಕುಡಲ ಹಳ್ಳಿ)



ರಾಮಲಿಂಗ (ಸ್ಥಳ: ರಾಮೇನ ಹಳ್ಳಿ)



ಡೋಲು



ಮಾರಮ್ಮನ ದೇವಸ್ಥಾನ (ಸ್ಥಳ: ಗೌರಸಮುದ್ರ)



ಕಾವಲಮ್ಮ (ಸ್ಥಳ: ಮದುಡಿ ಗೊಲ್ಲರಹಟ್ಟಿ)



ಗೊಲ್ಲಳಮ್ಮ (ಸ್ಥಳ: ಮುಂಗಸವಳ್ಳಿ)



ಜಾಡಿ



ಗೊಲ್ಲ ಕಡಗ



ಜುಂಜಪ್ಪನ ಬಸವ (ಸ್ಥಳ: ಕಳವರಹಳ್ಳಿ)



ಜುಂಜಪ್ಪನ ದೇವಸ್ಥಾನ (ಸ್ಥಳ: ಬೇವಿನ ಹಳ್ಳಿ)



ಜುಂಜಪ್ಪನ ಸಮಾದಿ (ಸ್ಥಳ: ಕಳವರ ಹಳ್ಳಿ)



ಬೆಸ್ತರಳ್ಳಿ ಕಟ್ಟೆಮನೆ (ಸ್ಥಳ: ಬೆಸ್ತರಹಳ್ಳಿ)



ಕಾಡುಗೊಲ್ಲರ ಕೋಲುಗಳು (ಸ್ಥಳ: ಬೆಸ್ತರಹಳ್ಳಿ)



ಚಿತ್ರಲಿಂಗನ ದೇವಸ್ಥಾನ (ಸ್ಥಳ: ನಂದಿಹಳ್ಳಿ)



ಚಿತ್ರಲಿಂಗ (ಸ್ಥಳ: ರಂಗೇನಹಳ್ಳಿ)



ದ್ಯಾಮವ್ವ ದೇವಸ್ಥಾನ (ಸ್ಥಳ: ಹಿರೆಗುಂಟನೂರು)



ರಾಮಲಿಂಗ (ಸ್ಥಳ: ರಾಮೇನಹಳ್ಳಿ)



ಕೆತೆಲಿಂಗನ ಮೂಲ ನೆಲೆ (ಸ್ಥಳ: ಹೊಸಲು ದಿಬ್ಬ)



ಕೇತೆಲಿಂಗನ ಗುಡಿಗೆ ಕಳಸ ಇಡುವುದು (ಸ್ಥಳ: ಹೊಸಲು ದಿಬ್ಬ)



ಏಳು ಜನ ಅಕ್ಕ ಮಗಳ ಬಾವಿ (ಸ್ಥಳ: ಹೊಸಲು ದಿಬ್ಬ)



ಹುತ್ತದ ಪೂಜೆ (ಸ್ಥಳ: ಹೊಸಲು ದಿಬ್ಬ)



ಮಣ್ಣೆ ಒರಳು



ಕಟ್ಟಿಗೆಯ ಒರಳು



ನವಣೆಯ ರಾಶಿ



ಕೇತಲಿಂಗನ ಗುಡಿಯ ಕಳಸ ಇಳಿಸುವುದು (ಸ್ಥಳ: ಹೊಸಲು ದಿಬ್ಬ)



ಕೇತಲಿಂಗನ ಪಟ್ಟಿಗೆ ದೇವರು



ಮೀಸಲು ಹಾಲು



ಗೌರಸಮುದ್ರದಲ್ಲಿ ಬಳೆಗಾರನ ಸಮಾದಿ



ಎತ್ತಪ್ಪ ದೇವರಿನ ಕುದುರೆ (ಹಾಲು ಹಾಕುವ ಹಬ್ಬ)



ಗೊಲಳ್ಳಮ್ಮನ ವಿಗ್ರಹ (ಸ್ಥಳ: ಗೊಲ್ಲಳ್ಳಿ)




ಕೇತೆಲಿಂಗನ ಸೆರೆ ಹಾಕಿದ ಸಂಪ್ರದಾಯ (ಸ್ಥಳ: ಹೊಸಲು ದಿಬ್ಬ)



ಮರಡಿ ಹಳ್ಳಿಯ ಕಾಟಮ ದೇವರು



ಕೊಣದ ಪೂಜೆ (ಸ್ಥಳ: ಹೊಸಲು ದಿಬ್ಬ)



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ